JJ-51
RMC
(B) 25242

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ೞನೇ ಅಧಿವೇಶನ

14TH SESSION

ಸಂಪುಟ – ೧೯ (ಕ್ರಮಾಂಕ ೧)

Volume - 19 (No. 1)

(೨೫ ನೇ ಜುಲೈ ೨೦೧೨)

(25th July 2012)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

(B) 25242

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಒಳನೇ ಅಧಿವೇಶನ

14TH SESSION

ಸಂಪುಟ – ೧೯ (ಕ್ರಮಾಂಕ ೧)

Volume - 19 (No. 1)

(೨೫ ನೇ ಜುಲೈ ೨೦೧೨)

(25th July 2012)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಹದಿಮೂರನೇ ವಿಧಾನಸಭೆ

ಹದಿನಾಲ್ಕನೇ ಅಧಿವೇಶನ

ಶ್ರೀ ಕೆ. ಜಿ. ಬೋಪಯ್ಯ
ಅಧ್ಯಕ್ಷರು

ಕರ್ನಾಟಕ ವಿಧಾನ ಸಭೆ

ಬುಧವಾರ, ದಿನಾಂಕ ೨೫ನೇ ಜುಲೈ ೨೦೧೨ ರಂದು ಸದನವು
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೦-೨೩ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : ಶ್ರೀ ಕೆ. ಜಿ. ಬೋಪಯ್ಯ ರವರು ಪೀಠವನ್ನು ಅಲಂಕರಿಸಿದ್ದರು

ಕರ್ನಾಟಕ ವಿಧಾನಸಭೆ

ವಿಷಯಾನುಕ್ರಮಣಿಕೆ

ಸಂಪುಟ–26

ಬುಧವಾರ, ದಿನಾಂಕ : 25 ನೇ ಜುಲೈ 2012

ಪುಟ ಸಂಖ್ಯೆ

1. ಪ್ರಶ್ನೋತ್ತರ 1–60

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಮಂಡಿಸಲಾಯಿತು (ಅನುಬಂಧ–1)

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು 60–66

ಮಂಡಿಸಲಾಯಿತು

3. ವಿತ್ತೀಯ ಕಾರ್ಯಕಲಾಪಗಳು 67–81

ಅ) 2012–13ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮಂಡನೆ

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು)

ಮಂಡಿಸಲಾಯಿತು

ಆ) 2012–13ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ ಬೇಡಿಕೆ ಮಂಡನೆ

ಬೇಡಿಕೆ ಸಂಖ್ಯೆ:

02–ಪಶುಸಂಗೋಪನೆ ಮತ್ತು ಮೀನುಗಾರಿಕೆ

17– ಶಿಕ್ಷಣ

23–ಕಾರ್ಮಿಕ

10– ಸಮಾಜ ಕಲ್ಯಾಣ

ಪುಟ ಸಂಖ್ಯೆ

16– ವಸತಿ
08–ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ
22–ಆರೋಗ್ಯ ಮತ್ತು ಕುಟುಂಬ ಕಲ್ಯಾಣ
25–ಕನ್ನಡ ಮತ್ತು ಸಂಸ್ಕೃತಿ
18– ವಾಣಿಜ್ಯ ಮತ್ತು ಕೈಗಾರಿಕೆ
06–ಮೂಲಭೂತ ಸೌಕರ್ಯ ಮತ್ತು ಅಭಿವೃದ್ಧಿ
26–ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ
19– ನಗರಾಭಿವೃದ್ಧಿ
27–ಕಾನೂನು
28–ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
05–ಒಳಾಡಳಿತ ಮತ್ತು ಸಾರಿಗೆ
20–ಲೋಕೋಪಯೋಗಿ
21– ಜಲಸಂಪನ್ಮೂಲ
11– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
03–ಆರ್ಥಿಕ
04–ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
12– ವಾರ್ತಾ, ಪ್ರವಾಸೋದ್ಯಮ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
15– ಮಾಹಿತಿ ತಂತ್ರಜ್ಞಾನ

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 81–122

1. ವಿಷಯ: ರೈತರ ಸಾಲ ಮನ್ನಾ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ
ಶ್ರೀ ಹೆಚ್.ಡಿ. ರೇವಣ್ಣ
ಶ್ರೀ ಲಕ್ಷ್ಮಣ ಎಸ್. ಸವದಿ
ಶ್ರೀ ಎಂ.ಬಿ. ಪಾಟೀಲ್
ಶ್ರೀ ಬಿ.ಸಿ. ಪಾಟೀಲ್
ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್
ಶ್ರೀ ಬಂಡೆಪ್ಪ ಖಾಶೆಂಪೂರ್
ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು)

ಪುಟ ಸಂಖ್ಯೆ

2. ವಿಷಯ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 'ಜಿ' ಕ್ಯಾಟಗರಿ ನಿವೇಶನ ಹಂಚಿಕೆ ಮಾಡಿರುವ ಬಗ್ಗೆ

ಶ್ರೀ ಗೂಳಿಹಟ್ಟಿ ಡಿ. ಶೇಖರ್

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು)

3. ವಿಷಯ: ಮೀಟರ್ ಬಡ್ಡಿ ಹಾವಳಿಯನ್ನು ತಡೆಗಟ್ಟುವ ಬಗ್ಗೆ

ಶ್ರೀ ಗೂಳಿಹಟ್ಟಿ ಡಿ. ಶೇಖರ್

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

4. ವಿಷಯ: ವಸತಿ ಶಾಲೆ ಮುಂದುವರೆಸುವ ಕುರಿತು

ಶ್ರೀ ಟಿ.ಬಿ. ಜಯಚಂದ್ರ

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಸಚಿವರು)

5. ವಿಷಯ: ಆಯುರ್ವೇದಿಕ್ ಡಾಕ್ಟರ್‌ಗಳ ಸೇವೆಯನ್ನು ಮುಂದುವರೆಸುವ ಬಗ್ಗೆ

ಶ್ರೀ ಯು.ಟಿ. ಖಾದರ್

ಶ್ರೀ ಎಂ.ಸಿ. ಪಾಟೀಲ್

ಡಾ: ಹೆಚ್.ಸಿ. ಮಹದೇವಪ್ಪ

ಶ್ರೀ ಸಂಗಣ್ಣ ಅಮರಪ್ಪ ಕರಡಿ

ಶ್ರೀ ಬಿ.ಸಿ. ಪಾಟೀಲ್

ಶ್ರೀ ವೆಂಕಟರಾವ್ ನಾಡಗೌಡ

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

6. ವಿಷಯ: ಬಡಾವಣೆಗಳನ್ನು ಮಾಡುವಾಗ ಅನುಪಾತದ ಪ್ರಕಾರ ನಿವೇಶನಗಳನ್ನು ಹಂಚುವ ಬಗ್ಗೆ

ಶ್ರೀ ಕೃಷ್ಣ ಬೈರೇಗೌಡ

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು)

7. ವಿಷಯ: ವೃತ್ತಿ ಶಿಕ್ಷಣ ಸೀಟು ನೀಡುವ ವಿಚಾರದಲ್ಲಿ ವಂಚನೆಯಾಗಿರುವ ಬಗ್ಗೆ

ಶ್ರೀ ಗೂಳಿಹಟ್ಟಿ ಡಿ. ಶೇಖರ್

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು)

8. ವಿಷಯ: ಮಾನ್ಯ ಸದಸ್ಯರಾದ ಶ್ರೀ ಚಿಕ್ಕಣ್ಣನವರ ಹಕ್ಕು ಚ್ಯುತಿ ಬಗ್ಗೆ

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)

9. ವಿಷಯ: ಮುಳಬಾಗಿಲು ತಾಲ್ಲೂಕಿನಲ್ಲಿರುವ ಬುಡುಗ ಜಂಗಮ ಜನಾಂಗಕ್ಕೆ ಸೇರಿದವರಿಗೆ ಸಿಂಧುತ್ವ ಪ್ರಮಾಣ ಪತ್ರ ನೀಡುವ ಬಗ್ಗೆ

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)

ಶ್ರೀ ಎ. ನಾರಾಯಣ ಸ್ವಾಮಿ (ಸಮಾಜ ಕಲ್ಯಾಣ ಸಚಿವರು)

ಡಾ: ಹೆಚ್.ಸಿ. ಮಹದೇವಪ್ಪ

10. ವಿಷಯ: ಮುಚ್ಚುತ್ತಿರುವ ನೆಮ್ಮದಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳನ್ನು ಸರ್ಕಾರಿ ಹುದ್ದೆಗೆ ನೇಮಕ ಮಾಡಿಕೊಳ್ಳುವ ಬಗ್ಗೆ

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

11. ವಿಷಯ: ನನ್ನ ಮನೆ ನನ್ನ ಸ್ವತ್ತು

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಶ್ರೀ ಲಕ್ಷ್ಮಣ ಎಸ್. ಸವದಿ

ಪುಟ ಸಂಖ್ಯೆ

12. ವಿಷಯ: ರಾಯಚೂರಿನ ರಾಜೀವ್ ಗಾಂಧಿ ಮೆಮೋರಿಯಲ್ ಸೂಪರ್ ಸ್ಪಷಾಲಿಟಿ ಹಾಸ್ಪಿಟಲ್‌ನಲ್ಲಿ ನೌಕರರು ಮುಷ್ಕರ ಮಾಡುತ್ತಿರುವ ಬಗ್ಗೆ

ಶ್ರೀ ಸೈಯದ್ ಯಾಸೀನ್

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

5. ವಿತ್ತೀಯ ಕಾರ್ಯಕಲಾಪಗಳು 122–243

2012–13ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ

ಶ್ರೀ ಕಿಮ್ಮನೆ ರತ್ನಾಕರ್

ಶ್ರೀ ಈ. ತುಕಾರಾಮ್

ಶ್ರೀ ಯು.ಟಿ. ಖಾದರ್

ಶ್ರೀ ಶ್ರೀಕಾಂತ್ ಕುಲಕರ್ಣಿ

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್

6. ಗಮನ ಸೆಳೆಯುವ ಸೂಚನೆಗಳು 243–321

1. ವಿಷಯ: ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ ಬಗ್ಗೆ

ಶ್ರೀ ಅಭಯ್ ಪಾಟೀಲ್

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು)

2. ವಿಷಯ: ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಮುಖ್ಯವಾಗಿ ಕಟ್ಟಡ ಶೌಚಾಲಯ, ಕುಡಿಯುವ ನೀರು ಒದಗಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ

ಶ್ರೀ ಜೆ.ಡಿ. ನಾಯ್ಕ್

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

3. ವಿಷಯ: ಉತ್ತರ ಕರ್ನಾಟಕದ ತುಂಗಭದ್ರಾ ಅಣೆಕಟ್ಟೆಯಲ್ಲಿ ಹೂಳು ತುಂಬಿರುವುದರಿಂದ ರಾಯಚೂರು ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ನೀರಾವರಿಗೆ ತೊಂದರೆಯಾಗಿರುವ ಬಗ್ಗೆ

ಶ್ರೀ ವೆಂಕಟರಾವ್ ನಾಡಗೌಡ

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಪುಟ ಸಂಖ್ಯೆ

4. ವಿಷಯ: ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿ ಎಡಬಲ ದಂಡೆಯ 14 ಹಳ್ಳಿಗಳ ಶಾಲೆಗಳ ಹಳೆಯ ಕಟ್ಟಡ ರಿಪೇರಿ ಹಾಗೂ ಹೊಸ ಕಟ್ಟಡಗಳನ್ನು ಕಟ್ಟುವ ಬಗ್ಗೆ

ಶ್ರೀ ಶ್ರೀಕಾಂತ್ ಕುಲಕರ್ಣಿ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

5. ವಿಷಯ: ಸ್ಪೆಷಲ್ ರೆಕ್ರೂಟ್‌ಮೆಂಟ್ ಎಂದು 2003ರಲ್ಲಿ ಮಾಡಿದ್ದ ಸುಮಾರು 1347 ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿಯಂತರರನ್ನು 2005ರಲ್ಲಿ ಖಾಯಂ ಮಾಡಲಾಗಿದ್ದು ಇದೀಗ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಬಗ್ಗೆ

ಶ್ರೀ ಎಂ.ಪಿ. ಕುಮಾರಸ್ವಾಮಿ

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಡಾ: ಹೆಚ್.ಸಿ. ಮಹದೇವಪ್ಪ

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)

6. ವಿಷಯ: ಮಲೆನಾಡು ಭಾಗದ ಅಡಿಕೆ ಬೆಳೆಗಾರರು ಸಂಕಷ್ಟದಲ್ಲಿದ್ದು ಗೋರಕ್ ಸಿಂಗ್ ವರದಿಯನ್ನು ಅನುಷ್ಠಾನಕ್ಕೆ ತರಲು ಹೋರಾಟದ ಹಾದಿ ಹಿಡಿದಿರುವ ಬಗ್ಗೆ

ಶ್ರೀ ಕಿಮ್ಮನೆ ರತ್ನಾಕರ್

ಶ್ರೀ ಎಸ್. ರವೀಂದ್ರನಾಥ್ (ತೋಟಗಾರಿಕೆ ಸಚಿವರು)

ಶ್ರೀ ಹೆಚ್. ಹಾಲಪ್ಪ

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)

7. ವಿಷಯ: ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರುಗಳ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ

ಶ್ರೀ ಹೆಚ್.ಡಿ. ರೇವಣ್ಣ

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು)

8. ವಿಷಯ: ರಾಜ್ಯದಲ್ಲಿ ಪಡಿತರ ಆಹಾರ ವಿತರಣೆಯಲ್ಲಿ ಆಗುತ್ತಿರುವ ಅನ್ಯಾಯದ ಬಗ್ಗೆ
ಶ್ರೀ ಕೆ.ಎಂ. ಶಿವಲಿಂಗೇಗೌಡ
ಶ್ರೀ ಡಿ.ಎನ್. ಜೀವರಾಜ್ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)
ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)

9. ವಿಷಯ: ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕೃಷಿ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ
ಶ್ರೀ ಹೆಚ್.ಡಿ. ರೇವಣ್ಣ
ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಮತ್ತು ಆಹಾರ ಸಂಸ್ಕರಣೆ ಸಚಿವರು)

10. ವಿಷಯ: ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ವೇತನ ಸಂರಕ್ಷಣೆ ಮಾಡದಿರುವ ಬಗ್ಗೆ
ಶ್ರೀ ಹೆಚ್.ಡಿ. ರೇವಣ್ಣ
ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು)

11. ವಿಷಯ: ಹಿಂದುಳಿದ ವರ್ಗಗಳ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿ ಸೌಲಭ್ಯವನ್ನು ಮುಂದುವರೆಸುವ ಬಗ್ಗೆ
ಶ್ರೀ ಟಿ.ಬಿ. ಜಯಚಂದ್ರ
ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಸಚಿವರು)
ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು)

12. ವಿಷಯ: ಎಸ್.ಎಂ. ಕೃಷ್ಣಾನಗರ, ಬಿದ್ನಾಳ್ ನೇಕಾರ ನಗರ ಭಾಗದಲ್ಲಿ ಪೊಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ
ಶ್ರೀ ವೀರಭದ್ರಪ್ಪ ಹಾಲಹರವಿ
ಶ್ರೀ ಆರ್. ಅಶೋಕ (ಉಪ ಮುಖ್ಯ ಮಂತ್ರಿಯವರು ಹಾಗೂ ಗೃಹ ಮತ್ತು ಸಾರಿಗೆ ಸಚಿವರು)

ಪುಟ ಸಂಖ್ಯೆ

13. ವಿಷಯ: ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಹುದ್ದೆಗಳು ಖಾಲಿ ಇರುವ ಬಗ್ಗೆ

ಶ್ರೀ ಹೆಚ್. ಹಾಲಪ್ಪ

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

14. ವಿಷಯ: ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮಾತೃ ಇಲಾಖೆಗೆ ವಾಪಸ್ ಕರೆಸಿಕೊಳ್ಳದಿರುವ ಬಗ್ಗೆ

ಶ್ರೀ ಹೆಚ್.ಎಸ್. ಪ್ರಕಾಶ್

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

7. **ಅನುಬಂಧ: 1** 321–654

ಶ್ರೀ ಚಿಕ್ಕಣ್ಣ (ಹೆಚ್.ಡಿ. ಕೋಟೆ): ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಒಂದು ವಿಷಯ ಪ್ರಸ್ತಾಪಿಸಿದ್ದೆ.

ಅಧ್ಯಕ್ಷರು: ಬರಲಿ, ಕೇಳುತ್ತೇನೆ. ಪ್ರಶ್ನೋತ್ತರ ಮುಗಿದ ನಂತರ ಕೇಳಿ ಎಂದು ಹೇಳಿದ್ದೇನೆ..

ಶ್ರೀ ಚಿಕ್ಕಣ್ಣ: ಪ್ರಾರಂಭವಾಗುವುದಕ್ಕೆ ಮೊದಲೇ ಹೇಳುತ್ತೇನೆ.

ಅಧ್ಯಕ್ಷರು: ಇಲ್ಲ, ಪ್ರಶ್ನೋತ್ತರ ಆದಮೇಲೆ ಎಂದು ಹೇಳಿದ್ದು. ತಾವು ಕುಳಿತುಕೊಳ್ಳಿ. ಎಲ್ಲಿ ಮತ್ತೆ ಸದನ ಖಾಲಿ ಖಾಲಿ ಇದೆಯಲ್ಲಾ? ಏಕೆ ಹೀಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ, ಪ್ರೌಢ ಶಿಕ್ಷಣ ಸಚಿವರು): ನಾವೆಲ್ಲ ಇದ್ದೇವೆ.

ಅಧ್ಯಕ್ಷರು: ಇದು ಪ್ರಶ್ನೆ ಅಲ್ಲ. ಈ ತರಹ ಆದರೆ ಹೇಗೆ? ನಿನ್ನೆ ಅಷ್ಟೆಲ್ಲ ಹೇಳಿದರೂ ಮತ್ತೆ ಇದೇ ಆಗಿದೆ.

1. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಖಾಸಗಿ ಶಾಲೆಗಳಲ್ಲಿ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ

31 (172) ಶ್ರೀ ರಾಮಲಿಂಗಾ ರೆಡ್ಡಿ, ಬಿಟಿಎಂ ಲೇಔಟ್ (ವಿಧಾನ ಸಭಾ ಕ್ಷೇತ್ರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ದಕ್ಷಿಣ ವಿಭಾಗದಲ್ಲಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಪ್ರಾಥಮಿಕ ಶಾಲೆಗಳು ಎಷ್ಟು? (ವಿವರ ನೀಡುವುದು)

(ಆ) ಇವುಗಳ ಪೈಕಿ ಎಷ್ಟು ಶಾಲೆಗಳಲ್ಲಿ ಶೇಕಡ 25 ರಷ್ಟು ಪ್ರವೇಶಾವಕಾಶಗಳನ್ನು 2012–13 ನೇ ಸಾಲಿನಲ್ಲಿ 1 ನೇ ತರಗತಿಗೆ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ನೀಡಲಾಗಿದೆ?

(ಇ) ಬಹುತೇಕ ಶಾಲೆಗಳಲ್ಲಿ ಅರ್ಜಿಗಳನ್ನು ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಈ) ಕಡ್ಡಾಯ ಶಿಕ್ಷಣ ಕಾಯಿದೆಯನ್ನು ಜಾರಿಗೊಳಿಸದೆ ಇರುವ ಶಾಲೆಗಳೆಷ್ಟು? (ಶಾಲಾವಾರು ವಿವರ ನೀಡುವುದು)

(ಉ) ಈ ಶಾಲೆಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಖಾಸಗಿ ಅನುದಾನಿತ	ಅನುದಾನ ರಹಿತ	ಒಟ್ಟು
210	1377	1587

(ಆ) 628 ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ 2877 ವಿದ್ಯಾರ್ಥಿಗಳಿಗೆ ಶೇ. 25ರಡಿ ಪ್ರವೇಶಾವಕಾಶ ನೀಡಲಾಗಿದೆ.

(ಇ) ಇಂತಹ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ

(ಈ) ಅಲ್ಪಸಂಖ್ಯಾತ ಶಾಲೆಗಳು ಸೇರಿದಂತೆ 749 ಅನುದಾನ ರಹಿತ ಶಾಲೆಗಳಲ್ಲಿ ಶೇ. 25 ರಡಿ ವಿದ್ಯಾರ್ಥಿಗಳು ದಾಖಲಾಗಿರುವುದಿಲ್ಲ.

(ಉ) ನೋಟೀಸ್ ಜಾರಿ ಮಾಡಲಾಗುತ್ತದೆ.

ಶ್ರೀ ರಾಮಲಿಂಗಾ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ಕಾಯಿದೆ ಜಾರಿಗೆ ಬಂದು ಈ ವರ್ಷದ ಮೇ ತಿಂಗಳಿನಲ್ಲಿ ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಆಯಿತು. ಸಮಯ ಇಲ್ಲ ಎಂಬುದು ನನಗೂ ಕೂಡ ಗೊತ್ತಿದೆ. ಆದ್ದರಿಂದ, ಸಮರ್ಪಕವಾಗಿ ಈ ಶಾಲೆಗಳಲ್ಲಿ 25% ಸೀಟು ಕೋಡುವುದನ್ನು ಕಾರ್ಯಗತ ಮಾಡಲಿಕ್ಕೆ ಆಗಲಿಲ್ಲ. ಆದ್ದರಿಂದ, ಮಾನ್ಯ ಮಂತ್ರಿಯವರು ಮುಂದಿನ ವರ್ಷದಿಂದ ಕಡ್ಡಾಯವಾಗಿ ಯಾವ್ಯಾವ ಶಾಲೆಗಳಲ್ಲಿ 25% ಸೀಟು ಕೊಡಬೇಕಾಗಿದೆಯೋ ಸಮರ್ಪಕವಾಗಿ ಅಷ್ಟೂ ಸೀಟುಗಳು ಅವರಿಗೆ ಸಿಗಬೇಕು, ಆ ರೀತಿ, ನಿಮ್ಮ ಇಲಾಖಾವತಿಯಿಂದ ಎಲ್ಲಾ DDPI ಗಳಿಗೆ ಮಾರ್ಗದರ್ಶನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಹಿಂದೆ ಶಿಕ್ಷಣ ಸಚಿವರಾಗಿದ್ದ ಹಿರಿಯ ಸದಸ್ಯರಾದ ಶ್ರೀ ರಾಮಲಿಂಗಾರೆಡ್ಡಿಯವರು ನಮ್ಮ ಶಿಕ್ಷಣ ಹಕ್ಕು ಕಾಯಿದೆಯನ್ನು ಕಡ್ಡಾಯಗೊಳಿಸುವುದರಲ್ಲಿ ಇರುವಂಥದ್ದರ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಬೆಂಗಳೂರು ದಕ್ಷಿಣ ವಿಭಾಗದಲ್ಲಿ ಎಷ್ಟು ಶಾಲೆಗಳಲ್ಲಿ ಎಷ್ಟು ಸೀಟು ಸಿಕ್ಕಿದೆ ಎನ್ನುವ ವಿವರಗಳನ್ನು ಕೇಳಿ ಇಡೀ

ರಾಜ್ಯದಲ್ಲಿ ಇದರಲ್ಲಾಗಿರುವ ಪ್ರಗತಿ ಕುರಿತಂತೆ ವಿವರಗಳನ್ನು ಕೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಈ ವರ್ಷ ಮೊದಲನೇ ವರ್ಷ ಶಿಕ್ಷಣ ಹಕ್ಕು ಕಾಯಿದೆಯನ್ನು ಇಡೀ ದೇಶದಲ್ಲಿ ಜಾರಿಗೊಳಿಸುತ್ತಿದ್ದೇವೆ. ಏಕೆಂದರೆ, Supreme Court ನಲ್ಲಿ case ಇತ್ತು. April 12ರ ಹೊತ್ತಿಗೆ Supreme Court Judgment ಬಂತು. ಆವತ್ತೇ cabinet ನಲ್ಲಿ ನಿರ್ಣಯ ತೆಗೆದುಕೊಂಡು ನಾವು ಈ ವರ್ಷದಿಂದ ಜಾರಿಗೊಳಿಸಬೇಕೆಂಬ ನಿರ್ಣಯ ಮಾಡಿದ್ದೇವೆ. ಆ ಹಿನ್ನೆಲೆಯಲ್ಲಿ ಮೇ ತಿಂಗಳಿನಲ್ಲಿ ಶಾಲೆಗಳು ಪ್ರಾರಂಭವಾಗುತ್ತಿದ್ದವು. ಹಾಗಾಗಿ ಈ ವರ್ಷ ನಾವು ಜಾರಿಗೊಳಿಸಬೇಕೆನ್ನುವಂಥ ಇಚ್ಛಾಶಕ್ತಿ, ಬದ್ಧತೆಯನ್ನು ತೋರಿಸುವ ಹಿನ್ನೆಲೆಯಲ್ಲಿ ನಾವು ನಮ್ಮ ಪ್ರಯತ್ನ ಮಾಡಿದ್ದೇವೆ. ಸುಮಾರು ಒಂದು ಲಕ್ಷ ಸೀಟುಗಳು ಶೇಕಡ 25ರಂತೆ ಖಾಸಗಿ ಮತ್ತು ಅನುದಾನ ಶಾಲೆಗಳಲ್ಲಿ ಕೊಡಬೇಕಾಗಿತ್ತು ಎಂದು ಏನಿತ್ತು, ಅದರಲ್ಲಿ ಸುಮಾರು 50 ಸಾವಿರ ಸೀಟುಗಳು ಬಂದಿವೆ, ಅಂದರೆ, 50% ಸೀಟುಗಳು ಬಂದಿವೆ. ಆದರೆ, ಅದಕ್ಕೆ ಕಾರಣಗಳೇನೆಂದರೆ, ಈ ವರ್ಷ ನಾವು ಸ್ವಲ್ಪ ವಿಳಂಬವಾಗಿ ಜಾರಿಗೊಳಿಸುವಂಥ ಪ್ರಕ್ರಿಯೆಯನ್ನು Supreme Court ಆದೇಶವನ್ನು ಕಾಯ್ದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇದು ಆಯಿತು. ಮುಂದಿನ ವರ್ಷಗಳಿಂದ 100ಕ್ಕೆ 100ರಷ್ಟು ಈ ಕಾಯಿದೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸುವುದಕ್ಕೆ ನಮ್ಮ ಎಲ್ಲಾ ಪ್ರಯತ್ನ ಮಾಡುತ್ತೇವೆ. ಇದರಲ್ಲಿ 25% ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸೀಟು ಕೊಡುವುದು ಒಂದು ಭಾಗ. ಆದರೆ, ಉಳಿದಂತೆ RTE ನ ಮೂಲ ಉದ್ದೇಶ ಏನಿದೆ, ನಮ್ಮ 6 ರಿಂದ 14ನೇ ವಯಸ್ಸಿನ ಮಕ್ಕಳು ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು, ಬಾಲಕಾರ್ಮಿಕರಾಗಬಾರದು, ಶಿಕ್ಷಣದಿಂದ ವಂಚಿತರಾಗಬಾರದು ಇತ್ಯಾದಿ ವಿಷಯ ಏನಿದೆ, ಅದಕ್ಕೆ ನಾವೆಲ್ಲರೂ ಗಂಭೀರವಾಗಿ ಬದ್ಧತೆಯಿಂದ ಈ ಕಾಯಿದೆಯನ್ನು ಅನುಷ್ಠಾನಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ. ಮುಂದಿನ ವರ್ಷಗಳಲ್ಲಿ ನಿಶ್ಚಿತವಾಗಿ ತಾವು ಹೇಳಿದಂತೆ ಇನ್ನಷ್ಟು ಹೆಚ್ಚು ಸಮರ್ಪಕವಾಗಿ ಇದನ್ನು ಜಾರಿಗೊಳಿಸುವುದಕ್ಕೆ ಬದ್ಧರಾಗಿದ್ದೇವೆ.

ಪ್ರಶ್ನೆ ಸಂಖ್ಯೆ: 32(707) :- ಮಾನ್ಯ ಸದಸ್ಯರಾದ ವೈ.ಎನ್. ರುದ್ರೇಶಗೌಡರವರು ಹಾಜರಿರಲಿಲ್ಲ.

ವೈದ್ಯಾಧಿಕಾರಿಗಳ ಹುದ್ದೆ

33 (176) ಶ್ರೀ ರಾಮನಾಥ್ ರೈ.ಬಿ (ಬಂಟ್ವಾಳ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಇದರಲ್ಲಿ ನಿಗದಿಪಡಿಸಿದ ವೈದ್ಯಾಧಿಕಾರಿಗಳ ಹುದ್ದೆಗಳನ್ನು ತುಂಬಲಾಗಿದೆಯೇ;

(ಇ) ಇಲ್ಲದಿದ್ದಲ್ಲಿ, ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿಯಾಗಿರುವುದರಿಂದ ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ಸೌಲಭ್ಯ ದೊರಕದೆ ಇರುವುದು ಸರ್ಕಾರ ಗಮನಕ್ಕೆ ಬಂದಿದೆಯೇ;

(ಈ) ಬಂದಿದಲ್ಲಿ, ಯಾವಾಗ ಹುದ್ದೆಗಳನ್ನು ತುಂಬಲಾಗುವುದು?

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಕೆಳಕಂಡ 2 ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ 16 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ:

ಕ್ರ.ಸಂ.	ಸಮುದಾಯ ಆರೋಗ್ಯ ಕೇಂದ್ರಗಳು
1	ವಾಮನಪದವು
2	ವಿಟ್ಲ
	ಪ್ರಾಥಮಿಕ ಆರೋಗ್ಯ ಕೇಂದ್ರಗಳು
1	ಪುಂಜಾಲ ಕಟ್ಟೆ
2	ಕುರ್ನಾಡು
3	ಮಂಚಿ
4	ಅಡ್ಯಾನಡ್ಕ
5	ದೈವಸ್ಥಳ
6	ಮಾಣಿ
7	ಬೆಂಜಿನಪದವು

8	ಸಜ್ಜಿಪುನಡು
9	ಪೆರುವಾಯಿ
10	ಕನ್ಯಾನ
11	ಪುದು
12	ರಾಯಿ
13	ಕಲ್ಲಡ್ಕಬಾಳ್ತಿಲ
14	ನಾವೂರು
15	ಪಂಚಿಕಲ್ಲು
16	ಅಳಿಕೆ

(ಆ) ಬಂಟ್ವಾಳ ತಾಲ್ಲೂಕಿನ 16 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, 17 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 16 ಹುದ್ದೆಗಳು ಭರ್ತಿಯಾಗಿವೆ ಹಾಗೂ 1 ಹುದ್ದೆ ಅಂದರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಮಂಚಿ ಇಲ್ಲಿ ಖಾಲಿ ಇದೆ. ವಿಟ್ಲ ಸಮುದಾಯ ಆರೋಗ್ಯ ಕೇಂದ್ರಕ್ಕೆ 4 ತಜ್ಞ ವೈದ್ಯರ ಹಾಗೂ ಒಂದು ದಂತ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ ಇಬ್ಬರು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ವಾಮನಪದವು ಸಮುದಾಯ ಆರೋಗ್ಯ ಕೇಂದ್ರಕ್ಕೆ 4 ತಜ್ಞ ವೈದ್ಯರ ಹಾಗೂ 1 ದಂತ ವೈದ್ಯರ ಹುದ್ದೆಗಳು ಮಂಜೂರಾಗಿವೆ. ಆ ಪೈಕಿ, ಒಬ್ಬರು ಸ್ತ್ರೀ ರೋಗ ತಜ್ಞರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು, ಉಳಿದ ಹುದ್ದೆಗಳು ಖಾಲಿ ಇವೆ.

(ಇ) ಲಭ್ಯ ಇರುವ ವೈದ್ಯಾಧಿಕಾರಿಗಳಿಂದ ರೋಗಿಗಳಿಗೆ ತೊಂದರೆಯಾಗದ ರೀತಿ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯ ಸೇವೆ ಒದಗಿಸಲು ಕ್ರಮ ವಹಿಸಲಾಗಿದೆ. ಮುಂದುವರೆದು, ಪ್ರಾಥಮಿಕ ಆರೋಗ್ಯ ಕೇಂದ್ರ, ಮಂಚಿ ಇಲ್ಲಿಗೆ ವಾರದಲ್ಲಿ 3 ದಿನ ಪಕ್ಕದ ಪ್ರಾಥಮಿಕ ಆರೋಗ್ಯ ಕೇಂದ್ರ, ಕಲ್ಲಡ್ಕಬಾಳ್ತಿಲ ದಿಂದ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುವಂತೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

(ಈ) ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಂಡ ಕ್ರಮ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ತಜ್ಞ ವೈದ್ಯರ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು:

1. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ.) ದ ಅಡಿಯಲ್ಲಿ ಸ್ತ್ರಿರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ರೂ. 70,000 ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ರೂ. 50,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.

2. ಕೆ.ಹೆಚ್.ಎಸ್.ಡಿ.ಆರ್.ಪಿ ಯೋಜನೆಯಡಿಯಲ್ಲಿ ಇತರೆ ತಜ್ಞತೆಗಳಿಗೆ (ಮಕ್ಕಳ ತಜ್ಞರು, ಸ್ತ್ರಿರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತುಪಡಿಸಿ) ಸಂಬಂಧಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕ್ರಮವಾಗಿ ಮಾಸಿಕ ರೂ. 65,000 ಹಾಗೂ ರೂ. 50,000 ದಂತೆ ಗೌರವಧನ ನೀಡಲಾಗುತ್ತಿದೆ. ಮುಂದುವರೆದು, ರೀಟೈನರ್‌ಷಿಪ್ ಆಧಾರದಲ್ಲಿ ನೇಮಕ ಮಾಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ಗೌರವಧನವನ್ನು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ರೂ 5,000 ದಿಂದ ರೂ.. 10,000 ಕ್ಕೆ ಹೆಚ್ಚಿಸಿ ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ರೂ. 8,000 ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಸದರಿ ತಜ್ಞರು ಹೊರ ರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ. 1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

3. ಮೇಲೆ ತಿಳಿಸಿದಂತೆ ಎನ್.ಆರ್.ಹೆಚ್.ಎಂ. / ಕೆ.ಹೆಚ್.ಎಸ್.ಡಿ.ಆರ್.ಪಿ. ಅಡಿಯಲ್ಲಿ ಅವಕಾಶಗಳನ್ನು ಕಲ್ಪಿಸಿದ್ದಾಗ್ಯೂ, ಎನ್.ಆರ್.ಹೆಚ್.ಎಂ. ಅಡಿಯಲ್ಲಿ ಕೇವಲ 125 ಹಾಗು ಕೆ.ಹೆಚ್.ಎಸ್.ಡಿ.ಆರ್.ಪಿ. ಅಡಿಯಲ್ಲಿ ಕೇವಲ 49 ವಿವಿಧ ತಜ್ಞತೆ ಹೊಂದಿರುವ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಒಟ್ಟಾರೆ, ಸರ್ಕಾರಿ ಆಸ್ಪತ್ರೆ / ಕೇಂದ್ರಗಳಲ್ಲಿ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸಲು ಮುಂದೆ ಬರುತ್ತಿರುವವರ ಸಂಖ್ಯೆ ಉತ್ತೇಜನಕಾರಿಯಾಗಿಲ್ಲ.

4. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರ ಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗಿದೆ.

5. ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 600 ತಜ್ಞ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಇತ್ತೀಚೆಗೆ ಕ್ರಮ ಕೈಗೊಳ್ಳಲಾಗಿ ಒಟ್ಟು 252 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಯ್ಕೆಯಾದ ಎಲ್ಲಾ 252 ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ, ಕೇವಲ 137 ಅಭ್ಯರ್ಥಿಗಳು ಸ್ಥಳ ಆಯ್ಕೆ ಮಾಡಿಕೊಂಡರು. ಆ ಪೈಕಿ ಕೇವಲ 75 ಅಭ್ಯರ್ಥಿಗಳು ಮಾತ್ರ ಕಾರ್ಯವರದಿ ಮಾಡಿಕೊಂಡಿದ್ದಾರೆ.

ಶ್ರೀ ಬಿ. ರಮಾನಾಥ್ ರೈ: ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಕೇಂದ್ರಗಳ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಕೇಳಿದ್ದೆ. ಜೊತೆಗೆ ಡಾಕ್ಟರುಗಳ ಕೊರತೆ ಬಗ್ಗೆ ಪ್ರಶ್ನೆ ಕೇಳಿದ್ದೆ. ಆದರ ಜೊತೆಯಲ್ಲಿ ಸಿಬ್ಬಂದಿ ಕೊರತೆ ಕೂಡ ಬಹಳಷ್ಟು ಇದೆ. ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಅರವಿಂದ ಲಿಂಬಾವಳಿ: ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನಲ್ಲಿ ಎರಡು ಸಮುದಾಯ ಅರೋಗ್ಯ ಕೇಂದ್ರಗಳು ಇವೆ. ವಿಟ್ಲ ಮತ್ತು ಬಂಟ್ವಾಳ ತಾಲ್ಲೂಕಿನಲ್ಲಿ ಆಸ್ಪತ್ರೆ ಕೂಡ ಇದೆ. ಸಿಬ್ಬಂದಿ ಕೊರತೆ ವಿಷಯ ಹೇಳುವುದಾದರೆ, ಡಾಕ್ಟರ್ ಕೊರತೆ ಒಂದು ಇದೆ. ಕುದೂರಿನಲ್ಲಿ ಒಬ್ಬರೂ ಡಾಕ್ಟರು ಇಲ್ಲ. ಅದಕ್ಕೆ ಪಕ್ಕದ ಆರೋಗ್ಯ ಕೇಂದ್ರದಿಂದ ತಾತ್ಕಾಲಿಕವಾಗಿ ಮೂರು ದಿನಗಳಿಗೆ ಒಂದು ಸಲ ಹೋಗಿ ಬರುವ ಹಾಗೆ ವ್ಯವಸ್ಥೆ ಮಾಡಲಾಗಿದೆ. ಇದನ್ನು ಹೊರತುಪಡಿಸಿ ಇಡೀ ರಾಜ್ಯದಲ್ಲಿ 155 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರುಗಳ ಕೊರತೆ ಇದೆ. ಅದಕ್ಕೋಸ್ಕರ, ಜಿಲ್ಲಾಧಿಕಾರಿಗಳಿಗೆ, contract basis ಮೇಲೆ ಅವರನ್ನು ತುಂಬಿಕೊಳ್ಳುವುದಕ್ಕೆ ಹಿಂದೆ ನಾವು ಅನುಮತಿ ನೀಡಿದ್ದೆವು. ದಿನಾಂಕ: 27/06/2012ಕ್ಕೆ ಅದರ ಆಧಾರದಂತೆ ರಾಜ್ಯದಲ್ಲಿ 17 ಜನ ಡಾಕ್ಟರುಗಳನ್ನು ತುಂಬಿಕೊಂಡಿದ್ದಾರೆ. ಅಲ್ಲಿಯೂ ಕೂಡ ಸಾಕಷ್ಟು ಡಾಕ್ಟರುಗಳು ಬರುತ್ತಿಲ್ಲ. ಇವರಲ್ಲಿ 10 ಜನ report ಮಾಡಿಕೊಂಡಿದ್ದಾರೆ. ಇನ್ನೂ ಕೆಲವು ಕಡೆ ಪ್ರಯತ್ನವನ್ನು ಮುಂದುವರಿಸಿದ್ದೇವೆ. ಸಿಬ್ಬಂದಿ ಕೊರತೆ ಇರುವುದು ನಿಜ. ಅದಕ್ಕೂ ಕೂಡ ಕ್ರಮ ಜರುಗಿಸುತ್ತಿದ್ದೇವೆ. Outsource

ಮೂಲಕ ಒಂದಷ್ಟು ಕಡೆ ಭರ್ತಿ ಮಾಡಲಾಗಿದೆ. ಇನ್ನೊಂದಿಷ್ಟು ನೇಮಕಾತಿಗಾಗಿ ಅರ್ಜಿಗಳನ್ನು ಕರೆದಿದೆ. 2 ಸಾವಿರಕ್ಕಿಂತಲೂ ಅಧಿಕ non-medical staff supporting staff ಏನಿದೆ, ಇವರ ನೇಮಕಾತಿಗಾಗಿ ಅರ್ಜಿಗಳನ್ನು ಕರೆದಿದ್ದೇವೆ. ಇದನ್ನು ಅತಿ ಶೀಘ್ರದಲ್ಲಿ ತುಂಬಿಸುವಂಥ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಬಿ. ರಮಾನಾಥ್ ರೈ.: ವಾಮನಪದವು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಒಬ್ಬರು ವೈದ್ಯರಿದ್ದು ಇತರ ತಜ್ಞ ವೈದ್ಯರುಗಳು ಬೇಕಾಗಿದೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾನು ತಮ್ಮನ್ನು ಕೇಳಬಯಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ: ವಾಮನಪದವು ಸಮುದಾಯ ಆರೋಗ್ಯ ಕೇಂದ್ರಕ್ಕೆ 4 ತಜ್ಞ ವೈದ್ಯರು ಹಾಗೂ ಒಂದು ದಂತ ವೈದ್ಯರ ಹುದ್ದೆ ಮಂಜೂರಾಗಿದೆ. ಈ ಪೈಕಿ ಒಬ್ಬ ಸ್ತ್ರೀ ರೋಗ ತಜ್ಞರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು ಉಳಿದ ಹುದ್ದೆಗಳು ಖಾಲಿಯಿವೆ. ಅರೆವೈದ್ಯಕೀಯ ಸಿಬ್ಬಂದಿ 35 ಜನ ಅಲ್ಲಿ ಇರಬೇಕಾಗಿತ್ತು 11 ಜನ ಮಾತ್ರ ಭರ್ತಿಯಾಗಿದ್ದು 24 ಹುದ್ದೆಗಳು ಖಾಲಿ ಇವೆ. ಈ specialist ಗಳದ್ದು ಬಹಳ ದೊಡ್ಡ ಸಮಸ್ಯೆಯಿದೆ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಜೊತೆಗೆ ನಾನು ಚರ್ಚಿಸಿದ್ದೇನೆ. ಈ ಒಂದು ಸದನದಲ್ಲಿಯೇ ತಜ್ಞ ವೈದ್ಯರನ್ನು ಕಡ್ಡಾಯ ಮಾಡುವ ದೃಷ್ಟಿಯಿಂದ ಒಂದು ಬಿಲ್ ತರಬೇಕಾಗಿದೆ. ನಮ್ಮ ರಾಜ್ಯದಲ್ಲಿ 899 ವೈದ್ಯರ ಹುದ್ದೆಗಳು ಖಾಲಿಯಿದ್ದು ತಜ್ಞ ವೈದ್ಯರು ನಮಗೆ ಸಿಗುತ್ತಿಲ್ಲ. ನಾವು ಎಲ್ಲಾ ರೀತಿಯ ಪ್ರಯೋಗ ಮಾಡುತ್ತಿದ್ದೇವೆ. ರಾಷ್ಟ್ರೀಯ ಆರೋಗ್ಯ ಯೋಜನೆಯಡಿಯಲ್ಲಿ ಮಾಡುತ್ತಿದ್ದೇವೆ, ಇದರಲ್ಲೂ ಕೂಡ ಬರುತ್ತಿಲ್ಲ. ವಿಶೇಷವಾಗಿರುವ ಸಿ ಕೆಟಗರಿ ಜಿಲ್ಲೆಗಳು ಯಾವುದು ಇದೆ, ಅಲ್ಲಿ ಹೆಚ್ಚು ಸ್ಯಾಲರಿ ಕೊಟ್ಟು ಅವರನ್ನು ಆಕರ್ಷಿಸುವ ಕೆಲಸ ಮಾಡುತ್ತಿದ್ದೇವೆ, ಆದರೂ ಕೂಡ ಬರುತ್ತಿಲ್ಲ. Patient ಗಳ ಆಧಾರದ ಮೇಲೆ ಬಂದು ನೋಡಿ ಎನ್ನುವ ಕ್ರಮ ಜರುಗಿಸಿದರೂ ಬರುತ್ತಿಲ್ಲ. ಹೀಗಾಗಿ ಕಡ್ಡಾಯ ಮಾಡಬೇಕು ಎನ್ನುವುದನ್ನು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಲ್ಲಿ ಹೇಳಿದಾಗ ಅವರು ಈಗಾಗಲೇ ಅದಕ್ಕೆ process ಮಾಡುತ್ತಿದ್ದಾರೆ. ಅದು ಆದರೆ ಈ ಸಮಸ್ಯೆ ಬಗೆಹರಿಯುತ್ತದೆ. ಸಮಸ್ಯೆಯಿರುವುದನ್ನು ನಾನು ಒಪ್ಪುತ್ತೇನೆ. ತಜ್ಞ ವೈದ್ಯರು ನಮಗೆ ಸಿಗುತ್ತಿಲ್ಲ. ಆ ನಿಮಿತವಾಗಿ ಈ ಕ್ರಮ ಜರುಗಿಸಿದರೆ ನಿಶ್ಚಿತವಾಗಿ ಆ ಸಮಸ್ಯೆ ಪರಿಹಾರವಾಗುವುದರಲ್ಲಿ ಸ್ವಲ್ಪ ಪ್ರಯತ್ನ ಆಗಬಹುದು ಎಂದು ನನ್ನ ಭಾವನೆ.

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್: ನನ್ನದೊಂದು ಸಲಹೆ ಏನೆಂದರೆ, ಕಳೆದ ಸಾರಿಯೂ ನಾನು ಇದೇ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಮುಖ್ಯಮಂತ್ರಿಗಳಾದ

ಸದಾನಂದಗೌಡರವರು ಆಗ ಈ ಸದನಕ್ಕೆ ಒಂದು ಆಶ್ವಾಸನೆ ಕೊಟ್ಟಿದ್ದರು. ಏನೆಂದರೆ, ಈ ಸದನ ಮುಗಿಯುತ್ತಾ ಬರುತ್ತಿದೆ, ಬಿಲ್ ತರುವುದಕ್ಕಾಗಲ್ಲ ಹೀಗಾಗಿ ನಾನೊಂದು ordinance ಹೊರಡಿಸುತ್ತೇನೆಂದು ಹೇಳಿದ್ದರು. ಏನೆಂದರೆ, ಯಾರು government seat ತೆಗೆದುಕೊಂಡಿರುವ ವಿದ್ಯಾರ್ಥಿ ಎಂಬಿಬಿಎಸ್ ಮುಗಿಸುತ್ತಾರೆ ಒಂದು ವರ್ಷ ಕಡ್ಡಾಯ rural service ಮಾಡಬೇಕು ಮತ್ತು government PG seat free ಆಗಿ ಯಾರಿಗೆ ಸಿಕ್ಕಿದೆ ಅವರೂ ಕೂಡ ಒಂದು ವರ್ಷ CHC ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎನ್ನುವ ಒಂದು ಬಿಲ್ ತರುತ್ತೇವೆಂದು ಹೋದ ಸಾರಿ ಹೇಳಿದ್ದರು ಅದನ್ನು ಅವರು ತರಲಿಲ್ಲ. ದಯವಿಟ್ಟು ತಾವು ಹೊಸದಾಗಿ ಮಂತ್ರಿಗಳಾಗಿದ್ದೀರಿ, ಈ ಸದನದಲ್ಲಿ ತಾವೇನು 30 ನೇ ತಾರೀಖಿನಿಂದ ಬಿಲ್‌ಗಳನ್ನು ತರುತ್ತಿದ್ದೀರಿ, ಆಗ ಈ ಬಿಲ್ ಅನ್ನು ತರಬೇಕು. ನೀವು ಈ ಸದನದಲ್ಲಿ ಬಿಲ್ ತಂದರೆ ನಾವೆಲ್ಲರೂ ಅದನ್ನು ಪಾಸ್ ಮಾಡಿ ಕೊಡುತ್ತೇವೆ. ಬಿಲ್ ತಂದರೆ ಮಾತ್ರ ಇದಕ್ಕೆ ಪರಿಹಾರವಿದೆ. ಬೇರೆ ನೀವು ಏನೂ ಮಾಡಿದರೂ ಇದಕ್ಕೆ ಪರಿಹಾರವಿಲ್ಲ. ಅದಕ್ಕೆ ಮಾನ್ಯ ಸಚಿವರು ಇದರ ಬಗ್ಗೆ ಗಮನ ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಮಗೆ ಸಮಸ್ಯೆಯಾಗಿರುವುದು ಡಾಕ್ಟರ್ ಎಂಎಲ್‌ಎ ಆಗಿರುವುದು. ಅವರು ಡಾಕ್ಟರ್ ಆಗಿದ್ದಿದ್ದರೆ ಈ ಸಮಸ್ಯೆಯಾಗುತ್ತಿರಲಿಲ್ಲ.

ಶ್ರೀ ಸಿದ್ದು ಸವದಿ: ರಾಜ್ಯದಲ್ಲಿ ಡಾಕ್ಟರೊಳಗೆ ಕೌನ್ಸಿಲಿಂಗ್ ತಂದಿದ್ದಾರೆ. ನಮ್ಮ ತೇರದಾಳದೊಳಗೆ ಒಂದು ಪಿಹೆಚ್‌ಸಿ ಆಸ್ಪತ್ರೆಯಿದೆ. 40 ಸಾವಿರ ಜನಸಂಖ್ಯೆ ಆ ಸಿಟಿಯಲ್ಲಿ ಇದೆ. ಸುತ್ತಮುತ್ತಲೂ ಹತ್ತು ಹಳ್ಳಿಗಳಿವೆ. ಸುಮಾರು 60-70 ಸಾವಿರ ಜನಸಂಖ್ಯೆಯಾಗುತ್ತದೆ. ಒಬ್ಬರೇ ಒಬ್ಬರು ಲೇಡಿ ಡಾಕ್ಟರ್ ಸಿಂಗಲ್ ಡಾಕ್ಟರ್ ಇದ್ದರು ಅವರನ್ನು ಕೌನ್ಸಿಲಿಂಗ್ ಮೂಲಕ ತೆಗೆದು ಬೇರೆ ಕಡೆಗೆ ಹಾಕಿದ್ದಾರೆ. ಈಗ ಅಲ್ಲಿ ಖಾಲಿ ಇದೆ. ಈ ತರಹ ಕೌನ್ಸಿಲಿಂಗ್ ಮಾಡುವಾಗ atleast ಸಿಂಗಲ್ ಡಾಕ್ಟರ್ ಇದ್ದ ಕಡೆ ಅವರನ್ನು ಕಂಟಿನ್ಯೂ ಮಾಡುವಂಥದ್ದರ ಬಗ್ಗೆ ನೀವು ನಿಯಮಾವಳಿಯಲ್ಲಿ ಮಾಡಿಕೊಳ್ಳಬೇಕಲ್ಲವೇ? ಈ ರೀತಿ ಮಾಡಿದರೆ ಅಲ್ಲಿರುವ ಆಸ್ಪತ್ರೆ ಯಾರು ನಡೆಸಬೇಕು? ಪೇಷಂಟ್‌ಗಳೇನು ಮಾಡಬೇಕು? ಇದರ ಬಗ್ಗೆ ನೀವು ತಕ್ಷಣ ಗಮನ ಕೊಡಬೇಕು. ಕೌನ್ಸಿಲಿಂಗ್ ಹಾಕಿದವನಿಗೆ ತಕ್ಷಣ ಟ್ರಾನ್ಸಫರ್ ಮಾಡಿ, ಎಲ್ಲಾ ಖಾಲಿ ಮಾಡಿಬಿಟ್ಟರೆ ಹೇಗೆ? ಇದರ ಬಗ್ಗೆ ನೀವು ಉತ್ತರ ಕೊಡಬೇಕು.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ: ಕೌನ್ಸಿಲಿಂಗ್ ತೆಗೆದು ಬಿಡಬೇಕು. ಎಲ್ಲರೂ ಕೌನ್ಸಿಲಿಂಗ್ ಮಾಡಿಕೊಂಡು ಬೆಂಗಳೂರು ಸಿಟಿಗೆ ಬಂದರೆ ಹಳ್ಳಿಯಲ್ಲಿರುವ ಆಸ್ಪತ್ರೆ ನಡೆಸುವವರು ಯಾರು? ಅಲ್ಲಿ ಕೆಲಸ ಮಾಡುವವರು ಯಾರು? ಇದು ಬಹಳ ಗಂಭೀರವಾದ ವಿಚಾರ. ದಯವಿಟ್ಟು ಇದನ್ನು ತೆಗೆದು ಹಾಕಿ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಹೀಗೆ ಒಟ್ಟಿಗೆ ಎದ್ದು ಮಾತನಾಡಿದರೆ ಹೇಗೆ?

ಶ್ರೀಮತಿ ಸೀಮಾ ಮಸೂತಿ: ಕೌನ್ಸಿಲಿಂಗ್ ಅನ್ನು ರದ್ದು ಮಾಡಿ. ಪಿಹೆಚ್‌ಸಿ ಗಳಲ್ಲಿ ಡಾಕ್ಟರ್‌ಗಳಿಲ್ಲ.

ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ ನರಿಬೋಳ: ಎಎನ್‌ಎಂ, ಡಾಕ್ಟರ್ ಎಲ್ಲಾ ಕೌನ್ಸಿಲಿಂಗ್‌ನಲ್ಲೇ ಮಾಡುತ್ತಿದ್ದಾರೆ ಇದು ಸರಿಯಲ್ಲ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ: ನಾವು ಅವರನ್ನು ಬಿಡುಗಡೆ ಮಾಡಿಬೇಡಿ ಎಂದು ಪತ್ರ ಕೊಟ್ಟರೂ ಕೌನ್ಸಿಲಿಂಗ್ ಇರುವುದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ರಿಲೀವ್ ಮಾಡಿ ಕಳುಹಿಸುತ್ತಾರೆ. ಎಲ್ಲಾ ಕಡೆಗೂ ಈ ಪ್ರಾಬ್ಲಂ ಇದೆ.

(ಗೊಂದಲ)

ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ ನರಿಬೋಳ: ಮೊದಲು ಕೌನ್ಸಿಲಿಂಗ್ ರದ್ದು ಮಾಡಿ.

ಶ್ರೀ ವೆಂಕಟರಾವ್ ನಾಡಗೌಡ: ಸಂಪೂರ್ಣವಾಗಿ ಭರ್ತಿ ಇದ್ದಾಗ ಕೌನ್ಸಿಲಿಂಗ್ ಮಾಡಿದರೆ ಪರವಾಗಿಲ್ಲ. ಎಲ್ಲಾ ಕಡೆ ಹುದ್ದೆಗಳು ಖಾಲಿ ಇವೆ. ಈಗ ನೀವು ಕೌನ್ಸಿಲಿಂಗ್ ಮಾಡಿದರೆ ಎಲ್ಲರೂ ಬೆಂಗಳೂರಿಗೆ ಬರುತ್ತಾರೆ.

(ಗೊಂದಲ)

ಶ್ರೀ ಗೂಳಿಹಟ್ಟಿ ಡಿ. ಶೇಖರ್: ಮೊದಲು ಕೌನ್ಸಿಲಿಂಗ್ ಅನ್ನು ರದ್ದು ಮಾಡಿ.

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಸಿ ಅಂಡ್ ಆರ್ ನ್ನು ಮಾಡಿ..

(ಗೊಂದಲ)

ಅಧ್ಯಕ್ಷರು: ಡಾಕ್ಟರೆ ಕುಳಿತುಕೊಳ್ಳಿ ಅವರು ಉತ್ತರ ಹೇಳಲಿ.

ಶ್ರೀ ತಿಪ್ಪೇಸ್ವಾಮಿ: ಮಾನ್ಯ ಅಧ್ಯಕ್ಷರೆ, ನಮ್ಮ ಚಳ್ಳಕೆರೆಯಲ್ಲಿ ಜನರಲ್ ಆಸ್ಪತ್ರೆ ಇದೆ. ಅಲ್ಲಿ ಒಬ್ಬ physician ಇಲ್ಲ, ಮೂರು ವರ್ಷಗಳಾದವು. ನಾನು ಮೂರು ವರ್ಷಗಳಿಂದ ಸತತವಾಗಿ ಕೇಳುತ್ತೇನೆ, ಆದರೂ ಅಲ್ಲಿ ಒಬ್ಬ physician doctor ಇಲ್ಲ. ಅದಕ್ಕೆ ದಯವಿಟ್ಟು ಮಾನ್ಯ ಮಂತ್ರಿಗಳು ನಮಗೆ ಆದಷ್ಟು ಬೇಗನೆ ಒಬ್ಬ physician doctor ಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳುತ್ತೇನೆ.

ಶ್ರೀ ಎಸ್. ಎ. ರಾಮದಾಸ್: ಇದು ಬಹಳ ಪ್ರಮುಖವಾದ ವಿಚಾರ, ಇಡೀ ಸದನ ಕಳೆದ ಬಾರಿ ನಮ್ಮ ಮುಂದೆ ಇಟ್ಟಿತ್ತು. ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ದೇಶದಲ್ಲಿ ಮೊದಲನೇ ಬಾರಿಗೆ ಒಂದು enactment ತರುವಂಥ ಪ್ರಯತ್ನ ನಾವು ಮಾಡಿದ್ದೇವೆ. ಇದೇ ತಿಂಗಳ 30 ನೇ ತಾರೀಖು ಸದನದಲ್ಲಿ ಮಂಡನೆ ಮಾಡುವುದಕ್ಕೆ ಹಣಕಾಸಿನ ಇಲಾಖೆಯವರು ಈಗಾಗಲೇ clearance ಕೊಟ್ಟಿದ್ದಾರೆ. ರಾಜ್ಯದಲ್ಲಿರುವಂಥ ಈ ವರ್ಷ ಒಟ್ಟು 6,036 ವಿದ್ಯಾರ್ಥಿಗಳು ಎಂಬಿಬಿಎಸ್‌ಗೆ ಅಡ್ಮಿಷನ್ ಆಗಿದ್ದಾರೆ. ಹೊರಗೆ ಬರುವಂಥವರು 5,011 ಜನ. ಅದರಲ್ಲಿ ಬಹುತೇಕ ನಮ್ಮ ದೃಷ್ಟಿಯಲ್ಲಿ 2 ಸಾವಿರ ಜನ ಪಿಜಿ ಮತ್ತು ಬೇರೆ ಬೇರೆಯದಕ್ಕೆ ಹೋಗುತ್ತಾರೆ. 2,800 ರಿಂದ 3,000 ಜನ ಎಂಬಿಬಿಎಸ್ ಡಾಕ್ಟರ್‌ಗಳನ್ನು ಮತ್ತು 1,110 ಜನ ಪಿಜಿ ಮಾಡಿಕೊಂಡು ಹೊರಗೆ ಬರುವಂಥವರ ಜೊತೆಗೆ specialized doctors ಗೂ ಕೂಡ ಒಂದು ವರ್ಷ ಕಡ್ಡಾಯ ಸೇವೆ ಮಾಡುವುದಕ್ಕೆ 30 ನೇ ತಾರೀಖಿನ ದಿವಸ ಒಂದು enactment ಅನ್ನು ತರುತ್ತಿದ್ದೇವೆ. ಇದಕ್ಕೆ ಬೇಕಾಗಿರುವ ಖರ್ಚು 386 ಕೋಟಿ ರೂಪಾಯಿಗಳಿಗೆ ಈಗಾಗಲೇ ಹಣಕಾಸಿನ ಇಲಾಖೆಯವರು clearance ಕೊಟ್ಟಿದ್ದಾರೆ. ನಮ್ಮ enactment ನೋಡಿಕೊಂಡು ಕೇಂದ್ರ ಸರ್ಕಾರದವರು ನಮಗೂ ಸಹ ಒಂದು ಪತ್ರ ಬರೆದಿದ್ದು, curriculum ನಲ್ಲಿ ಬದಲಾವಣೆ ತಂದರೆ ಇಡೀ ದೇಶಕ್ಕೆ ಅನ್ವಯವಾಗುತ್ತದೆ ಎಂದು ಮುಂದಿನ ವರ್ಷದಿಂದ 2013–14 ನೇ ಸಾಲಿನಿಂದ ಎಂಬಿಬಿಎಸ್ ಅನ್ನು ಐದೂವರೆ ವರ್ಷಗಳಿಂದ ಆರೂವರೆ ವರ್ಷ ಮಾಡಿ ಕೊನೆಯ ಒಂದು ವರ್ಷವನ್ನು ಕಡ್ಡಾಯವಾಗಿ ದೇಶದಾದ್ಯಂತ PHC/CHU ಗಳಲ್ಲಿ ಕೆಲಸ ಮಾಡುವುದಕ್ಕೆ curriculum ನಲ್ಲಿ ಬದಲಾವಣೆ ತರುವಂಥದ್ದಾಗುತ್ತದೆ. ನಮ್ಮ ರಾಜ್ಯದಲ್ಲಿ 30 ನೇ ತಾರೀಖು ತರುತ್ತಿದ್ದೇವೆ. ಎಲ್ಲರ ಸಹಕಾರವನ್ನು ಕೇಳುತ್ತೇವೆ. ಆಗಸ್ಟ್ ಕೊನೆಯೊಳಗಡೆ ಒಂದು ಬ್ಯಾಚ್ ಹೊರಗಡೆ ಬರುತ್ತಿದೆ, ಪಿಜಿ ಮತ್ತು ಇತರೆ ಕೋರ್ಸ್‌ಗಳನ್ನು ಮುಗಿಸಿಕೊಂಡು ಯಾರು ಹೊರಗಡೆ ಬರುತ್ತಿದ್ದಾರೆ, ಅಂದರೆ ಸೆಪ್ಟೆಂಬರ್ ತಿಂಗಳಿನಿಂದಲೇ ಬೇಕಾಗಿರುವ

specialized doctors, MBBS doctors and Ayurvedic doctors ಅದಲ್ಲದೆ ನರ್ಸಿಂಗ್‌ರವರನ್ನು ಕೂಡ ಇಬ್ಬಿಬ್ಬರನ್ನು ಒಂದು ಪಿಹೆಚ್‌ಸಿಗೆ ಕೊಡಲಿಕ್ಕೆ ಬೇಕಾಗಿರುವ ಒಂದು ಯೋಜನೆಗೆ ಮಾನ್ಯ ಮುಖ್ಯಮಂತ್ರಿಗಳೂ ಈಗಾಗಲೇ ಅನುಮೋದನೆ ಕೊಟ್ಟಿದ್ದಾರೆ. 30 ನೇ ತಾರೀಖು ಅದನ್ನು ಮಂಡನೆ ಮಾಡುತ್ತಿದ್ದೇವೆ.

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್: ಅವರಿಗೆ ನೀವು ಸ್ಯಾಲರಿ ಕೊಡಬೇಕು.

ಶ್ರೀ ಎಸ್.ಎ. ರಾಮದಾಸ್: ಸ್ಯಾಲರಿ ಕೊಡುತ್ತಿದ್ದೇವೆ. ಅವರು ಕರೆಕ್ಟಾಗಿ ಹೇಳಿದ್ದಾರೆ. senior specialist ಗೆ ಬರುವಂಥ ಸ್ಯಾಲರಿ ಏನಿದೆ 40 ಸಾವಿರ ರೂಪಾಯಿಗಳ ಸ್ಯಾಲರಿಯನ್ನು MBBS and specialist ಗಳಿಗೆ ಕೊಡುತ್ತಿದ್ದೇವೆ. ನರ್ಸಿಂಗ್‌ಗಳಿಗೆ ಏನು ಫಿಕ್ಸ್ ಆಗಿದೆ, ಆ ತರಹ ಸ್ಯಾಲರಿ ಕೊಡಲಾಗುವುದು.

(ಗೊಂದಲ)

ಅಧ್ಯಕ್ಷರು: ಪ್ಲೀಸ್ ಸಾಕು ಬಿಡಿ ಕುಳಿತುಕೊಳ್ಳಿ. ಎಲ್ಲರೂ ಒಂದೇ ಸಲ ಎದ್ದು ನಿಂತರೆ ಹೇಗೆ?

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ: ನಮ್ಮ ತಾಲ್ಲೂಕಿನಲ್ಲಿ ಡಾಕ್ಟರ್ ಇಲ್ಲ. ಯಾರಾದರೂ ಸತ್ತರೆ post mortem ಮಾಡುವುದಕ್ಕೆ ಬೇರೆ ಕಡೆಯಿಂದ ಕರೆಸುವ ಪರಿಸ್ಥಿತಿ ಇದೆ.

ಶ್ರೀ ಸುನಿಲ್ ವಿ. ಹೆಗಡೆ: ಮೊದಲು ಕೌನ್ಸಿಲಿಂಗ್ ರದ್ದುಗೊಳಿಸಿ.

ಅಧ್ಯಕ್ಷರು: ಸುನಿಲ್ ಹೆಗಡೆಯವರು ಪ್ರಶ್ನೆ ಕೇಳಿದವರು ಸುಮ್ಮನಿದ್ದಾರೆ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ: ಅಲ್ಲಿ ಹಣ ಇಟ್ಟುಕೊಂಡು strike ಮಾಡಿದ ಉದಾಹರಣೆಗಳಾಗಿವೆ ನಮ್ಮಲ್ಲಿ.

ಅಧ್ಯಕ್ಷರು: ನೀವು ಬೇರೆ ರೂಪದಲ್ಲಿ ತನ್ನಿ. ಡಿಮ್ಯಾಂಡ್ ಮೇಲೆ ಮಾತನಾಡುವಾಗ ಆ ಬಗ್ಗೆ ಚರ್ಚೆ ಮಾಡಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಅನೇಕ ಶಾಸಕರು ಕೌನ್ಸಿಲಿಂಗ್ ವಿಚಾರವಾಗಿ ಹೇಳಿದ್ದಾರೆ ಅದರಲ್ಲಿ ನ್ಯೂನತೆಗಳೇನಾದರೂ ಇದ್ದಲ್ಲಿ ಅದನ್ನು ಸರಿಪಡಿಸುವಂಥ ಕೆಲಸ ನಾವು ಮಾಡುತ್ತೇವೆ. ನಮ್ಮಲ್ಲಿ MBBS doctors ಕೊರತೆ ಇರುವುದರ ಬಗ್ಗೆ ನಾನು ಹೇಳಿದೆ. 155 ಇತ್ತು, ಈಗ ಅದು 145 ಕ್ಕೆ ಇಳಿದಿದೆ. ಜಿಲ್ಲಾಧಿಕಾರಿಗಳ ಮೂಲಕ ಗುತ್ತಿಗೆಯಾಧಾರದ

ಮೇಲೆ ತೆಗೆದುಕೊಳ್ಳಬೇಕೆಂದು ಹೇಳಿದ್ದರಿಂದ ಅಷ್ಟು ಜನರನ್ನು ಅವರು ತುಂಬಿಕೊಂಡಿದ್ದಾರೆ. ಈಗ ಅದರ ಸಂಖ್ಯೆ 145 ಕ್ಕೆ ಇಳಿದಿದೆ. specialist ಗಳ ಕೊರತೆ ಇದೆ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಾದ ರಾಮದಾಸ್‌ರವರು ಈಗ ಹೇಳಿದ್ದಾರೆ. ಅದು ಜಾರಿಗೆ ಬಂದರೆ ನಮಗೇನೂ ಕೊರತೆಯಾಗುವುದಿಲ್ಲ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ: ಕೌನ್ಸಿಲಿಂಗ್ ತೆಗೆದು ಬಿಡಿ. ಅದನ್ನು ಏಕೆ ಇಡುತ್ತೀರಿ?

(ಗೊಂದಲ)

ಸರ್ಕಾರಿ ಕಾಲೇಜುಗಳಲ್ಲಿ ಹಣ ಸಂಗ್ರಹಣೆ

34 (575) ಶ್ರೀ ಕಿಮ್ಮನ ರತ್ನಾಕರ್ (ತೀರ್ಥಹಳ್ಳಿ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ತೀರ್ಥಹಳ್ಳಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎಷ್ಟು ಉಪನ್ಯಾಸಕರ ಕೊರತೆ ಇದೆ (ವಿಭಾಗವಾರು ಮತ್ತು ವಿಷಯವಾರು ಮಾಹಿತಿ ನೀಡುವುದು);

(ಆ) ತೀರ್ಥಹಳ್ಳಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರನ್ನು ಹೊರತುಪಡಿಸಿ ಇತರೆ ಸಿಬ್ಬಂದಿಗಳ ಕೊರತೆ ಎಷ್ಟಿದೆ (ವಿವರ ನೀಡುವುದು);

(ಇ) ಈ ಕೊರತೆಯನ್ನು ನೀಗಿಸಲು ಸರಕಾರ ಕೈಗೊಂಡ ಕ್ರಮಗಳೇನು; ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು (ವಿವರ ನೀಡುವುದು)?

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):

(ಅ) 02 ಗಣಕ ವಿಜ್ಞಾನ ಮತ್ತು ಗಣಿತಶಾಸ್ತ್ರ

(ಆ) 07

ಗ್ರಂಥಾಲಯ ಸಹಾಯಕ	–	01
ಅಟೆಂಡರ್	–	03
ಪರಿಚಾರಕರ	–	03

(ಇ) ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಸಂಖ್ಯೆ:ಆಇ 01 ಬಿಇಎಂ 2012 ದಿನಾಂಕ: 14/06/2012 ಹಾಗೂ ಸಂಖ್ಯೆ:ಆಇ 01 ಬಿಇಎಂ 2008 ದಿನಾಂಕ: 21/10/2009ರ ಸುತ್ತೋಲೆಗಳಲ್ಲಿ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಹೊಸ ಬೋಧಕೇತರ ಹುದ್ದೆಗಳನ್ನು ಸೃಜಿಸುವ / ಭರ್ತಿ ಮಾಡುವುದನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿದೆ. ಮಿತವ್ಯಯ ಆದೇಶ ಹಿಂಪಡೆದ ನಂತರ ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುವುದು.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಈ ರಾಜ್ಯದ ದೊಡ್ಡ ಸಮಸ್ಯೆ ಏನೆಂದರೆ ಅಧಿಕಾರಿಗಳು ಮಂತ್ರಿಗಳಿಗೆ ಮತ್ತು ನಮಗ್ಯಾರಿಗೂ ಸಹ ಪೂರ್ಣ ಮಾಹಿತಿಯನ್ನು ಸರಿಯಾದ ರೀತಿಯಲ್ಲಿ ಕೊಡುವುದಿಲ್ಲ. ಅಧಿಕಾರಿಗಳು ಕೊಟ್ಟಿರುವುದನ್ನು ಇವರು ಓದಿ ಹೇಳಿದ್ದಾರೆ. ಬಹುಶ: ಅವರಿಗೆ ಇದರ ಪೂರ್ಣ ಅರಿವು ಅಥವಾ ಮಾಹಿತಿಯನ್ನು ಸಂಗ್ರಹ ಮಾಡಿದ್ದರೆ ಈ ಉತ್ತರ ಸಿಗುತ್ತಿರಲಿಲ್ಲ. ವಾಸ್ತವದಲ್ಲಿ 1500 ಮಕ್ಕಳು ಅಲ್ಲಿದ್ದಾರೆ. 18 ಜನ lectureres ಹುದ್ದೆಗಳನ್ನು ಸೃಷ್ಟಿ ಮಾಡಿದ್ದಾರೆ. ಬೇಕಾಗಿರುವಂಥ ಹುದ್ದೆಗಳು ಅಂದರೆ ಅಲ್ಲಿ ಸುಮಾರು 35 ರಿಂದ 40 ಹುದ್ದೆಗಳು ಅಲ್ಲಿರಬೇಕಾಗಿತ್ತು. ಆದರೆ, ಇರತಕ್ಕಂಥದರಲ್ಲಿ ಕೇವಲ 18 ಹುದ್ದೆಗಳನ್ನು ಕ್ರಿಯೇಟ್ ಮಾಡಿದ್ದಾರೆ. ಇದರಲ್ಲಿ 15 ಜನರು ಮಾತ್ರ ಕಾರ್ಯನಿರ್ವಹಿಸುತ್ತಿದ್ದು ಇಬ್ಬರು ಖಾಲಿ ಇದ್ದಾರೆಂದು ಹೇಳಿದ್ದಾರೆ. ಇವತ್ತಿನ ದಿವಸ 56 ಜನ guest lecturers ನಿಂದ ಅಲ್ಲಿ ಕೆಲಸ ಮಾಡಿಸಿಕೊಳ್ಳುತ್ತಿದ್ದೇವೆ. See, it is a 100% false information by the officials to the minister. ಈ ರೀತಿಯಾಗಿ ಏತಕ್ಕೆ ಮಾಡುತ್ತಾರೆ? ಅಲ್ಲಿರುವ ಮಕ್ಕಳಿಗೆ ಎಷ್ಟು ಜನ lecturers ಬೇಕೆಂಬ ಬಗ್ಗೆ ಒಂದು ಪ್ರಥಮ ಮಾಹಿತಿ ಬೇಡವೇ? Principal Secretary ಅಥವಾ ಬೇರೆ ಅಧಿಕಾರಿಗಳು ಈ ರೀತಿಯಾದ ಮಾಹಿತಿಗಳನ್ನು ಏತಕ್ಕೆ ಕೊಡುತ್ತಾರೆ? ಅಲ್ಲಿ 1400 ಜನ ಮಕ್ಕಳಿದ್ದಾರೆ. ಕೇವಲ 15 ಜನ lecturerers ನಿಂದ ಪಾಠ ಮಾಡುವುದಕ್ಕೆ ಆಗುತ್ತದೆಯೇ? Whether it is humanly possible? ಶಾಸಕರು ಏನು ಮಾಡುತ್ತಿದ್ದೀರೆಂದು ಅಲ್ಲಿ ಸ್ಟ್ರೈಕ್ ಮಾಡುತ್ತಿದ್ದಾರೆ. Failure of an MLA, it is not a failure of the MLA, it is the failure of the Government. ನಾವೇನು ಮಾಡುವುದಕ್ಕೆ ಆಗುವುದಿಲ್ಲ. ಅಂದರೆ, ನಾವೇನು lecturers ಮಾಡುವುದಕ್ಕೆ ಆಗುವುದಿಲ್ಲ. Guest lecturers ಅನ್ನು ನಾವು ಮಾಡುತ್ತಿದ್ದೇವೆ. ಆದರೆ, ಇಲ್ಲಿಯವರೆಗೆ ನೀವು ಅವರಿಗೆ ಪೇಮೆಂಟ್ ಮಾಡಿಲ್ಲ. ಈ Guest lecturers ಗೆ ಪೇಮೆಂಟ್ ಮಾಡುವುದಕ್ಕೆ ನಿಮಗೆ ಕಾನೂನು ಅಡ್ಡ ಬರುತ್ತಿದೆ. See, we are creating the legislation; we are accommodating for violating it. ನಾವು ಇಲ್ಲಿ ಶಾಸನಗಳನ್ನು ರಚನೆ ಮಾಡಿ ನಾವೇ ಅದನ್ನು violate ಮಾಡುವಂತೆ ಮಾಡುತ್ತೇವೆ. ಅದ್ದರಿಂದ, ಏತಕ್ಕಾಗಿ ಈ ರೀತಿಯಾದ ಕಾನೂನನ್ನು ತರಬೇಕು? You cannot go for collecting the amount from the students or their parents. That is your law. Suppose they are collecting it, then you can suspend the Principal or the concerned authorities. We

cannot go for collecting the amount. Then how we have to accommodate 56 guest lecturers? ಈಗ ನಾವು 56 ಜನ lecturers ಅನ್ನು ನೇಮಕ ಮಾಡಿಕೊಂಡಿದ್ದೇವೆ. As a President of the Betterment Committee we have taken 56 guest lecturers. 56 guest lecturers ಅಂದರೆ ಅಲ್ಲಿಗೆ ಏನಾಯಿತು? ಅಲ್ಲಿಗೆ 70 ಜನ lecturers ಬೇಕು. ಅಲ್ಲಿ 1400 ಜನ ಮಕ್ಕಳಿದ್ದಾರೆ. ಈಗಿರುವ 56 ಜನ guest lecturers ಹೊರಗೆ ಇಟ್ಟರೆ what will be the situation? 2 ಜನ lecturers ಮಾತ್ರ ಬಾಕಿ ಇದೆ ಎಂದು ಇವರು ಹೇಳುತ್ತಿದ್ದಾರೆ. ಹಾಗಾದರೆ, ಅಧಿಕಾರಿಗಳು ಏತಕ್ಕಾಗಿ ಮಾಹಿತಿಗಳನ್ನು ಕೊಡುತ್ತಿಲ್ಲ? ಮಾನ್ಯ ಸಚಿವರ ಬಗ್ಗೆ ನಾನು ಏನೂ ಸಹ ಹೇಳುವುದಿಲ್ಲ. ಅವರು ಪ್ರಥಮ ಬಾರಿಗೆ ಸಚಿವರಾಗಿದ್ದಾರೆ. ಅವರಿಗೆ ನಾನು ಶುಭ ಹಾರೈಸುತ್ತೇನೆ. ಆದರೆ, ಆ ಕಾಲೇಜಿನ feeding strength ಎಷ್ಟು ಎಂಬ ಬಗ್ಗೆ ಅವರು ಮಾಹಿತಿ ಕೊಡಬೇಕು.

ಅಧ್ಯಕ್ಷರು: ಮಾನ್ಯ ಸಚಿವರು ಇದಕ್ಕೆ ಮೊದಲು ಉತ್ತರ ಕೊಡಲಿ.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ, ಅಷ್ಟು ಮಾತ್ರವಲ್ಲ. I will explain every thing. ಅಲ್ಲಿ ಕನಿಷ್ಠ 8 ಜನ attendants ಬೇಕು. ಆದರೆ, ನೀವು ಮೂರು ಜನರನ್ನು ಮಾತ್ರ ಕೊಟ್ಟಿದ್ದೀರಿ. Lecturers ಕಸ ಗುಡಿಸಬೇಕೆ? ಅಥವಾ Betterment Committee ಯವರು ಗುಡಿಸಬೇಕೆ? 5 ಜನರನ್ನು extra ತೆಗೆದುಕೊಂಡಿದ್ದೇವೆ. From where we have to pay? We have to collect the funds either from the students or from their parents.

ಅಧ್ಯಕ್ಷರು: ಮಾನ್ಯ ಸಚಿವರು ಮೊದಲು ಉತ್ತರ ಹೇಳಲಿ. ಆನಂತರ ಕೇಳಿ.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಮಗ್ರವಾದ ಅಧ್ಯಯನದ ಆಗತ್ಯತೆ ಇದೆ. ಮಾಹಿತಿ ಕೊಡುವಾಗ ಅಲ್ಲಿ 1500 ಜನ ವಿದ್ಯಾರ್ಥಿಗಳು ಇದ್ದಾರೆಂದು ಕೊಟ್ಟಿದ್ದರೆ ಇದು ನಿಮಗೆ ಅರ್ಥವಾಗುತ್ತಿತ್ತು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರಾದಂಥ ಮಾನ್ಯ ಕಿಮ್ಮನೆ ರತ್ನಾಕರ್‌ರವರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಮಂಜೂರಾಗಿರುವ ಹುದ್ದೆಗಳಲ್ಲಿ ಯಾವುದರಲ್ಲಿ ಖಾಲಿ ಇದೆ ಎಂಬುದನ್ನು ಮಾತ್ರ ನಾವು ಉಲ್ಲೇಖ ಮಾಡಿದ್ದೇವೆ. ವಿದ್ಯಾರ್ಥಿಗಳ strength ಗೆ ಅನುಗುಣವಾಗಿ guest lecturers ಅನ್ನು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ತೊಂದರೆ

ಆಗದ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ. Guest lecturers ಅನ್ನು ನೇಮಕ ಮಾಡಿಕೊಳ್ಳುವುದಕ್ಕೆ ನಿನ್ನೆ ದಿವಸ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಈಗ ಅವರು ಹೇಳಿದಂತೆ ತೀರ್ಥಹಳ್ಳಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಜೂರಾಗಿರುವ ಎರಡು ಹುದ್ದೆಗಳಲ್ಲಿ Lectureres ಇಲ್ಲದೆ ಇರುವುದರಿಂದ ನಾವು ಇಲ್ಲಿ ಕೋಟ್ ಮಾಡಿದ್ದೇವೆ. ಇಡೀ ರಾಜ್ಯದಲ್ಲಿ 847 ಬೋಧಕ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಭರ್ತಿ ಮಾಡುವುದಕ್ಕೆ ನಾವು ಹಣಕಾಸು ಇಲಾಖೆಗೆ ಕೋರಿದ್ದೇವೆ. ಇದರಲ್ಲಿ ಅತ್ಯಾವಶ್ಯಕವಾಗಿ ನೇಮಕಾತಿ ಮಾಡಲೇ ಕೊಳ್ಳಬೇಕಾಗಿರುವಂಥದರ ಲಿಸ್ಟ್ ಕೊಡಿ ಎಂದು ಕೇಳಿದ್ದಾರೆ. ಆದ್ದರಿಂದ, 226 ಹುದ್ದೆಗಳು ಅತ್ಯಾವಶ್ಯಕವಾಗಿ ಬೇಕೆಂದು ಅಂದರೆ, ಇದರಲ್ಲಿ science and Math related subjects ಗೆ Guest lecturers ನೇಮಕ ಮಾಡಿಕೊಳ್ಳಬೇಕೆಂದರೂ ಸಹ ನಮಗೆ ಯಾರೂ ಸಿಗುತ್ತಿಲ್ಲ. ಆದ್ದರಿಂದ, ಅತ್ಯಾವಶ್ಯಕವಾಗಿ ಬೇಕಾಗಿರುವಂಥದನ್ನು ಮಾಡಿಕೊಳ್ಳುವುದಕ್ಕೆ ಲಿಸ್ಟ್ ಕೊಟ್ಟಿದ್ದೇವೆ. ಅವರು ಅನುಮತಿಯನ್ನು ಕೊಡುವ ನಿರೀಕ್ಷೆಯಲ್ಲಿದ್ದೇವೆ. ಅವರು ಅನುಮತಿಯನ್ನು ಕೊಟ್ಟ ತಕ್ಷಣ ಕೆ.ಪಿ.ಎಸ್.ಸಿ. ಮೂಲಕ ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳತಕ್ಕಂಥ ಕ್ರಮವನ್ನು ಕೈಗೊಳ್ಳುತ್ತೇವೆ. ಇವತ್ತಿನದಿವಸ ಪ್ರಥಮ ದರ್ಜೆ ಕಾಲೇಜುಗಳಿಗೆ ವಿದ್ಯಾರ್ಥಿಗಳು ಆಡ್ಮಿಷನ್ ಆಗುವಂಥ ಸಂಖ್ಯೆ ಹೆಚ್ಚು ವ್ಯಾಪಕವಾಗಿ ವೃದ್ಧಿಸಿದೆ. ಕಳೆದ ಎರಡು-ಮೂರು ವರ್ಷಗಳ ಅಂಕಿ-ಅಂಶಗಳನ್ನು ತೆಗೆದರೆ 20 ರಿಂದ 25% ನಷ್ಟು ಹೆಚ್ಚುವರಿ ಅಡ್ಮಿಷನ್ ಆಗಿದೆ. ಆದ್ದರಿಂದ, ನಮಗೆ ಉಪನ್ಯಾಸಕರ ಕೊರತೆ ಕಾಡುತ್ತಿದೆ. ಅದಕ್ಕೆ ತಕ್ಕಂತೆ ಮಂಜೂರು ಹುದ್ದೆಗಳನ್ನು ಜಾಸ್ತಿ ಮಾಡಿಕೊಂಡು ಅದಕ್ಕೆ ತಕ್ಕಂತೆ ನಾವು ನೇಮಕ ಮಾಡಿಕೊಳ್ಳಬೇಕು. ಹಣಕಾಸು ಇಲಾಖೆಯಲ್ಲಿ ಒಂದು ನಿರ್ಬಂಧ ಇರುವುದರಿಂದ ಅಂದರೆ, ಹೊಸದಾಗಿ ನೇಮಕ ಮಾಡಿಕೊಳ್ಳುವುದಕ್ಕೆ ನಮಗೆ ಅನುಮತಿ ಇಲ್ಲದೆ ಇರುವುದರಿಂದ ಸಾಧ್ಯವಾಗುತ್ತಿಲ್ಲ. ತಮ್ಮ ಮೂಲಕ ಆರ್ಥಿಕ ಇಲಾಖೆಗೆ ಒಂದು ನಿರ್ದೇಶನ ಹೋಗಿ ನೇಮಕಾತಿ ಮಾಡಿಕೊಳ್ಳುವುದಕ್ಕೆ ಏನಾದರೂ ಅವಕಾಶ ಕೊಟ್ಟರೆ ಎಲ್ಲರನ್ನೂ ನೇಮಕಾತಿ ಮಾಡಿಕೊಳ್ಳುತ್ತೇವೆ. ನನ್ನ ಅಸಹಾಯಕತೆಯನ್ನು ನಾನು ವ್ಯಕ್ತಪಡಿಸುತ್ತಿಲ್ಲ. ನಿಜವಾಗಿಯೂ ಕೂಡ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲೇ ಬೇಕು. ಆದರೆ, ಕೊರತೆ ಆಗದ ರೀತಿಯಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿ ಹಾಲಿ ಇರುವ ಕೊರತೆಯನ್ನು ಭರ್ತಿ ಮಾಡತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ. Guest Lecturersಗೆ ನಾಲ್ಕು ತಿಂಗಳಿಂದ ಬಾಕಿ ಕೊಡಬೇಕಾಗಿರುವಂಥದ್ದು ನಿಜ.

ಅಧ್ಯಕ್ಷರು: ಮಾನ್ಯ ಸಚಿವರೆ, ಈಗ ಒಂದು ಸುತ್ತೋಲೆ ಹೋಗಿದೆ. ಏನೆಂದರೆ, ಕೆಲವು ಕಡೆ 500 ರೂಪಾಯಿ ಕಲೆಕ್ಷನ್ ಮಾಡುತ್ತಿದ್ದರು. ಅದನ್ನು ಮಾಡಬಾರದು, ಒಂದು ವೇಳೆ ಅದನ್ನು ಮಾಡಿದರೆ ಪ್ರಿನ್ಸ್‌ಪಾಲ್ ಮೇಲೆ ಕ್ರಮ ಎಂದು ಹೇಳಲಾಗಿದೆ. ಇದನ್ನು ಮಾಡದಿದ್ದರೆ Guest lecturers ಗೆ ಎಲ್ಲಿಂದ ಸಂಬಳ ಕೊಡುವುದು?

ಶ್ರೀ ಸಿ.ಟಿ. ರವಿ: ಅದರ ಬಗ್ಗೆ ಚರ್ಚೆ ಮಾಡುತ್ತೇನೆ.

ಅಧ್ಯಕ್ಷರು: ಚರ್ಚೆ ಪ್ರಶ್ನೆ ಅಲ್ಲ. ಇವತ್ತಿನದಿವಸ ಒಂದು Lecturers ಅನ್ನು ಕೊಡಬೇಕು ಇಲ್ಲವಾದರೆ ಎಂ.ಎಲ್.ಎ.ಗಳು ಅಲ್ಲಿ ಅಧ್ಯಕ್ಷರಾಗಿದ್ದರೆ ಅಲ್ಲಿ ನೇಮಕಾತಿ ಮಾಡಿಕೊಳ್ಳುವುದಕ್ಕೆ ಅವರದೇ ಆದ ರೀತಿಯಲ್ಲಿ ಅವಕಾಶ ಕೊಡಬೇಕು. ಯಾರು ದುಡ್ಡು ತಿಂದಿದ್ದಾರೆಯೋ ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಿ. ಒಬ್ಬ ತಪ್ಪು ಮಾಡಿದ್ದಾನೆಂದರೆ ಉಳಿದ ಎಲ್ಲರಿಗೂ ಶಿಕ್ಷಯೇ? ಇದು ಯಾವ ಪಾಲಿಸಿ? ಅದನ್ನು withdraw ಮಾಡುವುದಕ್ಕೆ ಕಾಲೇಜು ಅಭಿವೃದ್ಧಿ ಸಮಿತಿಗೆ ಹೇಳಿ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಅದಕ್ಕೆ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇವೆ. ಕಾಲೇಜು ಅಭಿವೃದ್ಧಿ ಸಮಿತಿ ವಿದ್ಯಾರ್ಥಿಗಳಿಂದ ಸಂಗ್ರಹ ಮಾಡುವಂಥ ಹಣದಿಂದ ನಾವು ಅತಿಥಿ ಉಪನ್ಯಾಸಕರಿಗೆ ಸಂಬಳ ಕೊಡುವುದಿಲ್ಲ. ಆ ಹಣದಿಂದ watchman, class-four ಇತ್ಯಾದಿ ನೇಮಕಾತಿ ಮಾಡಿಕೊಳ್ಳುವವರಿಗೆ ಕೊಡುತ್ತೇವೆ.

ಅಧ್ಯಕ್ಷರು: ಯಾರು ಹೇಳಿದರು? ಆ ಹಣದಿಂದಲೇ ಅವರಿಗೆ ಸಂಬಳ ಕೊಡುತ್ತಿದ್ದಾರೆ.

ಶ್ರೀ ಸಿ.ಟಿ. ರವಿ: Guest lecturersಗೆ ಸರ್ಕಾರದ ಇಲಾಖೆ ವತಿಯಿಂದ ಸಂಬಳ ಕೊಡುತ್ತೇವೆ.

ಅಧ್ಯಕ್ಷರು: ಎಷ್ಟು ಕೊಡುತ್ತೀರಿ? ನೀವು ಕೊಡುವ ಹಣಕ್ಕೆ ಯಾರು ಬರುತ್ತಾರೆ?

ಶ್ರೀ ಸಿ.ಟಿ. ರವಿ: ph.D, M.Phil. ಮಾಡಿರುವವರಿಗೆ 10,000 ರೂಪಾಯಿ ಕೊಡುತ್ತೇವೆ. ಕೇವಲ PG ಕೋರ್ಸ್ ಮಾಡಿಕೊಂಡಿರುವವರಿಗೆ 8,000 ರೂಪಾಯಿ ಅತಿಥಿ ಉಪನ್ಯಾಕಸರಿಗೆ ಸಂಬಳ ಕೊಡುತ್ತೇವೆ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅವರನ್ನು ನೇಮಕ ಮಾಡುವ ರೀತಿ ಅಂದರೆ, ಅವರನ್ನು ಯಾರು ನೇಮಕ ಮಾಡಿಕೊಳ್ಳಬೇಕೆಂಬ ಪ್ರೊಸೀಜರ್ ಅನ್ನು ಅವರು ಹೇಳಿಲ್ಲ. ಅದನ್ನು ಹೇಳಿ?

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಇದುವರೆಗೂ ಅವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಕಾಲೇಜು ಪ್ರಿನ್ಸಿಪಾಲ್‌ರವರಿಗೆ ಅಧಿಕಾರ ಕೊಟ್ಟಿದ್ದೇವೆ ಮತ್ತೆ subject expert ಇರುತ್ತಾರೆ ಹಾಗೆಯೇ ತ್ರಿಸದಸ್ಯರ ಸಮಿತಿ ಇರುತ್ತದೆ. ಅಲ್ಲಿ ಪ್ರಿನ್ಸಿಪಾಲ್ subject experts ಕುಳಿತುಕೊಂಡು ಯಾರನ್ನು ಅತಿಥಿ ಉಪನ್ಯಾಸಕರನ್ನಾಗಿ ಆಯ್ಕೆ ಮಾಡಬೇಕೆಂಬುದರ ಬಗ್ಗೆ ಸಂದರ್ಶನ ನಡೆಸಿ ಮೆರಿಟ್ ಮತ್ತು ಸರ್ವೀಸ್ ನೋಡುತ್ತಾರೆ. ಸರ್ವೀಸ್‌ಗೆ ನಾವು ವೇಟೇಜ್ ಕೊಟ್ಟಿದ್ದೇವೆ. ಒಂದು ವರ್ಷ ಕೆಲಸ ಮಾಡಿದರೆ ಅಂಥವರಿಗೆ four marks ನಷ್ಟು ವೇಟೇಜ್ ಕೊಟ್ಟಿದ್ದೇವೆ. Maximum 20 marks ವೇಟೇಜ್ ಕೊಟ್ಟಿದ್ದೇವೆ. ಹಾಗೆಯೇ subject experts ಗೆ 5 marks ಕೊಟ್ಟಿದ್ದೇವೆ, Principal ಗೆ 5 marks ಕೊಟ್ಟಿದ್ದೇವೆ. ಮೆರಿಟ್ ಮತ್ತು ಈ ವೇಟೇಜ್ ಬೇಸ್ ಮೇಲೆ ಅವರನ್ನು ನೇಮಕ ಮಾಡಿಕೊಳ್ಳುವಂಥ ಅಧಿಕಾರವನ್ನು ಪ್ರಿನ್ಸಿಪಾಲರಿಗೆ ಕೊಟ್ಟಿದ್ದೇವೆ. ಅವರು ಅಲ್ಲಿಯೇ ಕುಳಿತುಕೊಂಡು ಅವರೇ ನೇಮಕ ಮಾಡಿಕೊಡುತ್ತಾರೆ. ಇದರೊಳಗೆ ನಾವೇನೂ ಹಸ್ತಕ್ಷೇಪ ಮಾಡಿಲ್ಲ. ಆದ್ದರಿಂದ, ಈ ಎಲ್ಲಾ ಗೈಡ್‌ಲೈನ್ಸ್ ಅನ್ನು ಹೊರಡಿಸಿ ಆ ಸುತ್ತೋಲೆಗಳನ್ನು ಕಳುಹಿಸಿಕೊಡುವಂಥ ಕೆಲಸವನ್ನು ಮಾಡಿದ್ದೇವೆ. ಅವರಿಗೆ ನಾಲ್ಕು ತಿಂಗಳ ಸಂಬಳ ಬಾಕಿ ಇದೆ. ಈ ಬಗ್ಗೆ ಹಣಕಾಸು ಇಲಾಖೆಯ ಕಾರ್ಯದರ್ಶಿಯವರ ಜೊತೆ ಮೊನ್ನೆದಿವಸ ಮಾತನಾಡಿದ್ದೇನೆ. ಇವತ್ತು ಅಥವಾ ನಾಳೆಯೊಳಗೆ ಕ್ಲಿಯರ್ ಮಾಡುತ್ತೇವೆಂದು ಹೇಳಿದ್ದಾರೆ. ಅವರಿಗೆ ಸಂಬಳವನ್ನು ಕೊಡಿಸುವಂಥ ಕೆಲಸವನ್ನೂ ಸಹ ಮಾಡುತ್ತೇವೆ.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರೌಢ ಶಿಕ್ಷಣ ಇಲಾಖೆಯ ಸಚಿವರು ಮಾತನಾಡುವಾಗಲೂ ಸಹ ಆರ್ಥಿಕ ಇಲಾಖೆಯವರ ಜೊತೆ ಮಾತನಾಡಬೇಕೆಂದು ಹೇಳುತ್ತಾರೆ. ಈಗ ಉನ್ನತ ಶಿಕ್ಷಣ ಮಂತ್ರಿಗಳೂ ಸಹ ಅದನ್ನೇ ಹೇಳುತ್ತಿದ್ದಾರೆ. ಅಂದರೆ, ಯಾವುದೇ ಮಂತ್ರಿಗಳು ಉತ್ತರ ಕೊಡುವಾಗ ಆರ್ಥಿಕ ಇಲಾಖೆ ಜೊತೆ ಮಾತನಾಡುತ್ತೇವೆಂದು ಹೇಳುತ್ತಿದ್ದಾರಲ್ಲ? ಅದೇನು ಇಂಗ್ಲೆಂಡ್‌ನಲ್ಲಿ ಇದೆಯೇ ? ಅಥವಾ ಎಲ್ಲಿದೆ ? ನನಗೇನೂ ಅರ್ಥವಾಗುತ್ತಿಲ್ಲ. ಅದೇನಾದರೂ ಅಮೇರಿಕಾದಲ್ಲಿ ಇದೆಯೇ ? ಜನರ ಸಮಸ್ಯೆ ಏನೆಂದು ಅವರಿಗೆ ಗೊತ್ತಾಗುವುದಿಲ್ಲವೆ ? ಇದು ನನಗಂತೂ ಅರ್ಥವಾಗುತ್ತಿಲ್ಲ. ಆರ್ಥಿಕ ಇಲಾಖೆಯ ದೊಡ್ಡ ಸಮಸ್ಯೆ ಏನೆಂದರೆ, ಮಾರ್ಚ್ 31ಕ್ಕೆ ಬಜೆಟ್ ಕ್ಲಿಯರ್ ಆಗುತ್ತೆ. ಮೇ ತಿಂಗಳ ಕೊನೆಯವರೆಗೂ ಟೆಂಡರ್ ಕರೆಯುತ್ತಾರೆ. ಏಪ್ರಿಲ್ ತಿಂಗಳಲ್ಲಿ ಕೇಳಿದರೆ ಹಣ ವಾಪಸ್ಸು ಹೋಯಿತೆಂದು ಹೇಳುತ್ತಾರೆ. ಹಾಗಾದರೆ, ಅವರಿಗೊಂದು commonsense ಇಲ್ಲವೆ ? ಇದು ನನಗೆ ಅರ್ಥವಾಗುತ್ತಿಲ್ಲ. ಆರ್ಥಿಕ ಇಲಾಖೆ ಅಮೇರಿಕಾದಲ್ಲಿ ಇದೆಯೇ ? ನಮ್ಮಲ್ಲಿ

ಫೆಬ್ರವರಿ ತಿಂಗಳಲ್ಲಿ ಒಂದು ಟೆಂಡರ್ ಕರೆದು ಅದಕ್ಕೆ ಮೂರು ತಿಂಗಳು ಟೈಂ ಇದೆ ಎಂದು ಹೇಳಿದರು. ಮೂರು ತಿಂಗಳು ಸಮಯ ಇದೆ ಎಂದು ಗುತ್ತಿಗೆದಾರ ಏಪ್ರಿಲ್‌ನ ಮೊದಲನೇ ವಾರದವರೆಗೆ ಕೆಲಸ ಮಾಡಿದ. ಆದರೆ ಇದರ ದುಡ್ಡು ವಾಪಸ್ಸು ಹೋಗಿದೆ ಎಂದು ಹೇಳಿದರು. ಆತನಿಗೆ ದುಡ್ಡು ಬರಲಿಲ್ಲ. ಈ ಬಗ್ಗೆ Principal Secretary ಯವರಿಗೆ ಕೇಳಿದರೆ 'See, we can't do anything, we are helpless, you have to raise it in the Assembly' ಎಂದು ಹೇಳುತ್ತಾರೆ. ಆದ್ದರಿಂದ, ಅದು ಇಂಗ್ಲೆಂಡ್‌ನಲ್ಲಿ ಇದೆಯೋ ಅಥವಾ ಇಲ್ಲಿಯೇ ಇದೆಯೋ ? ನನಗೆ ಅರ್ಥವಾಗುತ್ತಿಲ್ಲ. ಏತಕ್ಕೆ ಇಂಥ ಪ್ರಶ್ನೆಗಳನ್ನು ಮಾಡುತ್ತಾರೆ ? ಹಾಗಾದರೆ, ಟೆಂಡರ್ ಅನ್ನು ಏತಕ್ಕೆ ಕರೆಯಬೇಕು ? ಟೆಂಡರ್ ಕರೆದು ಮೂರು ತಿಂಗಳು ಟೈಂ ಕೊಟ್ಟ ಮೇಲೆ ಹಣ ಕೊಡಬೇಕು.

ಅಧ್ಯಕ್ಷರು :– ಮಾನ್ಯ ಕಿಮ್ಮನೆ ರತ್ನಾಕರ್‌ರವರೆ, ಈ ವಿಷಯವನ್ನು ಡಿಮ್ಯಾಂಡ್ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಮಾತನಾಡಿ.

ಶ್ರೀ ಕಿಮ್ಮನೆ ರತ್ನಾಕರ್ :– ಮಾನ್ಯ ಅಧ್ಯಕ್ಷರೆ, ಇದು ನನಗಂತೂ ಅರ್ಥವಾಗುತ್ತಿಲ್ಲ. ಯಾರನ್ನು ಕೇಳಿದರೂ ಸಹ ಅವರನ್ನು ಕೇಳಿ ಎಂದು ಹೇಳುತ್ತಿದ್ದಾರೆ. ನಮ್ಮ ಇಡೀ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 200 ಜನ ಟೀಚರ್ಸ್ ಇಲ್ಲ. ಈ ಬಗ್ಗೆ ಪ್ರೌಢ ಶಿಕ್ಷಣ ಸಚಿವರನ್ನು ಕೇಳಿದೆ. ಆರ್ಥಿಕ ಇಲಾಖೆಯವರು ಒಪ್ಪಿಗೆ ಕೊಡುತ್ತಿಲ್ಲವೆಂದು ಅವರು ಹೇಳುತ್ತಿದ್ದಾರೆ. ಹಾಗಾದರೆ, ಆರ್ಥಿಕ ಇಲಾಖೆ ಎಲ್ಲಿದೆ ? I am unable to understand this.

ಶ್ರೀ. ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರೆ, ಇದು ಹತ್ತಾರು ವರ್ಷಗಳಿಂದ ಖಾಲಿ ಬಿಟ್ಟುಕೊಂಡು ಬಂದಿರುವುದರಿಂದ ಈಗ ಬೆಟ್ಟದಷ್ಟು ಆಗಿದೆ. ಇವತ್ತು ಅಥವಾ ನಾಳೆದಿವಸ ನಮಗೆ ಅನುಮತಿ ಕೊಟ್ಟರೆ ತಕ್ಷಣ ನೇಮಕಾತಿ ಮಾಡಿಕೊಳ್ಳುವುದಕ್ಕೆ ಬೇಕಾದಂಥ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು :– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಉತ್ತರ ಬೇಕೆಂದರೆ ಕುಳಿತುಕೊಳ್ಳಿ, ಇಲ್ಲದಿದ್ದರೆ ನಾನು ಮುಂದಿನ ಪ್ರಶ್ನೆ ಕೇಳುತ್ತೇನೆ.

(ಗೊಂದಲ)

ಶ್ರೀ ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರೆ, ಯಾವುದೇ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಅನ್ಯಾಯ ಆಗುವುದಕ್ಕೆ ಬಿಟ್ಟಿಲ್ಲ. ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿದ್ದು, ಅವರ ಮೂಲಕ ಪಾಠ ಮಾಡಿಸುತ್ತಿದ್ದೇವೆ. ಎಲ್ಲಿಯೂ ಸಹ ಅನ್ಯಾಯ ಆಗುವುದಕ್ಕೆ ಬಿಟ್ಟಿಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ನೀವು ಅವರಿಗೆ ಸಂಬಳವನ್ನೇ ಕೊಡುತ್ತಿಲ್ಲ. ಅವರು ಹೇಗೆ ಕೆಲಸ ಮಾಡುತ್ತಾರೆ ?

ಪ್ರಶ್ನೆ ಸಂಖ್ಯೆ 35(882)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ ಸಂಖ್ಯೆ 36(549)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಅಧ್ಯಕ್ಷರು :– ಶ್ರೀ ಬಾಲಕೃಷ್ಣರವರೆ, ತಾವು ಪ್ರಶ್ನೆಯನ್ನು ಕೇಳಿ.

ಪ್ರಥಮ ದರ್ಜೆ ಕಾಲೇಜಿನ ಕೊಠಡಿಗಳು

37 (557) ಶ್ರೀ ಬಾಲಕೃಷ್ಣ ಹೆಚ್.ಸಿ. :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಾಗಡಿ ಪಟ್ಟಣದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಪ್ರಸ್ತುತ ಸಾಲಿನಲ್ಲಿ ಈ ಕಾಲೇಜಿಗೆ ಎಷ್ಟು ವಿದ್ಯಾರ್ಥಿಗಳು ಯಾವ ಯಾವ ಕೋರ್ಸುಗಳಿಗೆ ದಾಖಲಾಗಿರುತ್ತಾರೆ ; (ವಿವರ ನೀಡುವುದು)

ಇ) ಕೋರ್ಸುಗಳಿಗೆ ಅನುಗುಣವಾಗಿ ಸಿಬ್ಬಂದಿಗಳು, ಪ್ರಯೋಗಾಲಯ ಹಾಗೂ ಇನ್ನಿತರೆ ವಿಷಯಗಳಿಗೆ ಅನುಗುಣವಾಗಿ ಈ ಕಾಲೇಜಿಗೆ ಎಷ್ಟು ಕೊಠಡಿಗಳು ಅಗತ್ಯತೆ ಇದೆ ;

ಈ) ಕಾಲೇಜಿಗೆ ಅಗತ್ಯವಾಗಿರುವ ಕೊಠಡಿಗಳನ್ನು ನಿರ್ಮಿಸಲು ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು ; ಯಾವ ಕಾಲಮಿತಿಯಲ್ಲಿ ಕೊಠಡಿಗಳನ್ನು ನಿರ್ಮಿಸಲಾಗುತ್ತದೆ ? (ವಿವರ ನೀಡುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):-

ಅ) ಬಂದಿದೆ.

ಆ) 2012-13ನೇ ಸಾಲಿನಲ್ಲಿ ಸದರಿ ಕಾಲೇಜಿಗೆ ಬಿ.ಎ.-392, ಬಿಎಸ್ಸಿ-19, ಬಿ.ಕಾಂ-329 ಹಾಗೂ ಬಿಬಿಎಂ-63 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ.

ಇ) 08 ಕೊಠಡಿಗಳು.

ಈ) ಅನುದಾನದ ಲಭ್ಯತೆ ನಂತರ ಹೆಚ್ಚುವರಿ ಕೊಠಡಿಗಳ ನಿರ್ಮಾಣದ ಅನುಮೋದಿತ ಅಂದಾಜು ವೆಚ್ಚಕ್ಕನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಇದಕ್ಕೆ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ.

ಅಧ್ಯಕ್ಷರು :- ಶ್ರೀ ಬಾಲಕೃಷ್ಣರವರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಬಾಲಕೃಷ್ಣ ಹೆಚ್.ಸಿ. :- ಮಾನ್ಯ ಅಧ್ಯಕ್ಷರೆ, ನಾನು ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಹಶಃ ಮೂರನೇ ಮಂತ್ರಿಗಳಿಗೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಮ್ಮಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾರಂಭವಾಗಿ ಸುಮಾರು 25 ವರ್ಷಗಳು ಆಗಿದೆ. ನಾನು ಇನ್ನೂ ಕೂಡ ಮಕ್ಕಳಿಗೆ ಹೊರಗಡೆ ಅಂದರೆ ಮರದ ಕೆಳಗಡೆ ಕೂಡಿಸಿ ಪಾಠ ಮಾಡುವಂತಹ ವ್ಯವಸ್ಥೆಯಲ್ಲಿದ್ದೇವೆ. ಹಿಂದೆ ಅರವಿಂದ ಲಿಂಬಾವಳಿಯವರು ಸಚಿವರಾಗಿದ್ದ ಸಂದರ್ಭದಲ್ಲಿ ಖಂಡಿತವಾಗಿ ಆ ಬಿಲ್ಡಿಂಗ್ ಅನ್ನು ಪೂರೈಸಿಕೊಡುತ್ತೇವೆನ್ನುವಂತಹ ಒಂದು ವಾಗ್ದಾನವನ್ನು ಕೊಟ್ಟಿದ್ದರು. ಅವರು ಸಚಿವಗಿರಿಯಿಂದ ಹೊರಟು ಹೋದರು. ನಂತರ ಬಂದಂತಹ ಡಾ|| ವಿ.ಎಸ್. ಆಚಾರ್ಯರವರು ಕೂಡ ಕೊಠಡಿಯನ್ನು ಕೊಡುತ್ತೇವೆಂದು ವಾಗ್ದಾನವನ್ನು ಕೊಟ್ಟಿದ್ದರು. ಈ ಸಚಿವರು ಕೂಡ ಅನುದಾನವನ್ನು ಅನುದಾನದ ಲಭ್ಯತೆಯನ್ನು ಆಧರಿಸಿ ಕೊಡುತ್ತೇವೆಂದರೆ ಏನರ್ಥ, ಬಹುಶಃ ಏನಾದರೂ ನೀವು ಈ ವರ್ಷವೇ ಬಿಡುಗಡೆ ಮಾಡುತ್ತೀರಾ ? ನಿಮಗೆ ಅನುದಾನದ ಲಭ್ಯತೆಯು ಬಂದಿಲ್ಲವೆಂದು ಸುಮ್ಮನೆ ಉತ್ತರ ಕೊಡುವುದಕ್ಕೋಸ್ಕರ ಈ ಒಂದು ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೀರಾ ಎಂದು ತಾವು ದಯಮಾಡಿ ತಿಳಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀಸಿ.ಟಿ. ರವಿ :- ಮಾನ್ಯ ಸಭಾಧ್ಯಕ್ಷರೆ, ಒಟ್ಟು ನಮಗೆ ಕೊರತೆ ಇರುವಂತಹ ಕಾಲೇಜು ಕಟ್ಟಡ ಮತ್ತು ಕೊಠಡಿಗಳ ನಿರ್ಮಾಣಕ್ಕೆ 616 ಕೋಟಿ ರೂಪಾಯಿಗಳ 'ಅವಶ್ಯಕತೆ

ಇದೆ. ಈಗಾಗಲೇ ಹಣಕಾಸು ಇಲಾಖೆಯ ಕಾರ್ಯದರ್ಶಿಯವರ ಜೊತೆಗೆ ನಮ್ಮ ಇಲಾಖೆಯ ಮುಖ್ಯ ಕಾರ್ಯದರ್ಶಿಗಳು ನಾವೆಲ್ಲರೂ ಕೂಡ ಮಾತನಾಡಿದ್ದೇವೆ. ಅವರು ಈ ವರ್ಷ 300 ಕೋಟಿ ರೂಪಾಯಿಗಳನ್ನು ಕಾಮಗಾರಿ ನಿರ್ಮಾಣಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. 100 ಕೋಟಿ ರೂಪಾಯಿಗಳನ್ನು ಈ ವರ್ಷದಲ್ಲಿಯೇ ಬಿಡುಗಡೆ ಮಾಡುತ್ತೇವೆನ್ನುವಂತಹ ಮಾತನ್ನು ಹೇಳಿದ್ದಾರೆ. ಹಾಗಾಗಿ ಈ ವರ್ಷದಲ್ಲಿಯೇ ನಿಮ್ಮ ಕಾಲೇಜಿಗೆ ಹೆಚ್ಚುವರಿ ಕೊಠಡಿಯ ಅವಶ್ಯಕತೆ ಏನಿದೆ, ಅದರ ಅರ್ಧ ಭಾಗ ನಿರ್ಮಾಣ ಮಾಡುವುದಕ್ಕೆ ಅನುಮತಿಯನ್ನು ಈ ವರ್ಷ ಕೊಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಇದು ಸಾರ್ವತ್ರಿಕವಾಗಿ ಇಡೀ ಕರ್ನಾಟಕದಾದ್ಯಂತ ಇರತಕ್ಕಂತಹ ಚಿತ್ರವಾಗಿದೆ. ಇವತ್ತು ಎಲ್ಲಾ ಕಡೆಗಳಲ್ಲಿಯೂ ಮರದ ಕೆಳಗಡೆ ಪಾಠ ಮಾಡುವಂತಹ ದೃಶ್ಯ ಸರ್ವೆಸಾಮಾನ್ಯವಾಗಿ ಎಲ್ಲಾ ಕಡೆಯಲ್ಲಿಯೂ ಇದೆ. ಏಕೆಂದರೆ ವಿಪರೀತವಾಗಿ ಅಡ್ಮಿಷನ್ಸ್‌ಗಳು ಆಗುತ್ತಿರುವಂತಹ ಹಿನ್ನೆಲೆಯಲ್ಲಿ ಆಗಿದೆ. ಆ ಕಾರಣಕ್ಕೋಸ್ಕರ ನಾನು ಈ ವಿಷಯದ ಬಗ್ಗೆ ಕಳೆದ ಮೂರು ವರ್ಷದಿಂದ ಪ್ರಯತ್ನ ಪಡುತ್ತಿದ್ದೇನೆ. ನಾನು ಹಣಕಾಸು ಇಲಾಖೆಯಿಂದ ಕ್ಲಿಯರ್ ಮಾಡಿ ತರಿಸುವುದಕ್ಕಾಗಲಿಲ್ಲ. ದಯಮಾಡಿ ಅದನ್ನು ಬಿಟ್ಟು ವಿಶೇಷವಾಗಿ ಹಣವನ್ನು ತರುವಂತಹ ರೀತಿಯಲ್ಲಿ ಈ ಬಗ್ಗೆ ಮಾರ್ಗಗಳನ್ನು ಕಂಡುಹಿಡಿದುಕೊಂಡು, ಆ ರೀತಿಯಾಗಿ ತಂದರೆ ಆಗುತ್ತದೆಯೇ ವಿನಃ ಹಣಕಾಸಿನ ಇಲಾಖೆಯಿಂದಲೆ ನಿಮಗೆ ದುಡ್ಡು ಸಿಗುತ್ತದೆ ಎನ್ನುವುದು ಸುಳ್ಳಿನ ಮಾತಾಗುತ್ತದೆ. ಅವರು ಬಜೆಟ್ ಅಲೋಕೇಷನ್ ಎಷ್ಟು ಇದೆಯೋ ಅದರ ಪ್ರಕಾರವಾಗಿಯೂ ಕೂಡ ಅವರು ಹಣವನ್ನು ಬಿಡುಗಡೆ ಮಾಡುವುದಿಲ್ಲ. ಏಕೆಂದರೆ ಅದು priority ಅಲ್ಲ ಎನುವಂತಹದ್ದು ಅಗುತ್ತದೆ. ದಯಮಡಿ ತಾವು ಯುವಕರು ಇದ್ದೀರಿ, ಚೆನ್ನಾಗಿ ಮಾತನಾಡುತ್ತೀರಿ. ಬರೀ ಮಾತನಾಡುವುದರ ಜೊತೆಗೆ ಕೆಲಸಗಳು ಆಗಬೇಕಾದಾಗ ಈ ರೀತಿಯಾದಂತಹ ಮಾರ್ಗಗಳನ್ನು ರೂಢಿಸುವಂತಹದ್ದನ್ನು ತಾವು ಮಾಡಬೇಕು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :– ಮಾನ್ಯ ಅಧ್ಯಕ್ಷರೆ, ಇಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಎಂದು ಇದೆ. ಅಲ್ಲಿ ಬಹುತೇಕ ಕಾಲೇಜುಗಳಲ್ಲಿ ಪ್ರಥಮದರ್ಜೆ ಇರಬಹುದು, ಕಂಪ್ಯೂಟರ್ ಇರಬಹುದು ಅಲ್ಲಿ ವಾಚ್‌ಮೆನ್‌ಗಳು ಇರಬಹುದು, ಅಲ್ಲಿ ವಿದ್ಯಾರ್ಥಿಗಳು ನಮ್ಮ ಕಡೆ ತಾವಾಗಿಯೇ 200–300 ರೂಪಾಯಿಗಳಿಗೆ....

ಅಧ್ಯಕ್ಷರು :– ನೀವು ಬರುವುದಕ್ಕಿಂತ ಮುಂಚೆ ಅವರು ಹೇಳಿದ್ದಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :- Maintainance fee ಎಂದು ಮಾಡಿದ್ದಾರೆ. ಅದನ್ನು ಸರ್ಕಾರದವರು ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ. ಹಾಗೆ ಇನ್ನೊಂದು ವಿಚಾರ ಇದೆ. ಕಳೆದ ವಾರ ಭಯೋತ್ಪಾದನೆ ವಿರೋಧಿ ಸಮಾವೇಶ ಮಾಡಿ ಕಾಲೇಜು ಕಟ್ಟುವ ಎಲ್ಲಾ ಕಟ್ಟಡದ ಅನುದಾನವು ಅಲ್ಲಿಗೆ ಬಳಕೆಯಾಯಿತು. ಈ ಬಾರಿಯಾದರೂ ಮಾನ್ಯ ಮಂತ್ರಿಗಳು ದಯಮಾಡಿ ಆ ಅನುದಾನವನ್ನು ಕಟ್ಟಡವನ್ನು ಕಟ್ಟುವುದಕ್ಕಾಗಿ ಬಳಸಬೇಕು. ಸ್ವಾತಂತ್ರ್ಯ ಬಂದು ಎಷ್ಟೋ ವರ್ಷಗಳಾದರೂ ಕೂಡ ಕಾಲೇಜು ಆಗಲಿಲ್ಲ. ಏನೂ equipments ಗಳು ಇಲ್ಲದೆಯೇ ನೀವು ಅಲ್ಲಿಗೆ ಕಾಲೇಜನ್ನು ಕೊಟ್ಟಿದ್ದೀರಿ. ದಯಮಾಡಿ ಈ ತರಹ ಆಗಬಾರದು. ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಹೇಳಬೇಕು.

ಅಧ್ಯಕ್ಷರು :- ಆಯಿತು, ತಾವು ಕುಳಿತುಕೊಳ್ಳಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ :- ಮಾನ್ಯ ಉನ್ನತ ಶಿಕ್ಷಣ ಸಚಿವರು ಕರ್ನಾಟಕ ರಾಜ್ಯದಲ್ಲಿ ಇಡೀ ಕಾಲೇಜುಗಳಿಗೆ ಎಲ್ಲಾ ಕಡೆಯಲ್ಲಿಯೂ ಕಳೆದ ಮೂರು ವರ್ಷಗಳಿಂದ ಶಾಲಾ ಕೊಠಡಿಯನ್ನು ಎಲ್ಲಿಯೂ ಕೊಟ್ಟಿರುವುದಿಲ್ಲ.

ಶ್ರೀ ಸಿ.ಟಿ.ರವಿ :- ಮಾನ್ಯ ಅಧ್ಯಕ್ಷರೆ, ಈ ವರ್ಷ 89 ಕಾಲೇಜುಗಳಲ್ಲಿ ಈಗ ಕೊಠಡಿ ನಿರ್ಮಾಣವಾಗುತ್ತಿರುವುದನ್ನು ಪೂರ್ಣಗೊಳಿಸುವುದಕ್ಕೆ 32 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಅದನ್ನು ಈ ಬಾರಿ ಕೊಟ್ಟು ಅದನ್ನು ಪೂರ್ಣಗೊಳಿಸುವಂತಹ ಕೆಲಸವನ್ನು ಮಾಡುತ್ತೇವೆ. 39 ಹೊಸ ಕಾಲೇಜುಗಳಿಗೆ ನಿವೇಶನವನ್ನು ಕೊಟ್ಟಿದ್ದಾರೆ. ಅದಕ್ಕೆ 78 ಕೋಟಿ ರೂಪಾಯಿಗಳನ್ನು ಕೊಟ್ಟು ತಲಾ 2-2 ಕೋಟಿ ರೂಪಾಯಿಗಳನ್ನು ಕೊಟ್ಟು ಈ ಬಾರಿ ಕಾಲೇಜು ಕಟ್ಟಡದ ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸುತ್ತೇವೆ. Additional Rooms ಗಳಿಗೆ ಮತ್ತು Labಗಳಿಗೆ 315 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. Additional roomಗಳಲ್ಲಿ 50% ಈ ವರ್ಷ ಕೊಡುತ್ತೇವೆ. ಮುಂದಿನ ವರ್ಷ ಆಯವ್ಯಯದಲ್ಲಿ ಇನ್ನುಳಿದ 50% ಅನುದಾನವನ್ನು ಕೊಟ್ಟು ನಮ್ಮ ಕಾಲೇಜುಗಳಿಗೆ ಕೊರತೆ ಇರುವಂತಹ ಕೊಠಡಿಗಳು ಲ್ಯಾಬ್ ಮತ್ತು toilet ಈ ವರ್ಷದಲ್ಲಿ ನಾವು ಆದ್ಯತೆಯಾಗಿ ಕೊಟ್ಟಿರುವಂತಹದ್ದು ವಿದ್ಯಾರ್ಥಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಕೊಠಡಿಗಳು ಎಷ್ಟು ಬೇಕೆಂದು ಈ ಬಗ್ಗೆ ವರದಿಯನ್ನು ತರಿಸಿಕೊಂಡಿದ್ದೇವೆ. ಅದನ್ನು ಪ್ರಾರಂಭ ಮಾಡಿಸುತ್ತೇವೆ. ಇಲ್ಲಿ 26 ಕಾಲೇಜುಗಳಿಗೆ ನಿವೇಶನವನ್ನು ಕೊಟ್ಟಿರುವುದಿಲ್ಲ. ಈ ಬಗ್ಗೆ ನಾವು ಆಯಾ ಭಾಗದ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ತಾವು ನಿವೇಶನವನ್ನು ಒದಗಿಸಿಕೊಟ್ಟರೆ ನಾವು ಕಟ್ಟಡವನ್ನು ಕಟ್ಟುವುದಕ್ಕೆ ಹಣ ಕೊಡುತ್ತೇವೆಂದು ಹೇಳಿದ್ದೇವೆ. ಆ ಭಾಗದ ಜನಪ್ರತಿನಿಧಿಗಳು ಅದಕ್ಕೆ ಒತ್ತಾಸೆಯಾಗಿ ನಿಂತುಕೊಂಡರೆ ನಿವೇಶನವನ್ನು

ಶೀಘ್ರಗತಿಯಲ್ಲಿ ಕೊಡಿಸುವಂತಹ ಕೆಲಸವನ್ನು ಮಾಡಿದರೆ ಈ ಮರದ ನೆರಳು, ಇನ್ನೆಲ್ಲೋ ಖಾಸಗಿ ಕಟ್ಟಡ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ ಆ ಕಡೆಗೆ ಒಂದು ಸ್ವಲ್ಪ ಒತ್ತು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ವರ್ಷಕ್ಕೆ ಹೆಚ್ಚುವರಿ ಕೊಠಡಿ ಮತ್ತು ಹೊಸ ಕಾಲೇಜು ಕಟ್ಟಡಗಳು ಇಷ್ಟಕ್ಕೂ 300 ಕೋಟಿ ರೂಪಾಯಿಗಳನ್ನು ಆ ಕಾಮಗಾರಿಗಳಿಗೆ ಒಂದು ಅನುಮೋದನೆಯನ್ನು ಕೊಡುವಂತಹ ಭರವಸೆ ಸಿಕ್ಕಿದೆ. ಆ ಹಣವನ್ನು ಈ ವರ್ಷವೇ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಗೋಪಾಲಕೃಷ್ಣ ಬೇಳೂರು :- ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ 2300 ಜನ ಮಕ್ಕಳು ಇದ್ದಾರೆ. ನಮ್ಮಲ್ಲಿ ಕಟ್ಟಡದ ಕೊರತೆ ಬಹಳ ಇದೆ, ಇವರು ಯಾವ ಆಧಾರದ ಮೇಲೆ ಕೊಡುತ್ತಾರೆಂದು ನೋಡಬೇಕಲ್ಲಾ.

ಅಧ್ಯಕ್ಷರು :- ಅವರು ಈ ಬಗ್ಗೆ ಹೇಳಿದ್ದಾರೆ. ಆಗ ನೀವು ಸದನದಲ್ಲಿ ಇರಲಿಲ್ಲ.

ಶ್ರೀ ಗೋಪಾಲಕೃಷ್ಣ ಬೇಳೂರು :- ಇದನ್ನು ಎಲ್ಲೋ ಕೊಡುವುದಕ್ಕೆ ಬರುವುದಿಲ್ಲ. ನಮ್ಮಲ್ಲಿ 2300 ಮಕ್ಕಳಿಗೆ ಸಮಸ್ಯೆ ಇದೆ. ಈ ಬಗ್ಗೆ ಮಾನ್ಯ ಮಂತ್ರಿಗಳು correct ಆಗಿ ಹೇಳಬೇಕು.

ಶ್ರೀ ಎಂ.ಪಿ. ಕುಮಾರಸ್ವಾಮಿ :- ಕಳಪೆ ಕಾಮಗಾರಿಯಾಗಿರುವುದರಿಂದ ಅಲ್ಲಿ ದುರ್ಬಳಕೆಯಾಗಿದೆ. ದಯಮಾಡಿ ಆ ಬಗ್ಗೆಯೂ ಹೇಳಬೇಕು. ಈ ಬಾರಿ ಆ ತರಹ ಮಾಡಬಾರದು. ಭಯೋತ್ಪಾದನೆ ವಿರೋಧಿ ಸಮಾವೇಶ ಮಾಡುತ್ತೇವೆಂದು ಹೇಳಿ ಕಳೆದ ಬಾರಿ ಗ್ರ್ಯಾಂಟ್ ಅನ್ನು ಖರ್ಚು ಮಾಡಿದ್ದಾರೆ. ಅದರಿಂದ ಏನು ಉಪಯೋಗವಾಯಿತು? ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕು.

ಶ್ರೀ ಸಿ.ಟಿ. ರವಿ :- ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಭಯೋತ್ಪಾದನೆ ವಿರೋಧಿ ಸಮಾವೇಶಕ್ಕೆ ಯಾವುದೇ ಕಟ್ಟಡದ ಅನುದಾನವನ್ನು ಬಳಸಿಕೊಂಡಿರುವುದಿಲ್ಲ. ಅವರಿಗೆ ಬಹಶಃ ಮಾಹಿತಿಯ ಕೊರತೆ ಇದೆ. ಅವರಿಗೆ ತಪ್ಪು ಮಾಹಿತಿ ಸಿಕ್ಕಿದೆ. ಒಂದು ರೂಪಾಯಿ ಹಣವನ್ನು ಈ ಸಮಾವೇಶಕ್ಕೆ ನಮ್ಮ ಇಲಾಖಾವತಿಯಿಂದ ಕೊಠಡಿಗೆ ಖರ್ಚು ಮಾಡಿರುವಂತಹ ಹಣವನ್ನು ಒಂದು ರುಪಾಯಿಯನ್ನೂ ಬಳಸಿರುವುದಿಲ್ಲ.

ಶ್ರೀ ಬಿ. ರಮಾನಾಥ ರೈ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಶಕ್ತಿ ಬರುವಂತಹ ರೀತಿಯಲ್ಲಿ ಹೇಳುತ್ತೇನೆ. ಏಕೆಂದರೆ ಅನೇಕ ಕಡೆಗಳಲ್ಲಿ ಕಾಲೇಜುಗಳು ಪ್ರಾರಂಭವಾಗಿ ಕಟ್ಟಡಗಳು ಇಲ್ಲ, ಮೂಲಭೂತ ವ್ಯವಸ್ಥೆಗಳು ಇಲ್ಲ ಎಂದು ಹೇಳುವಂತಹ ಪರಿಸ್ಥಿತಿ ಇದೆ. ಅದಕ್ಕಾಗಿ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳುವಂತಹ ಅಗತ್ಯವಿದೆ. ನಮಗೆ ಒಂದೆರಡು ಕಾಲೇಜುಗಳಿಗೆ ಡಾ॥ ವಿ.ಎಸ್. ಆಚಾರ್ಯರವರು ಭರವಸೆಯನ್ನು

ಕೊಟ್ಟು ನಾನು ಶಂಕುಸ್ಥಾಪನೆಯನ್ನು ಮಾಡುತ್ತೇನೆ ಎನ್ನುವಂತಹ ಮಾತನ್ನು ಹೇಳಿದರು. ಬಹಶಃ ಇವತ್ತಿನವರೆಗೂ ಕೂಡ ಅದಕ್ಕೆ ಮಂಜೂರಾತಿ ಸಿಕ್ಕಿರುವುದಿಲ್ಲ. ನೀವು ಈ ಒಂದು ಸಣ್ಣ ವಿಚಾರಕ್ಕಾಗಿ ನೀವು ಮುಖ್ಯಮಂತ್ರಿಯವರ ಹಾಗೂ ಹಣಕಾಸಿನ ಸಚಿವರ ಜೊತೆಯಲ್ಲಿ ಮಾತನಾಡಿ ಒಂದು ನಿರ್ದಿಷ್ಟವಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಒಂದು ಪ್ರಯತ್ನ ಮಾಡಬಹುದು. ಇದು ನಿಮ್ಮ ಇಲಾಖೆಗೆ strengthen ಕೊಡುವಂತಹ ರೀತಿಯಲ್ಲಿ ನಾವು ಮಾತನಾಡುತ್ತಿದ್ದೇವೆ.

ಶ್ರೀ ಸಿ.ಟಿ. ರವಿ :- ಒಟ್ಟು 2006-07ರವರೆಗೆ ಇದ್ದಂತಹ ಒಟ್ಟು ಸರ್ಕಾರಿ ಕಾಲೇಜುಗಳ ಸಂಖ್ಯೆ : 184, 2006-07ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭ ಮಾಡಿದಂತಹ ಸರ್ಕಾರಿ ಪದವಿ ಕಾಲೇಜುಗಳ ಸಂಖ್ಯೆ 196 ಅಂದರೆ ಒಟ್ಟು 55-60 ವರ್ಷಗಳಲ್ಲಿ ಎಷ್ಟು ಕಾಲೇಜುಗಳು ಇದ್ದವು, ಅದಕ್ಕಿಂತ ಜಾಸ್ತಿ ಕಾಲೇಜುಗಳನ್ನು 2006-07 ನೇ ಸಾಲಿನಲ್ಲಿ ಸನ್ಮಾನ್ಯ ಇವತ್ತಿನ ಸಭಾಪತಿಗಳಾಗಿದ್ದಂತಹ ಡಿ. ಹೆಚ್. ಶಂಕರಮೂರ್ತಿಯವರು ಉನ್ನತ ಶಿಕ್ಷಣ ಸಚಿವರಾಗಿದ್ದ ಕಾಲದಲ್ಲಿ ಬಿ.ಎಸ್. ಯಡಿಯೂರಪ್ಪನವರು ಹಣಕಾಸಿನ ಸಚಿವರಾಗಿದ್ದ ಕಾಲದಲ್ಲಿ ಹೊಸದಾಗಿ ಕೊಟ್ಟಂತಹ ಕಾಲೇಜುಗಳು 196 ಆಗಿದೆ. ಬಿಜೆಪಿ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಕೊಟ್ಟಂತಹ ಕಾಲೇಜುಗಳು 196 ಆಗಿದೆ. ಇಷ್ಟು ಕಾಲೇಜುಗಳನ್ನು ಕೊಡುವಂತಹ ಪ್ರಯತ್ನವನ್ನು ಯಾವ ಸರ್ಕಾರವೂ ಮಾಡಿರಲಿಲ್ಲ. ಆ ರೀತಿ ಮಾಡಿರುವ ಕಾರಣದಿಂದಾಗಿ ಕೊರತೆ ಉಂಟಾಗಿದೆ. ಆ ಕೊರತೆಯನ್ನು ತುಂಬಿಸುವುದಕ್ಕೆ ಬೇಕಾದಂತಹ ಕ್ರಮ ಕೈಗೊಂಡಿದ್ದೇವೆ. ನಮಗೆ ಇಚ್ಛಾಶಕ್ತಿ ಇದೆ ಅದನ್ನು ಪೂರ್ಣಗೊಳಿಸಿಕೊಡುತ್ತೇವೆ.

ಶ್ರೀ ಬಿ. ರಮಾನಾಥ ರೈ :- ಕಳೆದ 2-3 ವರ್ಷಗಳಿಂದ ಹೊಸ ಕಾಲೇಜುಗಳಿಗೆ permission ಕೊಡುತ್ತಿಲ್ಲ. ಮಾನ್ಯ ಸಚಿವರು ಬಹಳ ಜಾಸ್ತಿ ಕಾಲೇಜುಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನೀವೇನು ಕಾಲೇಜನ್ನು ಪ್ರಾರಂಭ ಮಾಡಿದ್ದೀರಿ, ಕೆಲವು ಕಾಲೇಜಿನ ಮಕ್ಕಳು ಇಲ್ಲದಿರುವ ಕಾರಣದಿಂದ ಮುಚ್ಚಬೇಕೆಂದು ಕೆಲವು ಕಡೆಯಲ್ಲಿ ಬಂದಿದೆ.

ಶ್ರೀ ಸಿ.ಟಿ. ರವಿ :- ಮಾನ್ಯ ರಮಾನಾಥ ರೈರವರೆ, ನಾನು ನಿಮ್ಮ ಜಿಲ್ಲೆಯ ಉಸ್ತುವಾರಿ ಸಚಿವನಾಗಿದ್ದೇನೆ. ನಿಮ್ಮ ಬಗ್ಗೆ ನಮಗೆ ಕಾಳಜಿ ಜಾಸ್ತಿ ಇದೆ. ಆ ಕೆಲಸವನ್ನು ಮಾಡುವಾ.

ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದು

39 (421) ಶ್ರೀ ಬಂಡೆಪ್ಪ ಖಾಶೆಂಪೂರ (ಬೀದರ್ ದಕ್ಷಿಣ). :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ;

ಇ) ಖಾಲಿ ಹುದ್ದೆಗಳನ್ನು ಯಾವಾಗ ತುಂಬಲಾಗುವುದು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಬಂದಿದೆ.

ಆ) 3407 ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ನೇಮಕಾತಿ ಸಂಬಂಧ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಿದೆ. ಅನುಮತಿ ದೊರೆತ ನಂತರ ಕ್ರಮ ವಹಿಸಲಾಗುವುದು.

ಇ) ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗಿದ್ದು, ಈ ಪರೀಕ್ಷೆಯ ಫಲಿತಾಂಶ ಹೊರಬಿದ್ದ ಕೂಡಲೆ ತಾತ್ಕಾಲಿಕ/ಅಂತಿಮ ಪಟ್ಟಿ ಪ್ರಕಟಿಸಿ ನೇಮಕಾತಿ ಮಾಡಿಕೊಳ್ಳಲಾಗುವುದು.

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಅನುಮತಿ ದೊರೆತ ಕೂಡಲೆ ಹುದ್ದೆಗಳನ್ನು ತುಂಬಲಾಗುವುದು.

ಶ್ರೀ ಬಂಡೆಪ್ಪ ಖಾಶೆಂಪೂರ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಪ್ರೌಢಶಾಲೆಯಲ್ಲಿ ಸುಮಾರು 3407 ಸರ್ಕರಿ ಪ್ರೌಢಶಾಲಾ ಸಹ ಶಿಕ್ಷಕರ ನೇಮಕಾತಿಯ ಸಂಬಂಧ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಅಂದರೆ ಅಲ್ಲಿ ಖಾಲಿ ಇದೆಯೇ ? ಆದೇಶವನ್ನು ಹೊರಡಿಸಿದ್ದೇವೆ,

ನೇಮಕಾತಿಯ ಪ್ರಕ್ರಿಯೆ ಚಾಲನೆಯಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಮೊನ್ನೆಯೂ ಬಹಳಷ್ಟು ಚರ್ಚೆಯಾಯಿತು. ಕೆಲವು ಶಾಸಕರೆಲ್ಲಾ even ಬಾವಿಯಲ್ಲಿ ಹೋಗಿ ಇದರ ಬಗ್ಗೆ ಬಹಳ ಚರ್ಚೆ ಮಾಡಿದರು. ಒಂದು ಮಾತನ್ನು ಹೇಳಲು ಬಯಸುತ್ತೇನೆ ಮಾನ್ಯ ಶಿಕ್ಷಣ ಸಚಿವರೆ, ಮೊನ್ನೆ ನೀವು ಜುಲೈ 5ನೇ ತಾರೀಖಿನಂದು 'ಶಾಲೆಗಾಗಿ ನಾವು ನೀವು' ಎನ್ನುವ programme ಮಾಡಿದಾಗ ನಾನು ನಮ್ಮ ಹಳ್ಳಿಯಲ್ಲೊಂದು ಕೊಳಾರ್ಜಿ ಎನ್ನುವ ಶಾಲೆಗೆ ಹೋಗಿದ್ದೆ. ಅಲ್ಲಿ 7ನೇ ತರಗತಿಯವರೆಗೂ ಇದೆ. ಅಲ್ಲಿ ಹೋದಾಗ, ಕೇವಲ 80 ಮಕ್ಕಳು ಇದ್ದರು. ನಿನ್ನೆ ತಾವು, ratio 1:28, 28 ಮಕ್ಕಳಿಗೆ ಒಬ್ಬರು Teacher ಎಂದು ಹೇಳಿದಿರಿ. ಆದರೆ ಅದರ ಹಿನ್ನೆಲೆಯಲ್ಲಿ ನೀವು study ಮಾಡಿದರೆ ಈ ratio ಏಕೆ ಕಡಿಮೆಯಾಗುತ್ತಿದೆ ? ಅಂದರೆ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಆ ಹಳ್ಳಿಯಲ್ಲಿ ಈ ರೀತಿ ಇರುವುದು ನನಗೇ ಆಶ್ಚರ್ಯವಾಯಿತು. ಆ ಹಳ್ಳಿಯಲ್ಲಿ ಒಂದು Private School ಇದೆ, ಅಲ್ಲಿ 130 ರೂಪಾಯಿ fees ತೆಗೆದುಕೊಳ್ಳುತ್ತಾರೆ. ಅಲ್ಲಿ 150 strength ಇದ್ದಾರೆ. ಅಲ್ಲಿ ಸರ್ಕಾರಿ ಪುಸ್ತಕ ಕೊಡುವುದಿಲ್ಲ, ಬಟ್ಟೆ ಕೊಡುವುದಿಲ್ಲ, ಯಾವುದೂ ಉಚಿತವಾಗಿ ಕೊಡುವುದಿಲ್ಲ. ಅಂದರೆ ಎಲ್ಲೋ ಒಂದು ಕಡೆ ನಮ್ಮ education system ನಲ್ಲಿ ವ್ಯತ್ಯಾಸವಾಗುತ್ತಿದೆ. ಹಾಗಾಗಿ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ ನೋಡಿ, ಅದರಲ್ಲೂ ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ 10ನೇ ತರಗತಿಯ ಫಲಿತಾಂಶ ಎಲ್ಲಾ ಜಿಲ್ಲೆಗಳಿಗಿಂತ ಕೊನೆಯಲ್ಲಿದೆ.

ಅಧ್ಯಕ್ಷರು :– ಮಾನ್ಯ ಸಚಿವರು ಉತ್ತರ ಹೇಳಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಅಧ್ಯಕ್ಷರೆ, ನಮ್ಮ ಹಿರಿಯ ಸದಸ್ಯರಾದ ಶ್ರೀಯುತ ಬಂಡೆಪ್ಪ ಖಾಶೆಂಪೂರ್‌ರವರು ಕೇಳಿರುವ ಪ್ರಶ್ನೆ ಸತ್ಯ ಇದೆ. ಶಿಕ್ಷಕರ ಹುದ್ದೆ ಖಾಲಿ ಇದೆ. ಹೈಸ್ಕೂಲ್, ಜೂನಿಯರ್ ಕಾಲೇಜುಗಳಲ್ಲಿ ಹುದ್ದೆಗಳು ಖಾಲಿ ಇಲ್ಲದೇ ಇರುವಂತೆ ನಾವು ಇದುವರೆಗೂ ನೋಡಿಕೊಂಡಿದ್ದೇವೆ. ಈಗಲೂ ಖಾಲಿ ಇಲ್ಲದೇ ಇರುವಂತೆ ನೋಡಿಕೊಳ್ಳುವುದಕ್ಕೆ ಪ್ರಕ್ರಿಯೆ ಮಾಡಿದ್ದೇವೆ. 1700 ಹುದ್ದೆಗಳಿಗೆ ಉಪನ್ಯಾಸಕರ ಪರೀಕ್ಷೆ ಆಗಿದೆ. ನೇಮಕಾತಿ ಪ್ರಕ್ರಿಯೆ ಇದೆ. 3400 ಹೈಸ್ಕೂಲ್ ಶಿಕ್ಷಕರ ಹುದ್ದೆಗಳಿಗೆ ಪರೀಕ್ಷೆ ಆಗಿದೆ, ಇನ್ನು result ಕೊಡುತ್ತೇವೆ. ಅದುವರೆಗೂ ಅಲ್ಲಿ ಅತಿಥಿ ಉಪನ್ಯಾಸಕರನ್ನು ಪ್ರತಿ ವರ್ಷದಂತೆ ಕೊಡುತ್ತೇವೆ. ಅಲ್ಲಿ ನಮಗೆ ದೊಡ್ಡ ತೊಂದರೆ ಆಗುವುದಿಲ್ಲ. ನಮಗೆ ತೊಂದರೆಯಾಗುವುದು ಪ್ರಾಥಮಿಕ ಶಾಲೆಗಳಿಗೆ, ಕಳೆದ ಎರಡು ವರ್ಷ retirement ಇರಲಿಲ್ಲ. ಈಗ retirement ಶುರುವಾಗಿದೆ ಮತ್ತು RTE ಯನ್ನು ಜಾರಿಗೊಳಿಸುತ್ತಿರುವುದರಿಂದ ಕನಿಷ್ಠ ಇಬ್ಬರು ಶಿಕ್ಷಕರು ಸ್ಕೂಲ್‌ನಲ್ಲಿ ಇರಬೇಕಾಗಿದೆ. ಆ

ಎಲ್ಲಾ ಹಿನ್ನೆಲೆಯಲ್ಲಿ ಸುಮಾರು 14,000 ದಷ್ಟು ಶಿಕ್ಷಕರ ಕೊರತೆ ನಮಗೆ ಕಂಡುಬರುತ್ತಿದೆ. ಮೊನ್ನೆಯೂ ಇಲ್ಲಿ ಸಾಕಷ್ಟು ಸದಸ್ಯರು, ಶಿಕ್ಷಕರ ಕೊರತೆ ಇದ್ದು ಹುದ್ದೆ ಖಾಲಿ ಇದೆ, ತಕ್ಷಣ ತುಂಬಿಕೊಡಬೇಕು, ಏಕೆಂದರೆ ಸರ್ಕಾರದಲ್ಲಿ ಶಿಕ್ಷಣ ಆದ್ಯತೆ ಕ್ಷೇತ್ರ, ಅದನ್ನು ತುಂಬಬೇಕೆನ್ನುವ ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗಾಗಿ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಮಾತನಾಡಿದ್ದೇನೆ. ಹಣಕಾಸಿನ ಇಲಾಖೆಯವರೊಂದಿಗೂ ಚರ್ಚಿಸಿದ್ದೇನೆ. ಈ ಪ್ರಾಥಮಿಕ ಶಾಲೆಗಳಲ್ಲಿ 14,000 ಶಿಕ್ಷಕರ ಹುದ್ದೆ ಏನು ಖಾಲಿ ಇದೆ, ಅದಕ್ಕೂ ಸಹ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಮುಂದಾಗಿದ್ದೇವೆ. ಆ ಮೂಲಕ ಅಲ್ಲಿಯೂ ನೇಮಕಾತಿ ಮಾಡಿ ಖಾಯಂ ಮಾಡುವುದಕ್ಕೂ ಸಹ ಅಗತ್ಯ ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. ಆದರೆ ನೇಮಕಾತಿ ಮಾಡಲು 6 ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಹಾಗಾಗಿ ಅದುವರೆಗೆ ಈ ಅತಿಥಿ ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಲ್ಲಿಯೂ ಸಹ ತೆಗೆದುಕೊಳ್ಳಲು ಈಗಾಗಲೇ ಒಂದು ಚರ್ಚೆಯನ್ನು ನಾವು ಮಾಡಿದ್ದೇವೆ. ತಾತ್ವಿಕವಾದಂತಹ ಒಂದು ಒಪ್ಪಿಗೆ ಇದೆ. ಇದನ್ನು ಆದಷ್ಟು ಶೀಘ್ರದಲ್ಲಿ ಅನುಷ್ಠಾನಕ್ಕೆ ತರುವಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ಬಂಡೆಪ್ಪ ಖಾಶೆಂಪೂರ್ :- ಮಾನ್ಯ ಅಧ್ಯಕ್ಷರೆ, ಈಗ ಮಂತ್ರಿಗಳು ಇಷ್ಟೇ ಹೇಳಿ, 3,407 Postಗೆ immediate....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಸೆಪ್ಟೆಂಬರ್ ತಿಂಗಳಿನಲ್ಲಿ result ಕೊಡುತ್ತೇವೆ.

ಶ್ರೀ ಬಂಡೆಪ್ಪ ಖಾಶೆಂಪೂರ್ :- Result ಯಾವಾಗಲಾದರೂ ಆಗಲಿ. Temporary Teachersನ್ನಾದರೂ ಕೊಡಬೇಕು. ಈಗಾಗಲೇ ಶಾಲೆಗಳು ಪ್ರಾರಂಭವಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- Guest Teachers ಒದಗಿಸುತ್ತೇವೆ.

ಶ್ರೀ ಬಂಡೆಪ್ಪ ಖಾಶೆಂಪೂರ್ :- Guest Teachers ನೇಮಕಾತಿ ಆಗುತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮುಂದಿನ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಚರ್ಚೆ ಮಾಡುತ್ತೇವೆ.

ಶ್ರೀ ಬಂಡೆಪ್ಪ ಖಾಶೆಂಪೂರ್ :- ಅಲ್ಲಿ ಡಿ.ಸಿಗಳಿಗೆ even Backward Regionದು ಒಂದು Fund (BRGF) ಇದೆ, ಅದನ್ನು ತೆಗೆದುಕೊಳ್ಳಿ ಎಂದರೆ, ಅವರು Yes ಎಂದು ಹೇಳುತ್ತಾರೆ. ಅಲ್ಲಿ ಸ್ವಲ್ಪ late ಮಾಡಿ, ಅಂದರೆ ಇನ್ನೂ 2 ತಿಂಗಳು ಆಗುತ್ತದೆ. ಅದಕ್ಕಾಗಿ ಮಾನ್ಯ ಸಚಿವರು ಈ ಸದನಕ್ಕೆ ಮಾಹಿತಿ ಕೊಡಬೇಕು. ಆಯಿತು, ತಾವು permanent ನೇಮಕಾತಿ ಯಾವಾಗ ಮಾಡುತ್ತೀರಿ ಅದು ನಮಗೆ ಬೇಕಾಗಿಲ್ಲ. 15 ದಿವಸದಲ್ಲಿ ಇಡೀ

ರಾಜ್ಯದೊಳಗೆ Guest lecturers ನೇಮಕಾತಿ ಪ್ರಕ್ರಿಯೆ ಮುಗಿಸುತ್ತೇವೆಂದು ಆದೇಶ ಕೊಡಿ.

ಶ್ರೀ ವೆಂಕಟರಾವ್ ನಾಡಗೌಡ :- ಆದೇಶವನ್ನು ಹೊರಡಿಸಬೇಕು. ಎಲ್ಲರಿಗೂ ತೊಂದರೆ ಇದೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :- ಇಡೀ ರಾಜ್ಯದಲ್ಲಿ ತೊಂದರೆ ಇದೆ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ :- ಆದೇಶವನ್ನು ಯಾವಾಗ ಹೊರಡಿಸುತ್ತೀರಿ ಎಂದು ನೀವು ಸದನದಲ್ಲಿಯೇ ಹೇಳಬೇಕು. 2-3 ತಿಂಗಳು ಆದರೆ....

(ಗೊಂದಲ)

ಅಧ್ಯಕ್ಷರು :- ಈ ರೀತಿ ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ ?

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ :- ದಯವಿಟ್ಟು ತಾವು ಆದೇಶ ಹೊರಡಿಸಬೇಕು. Guest Lecturers ನೇಮಕ ಮಾಡಿದರೆ ಏನಾದರೂ ಸ್ವಲ್ಪ relax ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೊಂದು ಏನಾದರೂ ಹೇಳಬೇಕು. ಇಲ್ಲವೆಂದರೆ ಬಹಳ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ :- ಮಾನ್ಯ ಮುಖ್ಯಮಂತ್ರಿಗಳೆ, ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 14,000 ಶಿಕ್ಷಕರ ಕೊರತೆ ಇದೆ. ಪ್ರೌಢ ಶಾಲೆಗಳಲ್ಲಿ 4,000, ಒಟ್ಟು 18,000 ಶಿಕ್ಷಕರ ಕೊರತೆ ಇರುವ ಹಿನ್ನೆಲೆಯಲ್ಲಿ ಎಲ್ಲಾ ಸದಸ್ಯರು, ಮಂತ್ರಿಗಳನ್ನು ಹಾಕಿಕೊಂಡು ಏನೆಲ್ಲಾ....

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :- 3 ದಿವಸಗಳಿಂದ ಬಾವಿಗೆ ಬಂದರು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಚರ್ಚೆಯಾಗುತ್ತಿದೆ, ಚರ್ಚೆಯಾಗುತ್ತಿದೆ ಎಂದು ಹೇಳುತ್ತಾರೆ.

ಅವರು ತಮ್ಮನ್ನು ಬಿಟ್ಟುಕೊಡುವುದಕ್ಕಾಗುವುದಿಲ್ಲ. ಅಂದರೆ ಹಣಕಾಸಿನ ಒಪ್ಪಿಗೆ ಇಲ್ಲ. ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದು ಹೇಳುತ್ತಾರೆ. ದಯಮಾಡಿ ಅದಕ್ಕೆ ಏನಾದರೂ ಒಂದು ಆದೇಶ ಹೊರಡಿಸಿ. ಏಕೆಂದರೆ permanent teachers ಬರಬೇಕಾದರೆ 6 ತಿಂಗಳು ಆಗುತ್ತದೆ. ಈ ವರ್ಷ academic year ಮುಗಿದು ಹೋಗುತ್ತದೆ. ಪ್ರಯೋಜನವಾಗುವುದಿಲ್ಲ. ತತ್‌ಕ್ಷಣ 14,000 ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವ ಹಿನ್ನೆಲೆಯಲ್ಲಿ, ಪಾಪ, ಏಕಾಏಕಿ ಮಂತ್ರಿಗಳು ಏನು ಮಾಡುವುದಕ್ಕಾಗುವುದಿಲ್ಲ, ಹಣಕಾಸಿನ ಮಂತ್ರಿಗಳು, ಮುಖ್ಯಮಂತ್ರಿಗಳು ತಾವು ಅವರ ನೆರವಿಗೆ ಬರಬೇಕು. ಆಗ ಮಾತ್ರ ಏನಾದರು ಪರಿಹಾರ ಪಡೆಯಲಿಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ಇವತ್ತೇ ನೇಮಕಾತಿ ಮಾಡಿ ಎಂದು ತಾವು ಆದೇಶ ಹೊರಡಿಸಿ. ಬೇಕಾದರೆ ಒಂದು ತಿಂಗಳು ಸಂಬಳ ಬಿಟ್ಟುಕೊಡಿ.

ಶ್ರೀ ಬಂಡೆಪ್ಪ ಖಾಶೆಂಪೂರ್ :– ಪ್ರೌಢ ಶಾಲೆಯ ಬಗ್ಗೆ ಕೇಳಿದ್ದೇವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟ ಉತ್ತರ ಕೊಟ್ಟಿದ್ದಾರೆ. ಸುಮಾರು 3,407 post ಗಳು ಖಾಲಿ ಇವೆ. ನೇಮಕಾತಿ ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. ಪ್ರಾಥಮಿಕ ಶಾಲೆಯಲ್ಲಿ 14,000 post ಖಾಲಿ ಇದೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೆ, ಅವರು ಮೊನ್ನೆ 'ಶಾಲೆಗಾಗಿ ನಾವು ನೀವು' ಎನ್ನುವ ಒಂದು ಕಾರ್ಯಕ್ರಮ ಮಾಡಿದ್ದಾರೆ. ನಾನು ಒಂದು ಹಳ್ಳಿಯಲ್ಲಿ ಶಾಲೆಗೆ ಹೋಗಿದ್ದೆ ಅಲ್ಲಿ 7ನೇ ತರಗತಿಯವರೆಗೂ ಇದೆ. ಕೇವಲ 80 strength ಇದೆ. ಪಕ್ಕದಲ್ಲಿ ಒಂದು private school ಇದೆ. ಅದು ಅಂತಹ standard school ಅಲ್ಲ, 150 strength ಇದ್ದಾರೆ. ಅವರಿಗೆ fees ಎಷ್ಟು ಅಂದರೆ 130 ರೂಪಾಯಿ ಇದೆ. ಎಲ್ಲೋ ಒಂದು ಕಡೆ ನಮ್ಮ Education System ನಲ್ಲಿ lapses ಇದೆ ಎಂದು ನಾನು ಭಾವಿಸುತ್ತೇನೆ. ಬಡ ಮಕ್ಕಳಿಗೆಲ್ಲಾ ನಾವು ವಿದ್ಯಾಭ್ಯಾಸ ಕೊಡಬೇಕು ಅಂಥದ್ದು, ನಮ್ಮ ಬೀದರ್ ಭಾಗದಲ್ಲಿ t0th standard result ಬಂದ ತಕ್ಷಣ ನಮಗೆ last position. ಅಲ್ಲಿನ ಡಿ.ಸಿ.ಯವರಿಗೆ BRGF ನಲ್ಲಿ temporary teachers ತೆಗೆದುಕೊಳ್ಳಿ ಎಂದರೆ, ಅವರು ಅಕ್ಟೋಬರ್, ನವೆಂಬರ್‌ನಲ್ಲಿ ಮಾಡುತ್ತಾರೆ. ಮೊನ್ನೆ ಶಾಸಕರೆಲ್ಲಾ ಈ ವಿಷಯವಾಗಿ 'ಬಾವಿಯಲ್ಲಿ' ಬಂದಿದ್ದರು. 3,407 ಹಾಗೂ ಪ್ರಾಥಮಿಕ ಶಾಲೆಗಳಲ್ಲಿ 14,000 ಶಿಕ್ಷಕರ ನೇಮಕಾತಿ ಮಾಡಬೇಕು. At least ತಕ್ಷಣವಾಗಿ Guest Lecturersರನ್ನು 15 ದಿವಸದೊಳಗೆ ತೆಗೆದುಕೊಳ್ಳುವಂತಹ ಒಂದು ಆಶ್ವಾಸನೆಯನ್ನು ಸದನದಲ್ಲಿ ಕೊಡಬೇಕೆಂದು ತಮ್ಮ ಹತ್ತಿರ ವಿನಂತಿ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು :– ಕುಳಿತುಕೊಳ್ಳಿ, ಎಲ್ಲರ ಬೇಡಿಕೆಯೂ ಒಂದೇ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಷಯದ ಬಗ್ಗೆ ಮಾನ್ಯ ಜಯಚಂದ್ರರವರು, ಬಂಡೆಪ್ಪ ಖಾಶೆಂಪೂರ್‌ರವರು ಹಾಗೂ ಇನ್ನಿತರೆ ಶಾಸಕರು ಇಲ್ಲಿ ಸಾಕಷ್ಟು ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ನಮ್ಮ ಗಮನಕ್ಕೂ ತಂದಿದ್ದಾರೆ. ಇದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರೂ ನನ್ನ ಜೊತೆ ಚರ್ಚೆ ಮಾಡಿದ್ದಾರೆ. ಅದಕ್ಕಾಗಿ ಒಂದು ಆರ್ಥಿಕ ಮಿತವ್ಯಯ ಏನಿದೆ, ಆ ಹಿನ್ನೆಲೆಯಲ್ಲಿ, ಏಕೆಂದರೆ ಇವತ್ತೇ post vacant ಆಗಲಿಲ್ಲ. ಇದು ನಿರಂತರವಾಗಿ ನಡೆಯುತ್ತಿರುವ ಪ್ರಕ್ರಿಯೆ. 3–4 ವರ್ಷಗಳಲ್ಲಿ ಬಹಳಷ್ಟು ಶಿಕ್ಷಕರ ನೇಮಕಾತಿ ಮಾಡುವಂಥದ್ದು ನಮ್ಮ ಸರ್ಕಾರದಲ್ಲಿ ನಡೆದಿದೆ. ಇನ್ನೂ 14,000 ಶಿಕ್ಷಕರನ್ನು ನೇಮಕ ಮಾಡುವಂತಹ process ಮಾಡಬೇಕೆನ್ನುವಂಥದ್ದು, ಇದರ ಬಗ್ಗೆ ನಾನು ಮಾನ್ಯ ಶಿಕ್ಷಣ ಸಚಿವರೊಂದಿಗೆ ಹಾಗೂ ನಮ್ಮ ಅಧಿಕಾರಿಗಳೊಂದಿಗೆ ಚರ್ಚಿಸಿ ತಕ್ಷಣವೇ ಏನು ಮಾಡಬೇಕೆಂದು ನಿರ್ಧಾರ ಕೈಗೊಂಡು, ಈ ಅಧಿವೇಶನ ಮುಗಿದ ತಕ್ಷಣ ಅದರ ಬಗ್ಗೆ ನಿರ್ಧಾರ ಕೈಗೊಳ್ಳುತ್ತೇನೆ. ಅತಿಥಿ ಶಿಕ್ಷಕರನ್ನು ನೇಮಕ ಮಡುವುದರ ಬಗ್ಗೆ ತಕ್ಷಣವೇ ನಿರ್ಧರಿಸುತ್ತೇನೆ.

ಶ್ರೀ ಯು.ಟಿ. ಖಾದರ್ :– ಶಿಕ್ಷಕರ ನೇಮಕಾತಿ ಮಾಡುವಾಗ ಯಾವ guide-lines ಅನುಸರಿಸುತ್ತಿದ್ದೀರಿ ?

ಅಧ್ಯಕ್ಷರು :– ಈಗಾಗಲೇ ಚರ್ಚೆಯಾಗಿದೆ. 15 ದಿವಸದೊಳಗೆ ಆದೇಶ ಹೊರಡಿಸಲು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಗೂಳಿಹಟ್ಟಿ ಡಿ. ಶೇಖರ್‌ರವರ ಪ್ರಶ್ನೆಗೆ ಉತ್ತರ ನೀಡಲು ಮಾನ್ಯ ಸಚಿವರು ಕಾಲಾವಕಾಶ ಕೇಳಿದ್ದಾರೆ. 31ನೇ ತಾರೀಖಿನಂದು ಉತ್ತರ ನೀಡುತ್ತಾರೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ :– ಮಾನ್ಯ ಅಧ್ಯಕ್ಷರೆ, ಈ ರೀತಿ ಎಲ್ಲರೂ ಕಾಲಾವಕಾಶ ಕೇಳಿದರೆ ಹೇಗೆ ?

ಅಧ್ಯಕ್ಷರು :– ಮಾನ್ಯ ಅರವಿಂದ ಲಿಂಬಾಳಿಯವರೆ, ತಾವು ಯವಾಗ ಉತ್ತರ ಕೊಡುತ್ತೀರಿ ?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಮಾಹಿತಿಯನ್ನು ಅತಿ ಶೀಘ್ರದಲ್ಲಿ ಒದಗಿಸುತ್ತೇನೆ.

ಅಧ್ಯಕ್ಷರು :– 30 ನೇ ತಾರೀಖಿನಂದು ಉತ್ತರ ಕೊಡಿ. ಇನ್ನು ಮಾನ್ಯ ಎಸ್.ಆರ್. ವಿಶ್ವನಾಥ್ ಹಾಜರಿಲ್ಲ.

ಪ್ರಶ್ನೆ ಸಂಖ್ಯೆ 41(574)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಅಧ್ಯಕ್ಷರು :- ಮಾನ್ಯ ಎಂ.ಪಿ. ಕುಮಾರಸ್ವಾಮಿಯವರು ಪ್ರಶ್ನೆ ಕೇಳುವುದು.

ಅನುದಾನ ಬಿಡುಗಡೆ ಮಾಡಿರುವುದು

42 (555) ಶ್ರೀ ಕುಮಾರಸ್ವಾಮಿ ಎಂ.ಪಿ. :- ಮಾನ್ಯ ಉನ್ನತ ಶಿಕ್ಷಣ ಸಚಿವರು ಧಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ತುಮಕೂರು ಜಿಲ್ಲೆಯಲ್ಲಿರುವ K.S.E.F. ಬಿ.ಇಡಿ. ಶಿಕ್ಷಣ ಮಹಾವಿದ್ಯಾಲಯದ ವಿರುದ್ಧ ಅಕ್ರಮ ದಾಖಲೆ ಸುಳ್ಳು ಪ್ರಮಾಣ ಪತ್ರ ಇತ್ಯಾದಿಯಾಗಿ ಹಲವಾರು ದೂರುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಅ) ಬಂದಿದ್ದಲ್ಲಿ ಇಷ್ಟೆಲ್ಲಾ ದೂರುಗಳಿದ್ದರೂ ಸದರಿ ಸಂಸ್ಥೆಗೆ ಅನುದಾನ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಯಾವ ಆಧಾರದ ಹಿನ್ನೆಲೆಯಲ್ಲಿ ಅನುದಾನ ಮಂಜೂರು ಮಾಡಲಾಗಿದೆ ? (ಮಾಹಿತಿ ನೀಡುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):-

ಅ) ವೇತನಾನುದಾನಕ್ಕೊಳಪಡಿಸುವ ಪೂರ್ವದಲ್ಲಿ K.S.E.F. ಬಿ.ಇಡ್ ಶಿಕ್ಷಣ ಮಹಾವಿದ್ಯಾಲಯ, ತುಮಕೂರು ಇದರ ವಿರುದ್ಧ ಯಾವುದೇ ದೂರುಗಳು ಇರುವುದಿಲ್ಲ. ಆದರೆ, ವಿಭಿನ್ನ ಆಡಳಿತ ಮಂಡಳಿಗಳ ಮಧ್ಯೆ ದಾವೆಗಳು ಇದ್ದು, ಈ ಪೈಕಿ ಮಾನ್ಯ ರಾಜ್ಯ ಉಚ್ಛನ್ಯಾಯಾಲಯದಲ್ಲಿ ಇದ್ದ ದಾವೆಗಳು ವಜಾಗೊಂಡಿರುತ್ತವೆ. ಸದ್ಯ ತುಂಬಾ ಹಳೆಯದಾದ ಒಂದು ದಾವೆಯು (ಸಂಖ್ಯೆ ಓಎಸ್ 8054/1997) ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯ, ಬೆಂಗಳೂರು ಇಲ್ಲಿ ಕಳೆದ 15 ವರ್ಷಗಳಿಂದಲೂ ವಿಚಾರಣೆ ಯಾಗುತ್ತಿದ್ದು, ನ್ಯಾಯಾಲಯದ ತೀರ್ಪು ಬಾಕಿ ಇದ್ದು, ಯಾವುದೇ ತಡೆಯಾಜ್ಞೆ ಇರುವುದಿಲ್ಲ. ಮಾನ್ಯ ನ್ಯಾಯಾಲಯಗಳು ನೀಡುವ ತೀರ್ಪುಗಳಿಗೆ ಬದ್ಧರಾಗುವ ಷರತ್ತಿಗೊಳಪಟ್ಟು ಈ ಸಂಸ್ಥೆಯ ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗಿದೆ.

ಸರ್ಕಾರದ ಆದೇಶ ಹಾಗೂ ಇಲಾಖೆಯ ತ್ರಿಸದಸ್ಯ ಸಮಿತಿಯ ವರದಿಯನ್ನು ಆಧರಿಸಿ 1987ರ ಪೂರ್ವದಲ್ಲಿ ಪ್ರಾರಂಭಿಸಲ್ಪಟ್ಟ ರಾಜ್ಯದ ಎಲ್ಲಾ ಅನುದಾನ ರಹಿತ ಶಿಕ್ಷಣ ಮಹಾವಿದ್ಯಾಲಯಗಳನ್ನು ನಿಯಮಾನುಸಾರ ಅನುದಾನಕ್ಕೊಳಪಡಿಸಲಾಗಿದೆ. ಅದರಂತೆ

ಈ ಸಂಸ್ಥೆಯ ಸಿಬ್ಬಂದಿಯನ್ನೂ ಸಹ ಸ್ವಾಭಾವಿಕ ನ್ಯಾಯದ ಹಿನ್ನೆಲೆಯಲ್ಲಿ, ಹಾಗೂ ಮಾನ್ಯ ನ್ಯಾಯಾಲಯಗಳು ನೀಡುವ ಅಂತಿಮ ತೀರ್ಪುಗಳ ಆದೇಶಗಳಿಗೆ ಒಳಪಟ್ಟು ಹಾಗೂ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇದರ ನಿರ್ದೇಶಕರು ಮಾಡಿರುವ ಶಿಫಾರಸ್ಸನ್ನು ಆಧರಿಸಿ, ಸದರಿ ಸಂಸ್ಥೆಯ ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗಿದೆ.

ಶ್ರೀ ಎಂ.ಪಿ. ಕುಮಾರಸ್ವಾಮಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಅದು ಸಮರ್ಪಕವಾಗಿಲ್ಲ. ಅದರಲ್ಲಿ ಬೋಗಸ್ certificateಗಳನ್ನು ಸೃಷ್ಟಿ ಮಾಡಿ ಆ ಸಂಸ್ಥೆಯ ಹೆಸರಿನಲ್ಲಿ ಅನುದಾನ ಬಿಡುಗಡೆ ಮಾಡಿದ್ದಾರೆ. ಕಾಲೇಜು ಅಧ್ಯಕ್ಷರು ಮತ್ತು ಶಿಕ್ಷಣ ಸಂಸ್ಥೆಯ ನಿರ್ದೇಶಕರಾಗಿದ್ದುಕೊಂಡು ಅವರೇ ಆ ಕಾಲೇಜನ್ನು inspection ಮಾಡುವಂಥದ್ದು, ಅವರೇ certificate ಕೊಡುವಂಥದ್ದು ನಡೆದಿದೆ. ಹಾಜರಾತಿ ಪುಸ್ತಕದಲ್ಲಿ ಇಲ್ಲದೆ ಇದ್ದರೂ ಕೂಡ ಅವರಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಹಾಜರಾತಿಯಲ್ಲಿ ಇದ್ದರೂ ಕೂಡ ಅವರಿಗೆ ಅನುದಾನವನ್ನು ಬಿಡುಗಡೆ ಮಾಡಿಲ್ಲ. ಘನ ನ್ಯಾಯಾಲಯವು ಅವರು ಅಧ್ಯಕ್ಷರಲ್ಲ ಎಂದು ಹೇಳಿದರೂ ಕೂಡ ಅದನ್ನು ಒಪ್ಪಿಲ್ಲ. ಅವರಿಗೆ ಇಲಾಖೆಯವರು ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಸನ್ಮಾನ್ಯ ಸಚಿವರು ನಮ್ಮ ಜಿಲ್ಲೆಯವರು ಮತ್ತು ನಮ್ಮ ಊರಿನವರಾಗಿದ್ದಾರೆ. ಅವರು ಇದೇ ಮೊದಲನೇ ಬಾರಿಗೆ ಇಲ್ಲಿ ಉತ್ತರವನ್ನು ಕೊಡುತ್ತಿದ್ದಾರೆ. ನಾನು ಬಹಳ ಆಶಾಭಾವನೆಯನ್ನಿಟ್ಟುಕೊಂಡಿದ್ದೇನೆ. ನಮ್ಮ ತಾಲ್ಲೂಕಿನ ಮಾಜಿ ಶಾಸಕರಾದ ಶ್ರೀ ತಿಪ್ಪಯ್ಯನವರು ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದಾರೆ. ಈಗ ಅಲ್ಲಿ ಸಂಪೂರ್ಣವಾಗಿ ಅಕ್ರಮವಾಗಿ ಅಧಿಕಾರಿಗಳು ಸೇರಿಕೊಂಡಿದ್ದಾರೆ. ಅಲ್ಲಿ ಅಧಿಕಾರಿಗಳು ಆ ಸಂಸ್ಥೆಯನ್ನು ನಡೆಸುವುದಕ್ಕೆ ಸಾಧ್ಯವಿದೆಯಾ ? ಹಾಗಾಗಿ ದಯಮಾಡಿ ಆ ಬಗ್ಗೆ ಕ್ರಮ ಕೈಗೊಳ್ಳಬೇಕು. ಅಲ್ಲಿ ಅನೇಕ ಲೋಪಗಳು ಇದ್ದರೂ ಕೂಡ ಅಲ್ಲಿನ ಅಧಿಕಾರಿಗಳು ಮರೆಮಾಚಿ ಇಲ್ಲಿ ಉತ್ತರ ಕೊಟ್ಟಿದ್ದಾರೆ. ಆದರೆ ನ್ಯಾಯಾಲಯವು ಈ ಸಂಸ್ಥೆಯು ಸಂಪೂರ್ಣವಾಗಿ ಇವರದಲ್ಲ ಎಂದು ಹೇಳಿದೆ. ಸರ್ಕಾರದ ಯಾವ ಅಧಿಕಾರಿಯೂ ಸಂಸ್ಥೆಯನ್ನು ನಡೆಸುವ ಹಾಗಿಲ್ಲವೆಂದು ಹೇಳಿದೆ. ಇದು ಬೋಗಸ್ ಆಗಿದೆ ಎಂದು ಘನ ನ್ಯಾಯಾಲಯವು ಎತ್ತಿ ಹಿಡಿದಿದೆ. ದಯಮಾಡಿ ಈ ಬಗ್ಗೆ ಸೂಕ್ತ ಸಲಹೆಯನ್ನು ಕೊಡಬೇಕು. ಆ ಅನುದಾನವನ್ನು ಹಿಂದಕ್ಕೆ ಪಡೆದುಕೊಳ್ಳಬೇಕು. ಅದನ್ನು ಸ್ಟಾಪ್ ಮಾಡಬೇಕು. ಅಲ್ಲಿ ಯಾವ ಅಧಿಕಾರಿಯು ತಪ್ಪು ಮಾಡಿದ್ದಾರೆ, ಅವರ ಮೇಲೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಸಿ.ಟಿ. ರವಿ :– ಮಾನ್ಯ ಸಭಾಧ್ಯಕ್ಷರೆ, ನಾವು ಮ್ಯಾನೇಜ್‌ಮೆಂಟ್‌ಗೆ ಯಾವುದೇ ಅನುದಾನವನ್ನು ನಮ್ಮ ಇಲಾಖೆಯಿಂದ ಬಿಡುಗಡೆ ಮಾಡಿರುವುದಿಲ್ಲ. ಅಲ್ಲಿ ಕೆಲಸ ಮಾಡುತ್ತಿರುವಂತಹ ಉಪನ್ಯಾಸಕರನ್ನು ಅನುದಾನಕ್ಕೆ ಒಳಪಡಿಸಿದ್ದೇವೆ. ಅದರ ಲಾಭ ಯವುದೂ ಮ್ಯಾನೇಜ್‌ಮೆಂಟ್‌ಗೆ ಹೋಗುವುದಿಲ್ಲ. ಅಲ್ಲಿ ಕೆಲಸ ಮಾಡುತ್ತಿರುವಂತಹ ಉಪನ್ಯಾಸಕರ ವೇತನವು ಸರ್ಕಾರದ ಕಡೆಯಿಂದ ಸಿಗುತ್ತದೆಯೇ ಹೊರತು ಅವರಿಂದಲ್ಲ. ಮ್ಯಾನೇಜ್‌ಮೆಂಟಿನ ವಿವಾದ ಇದೆ. ಈಗಾಗಲೇ 1997ರಲ್ಲಿ ದಾವೆ ಸಂಖ್ಯೆ : OS:8054/1997 ಹೂಡಿದ್ದು ಅವರಿಂದಲ್ಲ, ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯ ಬೆಂಗಳೂರು ಇಲ್ಲಿ ಕಳೆದ 15 ವರ್ಷಗಳಿಂದ ವಿಚಾರಣೆಯಾಗುತ್ತಿದೆ. ಆ ವಿಚಾರಣೆಯ ಸಂದರ್ಭದಲ್ಲಿ ಯಾವುದೇ ತಡೆಯಾಜ್ಞೆ ಇರುವುದಿಲ್ಲ. ಈ ಒಂದು ವಿದ್ಯಾಸಂಸ್ಥೆಗೆ ಸಂಬಂಧಿಸಿದಂತೆ KSEF ವಿದ್ಯಾಸಂಸ್ಥೆಗೆ ಯಾವುದೇ ತಡೆಯಾಜ್ಞೆ ಇರುವುದಿಲ್ಲ. ಮಾನ್ಯ ನ್ಯಾಯಾಲಯವು ನೀಡಿರುವಂತಹ ತೀರ್ಪುಗಳಿಗೆ ಬದ್ಧರಾಗುವ ಷರತ್ತಿಗೊಳಪಟ್ಟು ಈ ಸಂಸ್ಥೆಯ ಸಿಬ್ಬಂದಿಗಳನ್ನು ವೇತನ ಅನುದಾನಕ್ಕೆ ಒಳಪಡಿಸಲಾಗಿದೆ. ಮುಂದೆ ಯಾವುದೇ ತೀರ್ಪು ಬಂದರೂ ಆ ತೀರ್ಪಿನ ಬದ್ಧತೆಗೆ ಒಳಪಟ್ಟು ವೇತನ ಅನುದಾನಕ್ಕೆ ಒಳಪಡಿಸಲಾಗಿದೆ. ಈ ವೇತನ ಅನುದಾನಕ್ಕೆ ಒಳಪಡಿಸಬೇಕಾದರೆ ಇದು 1972ನೇ ಇಸವಿಯಲ್ಲಿ ಪ್ರಾರಂಭವಾದಂತಹ ಒಂದು ಸಂಸ್ಥೆಯಾಗಿದೆ. ವೇತನ ಅನುದಾನಕ್ಕೆ ಒಳಪಡಿಸಬೇಕಾದರೆ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. DIET Principalರು ಮತ್ತು ಶಿಕ್ಷಣ ತಜ್ಞರ ತ್ರಿಸದಸ್ಯರ ಸಮಿತಿ ಶಿಫಾರಸ್ಸು ಮಾಡಿದಾಗ ಮಾತ್ರ ನಾವು ವೇತನ ಅನುದಾನಕ್ಕೆ ಒಳಪಡಿಸಬಹುದು. ಅವರು ಶಿಫಾರಸ್ಸು ಮಾಡಿರುವುದರಿಂದ ಅದಕ್ಕೆ ಅನುಗುಣವಾಗಿ ನಾವು ವೇತನ ಅನುದಾನಕ್ಕೆ ಸಿಬ್ಬಂದಿಗಳನ್ನು ಒಳಪಡಿಸಿದೆ. ಮುಂದೆ ಬರುವಂತಹ ನ್ಯಾಯಾಲಯದ ಯಾವುದೇ ತೀರ್ಪು ಬಂದರೂ ಕೂಡ ಅದಕ್ಕೆ ಬದ್ಧರಾಗುವಂತಹ ಮುಚ್ಚಳಿಕೆಯನ್ನು ಆ ಸಂಸ್ಥೆಯವರು ಬರೆದುಕೊಟ್ಟಿದ್ದಾರೆ.

ಶ್ರೀ ಎಂ.ಪಿ. ಕುಮಾರಸ್ವಾಮಿ :– ಯಾರು ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ, ಅವರೇ inspection ಮಾಡಿದ್ದಾರೆ. ಅವರೇ ಅಧ್ಯಕ್ಷರಾಗಿದ್ದಾರೆ ಹಾಗೂ ಸರ್ಕಾರಿ ನಿರ್ದೇಶಕರಾಗಿದ್ದಾರೆ. ಅವರು ಆ ತರಹ ಆಗುವುದಕ್ಕೆ ಇದೆಯಾ ? ನನ್ನ ಸರ್ಟಿಫಿಕೇಟನ್ನು ನಾನು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ ? ಸರ್ಕಾರದ ನಿರ್ದೇಶಕರು ಅವರೇ ಆಗಿದ್ದಾರೆ ಹಾಗೂ ಆ ಸಂಸ್ಥೆಯ ಅಧ್ಯಕ್ಷರು ಅವರೇ ಆಗಿದ್ದಾರೆ. ಈ ಬಗ್ಗೆ inspection ಮಾಡುವವರು ಅವರೇ ಆಗಿದ್ದಾರೆ. ಈ ಬಗ್ಗೆ ವರದಿಯನ್ನು ಕೊಡುವವರು ಅವರೇ ಆಗಿದ್ದಾರೆ. ಇದಕ್ಕೆ ಅವಕಾಶವಿದೆಯೇ ?

ಶ್ರೀ ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾಹಿತಿ ಇಲ್ಲ. ಈ ಬಗ್ಗೆ ಪರಿಶೀಲನೆ ಮಾಡಿ ಆ ರೀತಿಯಾಗಿ ಏನಾದರೂ ಲೋಪವಾಗಿದ್ದರೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ.

ಸಂಗೀತ, ನೃತ್ಯ ಮತ್ತು ತಾಳವಾದ್ಯ ಪರೀಕ್ಷೆ

43 (896) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸಂಗೀತ, ನೃತ್ಯ ಮತ್ತು ತಾಳವಾದ್ಯಗಳ ವಿಶೇಷ ಪರೀಕ್ಷೆಗಳನ್ನು ಯಾವಾಗ ನಡೆಸಲಾಗುವುದು ; ಪರೀಕ್ಷೆಗಳನ್ನು ನಡೆಸುವ ಜವಾಬ್ದಾರಿಯನ್ನು ಯಾರಿಗೆ ವಹಿಸಿಕೊಡಲಾಗಿದೆ ; (ವಿವರ ಒದಗಿಸುವುದು)

ಅ) ಭರತನಾಟ್ಯದ ಜೂನಿಯರ್, ಸೀನಿಯರ್ ಮತ್ತು ವಿದ್ವತ್ ಪೂರ್ವ ಪರೀಕ್ಷೆಗೆ ಸಂಬಂಧಪಟ್ಟ ಪುಸ್ತಕಗಳು ಮಾರುಕಟ್ಟೆಯಲ್ಲಿ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಪುನರ್ ಮುದ್ರಣಕ್ಕೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು ;

ಇ) ವಿದ್ವತ್ ಅಂತಿಮ ವರ್ಗದ ಪಠ್ಯ ಪುಸ್ತಕ ರಚನೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಸಂಗೀತ, ನೃತ್ಯ ಮತ್ತು ತಾಳವಾದ್ಯಗಳ ವಿಶೇಷ ಪರೀಕ್ಷೆಗಳನ್ನು 2012ನೇ ಸಾಲಿನ ನವೆಂಬರ್ ತಿಂಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಇಡಿ 299 ಎಸ್ಎಲ್‌ಬಿ 2011, ದಿನಾಂಕ : 07–07–2012 ರಂತೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ 2012ನೇ ಸಾಲಿನಲ್ಲಿ ಮಾತ್ರ ಪರೀಕ್ಷೆ ನಡೆಸಲು ಆದೇಶಿಸಲಾಗಿದೆ. ಹಾಗೂ 2013ನೇ ಸಾಲಿನಿಂದ ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ, ಮೈಸೂರು ಇವರು ಪರೀಕ್ಷೆ ನಡೆಸುವಂತೆ ಆದೇಶಿಸಲಾಗಿದೆ.

ಆ) ಗಮನಕ್ಕೆ ಬಂದಿದೆ. ಭರನಾಟ್ಯದ ಜೂನಿಯರ್, ಸೀನಿಯರ್ ಮತ್ತು ವಿದ್ವತ್ ಪೂರ್ವ ಪರೀಕ್ಷೆಗೆ ಸಂಬಂಧಪಟ್ಟ ಪಠ್ಯ ಪುಸ್ತಕಗಳ ಮುದ್ರಣಕ್ಕೆ ಸಂಬಂಧಿಸಿದಂತೆ,

ಮುದ್ರಣ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಸದ್ಯದಲ್ಲಿಯೇ ಮುದ್ರಣ ಮಾಡಿ ಈ ಪಠ್ಯ ಪುಸ್ತಕಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು.

ಇ) ಗಮನಕ್ಕೆ ಬಂದಿದೆ. ಈ ಪಠ್ಯ ಪುಸ್ತಕ ರಚನೆಯ ಬಗ್ಗೆ ಪಠ್ಯಪುಸ್ತಕ ರಚನಾ ಸಮಿತಿಯನ್ನು ನೇಮಿಸಲು ಕ್ರಮವಹಿಸಲಾಗುತ್ತಿದೆ. ಪಠ್ಯಪುಸ್ತಕ ರಚನಾ ಸಮಿತಿಯು ಪಠ್ಯಪುಸ್ತಕ ಕರಡನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿದ ಕೂಡಲೇ ಪರಿಶೀಲಿಸಿ, ಮುದ್ರಣದ ಬಗ್ಗೆ ಜರೂರಾಗಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ವಸಂತ ಬಂಗೇರ ಕೆ. :– ಮಾನ್ಯ ಅಧ್ಯಕ್ಷರೆ, ಭರತ ನಾಟ್ಯದ ಜೂನಿಯರ್, ಸೀನಿಯರ್, ಮತ್ತು ವಿದ್ವತ್ ಪೂರ್ವ ಪರೀಕ್ಷೆಗೆ ಸಂಬಂಧಪಟ್ಟ ಪುಸ್ತಕಗಳು ಎಷ್ಟು ಸಮಯದಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಾಗುವುದು ? ಇನ್ನೂ ಕೂಡ ಪಠ್ಯ ಪುಸ್ತಕದ ರಚನಾ ಸಮಿತಿಯನ್ನು ನೇಮಿಸಲಾಗಿಲ್ಲ. ಇವರು ಸಮಿತಿಯನ್ನು ನೇಮಕ ಮಾಡಿ ಪಠ್ಯ ಪುಸ್ತಕದ ಕರಡು ತಯಾರಿಸಿ ಎಷ್ಟು ಸಮಯದಲ್ಲಿ ಪುಸ್ತಕಗಳನ್ನು ಮುದ್ರಿಸಲಾಗುವುದು ಎಂದು ಕೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ 2009ರಲ್ಲಿ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು ನಾವು ಮೈಸೂರಿನಲ್ಲಿ ಪ್ರಾರಂಭ ಮಾಡಿದ್ದೇವೆ. ನಮ್ಮ ಇಲಾಖೆಯಲ್ಲಿ ಮೊದಲು ಈ ಸಂಗೀತಕ್ಕೆ ಸಂಬಂಧಪಟ್ಟಂತೆ ಎಲ್ಲಾ ಪರೀಕ್ಷೆಗಳನ್ನು ನಾವು ಪರೀಕ್ಷಾ ಮಂಡಳಿ ವತಿಯಿಂದ ನಡೆಸುತ್ತಿದ್ದೆವು. ಅದಕ್ಕೆ ಬೇಕಾಗಿರುವಂತಹ ಎಲ್ಲಾ ಪಠ್ಯ ಪುಸ್ತಕ ರಚನೆ, ಮುದ್ರಣ, ವಿತರಣೆ ಮತ್ತು ಪರೀಕ್ಷೆಗಳನ್ನು ಮತ್ತು ತರಗತಿಗಳನ್ನು ನಡೆಸುವುದು ಇತ್ಯಾದಿ ಎಲ್ಲವನ್ನೂ ಮೇಲು ಉಸ್ತುವಾರಿಯನ್ನು ನಮ್ಮ ಇಲಾಖಾ ವತಿಯಿಂದ ನೋಡುತ್ತಿದ್ದೆವು. ಈ ವಿಶ್ವವಿದ್ಯಾಲಯ ಪ್ರಾರಂಭ ಆದ ನಂತರದಲ್ಲಿ ಡಿಸೆಂಬರ್, ಜನವರಿ ಒಳಗಡೆ ಎಲ್ಲವೂ ನಮ್ಮ ಇಲಾಖೆಯಿಂದ ಸಂಗೀತ ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಡಬೇಕೆನ್ನುವಂತಹ ಪ್ರಸ್ತಾವನೆಯನ್ನು ಅಲ್ಲಿಯ ಕುಲಪತಿಗಳು ನಮಗೆ ಕಳುಹಿಸಿದ್ದರು. ಅದನ್ನು ಕಳುಹಿಸಿದ ನಂತರದಲ್ಲಿ ನಾವು ಫೆಬ್ರವರಿ ಮೊದಲನೆ ವಾರದಲ್ಲಿ ಅವರಿಗೆ ಎಲ್ಲವನ್ನೂ ಸಂಗೀತ ವಿಶ್ವವಿದ್ಯಾನಿಯಲಯಕ್ಕೆ ಹಸ್ತಾಂತರ ಮಾಡಿದ್ದೇವೆ. ಮೇ, ಜೂನ್‌ನಲ್ಲಿ ಪರೀಕ್ಷೆಗಳು ಆಗಬೇಕಾಗಿತ್ತು. ಆದರೆ ಪರೀಕ್ಷೆಯನ್ನು ಮಾಡುವುದಕ್ಕೆ ಅಲ್ಲಿಯ ವ್ಯವಸ್ಥೆಗಳು ಸಮರ್ಪಕವಾಗಿಲ್ಲವೆನ್ನುವ ಕಾರಣದಿಂದ ನಾವು ಪರೀಕ್ಷೆಯನ್ನು ನಡೆಸುವುದಕ್ಕೆ ಮುಂದಾಗಲಿಲ್ಲ.

ಇದು ನಮ್ಮ ಗಮನಕ್ಕೆ ಬಂದ ನಂತರ ಜೂನ್‌ನಲ್ಲಿ ನಾವು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು, ಸಂಬಂಧಪಟ್ಟಂತಹ ಅಧಿಕಾರಿಗಳು, ನಾವೆಲ್ಲರೂ ಕುಳಿತುಕೊಂಡು ಚರ್ಚೆಯನ್ನು ಮಾಡಿದ್ದೇವೆ. ಈಗ ಸಂಗೀತ ವಿಶ್ವವಿದ್ಯಾಲಯದ ಜೊತೆಯಲ್ಲಿ ಅದನ್ನು ಮಾಡುವುದಕ್ಕಾಗುವುದಿಲ್ಲವೆನ್ನುವಂತಹದ್ದನ್ನು ಮನದಟ್ಟು ಮಾಡಿಕೊಂಡು ಅವರ ಜೊತೆಯಲ್ಲಿ ಚರ್ಚೆ ಮಾಡಿಕೊಂಡು ವಾಪಸ್ಸು ನಮ್ಮ ಇಲಾಖೆಗೆ ತೆಗೆದುಕೊಂಡಿದ್ದೇವೆ. ಈ ಗೊಂದಲದಿಂದ ಈಗ ಪರೀಕ್ಷೆಗಳು ವಿಳಂಬವಾಗಿದೆ. ಈ ಪರೀಕ್ಷೆಗಳನ್ನು ಈಗ ನಾವು ನವೆಂಬರ್‌ನಲ್ಲಿ ಮಾಡುವ ಬಗ್ಗೆ ವೇಳಾಪಟ್ಟಿಯನ್ನು ಕೊಟ್ಟಿದ್ದೇವೆ, ಅದನ್ನು ಮಾಡುತ್ತೇವೆ. ಈ ವರ್ಷಕ್ಕೆ ಯಾವುದೇ ತೊಂದರೆ ಇರುವುದಿಲ್ಲ. ಇಲ್ಲಿ ಉನ್ನತ ಶಿಕ್ಷಣ ಸಚಿವರು ಇದ್ದಾರೆ, ಅವರ ಇಲಾಖೆಯ ಕಾರ್ಯದರ್ಶಿಯವರೂ ಸಹ ಇದ್ದಾರೆ, ಅವರಿಗೆ ಈಗಾಗಲೇ ಹೇಳಿದ್ದೇನೆ. ಮುಂದಿನ ವರ್ಷದಿಂದ ಪುಸ್ತಕ ಮುದ್ರಣವನ್ನು ಒಳಗೊಂಡಂತೆ ಪರೀಕ್ಷೆಗಳನ್ನು ನಡೆಸುವುದು ಮತ್ತು ಈ ಎಲ್ಲಾ ಸಂಗೀತ ತರಗತಿಗಳನ್ನು ನಡೆಸುವುದು ಈ ವಿಶ್ವವಿದ್ಯಾಲಯದ ಜವಾಬ್ದಾರಿಯಾಗಿದೆ. ನಾವು ತಾತ್ಕಾಲಿಕವಾಗಿ ಅವರಿಗೆ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಂಡು ಈ ಮಟ್ಟದಲ್ಲಿ ನಡೆಸುತ್ತಿದ್ದೇವೆ. ಇದರಲ್ಲಿ ಅವರದೇ ಜವಾಬ್ದಾರಿಯಾಗಿತ್ತು. ಮೊದಲು ನಾವು ನಡೆಸುತ್ತಿದ್ದೆವು ಎನ್ನುವಂತಹ ಕಾರಣಕ್ಕಾಗಿ ಈ ವರ್ಷ ನಾವು ನಡೆಸಿಕೊಡುತ್ತೇವೆ. ಈಗ ವಿಳಂಬವಾಗಿದೆ, ಆದರೂ ನಡೆಸಿಕೊಡುತ್ತೇವೆ. ಆದರೆ ಮುಂದಿನ ವರ್ಷದಿಂದ ಸಂಗೀತ ವಿಶ್ವವಿದ್ಯಾಲಯವು ಇದನ್ನು ಮಾಡಬೇಕೆಂದು ಹೇಳಿದೆ. ಹಾಗಾಗಿ ಪಠ್ಯಪುಸ್ತಕ ರಚನೆಯ ವಿಷಯ ಇರಬಹುದು, ಉಳಿದ ಎಲ್ಲಾ ವಿಷಯಗಳನ್ನು ಸಹ ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣ ಇಲಾಖೆಯು ಅದನ್ನು ನೋಡಿಕೊಳ್ಳುತ್ತದೆ. ಅಲ್ಲಿ ಸಂಗೀತ ವಿಶ್ವವಿದ್ಯಾಲಯವು ನೋಡಿಕೊಳ್ಳುತ್ತದೆ. ನಮ್ಮ ಇಲಾಖೆಯಿಂದ ಏನೇನು ಸಹಕಾರ ಬೇಕೋ ಅದನ್ನು ಕೊಡುತ್ತೇವೆನ್ನುವಂತಹ ಮಾತನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ.

ಕರಾವಳಿಯಲ್ಲಿ ಸಮುದ್ರ ಕೊರೆತ

44 (906) ಶ್ರೀ ಖಾದರ್ ಯು.ಟಿ. (ಮಂಗಳೂರು) :- ಮಾನ್ಯ ಮುಜರಾಯಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದ ಕರಾವಳಿಯಲ್ಲಿ ಸಮುದ್ರದ ಕೊರೆತ ಸಮಸ್ಯೆಗೆ ಎ.ಡಿ.ಬಿ.ಯ ಆರ್ಥಿಕ

ಸಹಾಯ ಪಡೆದಿದ್ದರೂ ಇದುವರೆವಿಗೂ ಟಿ.ಎ.ಸಿ. ಅನುಮೋದನೆ ದೊರಕದಿರಲು ಕಾರಣಗಳೇನು ; (ವಿವರ ನೀಡುವುದು)

ಅ) ಕೇಂದ್ರಿಯ ಜಲ ಆಯೋಗದಲ್ಲಿ ಅನುಮೋದನೆ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ಯೋಜನೆಗೆ ಅನುಮೋದನೆ ಪಡೆದುಕೊಳ್ಳುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):-

ಅ) ಕೇಂದ್ರಿಯ ಜಲ ಆಯೋಗದಿಂದ ಟಿ.ಎ.ಸಿ. ಅನುಮೋದನೆಯನ್ನು ದಿನಾಂಕ : 20ನೇ ಜುಲೈ 2011ರಂದು ಪಡೆಯಲಾಗಿದೆ.

ಆ) ಕೇಂದ್ರಿಯ ಜಲ ಆಯೋಗದಲ್ಲಿ ಯಾವುದೇ ಪ್ರಸ್ತಾವನೆ ಅನುಮೋದನೆಗೆ ಬಾಕಿಯಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದ ಕರಾವಳಿಯಲ್ಲಿ ತೀವ್ರ ಸಮುದ್ರ ಕೊರೆತ ಸಮಸ್ಯೆಗೆ ಶಾಶ್ವತ ಪರಿಹಾರ ಕೈಗೊಳ್ಳುವ ಸಲುವಾಗಿ ಏಷ್ಯಾ ಅಭಿವೃದ್ಧಿ ಬ್ಯಾಂಕಿನಿಂದ ಆರ್ಥಿಕ ಸಹಾಯ ಪಡೆದಿದ್ದು, ಈ ನೆರವಿನ ಯೋಜನೆ ಅಡಿಯಲ್ಲಿ ಸುಸ್ಥಿರ ಕರಾವಳಿ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆಯನ್ನು 3 ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸುತ್ತಿದ್ದು ಇದರ ಒಟ್ಟು ಯೋಜನಾ ವೆಚ್ಚವು ರೂ. 911.00 ಕೋಟಿಗಳು.

ಮಂಗಳೂರಿನ ಉಳ್ಳಾಲದಲ್ಲಿ ರೂ. 223.32 ಕೋಟಿ ವೆಚ್ಚದಲ್ಲಿ ಮೊದಲನೇ ಹಂತದ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ. ಕೇಂದ್ರ ಜಲ ಸಂಪನ್ಮೂಲ ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯು ದಿನಾಂಕ : 20-07-2011 ರಂದು ಉಳ್ಳಾಲದಲ್ಲಿ ಕೈಗೊಳ್ಳಲಾಗುತ್ತಿರುವ ಕಡಲ ಸಂರಕ್ಷಣೆ ಯೋಜನೆಗೆ ಒಪ್ಪಿಗೆಯನ್ನು ನೀಡಿರುತ್ತದೆ.

ದಿನಾಂಕ : 17-08-2011ರಂದು ಎಡಿಬಿ ಯೊಂದಿಗೆ ಸಾಲ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ. M/s. Euro Consult Mott Macdonald ಇವರನ್ನು ಪಿಎಂಡಿಸಿಕೆ ತಾಂತ್ರಿಕ ಸಲಹೆಗಾರರನ್ನಾಗಿ ನೇಮಿಸಲಾಗಿದೆ.

ಒಟ್ಟಾರೆ ಉಳ್ಳಾಲ ತೀರದಲ್ಲಿ 4 ಇನ್‌ಶೋರ್ಸ್ ಬರ್ಮ್ಸ್ ನಿರ್ಮಿಸಲು ಟೆಂಡರ್ ಅನ್ನು ಕರೆಯಲಾಗಿದ್ದು, ಟೆಂಡರ್ ಪೂರ್ವಭಾವಿ ಸಭೆ ನಡೆಸಲಾಗಿದೆ. ದಿನಾಂಕ : 23-07-2012ರಂದು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವನ್ನು ನಿಗಧಿಪಡಿಸಲಾಗಿದೆ.

CWPRS, Pune ಇವರಿಗೆ 2 ಆಫ್‌ಶೋರ್ಸ್ ರೀಫ್ಸ್ ನಿರ್ಮಿಸಲು ಪರ್ಯಾಯ ತಂತ್ರಜ್ಞಾನ ಕುರಿತಂತೆ ತಾಂತ್ರಿಕ ಸಲಹೆಯನ್ನು ನೀಡಲು ಕೋರಲಾಗಿದೆ. ವರದಿ ಬಂದ ನಂತರ ರೀಫುಗಳನ್ನು ಹಾಗೂ ಬ್ರೇಕ್‌ವಾಟರ್ ನಿರ್ಮಾಣದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಮುಂದಿನ 2ನೇಯ ಮತ್ತು 3ನೇಯ ಹಂತದ ಕರಾವಳಿ ಸಂರಕ್ಷಣೆ ಮತ್ತು ನಿರ್ವಹಣೆ ಯೋಜನೆಯನ್ನು ಕೈಗೊಳ್ಳಲು ಈಗಾಗಲೇ ಡಿಸೆಂಬರ್ 20 2011ರಂದು ಪಿ.ಎಂ.ಡಿ.ಸಿ.ಕೆ. ನೇಮಿಸಿರುವ ಸಲಹೆಗಾರರು ಸ್ಥಳ ಪರಿಶೀಲನೆ ಮಾಡಿ ವರದಿ ನೀಡಲಿದ್ದು. ಅವರ ಸಲಹೆಯಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಯು.ಟಿ.ಖಾದರ್ :- ಮಾನ್ಯ ಸಭಾಧ್ಯಕ್ಷರೆ, ಸಮುದ್ರದ ಕೊರತೆಗೆ ಸಂಬಂಧಪಟ್ಟಂತೆ ಟಿಎಸಿ ಅನುಮೋದನೆ ಸಿಕ್ಕಿದೆಯಾ ಎಂದು ಕೇಳಿದ್ದಕ್ಕೆ ಅವರು ಸಿಕ್ಕಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಇವತ್ತು ಯಾವುದಾದರೂ ಕೇಂದ್ರ ಸರ್ಕಾರದಲ್ಲಿ ಬಾಕಿ ಇರುವಂತಹ ಪ್ರಸ್ತಾವನೆ ಇರುವುದಿಲ್ಲ. ಅದು ಬಾಕಿ ಇಲ್ಲವೆಂದು ಹೇಳಿದ್ದಾರೆ. Next ಏನಾಗಿದೆ ಯಾವಾಗ ಈ ಒಂದು ಟೆಂಡರ್ ಪ್ರಕ್ರಿಯೆ ಚಾಲನೆಯಾಗಿ ಮುಂದೆ ಬರುತ್ತದೆ. ಟೆಂಡರ್ ಪ್ರಕ್ರಿಯೆ ಚಾಲನೆಯಾಗಿದ್ದರೆ ಇದಕ್ಕೆ ಎಷ್ಟು ಜನರು ಟೆಂಡರ್ ಹಾಕಿದ್ದಾರೆ ? ಯಾರು ಈ ಕೆಲಸವನ್ನು ಪ್ರಾರಂಭ ಮಾಡುತ್ತಾರೆ ? ಯಾವಾಗ ಪ್ರಾರಂಭ ಮಾಡಬಹುದು ? ಅದರ ಜೊತೆಯಲ್ಲಿ ಎಡಿಬಿ ಯೋಜನೆಯನ್ನು ನಾವು ನೋಡಿದ್ದೇವೆ. ಬೇರೆ ಬೇರೆ ನಮ್ಮ ಕ್ಷೇತ್ರ ಮತ್ತು ನಗರಪ್ರದೇಶಕ್ಕೆ ಬಂದಿದೆ. ಈ ಎಡಿಬಿ ಇಂಜಿನಿಯರ್‌ರವರು ಏನು ಮಾಡುತ್ತಾರೆಂದರೆ, ಬಹುಶಃ ಜನಪ್ರತಿನಿಧಿಗಳಿಗೆ ಈ ಬಗ್ಗೆ ಅದು ಯಾವ ರೀತಿಯಾಗಿ ಪ್ಲಾನ್ ಇದೆ, ಏನು ಇದೆ ಯಾರಿಗೂ ಹೇಳುವುದಿಲ್ಲ. ಬಹಶಃ ಆ ಒಂದು ವಿಚಾರ ಇದರಲ್ಲಿ ಆಗಬಾರದು. ತಾವು ಸಚಿವರು ಇವತ್ತು ಉತ್ತರವನ್ನು ಕೊಡಬಹುದು. ಈ ಒಂದು ಸಭೆಯನ್ನು ತಾವು ತಕ್ಷಣ ಕರೆಯಬೇಕು. ಇದು ಯಾವ ಹಂತದಲ್ಲಿದೆ, ಹೇಗಿದೆ ಏನು ಕಾರ್ಯಕ್ರಮ ನಡೆಯುತ್ತಿದೆ ಎಂದು ಹೇಳಿ ಆ ಒಂದು ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿರುವಂತಹ ಅವಕಾಶದಲ್ಲಿ ನನ್ನ ಇನ್ನೊಂದು ಬೇಡಿಕೆಯನ್ನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ. ಮುಂದಿನ

ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಾಗ ಅದರ ಪರಿಹಾರ ಶಾಶ್ವತವಾಗಿ ಆಗಬೇಕೇ ಹೊರತು ಬೇರೆ ಸಮಸ್ಯೆ ಹುಟ್ಟುಹಾಕಬಾರದು. ಇವತ್ತು ಮಂಗಳೂರಿನ ಬಂದರಿನಲ್ಲಿ backwater ಆದ ಕಾರಣ ನಮ್ಮಲ್ಲಿ ಕಡಲ ಕೊರೆತ ಆಗುತ್ತಿದೆ ಎಂದು ಹೇಳಿದ್ದಾರೆ. ಬಹುಶಃ ಉಳ್ಳಾಲ ಪ್ರದೇಶದ ಈ ಒಂದು ಶಾಶ್ವತ ಯೋಜನೆಯು ಬಂದಂತಹ ಸಂದರ್ಭದಲ್ಲಿ ಪಕ್ಕದ ನಮ್ಮ ಸೋಮೇಶ್ವರ, ತಳಪಾಡಿಯಲ್ಲಿ ಕೊರೆತ ಮತ್ತೆ start ಆಗಬಾರದು. ಇಲ್ಲಿ ಕೆಲಸ ಮಾಡುವಂತಹ ಇಂಜಿನಿಯರ್‌ಗಳು ನೋಡುವಂತಹ ಆದೇಶವನ್ನು ತಾವು ಇವತ್ತು ಕೊಡಬೇಕಾಗುತ್ತದೆ. ಏಕೆಂದರೆ ಈ ಸಲ ಪ್ರಪ್ರಥಮ ಬಾರಿಗೆ ಸೋಮೇಶ್ವರ ಮತ್ತು ತಳಪಾಡಿ ಪ್ರದೇಶದಲ್ಲಿಯೂ ಕೂಡ ಕಡಲ ಕೊರೆತವು ಉಂಟಾಗಿ ಅಲ್ಲಿ ಬಹಳಷ್ಟು ಮನೆಗಳಿಗೆ ಇನ್ನಿತರ ಜಾನುವಾರುಗಳಿಗೆ ತೊಂದರೆಯಾಗುವಂತಹ ಕೆಲಸವು ಆಗಿದೆ. ಈ ಎಲ್ಲಾ ವಿಷಯದ ಬಗ್ಗೆ ಚರ್ಚೆ ಮಾಡಿಕೊಂಡು ಒಂದು ಸಂರಕ್ಷಣಾ ಕಾಮಗಾರಿಯು ಶಾಶ್ವತವಾಗಿ ಆಗಬೇಕೆಂದು, ಈ ಬಗ್ಗೆ ಶಾಶ್ವತವಾದಂತಹ ಯೋಜನೆಯು ಆಗಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ :- ಮಾನ್ಯ ಸಭಾಧ್ಯಕ್ಷರೆ, ಕರಾವಳಿ ಪ್ರದೇಶದ ಜಿಲ್ಲೆಗಳಲ್ಲಿ ಕಡಲ ಕೊರೆತ ಸಮಸ್ಯೆಯು ಅತ್ಯಂತ ದೊಡ್ಡ ಸಮಸ್ಯೆಯಾಗಿದೆ. ಮಾನ್ಯ ಸದಸ್ಯರಾದ ಯು.ಟಿ. ಖಾದರ್‌ರವರು ಈ ಬಗ್ಗೆ ತುಂಬಾ ಅಧ್ಯಯನ ಮಾಡಿದ್ದಾರೆ ಮತ್ತು ಸಮಸ್ಯೆಗಳನ್ನು ಅವರು ಆಳವಾಗಿ ತಿಳಿದುಕೊಂಡಿದ್ದಾರೆ. ಅವರು ಅನುಭವದ ವಿಚಾರದಲ್ಲಿ ಬಹಳ ಸೂಕ್ಷ್ಮವಾಗಿ ಪ್ರಶ್ನೆಯನ್ನು ಕೇಳಿದ್ದಾರೆಂದು ನನಗನಿಸಿದೆ. ರಾಜ್ಯದ ಕರಾವಳಿಯಲ್ಲಿ ಸಮುದ್ರದ ಕೊರೆತದ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ಸಲುವಾಗಿ ಏಷ್ಯಾ ಅಭಿವೃದ್ಧಿ ಬ್ಯಾಂಕಿನಿಂದ ಆರ್ಥಿಕ ಸಹಾಯವನ್ನು ಪಡೆದಿದ್ದು ಈ ನೆರವಿನ ಯೋಜನೆಯಡಿಯಲ್ಲಿ ಸುತ್ತಲಿನ ಕರಾವಳಿ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆಯನ್ನು ಮೂರು ಹಂತದಲ್ಲಿ ತೆಗೆದುಕೊಳ್ಳುವುದಕ್ಕೆ ಉದ್ದೇಶಿಸಲಾಗಿದ್ದು ಇದರ ಒಟ್ಟು ಯೋಜನಾ ವೆಚ್ಚ 911 ಕೋಟಿ ರೂಪಾಯಿಗಳಾಗಿರುತ್ತದೆ. ಮಂಗಳೂರಿನ ಉಳ್ಳಾಲದಲ್ಲಿ 223.32 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೊದಲನೆಯ ಹಂತದ ಯೋಜನೆಯನ್ನು ಕೈಗೊಳ್ಳಲಾಗುತ್ತದೆ. ಕೇಂದ್ರದ ಜಲಸಂಪನ್ಮೂಲ ಇಲಾಖೆಯ ತಾಂತ್ರಿಕ ಸಲಹಾ ಸಮಿತಿ 20-07-2011 ರಂದು ಉಳ್ಳಾಲದಲ್ಲಿ ಕೈಗೊಳ್ಳಲಾದ ಕಡಲ ಕೊರೆತ ಸಂರಕ್ಷಣೆಗೆ ಒಪ್ಪಿಗೆಯನ್ನು ನೀಡಿದೆ. ದಿನಾಂಕ : 17-08-2011ರಂದು ಎಡಿಬಿಯೊಂದಿಗೆ ಸಾಲಸೌಲಭ್ಯ ಒಡಂಬಡಿಕೆ ಪತ್ರಕ್ಕೆ ಸಹಿಯನ್ನು ಹಾಕಲಾಗಿದೆ. ಒಟ್ಟಾರೆ ಉಳ್ಳಾಲ ತೀರದಲ್ಲಿ ನಾಲ್ಕು

Incurious berths ನಿರ್ಮಿಸಲು ಟೆಂಡರ್ ಅನ್ನು ಕರೆಯಲಾಗಿತ್ತು. ಟೆಂಡರ್ ಪೂರ್ವಭಾವಿ ಸಭೆಯನ್ನು ನಡೆಸಲಾಗಿದೆ. ದಿನಾಂಕ : 23-07-2012 ರಂದು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗಿದೆ. ಎರಡು Incurious berths ನಿರ್ಮಿಸಲು ಪರ್ಯಾಯ ತಂತ್ರಜ್ಞಾನ ಕುರಿತಂತೆ ತಾಂತ್ರಿಕ ಸಲಹೆಯನ್ನು ನೀಡಲು ಕೋರಲಾಗಿದೆ. ವರದಿ ಬಂದ ನಂತರ reap ಗಳನ್ನು ಹಾಕಲು back water ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುವುದು. ಮುಂದಿನ ಎರಡನೇ ಮತ್ತು ಮೂರನೇ ಹಂತದ ಕರಾವಳಿ ಸಂರಕ್ಷಣೆ ಮತ್ತು ನಿರ್ವಹಣೆ ಯೋಜನೆಯನ್ನು ಕೈಗೊಳ್ಳಲು ಈಗಾಗಲೇ 20-12-2011 ರಂದು PMDCK ನೇಮಿಸಿರುವ ಸಲಹೆಗಾರರು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ನೀಡಿದ್ದು ಅದರ ಸಲಹೆಯಂತೆ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ಈಗಾಗಲೇ ಮಾನ್ಯ ಶಾಸಕರು ಕೆಲವು ಸಂದೇಹಗಳನ್ನು ವ್ಯಕ್ತಪಡಿಸಿದ್ದಾರೆ. ADB ಯೋಜನೆಯಲ್ಲಿ ಆಗುತ್ತಿರುವಂಥ ಕಾಮಗಾರಿಗಳಿಗೆ ಜನಪ್ರತಿನಿಧಿಗಳನ್ನು ಕಣ್ಗಾವಲು ಮಾಡಲಿಕ್ಕೆ ಸಮಸ್ಯೆ ಇದೆ ಎಂದು ಉಲ್ಲೇಖ ಮಾಡಿದ್ದಾರೆ. ಈ ಕಾಮಗಾರಿಯಲ್ಲಿ ವಿಳಂಬವಾಗಬಾರದು ಎಂಬ ವಿಚಾರವನ್ನು ಉಲ್ಲೇಖಿಸಿದ್ದಾರೆ. ಒಂದು ಕಡೆ ನಾವು back water ನಿರ್ಮಾಣ ಮಾಡುವುದರಿಂದ ಮತ್ತೊಂದು ಕಡೆಯಿಂದ ಸಮುದ್ರ ಕೊರೆತ ಆಗಬಹುದು ಎನ್ನುವಂಥ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಅಧಿಕಾರಿಗಳನ್ನು ತಕ್ಷಣ ಸಭೆ ಕರೆಯಬೇಕೆನ್ನುವಂಥ ವಿಷಯಗಳನ್ನೂ ಸಹ ಉಲ್ಲೇಖ ಮಾಡಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು, ಅಲ್ಲಿರುವಂಥ ಎಲ್ಲಾ ಶಾಸಕರನ್ನು ಕರೆದು ಸಮಗ್ರವಾಗಿ ಚರ್ಚೆ ಮಾಡಿ ಪಾರದರ್ಶಕವಾದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಿಕ್ಕೆ ಆದೇಶ ಮಾಡುತ್ತೇನೆ ಮತ್ತು ಅದರಂತೆ ನಡೆದುಕೊಳ್ಳುತ್ತೇನೆ.

ಶ್ರೀ ಯು.ಟಿ. ಖಾದರ್ :- ಶಾಶ್ವತವಾಗಿ ಆ ಕೆಲಸ ಮಾಡಬಹುದು. ಬಹುಶಃ ಸಂರಕ್ಷಣಾ ಕಾಮಗಾರಿಗೆ ನಾವು ಪ್ರತಿ ವರ್ಷ ಕೂಡ urgent ಆಗಿ ಅಲ್ಲಿನ calamity ಇನ್ನಿತರ ಕೆಲಸವನ್ನು ಮಾಡುತ್ತಿದ್ದೇವೆ. ಬಹಶಃ ಈ ಕೆಲಸ ಅಲ್ಲಿ ಇನ್ನೂ ಕೂಡ ಪ್ರಾರಂಭವಾಗಿಲ್ಲ. ಮಾನ್ಯ ಸಚಿವರು ಈ ಕೆಲಸವನ್ನು ತಕ್ಷಣ Port ಇಲಾಖೆ ಮೂಲಕ ಇವತ್ತು ಸಂರಕ್ಷಣಾ ಕಾಮಗಾರಿ ಶಾಶ್ವತವಾಗಿ ನಮ್ಮ ಇಲಾಖೆ ಮಾಡಲಿಕ್ಕಾಗುವುದಿಲ್ಲ. At least ಸಂರಕ್ಷಣಾ ಕಾಮಗಾರಿಗೆ ನೀವು ಆದೇಶ ನೀಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇವೆ.

ಶ್ರೀ ಲಕ್ಷ್ಮೀನಾರಾಯಣ (ಬೈಂದೂರು) :- ಕರಾವಳಿಯ ದೊಡ್ಡ ದೊಡ್ಡ ಪ್ರಾಜೆಕ್ಟ್ ಬರಲಿಕ್ಕೆ ಬಹಳಷ್ಟು ಸಮಯ ತೆಗೆದುಕೊಳ್ಳಬಹುದು. ಅಷ್ಟರೊಳಗೆ ಪ್ರತಿ ವರ್ಷ ತುರ್ತಾಗಿ ಕೆಲವು ಕಡೆ ಕಡಲ ಕೊರೆತವನ್ನು ನಿಭಾಯಿಸಬೇಕಾಗುತ್ತದೆ. ಅದಕ್ಕಾಗಿ ಸಾಕಷ್ಟು ಹಣವನ್ನು ಸರ್ಕಾರ ಕೊಡಬೇಕಾಗುತ್ತದೆ. ನಾವು ಹೋಗಿ ಡಿ.ಸಿ. ಕಛೇರಿಯಲ್ಲಿ ಕೇಳಿದರೆ ಹಣವಿಲ್ಲ, ಹಣ ಬರಲಿಲ್ಲವೆಂದು ಹೇಳುತ್ತಾರೆ. ಹೋದ ವರ್ಷ ಕೂಡ ಕೆಲವು ಕಾಮಗಾರಿಗಳನ್ನು ತೆಗೆದುಕೊಂಡಿದ್ದರು. ಅದಕ್ಕೆ payment ಆಗಿಲ್ಲ. ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಹಾಗೂ ಸರ್ಕಾರದವರು ಸ್ಪಂದಿಸಬೇಕು ನನ್ನ ಬೈಂದೂರು ಕ್ಷೇತ್ರದಲ್ಲಿ ಇಂಥ ಕೊರೆತ ಶುರವಾಗಿದೆ. ಅದನ್ನು ಕೂಡಲೆ ಸರಿಪಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಡಿ. ನಾಯ್ಕ್ (ಭಟ್ಕಳ): ನಮ್ಮ ಭಟ್ಕಳ ಕ್ಷೇತ್ರದಲ್ಲಿ ಕೂಡ ಈ ಬಾರಿ ಕಡಲ ಕೊರೆತ ಜಾಸ್ತಿಯಾಗಿದೆ. ನಾನು ಮಾನ್ಯ ಸಚಿವರ ಮೂಲಕ ಮನವಿ ಮಾಡುವುದೇನೆಂದರೆ ಹಲವಾರು ವರ್ಷಗಳಿಂದ ಕಡಲ ಕೊರೆತ ಕಾಮಗಾರಿ ಸಂಪೂರ್ಣವಾಗಿ ಸ್ಥಗಿತವಾಗಿದೆ. ಈಗಾಗಲೇ ಖಾದರ್‌ರವರು ಹೇಳಿದಂತೆ at least ಆ ಕೊರೆತವಾಗುವ ಪ್ರದೇಶಕ್ಕೆ ಶಾಶ್ವತವಾಗಿ ತಡೆಗೋಡೆಯನ್ನು ಕಟ್ಟುವುದು ಬೇರೆ ವಿಚಾರ. ಈಗೇನು ಕೊರೆತವಾಗುತ್ತಿದೆ ಅದನ್ನಾದರೂ ಕಟ್ಟಲಿಕ್ಕೆ ಹಂಗಾಮಿಯಾಗಿ ಗೋಡೆ ಕಟ್ಟುವ ಕೆಲಸವಾಗಬೇಕೆಂದು ತಮ್ಮ ಮೂಲಕ ಮನವಿ ಸಲ್ಲಿಸುತ್ತೇನೆ.

ಶ್ರೀ ದಿನಕರ್ ಕೇಶವ ಶೆಟ್ಟಿ (ಕುಮಟಾ): ನಮ್ಮ ಕ್ಷೇತ್ರ ಕುಮಟಾದಲ್ಲಿ ಸಹ ಈ ಸಮಸ್ಯೆ ಇದೆ. ಅದರ ಬಗ್ಗೆ ಸಚಿವರ ಗಮನ ಸೆಳೆಯಬೇಕಾಗಿದೆ.

ಅಧ್ಯಕ್ಷರು: ಎಲ್ಲರೂ ಅದನ್ನೇ ಕೇಳುತ್ತಿರುವುದು. ಈಗ ಸಚಿವರು ಉತ್ತರ ಕೊಡಿ.

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ: ಮಾನ್ಯ ಲಕ್ಷ್ಮೀನಾರಾಯಣರವರು, ಜೆ.ಡಿ. ನಾಯ್ಕ್ ಸಾಹಿತಿ ಕರಾವಳಿ ಪ್ರದೇಶದಲ್ಲಿರುವಂಥ ಎಲ್ಲಾ ಶಾಸಕರು ಹೇಳಿರುವಂಥ ಎಲ್ಲಾ ಭಾವನೆಗಳು ಅರ್ಥವಾಗಿದೆ. ಈಗಾಗಲೇ ತುರ್ತಾಗಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ನಿರ್ದೇಶನ ನೀಡಿದ್ದೇವೆ. ನಿಯಮಗಳಿಗೆ ಸಂಬಂಧಪಟ್ಟ ವಿಚಾರವಾಗಿ ಒಂದಿಷ್ಟು ಗೊಂದಲವಾಗಿ ಜಿಲ್ಲಾಧಿಕಾರಿಗಳು ಹಣ ಬಿಡುಗಡೆ ಮಾಡಲಿಕ್ಕೆ ಕೆಲವು ತಕರಾರು ತೆಗೆದಿರುವುದನ್ನು ನಾನು ನೋಡಿದ್ದೇನೆ. ಈಗಾಗಲೇ ಮೂರು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ವಿಶೇಷ ಅನುದಾನವನ್ನು ಬಿಡುಗಡೆ ಮಾಡಬೇಕೆಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಕೆಲಸಗಳನ್ನು ಮಾಡುತ್ತೇನೆ.

ಅಧ್ಯಕ್ಷರು: ಶ್ರೀಕಾಂತ್ ಕುಲಕರ್ಣಿಯವರು ಪ್ರಶ್ನೆ ಕೇಳಿ

ನಾಟಿ ವೈದ್ಯರ ಕಷ್ಟ ಸುಖಗಳ ಕುರಿತು

45 (177) **ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ)**:– ಮಾನ್ಯ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಖಾಸಗಿಯಾಗಿ ವೈದ್ಯಕೀಯ ವೃತ್ತಿಯಲ್ಲಿ ತೊಡಗಿರುವ ವೈದ್ಯರ ಸಂಖ್ಯೆ ಎಷ್ಟು;

(ಆ) ಅವರಿಗೆ ಅಧಿಕೃತವಾಗಿ ವೃತ್ತಿಯಲ್ಲಿ ತೊಡಗಲು ಸರ್ಕಾರ ಪರವಾನಗಿ ಕೊಟ್ಟಿಲ್ಲವೇ;

(ಇ) ಇಲ್ಲದಿದ್ದಲ್ಲಿ, ಸಾರ್ವಜನಿಕರ ವಿಶ್ವಾಸಗಳಿಸಿರುವ ಈ ವೈದ್ಯರ ಭವಿಷ್ಯಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಆಂಧ್ರ ಸರ್ಕಾರದ ಮಾದರಿಯಲ್ಲಿ ಇವರಿಗೆ ತರಬೇತಿ ಕೊಟ್ಟು ನಂತರ ಪರವಾನಗಿ ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

(ಅ) Karnataka Ayurveda, Natruropathy, Siddha, Unani and Yoga Practitioners, Registrations and Medical Treatment Miscellaneous Practitioners Act, 1961 ಮತ್ತು Karnataka Homoeopathic Practitioners Act, 1961 ಅಡಿ ಸುಮಾರು 45,746 ವೈದ್ಯರು ನೋಂದಾಯಿಸಿಕೊಂಡಿದ್ದು ಕಾಯಿದೆಯಡಿ ನೋಂದಾಯಿಸಿಕೊಳ್ಳದವರ ವಿವರ ಇರುವುದಿಲ್ಲ.

(ಆ) ಮತ್ತು (ಇ) ಕಾಯಿದೆಯಡಿ ನೋಂದಾಯಿಸಿಕೊಳ್ಳಲು ಅರ್ಹತೆ ಇಲ್ಲದೇ ಇದ್ದವರು ವೈದ್ಯಕೀಯ ಚಿಕಿತ್ಸೆ ನೀಡಲು ಅವಕಾಶವಿರುವುದಿಲ್ಲ.

(ಈ) ಆಂಧ್ರ ಸರ್ಕಾರದ ಮಾದರಿಯಲ್ಲಿ ತರಬೇತಿ ನೀಡಿ ನಂತರ ಪರವಾನಗಿ ನೀಡುವ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತವಾಗಿದೆ. ಆದರೆ, ಸರ್ಕಾರವು ಇದನ್ನು ಸಕಾರಾತ್ಮಕವಾಗಿ ಪರಿಗಣಿಸಿರುವುದಿಲ್ಲ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಸದನದಲ್ಲಿ ಎರಡು ಮೂರು ಪ್ರಶ್ನೆಗಳ ಮೂಲಕ ಆರೋಗ್ಯಾಧಿಕಾರಿಗಳ ಕೊರತೆ ಸಾಮಾನ್ಯ

ಜನ ಆರೋಗ್ಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನನ್ನ ಜಮಖಂಡಿ ನಗರದಲ್ಲಿರುವ ಆಸ್ಪತ್ರೆಯಲ್ಲಿ ಕೂಡ 100 ಬೆಡ್‌ಗಳು ಇರುವಂಥ ಆಸ್ಪತ್ರೆಗಳಿದ್ದರೂ ನಾಲ್ಕು ಜನ ಮಾತ್ರ ವೈದ್ಯರಿದ್ದಾರೆ. ಗ್ರಾಮಾಂತರ ಭಾಗದ ರೈತರ, ಅಲ್ಲಿನ ಬಡವರ ಆರೋಗ್ಯದ ದೃಷ್ಟಿಯಿಂದ ಕೆಲವರು BAMS ಮುಗಿಸಿಕೊಂಡು Naturopathy training ಮಾಡಿ herbal treatment ಕೊಡುವಂಥ ಅನೇಕ ವೈದ್ಯರು ಗ್ರಾಮಾಂತರ ಭಾಗದಲ್ಲಿ ಎಲ್ಲರೂ ವಸತಿ ಕಟ್ಟಿಕೊಂಡು ಇದ್ದು ಬಡವರ ಆರೋಗ್ಯದ ಬಗ್ಗೆ ಜವಾಬ್ದಾರಿ ಹೊತ್ತು ಸಣ್ಣಪುಟ್ಟ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅವರಿಗೆ ಸರ್ಕಾರದಿಂದ ಸೇವೆ ಮಾಡಲಿಕ್ಕೆ ಬೇಕಾಗುವಂಥ ಒಂದು ಅನುಮತಿಯನ್ನು ಕೊಟ್ಟರೆ ಕಡಿಮೆ ವೆಚ್ಚದಲ್ಲಿ ಸಾಮಾನ್ಯ ಬಡವರು ಅಂಥವರಿಂದ ಯಾರಿವತ್ತು ದೊಡ್ಡ ದೊಡ್ಡ ವೈದ್ಯರ ಹತ್ತಿರ ತರಬೇತಿ ಪಡೆದುಕೊಂಡು ಸಣ್ಣಪುಟ್ಟ ಔಷಧಿಯನ್ನು ಪ್ರಾಥಮಿಕ ಚಿಕಿತ್ಸೆ ಕೊಡುವಂಥ ವ್ಯವಸ್ಥೆ ಮಾಡುವಂಥ ಸಾವಿರಾರು ಜನ ಈ ರೀತಿ ಗ್ರಾಮಾಂತರ ಭಾಗದಲ್ಲಿದ್ದಾರೆ. ಅವರಿಗೆ ಸರ್ಕಾರದಿಂದ ಒಂದು ಅನುಮತಿ ಪತ್ರ ಕೊಟ್ಟರೆ ಆ ಸಾರ್ವಜನಿಕರ ಆರೋಗ್ಯ ಕಾಪಾಡುವಂಥ ವ್ಯವಸ್ಥೆಯನ್ನು ಮಾಡಬಹುದೆ ಎನ್ನುವಂಥ ಪ್ರಶ್ನೆಯನ್ನು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

ಶ್ರೀ ಸುನಿಲ್ ವಿ. ಹೆಗಡೆ (ಹಳಿಯಾಳ): ಮಾನ್ಯ ಅಧ್ಯಕ್ಷರೆ, ಇದರ ಅವಶ್ಯಕತೆ ಇದೆ. ಗ್ರಾಮೀಣ ಭಾಗದಲ್ಲಿ ಈ ವೈದರೆಲ್ಲಾ ಸೇರಿ ಸೇವೆ ಮಾಡುವುದರಿಂದ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗುತ್ತದೆ. ಈಗ ಇವರಿಗೆ ನಾವು ಬಂದ್ ಮಾಡಿಬಿಟ್ಟರೆ ಇವತ್ತು PHC ನಲ್ಲಿ ಡಾಕ್ಟರ್ಸ್ ಇಲ್ಲ, ಎಲ್ಲಿಯೂ ಡಾಕ್ಟರ್ಸ್ ಇಲ್ಲ. ಅವರು ಸಣ್ಣಪುಟ್ಟ ಚಿಕಿತ್ಸೆ ಕೊಡಲಿಲ್ಲವೆಂದರೆ ಹೇಗೆ? ರೈತರು ಸಂಜೆ 7–00 ಘಂಟೆ ಮೇಲೆ ಬರುತ್ತಾರೆ. ಬೆಳಿಗ್ಗೆ 6–00 ಘಂಟೆಗೆ ಹೋಗುವವರು. ಇಂಥ ಸಂದರ್ಭ ಇರುವುದರಿಂದ ಸರ್ಕಾರ ಅವರಿಗೆ ತರಬೇತಿ ಕಾರ್ಯಕ್ರಮ ಮಾಡಿ ಅವರಿಗೆ ಒಂದು ಸರ್ಟಿಫಿಕೇಟ್ ಕೊಡುವಂಥ ವ್ಯವಸ್ಥೆ ಮಾಡಿದರೆ ಈ ಗ್ರಾಮೀಣ ಭಾಗದ ವೈದ್ಯರಿಗೆ ಅನುಕೂಲವಾಗುತ್ತದೆ.

ಶ್ರೀ ಶಿವರಾಜ ಎಸ್. ತಂಗಡಗಿ (ಕನಕಗಿರಿ): ಮಾನ್ಯ ಅಧ್ಯಕ್ಷರೆ, ನಿಜವಾಗಲೂ ಗಂಗಾವತಿ ತಾಲ್ಲೂಕು ಅಷ್ಟೇ ಅಲ್ಲ, ಕೊಪ್ಪಳ ಜಿಲ್ಲೆಯಲ್ಲಿ ಇವತ್ತಿನವರೆಗೆ MBBS Doctors ಇಲ್ಲ. ಉದಾಹರಣೆಗೆ ಕನಕಗಿರಿ, ಕನಕಗಿರಿ ನಡುವೆ ಇದ್ದು ಅದರ ಸುತ್ತಮುತ್ತಲು ಕನಿಷ್ಠ 50–60 ಹಳ್ಳಿಗಳಿವೆ. ಅಲ್ಲಿ MBBS Doctors ಇಲ್ಲ. ಡಾಕ್ಟರ್‌ಗಳ ಕೊರತೆ ಇದೆ. ದಯಮಾಡಿ ಯಾರಾದರೂ ಸತ್ತರೆ ಪೋಸ್ಟ್ ಮಾರ್ಟಂ ಮಾಡಲಿಕ್ಕೆ ಸಹಿತಿ ಗಂಗಾವತಿಯಿಂದ

ಬರುವಂಥ ಪರಿಸ್ಥಿತಿ ಇದೆ. ಹಾಗಾಗಿ ಆರೋಗ್ಯಮಂತ್ರಿಗಳು ನಮಗೆ MBBS Doctors ಒದಗಿಸಿಕೊಡಬೇಕಾಗಿ ಕೋರುತ್ತೇನೆ.

(ಗೊಂದಲ)

ಅಧ್ಯಕ್ಷರು: ನೀವು ವಿಷಯಕ್ಕೆ ಪೂರಕ ಪ್ರಶ್ನೆ ಕೇಳಿ ಎಂದರೆ ಸಂಬಂಧಪಡದ ಪ್ರಶ್ನೆ ಕೇಳಿದರೆ ಹೇಗೆ? No.

ಶ್ರೀ ಕೃಷ್ಣಯ್ಯ ಶೆಟ್ಟಿ (ಮಾಲೂರು): ಕೆಲವು spurious certificates ಮೂಲಕ ಬಹಳಷ್ಟು ಜನ practice ಮಾಡಿ ಅನೇಕ ರೋಗಿಗಳ ಸಾವಿಗೆ ಮತ್ತು ಅಕಾಲಿಕ ಚಿಕಿತ್ಸೆಗೊಳಗಾಗಿ ಬಹಳಷ್ಟು ಜನ ಸಾಯುತ್ತಿದ್ದಾರೆ. ಹಾಗಾಗಿ ಇವತ್ತು ನಮ್ಮ ರಾಜ್ಯದಲ್ಲಿ ವೈದ್ಯರ ಕೊರತೆ ಬಹಳ ಇದೆ ಇಂಥವರಿಗೆ ತರಬೇತಿ ಏನಾದರೂ ಕೊಡಬೇಕು. ಈಗ retired compounders ಇರಬಹುದು, ಹಿಂದೆ ವಂಶಪಾರಂಪರ್ಯವಾಗಿ ಮಾಡತಕ್ಕಂಥ ಕೆಲವು ಕುಟುಂಬಗಳು ಇರಬಹುದು. ಹಾಗಾಗಿ ಕೆಲವು Certified courses ಮಾಡತಕ್ಕಂಥ ಅವು spurious certificates ಇರಬಹುದು. ಅದಕ್ಕೆ ಯಾವುದೇ authentication ಇಲ್ಲ. ಹಾಗಾಗಿ ನಮ್ಮ ಆರೋಗ್ಯ ಇಲಾಖೆಯಿಂದ ಅವರಿಗೆ ಒಂದು screen ಮಾಡಿ ಕೆಲವು eligibility ಇರುವವರಿಗೆ short term training ಕೊಟ್ಟು ಈ ಒಂದು ಸೇವೆಗೆ ಬಿಡತಕ್ಕಂಥ ಅವಶ್ಯಕತೆ ಇದೆಯೆಂದು ನನಗೆ ಅನ್ನಿಸುತ್ತದೆ.

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅಧ್ಯಕ್ಷರೆ, ಮಾನ್ಯ ಸದಸ್ಯರಾದಂಥ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ ರವರು ನಾಟಿ ವೈದ್ಯರ ವಿಚಾರದಲ್ಲಿ ಪ್ರಶ್ನೆಯನ್ನು ಎತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಅಂದಾಜು 30,000 ಕ್ಕಿಂತ ಹೆಚ್ಚು ನಾಟಿ ವೈದ್ಯರು ಇದ್ದಾರೆ. ಆದರೆ RMP ಮತ್ತೊಂದು ಹೆಸರಿನಲ್ಲಿ ಈಗ ಸದಸ್ಯರಾದಂಥ ಡಾ॥ ವಿಶ್ವನಾಥ್ ರವರು ಹೇಳಿದಂತೆ ಹಾಗೆಯೇ practice ಮಾಡುವಂಥ ಪದ್ಧತಿ ಇದೆ. ಈಗ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ಅನ್ನು ಜಾರಿಗೊಳಿಸುತ್ತಿದ್ದೇವೆ. Karnataka Ayurveda, Naturopathy, Siddha, Unani and Yoga Practitioners, Registrations and Medical Treatments Miscellaneous Practitioners Act, 1961ರ ಪ್ರಕಾರ ಅವರನ್ನು ನೋಂದಾವಣೆ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಹೀಗಾಗಿ ಈ ಸಮಸ್ಯೆ ಉದ್ಭವವಾಗಿರುವುದು ಆ ಕಾರಣಕ್ಕಾಗಿ. ಈಗ ಮಾನ್ಯ ಸದಸ್ಯರು ಹೇಳಿರುವಂಥ ಸಲಹೆಯನ್ನು

ಗಮನದಲ್ಲಿಟ್ಟುಕೊಂಡು ಆಂಧ್ರ ಪ್ರದೇಶದಲ್ಲಿ ಈ ರೀತಿ ಪ್ರಯೋಗವನ್ನು ಆಂಧ್ರ ಪ್ರದೇಶ ಸರ್ಕಾರ ಮಾಡುತ್ತಿದೆ. ನಮ್ಮ ಅಧಿಕಾರಿ ಮಟ್ಟದ ನಿಯೋಗ ಕೂಡ ಆಂಧ್ರ ಪ್ರದೇಶಕ್ಕೆ ಭೇಟಿ ಮಾಡಿ ಅವರು ಯಾವ ರೀತಿಯ ನಿಯಮಗಳನ್ನು ಪಾಲನೆ ಮಾಡಬೇಕು ಅನ್ನುವ ಮಾಹಿತಿಗಳನ್ನು ತಂದಿದ್ದಾರೆ. ಅದರ ಆಧಾರದ ಮೇಲೆ ಎಲ್ಲಾ ಆಸಕ್ತ ಸದಸ್ಯರ ಸಲಹೆಗಳನ್ನು ಪಡೆದು ಯಾರಿಗೆ ಅಧಿಕೃತವಾದಂಥ practice ಮಾಡಲಿಕ್ಕೆ ಅವಕಾಶ ಇದೆ, ಅವಕಾಶ ಇಲ್ಲ, ಅಕಸ್ಮಾತ್ ಇಲ್ಲದಿದ್ದರೆ ಅವರಿಗೆ training ಕೊಡಬೇಕಾಗುತ್ತದೆ. ಅವರನ್ನು doctors ಎಂದು ಕರೆಯಲಿಕ್ಕೆ ಸಾಧ್ಯವೇ ಇಲ್ಲ. Para-medical practitioners ತರಹ ಅಥವಾ ಬೇರೆ ಸಲಹೆಗಳನ್ನು ಗಮನದಲ್ಲಿ ತೆಗೆದುಕೊಂಡು ಅಧಿಕಾರಿಗಳ ಮಟ್ಟದಲ್ಲಿ ಇದನ್ನು ಚರ್ಚೆ ಮಾಡಿ ಯಾವುದು ಅನುಕೂಲಕರವಾಗಿದೆ ಎಂಬ ಬಗ್ಗೆ ಸರ್ಕಾರ ಸಕಾರಾತ್ಮಕವಾಗಿ ಚಿಂತನೆ ಮಾಡುತ್ತದೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್: ಈಗಾಗಲೇ ಆಂಧ್ರ ಪ್ರದೇಶದಲ್ಲಿ ಈ ರೀತಿಯ ಸಂಘಟನೆ (ಗೊಂದಲ) ದಯವಿಟ್ಟು ಮಾತನಾಡುವುದಕ್ಕೆ ಅವಕಾಶ ಕೊಡಿ. ನಾನೊಂದು ಪೂರಕ ಪ್ರಶ್ನೆ ಕೇಳಬೇಕು.

ಅಧ್ಯಕ್ಷರು: ಈಗ ಮಾತನಾಡುವುದಕ್ಕೆ ಅವಕಾಶವಿಲ್ಲ. ಕೇವಲ clarification ಕೇಳುವುದಕ್ಕೆ ಮಾತ್ರ ಇದೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್: ಮಾನ್ಯ ಮಂತ್ರಿಗಳು ಆಂಧ್ರ ಪ್ರದೇಶದ ಉಲ್ಲೇಖ ಮಾಡಿದರು, ಅಲ್ಲಿಯ ಕೆಲವು association ನವರು ಹೈದರಾಬಾದ್ ಹೈಕೋರ್ಟ್‌ಗೆ ಹೋದಾಗ ಹೈಕೋರ್ಟ್ ಒಂದು ರೂಲಿಂಗ್ ಕೊಟ್ಟಿದೆ. ಆ ರೂಲಿಂಗ್ ಅನ್ನು ಮಾನ್ಯ ಮಂತ್ರಿಗಳಿಗೆ ನಾನು ಕಳುಹಿಸಿಕೊಡುತ್ತೇನೆ. ಆರು ತಿಂಗಳು ತರಬೇತಿ ಕೊಟ್ಟ ನಂತರ ಇಂತಹ ನಾಟಿ ವೈದ್ಯರಿಗೆ permission ಕೊಟ್ಟರೆ ಸಾರ್ವಜನಿಕರ ಮತ್ತು ಬಡವರ ಆರೋಗ್ಯ ರಕ್ಷಣೆಯನ್ನು ಅವರು ಮಾಡುತ್ತಾರೆ. ಅಲ್ಲದೆ ಅವರಿಗೂ ಕೂಡ ಉಪ ಜೀವನಕ್ಕೆ ಒಂದು ವ್ಯವಸ್ಥೆಯಾಗುತ್ತದೆ. ಆ ಹಿನ್ನೆಲೆಯಲಿ ನಾನು ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ತಾವು ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೀರಿ.

ಅಧ್ಯಕ್ಷರು: ನೀವು clarification ಕೇಳಿ

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್: ಕೇಳುತ್ತೇನೆ. ಆಂಧ್ರ ಪ್ರದೇಶದ ಸರ್ಕಾರದ ಮಾದರಿಯಲ್ಲಿ ತರಬೇತಿಯನ್ನು ನೀಡಿ ನಂತರ ಪರವಾನಿಗೆಯನ್ನು ನೀಡುವ ಪ್ರಸ್ತಾವನೆ

ಸರ್ಕಾರದಲ್ಲಿ ಸ್ವೀಕೃತವಾಗಿದೆ. ಆದರೆ ಸರ್ಕಾರ ಇದನ್ನು ಸಕಾರಾತ್ಮಕವಾಗಿ ಪರಿಗಣಿಸಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಸ್ವಲ್ಪ ಇಚ್ಚಾಶಕ್ತಿಯನ್ನು ತೋರಿಸಿ, ಹೈಕೋರ್ಟ್ ಸೂಚನೆ ಪ್ರಕಾರ ಆಂಧ್ರ ಪ್ರದೇಶದಲ್ಲಿ ಯಾವ ರೀತಿ ಆರು ತಿಂಗಳು ತರಬೇತಿಯನ್ನು ಕೊಟ್ಟು ಅವರಿಗೆ ಅವಕಾಶ ಕೊಟ್ಟಿದ್ದಾರೋ ಅದೇ ರೀತಿ ಕರ್ನಾಟಕದಲ್ಲೂ ಕೂಡ ಸಾವಿರಾರು ಬಡ ಕುಟುಂಬಗಳ ರಕ್ಷಣೆ ಮಾಡತಕ್ಕಂತಹ ಅವಕಾಶವನ್ನು ಗ್ರಾಮಾಂತರ ಭಾಗದಲ್ಲಿರುವ ಇಂಥ ನಾಟಿ ವೈದ್ಯರಿಗೆ ಮಾನ್ಯ ಮಂತ್ರಿಗಳು ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಅದಕ್ಕೆ ಉತ್ತರವನ್ನು ಹೇಳಬೇಕೆಂದು ಕೂಡ ಕೇಳಿಕೊಳ್ಳುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು); ಈಗಾಗಲೇ ಉತ್ತರವನ್ನು ಕೊಟ್ಟಿದ್ದೇವೆ. ಸರ್ಕಾರ ಇದನ್ನು ಸಹಾನುಭೂತಿಯಿಂದ ಗಣನೆಗೆ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು: 23ನೇ ಸೋಮವಾರ ತಡೆಹಿಡಿದಿರುವ ಪ್ರಶ್ನೆ ಮಾನ್ಯ ಎಸ್. ಆರ್. ವಿಶ್ವನಾಥ್ ರವರು ಸದನದಲ್ಲಿ ಹಾಜರಿಲ್ಲ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಉಳಿದಿದೆ.

ಅಧ್ಯಕ್ಷರು: ಕರೆಯುತ್ತೇನೆ. First round ಆಗಲಿ ನೀವು ಕರೆದಾಗ ಬರಲಿಲ್ಲ second round ನಲ್ಲಿ ಕರೆಯುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್: ಯಾವಾಗ ಕರೆಯುತ್ತೀರಿ? ಮಾನ್ಯ ಮಂತ್ರಿಗಳು ಸದನದಲ್ಲೇ ಇದ್ದಾರೆ.

ಅಧ್ಯಕ್ಷರು: ಕರೆಯುತ್ತೇನೆ. ಕುಳಿತುಕೊಳ್ಳಿ. ಮಾನ್ಯ ಶ್ರೀ ರುದ್ರೇಶ್‌ಗೌಡ ವೈ. ಎನ್. ರವರು.

ಗ್ರಂಥಾಲಯ ಕಟ್ಟಡ ನಿರ್ಮಾಣ

32 (707) **ಶ್ರೀ ರುದ್ರೇಶ್‌ಗೌಡ ವೈ. ಎನ್.(ಬೇಲೂರು):–** ಮಾನ್ಯ ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೇಲೂರು ನಗರಕ್ಕೆ ಗ್ರಂಥಾಲಯ ಕಟ್ಟಡಕ್ಕಾಗಿ ಅನುದಾನ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸೂಕ್ತ ನಿವೇಶನ ಇಲ್ಲದೆ ನಿರ್ಮಾಣ ವಿಳಂಬವಾಗುತ್ತಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ;

(ಇ) ನಿವೇಶನ ಖರೀದಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ (ವಿವರ ನೀಡುವುದು)?

ಶ್ರೀ ರೇವು ನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು)

(ಅ) ಅನುದಾನ ಮಂಜೂರು ಆಗಿರುವುದಿಲ್ಲ

(ಆ) ಬಂದಿಲ್ಲ. ಬೇಲೂರು ಪುರಸಭೆ ಇವರು ದಾನದ ರೂಪದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣ ಮಾಡಲು 100 X 100 ಅಡಿ ಅಳತೆಯ ನಿವೇಶನವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಗ್ರಂಥಾಲಯ ಇಲಾಖೆಗೆ ಉಚಿತವಾಗಿ ನೀಡಿರುತ್ತಾರೆ.

(ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ರುದ್ರೇಶ್‌ಗೌಡ ವೈ. ಎನ್.: ಬೇಲೂರು ನಗರದ ಗ್ರಂಥಾಲಯ ಕಟ್ಟಡಕ್ಕೆ ಅನುದಾನ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದರೆ ಅನುದಾನ ಮಂಜೂರಾಗಿಲ್ಲವೆಂದು ಹೇಳಿದ್ದಾರೆ. ನನ್ನ knowledge ಪ್ರಕಾರ ಅನುದಾನ ಮಂಜೂರಾಗಿ ಹತ್ತು ವರ್ಷವಾಯಿತು. 40 ಲಕ್ಷ ರೂ.ಗಳು ಮಂಜೂರಾಗಿದೆ. ಇದಕ್ಕೆ ಅನುದಾನ ಮಂಜೂರಾಗಿಲ್ಲವೆಂದು ಸರ್ಕಾರ ಉತ್ತರ ಕೊಡುವುದಾದರೆ ಇದು ಯಾವ ರೀತಿ ಎಂದು ನನಗರ್ಥವಾಗುವುದಿಲ್ಲ. ಈ ಕುರಿತು ನೀವು clarification ತೆಗೆದುಕೊಂಡು, ಮೂರ್‍ನಾಲ್ಕು ದಿವಸಗಳಲ್ಲಿ ಉತ್ತರ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಹಾಗೂ ಪಶುಸಂಗೋಪನೆ ಸಚಿವರ ಪರವಾಗಿ):

ಈಗಾಗಲೇ ಹೇಳುತ್ತೇನೆ. ಮಾನ್ಯ ಸದಸ್ಯರಾದ ವೈ. ಎನ್. ರುದ್ರೇಶ್‌ಗೌಡರವರು ಬೇಲೂರಿನಲ್ಲಿ ನಗರ ಗ್ರಂಥಾಲಯ ಕಟ್ಟಡವನ್ನು ಕೇಳಿದ್ದು, ನಿಜ. ಅವರು ಯಾವಾಗ ಹಣ ಮಂಜೂರಾಗಿತ್ತೆಂದು ಹೇಳುತ್ತಾರೋ ಆಗ ನಮಗೆ ಸ್ಥಳ ಇರಲಿಲ್ಲ. ಇದು ನಿಮಗೂ ಚೆನ್ನಾಗಿ ಗೊತ್ತಿದೆ. 2007ರಲ್ಲಿ 100 X 100 ಚದರ ಅಡಿ ಜಾಗವನ್ನು ಪುರಸಭೆಯವರು

ನಮಗೆ ಕೊಟ್ಟರು. ಹಣ ಮಂಜೂರಾದಾಗ ಜಾಗ ಇರಲಿಲ್ಲವೆಂದು ಆ ಹಣ ಹೋಯಿತು. ಈಗ ನಮ್ಮ ಹತ್ತಿರ 150 ಲಕ್ಷ ರೂ.ಗಳು ಮಾತ್ರ ಇಡೀ ರಾಜ್ಯದಲ್ಲಿ ಹೊಸ ಕಟ್ಟಡಗಳನ್ನು ಕಟ್ಟುವುದಕ್ಕೆ ಇದೆ. ಆ ಹಿನ್ನೆಲೆಯಲ್ಲಿ ನಮಗೆ ಬರುವಂತಹ ಹಣ ಸಾಕಷ್ಟಿದೆ. ಸುಮರು 126 ಕೋಟಿ ರೂ.ಗಳು ಈ ಗ್ರಂಥಾಲಯ ಸೆಸ್ ಏನಿದೆ, ಅದು ನಮ್ಮ ಸ್ಥಳೀಯ ಸಂಸ್ಥೆಗಳಿಂದ ನಮಗೆ ಬರಬೇಕಾಗಿದೆ. ಬಿ.ಬಿ.ಎಂ.ಪಿ. ಯಿಂದ ಸುಮಾರು 90 ಕೋಟಿ ರೂ.ಗಳಿಗಿಂತ ಹೆಚ್ಚು ಗ್ರಂಥಾಲಯ ಇಲಾಖೆಗೆ ಆ ಸೆಸ್ ಬರಬೇಕಾಗಿದೆ. ನಮ್ಮ ಇಲಾಖೆ ಈಗಾಗಲೇ ಸ್ಥಳೀಯ ಮುಖ್ಯಸ್ಥರ ಜೊತೆಗೆ ಬೇರೆ ಬೇರೆ ರೀತಿಯ ಸಭೆಗಳನ್ನು ಮಾಡುತ್ತಿದ್ದು, ಆ ಹಣ ಬಂದ ತಕ್ಷಣ ರಾಜ್ಯದಲ್ಲಿ ಸುಮಾರು 36 ಕಡೆ ತಾಲ್ಲೂಕು ಮಟ್ಟದ ಗ್ರಂಥಾಲಯಗಳಿಗೆ ಬೇಲೂರನ್ನೂ ಸೇರಿದಂತೆ ಕಟ್ಟಡಗಳಿಲ್ಲ. ಹಾಗಾಗಿ ಬೇಲೂರಿಗೂ ಸಹ ಈ ಹಣ ಲಭ್ಯವಾದ ತಕ್ಷಣ ಕಟ್ಟಡವನ್ನು ಮಾಡಿಕೊಡುತ್ತೇವೆ.

ಶ್ರೀ ರುದ್ರೇಶ್‌ಗೌಡ ವೈ. ಎನ್.: ನೀವು ಈ ಬಗ್ಗೆ ವಿವರವನ್ನು ನೀಡಬೇಕಾಗಿತ್ತು. ವಿವರವನ್ನು ನೀಡದೆ ಅನುದಾನ ಮಂಜೂರಾಗಿರುವುದಿಲ್ಲ ಎಂದರೆ ನಾವು ಏನು ತಿಳಿದುಕೊಳ್ಳಬೇಕು. ಯಾವ ಕಾರಣಕ್ಕೂ ಸಹ ಯಾವ ಪರಸಭೆಯಲ್ಲಿಯೂ ಕೂಡ 100 X 100 ಚದರ ಅಡಿ ಸೈಟ್ ಸಿಗುವುದಿಲ್ಲ. ನೀವು ಹಣ ಕೊಟ್ಟು buy ಮಾಡದೆ ಹೊರತು ಯಾವ ಕಾರಣಕ್ಕೂ ಸೈಟು ಸಿಗುವುದಿಲ್ಲ. ದಯವಿಟ್ಟು ನೀವು ತಿಳಿದುಕೊಳ್ಳಿ ಕರ್ನಾಟಕ ರಾಜ್ಯದಲ್ಲಿ ಮುಕ್ಕಾಲು ಭಾಗ ತಾಲ್ಲೂಕುಗಳಲ್ಲಿ 100 X 100 ಚ.ಅ.ಸೈಟ್ ಎಲ್ಲೂ ಇಲ್ಲ ಅದಕ್ಕೆ ಹಣ ಕೊಟ್ಟು ಸೈಟ್ buyl ಮಾಡಬೇಕು. ಗ್ರಂಥಾಲಯ ಎಲ್ಲಾ ಕಡೆಯೂ ಅತಿ ಮುಖ್ಯವಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಪುರಸಭೆಯವರು ಸೈಟ್ ಈಗಾಗಲೇ ನಮಗೆ ಕೊಟ್ಟಿದ್ದಾರೆ.

ಶ್ರೀ ರುದ್ರೇಶ್‌ಗೌಡ ವೈ. ಎನ್.: ಇಲ್ಲಾ ಸೈಟ್ ಕೊಟ್ಟಿಲ್ಲ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೊಟ್ಟಿದ್ದಾರೆ. ಹಣ ಬಿಡುಗಡೆ ಮಾಡಿದ ತಕ್ಷಣ ಆದ್ಯತೆಯ ಮೇಲೆ ಬೇಲೂರಿನ ಗ್ರಂಥಾಲಯವನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ದಿನೇಶ್ ಗುಂಡೂರಾವ್ ರವರು

ಪರಿಸರ ಮಾಲಿನ್ಯ ತಡೆಗಟ್ಟುವುದು

35 (887) **ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ)**:– ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮಗಳಾವುವು (ವಿವರ ನೀಡುವುದು);

(ಆ) ರಾಜ್ಯದಲ್ಲಿ ಮಾಲಿನ್ಯ ನಿಯಂತ್ರಣ ಕಾಯ್ದೆಯು ಸಮರ್ಪಕ ರೀತಿಯಲ್ಲಿ ಅನುಷ್ಠಾನಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ರಾಜ್ಯದಲ್ಲಿ ಪ್ಲಾಸ್ಟಿಕ್ ನಿಷೇಧ ಸಮರ್ಪಕವಾಗಿ ಜಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಯಾವಾಗ ಸಂಪೂರ್ಣ ಜಾರಿಗೊಳಿಸಿಲಾಗುವುದು.

(ಈ) ಪರಿಸರ ಮಾಲಿನ್ಯ ಮಾಡಿದವರ ವಿರುದ್ಧ ಇದುವರೆವಿಗೂ ಎಷ್ಟು ಸಂಸ್ಥೆ/ ಜನರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿರುತ್ತದೆ (ಪೂರ್ಣ ಮಾಹಿತಿ ಒದಗಿಸುವುದು)?

ಶ್ರೀ ಎಸ್. ಶಿವಣ್ಣ (ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು):–

(ಅ) i) ಪರಿಸರ ಮಾಲಿನ್ಯವನ್ನು ತಡೆಗಟ್ಟುವುದಕ್ಕಾಗಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ರಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ರಚಿಸಲಾಗಿದೆ. ಈ ಮಂಡಳಿಯು ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ರಡಿಯಲ್ಲಿ ರಚಿತವಾಗಿರುವ ನಿಯಮಗಳನ್ನು ಅನುಷ್ಠಾನಗೊಳಿಸುತ್ತಿದೆ.

ii) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಉದ್ದಿಮೆಗಳನ್ನು ಸ್ಥಾಪಿಸುವ ಮುನ್ನ ಮಂಡಳಿಯು ಪರಿಸರ ಮಾಲಿನ್ಯ ತಡೆಗಟ್ಟಲು ಷರತ್ತುಗಳನ್ನು ವಿಧಿಸಿ ಸ್ಥಾಪನಾ ಸಮ್ಮತಿ ಪತ್ರ ನೀಡುತ್ತದೆ.

iii) ಈ ಷರತ್ತುಗಳನ್ನು ಪಾಲಿಸದ ನಂತರವೇ ಮಂಡಳಿ ಉದ್ದಿಮೆಗಳಿಗೆ ಚಾಲನಾ ಸಮ್ಮತಿ ಪತ್ರ ನೀಡುತ್ತದೆ.

iv) ಸ್ಥಾಪನಾ ಚಾಲನಾ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಉಲ್ಲಂಘಿಸಿದ ಉದ್ದಿಮೆಗಳ

ವಿರುದ್ಧ ಮಾಲಿನ್ಯಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981 ರಡಿಯಲ್ಲಿ ರಚಿತವಾಗಿರುವ ಕಾನೂನು ರೀತಿ ಕ್ರಮಕೈಗೊಳ್ಳುತ್ತಿದೆ.

v) ಇದಲ್ಲದೆ, ಸದರಿ ಮಂಡಳಿಯು ಮಾಲಿನ್ಯಕ್ಕೆ ಕಾರಣವಾದ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ಪರಿಸರ (ಸಂರಕ್ಷಣಾ) ಕಾಯ್ದೆ, 1986 ರಡಿಯಲ್ಲಿ ರಚಿಸಿರುವ ನಿಯಮಗಳ ರೀತ್ಯಾ ಕ್ರಮವಹಿಸುತ್ತಿದೆ.

(ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾಲಿನ್ಯ ನಿಯಂತ್ರಣ ಕಾಯ್ದೆ ಮತ್ತು ನಿಯಮಗಳ ಅನುಷ್ಠಾನವನ್ನು ಖಾತ್ರಿ ಪಡಿಸಲು ಕಾರ್ಯನಿರ್ವಹಿಸುತ್ತಿದೆ. ಆದಾಗ್ಯೂ ಕೆಲವೊಂದು ನ್ಯೂನತೆಗಳನ್ನು ಗಮನಿಸಲಾಗಿದ್ದು, ಅದನ್ನು ಸರಿಪಡಿಸಲು ಮಾಲಿನ್ಯ ನಿಯಂತ್ರಣ ಕಾಯ್ದೆ ಮತ್ತು ನಿಯಮಗಳ ಸಮರ್ಪಕ ಮತ್ತು ಸಂಪೂರ್ಣ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

(ಇ) i) ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಹೊರಡಿಸಿರುವ ಪ್ಲಾಸ್ಟಿಕ್ ನಿಯಂತ್ರಣಕ್ಕಾಗಿ ಹೊರಡಿಸಲಾಗಿರುವ ಪ್ಲಾಸ್ಟಿಕ್ ತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮ, 2011 ದಿನಾಂಕ 4-2-2011 ರೀತ್ಯಾ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿರುವುದಿಲ್ಲ. ಬದಲಾಗಿ, 40 ಮೈಕ್ರಾನ್ ಗಿಂತ ತೆಳುವಾದ ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ಮಾತ್ರ ನಿಷೇಧಿಸಲಾಗಿದೆ.

ii) ಕೇಂದ್ರ ಸರ್ಕಾರದ ಈ ನಿಯಮದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 40 ಮೈಕ್ರಾನ್ ಗಿಂತ ದಪ್ಪ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಗಳನ್ನು ಉತ್ಪಾದಿಸುವ ಘಟಕಗಳಿಗೆ ಮಾತ್ರ ಪರವಾನಿಗೆಯನ್ನು ನೀಡುತ್ತಿದೆ. ಇದರ ಜೊತೆಗೆ ಮಂಡಳಿಯ ಅಧಿಕಾರಿಗಳು ಕಾಲಕಾಲಕ್ಕೆ ಈ ಕಾರ್ಖಾನೆಗಳನ್ನು ಪರಿವೀಕ್ಷಿಸಿ, ನಿಷೇಧಿಸಲ್ಪಟ್ಟ ಕ್ಯಾರಿಬ್ಯಾಗ್ ಗಳನ್ನು ತಯಾರಿದಂತೆ ನೋಡಿಕೊಳ್ಳುತ್ತಿದ್ದಾರೆ.

iii) ಪರಿಸರಾತ್ಮಕವಾಗಿ ಸೂಕ್ಷ್ಮವೆನಿಸಿರುವ ಹಾಗೂ ಪ್ರಮುಖವಾದ ಸ್ಥಳಗಳಲ್ಲಿ ಎಂದರೆ, ರಾಷ್ಟ್ರೀಯ ಉದ್ಯನವನಗಳು, ಮೈಸೂರು ಮೃಗಾಲಯ, ವನ್ಯಮೃಗ ಅಭಯಾರಣ್ಯಗಳು, ಜಂಗಲ್ ಲಾಡ್ಜ್ ಗಳು ಎಕೋ ಟೂರಿಸಂ ತಾಣಗಳು, ಲಾಲ್ ಭಾಗ್, ಕಬ್ಬನ್ ಪಾರ್ಕ್ ಮತ್ತು ಧಾರ್ಮಿಕ ಸ್ಥಳಗಳಿಂದ 100 ಮೀಟರ್ ಸುತ್ತಳತೆಯ ಪ್ರದೇಶದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಲಾಗಿದೆ.

LHV 16/59

iv) ಪ್ಲಾಸ್ಟಿಕ್ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳು 2011 ರೀತ್ಯಾ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಪರಿಸರಕ್ಕೆ ಧಕ್ಕೆಯಾಗದಂತೆ, ಸುರಕ್ಷಿತವಾಗಿ ಸಂಗ್ರಹಿಸಿ, ಬೇರ್ಪಡಿಸಿ, ಸಾಗಿಸಿ, ವಿಲೇಮಾಡುವ ಕಾರ್ಯವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾಗಿದೆ.

v) ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆರವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ನಿಯಮಾನುಸಾರ ರಾಜ್ಯ ಮಟ್ಟದ ಪ್ಲಾಸ್ಟಿಕ್ ಸಲಹಾ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿಯ ಉಸ್ತುವಾರಿ ವಹಿಸುತ್ತಿದೆ.

vi) ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ 40 ಮೈಕ್ರಾನ್‌ಗಿಂತ ತೆಳುವಾದ ಪ್ಲಾಸ್ಟಿಕ್ ಚೀಲಗಳ ನಿಷೇಧವು ಸೇರಿದಂತೆ, ಮೇಲ್ಕಂಡ ನಿಯಮಗಳ ಸಮರ್ಪಕ ಜಾರಿಗೆ ನಿರ್ದೇಶನ ನೀಡಲಾಗಿದೆ.

(ಈ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 2009-10 ರಿಂದ ಈಚೆಗೆ ಪರಿಸರ ಸಂರಕ್ಷಣಾ ನಿಯಮಗಳನ್ನು ಸಮರ್ಪಕವಾಗಿ ಪಾಲಿಸದ ಒಟ್ಟು 234 ಉದ್ದಿಮೆಗಳಿಗೆ ಮುಚ್ಚುವ ಆದೇಶ ಹೊರಡಿಸಿದೆ ಮತ್ತು 41 ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿರುತ್ತದೆ.

ಶ್ರೀ ದಿನೇಶ್ ಆರ್. ಗುಂಡೂರಾವ್: ಮಾನ್ಯ ಅಧ್ಯಕ್ಷರೆ ನಾನು ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಈ ಇಲಾಖೆ ಬಹಳ ಮಹತ್ತರವಾದ ಇಲಾಖೆ, ಬಹುಶಃ ಈ ಇಲಾಖೆಗೆ ಹೆಚ್ಚಿನ ಮಹತ್ವ ಬಂದಿರುವುದು ಮಾನ್ಯ ಬಸವಲಿಂಗಪ್ಪ ನವರು ಇದೇ ಖಾತೆಯ ಸಚಿವರಾಗಿದ್ದಾಗ ನಿಜವಾಗಿಯೂ ಈ ಇಲಾಖೆಯಲ್ಲಿರತಕ್ಕಂತಃ ಶಕ್ತಿಯನ್ನು ಪ್ರದರ್ಶನ ಮಾಡಿದ್ದರು. ಅದೇ ರೀತಿ ಇವತ್ತಿನ ಸಚಿವರೂ ಕೂಡ ಪ್ರದರ್ಶನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಾ, ಇವತ್ತಿನ industry ಗಳ ಬಗ್ಗೆ ಕಳೆದ ವರ್ಷ ಸಿ.ಎ.ಜಿ. ವರದಿಯಲ್ಲಿ ಕೂಡ ಬಂದಿದೆ. ಆ report ನಲ್ಲಿ ಸುಮಾರು 377 industry ಗಳು Air Pollution Control System ಗಳನ್ನು ಹಾಕಿರಲಿಲ್ಲ. 504 industry ಗಳು Effluent Treatment Plants ಹಾಕಿರಲಿಲ್ಲವೆಂದು ವರದಿ ಕೊಟ್ಟಿದ್ದರು. ಅಂದರೆ Pollution Control Board ನವರು ಸರಿಯಾದ ರೀತಿಯಲ್ಲಿ inspection ಮಾಡಿ ಕ್ರಮ ಜರುಗಿಸುವಂತಹ ಕೆಲಸ ಮಾಡಿದ್ದರೆ ಇವತ್ತು ಈ ರೀತಿ ಆಗುತ್ತಿರಲಿಲ್ಲ. ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಪ್ರಗತಿಯಾಗಬೇಕು. ನಾನು ಇಲ್ಲವೆಂದು ಹೇಳುವುದಿಲ್ಲ. ಜೊತೆಗೆ ಪರಿಸರವನ್ನು ಕಾಪಾಡುವುದು

ಕೂಡ ಅಷ್ಟೇ ಮುಖ್ಯ. ಈ ಹೊಣೆಗಾರಿಕೆ ಅವರ ಮೇಲೆ ಬರುತ್ತದೆ. ಆದುದರಿಂದ Pollution Control Board ನವರು inspections ಹಾಕಿಕೊಂಡು ಖಡಾಖಂಡಿತವಾಗಿ ಕ್ರಮಗಳನ್ನು ಜರುಗಿಸಬೇಕಾಗುತ್ತದೆ. ಮೂರು ರೀತಿಯ industry ಗಳಿರುತ್ತವೆ. Red, Orange & Green. Red ಎಂದರೆ ಅತಿ ಹೆಚ್ಚಿನ pollution ಆಗುವಂತಹ industries. ಅದು ಪ್ರತಿ ಮೂರು ತಿಂಗಳಿಗೊಮ್ಮೆ inspection ಆಗಬೇಕು. Orange ಇರುವಂತಹ industry ಗಳಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ inspection ಆಗಬೇಕು. Green ಇರುವುದರಲ್ಲಿ ಒಂದು ವರ್ಷ ಅಥವಾ ಎರಡು ವರ್ಷಕ್ಕೊಮ್ಮೆ inspection ಆದೂ ಚಿಂತೆಯಿಲ್ಲ. ಇಲ್ಲಿ ಅಧಿಕಾರಿಗಳು ಸರಿಯಾದ ರೀತಿಯಲ್ಲಿ inspection ಮಾಡಿ ಕ್ರಮ ಜರುಗಿಸುತ್ತಿಲ್ಲ. ಬೆಂಗಳೂರಿನಂತಹ ವಿಶೇಷವಾದ ನಗರಗಳಲ್ಲಿ, ಕೈಗಾರಿಕೆಗಳು ಹೆಚ್ಚು ಇರುವ ಪ್ರದೇಶಗಳಲ್ಲಿ ಸುತ್ತಮುತ್ತ ಕೆರೆಗಳ ಮತ್ತು ಅಂತರ್ಜಲ ಮಾಲಿನ್ಯವಾಗುತ್ತಿದೆ. Effluent Treatment ಆಗದೆ ಇವತ್ತು ಪರಿಸರ ಕೂಡ ಹಾಳಾಗುತ್ತಿದೆಯಲ್ಲದೆ, ಸುತ್ತಮುತ್ತ ವಾಸವಿರುವ ಜನರಿಗೂಕೂಡ ತೊಂದರೆಯಾಗುತ್ತಿದೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ ಇಂತಹ ಪ್ರದೇಶಗಳಲ್ಲಿ ಮಾನ್ಯ ಸಚಿವರು Karnataka Pollution Control Board ನವರನ್ನು ಚುರುಕು ಮಾಡಿ ಅವರೂ ಕೂಡ inspection ಗಳನ್ನು ಹಾಕಿಕೊಂಡು ಎಲ್ಲೆಲ್ಲಿ ಈ ರೀತಿ red ಇರುವ industry ಗಳ ಕಡೆ ಹೆಚ್ಚು ಗಮನ ಕೊಟ್ಟು ಆದಷ್ಟು ಬೇಗ ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣ Act ಗಳನ್ನು ಅನುಷ್ಠಾನಕ್ಕೆ ತರುವ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಮತ್ತೊಂದು ವಿಷಯ ಈ ಪ್ಲಾಸ್ಟಿಕ್ ವಿಚಾರದಲ್ಲೂ ಕೂಡ ಪ್ರಶ್ನೆ ಹಾಕಿದ್ದೇನೆ. Below 40 ಮೈಕ್ರಾನ್ಸ್ ಬ್ಯಾನ್ ಆಗಿದೆ. ಆದರೆ ಈಗಲೂ ಕೂಡ ಪ್ಲಾಸ್ಟಿಕ್ ಹೋಲ್‌ಸೇಲ್‌ಗಳಿಗೆ ನೀವು ಹೋದರೆ . . .

ಅಧ್ಯಕ್ಷರು: ಉತ್ತರ ಹೇಳಲಿ

ಶ್ರೀ ದಿನೇಶ್ ಆರ್. ಗುಂಡೂರಾವ್: ಎರಡು ಪ್ರಶ್ನೆಗಳಿದೆ. ಪ್ಲಾಸ್ಟಿಕ್ ಮತ್ತು pollution ಉಂಟುಮಾಡುತ್ತಿರುವ industries ಬಗ್ಗೆ. ಪ್ಲಾಸ್ಟಿಕ್‌ನಲ್ಲಿ below 40 ಮೈಕ್ರಾನ್ಸ್ ಏನಿದ್ರೆ ಅದು ಇವತ್ತಿಗೂ ಕೂಡ ಸಿಕ್ಕುತ್ತಿದೆ. ಬ್ಯಾನ್ ಆಗಿದ್ದರೂ ಕುಡ ದೊರೆಯುತ್ತಿದೆ. ಅನಾವಶ್ಯಕವಾಗಿ ಪ್ಲಾಸ್ಟಿಕ್ ಬಳಕೆಯಾಗುತ್ತಿರುತ್ತದೆ. ಇವತ್ತು ಮ್ಯಾಗ್‌ಜೀನ್ ಕವರ್ ಕೂಡ ಪ್ಲಾಸ್ಟಿಕ್ ಹಾಕಿ ಕೊಡುತ್ತಾರೆ. Bouqvet ಕೊಟ್ಟಾಗ ಕೂಡ ಪ್ಲಾಸ್ಟಿಕ್ ಕವರ್ ಗಳನ್ನು ಹಾಕಿಕೊಡುತ್ತಾರೆ. ಈ ಪ್ಲಾಸ್ಟಿಕ್ ಕವರ್ ಗಳು ಏಕೆ ಬೇಕು? ಈ ಪ್ಲಾಸ್ಟಿಕ್ ಲೋಟಗಳನ್ನು

ಏಕೆ ಕೊಡಬೇಕು? ಚಿಕ್ಕ ಚಿಕ್ಕ 250 ಎಂ.ಎಲ್. ವಾಟರ್ ಬಾಟಲ್ಸ್ ಅದು ಎಷ್ಟು ಸಂಖ್ಯೆಯಲ್ಲಿ manufacture ಆಗುತ್ತಿದೆಯೆಂದರೆ, ಪ್ಲಾಸ್ಟಿಕ್ ರೀಸೈಕಲ್ ಆಗದೆ ಹೋದರೆ ಸಾವಿರಾರು ವರ್ಷ ಅದು ಡೀಗ್ರೇಡ್ ಆಗುವುದಿಲ್ಲ. ಇವತ್ತು ನೀವು ಅದನ್ನೇಲ್ಲಾ ರದ್ದು ಮಾಡುವ ಕೆಲಸವನ್ನು ಮಾಡಬೇಕು. ಪ್ಲಾಸ್ಟಿಕ್ ಅನಾವಶ್ಯಕ್ವಾಗಿ ಬಳಕೆಯಾಗುವುದನ್ನು ಮತ್ತು below 40 ಮೈಕ್ರಾನ್ ಇರುವುದನ್ನು ಕೂಡ, ಹೋಲ್‌ಸೇಲ್‌ನಲ್ಲಿ manufacture ಮಾಡುತ್ತಿರುವ industry ಗಳ ಬಗ್ಗೆ ಕೂಡ ಸರ್ಕಾರ ಎಚ್ಚರ ವಹಿಸಿಕೊಂಡು ರದ್ದು ಮಾಡಬೇಕು. ಏಕೆಂದರೆ below 40 microns it is not recyclable. ಅದು ಹಾಗೇ ಉಳಿದುಕೊಳ್ಳುವುದರಿಂದ ಇದನ್ನು ನೀವು ರದ್ದು ಮಾಡಬೇಕು. ಮತ್ತು Pollution Control Board, industry ಗಳನ್ನು ನೀವು ಚುರುಕು ಮಾಡಬೇಕು. ಇಲ್ಲವಾದರೆ ನಮ್ಮ ಬೆಂಗಳೂರಿನ ಸುತ್ತಮುತ್ತ ಇರುವ ಎಲ್ಲಾ ಕೆರೆಗಳು pollute ಆಗುತ್ತವೆ. ಮಾನ್ಯ ಅರವಿಂದ ಲಿಂಬಾವಳಿಯವರು ಇಲ್ಲೇ ಇದ್ದಾರೆ, ಅವರ ಕ್ಷೇತ್ರದಲ್ಲೂ ಕೂಡ ಸುಮಾರು ಕೆರೆಗಳಿವೆ. ಆ polluted ನೀರು ಬಂದು ಕೆರೆಗಳೆಲ್ಲಾ ಹಾಳಾಗಿದೆ. ಇದನ್ನು ತಾವು ದಯವಿಟ್ಟು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸೊಗಡು ಶಿವಣ್ಣ: ಮಾನ್ಯ ಮಿತ್ರರಾದ ಶ್ರೀ ದಿನೇಶ್ ಗುಂಡೂರಾವ್ ರವರು ಪ್ರಸ್ತಾಪಿಸಿರುವ ವಿಷಯ ಒಳ್ಳೆಯ ವಿಷಯವಾಗಿರುತ್ತದೆ. ನಾನು ಸಚಿವನಾಗಿ ಕೇವಲ ಒಂದು ವಾರವಾಗಿದೆಯಷ್ಟೆ Pollution ಎಲ್ಲಾ ಕಡೆಯಲ್ಲಿಯೂ ಆಗಿದೆ.

ಶ್ರೀ ದಿನೇಶ್ ಆರ್. ಗುಂಡೂರಾವ್: ಬಸವ ಲಿಂಗಪ್ಪ ಅವರ ರೀತಿಯಲ್ಲಿಯೇ ತಾವು ಕೂಡ ಬಲಿಷ್ಠವಾಗಿ ಕೆಲಸ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸೊಗಡು ಶಿವಣ್ಣ: ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆಗಳಲ್ಲೂ pollution ಆಗಿರುವುದು ತಮಗೆಲ್ಲಾ ಗೊತ್ತಿದೆ. ಅದೃಷ್ಟವಶಾತ್ ಈ ಖಾತೆಯನ್ನು ನಮ್ಮ ಸರ್ಕಾರ ನನಗೆ ಕೊಟ್ಟಿದೆ. ಈ ಸಂದರ್ಭದಲ್ಲಿ ತಾವು ಏನೇನು ಕಂಪ್ಲೆಂಟ್ ಮಾಡಿದ್ದೀರೋ ಅದೆಲ್ಲವನ್ನು ತಪಾಸಣೆ ಮಾಡುವುದಕ್ಕೆ ನಿಮ್ಮನ್ನೂ ಸಹ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ. ಈ ಸಂಬಂಧ ಎಲ್ಲೆಲ್ಲಿ ಏನೇನು ಕಾಯಿದೆಗಳನ್ನು ಮಾಡಿದ್ದಾರೋ, ಅದಕ್ಕೆಲ್ಲವೂ ಒತ್ತು ಕೊಡೋಣ. ಸರ್ಕಾರ, ನಮ್ಮ Pollution Control Board ಏನಿದೆ, ಅದಕ್ಕೆ ಕಂಟ್ರೋಲ್ ಇಲ್ಲವೆಂದು ನನ್ನ ಗಮನಕ್ಕೆ ಬಂದಿದ್ದು ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಯಾವ್ಯಾವ ಕೈಗಾರಿಕೆಗಳ ಬಗ್ಗೆ ಹೇಳಿದ್ದೀರೋ ಅದೆಲ್ಲದರ ಮೇಲೆ ಕ್ರಮ ತೆಗೆದುಕೊಳ್ಳೋಣ.. ಈಗ ನೀವು

ಹೇಳಿರುವಂತಹ ನೀರು ಹಾಗೂ ಪ್ಲಾಸ್ಟಿಕ್ ಬಗ್ಗೆ ಹೇಳಿದ್ದೀರಿ, ಅದು ನೂರಕ್ಕೆ ನೂರು ಪಾಲು ಸತ್ಯ. ಉದಾಹರಣೆಗೆ, ನಾನು ತುಮಕೂರಿನಿಂದ ಇಲ್ಲಿಗೆ ಬರಬೇಕಾದರೆ ಪ್ಲಾಸ್ಟಿಕ್ ಕವರ್ ಗಳು ಗಾಳಿಯಲ್ಲಿ ಎಲೆಗಳ ಮಾದರಿಯಲ್ಲಿ ಹಾರಾಡುತ್ತಿರುತ್ತದೆ. ನಮ್ಮ ಕಾನೂನಿನಲ್ಲಿ ಬಿಗಿಯಿರುವ ಕಾರಣದಿಂದ ಅದನ್ನು ಸರಿಮಾಡಿಕೊಂಡು ಎಲ್ಲೆಲ್ಲಿ ಏನೇನು ಕ್ರಮ ತೆಗೆದುಕೊಳ್ಳಬೇಕೋ, ತಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಕ್ರಮ ತೆಗೆದುಕೊಳ್ಳುತ್ತೇನೆಂಬ ಸಮಜಾಯಿಷಿಯನ್ನು ಸದನದ ಮುಖಾಂತರ ತಮಗೆ ಹೇಳ ಬಯಸುತ್ತೇನೆ.

ಶ್ರೀ ದಿನೇಶ್ ಆರ್. ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಉಪ ಪ್ರಶ್ನೆ, ಇವತ್ತಿನ ದಿನಗಳಲ್ಲಿ ಇನ್ನೊಂದು ರೀತಿಯ ಮಾಲಿನ್ಯವಿದೆ ಅದು ಏನೆಂದರೆ Vision Pollution (ದೃಶ್ಯ ಮಾಲಿನ್ಯ) ನೀವು ಬೆಂಗಳೂರಿನಲ್ಲಿ ಎಲ್ಲೋ ಹೋದರೂ ಕೂಡ hoardings ಮೇಲೆ hoardings ಇರುತ್ತವೆ. ಅದು ಒಂದು ರೀತಿಯ ಮಾಲಿನ್ಯವೇ, ಅವುಗಳಲ್ಲಿರುವ ದೃಶ್ಯಗಳನ್ನು ನೋಡಿದರೆ ಅನೇಕ ಸಂದರ್ಭಗಳಲ್ಲಿ ಮುಜುಗರ ಉಂಟಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. Hoardings ಗಳಿಗೆ ಲೆಕ್ಕವೇ ಇಲ್ಲ. ಅದನ್ನು ಎಲ್ಲಾ ಕಡೆಗಳಲ್ಲಿಯೂ ಹಾಕಿರುತ್ತಾರೆ. ಇದರಿಂದ ಗಾಡಿಗಳಿಗೂ ಅಡ್ಡ ಆಗುತ್ತದೆ, turn ತೆಗೆದುಕೊಳ್ಳಬೇಕಾದರೆ turn ಗಳಲ್ಲಿ ಏನಿದೆ ಎಂದು ನಮಗೆ ಕಾಣುವುದಿಲ್ಲ. ಎಲ್ಲೆಂದರಲ್ಲಿ ಹಾಕಿರುತ್ತಾರೆ. ದಯಮಾಡಿ ದೃಶ್ಯ ಮಾಲಿನ್ಯದ ಬಗ್ಗೆಯೂ ತಾವು ಕ್ರಮ ತೆಗೆದುಕೊಳ್ಳಿ.

ಶ್ರೀ ಸೊಗಡು ಶಿವಣ್ಣ: ಈ ಬಗ್ಗೆ ನಗರ ಸಭೆ, ಪುರಸಭೆ, ಬಿ.ಬಿ.ಎಂ.ಪಿ. ಯವರು ಕ್ರಮ ತೆಗೆದುಕೊಳ್ಳಬೇಕು. ಸಂಬಂಧಪಟ್ಟ ಮಂಡಳಿಗೆ ಹೇಳಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಸಚಿವರು ನಮ್ಮ ಜಿಲ್ಲೆಯವರಾಗಿರುವುದರಿಂದ ಹೇಳುತ್ತಿದ್ದೇನೆ. ದಿನೇಶ್ ಗುಂಡೂರಾವ್ ರವರು ಕೇಳಿರುವ ಪ್ರತಿಯೊಂದರಲ್ಲಿ ಬಹಳ ಮುಖ್ಯವಾದ ಅಂಶಗಳಿವೆ. ತಾವು ಹೊಸದಾಗಿ ಮಂತ್ರಿಯಾಗಿರುವುದು ಕಾರಣವಲ್ಲ. ನೀವು ಕೊನೆಯದಾಗಿ ಉತ್ತರ ಕೊಟ್ಟಿರುವುದೇನೆಂದರೆ ಒಟ್ಟು 234 ಉದ್ದಿಮೆಗಳಿಗೆ ಮುಚ್ಚುವ ಆದೇಶ ಹೊರಡಿಸಿದೆ ಮತ್ತು 41 ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿರುತ್ತದೆಂದು ಹೇಳಿದ್ದೀರಿ. ಆದರೆ ಒಂದು ಚಾಲೆಂಜ್. ಇದರಲ್ಲಿ ಒಂದು ಕೈಗಾರಿಕೆಯನ್ನು ಸಹ ಮುಚ್ಚಿರುವುದಿಲ್ಲ. ಒಬ್ಬರಿಗೂ ಕೂಡ ಶಿಕ್ಷೆ ಆಗುವುದಿಲ್ಲ. ಇದನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ನೀವು ಯಾರೂ ತಯಾರಿಲ್ಲ. ಕೇಸ್ ಹಾಕಿ ಕುಳಿತುಕೊಳ್ಳುತ್ತೀರಿ, ಇದರಿಂದ ಏನೂ

ಪ್ರಯೋಜನವಾಗುವುದಿಲ್ಲ. ಇದರಿಂದಲೇ ಪರಿಸರ ಹಾಳಾಗುತ್ತಿರುವುದರಿಂದ ದಯಮಾಡಿ ತಾವು ಗಮನಹರಿಸಿ.

ಶ್ರೀ ದಿನೇಶ್ ಆರ್. ಗುಂಡೂರಾವ್: ಈ ಹಿಂದೆ ಮಾನ್ಯ ಎಸ್. ಎಂ. ಕೃಷ್ಣ ಸರ್ಕಾರವಿದ್ದಾಗ ಬಿ.ಬಿ.ಎಂ.ಪಿ. ವತಿಯಿಂದ ಪ್ಲಾಸ್ಟಿಕ್‌ನ್ನು ರಸ್ತೆ ಡಾಂಬರೀಕರಣಕ್ಕೆ ಬಳಕೆಗೆ ಉಪಯೋಗಿಸುವುದಕ್ಕೆ ಪ್ರಾರಂಭವಾಗಿತ್ತು ಈಗ ಏಕೆ ಅದು ನಿಂತು ಹೋಗಿದೆ ಎನ್ನುವ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು. ವೇಸ್ಟ್ ಆಗಿರುವ ಪ್ಲಾಸ್ಟಿಕ್‌ನ್ನು ತೆಗೆದುಕೊಂಡು ಅದನ್ನು ಟಾರ್‌ನಲ್ಲಿ ಮಿಕ್ಸ್ ಮಾಡಿ ಬಳಕೆ ಮಾಡಿದರೆ ಗುಣಮಟ್ಟ ಹೆಚ್ಚಾಗುತ್ತದೆ. ಆ ಒಂದು ಯೋಜನೆ ಏಕೆ ನಿಂತು ಹೋಗಿದೆ ಎನ್ನುವುದರ ಬಗ್ಗೆ ಗಮನಹರಿಸಬೇಕು. PWD ಸಚಿವರೂ ಸಹ ಮಾಡಬಹುದು, ಬಿ.ಬಿ.ಎಂ.ಪಿ. ವತಿಯಿಂದ ಮಾಡಬಹುದು. ಆದರೂ ನೀವು ಅದನ್ನು ಮುತುವರ್ಜಿ ವಹಿಸಿಕೊಂಡು ಮಾಡುವುದಕ್ಕೆ ಅವಕಾಶವಿದೆ.

ಯಾದಗಿರಿ ಜಿಲ್ಲಾ ಆಸ್ಪತ್ರೆ

38 (731) **ಡಾ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ):-** ಮಾನ್ಯ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಯಾದಗಿರಿ ಜಿಲ್ಲೆ ರಚನೆಯಾಗಿ 3 ವರ್ಷ ಸಮೀಪಿಸುತ್ತಿದ್ದರೂ ಜಿಲ್ಲಾ ಆಸ್ಪತ್ರೆ ನಿರ್ಮಾಣ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಪ್ರಸ್ತುತ ಜಿಲ್ಲಾ ಕೇಂದ್ರದಲ್ಲಿ ಇರುವ 100 ಹಾಸಿಗೆ ಆಸ್ಪತ್ರೆಯ ಮೇಲ್ದರ್ಜೆಗೆ ಏರಿಸದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಕುರಿತು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ; ಜಿಲ್ಲಾ ಆಸ್ಪತ್ರೆಗೆ ಅನುದಾನ ಹೆಚ್ಚಿಸಿ ಸಿಬ್ಬಂದಿ, ವೈದ್ಯರ ನೇಮಕ ಮಾಡಲಾಗಿದೆಯೇ (ವಿವರ ನೀಡುವುದು);

(ಈ) ಹೊಸ ಜಿಲ್ಲಾ ಆಸ್ಪತ್ರೆ ನಿರ್ಮಣಕ್ಕೆ ಇನ್ನೂ ನಿವೇಶನ ಹುಡುಕಲು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

(ಅ) ಬಂದಿದೆ

(ಆ) ಯಾದಗಿರಿ ಜಿಲ್ಲಾ ಕೇಂದ್ರದಲ್ಲಿ 100 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದೆ. ಈ ಆಸ್ಪತ್ರೆಯ ಕಳೆದ 3 ವರ್ಷಗಳ ಹಾಸಿಗೆಗಳ ಬಳಕೆ ದರವು ಕ್ರಮವಾಗಿ ಶೇ. 50, 47.24 ಮತ್ತು 63.91 ಆಗಿದೆ. 100 ಹಾಸಿಗೆಗಳ ಸಾಮರ್ಥ್ಯಕ್ಕೆ ಅನುಗುಣವಾಗಿ, ಈ ಆಸ್ಪತ್ರೆಗೆ ಒಟ್ಟು 11 ತಜ್ಞ ವೈದ್ಯರ ಹಾಗೂ 1 ದಂತ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 10 ತಜ್ಞ ವೈದ್ಯರು ಮತ್ತು 1 ದಂತ ವೈದ್ಯರ ಹುದ್ದೆಗಳು ಭರ್ತಿಯಾಗಿವೆ ಹಾಗೂ 1 ಫಿಸಿಷಿಯನ್ ಹುದ್ದೆ ಮಾತ್ರ ಖಾಲಿ ಇದೆ. ಮುಂದುವರೆದು, ಈ ಆಸ್ಪತ್ರೆಗೆ 89 ಇತರೆ ಸಿಬ್ಬಂದಿ ವರ್ಗದವರ ಹುದ್ದೆಗಳು ಮಂಜೂರಾಗಿದ್ದು, 54 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 35 ಹುದ್ದೆಗಳು ಖಾಲಿ ಇವೆ. ಈ ಖಾಲಿ ಹುದ್ದೆಗಳಲ್ಲಿ 28 ಹುದ್ದೆಗಳು ಗ್ರೂಪ್ "ಡಿ" ಹುದ್ದೆಗಳಾಗಿವೆ. ಹೊರಗುತ್ತಿಗೆ ಸಂಸ್ಥೆಯಿಂದ ನಾನ್ ಕ್ಲಿನಿಕಲ್ ಸೇವೆ ಪಡೆದು ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಯಾದಗಿರಿ ಜಿಲ್ಲೆಯಾದ ನಂತರ, ಅಲ್ಲಿಗೆ 250 ಹಾಸಿಗೆಗಳ ಜಿಲ್ಲಾ ಆಸ್ಪತ್ರೆಯನ್ನು ನಿರ್ಮಿಸಬೇಕಾಗಿದೆ.

(ಈ) ಯಾದಗಿರಿ ಜಿಲ್ಲೆಯಾದ ನಂತರ, ಅಲ್ಲಿಗೆ 250 ಹಾಸಿಗೆಗಳ ಜಿಲ್ಲಾ ಆಸ್ಪತ್ರೆಯನ್ನು ನಿರ್ಮಿಸಬೇಕಾಗಿದ್ದು, ಈ ದಿಸೆಯಲ್ಲಿ ಅವಶ್ಯವಿರುವ ನಿವೇಶನವನ್ನು ಕಂದಾಯ ಇಲಾಖೆಯಿಂದ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ.

ಡಾ|| ಮಾಲಕರೆಡ್ಡಿ ಎ.ಬಿ.: ಮಾನ್ಯ ಅಧ್ಯಕ್ಷರೆ, ಯಾದಗಿರಿ ಜಿಲ್ಲೆ ಘೋಷಣೆಯಾಗಿ ಸುಮಾರು ಮೂರು ವರ್ಷಗಳಾಗಿದೆ. ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ನಿಮ್ಮ ಇಲಾಖೆಯೂ ಸೇರಿದಂತೆ ಯಾವುದೂ ಕೆಲಸ ನಿರ್ವಹಿಸುತ್ತಿಲ್ಲ. ಯಾದಗಿರಿನಲ್ಲಿ ಜಿಲ್ಲಾ ಆಸ್ಪತ್ರೆ, ಯಾದಗಿರಿ, ಎಂದು ಒಂದು ದೊಡ್ಡ ಬೋರ್ಡ್‌ನ್ನು ಹಾಕಿದ್ದಾರೆ. ಯಾವುದೇ ಒಂದು ಆಸ್ಪತ್ರೆ ಉತ್ತಮವಾಗಿ ಸೇವೆ ಸಲ್ಲಿಸಬೇಕಾದರೆ ಕಟ್ಟಡ, ಸಿಬ್ಬಂದಿ ಮತ್ತು ಸೇವಾ ಅನುಕೂಲತೆಗಳು ಈ ಮೂರು ಬಹಳ ಮುಖ್ಯ. ಈ ಮೂರರಲ್ಲಿ ಸರ್ಕಾರ ಒಂದನ್ನ ಪೂರ್ತಿ ಮಾಡಿಲ್ಲ. ಏಕೆ, ಏನು ಕಾರಣ? ಸಮಸ್ಯೆಯೇನು? NRHM ನಿಂದ 16 ಕೋಟಿ ರೂ.ಗಳು ಕಳೆದ ಎರಡು ವರ್ಷದ ಹಿಂದೆಯೇ ಬಂದಿದೆ. ಜಿಲ್ಲೆಯನ್ನು ಘೋಷಣೆ ಮಾಡಿದವರು ನೀವು, ಹಣ ಕೊಡುವವರು ಕೇಂದ್ರ ಸರ್ಕಾರದವರು. ಜಿಲ್ಲೆಯಲ್ಲಿ ಹಣದ ಕೊರತೆಯಿಂದ ಕಾರಣದಿಂದ ಡಾ|| ಮನಮೋಹನ್ ಸಿಂಗ್ ಅವರು ಈ ರೀತಿಯ ಒಂದು ಒಳ್ಳೆಯ ಯೋಜನೆಯನ್ನು

ಜಾರಿಗೆ ತಂದರು. 16 ಕೋಟಿ ರೂ.ಗಳನ್ನು ಕೇಂದ್ರದಿಂದ NRHM ಯೋಜನೆಯಡಿಯಲ್ಲಿ ಬಿಡುಗಡೆಯಾಗಿ 2 ವರ್ಷಗಳಾದರೂ ಒಂದು ಸೈಟ್ ಲೋಕೇಟ್ ಮಾಡಿರುವುದಿಲ್ಲ. ಇದ್ದ ಆಸ್ಪತ್ರೆಯನ್ನೇ ಒಂದು ರಾಶಿ ಸಾಯಿಲ್ ಮೇಲೆ ಕಟ್ಟಿದ್ದಾರೆ. ಅದರಲ್ಲಿ ಒಂದನೇ ಮಹಡಿಯನ್ನು ಹೆಚ್ಚಿಸಿ 250 ಹಾಸಿಗೆಗಳನ್ನು ಮಾಡಬಹುದಾಗಿತ್ತು. ಈ ಮೊದಲು ತಾಲ್ಲೂಕು ಆಸ್ಪತ್ರೆಯಲ್ಲಿ 100 ಹಾಸಿಗೆಗಳೇನಿತ್ತೋ, ಈಗಲೂ ಅಷ್ಟೇ ಇದೆ. ಹೆಚ್ಚಿಗೆ ಮಡಿಲ್ಲ. ಆ ನಂತರ ಒಂದು ವೇಳೆ ಜಿಲ್ಲಾ ಆಸ್ಪತ್ರೆಯನ್ನು ಮಾಡಿದ ಮೇಲೆ ಜಿಲ್ಲಾ ಮಟ್ಟದಲ್ಲಿ ಔಷಧಿಗಳನ್ನು ಪೂರೈಸಬೇಕು. ತಾಲ್ಲೂಕು ಆಸ್ಪತ್ರೆಗೆ ಕೊಡುವಂತಹ 21 ಲಕ್ಷ ರೂ.ಗಳೇ ಈಗಲೂ ಮುಂದುವರೆಯುತ್ತಿದೆ. ಜಿಲ್ಲಾ ಆಸ್ಪತ್ರೆಗೆ ಕನಿಷ್ಠ 250 ಹಾಸಿಗೆಗಳು ಬೇಕು. 100 ಹಾಸಿಗೆಗಳಿಗೆ 21 ಲಕ್ಷ ರೂ.ಗಳಾದರೆ 250 ಹಾಸಿಗೆಗಳಿಗೆ ಎಷ್ಟಾಗುತ್ತದೆ? ಸುಮಾರು 50–60 ಲಕ್ಷ ರೂ.ಗಳನ್ನು ಕೊಡಬೇಕಾಗುತ್ತದೆ, ಅದನ್ನೂ ಸಹ ಮಾಡುತ್ತಿಲ್ಲ. ತಾಲ್ಲೂಕು ಮಟ್ಟದಲ್ಲಿ ಕೇವಲ 11 ಜನ ಡಾಕ್ಟರ್ಸ್ ಕೆಲಸ ಮಾಡುತ್ತಾರೆ, ಆದರೆ ಜಿಲ್ಲಾ ಮಟ್ಟದಲ್ಲಿ ಕೆಲಸ ಮಾಡಬೇಕಾದರೆ ಕನಿಷ್ಠ 30 ಜನ ಡಾಕ್ಟರ್ಸ್ ಇರಬೇಕು. ಇದರಲ್ಲಿ ಎಲ್ಲಾ ಸೌಲಭ್ಯಗಳು ಸಿಗುವಂತಾಗಬೇಕು. ಇಲ್ಲಿ ಯಾವುದೇ ಸ್ಪೆಷಲಿಸ್ಟ್‌ಗಳಿಲ್ಲ ಹೀಗೆ ಪ್ರತಿಯೊಂದನ್ನೂ ಸರ್ಕಾರ ಒದಗಿಸಕೊಡಬೇಕು. ಅಲ್ಲಿ Anaesthetist ಮೊನ್ನೆ ಬಂದು join ಆಗಿದ್ದಾರೆ, ಅದೂ ಡಿಪ್ಲೊಮಾದವರು. ಇಬ್ಬರು Anaesthetists ಬೇಕು. ಅಲ್ಲಿ Radiologist ಬೇಕು Orthopaedics treatment ಮಾಡುವುದಕ್ಕೆ ಸಾಧ್ಯವೇ ಇಲ್ಲ. ಮೊನ್ನೆಯಷ್ಟೇ ಕಷ್ಟಪಟ್ಟು Orthopaedic ಸರ್ಜನ್‌ನ್ನು ಹಾಕಿಸಿಕೊಂಡಿದ್ದೇವೆ. ಮತ್ತೇ ಎಲ್ಲಕ್ಕಿಂತ ಮುಖ್ಯವಾಗಿ physician ಇರಬೇಕು. ಅದೇ ಇಲ್ಲಿ ಇಲ್ಲ. ಹೀಗೆ ಸಿಬ್ಬಂದಿಯ ಕೊರತೆ ಇರುವುದರಿಂದ ಮತ್ತು ಕಟ್ಟಡ ಇಲ್ಲದೇ ಇರುವುದರಿಂದ, ಔಷಧಿಗಳಿಲ್ಲದೇ ಇರುವುದರಿಂದ, ಆಪರೇಷನ್ ಥಿಯೇಟರ್ ಇಲ್ಲದಿರುವುದರಿಂದ ಅಲ್ಲದೆ ಜಿಲ್ಲಾ ಆಸ್ಪತ್ರೆಯಲ್ಲಿ ಎಮರ್‌ಜೆನ್ಸಿ ಘಟಕವಿರಬೇಕು. ಎಮರ್ ಜೆನ್ಸಿಯಾಗಿ ಒಂದು ಸಿಸೇರಿಯನ್, ಹರ್ನಿಯಾದಂತಹ ಕೇಸ್‌ಗಳು ಬಂದರೆ ಅದಕ್ಕೆ ಎಮರ್‌ಜೆನ್ಸಿ ಆಪರೇಷನ್ ಮಾಡಬೇಕಾಗುತ್ತದೆ, ಆಗ ಏನು ಮಾಡಬೇಕು? ಆಗ ವೈದ್ಯರು ರಾಯಚೂರಿಗೆ, ಗುಲ್ಬರ್ಗಾಗೆ ಹೋಗಿ ಎಂದು ಹೇಳುತ್ತಾರೆ. ಮೂರು ವರ್ಷವಾದರೂ ಕೂಡ ಈ ರೀತಿಯ ಅಲಕ್ಷ್ಯ ಧೋರಣೆ ಸರ್ಕಾರ ಏಕೆ ಮಾಡುತ್ತಿದೆ? ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಸದಸ್ಯರಾದ ಡಾ|| ಮಾಲಕರೆಡ್ಡಿ ಅವರು ಹೇಳಿರುವ ವಿಚಾರಗಳು ನಿಜವಾದುದಾಗಿದೆ. ಯಾದಗಿರ್ ನಲ್ಲಿ ಜಿಲ್ಲಾ ಆಸ್ಪತ್ರೆಯಾಗಬೇಕು,

ಅಲ್ಲಿರುವ ತಾಲ್ಲೂಕು ಆಸ್ಪತ್ರೆಯನ್ನೇ ಜಿಲ್ಲಾ ಆಸ್ಪತ್ರೆಯೆಂದು ಟ್ರೀಟ್ ಮಾಡುತ್ತಿದ್ದೇವೆ. ಅದು 200 ಹಾಸಿಗೆಗಳ ಆಸ್ಪತ್ರೆಯಾಗಬೇಕು. ತಮಗೆ ಗೊತ್ತಿರುವಂತೆ ಅಲಿ ಸ್ಥಳದ ಸಮಸ್ಯೆಯಿದ್ದು ಅದನ್ನು ಇತ್ಯರ್ಥಮಾಡಿಕೊಡಬೇಕು. ಸಿದ್ದಾಪುರ ರಸ್ತೆಯಲಿರುವ 21 ಎಕರೆ 31 ಗುಂಟೆ ಜಮೀನನ್ನು ಗುರುತು ಮಾಡಿದ್ದು, ಕಂದಾಯ ಇಲಾಖೆಯಿಂದ ಕ್ಲಿಯರ್ ಆಗಬೇಕು ಹಾಗೂ ತಾವು ಅದಕ್ಕೆ ಸಹಕಾರವನ್ನು ಕೊಟ್ಟರೆ ನಿಶ್ಚಿತವಾಗಿ ಒಂದು ಜಿಲ್ಲಾ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಸಾಧ್ಯವಿದೆ. NRHM ನಲ್ಲಿರುವ ಮೊದಲನೆ ಕಂತಿನ ಹಣವಾದ ಮೂರವರೆ ಕೋಟಿ ರೂ.ಗಳನ್ನು ರಾಮನಗರ, ಯಾದಗಿರಿ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ರಿಸರ್ವ್ ಮಾಡಿಟ್ಟಿದ್ದೇವೆ. ಚಿಕ್ಕಬಳ್ಳಾಪುರದಲಿ ಲ್ಯಾಂಡ್ ಪ್ರಾಬ್ಲಮ್ solve ಆಗಿದೆ. ರಾಮನಗರ ಹಾಗೂ ಯಾದಗಿರಿಯಲ್ಲಿ ಲ್ಯಾಂಡ್ ಪ್ರಾಬ್ಲಮ್ solve ಆಗಬೇಕಿದೆ. ತಾವು ಹಾಗೂ ಜಿಲ್ಲಾಡಳಿತ ಸೇರಿ land issue ನ್ನು ಬಗೆಹರಿಸಿಕೊಟ್ಟರೆ ನಿಶ್ಚಿತವಾಗಿಯೂ ನಮ್ಮ ಇಲಾಖೆಯಲ್ಲಿ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಸಿದ್ಧವಿದೆ. ಈಗ ತಾಲ್ಲೂಕು ಅಸ್ಪತ್ರೆಗೆ 11 ಜನ ತಜ್ಞ ವೈದ್ಯರು ಹಾಗೂ 1 ದಂತ ವೈದ್ಯರ ಹುದ್ದೆ ಮಂಜೂರಾಗಿದ್ದು, ಆ ಪೈಕಿ 10 ತಜ್ಞ ವೈದ್ಯರು ಮತ್ತು 1 ದಂತ ವೈದ್ಯರ ಹುದ್ದೆಗಳು ಭರ್ತಿಯಾಗಿವೆ. 1 ಫಿಸಿಷಿಯನ್ ಹುದ್ದೆ ಮಾತ್ರ ಖಾಲಿಯಿದೆ. ಅದರಂತೆ 89 ಸಿಬ್ಬಂದಿ ವರ್ಗದಲ್ಲಿ 54 ಜನ ಕರ್ತವ್ಯ ನಿರ್ವಹಿಸುತ್ತಿದ್ದು, 35 ಹುದ್ದೆಗಳು ಖಾಲಿಯಿದೆ. ಈ ಖಾಲಿ ಹುದ್ದೆಗಳಲ್ಲಿ 28 ಹುದ್ದೆಗಳು ಗ್ರೂಪ್ 'ಡಿ' ಹುದ್ದೆಗಳಾಗಿದ್ದು ಇವುಗಳನ್ನು ಹೊರಗುತ್ತಿಗೆ ಮೇಲೆ ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ಕೊಡಲಾಗಿದೆ. ಆದರೂ ಕೂಡ ತಾವು ಅಪೇಕ್ಷೆ ಪಡುವ ರೀತಿಯಲ್ಲಿ ಜಿಲ್ಲಾ ಆಸ್ಪತ್ರೆ ಏನು ಬೇಕೋ ಅದಕ್ಕೆ ತಕ್ಕಂತೆ ಇಲ್ಲವೆಂದು ನಾನು ಕೂಡ ಒಪ್ಪುತ್ತೇನೆ. ಲ್ಯಾಂಡಿನ ಸಮಸ್ಯೆಯನ್ನು solve ಮಾಡಿಕೊಟ್ಟರೆ, ನಾಳೆಯೇ ನಾವು-ನೀವು ಸೇರಿ land breaking ceremony ಮಾಡಬಹುದು. Land issue solve ಆದರೆ ಕಟ್ಟಡ ಮಾಡುವುದಕ್ಕೆ ಪ್ರಾರಂಭ ಮಾಡಬಹುದು.

ಡಾ|| ಮಾಲಕರೆಡ್ಡಿ ಎ.ಬಿ.: ಸಚಿವರ ಹತ್ತಿರ ಸರಿಯಾದ ಮಾಹಿತಿ ಇರುವ ಹಾಗೆ ಕಾಣುವುದಿಲ್ಲ. ಸ್ಥಳಕ್ಕೆ ಸಂಬಂಧಿಸಿದಂತೆ ನಾವು, ಡಿ.ಸಿ.ಯವರು ಕುಳಿತು finalize ಮಾಡಿ 6 ತಿಂಗಳಾಯಿತು. ಫೌಂಡೇಷನ್ ಹಾಕಿದ ಕೂಡಲೇ ಕಟ್ಟಡ ಕೆಲಸವನ್ನು ಪ್ರಾರಂಭ ಮಾಡಬೇಕಿತ್ತು. ಏಕೆ ಮಾಡಲಿಲ್ಲ? ಎರಡನೆಯದಾಗಿ ಇದ್ದ ಕಟ್ಟಡದಲ್ಲೇ, ಲಭ್ಯವಿರುವ ಸಿಬ್ಬಂದಿಯಲ್ಲೇ ಸಾಕಷ್ಟು ಸೌಲಭ್ಯಗಳನ್ನು ಸರ್ಕಾರವು ಕೊಡಬಹುದಿತ್ತು. ಏಕೆ ಕೊಡುತ್ತಿಲ್ಲ? 21 ಲಕ್ಷ ರೂ.ಗಳನ್ನೇ ಈಗಲೂ ಇಟ್ಟಿದ್ದೀರಿ. ಹಣ ಕೊಡುವುದಕ್ಕೆ ಏನು ಸಮಸ್ಯೆ?

ಶ್ರೀ ಅರವಿಂದ ಲಿಂಬಾವಳಿ: ಮೊದಲನೆಯದಾಗಿ land issue solve ಆದರೆ ಕೂಡಲೇ ಕಟ್ಟಡ ಕೆಲಸ ಪ್ರಾರಂಭ ಮಾಡುತ್ತೇವೆ. ಎರಡನೆಯದಾಗಿ ಜಿಲ್ಲಾ ಆಸ್ಪತ್ರೆ ಎಂದು ಟ್ರೀಟ್ ಮಾಡಿ, ಈಗಿರುವ ಆಸ್ಪತ್ರೆಯಲ್ಲಿ ಏನೇನು ನ್ಯೂನತೆಗಳಿದೆಯೋ, ಅದನ್ನು ಸರಿಪಡಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಡಾ॥ ಮಾಲಕರೆಡ್ಡಿ ಎ.ಬಿ.: ಈಗಿರುವ ಕಟ್ಟಡ ಬಹಳ strong ಇದೆ. ಈ ಆಸ್ಪತ್ರೆ ಹಿಂದೆಯೇ ಸರ್ಕಾರದ 3 ಎಕರೆ ಜಾಗವಿದೆ, ಅದು ಸಾಕಲ್ಲವೇ?

ಶ್ರೀ ಅರವಿಂದ ಲಿಂಬಾವಳಿ: land issue ಇತ್ಯರ್ಥವಾಗಲಿ, ಎಲ್ಲಾ ಸಮಸ್ಯೆ ಬಗೆಹರಿಯುತ್ತದೆ.

ಅಧ್ಯಕ್ಷರು: ಮಾಲಕರೆಡ್ಡಿಯವರೇ, ಅರ್ಥ ಮಾಡಿಕೊಳ್ಳಿ

ಡಾ॥ ಮಾಲಕರೆಡ್ಡಿ ಎ.ಬಿ.: ಮಾಹಿತಿ ಅಲ್ಲ, ಸ್ಥಳಾವಕಾಶ ಇದೆ. ಆದರೆ, ನಿಮಗೆ ಕೆಲಸ ಮಾಡುವುದಕ್ಕೆ political will ಇಲ್ಲ.

ಶ್ರೀ ಅರವಿಂದ ಲಿಂಬಾವಳಿ: ನಮಗೆ ಕೆಲಸ ಮಾಡುವುದಕ್ಕೆ political will ನಮ್ಮ ಸರ್ಕಾರಕ್ಕಿದೆ. ಖಂಡಿತವಾಗಿಯೂ ಕೆಲಸ ಮಾಡುತ್ತೇವೆ.

ಆಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ದಿನಾಂಕ 25-07-2012ರ 3ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 125 ಪ್ರಶ್ನೆಗಳ ಪೈಕಿ 97 ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ-1)

ಅಧ್ಯಕ್ಷರು: ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

I. ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿ) ಅವರು: ಮಾನ್ಯ ಅಧ್ಯಕ್ಷರೆ,

1976 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ ಕಲಂ 47(ಎ)ರ ಮೇರೆಗೆ:

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2011–12ನೇ ಸಾಲಿನ ವಾರ್ಷಿಕ ವರದಿ.

ಕಂಪನಿ ಕಾಯ್ದೆ 1956ರ ಪರಿಚ್ಛೇದ 619(ಎ)ರ ಮೇರೆಗೆ

1. ಕರ್ನಾಟಕ ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆ (ಕೆಬಿಟ್ಸ್) 2009–10 ಮತ್ತು 2010–11ನೇ ಸಾಲಿನ ವಾರ್ಷಿಕ ವರದಿ.

ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 25(4)ರ ಪ್ರಕಾರ

1. ಕರ್ನಾಟಕ ಮಾಹಿತಿ ಆಯೋಗದ 2010–11ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

II. ಶ್ರೀ ಕೆ. ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿ): ರವರ ಪರವಾಗಿ

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ರ ಮೇರೆಗೆ:

1. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

III. ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿ): ರವರ ಪರವಾಗಿ

1950ರ ರಸ್ತೆ ಸಾರಿಗೆ ಸಂಸ್ಥೆ ಅಧಿನಿಯಮ ಕಲಂ 35(2) ಮತ್ತು 33(4)ರ ಪ್ರಕರಣದ ಮೇರೆಗೆ:

1. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2010–11ನೇ ಸಾಲಿನ ವಾರ್ಷಿಕ ಆಡಳಿತ ವರದಿ.

2. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

3. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 2010–11ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

IV. ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)ರವರ ಪರವಾಗಿ.

<u>1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 48(5)ಹಾಗೂ 49ರ ಪ್ರಕರಣದ ಮೇರೆಗೆ:</u>

1. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.
3. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.
4. ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.
5. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.
6. ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.
7. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.
8. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.
9. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.
10. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.
11. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.

12. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

13. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ.

<u>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾಯ್ದೆ 1973ರ ಕಲಂ 42ರ ಮೇರೆಗೆ:</u>

1. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ 2010-11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

<u>ಕರ್ನಾಟಕ ಪೌರನಿಗಮಗಳ ಅಧಿನಿಯಮ ಕಲಂ 99(10)ರ</u>

1. ಬೆಳಗಾವಿ ಮಹಾನಗರ ಪಾಲಿಕೆಯನ್ನು ವಿಸರ್ಜನೆಗೊಳಿಸಿ ಹೊರಡಿಸಲಾದ ಆದೇಶವನ್ನು ಮಂಡಿಸುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

V. ಶ್ರೀ ಸಿ. ಪಿ. ಯೋಗೀಶ್ವರ್ (ಅರಣ್ಯ ಸಚಿವರು) ರವರ ಪರವಾಗಿ

<u>ಕರ್ನಾಟಕ ಜೈವಿಕ ವೈವಿಧ್ಯ ನಿಯಮ 2005ರ ಕಲಂ 19(3)ರ ಮೇರೆಗೆ</u>

1. ಕರ್ನಾಟಕ ಜೀವವೈವಿಧ್ಯ ಮಂಡಳಿಯ 2010-11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

<u>ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ 1974ರ ಕಲಂ 40(7)ರ ಮೇರೆಗೆ:</u>

1. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 2008-09, 2009-10 ಮತ್ತು 2010-11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

<u>ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ:</u>

1. ಕರ್ನಾಟಕ ಪಲ್ಪ್‌ವುಡ್ ನಿಯಮಿತದ 2010-11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

VI. ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು) ರವರ ಪರವಾಗಿ

ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ

1. ಡಾ॥ ಬಾಬುಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ 2010-11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ 2009-10ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

VII. ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) ರವರ ಪರವಾಗಿ

ಕಾಡಾ ಅಧಿನಿಯಮ 1950ರ ಕಲಂ 25ರ ಮೇರೆಗೆ

1. ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ

1. ಕರ್ನಾಟಕ ನೀರಾವರಿ ನಿಗಮ ನಿಯಮಿತದ 2010-11ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

VIII. ಶ್ರೀ ಉಮೇಶ್ ವಿ ಕತ್ತಿ (ಕೃಷಿ ಸಚಿವರು) ರವರ ಪರವಾಗಿ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ 2009ರ ಕಲಂ 57 ಹಾಗೂ 43ರ ಮೇರೆಗೆ:

1. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 2008-09ನೇ ಲೆಕ್ಕಪರಿಶೋಧನಾ ವರದಿ ಮತ್ತು 2010-11ನೇ ಸಾಲಿನ ವಾರ್ಷಿಕ ವರದಿ.

2. ಕೃಷಿ ವಿಶ್ವವಿದ್ಯಾಲಯದ, ರಾಯಚೂರು, ಇದರ 2010-11ನೇ ಸಾಲಿನ ವಾರ್ಷಿಕ ವರದಿ.

3. ಕೃಷಿ ವಿಶ್ವವಿದ್ಯಾಲಯ ಧಾರವಾಡ, ಇದರ 2007–08 ಮತ್ತು 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಮಂಡಿಸುತ್ತೇನೆ.

ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ

1. ಕರ್ನಾಟಕ ರಾಜ್ಯ ಅಗ್ರೋಕಾರನ್ ಪ್ರಾಡಕ್ಟ್ ಲಿಮಿಟೆಡ್ 2010–11ನೇ ಸಾಲಿನ ವಾರ್ಷಿಕ ವರದಿ.

2. ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್‌ನ 2010–11ನೇ ಸಾಲಿನ ವಾರ್ಷಿಕ ವರದಿ.

3. ಕರ್ನಾಟಕ ರಾಜ್ಯ ಬೀಜ ಪ್ರಮಾಣ ಸಂಸ್ಥೆಯ 2010–11ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

IX. ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) ರವರ ಪರವಾಗಿ

1956ರ ಕಂಪನಿಗಳ ಅಧಿನಿಯಮದ 619 (ಎ) (2) ಪ್ರಕರಣದ ಮೇರೆಗೆ:

1. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ 2009–10ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕಾಯ್ದೆ 2004ರ ಕಲಂ 43ರ ಮೇರೆಗೆ

1. ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ್‌ನ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

X ಶ್ರೀಸಿ. ಟಿ. ರವಿ (ಉನ್ನತ ಶಿಕ್ಷಣ ಸಚಿವರು) ರವರ ಪರವಾಗಿ

1994ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಧಿನಿಯಮ ಕಲಂ 25(2)ರ ಮೇರೆಗೆ:

1. ಮೈಸೂರು ವಿಶ್ವವಿದ್ಯಾಲಯದ 2009–10ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಕಾಯ್ದೆ (ಕರ್ನಾಟಕ ಆಕ್ಟ್ 22 ಆಫ್ 1986)ರ ಮೇರೆಗೆ:

1. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯ 2010-11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

XI ಶ್ರೀ ವಿ ಸೋಮಣ್ಣ (ವಸತಿ ಸಚಿವರು) ರವರ ಪರವಾಗಿ

1962ರ ಕರ್ನಾಟಕ ಗೃಹ ಮಂಡಳಿಯ ಅಧಿನಿಯಮ ಪ್ರಕರಣ 55(3)ರ ಮೇರೆಗೆ

1. ಕರ್ನಾಟಕ ಗೃಹ ಮಂಡಳಿಯ 2010-11ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ತಪಾಸಣಾ ವರದಿ.

ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ

1. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ 2010-11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

\ XII ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ರವರ ಪರವಾಗಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ 2010-11ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

XIII ಶ್ರೀ ಕಳಸಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) ರವರ ಪರವಾಗಿ

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರ ಕಲಂ 65(2)ರ ಮೇರೆಗೆ

1. ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಛೇರಿಯ 2010-11ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು

3. ವಿತ್ತೀಯ ಕಾರ್ಯಕಲಾಪಗಳು

(ಅ) 2012-13ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಮಂಡಿಸುವುದು.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, 2012-13ನೇ ಸಾಲಿನ ಪೂರಕ ಅಂದಾಜುಗಳನ್ನು ಮಂಡಿಸುತ್ತಿದ್ದೇನೆ.

ಮಾನ್ಯರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ಈ ಕೆಳಗಿನ ಪ್ರಸ್ತಾವಗಳನ್ನು ಮಂಡಿಸುತ್ತಿದ್ದೇನೆ.

1. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಕೃಷಿ ಮತ್ತು ತೋಟಗಾರಿಕೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ .12 ಲಕ್ಷ ರೂ.ಗಳಿಗೆ ಮೀರಿದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.
2. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಪಶುಸಂಗೋಪನೆ ಮತ್ತು ಮೀನುಗಾರಿಕೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 7200.00 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1500.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.
3. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಆರ್ಥಿಕ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2221.48 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 220.68 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.
4. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 10510.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

5. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಒಳಾಡಳಿತ ಮತ್ತು ಸಾರಿಗೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1052.00 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 380.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

6. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಮೂಲಭೂತ ಸೌಕರ್ಯ ಅಭಿವೃದ್ಧಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 60.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

7. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 10759.64 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 45000.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

8. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 680.02 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ .01 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

9. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಸಹಕಾರ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 11297.00 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 400.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

10. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಸಮಾಜ ಕಲ್ಯಾಣ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ

ಲೆಕ್ಕದಲ್ಲಿ 6499.92 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

11. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 25890.79 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

12. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 400.00 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1359.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

13. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಆಹಾರ ಮತ್ತು ನಾಗರೀಕ ಸರಬರಾಜು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 10.52 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

14. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಕಂದಾಯ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 80918.83 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

15. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಮಾಹಿತಿ ತಂತ್ರಜ್ಞಾನ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1050.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

16. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಶಿಕ್ಷಣ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ

12315.11 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 20200.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

17. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ವಾಣಿಜ್ಯ ಮತ್ತು ಕೈಗಾರಿಕೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 4193.64 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 5052.34 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

18. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ನಗರಾಭಿವೃದ್ಧಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 5599.27 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

19. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಲೋಕೋಪಯೋಗಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 6000.00 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 82855.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

20. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಜಲ ಸಂಪನ್ಮೂಲ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 30.00 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 16974.07 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

21. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 780.04 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

22. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಕಾರ್ಮಿಕ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 369.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

23. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಇಂಧನ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 25.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

24. 2013ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 4000.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

ಅಧ್ಯಕ್ಷರು: ಮಂಡಿಸಲಾಯಿತು

(ಆ) 2012-13ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ

ಬೇಡಿಕೆ ಸಂಖ್ಯೆ: 02 ಪಶುಸಂಗೋಪನೆ ಮತ್ತು ಮೀನುಗಾರಿಕೆ

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಪಶುಸಂಗೋಪನೆ ಮತ್ತು ಮೀನುಗಾರಿಕೆ"** ಇದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 107701.16 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 163330.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾಪವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ: 17–ಶಿಕ್ಷಣ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ "ಶಿಕ್ಷಣ" ಇದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 31387.30 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 1486031.22 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾಪವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ: 23–ಕಾರ್ಮಿಕ

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) (ಕಾರ್ಮಿಕ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31 ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ "ಕಾರ್ಮಿಕ" ಇದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 53658.97 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 2200.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆಯ ಸಂಖ್ಯೆ: 10–ಸಮಾಜ ಕಲ್ಯಾಣ ಇಲಾಖೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಸಮಾಜ ಕಲ್ಯಾಣ ಇಲಾಖೆಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಗದಲ್ಲಿ ಬರುವ "ಸಮಾಜ ಕಲ್ಯಾಣ ಇಲಾಖೆ " ಇದಕ್ಕೆ ಸಂಬಂಧಿಸಿದಂತೆ ಸಂದಾಯ

ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 351781.86 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 47495.62 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಬೇಡಿಕೆಗಳನ್ನು ಮಂಡಿಸಲು ಸಚಿವರು ಇಲ್ಲದಿದ್ದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ :– ಹಾಗಿದ್ದರೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇಲ್ಲವೇ?

ಅಧ್ಯಕ್ಷರು:– ಅವರು ಅನಾರೋಗ್ಯವೆಂದು ಪತ್ರವನ್ನು ಕೊಟ್ಟಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ:– ಬೇಡಿಕೆಗಳನ್ನು ಮಂಡನೆ ಮಾಡುವುದು ಮಹತ್ತರವಾದ ಕಾರ್ಯಕ್ರಮ. ಅದಕ್ಕೇ ಸಚಿವರು ಇಲ್ಲದಿದ್ದರೆ ಹೇಗೆ? ಬೇಡಿಕೆಗಳನ್ನು ಒಪ್ಪಿಗೆ ಕೊಡಿಯೆಂದು ಕೇಳುವ ಸಂದರ್ಭದಲ್ಲಿ ಸಚಿವರು ಇರಬೇಕು. ಕೇಳದೆಯೇ ಯಾರಾದರೂ ದುಡ್ಡನ್ನು ಕೊಡುತ್ತಾರೆಯೇ ?

ಅಧ್ಯಕ್ಷರು:– ನಾನು ಬೇರೆ ಸಚಿವರದ್ದನ್ನು ಹೇಳುತ್ತಿಲ್ಲ. ಆದರೆ Parliamentary Affairs ಸಚಿವರು ವೈದ್ಯರ ಹತ್ತಿರ ಹೋಗಬೇಕು ಎಂದು ಪತ್ರವನ್ನು ಬರೆದು ಅನುಮತಿ ಕೋರಿದ್ದಾರೆ. ಹಣಕಾಸು ಸಚಿವರು ಹಾಗೂ ಮುಖ್ಯಮಂತ್ರಿಯವರು ಇದ್ದಾರಲ್ಲಾ?

ಶ್ರೀ ಟಿ.ಬಿ. ಜಯಚಂದ್ರ: ಹಣಕಾಸು ಸಚಿವರಿಗಿಂತಾ ಹೆಚ್ಚಾಗಿ ಇಲಾಖೆಯ ಮುಖ್ಯಸ್ಥರು ಇರಬೇಕು. ಮುಖ್ಯಮಂತ್ರಿಯವರ ಪರವಾಗಿ ಕೆಲಸ ಮಾಡುವಂಥವರು ಮಂತ್ರಿಗಳು. ಒಂದು ವರ್ಷಕ್ಕೆ ಖರ್ಚು ಮಾಡುವುದಕ್ಕೆ ಕೇಳದೆಯೇ ದುಡ್ಡನ್ನು ಕೊಟ್ಟರೆ ಇನ್ನು ಇವರು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಾರೆ? ಆದ್ದರಿಂದ ಕೊನೆಯ ಪಕ್ಷ ಕೇಳಿಯಾದರೂ ಒಪ್ಪಿಗೆ ಪಡೆಯುವಂಥ ಕೆಲಸವನ್ನು ಮಾಡಬೇಕು.

ಬೇಡಿಕೆಯ ಸಂಖ್ಯೆ: 16 – ವಸತಿ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು), (ವಸತಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ: 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ "ವಸತಿ ಇಲಾಖೆ" ಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 148787.83 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 667.79ಲಕ್ಷ ರೂಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆಯ ಸಂಖ್ಯೆ: 08:– ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) **(ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ)** ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ "ಅರಣ್ಯ ಜೀವಿ ಶಾಸ್ತ್ರ ಮತ್ತು ಪರಿಸರ ಇಲಾಖೆ" ಇದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 79973.66 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 2060.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾಪವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ: 22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶ್ರೀ ಅರವಿಂದ ಲಿಂಬಾವಳಿ **(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)** ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಆರೋಗ್ಯ ಮತ್ತು ಕುಟಂಬ ಕಲ್ಯಾಣ ಇಲಾಖೆ"** ಇದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು

ವಹಿಸಲು ಸರ್ಕಾರಕ್ಕೆ ರಾಜಸ್ವದ ಖಾತೆಯಲ್ಲಿ 394950.21 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 38197.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವನ್ನು ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆಯ ಸಂಖ್ಯೆ: 25 – ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) **(ಕನ್ನಡ ಮತ್ತು ಸಂಸ್ಕೃತಿ ಸಚಿವರ** ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಕನ್ನಡ ಮತ್ತು ಸಂಸ್ಕೃತಿ ಇಲಾಖೆ"** ಇದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1550.00 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 27258.69 ಲಕ್ಷ ರೂ.ಗಳಿಗೆ ಮೀರಿದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆಯ ಸಂಖ್ಯೆ: 18–ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಶ್ರೀ ಮುರುಗೇಶ್ ನಿರಾಣಿ **(ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ ಸಚಿವರು)** ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ"** ಇದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 126936.95 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 25846.67 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆಯ ಸಂಖ್ಯೆ: 06–ಮೂಲಭೂತ ಸೌಕರ್ಯ ಮತ್ತು ಅಭಿವೃದ್ಧಿ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಮೂಲಭೂತ ಸೌಕರ್ಯ ಮತ್ತು ಅಭಿವೃದ್ಧಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ "ಮೂಲಭೂತ ಸೌಕರ್ಯ ಮತ್ತು ಅಭಿವೃದ್ಧಿ ಇಲಾಖೆ" ಇದಕ್ಕೆ ಸಂಬಂಧಿಸದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1855.00 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 66900.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 26– ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 22267.93 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 43420.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜುರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 19 – ನಗರಾಭಿವೃದ್ಧಿ

ಶ್ರೀ ಸೊಗಡು ಶಿವಣ್ಣ (ಪರಿಸರ, ಜೀವಿಶಾಸ್ತ್ರ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) ನಗರಾಭಿವೃದ್ಧಿ ಇಲಾಖೆ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ: ರಾಜ್ಯಪಾಲರ

ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 621317.40 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 156282.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜುರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 27 – ಕಾನೂನು

ಶ್ರೀ ಸೊಗಡು ಶಿವಣ್ಣ (ಪರಿಸರ, ಜೀವಿಶಾಸ್ತ್ರ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) (ಕಾನೂನು ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾನೂನು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 45978.08 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 28– ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ಶ್ರೀ ಸೊಗಡು ಶಿವಣ್ಣ (ಪರಿಸರ, ಜೀವಿಶಾಸ್ತ್ರ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12457.66 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೊರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವನೆ ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 05– ಒಳಾಡಳಿತ ಮತ್ತು ಸಾರಿಗೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಶಿಕ್ಷಣ ಪ್ರೌಢ ಸಚಿವರು) ಒಳಾಡಳಿತ ಮತ್ತು ಸಾರಿಗೆ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ ಮತ್ತು ಸಾರಿಗೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 335513.13 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 29891.81 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ : 20 –ಲೋಕೋಪಯೋಗಿ

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 194931.23 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 330010.97 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 21– ಜಲಸಂಪನ್ಮೂಲ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಜಲ ಸಂಪನ್ಮೂಲ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಲಸಂಪನ್ಮೂಲ"

ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 98243.45 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 638857.48 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 11–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಶ್ರೀ ಕಳಕಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 279453.57 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 12099.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 03– ಆರ್ಥಿಕ

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರ್ಥಿಕ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1172557.72 ಲಕ್ಷ ರೂ. ಗಳು ಮತ್ತು ಬಂಡವಾಳ ಖಾತೆಯಲ್ಲಿ 447.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

<u>**ಬೇಡಿಕೆ ಸಂಖ್ಯೆ: 04– ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ**</u>

ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 48603.47 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 900.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

<u>**ಬೇಡಿಕೆ ಸಂಖ್ಯೆ: 12– ವಾರ್ತಾ, ಪ್ರವಾಸೋದ್ಯಮ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ**</u>

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) (ಪ್ರವಾಸೋದ್ಯಮ ಇಲಾಖೆ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 29435.11 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 20801.21 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

<u>**ಬೇಡಿಕೆ ಸಂಖ್ಯೆ: 15– ಮಾಹಿತಿ ತಂತ್ರಜ್ಞಾನ**</u>

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31ನೇ ಮಾರ್ಚ್ 2013 ರಂದು ಕೊನೆಗೊಳ್ಳುವ ಅರ್ಥಿಕ ವರ್ಷದಲ್ಲಿ " ಮಾಹಿತಿ ತಂತ್ರಜ್ಞಾನ" ಇದಕ್ಕೆ ಸಂಬಂಧಿಸಿದ

ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10713.12ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 1947.00 ಲಕ್ಷ ರೂ. ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸಾವನೆ ಮಂಡಿಸಲಾಯಿತು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ: ರೈತರ ಸಾಲ ಮನ್ನಾ ಬಗ್ಗೆ:-

ಶ್ರೀ ಟಿ. ಬಿ. ಜಯಚಂದ್ರ (ಶಿರಾ): ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಗಿಂತ ಮುಂಚೆ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಅದೇನೆಂದರೆ, ಬಹಳ ಮುಖ್ಯವಾಗಿರುವಂತಹ ವಿಚಾರ, ನಿನ್ನೆ ದಿವಸ ಮಾನ್ಯ ಸಚಿವರು ಉತ್ತರ ಕೊಡುವ ಸಂದರ್ಭದಲ್ಲಿ ಸರ್ಕಾರ ರೈತರ ಪರವಾಗಿರುವಂಥ ಕೆಲವು ಘೋಷಣೆಗಳನ್ನು ಮಾಡಿದ್ದಾರೆ. ಆದರೆ ನಾವು ಇವತ್ತು ನಿಮ್ಮ ಘೋಷಣೆಯಲ್ಲಿ ಎಲ್ಲೋ ಒಂದು ಲೋಪ ಇದೆ ಎನ್ನುವ ಕಾರಣಕ್ಕೋಸ್ಕರ ನಾವು ಪ್ರತಿಭಟನೆ ಮಾಡಿ ಹೊರಗಡೆ ಹೋಗುವ ಕೆಲಸ ಮಾಡಿದೆವು. ಪ್ರಜಾತಂತ್ರ ವ್ಯವಸ್ಥೆಯಲ್ಲಿರುವುದಕ್ಕೆ ಅನುಗುಣವಾಗಿ ನಾವು ನಡೆದಿದ್ದೇವೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾದಾಗ ಅವರ ಹೇಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ರಾಜ್ಯದ ಎಲ್ಲಾ ರೈತರ ಕೃಷಿ ಸಹಕಾರ ಸಂಘದ ಬೆಳೆ ಸಾಲಗಳನ್ನು ಬಡ್ಡಿ ಸೇರಿದಂತೆ 25 ಸಾವಿರ ರೂಪಾಯಿಯವರೆಗೆ ಮನ್ನಾ ಮಾಡಲು ನಿರ್ಧರಿಸಿದ್ದೇವೆ. ಈ ವಿಶೇಷ ಯೋಜನೆ ಆಗಸ್ಟ್-1-2011 ರಿಂದ ಜೂನ್-30-2012ರವರೆಗೆ ವಿಸ್ತರಣೆ ಮಾಡಿದ ಸಾಲಗಳನ್ನು ಮರುಪಾವತಿ ಮಾಡದೇ ಈವರೆಗೆ ಉಳಿದಿರುವ ಸಾಲಕ್ಕೆ ಅನ್ವಯ ಮಾಡಲಾಗುತ್ತದೆ ಎಂದು ಹೇಳುವಾಗ, ಈ ವಿಶೇಷ ಯೋಜನೆಯಿಂದ 16 ಲಕ್ಷ ಜನ ರೈತರಿಗೆ ಸಹಾಯ ಆಗುತ್ತದೆ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ನಾನು ಒಂದು ವಿಚಾರವನ್ನು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ, 16 ಲಕ್ಷ ಜನರಿಗೆ ಸಹಾಯ ಆಗುತ್ತದೆ ಎಂದು ಹೇಳಿರುವುದರಿಂದ ನಿಮ್ಮಷ್ಟೇ ಸಂತೋಷ ನಮಗೂ ಆಗುತ್ತದೆ. ಆದರೆ ನೀವು ಸರ್ಕಾರಿ ಆದೇಶವನ್ನು ಶೀಘ್ರವೇ ಹೊರಡಿಸುತ್ತೇವೆ ಎಂದು ಹೇಳಿದ್ದೀರಿ, ಆದೇಶ ಆಗಿಲ್ಲದೇ ಇರುವ ಹಿನ್ನೆಲೆಯಲ್ಲಿ ಈ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ

ತರಬೇಕಾಗಿರುವುದು ನನ್ನ ಜವಾಬ್ದಾರಿಕೆಯಾಗಿರುವ ಕಾರಣದಿಂದ ಹೇಳುತ್ತಿದ್ದೇನೆ. ಹೋದ ವರ್ಷ 2011 ರಲ್ಲಿ ಮಳೆ ಪ್ರಾರಂಭವಾಗಿದ್ದು ಯಾವಾಗ? Monsoon ಮುಂಗಾರು set in ಆಗಿದ್ದು ಜೂನ್ 6ನೇ ತಾರೀಖಿನಿಂದ, ಜೂನ್ 6ನೇ ತಾರೀಖು ಒಳ್ಳೆಯ ಮಳೆ ಆಯಿತು. ಮುಂಗಾರು ಬಿತ್ತನೆ ಕಾರ್ಯಕ್ರಮ ಪ್ರಾರಂಭ ಆಗುವಂಥ ಸಂದರ್ಭದಲ್ಲಿ ಸಾಲಗಳನ್ನು ಕೊಡುತ್ತಾರೆ. ಜೂನ್ ಮತ್ತು ಜುಲೈ ಒಳಗಾಗಿ ಎಲ್ಲರೂ ಕೂಡಾ ಸಾಲವನ್ನು ಪಡೆದು ಬಿತ್ತನೆ ಕಾರ್ಯಕ್ರಮಕ್ಕೆ ಹಣವನ್ನು ಉಪಯೋಗಿಸಿಕೊಳ್ಳುತ್ತಾರೆ. ಜೂನ್ ಮೊದಲನೇ ವಾರದಲ್ಲಿ ಮುಂಗಾರು ಹಂಗಾಮಿನಲ್ಲಿ ಕೃಷಿ ಚಟುವಟಿಕೆ ಪ್ರಾರಂಭವಾಗುವುದು. ಜೂನ್ ಮೊದಲನೇ ವಾರದಲ್ಲಿ ಪ್ರಾರಂಭವಾದಾಗ ಆ ಸಂಭರ್ದದಲ್ಲಿ ಅದಕ್ಕೆ ನೀವು ಸಾಲ ಪಡೆದುಕೊಳ್ಳುವುದು. ಆದರೆ, ನೀವು ಹಾಕಿರುವ ನಿಬಂಧನೆ ಆಗಸ್ಟ್-1 ಎಂದು ಹೇಳಿದ್ದೀರಿ, ಆಗಸ್ಟ್ -1ರಲ್ಲಿ ನನಗೆ ಗೊತ್ತಿರುವ ಮಟ್ಟಿಗೆ ಅಷ್ಟೊತ್ತಿಗಾಗಲೇ ಅದು Due ಆಗಿರುತ್ತದೆ. ಹೀಗಾಗಿ ನೀವು ಎಲ್ಲೋ ಒಂದು ಕಡೆಗೆ ಅಧಿಕಾರಿಗಳು ಅದನ್ನು ತಿರುಚಿ ಆದೇಶವನ್ನು ಮಾಡಬೇಕಾದಾಗ ವ್ಯತ್ಯಾಸವನ್ನು ಮಾಡಬಾರದು ಎನ್ನುವ ಕಾರಣಕ್ಕೋಸ್ಕರ, ಒಂದು ಬಾರಿ ಆದೇಶವಾದರೆ, ಆ ಆದೇಶವನ್ನು ಮಾರ್ಪಾಡು ಮಾಡುವುದು ಅಷ್ಟು ಸುಲಭವಾಗುವುದಿಲ್ಲ. ಬಹಳ ರೀತಿಯಾದ ಒತ್ತಡ ಬರುತ್ತದೆ. ಹಣಕಾಸು ಇಲಾಖೆ ಮೇಲೆ ಒತ್ತಡ ಬರುತ್ತದೆ. ಆ ಕಾರಣಕ್ಕೋಸ್ಕರ ಮುಂಗಾರು ಹಂಗಾಮು ಪ್ರಾರಂಭವಾಗಿರುವುದು ಜೂನ್ 6ನೇ ತಾರೀಖು, ಬಿತ್ತನೆ ಕಾರ್ಯಕ್ರಮ ಜೂನ್ ಮೊದಲನೇ ವಾರದಿಂದ 15 ದಿವಸಗಳಲ್ಲಿ ಪ್ರಾರಂಭವಾಯಿತು. ಹೀಗಾಗಿ ಸಾಲವನ್ನು ಪಡೆದಿರುವ ದಿನಾಂಕ ಜೂನ್‌ನಿಂದ ಮಾಡಿದ್ದಾರೆ, ಅದನ್ನು 1st or 5th June ಎಂದು ಮಾಡಿದರೆ, ಅಲ್ಲಿಂದ ಇಲ್ಲಿಯವರೆಗೆ ಅಂದರೆ ಬಾಕಿ ಉಳಿದಿರುವ insurance....

ಶ್ರೀ ಎಂ.ಬಿ. ಪಾಟೀಲ: 01.04.2011ರಿಂದ ಎಂದು ಆಗಬೇಕು.

ಶ್ರೀ ಟಿ.ಬಿ. ಜಯಚಂದ್ರ: ಯಾವಾಗ ಸಾಲ Due ಆಗುತ್ತದೆ? Due ಆಗುವುದಕ್ಕಿಂತ ಮುಂಚೆ inurance claim ಮಾಡುವುದಕ್ಕೋಸ್ಕರ ಎಲ್ಲಾ ರೈತರ ಸಾಲ ಕಟ್ಟದೇ ಇದ್ದರೂ ಕೂಡಾ, ಅದನ್ನು ಸಾಲ ಬಂದಂತೆ ರಸೀದಿ ಹಾಕಿಸುವ ಪದ್ಧತಿ ಇದ್ದೇ ಇದೆ. ಇದು ಮೊಸದ ಪದ್ಧತಿಯಾದರೂ ಕೂಡಾ ಸಹಕಾರಿ ಬ್ಯಾಂಕುಗಳಲ್ಲಿ ನಡೆಯುತ್ತಿದೆ. ಹೀಗಾಗಿ ತೀರುವಳಿ ಆಗುತ್ತಿದೆ ಎಂದು ಮಾಡಿ, ಅದನ್ನು ಸಾಲ ಬಂದಿದೆ ಎಂದು ಮಾಡಿಕೊಳ್ಳುತ್ತಾರೆ. Actual ಆಗಿ accountಗೆ ಹಣ ಹೋಗಿರುತ್ತದೆ ಎಂದರೆ, accountಗೆ ಹಣ

ಹೋಗಿರುವುದಿಲ್ಲ. ಆದರೂ ಕೂಡ ತೀರುವಳಿಯನ್ನು ಮಾಡಿಕೊಂಡಿರುತ್ತಾರೆ. ಇದಕ್ಕೆ ಕಾರಣವೇನೆಂದರೆ Insurance claim ಮಾಡುವುದಕ್ಕೋಸ್ಕರ ರೈತರು ಮಾಡಿಕೊಳ್ಳುವಂಥದ್ದು, ಈ ವರ್ಷವೂ ಕೂಡ ವಾಸ್ತವಿಕವಾದ ಸಂಗತಿ ಹೇಳುತ್ತೇನೆ. ಈ ವರ್ಷ ಜೂನ್-30 ರವರೆಗೂ ಇವತ್ತು ಅವಕಾಶವನ್ನು ಕೊಟ್ಟಿದ್ದಾರೆ. ಜೂನ್ 30ರಲ್ಲಿ ನಮಗೆ Insurance date extend ಆಗಿರುವುದು ಜೂನ್-20ರವರೆಗೂ, ಜುಲೈ 20ರವರೆಗೂ ಕೂಡಾ extend ಆಯಿತು. ನಾವು ನಿನ್ನೆವರೆಗೂ ಏನು ತಿಳಿದಿದ್ದೇವೆ ಎಂದರೆ ಜುಲೈ ಕೊನೆವರೆಗೂ ಕೂಡಾ ಬಿತ್ತನೆ ಕಾರ್ಯಕ್ರಮ ನಡೆಯುತ್ತಿರುತ್ತದೆ. ಮುಂಗಾರು ಹಂಗಾಮು ಬಿತ್ತನೆ ಕಾರ್ಯಕ್ರಮ ಜುಲೈ 30ರವರೆಗೂ ನಿರಂತರವಾಗಿ ನಡೆಯುತ್ತದೆ. ಆ ಕಾರಣಕ್ಕೋಸ್ಕರ ಜುಲೈ 30 ರವರೆಗೂ ಮಾಡಬೇಕು. ನನ್ನ ಬೇಡಿಕೆ ಏನೆಂದರೆ, ಜೂನ್-1 ಮಳೆ ಪ್ರಾರಂಭವಾಗುವುದು, 1- ಜೂನ್-2011ರಿಂದ ಜುಲೈ-30-2012 ರವರೆಗೂ ನೀವು ತೆಗೆದುಕೊಂಡಿರುವ ಸಾಲಗಳು ಎಂದು ಮಾಡುವುದರ ಜೊತೆಗೆ ನೀವು ಒಂದೇ ಒಂದು ಒಕ್ಕಣೆಯನ್ನು ಇಟ್ಟಿದ್ದೀರಿ, ಸಾಲಗಳನ್ನು ಮರುಪಾವತಿ ಮಾಡದೇ ಇರುವುದು, ಖಂಡಿತ ಅಧ್ಯಕ್ಷರೆ, ಯಾರೂ ಕೂಡಾ ಸಾಲಗಳನ್ನು ಮರುಪಾವತಿ ಮಾಡುವುದಿಲ್ಲ. ಆದರೆ ತೀರುವಳಿ ಆಗಿದೆ ಎಂದು ರಸೀದಿಯನ್ನು ಹಾಕಿಸಿಕೊಂಡಿರುತ್ತಾರೆ. Actual ಆಗಿ ಹಣ ಜಮಾ ಆಗಿರುವುದಿಲ್ಲ. ಅದನ್ನು ಸೊಸೈಟಿಯಲ್ಲಿ 15 ದಿವಸ, ತಿಂಗಳು ಇಟ್ಟುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಆ ಕಾರಣಕ್ಕೋಸ್ಕರ ಅದು ಸರ್ಕಾರಕ್ಕೆ ಜಮಾ ಆಗಿರುವುದಿಲ್ಲ. ನಾನು ಹೇಳಿರುವಂಥ ವಿಚಾರದಲ್ಲಿ ನಿಮಗೇನಾದರೂ ಅನುಮಾನವಿದ್ದರೆ, ನಿಮ್ಮ ಅಧಿಕಾರಿಗಳನ್ನು ಕರೆಸಿ ವಿಚಾರ ಮಾಡಿಸಿ. ಸೊಸೈಟಿಯಲ್ಲಿ 15 ದಿವಸ, 1 ತಿಂಗಳವರೆಗೂ ಹಣ ಇಟ್ಟುಕೊಂಡಿರುತ್ತಾರೆ. ಆಮೇಲೆ ಜಮಾ ಮಾಡುವ ಕೆಲಸ ಮಾಡುತ್ತಾರೆ. ಹಾಗಾಗಿ ಇಲ್ಲಿಯವರೆಗೂ ಸಾಲ ಯಾರೂ ಕೂಡಾ ತೀರುವಳಿ ಮಾಡಿಲ್ಲ. ಎಲ್ಲರ ಸಾಲವೂ ಕೂಡಾ ಸುಸ್ತಿಯಿದೆ, ಕೇವಲ ಸೊಸೈಟಿಯಲ್ಲಿ ತೀರುವಳಿ ಪತ್ರ ಎನ್ನುವ ರಸೀದಿಯನ್ನು ತೆಗೆದುಕೊಂಡಿರುತ್ತಾರೆ. ಸಾಲವನ್ನು ಮನ್ನಾ ಮಾಡುವುದು ಒಳ್ಳೆಯ ತೀರ್ಮಾನ. ಆದರೆ date ಅನ್ನು extend ಮಾಡಿದಾಗ ಎಲ್ಲೋ ಒಂದು ಕಡೆಗೆ 16 ಲಕ್ಷ ಜನ ರೈತರಿಗೂ ಕೂಡಾ ಸಹಾಯವಾಗುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಆದೇಶ ಮಾಡುವುದಕ್ಕಿಂತ ಮುಂಚೆ ಇದನ್ನು ಅಳವಡಿಸುವ ಕೆಲಸ ಆಗಬೇಕು.

ಅಧ್ಯಕ್ಷರೆ, ಒಂದು ಸಂದೇಶ ಹೋಗುತ್ತಿದೆ. ಸಾಲ ಮನ್ನಾ ಮಾಡಿದ ಮೇಲೆ ಎಲ್ಲಾ ಸಹಕಾರಿ ಬ್ಯಾಂಕುಗಳು ಹರಾಜಾಗುತ್ತವೆ, ಸರ್ಕಾರದವರು ಸಕಾಲಕ್ಕೆ ಹಣ ಜಮಾ

ಮಾಡುವುದಿಲ್ಲ ಎಂಬ ಮಾತಿದೆ. ಹಾಗಾಗಿ ಸಾಲ ಕೊಡುವುದಕ್ಕೆ ಯಾರೂ ಧೈರ್ಯ ಮಾಡುವುದಿಲ್ಲ. ಅದು ವಾಸ್ತವಿಕವಾದ ಸಂಗತಿ ಕೂಡಾ. ಹಾಗಾಗಿ ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡುವ ಜನರಿಗೂ benefit ಆಗಬೇಕು. ಎಲ್ಲರಿಗೂ ಗೊತ್ತಿರುವಂತಹ 123 ತಾಲ್ಲೂಕುಗಳಲ್ಲಿ ಬರ, ಈ ವರ್ಷ 146 ತಾಲ್ಲೂಕುಗಳಲ್ಲಿ ಬರ. ಈ ಹಿನ್ನೆಲೆಯಲ್ಲಿ ಪ್ರಾಮಾಣಿಕವಾಗಿ ತಮ್ಮ ಮರ್ಯಾದೆಗಾಗಿ ಸಾಲ ಕಟ್ಟಿರುವವರಿಗೂ ಕೂಡಾ ಅದು ಲಾಭವಾಗದಿದ್ದರೆ ಹೇಗೆ? ಅವರು ಸಾಲವೋ, ಒಡವೆಯನ್ನೋ ಒತ್ತೆ ಇಟ್ಟು ತಂದು ಮಾಡಿರುತ್ತಾರೆಯೇ ವಿನಃ ಬೇರೆ ಯಾವ ರೀತಿಯಲ್ಲಿಯೂ ಮಾಡಲು ಆಗಿರುವುದಿಲ್ಲ. ದಯಮಾಡಿ ಮಾನವೀಯತೆ ದೃಷ್ಟಿಯಿಂದ ರೈತರ ಬಗ್ಗೆ ಕಳಕಳಿ ಇರುವವರು ತಾವು. ಅದನ್ನು ಯೋಚನೆ ಮಾಡಬೇಕು. ನನಗೆ ಒಂದು ಸಂತೋಷ ಅಧ್ಯಕ್ಷರೆ, ಶ್ರೀಮಾನ್ ಯಡಿಯೂರಪ್ಪ ನವರು ನಾನು ಮೇಜು ಕುಟ್ಟುವ ರೀತಿಯಲ್ಲಿ ತೀರ್ಮಾನವನ್ನು ಮಾಡಿಸುತ್ತೇನೆ, ಸರ್ಕಾರಕ್ಕೆ ಹೇಳುತ್ತೇನೆ ಎಂಬ ಮಾತನ್ನು ಹೇಳಿದ್ದಾರೆ. ಆದರೆ, ಮೇಜು ಕುಟ್ಟುವಾಗ ಕೈ ನೋವಾಗುವ ಮಟ್ಟಕ್ಕೆ ಆಗಿದೆ ಯಡಿಯೂರಪ್ಪನವರೆ, ದಯಮಾಡಿ ಈ date extend ಮಾಡಿಸಿದರೆ, ಜೂನ್ 1, 2011 ರಿಂದ ಜುಲೈ 30 ಇನ್ನು 5 ದಿನ ಇದೆ. ಇನ್ನುವರೆಗೂ ಬಿತ್ತನೆ ಕಾರ್ಯ ನಡೆಯುತ್ತಿದೆ. ಸಾಲ ವಿತರಣೆ ಮಾಡುತ್ತಿದ್ದಾರೆ. ಸಾಲ ತೆಗೆದುಕೊಂಡ ಮೇಲೂ ಕೂಡಾ ಅವರ account ನಲ್ಲಿ ದುಡ್ಡು ಇಟ್ಟುಕೊಂಡು ಇನ್ನುವರೆಗೂ ಬಿತ್ತನೆ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ದಯಮಾಡಿ. ಮಾನ್‌ಸೂನ್ ವ್ಯತ್ಯಾಸವಾಗಿರುವುದರಿಂದ ದಯಮಾಡಿ date relaxation ಮಾಡಿದರೆ ಸಂಪೂರ್ಣವಾಗಿ 16 ಲಕ್ಷ ರೈತರಿಗೂ ಕೂಡಾ ಆಗುತ್ತದೆ. ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡಿರುವ ರೈತರಿಗೂ ಆ ನಷ್ಟವನ್ನು ತುಂಬುವ ಕೆಲಸವನ್ನು ತಾವು ಮಾಡಬೇಕು. ಮುಖ್ಯಮಂತ್ರಿಗಳು ಇದನ್ನು ಯಾವುದೇ ರೀತಿಯಲ್ಲಿಯೂ ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಇವತ್ತು ಸಂಕಷ್ಟದಲ್ಲಿರುವ ರೈತನಿಗೆ ಸಮಾಧಾನ ತರುವುದು. ಯಡಿಯೂರಪ್ಪನವರು ನಿನ್ನೆ ಒಂದು ಮಾತನ್ನು ಹೇಳಿದರು. 75 ಲಕ್ಷ ಜನ ರೈತರಿದ್ದಾರೆನ್ನುವಾಗ ನಾವು benifit ಕೊಡುತ್ತಿರುವುದು ಕೇವಲ 16 ಲಕ್ಷ ರೈತರಿಗೆ ಮಾತ್ರ, ಇನ್ನು 50 ಲಕ್ಷ ಜನರಿಗೆ benifit ಕೊಡುತ್ತಿಲ್ಲ. ಸುವರ್ಣ ಭೂಮಿ ಯೋಜನೆಗೆ ದುಡ್ಡು ಕೊಡುತ್ತೇನೆಂದು ಹೇಳಿದ್ದೀರಿ. ಅದು ಸ್ವಲ್ಪ ಜನಕ್ಕೆ ಸಹಾಯವಾಗುತ್ತದೆ. ಇದರ ಜೊತೆಗೆ ಇದನ್ನು ನೀವು ಮಾಡಿದಾಗ ಕರಾರುವಾಕ್ಕಾಗಿ ಯಾವುದೇ ತೊಂದರೆ ಇಲ್ಲದೆ, ತಾರತಮ್ಯವಿಲ್ಲದೆ ಪ್ರಾಮಾಣಿಕವಾಗಿ ಸಾಲ ಮರುಪಾವತಿ

ಮಾಡಿದವರಿಗೂ ಕೂಡಾ ಈ benifit extend ಆಗಬೇಕೆಂದು ಸವಿನಯವಾಗಿ ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು: ಹೆಚ್.ಡಿ. ರೇವಣ್ಣನವರು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಮುಖ್ಯಮಂತ್ರಿಗಳು 01.08.2011 ರಿಂದ ಇಲ್ಲಿಯವರೆಗೆ 25 ಸಾವಿರ ರೂ. ಮನ್ನಾ ಮಾಡಲು ಆದೇಶ ನೀಡಿದ್ದಾರೆ. ಸಾಲ ಕಟ್ಟಲು ಮಾರ್ಚ್ 31st due date ಅದಾದ ಮೇಲೆ 01.04.2011, ಏಪ್ರಿಲ್ ಮೊದಲ ವಾರದಲ್ಲಿ ಹೊಸ ಸಾಲ ಕೊಡಲು ಪ್ರಾರಂಭವಾಗುತ್ತದೆ. ಕಷ್ಟ ಪಟ್ಟು ಸಾಲ ಕಟ್ಟಿ ಏಪ್ರಿಲ್, ಮೇ ತಿಂಗಳಿನಲ್ಲಿ ಜೂನ್, ಜುಲೈ, ಆಗಸ್ಟ್ ತಿಂಗಳಿನಲ್ಲಿ ಸಾಲ ಕೊಡುವುದು ರೂಢಿ. ಇದನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಏಪ್ರಿಲ್ 30 ಕ್ಕೆ ಸಾಲ ಕಟ್ಟುವುದು. 01.04.2011 ರಿಂದಲೇ ಯಾರು ಸಾಲ ತೆಗೆದುಕೊಂಡಿರುತ್ತಾರೆ, ಅವತ್ತಿನಿಂದಲೇ ಜಾರಿಗೆ ಬರಬೇಕೆಂದು ನಾನು ಮನವಿ ಮಾಡುತ್ತೇನೆ. ಇನ್ನು 2–3 ತಿಂಗಳಿಗೆ ಏನೂ ಆಗುವುದಿಲ್ಲ. 1 ಲಕ್ಷ, 2 ಲಕ್ಷ ರೈತರು ಸಿಗಬಹುದು. 16 ಲಕ್ಷ ಜನ ರೈತರಿಗೆ ಕೊಡುತ್ತೀರಿ, ಇನ್ನು 1, 2 ಲಕ್ಷ ಜನರಿಗೆ ಕೊಡಲು ಏನು ತೊಂದರೆ? ಇದು ಒಂದು ಭಾಗ. ಇನ್ನೊಂದು ಭಾಗದಲ್ಲಿ ಸರ್ಕಾರಿ ಆದೇಶ ಹೊರಡಿಸಿದ್ದಾರೆ. 1ಲಕ್ಷ ರೂ. ವರೆಗೆ 0% interest ರೂ. 1 ಲಕ್ಷದಿಂದ ರೂ. 3 ಲಕ್ಷದವರೆಗೆ 1% interest, 3 ಲಕ್ಷ ರೂ. ಮೇಲ್ಪಟ್ಟು ಸಾಲ ತೆಗೆದುಕೊಂಡರೆ 10 1/2 % interest rate ಇದೆ. ಯಾವ ರೈತ 4 ಎಕರೆಗಿಂತ ಕಡಿಮೆ ಜಮೀನು ಇರುವವರಿದ್ದಾರೆ? 3 ಲಕ್ಷ ರೂ. ನಲ್ಲಿ ಇವತ್ತಿನ ದಿನದಲ್ಲಿ ವ್ಯವಸಾಯ ಮಾಡಲು ಆಗುತ್ತದೆಯೇನು? ರೂ. 10 ಲಕ್ಷದವರೆಗೆ ಹೆಚ್ಚಿಸಿ ಎಂದು ಮನವಿ ಮಾಡಿದ್ದೇನೆ. ರೂ. 10 ಲಕ್ಷದವರೆಗೂ 1% interest ಮಾಡಿ ಎಂದು ಮನವಿ ಮಾಡುತ್ತಿದ್ದೇನೆ. ಇದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣಿಸಬೇಕು. ನಾನು ಬರಗಾಲದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಕೂಡಾ ಹೇಳಿದ್ದೇನೆ. ಇವತ್ತೂ ನಾನು ಒತ್ತಾಯ ಮಾಡುತ್ತೇನೆ. 01.04.2011 ರಿಂದಲೇ ಜಾರಿಗೆ ತರಬೇಕು. ಬೇಕಾದರೆ ನಿನ್ನೆಯವರೆಗೆ ಮಾಡಿ. Recovery 31 ರವರೆಗೆ ಮಾಡಿದರೆ ಇವತ್ತು ನಾಳೆಯವರೆಗೆ ಮಾಡಿದರೆ ಬೇಕಾದರೆ Secretary ಗಳು ಸಾಲ ಮಂಜೂರಾತಿ ಮಾಡಿಕೊಂಡು ಪುಕ್ಕಟೆ ದುಡ್ಡು ಸಿಗುತ್ತದೆಂದು ಮಾಡುವುದಕ್ಕೆ ಹೊರಡುತ್ತಾರೆ. ಅದನ್ನು ಸ್ವಲ್ಪ ಗಂಭೀರವಾಗಿ ಚಿಂತನೆ ಮಾಡಬೇಕು. ನಿನ್ನೆಯವರೆಗೆ ನೀವು ಮಾಡಿರುವುದು ಸರಿ.

ನಾಳೆ ನಾಡಿದ್ದರಲ್ಲಿ ಮಾಡಿದರೆ Secretaryಗಳು ರೂ. 10 ಸಾವಿರ, ರೂ. 20 ಸಾವಿರ ಮಾಡಿದರೂ ಎರಡೂವರೆ ಲಕ್ಷ ರೂ. ಸಿಗುತ್ತದೆ. ಈ ತಿಂಗಳ ಕೊನೆಯವರೆಗೆ ಮಾಡೋಣವೆನ್ನುವುದನ್ನು ನಾನು ಒಪ್ಪುವುದಿಲ್ಲ. ಯಾರೋ ನಾಲ್ಕು ಜನಕ್ಕೆ ದುಡ್ಡು ಹೊಡೆಯಲು ಅವಕಾಶವಾಗುತ್ತದೆ. ಮಾಡುವುದಾದರೆ ನಿನ್ನೆಯವರೆಗೆ ಮಾಡಿ. ಆದರೆ, 01.04.2011 ರಿಂದ 25 ಸಾವಿರ ರೂ. ಜಾರಿಗೆ ತರಬೇಕೆಂದು ಮನವಿ ಮಾಡುತ್ತೇನೆ. ಮತ್ತೆ ಏನು ಒಂದು ಸರ್ಕಾರಿ ಆದೇಶ ಹೊರಡಿಸಿದ್ದೀರಿ, 1ಲಕ್ಷ ರೂ. ವರೆಗೆ 0% ರೂ. 1ಲಕ್ಷದ ಮೇಲೆ ರೂ. 3 ಲಕ್ಷದವರೆಗೆ 1% ಎಂದು ಇದೆ, ರೂ. 3ಲಕ್ಷದ ಮೇಲೆ ಸಾಲ ಪಡೆದರೆ 10 1/2%, 13 1/2 % interest ಕಟ್ಟಬೇಕು. ಅದನ್ನು 0% ಅಥವಾ 1% ಮಾಡಿ. ರೈತರಿಗೆ ಈಗ ಮಳೆ ಬಾರದ ಕಾಲ. ಈ ಎರಡೂ ಬೇಡಿಕೆಗಳನ್ನು ಗಂಭೀರವಾಗಿ ಚಿಂತನೆ ಮಾಡಿ announce ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ. ಇದರ ಜೊತೆಗೆ ಮುಂಗಾರು-ಹಿಂಗಾರು ಬೆಳೆ ನಷ್ಟವಾಗಿದೆ, ಬೆಳೆ ಎಷ್ಟು ನಷ್ಟವಾಗಿದೆ ಎಂಬುದನ್ನು ಪತ್ತೆ ಹಚ್ಚಿ ಸಾಲ ಮನ್ನಾ ಮಾಡಿ. ರೈತರು ಬೆಳೆದ ಬೆಳೆ ಸಂಪೂರ್ಣವಾಗಿ ನಷ್ಟವಾಗಿದೆ. . ಬೆಳೆ ವಿಮೆಯಾದರೂ ಕೊಡಿ. ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ಕೊಡಬೇಕು. ಇನ್ನೊಂದು Nationalized Banks ಈಗ ಸದನದಲ್ಲಿ ಸಿದ್ದರಾಮಣ್ಣನವರು ಇಲ್ಲ. ಜಯಚಂದ್ರರವರು ಇದ್ದಾರೆ. ನೀವು ಈ ಕುರಿತು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು. ಸುಮ್ಮನೆ ರಾಜ್ಯ ಸರ್ಕಾರವನ್ನು ದೂರುವುದಲ್ಲ. ನಿನ್ನೆ ಪ್ರಧಾನ ಮಂತ್ರಿಗಳು ಕೆಲವು ರಾಜ್ಯಗಳನ್ನು ಬರಗಾಲವೆಂದು ಘೋಷಣೆ ಮಾಡುವುದಾಗಿ ಹೇಳಿದ್ದಾರೆ. ಅದರಲ್ಲಿ ಕರ್ನಾಟಕವನ್ನು ಬರಗಾಲ ಪೀಡಿತ ರಾಜ್ಯವೆಂದು ಘೋಷಣೆ ಮಾಡಿ, ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ನಾವು ಏನು Co-operative ಸಾಲ ಮನ್ನಾ ಮಾಡಿದ್ದೇವೆ, ಅದೇ ರೀತಿ ಕೇಂದ್ರ ಸರ್ಕಾರವೂ Nationalized Banks ಗಳ ಸಾಲಗಳನ್ನು ಮನ್ನಾ ಮಾಡಬೇಕೆಂದು ರಾಜ್ಯ ಸರ್ಕಾರ ನಿರ್ಣಯ ಮಾಡಬೇಕಾಗುತ್ತದೆ. ಆದುದರಿಂದ ತಾವು ದಯಮಾಡಿ ನಿರ್ಣಯವನ್ನು ಮಂಡಿಸಬೇಕೆಂದು ಸಭಾಧ್ಯಕ್ಷರ ಮೂಲಕ ನಾನು ಮನವಿ ಮಾಡುತ್ತೇನೆ. ಇಲ್ಲದಿದ್ದಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ ಎಂದು ನೇರವಾಗಿ ಹೇಳಬೇಕಾಗುತ್ತದೆ. ಆದುದರಿಂದ ಈ ನಿರ್ಣಯವನ್ನು ಇಂದು ಮಂಡಿಸುತ್ತೀರಿ ಎಂದು ಭಾವಿಸುತ್ತೇನೆ. ಇಲ್ಲ, ಬೇಡವೆಂದರೆ objection ಮಾಡಬೇಕೆಂದು ಇದ್ದರೆ ನಮ್ಮದೇನೂ ಇಲ್ಲ. ಅದಕ್ಕೂ ನಾವು ಸಹಮತಿ ಕೊಡುತ್ತೇವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಸೇರಿ ಈ ರಾಜ್ಯದ ರೈತರನ್ನು ಹಾಳು ಮಾಡುತ್ತಿದ್ದೀರಿ ಎಂಬ ಸಂದೇಶ ಜನತೆಗೆ

ಹೋಗುತ್ತದೆ. ಅದಕ್ಕಾಗಿ ದಯಮಾಡಿ ಕೇಂದ್ರ ಸರ್ಕಾರಕ್ಕೆ ಒಂದು ನಿರ್ಣಯ ಮಾಡಿ Nationalized Bankಗಳ ಎಲ್ಲಾ ಸಾಲವನ್ನು ಮನ್ನಾ ಮಾಡಬೇಕು. ರೂ.25 ಸಾವಿರ ಮಾಡುತ್ತೀರೋ, ರೂ.50 ಸಾವಿರ ಮಾಡುತ್ತೀರೋ ಕೇಂದ್ರ ಸರ್ಕಾರದವರು entire Nationalized Bank ಗಳ ಸಾಲ ಮನ್ನಾ ಮಾಡಬೇಕೆಂದು ಇವತ್ತು ಸದನದಲ್ಲಿ ಪಕ್ಷಾತೀತವಾಗಿ ನಿರ್ಣಯ ಮಾಡಬೇಕೆಂದು ವಿನಂತಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಶ್ರೀ ಲಕ್ಷ್ಮಣ ಸವದಿಯವರು ಮಾತನಾಡಿ.

ಶ್ರೀ ಟಿ.ಬಿ. ಜಯಚಂದ್ರ:– ಅಧ್ಯಕ್ಷರೆ, ಒಂದು ನಿಮಿಷ...

ಅಧ್ಯಕ್ಷರು: ಲಕ್ಷ್ಮಣ ಸವದಿಯವರು ಮಾತನಾಡಲಿ, ನಂತರ ತಾವು ಮಾತನಾಡಿ.

ಶ್ರೀ ಟಿ. ಬಿ. ಜಯಚಂದ್ರ: ಅಧ್ಯಕ್ಷರೆ, ಒಂದು ನಿಮಿಷ ನನ್ನ ಮಾತನ್ನು ಮುಗಿಸುತ್ತೇನೆ. ಪ್ರಧಾನ ಮಂತ್ರಿಗಳೂ ಕೂಡಾ ಈಗಾಗಲೇ ಕರ್ನಾಟಕದಲ್ಲಿರುವ ಬರಗಾಲದ ಬಗ್ಗೆ ತೀವ್ರವಾಗಿ ಗಮನ ಹರಿಸಿ ಪತ್ರಿಕೆಗಳಲ್ಲಿ ವರದಿ ಬಂದಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವೂ ಆ ದಿಸೆಯಲ್ಲಿ ಯೋಚನೆ ಮಾಡಬೇಕಾದಾಗ, ನಾವು ಇಲ್ಲಿ ಒಂದು ಸಭೆ ಮಾಡಿ ಒಂದು ನಿರ್ಣಯ ಮಾಡಿದರೆ ನಾವು ಮಾಡಿದ್ದೇವೆ. ನೀವೂ ಮಾಡಿ ಕೇಳಲು ಆಧಾರವಾಗುತ್ತದೆ. ಆ ಕಾರಣಕ್ಕಾಗಿ ಕನಿಷ್ಠ 16 ಲಕ್ಷ ಜನರಿಗೆ extend ಆಗಲೇಬೇಕು. ರೇವಣ್ಣನವರು ಹೇಳಿದ ರೀತಿ ಏಪ್ರಿಲ್ 01 ರಿಂದಲೇ ಮಾಡಿದರೆ ಸಂತೋಷ. ನಮ್ಮ ಅಭ್ಯಂತರವಿಲ್ಲ. ಅದಕ್ಕೂ ಕೂಡಾ ನನ್ನ ಸಹಮತ ಇದೆ. ಆದರೆ, ಮಳೆ ಯಾವಾಗ ಬರುತ್ತದೆಂಬ ಕಾರಣಕ್ಕಾಗಿ ನಾನು ಆ date ಹೇಳಿದ್ದೇನೆ. ಏಪ್ರಿಲ್ 01 ರಿಂದಲೇ ಮಾಡಿದರೆ ಅದು ಇದ್ದದ್ದೂ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳಿ, ಕೇಂದ್ರ ಸರ್ಕಾರದ ಮನವೊಲಿಸುವುದಕ್ಕೆ ಇದು ಸಕಾರಣ, ಒಂದು ಒಳ್ಳೆಯ ಮಾರ್ಗವೂ ಆಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಲಕ್ಷ್ಮಣ ಎಸ್. ಸವದಿ : ಸನ್ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ಉಪ ನಾಯಕರು ಮತ್ತು ಹಿರಿಯ ಮುಖಂಡರಾಗಿರುವ ರೇವಣ್ಣನವರು 01.04.2011 ರಿಂದ ಈ ವರ್ಷದ ಜೂನ್ 30 ರವರೆಗೆ ತೆಗೆದುಕೊಂಡಿರುವ ರೈತರ ಸಾಲವನ್ನು ಸಂಪೂರ್ಣವಾಗಿ ರೂ. 25 ಸಾವಿರದವರೆಗೆ ಅಳವಡಿಸಬೇಕೆಂದು ಸಲಹೆ ನೀಡಿದ್ದಾರೆ. ಬಹುಶಃ ಇಲ್ಲಿ ಒಂದು ಲೋಪದೋಷ ಆಗಬಹುದು ಎಂದು ಹೇಳಲು ನಾನು ಬಯಸುತ್ತೇನೆ.

1.4.2011 ರಿಂದ ತೆಗೆದುಕೊಂಡಿರತಕ್ಕಂಥ ರೈತ ಈ ವರ್ಷಕ್ಕೆ 30.3.2011ನೇ ಇಸವಿಯೊಳಗೆ ಈಗಾಗಲೇ ಮರುಪಾವತಿಯನ್ನು ಮಾಡಿಕೊಂಡಿದ್ದಾನೆ. ಆ ರೈತ ಈ ಒಂದು ಸಾಲ ಮನ್ನಾ ಯೋಜನೆಯಲ್ಲಿ ಒಳಪಡುತ್ತಾನೆ. ಇದು ಸ್ವಲ್ಪ ತಮ್ಮ ಗಮನದಲ್ಲಿರಲಿ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. 1.4.2011 ರಿಂದ ತೆಗೆದುಕೊಂಡಿರತಕ್ಕಂಥ, ರೈತ, ಇಲ್ಲಿಯವರೆಗೆ, ಈ ಜೂನ್ 30ರವರೆಗೆ, ಅವರೆಲ್ಲರೂ ಕೂಡ ಇದರಲ್ಲಿ involve ಆಗಿದ್ದಾರೆ, involve ಆಗಿ ಹೋಗಿದ್ದಾರೆ, involve ಮಾಡಿಕೊಂಡು ಸಾಲ ಪಡೆದುಕೊಂಡಿದ್ದಾರೆ. ಅಂದರೆ ಆ ರೈತ ಈ ಸಾಲ ಮನ್ನಾ ಯೋಜನೆಯಲ್ಲಿ ಒಳಗಡೆ ಆಗಿರತಕ್ಕಂಥ ಸಂದರ್ಭ ಇರುವುದರಿಂದ, ಇನ್ನೊಂದು ಸ್ವಲ್ಪ ಇದರ ಬಗ್ಗೆ ಪರಾಮರ್ಶೆ ಆಗಬೇಕು ಎನ್ನತಕ್ಕಂಥ ವಿಚಾರವನ್ನು ನಾನು ತಮ್ಮ ಮುಖಾಂತರ ಹೇಳಲಿಕ್ಕೆ ಬಯಸುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಸವದಿಯವರು ಹೇಳಿದಂತೆ 1ನೇ ಏಪ್ರಿಲ್‌ನಿಂದ ಎಂದು announce ಮಾಡಿದರೆ ಮುಗಿದು ಹೋಗುತ್ತದೆ.

(ಗೊಂದಲ)

ಶ್ರೀ ಲಕ್ಷ್ಮಣ ಎಸ್. ಸವದಿ:- ನೀವು ಕೇಳಿರುವಂಥಾದ್ದರಲ್ಲಿ ಸ್ವಲ್ಪ ಲೋಪದೋಷ ಇದೆ. 1ನೇ ಏಪ್ರಿಲ್ ಎನ್ನುವುದಕ್ಕಿಂತಲೂ, ನೀವು ಕೇಳತಕ್ಕಂಥ ಡಿಮ್ಯಾಂಡ್ ಹೇಗಿರಬೇಕೆಂದರೆ....

(ಗೊಂದಲ)

ಶ್ರೀ ಲಕ್ಷ್ಮಣ ಎಸ್. ಸವದಿ:- ಕಳೆದ ವರ್ಷ ಜೂನ್ 30ರ ನಂತರ ಯಾರು ಸಾಲವನ್ನು ಪಡೆದುಕೊಂಡಿರುತ್ತಾರೋ, ಅಂತಹವರು ಮಾತ್ರ ಈ ಒಂದು ಸೌಲಭ್ಯದಿಂದ ವಂಚಿತರಾಗತಕ್ಕಂಥ ಸಂದರ್ಭ ಮಾತ್ರವಿದೆ. ಅದರೆ 1, ಏಪ್ರಿಲ್ ನಿಂದ ಕೇಳತಕ್ಕಂಥದ್ದು ಸರಿಯಲ್ಲವೆಂದು ನಾನು ಹೇಳಬಯಸುತ್ತೇನೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಸಹಕಾರ ಸಚಿವರು 1ನೇ ಏಪ್ರಿಲ್‌ರಿಂದ ಆದಂತಹವರೆಲ್ಲರೂ ಒಳಪಡುತ್ತಾರೆಂದು ಹೇಳಿದರು. ಆದರೆ ನಮ್ಮ ಮಾನ್ಯ

ಜಯಚಂದ್ರರವರು ಹೇಳಿದ ಹಾಗೆ, ಈಗ ಇದೆಲ್ಲವೂ ಕೂಡ ಯಾರು ಮರು ಪಾವತಿ ಮಾಡಿದ್ದಾರೋ, ಅವರಿಗೆ ಅನ್ವಯಿಸುವುದಿಲ್ಲ. ಯಾರು defaulters ಯಾರಿದ್ದಾರೋ ಅವರಿಗೇ ಇವತ್ತಿನ ದಿವಸ ಈ ಯೋಜನೆಯ benefit ಸಿಗುತ್ತದೆ. ಅದಕ್ಕೆ ಎಲ್ಲರಿಗೂ ಇದು ವಿಸ್ತಾರವಾಗಬೇಕು. ಎಲ್ಲರಿಗೂ ಇದು ವಿಸ್ತಾರವಾದರೆ ಅನುಕೂಲವಾಗುತ್ತದೆ. ಇನ್ನೊಂದು ಇದರಿಂದ wrong message ಹೋಗುತ್ತಿದೆ. ಯಾವಾಗಲೂ ನಾವು ಕಟ್ಟುವುದು ಬಾಕಿ ಇರುವವರಿಗೇ ಲಾಭವಾಗುವುದನ್ನು ನೋಡಿದ್ದೇವೆ. ಈ ಹಿಂದೆ ಅನೇಕ ಸಲ ನಾವು KEB ಯಲ್ಲಿ ನೋಡಿದ್ದೇವೆ. ಈ ರೀತಿ ಬಾಕಿ ಮನ್ನಾ ಮಾಡುವುದು, Crop loss ಆದಾಗ ಸಾಲ ಮನ್ನಾ ಮಾಡುವುದು, ಹೀಗೆ ಎಲ್ಲದರಲ್ಲೂ ಕೂಡ, ಬ್ಯಾಂಕಿನಿಂದಲಾದರೂ ಕೂಡ ಅವರಿಗೇ ಅನುಕೂಲವಾಗುತ್ತಿದೆ. ಆದರೆ ನಿಜವಾಗಿ ಯಾರು ಪ್ರಾಮಾಣಿಕವಾಗಿ ತುಂಬಿರುತ್ತಾನೋ ಅವನಿಗೆ ಇವತ್ತಿನ ದಿವಸ ಯಾವುದೂ benefits ಸಿಗುವುದಿಲ್ಲ. ಇದರಿಂದ ಏನು ಭಾವನೆ ಸೃಷ್ಟಿಯಾಗುತ್ತದೆ ಎಂದರೆ, ನಾನು ಪ್ರಾಮಾಣಿಕವಾಗಿ ಕಟ್ಟಿದ್ದೇ ತಪ್ಪು ಎನ್ನುವಂತಹ ಭಾವನೆ ಅನೇಕ ರೈತರಲ್ಲಿ ಇವತ್ತಿನ ದಿವಸ ಮೂಡುತ್ತಿದೆ. ಕೇವಲ defaulters ಗೆ ಅಲ್ಲ, ಕಟ್ಟುವುದು ಬಾಕಿ ಇರುವವರಿಗೆ ಮಾತ್ರವಲ್ಲ. ಎಲ್ಲರಿಗೂ ಕೂಡ 25 ಸಾವಿರ ರೂ.ಗಳವರೆಗಿನ ಸಾಲ ಮನ್ನಾ ಪ್ರಯೋಜನ ಸಿಗಬೇಕು. ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಿಗೆ Crop loss ವಿಚಾರದ ಬಗ್ಗೆ ನಾನು ಕೇಳಬಯಸುತ್ತೇನೆ. ಇವತ್ತು ಯಾವುದೇ ತರಹದ Crop loss ಇರಬಹುದು. ಈಗ ನಮ್ಮ ಕಡೆ ಬೆಳೆಗಳಲ್ಲದೆ, ದ್ರಾಕ್ಷಿ, ಕಬ್ಬು ಎಲ್ಲವೂ ಕೂಡ ಇವತ್ತಿನ ದಿವಸ ಬಹಳಷ್ಟು ಲುಕ್ಸಾನು ಆಗಿದೆ. Crop loss ಬಗ್ಗೆಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಅಗತ್ಯ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಹೆಚ್.ಡಿ. ರೇವಣ್ಣನವರು ಹೇಳಿದಂತೆ, 3 ಲಕ್ಷ ರೂ. ಗಳಿಂದ 10 ಲಕ್ಷ ರೂ. ಗಳಿಗೆ ceiling limit ಅನ್ನು ಹೆಚ್ಚು ಮಾಡಿ, ಅದಕ್ಕೆ 3–5% ಎಂದು ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಬಹುಶಃ ಈಗ ಅತೀ ಸಣ್ಣ ರೈತರು ಎಂದರೂ ಕೂಡ ಅವರಿಗೆ 3–4 ಎಕರೆಗಳು ಇರುತ್ತವೆ. ಅವನು ಯಾವುದೇ ಬೆಳೆಯನ್ನು ಬೆಳೆಯಬೇಕೆಂದರೂ ಸಹಾ ಅವನಿಗೆ ಕನಿಷ್ಠ ಪಕ್ಷ 4–5 ಲಕ್ಷ ರೂ. ಗಳಾದರೂ ಖರ್ಚಾಗುತ್ತದೆ. ಆ ceiling limit ಅನ್ನು 10 ಲಕ್ಷ ರೂ. ಗಳವರೆಗೆ ಮಾಡಿ, ಅಲ್ಲಿ 3–4% ಗೆ ಹೆಚ್ಚಿಗೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ceiling limit ಅನ್ನು ಹೆಚ್ಚಿಗೆ ಮಾಡುವ ಬಗ್ಗೆ ಘೋಷಣೆ ಮಾಡಬೇಕೆಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಸಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಈಗ ಜೂನ್ 30 ರವರೆಗಿನ 25 ಸಾವಿರ ರೂ. ಗಳವರೆಗೆ ಸಾಲ ಮನ್ನಾ ಮಾಡಿದ್ದಾರೆ. ನಿನ್ನೆ ದಿವಸ ಸಹ ಸುಮಾರು ಜನ ರೈತರು ಸಾಲವನ್ನು ಮರುಪಾವತಿ ಮಾಡಿದ್ದಾರೆ. ಈಗ ಅವರೇನು ಹೇಳುತ್ತಿದ್ದಾರೆ ಎಂದರೆ, ನಿನ್ನೆ ನಾವು ಸಾಲ ಮರುಪಾವತಿ ಮಾಡಿದ್ದೇವೆ, ನಿನ್ನೆ ಸಾಯಂಕಾಲ ಸರ್ಕಾರದಿಂದ ಈ ರೀತಿಯ ಘೋಷಣೆ ಬಂದಿದೆ, ನಾವು ಯಾವ ತಪ್ಪು ಮಾಡಿದ್ದೇವೆಂದು ಈ ಶಿಕ್ಷೆ? ಎಂದು ಕೇಳುತ್ತಿದ್ದಾರೆ. ಈಗ ಮಾನ್ಯ ಎಂ.ಬಿ. ಪಾಟೀಲ್ ರವರು ಏನು ಹೇಳಿದರೋ ಅದು ಇವತ್ತು ಪ್ರತಿಯೊಬ್ಬ ರೈತರ ಬಾಯಿಯಲ್ಲಿ ಬರುತ್ತಿದೆ. ಸಾಲ ಕಟ್ಟಿದ್ದೇ ಮಹಾ ಅಪರಾಧ ಎನ್ನುವ ರೀತಿಯಲ್ಲಿ ಇವತ್ತು ಆಗುವುದರಿಂದ, ಸಾಲ ಕಟ್ಟಿದವರು ಮತ್ತು ಕಟ್ಟಬೇಕಾದವರೂ ಅವರೆಲ್ಲರೂ ಕೂಡ ಅನುಕೂಲ ಮಾಡಿಕೊಡಬೇಕು ಸಾಲ ಕಟ್ಟಿದ ಅದನ್ನು ವಾಪಸ್ ಕೊಡುವಂತಹದ್ದನ್ನು ಸರ್ಕಾರ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ. ಎರಡನೆಯದಾಗಿ, 25 ಸಾವಿರ ರೂ.ಗಳವರೆಗೆ ನಾವು ಸಾಲ ಮನ್ನಾ ಮಾಡಿದ್ದೇವೆ ಎಂದು ನೀವು ಹೇಳುತ್ತೀರಿ. ಈಗ ಕೆಲವರು 1ಲಕ್ಷ ರೂ.ಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ 25 ಸಾವಿರ ರೂ. ಗಳಿಗೆ ಸಾಲ ಮನ್ನಾ ಆಗಿ, ಉಳಿದ 75 ಸಾವಿರ ರೂ. ಗಳನ್ನು ಮಾತ್ರ ಕಟ್ಟಬಹುದೇ ಎನ್ನುವುದನ್ನು ಸರ್ಕಾರ ಸ್ಪಷ್ಟಪಡಿಸಬೇಕಾಗುತ್ತದೆ. ಏಕೆಂದರೆ, ಈಗ ರೈತರು ಗೊಂದಲದಲ್ಲಿದ್ದಾರೆ. ನಾವು 1 ಲಕ್ಷ ರೂ.ಗಳ ಸಾಲ ತೆಗೆದುಕೊಂಡಿದ್ದೇವೆ, 25 ಸಾವಿರ ರೂ. ಗಳವರೆಗೆ ಮಾತ್ರ ಸಾಲ ಮನ್ನಾ ಅನ್ವಯವಾಗುತ್ತದೋ ಅಥವಾ ನಾವು ತೆಗೆದುಕೊಂಡಿರುವ ಸಾಲದಲ್ಲೂ 25 ಸಾವಿರ ರೂ. ಗಳು deduct ಆಗುತ್ತದೋ ಎನ್ನುವ ಗೊಂದಲದಲ್ಲಿ ರೈತರಿದ್ದಾರೆ. ದಯವಿಟ್ಟು ಈ ಬಗ್ಗೆ ಸ್ಪಷ್ಟನೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲೂ ಕೂಡ ಸಾಲ ಕೊಟ್ಟಿದ್ದಾರೆ. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಡಿ.ಸಿ.ಸಿ. ಬ್ಯಾಂಕಿನಿಂದ 125 ಕೋಟಿ ರೂ. ಗಳಷ್ಟು ಸಾಲ disburse ಆಗಿದೆ. ಈ ಬಗ್ಗೆ ನಾನು ಮಾಹಿತಿ ಪಡೆದಿದ್ದೇನೆ. ಆದರೆ ನೀವು ಹೇಳುವ ಪ್ರಕಾರ, ನಮಗೆ ಯಾವುದೇ ಲಾಭವೂ ಕೂಡ ಆಗುವುದಿಲ್ಲ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು. ನೀವು ಸಾಲ ಮರುಪಾವತಿ ಮಾಡಿದವರಿಗೆ ಅಷ್ಟೇ ಅಲ್ಲ, ಯಾರ್ಯಾರ ಸಾಲ on date out standing ಇದೆಯೋ, ಏಪ್ರಿಲ್ ನಲ್ಲಿ ತೆಗೆದುಕೊಂಡಿರಲಿ ಅಥವಾ ಜುಲೈನಲ್ಲಿ ತೆಗೆದುಕೊಂಡಿರಲಿ, ಇವತ್ತು ಯಾರದ್ದು

ಸಾಲ out standing ಇದೆಯೋ, ಅವರೆಲ್ಲರಿಗೂ ಮನ್ನಾ ಎಂದು ಹೇಳಿದರೆ ಮಾತ್ರವೇ ಅದು ರೈತರಿಗೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಅನುಕೂಲವಾಗುವುದಿಲ್ಲ. ನಿಮ್ಮ ಸಾಲ ಇಷ್ಟು pending ಇದೆ, ಅದೆಲ್ಲವನ್ನೂ ಮನ್ನಾ ಮಾಡುತ್ತೇವೆಂದು ನೀವು ಅವರಿಗೆ ಹೇಳಿ, ಅವರಿಗೆ ಈ ಲಾಭವನ್ನು ಕೊಟ್ಟರೆ ಮಾತ್ರವೇ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಇದು ಯಾರಿಗೂ ಅನುಕೂಲವಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಂತೂ ಅನುಕೂಲವಾಗುವುದಿಲ್ಲ.

ಅಧ್ಯಕ್ಷರು:- ಎಲ್ಲರೂ ಹೇಳಿದ್ದನ್ನೇ ಹೇಳಿದರೆ ಹೇಗೆ? ಬೇರೆ ವಿಚಾರ ಇದ್ದರೆ ಹೇಳಿ.

ಶ್ರೀ ಬಂಡೆಪ್ಪ ಖಾಶೆಂಪೂರ್:- ಮಾನ್ಯ ಅಧ್ಯಕ್ಷರೆ, ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ. ಈ Confusion ಏಕೆ? ಈಗ ಇವರು 15-16 ಲಕ್ಷ ಜನ ಎಂದು ಹೇಳುತ್ತಾರೆ. ಇನ್ನೂ 3 ಲಕ್ಷ ಜನರು ಸೇರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಒಂದು ನಿರ್ಧಾರ ತೆಗೆದುಕೊಳ್ಳಿ. ಮಾನ್ಯ ಯಡಿಯೂರಪ್ಪನವರೂ ಇಲ್ಲೇ ಇದ್ದಾರೆ. ಹಿಂದೆ ಮಾನ್ಯ ಕುಮಾರಸ್ವಾಮಿಯವರು ಇದ್ದಾಗ, ಮಾನ್ಯ ಯಡಿಯೂರಪ್ಪನವರೇ ಹಣಕಾಸಿನ ಸಚಿವರಾಗಿದ್ದರು. ಆಗ ಎಲ್ಲಾ ರೈತರಿಗೂ 25 ಸಾವಿರ ರೂ. ಗಳವರೆಗಿನ ಸಾಲ ಮನ್ನಾ ಮಾಡಿದ್ದೆವು. ಇದಲ್ಲದೆ ಬಡ್ಡಿ separate ಆಗಿ ಮನ್ನಾ ಮಾಡಲಾಗಿತ್ತು. ಅಸಲಿನಲ್ಲೇ 25 ಸಾವಿರ ರೂ. ಗಳಲ್ಲದೆ, ಬಡ್ಡಿ ಪ್ರತ್ಯೇಕವಾಗಿ ಮನ್ನಾ ಆಗಿತ್ತು. ಇವತ್ತೂ ಅದೇ ರೀತಿಯ ನಿರ್ಣಯವನ್ನು ಮಾಡಿ. ಬಡ್ಡಿಗೆ separate ಆಗಿ ಮನ್ನಾ ಮಾಡಿ. ಈಗ ನೀವು ಘೋಷಿಸಿರುವಂತಹ ಸಾಲ ಮನ್ನಾ ಏನಿದೆಯೋ, ಅದರ ಪ್ರಯೋಜನವನ್ನು ಎಷ್ಟು ಜನರಿದ್ದರೂ, ಸಾಲ ಕಟ್ಟಿರುವವರಿಗೂ ಕೊಡಿ, ಕಟ್ಟದಿರುವವರಿಗೂ ಕೊಡಿ. ಏಕೆಂದರೆ, ನಿಯತ್ತಾಗಿ ಕಟ್ಟಿ ಮನೆಯಲ್ಲಿ ಕುಳಿತರೆ, ಅವನಿಗೆ ದುಡ್ಡು ಹೋಗುವುದಿಲ್ಲ ಎಂದರೆ ಹೇಗೆ? ಬರಗಾಲ ಎಲ್ಲರಿಗೂ ಒಂದೇ. ಮಾನ್ಯ ಮುಖ್ಯಮಂತ್ರಿಗಳೇ, ನಾವು ಆಂಧ್ರದ border ನಲ್ಲಿದ್ದೇವೆ. ಅಲ್ಲಿ every crop loss ಗೆ ಪರಿಹಾರ ಕೊಟ್ಟಿದ್ದಾರೆ. ಈಗ ತಾವೇನು 4,500 ಕೋಟಿ ರೂ.ಗಳವರೆಗೆ ಕೇಂದ್ರ ಸರ್ಕಾರಕ್ಕೆ recommend ಮಾಡಿದ್ದೀರಿ, ಆ ರೀತಿ ಅಲ್ಲಿ Crop loss ಗೆ ಎಕರೆಗಿಷ್ಟು ಎಂದು ಸುಮಾರು2,000 ಕೋಟಿ ರೂ. ಗಳವರೆಗೆ ಆಂಧ್ರದಲ್ಲಿ ಪರಿಹಾರವಾಗಿ ರೈತರಿಗೆ ಕೊಟ್ಟಿದ್ದಾರೆ. ಆ ರೀತಿ ಇಲ್ಲೂ ಮಾಡಿ. 10 ಸಾವಿರ ಕೋಟಿ ರೂ. ಗಳವರೆಗೆ ರೈತರಿಗೆ ನೆರವಾಗಬೇಕಾಗಿದೆ. ನಾವು ಕೇವಲ 3 ಅಥವಾ 3500 ಕೋಟಿ

ರೂ. ಗಳವರೆಗೆ ಬಂದು ನಿಲ್ಲುವುದಿಲ್ಲ. ಇವತ್ತು Crop loss ಬಗ್ಗೆ ಬೇರೆ ರಾಜ್ಯಗಳಲ್ಲಿ ಈ ರೀತಿಯ decision ತೆಗೆದುಕೊಂಡಿದ್ದಾರೆ. ಇವತ್ತು ತಾವೂ ಸಹ ಆ ಬಗ್ಗೆ ನಿರ್ಣಯ ಮಾಡಬೇಕು. ಸಮಸ್ತ ರೈತರಿಗೆ ಅನುಕೂಲವಾಗಬೇಕು. 'ಸುವರ್ಣ ಭೂಮಿ'ಯಲ್ಲಾದರೂ ತೆಗೆದುಕೊಳ್ಳಿ ಅಥವಾ ಇದರಲ್ಲಾದರೂ ತೆಗೆದುಕೊಳ್ಳಿ. ಅವರಿಗೂ ಕೂಡಾ ಅನುಕೂಲ ಮಾಡಿಕೊಡುವಂತಹ ಪ್ರಯತ್ನವನ್ನು ಮಾಡಿ. ಇಲ್ಲದಿದ್ದರೆ, ಏನೋ ಸ್ವಲ್ಪ ಕೊಟ್ಟು ನಾಟಕ ಮಾಡಿದಂತಾಗುತ್ತದೆ. ಅದನ್ನು ಬಿಟ್ಟು ಬೇರೇನೋ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಮತ್ತು ಮಾನ್ಯ ರೇವಣ್ಣನವರು ಹಾಗೂ ಇನ್ನಿತರ ಶಾಸಕರು ನಿನ್ನೆ ನಾವೇನು ನಮ್ಮ ರೈತ ಬಾಂಧವರಿಗೆ ಸಾಲ ಮನ್ನಾ ಘೋಷಣೆ ಮಾಡಿದ್ದೇವೋ ಅದರ ಬಗ್ಗೆ ಚರ್ಚೆ ಮಾಡಿದ್ದಾರೆ. ಎಲ್ಲಾ ರೈತ ಬಾಂಧವರಿಗೆ, ಸಣ್ಣ ರೈತರು ಅಥವಾ ದೊಡ್ಡ ರೈತರು ಎಂದು difference ಮಾಡದೆ, ಎಲ್ಲಾ ರೈತರಿಗೂ 25 ಸಾವಿರ ರೂ. ಗಳವರೆಗೆ ಸಾಲ ಮನ್ನಾ ಮಾಡುವಂತಹ ಘೋಷನೆಯನ್ನು ನಾವು ನಿನ್ನೆ ಮಾಡಿದೆವು. ಇದು ರೈತರ ಹಿತಾಸಕ್ತಿ ಸಲುವಾಗಿದೆ. ಅದರಲ್ಲೂ ಈಗ ಬರಗಾಲದ ಬವಣೆಯನ್ನೇನು ನಮ್ಮ ಜನ ಅನುಭವಿಸುತ್ತಿದಾರೋ, ಆ ಹಿನ್ನೆಲೆಯಲ್ಲಿ ಸರ್ಕಾರ ಇಷ್ಟೊಂದು ದೊಡ್ಡದಾದಂತಹ ನಿರ್ಣಯವನ್ನು ತೆಗೆದುಕೊಂಡಿದೆ. ಮಾನ್ಯ ರೇವಣ್ಣನವರೂ ಏನೊಂದು ಹೇಳಿದರೋ, ಆ ಬಗ್ಗೆಯೂ ಸಹ ನಾವು ಮಾಡೋಣ. ಕೇಂದ್ರ ಸರ್ಕಾರದವರೂ ಈ ದಿಸೆಯಲ್ಲಿ ನಮ್ಮ ನೆರವಿಗೆ ಬರಬೇಕಾಗುತ್ತದೆ. ಈ ಬಗ್ಗೆ ಜಯಚಂದ್ರರವರೂ ಹೇಳಿದ್ದಾರೆ. ನಾವು ಕೇಂದ್ರ ಸರ್ಕಾರಕ್ಕೂ ಒತ್ತಾಯ ಮಾಡೋಣ. Nationalised Bank ಗಳಿಂದ ರೈತ ಬಾಂಧವರು ತೆಗೆದುಕೊಂಡಿರುವ ಸಾಲವನ್ನೂ ಸಹ ಮನ್ನಾ ಮಾಡಬೇಕಾಗುತ್ತದೆ. ಏಕೆಂದರೆ, Nationalized Bank ಗಳಿಂದಲೂ ಸಹ ಸಾಕಷ್ಟು ನಮ್ಮ ರೈತರು ಸಾಲ ತೆಗೆದುಕೊಂಡಿದ್ದಾರೆ. ಅವರಿಗೂ ಸಹಿತ benefit ಆಗಬೇಕಾಗಿದೆ. ಆ ದೃಷ್ಟಿಯಿಂದ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುವಂತಹ ನಿರ್ಣಯವನ್ನು ನಾವು ಕೈಗೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಕೇಂದ್ರ ಸರ್ಕಾರಕ್ಕೂ ಒತ್ತಾಯ ಮಾಡೋಣ. ಇನ್ನೊಂದು ವಿಚಾರವೆಂದರೆ, ನಾವೇನು ಈಗಾಗಲೇ ಘೋಷಣೆ ಮಾಡಿದ್ದೇವೋ, ಇದರಿಂದ 16 ಲಕ್ಷಕ್ಕೂ ಹೆಚ್ಚಿನ ನಮ್ಮ ರೈತ ಬಾಂಧವರಿಗೆ ಅನುಕೂಲವಾಗುತ್ತದೆ ಎಂಬ ಲೆಕ್ಕಾಚಾರ ಮಾಡಿಕೊಂಡು ಇದನ್ನು ನಾವು ಮಾಡಿದ್ದೇವೆ. ಈಗ dateನ ಬಗ್ಗೆ ಹೇಳಿದರು.

ಶ್ರೀ ಟಿ. ಬಿ. ಜಯಚಂದ್ರ:- ಸಾಲ ಕಟ್ಟಿದವರಿಗೂ ಸಾಲ ಮನ್ನಾ ಯೋಜನೆ ಅನ್ವಯಿಸುವಂತೆ ಅನುಕೂಲ ಮಾಡಿಕೊಡಿ. ಅವರೇನು ಪಾಪ ಮಾಡಿದ್ದಾರೆ?

ಅಧ್ಯಕ್ಷರು:- ಸಾಲ ಕಟ್ಟಿದವರಿಗೂ ಅನುಕೂಲ ಮಾಡಿಕೊಡಬೇಕು.

ಶ್ರೀ ಟಿ. ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರ ಪೀಠದಿಂದಲೇ ತಮಗೆ ಸೂಚನೆ ಬಂದಿದೆ, ನೋಡಿ.

ಶ್ರೀ ಜಗದೀಶ್ ಶೆಟ್ಟರ್:- ತಮ್ಮ ಅಭಿಪ್ರಾಯವನ್ನು ಅವರು ಹೇಳಿದ್ದಾರೆ. ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ನಾವು ಹಣಕಾಸಿನ ಇಲಾಖೆಯನ್ನೂ ಸಹ ನಿರ್ವಹಣೆ ಮಾಡಬೇಕು. ಇಷ್ಟು ದೊಡ್ಡದಾಂತಹ ಭಾರವನ್ನು ನಾವು ಹೊತ್ತುಕೊಂಡಿದ್ದೇವೆ. ಈಗ ಇದನ್ನು ಮಾಡುತ್ತಿದ್ದೇವೆ. ನೀವು ಕೇಂದ್ರ ಸರ್ಕಾರದಿಂದ ಮೊದಲು ಒಂದು ಪೈಸೆಯನ್ನಾದರೂ ತೆಗೆದುಕೊಂಡು ಬನ್ನಿ. ನಾವು ಇಲ್ಲಿ ಇಷ್ಟಾದರೂ ಘೋಷಣೆ ಮಾಡಿದ್ದೇವೆ. ಈಗ date ಬಗ್ಗೆ ಕೇಳುತ್ತಿದ್ದಾರೆ. ಒಬ್ಬರು 1ನೇ ಏಪ್ರಿಲ್ ಎಂದು ಹೇಳಿದರು, ಇನ್ನೊಬ್ಬರು 1ನೇ ಮೇ ಎಂದು ಹೇಳಿದರು, ಮತ್ತೊಬ್ಬರು 1ನೇ ಜೂನ್ ಎಂದು ಹೇಳಿದರು. ಅದರ ಬಗ್ಗೆ ನಾನು open ಆಗಿದ್ದೇನೆ . ಅದರ ಬಗ್ಗೆ ಪ್ರಶ್ನೆಯೇ ಇಲ್ಲ. ಎಷ್ಟು ಜನ ನಮ್ಮ ರೈತ ಬಾಂಧವರಿಗೆ benefit ಆಗಬೇಕೋ, ಅದನ್ನು ಮಾಡಲಿಕ್ಕೆ ನಾನು ತಯಾರಿದ್ದೇನೆ. ಅದಕ್ಕಾಗಿ ನಮ್ಮ ಹಣಕಾಸಿನ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿಕೊಂಡು ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:- ಈ ಬಗ್ಗೆ ಕೂಡಲೇ announce ಮಾಡಿ, ಚರ್ಚೆ ಮಾಡುವುದು ಬೇಡ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ರೇವಣ್ಣನವರೆ, ನಾನು ಮಾತನಾಡುವುದನ್ನು ಸ್ವಲ್ಪ ಕೇಳಿ. ನಾನು ನನ್ನ ಉತ್ತರವನ್ನು complete ಮಾಡುತ್ತೇನೆ. ಇಲ್ಲಿ ನೀವು ಹೇಳಿದ ಕೂಡಲೇ ಆಗುವುದಿಲ್ಲ. ಆ ಬಗ್ಗೆ ನಾನು ಲೆಕ್ಕಾಚಾರ ಮಾಡಲಿಕ್ಕಾಗುತ್ತದೆಯೇ? ಆ ಬಗ್ಗೆ ಸಂಬಂಧಪಟ್ಟ ಅಂಕಿ ಸಂಖ್ಯೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ಮಾನ್ಯ ಲಕ್ಷ್ಮಣ ಸವದಿಯವರು ಕೆಲವೊಂದು ವಿಚಾರಗಳನ್ನು ಹೇಳಿದರು. ನಾನು discussion ಮಾಡುತ್ತೇನೆ, I am open ಹೆಚ್ಚು ರೈತರಿಗೆ ಇವತ್ತು ಅನುಕೂಲತೆಯಾಗಬೇಕು ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ನಿಮ್ಮ ಭಾವನೆಗಳೇನಿವೆಯೋ, ಅದಕ್ಕೆ ನಾನು ಸ್ಪಂದನೆ ಮಾಡುತ್ತೇನೆ. ಅದು 1ನೇ ಏಪ್ರಿಲ್ ಗೋ, 1ನೇ ಮೇ ಗೋ ಎಂದು ನೋಡೋಣ. ಇನ್ನೂ ಎಷ್ಟು

ಹೆಚ್ಚಿನ ಜನರಿಗೆ ಅನುಕೂಲವಾಗುತ್ತದೋ ನೋಡೋಣ. ಆ ಬಗ್ಗೆ figures ತೆಗೆದುಕೊಳ್ಳುತ್ತೇನೆ. ಎಲ್ಲಾ ಮಾಹಿತಿಯನ್ನು ಪಡೆದುಕೊಂಡು ನಾವು Government Order ಅನ್ನು issue ಮಾಡುತ್ತೇವೆ. ನಿಮಗೆ ಸ್ಪೆಸಿಫಿಕ್ ಆಗಿ ವಿಧಾನಸಭೆಯಲ್ಲಿ ಉತ್ತರ ಕೊಡುತ್ತೇನೆ. ನಾಳೆ Finance Bill ಮೇಲೆ discussion ನಡೆಯುತ್ತದೆ ಆ ಸಂದರ್ಭದಲ್ಲಿ ನಾನು ಇದರ ಬಗ್ಗೆ ಸ್ಪಷ್ಟೀಕರಣ ಮಾಡುತ್ತೇನೆ. ನಮ್ಮ ಸರ್ಕಾರದ ಆದೇಶ ಹೊರಡಿಸುವಾಗ ಸಹಿತ ಸ್ಪಷ್ಟೀಕರಣ ಮಾಡುತ್ತೇನೆ. ನಿಮ್ಮ ಎಲ್ಲರ ಭಾವನೆಗಳನ್ನು consideration ಮಾಡಿಕೊಂಡು I will take a decision

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಪಕ್ಕದ ರಾಜ್ಯ ಆಂಧ್ರದಲ್ಲಿ ಎರಡು ಸಾವಿರ ಕೋಟಿ ಮನ್ನಾ ಮಾಡಿದ್ದಾರೆ. ಕೇಂದ್ರ ಸರ್ಕಾರಕ್ಕೆ ಪ್ರಪೋಸಲ್ ಕಳುಹಿಸುವುದಕ್ಕೆ ಹೇಳಿ. ಮಾನ್ಯ ಅಧ್ಯಕ್ಷರೆ, ಅವರು 1ನೇ ಮೇ ಮಾಡಬೇಕು, ಇಲ್ಲದಿದ್ದರೆ ನಾವು ಧರಣಿ ಮಾಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ನೀವು ಹೇಳಿದ್ದೆಲ್ಲ consider ಮಾಡಿಕೊಂಡು, I will take decision

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಮುಖ್ಯಮಂತ್ರಿಗಳು ಇಷ್ಟು ಮುಕ್ತ ಮನಸ್ಸಿನಿಂದ ರೈತರಿಗೆ ಅನುಕೂಲ ಮಾಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ಶೂನ್ಯ ವೇಳೆ. ಹೀಗೆ ಎಲ್ಲರೂ ಎದ್ದು ನಿಂತರೆ ಹೇಗೆ ಸದನ ನಡೆಸುವುದು? Consider ಮಾಡುತ್ತೇನೆಂದು ಹೇಳಿದ ಮೇಲೆ ಮತ್ತೆ ಮತ್ತೆ ಹೇಳುವುದು ಸರಿಯಲ್ಲ. ಮುಖ್ಯಮಂತ್ರಿಗಳು ಮಂತ್ರಿಗಳು ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ನಾಳೆ Finance Bill ಮಂಡನೆ ಮಾಡುವಾಗ ಹಾಗೂ ಅದರ ಬಗ್ಗೆ ಉತ್ತರ ಕೊಡುವಾಗ ಇದರ ಬಗ್ಗೆ ಇನ್ನೂ ಹೆಚ್ಚಾಗಿ ಸ್ಪಷ್ಟೀಕರಣ ಮಾಡುತ್ತೇನೆ.

ಅಧ್ಯಕ್ಷರು:– Please ಅವರು ಹೇಳಿದ್ದಾರೆ ಕುಳಿತುಕೊಳ್ಳಿ, ಗೂಳಿಹಟ್ಟಿ ಶೇಖರ್‌ರವರು.

2. ವಿಷಯ:– ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ G ಕ್ಯಾಟಗರಿ ನಿವೇಶನ ಹಂಚಿಕೆ ಮಾಡಿರುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ): ಮಾನ್ಯ ಅಧ್ಯಕ್ಷರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ G ಕ್ಯಾಟಗರಿಯಲ್ಲಿ ಸಮಾಜದ ಹಲವಾರು ಪ್ರತಿಷ್ಠಿತ ಸೇವೆ ಸಲ್ಲಿಸತಕ್ಕಂತಹ ಜನರಿಗೆ ಬೆಂಗಳೂರಿನಲ್ಲಿ ಸ್ವಂತ ನಿವೇಶನ ಇಲ್ಲದಂತಹವರಿಗೆ ಮನೆ ಇಲ್ಲದವರಿಗೆ G ಕ್ಯಾಟಗರಿಯಲ್ಲಿ ನಿವೇಶನಗಳನ್ನು ಮಂಜೂರು ಮಾಡಿದ್ದಾರೆ. ಅದರಲ್ಲಿ RTI ಯಲ್ಲಿ ತೆಗೆದುಕೊಂಡಿರುವ ಮಾಹಿತಿ ಪ್ರಕಾರ ಕಳೆದ 10 ವರ್ಷಗಳಿಂದ 867 ಜನರಿಗೆ ಪ್ರತಿಷ್ಠಿತ ಬಡಾವಣೆಗಳಲ್ಲಿ ಬಿಡಿ ನಿವೇಶನಗಳನ್ನು ಮಂಜೂರು ಮಾಡಿದ್ದಾರೆ. ಇದರಲ್ಲಿ 15/12/2010 ಕ್ಕೆ ಒಂದು ಕೋರ್ಟ್ ಆದೇಶ ಬರುತ್ತದೆ. ಯಾರಿಗೂ ಕೂಡ ಹಿಂದೆ ನಿವೇಶನ ಮಂಜೂರು ಮಾಡಿದವರಿಗೆ ಮುಂದೆ G ಕ್ಯಾಟಗರಿಯಲ್ಲಿ ನಿವೇಶನ ಕೊಡುವುದನ್ನು ನಿಲ್ಲಿಸಬೇಕು, ನೋಂದಾವಣಿ ಆಗಲಿ, ರಿಜಿಸ್ಟ್ರೇಷನ್ ಆಗಲಿ ಅಥವಾ ಹಂಚಿಕೆಯಾಗಲಿ ರದ್ದುಪಡಿಸಬೇಕೆಂದು ಒಂದು ಆದೇಶ ಮಾಡುತ್ತಾರೆ. 15.12.2010ರಲ್ಲಿ ಆ ಆದೇಶವಾಗುತ್ತದೆ. ಆದೇಶ ಆದರೂ ಕೂಡ ಸುಮಾರು 48 ಜನರಿಗೆ G ಕ್ಯಾಟಗರಿಯಲ್ಲಿ ವಿವಿಧ ನಿವೇಶನಗಳನ್ನು ಹಂಚಿದ್ದಾರೆ. ಒಂದೊಂದು ನಿವೇಶನದ ಮಾರುಕಟ್ಟೆ ದರ ಸುಮಾರು 10–10 ಕೋಟಿ ರೂ. ಇದೆ. ಅಂತಹ ನಿವೇಶನಗಳನ್ನು ನ್ಯಾಯಾಲಯದ ಆದೇಶ ಆದರೂ ಕೂಡ ಆದೇಶ ನಿಂದನೆ ಆಗುತ್ತದೆ ಎನ್ನುವ ಪರಿಜ್ಞಾನ ಇಲ್ಲಿದೆ ನೋಂದಣಿ ಮಾಡಿದ್ದಾರೆ. ಕೆಲವರಿಗೆ ನೋಂದಣಿ ಮಾಡಿಲ್ಲ. ಮಾನ್ಯ ಯಡಿಯೂರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಬಹಳಷ್ಟು ಜನರಿಗೆ G ಕ್ಯಾಟಗರಿಯಲ್ಲಿ ನಿವೇಶನಗಳನ್ನು ಕೊಟ್ಟರು. ಆದರೆ ಕೆಲವರಿಗೆ ನೋಂದಣಿ ಮಾಡಿದ್ದಾರೆ, ಕೆಲವರಿಗೆ ನೋಂದಣಿ ಮಾಡಿಲ್ಲ. BDA ದವರಿಗೆ ಕೇಳಿದರೆ ಯಾರಿಗೂ ನೋಂದಣಿ ಮಾಡಬಾರದು ಎಂದು ಕೋರ್ಟ್ ಆರ್ಡರ್ ಆಗಿದೆ ಎಂದು ಹೇಳುತ್ತಾರೆ. ಅವರು ಆ ತರಹ ಹೇಳುವುದು ಒಂದು ಕಡೆ ಆದರೆ, ಇನ್ನೊಂದು ಕಡೆ ಕೋರ್ಟ್ ಆರ್ಡರ್ ಆದ ನಂತರ ಸುಮಾರು 48 ಜನರಿಗೆ ನೋಂದಣಿ ಮಾಡಿದ್ದಾರೆ. ದಯಮಾಡಿ ಈ ಬಗ್ಗೆ ಸರ್ಕಾರ ಗಮನಹರಿಸಬೇಕು. ಮಾನ್ಯ ಮುಖ್ಯಮಂತ್ರಿಗಳು 48 ಜನರಿಗೆ ಏನು ರಿಜಿಸ್ಟ್ರೇಷನ್ ಮಾಡಿದ್ದಾರೆ. ಆ ನಿವೇಶನಗಳನ್ನು ಸಂಪೂರ್ಣವಾಗಿ ರದ್ದುಪಡಿಸಬೇಕು. ರದ್ದುಪಡಿಸಿ ಹರಾಜು ಹಾಕಿದರೆ ಕನಿಷ್ಠ ಪಕ್ಷ 300 ರಿಂದ 400 ಕೋಟಿ ರೂ. ಅಷ್ಟು ಆದಾಯ ಸರ್ಕಾರಕ್ಕೆ ಬರುತ್ತದೆ. 867 ಸೈಟುಗಳನ್ನು ಹಂಚಿಕೆ

ಮಾಡಿರುವುದರಲ್ಲಿ ಜರ್ನಲಿಸ್ಟ್‌ಗಳಿದ್ದಾರೆ, ಮನೆಯಲ್ಲಿ ಕೆಲಸ ಮಾಡುವ ಕೆಲಸಗಾರರು ಇದ್ದಾರೆ, ಸಂಬಂಧಿಕರಿದ್ದಾರೆ, ಇವರಿಗೆಲ್ಲಾ ನೀಡಿರುವ ನಿವೇಶನಗಳನ್ನು ರದ್ದುಪಡಿಸಿದರೆ ಸರ್ಕಾರಕ್ಕೆ ಸುಮಾರು ಸಾವಿರಾರು ಕೋಟಿ ಆದಾಯ ಬರುತ್ತದೆ. ದಯಮಾಡಿ ಸರ್ಕಾರ ಈ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಗೂಳಿಹಟ್ಟಿ ಡಿ. ಶೇಖರ್‌ರವರು ಶೂನ್ಯ ವೇಳೆಯಲ್ಲಿ ಏನು ಈ ಪ್ರಶ್ನೆಯನ್ನು ಎತ್ತಿದ್ದಾರೆ, ಅದಕ್ಕೆ ನಾನು ಉತ್ತರ ಕೊಡುತ್ತಿದ್ದೇನೆ. ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಪೆಟಿಷನ್ 11.102/2008 ರಲ್ಲಿ ದಿನಾಂಕ: 15.12.2010 ರಂದು ಆದೇಶ ಹೊರಡಿಸಿ G ಪ್ರವರ್ಗದಡಿ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲವೆಂದು ಆದೇಶ ನೀಡಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯದ ದಿನಾಂಕ 15.12.2010ರ ಆದೇಶದ ನಂತರ ರಾಜ್ಯ ಸರ್ಕಾರವು ಎರಡು ಪ್ರಕರಣಗಳಲ್ಲಿ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡುವಂತೆ ನಿರ್ದೇಶನ ನೀಡಿರುತ್ತದೆ. ಆ ಪೈಕಿ ಒಂದು ಪ್ರಕರಣದಲ್ಲಿ ನಿವೇಶನವನ್ನು ಹಂಚಿಕೆ ಮಾಡಿದ್ದು, ಮತ್ತೊಂದು ಪ್ರಕರಣದಲ್ಲಿ ನಿವೇಶನ ಹಂಚಿಕೆಗೆ ಬಾಕಿ ಇರುತ್ತದೆ. ದಿನಾಂಕ 15.12.2010ರ ಉಚ್ಛ ನ್ಯಾಯಾಲಯದ ಆದೇಶದ ಮುಂಚಿತವಾಗಿ ಸರ್ಕಾರದಿಂದ ನಿರ್ದೇಶನ ನೀಡಲಾಗಿರುವ 48 ಪ್ರಕರಣಗಳಲ್ಲಿ ನಿವೇಶನಗಳ ನೋಂದಣಿ ಮತ್ತು ಸ್ವಾಧೀನತಾ ಪತ್ರವನ್ನು ನೀಡಲಾಗಿರುತ್ತದೆ. ಈ ಮಧ್ಯೆ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದ ಬಗ್ಗೆ ಪ್ರಾಧಿಕಾರದ ಕಾನೂನು ಅಧಿಕಾರಿಯವರ ಅಭಿಪ್ರಾಯವನ್ನು ಕೋರಲಾಗಿದ್ದು, G ಪ್ರವರ್ಗದಡಿ ಹಂಚಿಕೆ ಮಾಡಲಾಗಿರುವ ನಿವೇಶನಗಳಿಗೆ ಸಂಬಂಧಿಸಿದ ಯಾವ ಪ್ರಕ್ರಿಯೆಯನ್ನು ಮುಂದುವರೆಸುವುದು ಸೂಕ್ತವೆಂದು ಅಭಿಪ್ರಾಯ ನೀಡಿರುವುದರಿಂದ ದಿನಾಂಕ: 19.05.2012ರ ನಂತರ G ಪ್ರವರ್ಗದ ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದ ಸರ್ಕಾರದಿಂದ ನಿವೇಶನ ನೀಡಲು ದಿನಾಂಕ15.12.2010ಕ್ಕೆ ಮುಂಚಿತವಾಗಿ ನಿರ್ದೇಶನ ಬಂದಿರುವ 325 ಪ್ರಕರಣಗಳಲ್ಲಿ ನಿವೇಶನ ಹಂಚಿಕೆಗೆ ಬಾಕಿ ಇರುತ್ತದೆ. ನಿವೇಶನ ಹಂಚಿರುವ ಪ್ರಕರಣಗಳ ಪೈಕಿ 9 ಪ್ರಕರಣಗಳಲ್ಲಿ ಹಣ ಪಾವತಿಸಿಕೊಳ್ಳುವುದನ್ನು ತಡೆಹಿಡಿಯಲಾಗಿದೆ. 17 ಪ್ರಕರಣಗಳಲ್ಲಿ ಹಣ ಪಾವತಿಸಿದ್ದರೂ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರವನ್ನು ನೋಂದಾಯಿಸುವುದು ಬಾಕಿ ಇಡಲಾಗಿದೆ. 20 ಪ್ರಕರಣಗಳಲ್ಲಿ

ಬದಲಿ ನಿವೇಶನ ನೀಡುವ ಕೋರಿಕೆಯು ಬಾಕಿ ಇರುತ್ತದೆ. ಈ ರೀತಿ ವಸ್ತುಸ್ಥಿತಿ ಇದೆ. ಹೀಗಾಗಿ ಮಾನ್ಯ ಗೂಳಿಹಟ್ಟಿ ಡಿ. ಶೇಖರ್‌ರವರು ಏನು ಪ್ರಶ್ನೆಗಳನ್ನು ರೈಸ್ ಮಾಡಿದ್ದಾರೆ. ಅದಕ್ಕೆ ನಾನು ಹೇಳುವಂಥದ್ದು ಇವತ್ತು ಕೋರ್ಟಿನ ಆದೇಶ ಇದೆ. ಅದರ ನಂತರ ಸರ್ಕಾರ 19.05.2012 ರಿಂದ ಎಲ್ಲಾ ರೀತಿಯ ಪ್ರಕ್ರಿಯೆ ಸ್ಥಗಿತ ಇಟ್ಟಿದ್ದೇವೆ. ಮುಂದೆ ಇನ್ನೂ ಹೆಚ್ಚಿನ ರೀತಿಯ ಚರ್ಚೆ ಮಾಡಿ ಇನ್ನು ಮುಂದೆ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳಬೇಕು. ನೀವು ಹಲವಾರು ವಿಚಾರಗಳನ್ನು ಹೇಳಿದ್ದೀರಿ. ಅದರ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ಆದಷ್ಟು ಬೇಗ ನಿರ್ಣಯ ಕೈಗೊಳ್ಳುತ್ತೇವೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್:– ಮಾನ್ಯ ಅಧ್ಯಕ್ಷರೆ, ತಾರತಮ್ಯ ಮಾಡಿದ್ದಾರೆ.

ಅಧ್ಯಕ್ಷರು: Clarificationಗೆ ಅವಕಾಶ ಇಲ್ಲ. ನಿಮ್ಮ ಇನ್ನೊಂದು ಶೂನ್ಯ ವೇಳೆ ವಿಷಯ ಇದೆ ಕೇಳಿ.

3. ವಿಷಯ: ಮೀಟರ್ ಬಡ್ಡಿ ಹಾವಳಿಯನ್ನು ತಡೆಗಟ್ಟುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಬರದ ಮೇಲೆ ಚರ್ಚೆ ಮಾಡಿದ್ದೇವೆ. ಅದರಲ್ಲಿ ಸರ್ಕಾರ ಸಹಕಾರಿ ಬ್ಯಾಂಕುಗಳಿಗೆ ಸಾಲ ಮನ್ನಾ ಮಾಡಿ ಘೋಷನೆ ಮಾಡಿದೆ. ದಿನಾಂಕ 08.07.2012ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ 'ಬಡವರ ಜೀವಕ್ಕೆ ಅಡ್ಡಿಯಾಗುವ ಮೀಟರ್ ಬಡ್ಡಿ' ಎಂದು ಒಂದು ಶೀರ್ಷಿಕೆ ಪ್ರಕಟಣೆ ಆಗಿ, ದಾವಣಗೆರೆ, ಚಿತ್ರದುರ್ಗ ಮತ್ತು ಬೆಂಗಳೂರಿನಲ್ಲಿ ಯಾರಿಗೆ ಸಹಕಾರಿ ಸಂಘಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ಸಾಲ ಕೊಡುವುದಿಲ್ಲ. ಅಂತಹ ಬಡವರಿಗೆ ಮೀಟರ್ ಬಡ್ಡಿಯಂತೆ 15ರಿಂದ 20% ಬಡ್ಡಿ ತೆಗೆದುಕೊಂಡು ಅಂತಹವರಿಗೆ ಚೆಕ್ಕುಗಳನ್ನು ತೆಗೆದುಕೊಂಡು ಕೊಡುತ್ತಾರೆ. ಅವರಿಗೆ ಅಧಿಕೃತ ಪರ್ಮಿಷನ್ ಇರುವುದಿಲ್ಲ. ಅಂತಹವರಿಗೆ ಖಾಲಿ ಪೇಪರ್ ಮೇಲೆ ಸಹಿ ಮಾಡಿಸಿಕೊಂಡು ಗೂಂಡಾಗಿರಿ ಮಾಡಿಕೊಂಡು ಅವರಿಗೆ ತೊಂದರೆ ಕೊಡುತ್ತಿದ್ದಾರೆ. ಬೆಂಗಳೂರು ಹಾಗೂ ಚಿತ್ರದುರ್ಗ ಮತ್ತು ಬಹಳಷ್ಟು ಜಿಲ್ಲೆಗಳಲ್ಲಿ ಈ ಮೈಕ್ರೋ ಫೈನಾನ್ಸ್ ಎನ್ನುವ ಕಂಪನಿಗಳು ಹುಟ್ಟುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಈ ಮೀಟರ್ ಬಡ್ಡಿ ದಂಧೆ ಜಾಸ್ತಿಯಾಗಿದೆ. ದಯಮಾಡಿ ಸರ್ಕಾರ ಇದನ್ನು ಕಂಟ್ರೋಲ್ ಮಾಡಬೇಕೆಂದು ಹೇಳಿ, ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಗೃಹ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಬಡವರ ಜೀವಕ್ಕೆ ಅಡ್ಡಿಯಾಗುವ ಮೀಟರ್ ಬಡ್ಡಿ ಕುರಿತಂತೆ ವಿವರವಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಮಾನ್ಯ ಗೃಹ ಸಚಿವರಿಂದ ಇದರ ಬಗ್ಗೆ ವಿವರವಾದ ಉತ್ತರವನ್ನು ದೊರಕಿಸಿ ಕೊಡುತ್ತೇವೆ.

4. ವಿಷಯ: ವಸತಿ ಶಾಲೆ ಮುಂದುವರೆಸುವ ಕುರಿತು.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ಮೇಲುಕುಂಟೆ ಗ್ರಾಮ ಪಂಚಾಯಿತಿಯಲ್ಲಿ ಗೊಲ್ಲಹಳ್ಳಿ ಗ್ರಾಮದಲ್ಲಿ ಪ್ರೀ ಮೆಟ್ರಿಕ್ ಬಾಲಕರ ವಸತಿ ಶಾಲೆ ಕಾರ್ಯನಿರ್ವಹಿಸುತ್ತಿದೆ. ಆ ಸದರಿ ಶಾಲೆಯಲ್ಲಿ 48 ಜನ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರತಕ್ಕಂತಹ ಮಕ್ಕಳು ಇವತ್ತು ವ್ಯಾಸಂಗ ಮಾಡುತ್ತಿದ್ದಾರೆ. ನೋಂದಣಿ ಆಗಿದ್ದಾರೆ. 75 ಮತ್ತು 25 ರ ಅನುಪಾತ ಏನಿದೆ, ಈ ಅನುಪಾತದಲ್ಲಿ ವ್ಯತ್ಯಾಸ ಆಗಿದೆ ಎನ್ನುವ ಕಾರಣಕ್ಕೋಸ್ಕರ ಪರಿಶಿಷ್ಟ ಪಂಗಡದವರು 25% ಗಿಂತ ಕಡಿಮೆ ಇದ್ದಾರೆ ಎನ್ನುವ ಕಾರಣಕ್ಕೋಸ್ಕರ ಅದನ್ನು ಮುಚ್ಚಬೇಕೆಂದು ತೀರ್ಮಾನ ಮಾಡಿದ್ದಾರೆ. ನಿನ್ನೆ ವಸತಿ ಶಾಲೆ ಮುಚ್ಚುವುದಕ್ಕೆ ಆದೇಶ ಕೊಟ್ಟಿರುವುದರಿಂದ ಮಕ್ಕಳು ಈಗಾಗಲೇ ಊಟ ಇಲ್ಲದೆ ಕೂತಿದ್ದಾರೆ. ನೀವು ಯಾವುದೇ ಆದೇಶ ಅಥವಾ ತೀರ್ಮಾನ ಮಾಡುವುದಕ್ಕಿಂತ ಮುಂಚೆ inthe middle of the year ನಲ್ಲಿ ಮಾಡಿದರೆ ಅದು ಮಕ್ಕಳಿಗೆ ತೊಂದರೆಯಾಗುತ್ತದೆ. ಅದನ್ನು ನಂಬಿಕೊಂಡು ಹೈಸ್ಕೂಲ್ ಪಕ್ಕದಲ್ಲಿಯೇ ಇದೆ. ಹೈಸ್ಕೂಲ್ ಗೆ ಕೂಡ ಅಡ್ಮಿಷನ್ ಆಗಿ ಹೋಗಿದೆ. ಆ ಕಾರಣಕ್ಕೋಸ್ಕರ ಇದನ್ನು ಸ್ಥಗಿತಗೊಳಿಸಿ. ಮುಂದಿನ ವರ್ಷದ ಒಳಗಾಗಿ ಒಂದು ತೀರ್ಮಾನ ಮಾಡಿ. ನೀವು ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿ ತೀರ್ಮಾನ ಮಾಡಬೇಕೇ ವಿನಃ ಪ್ರಾರಂಭ ಮಾಡಿ ಅರ್ಧ ವರ್ಷ ಕಳೆದ ಮೇಲೆ ತೀರ್ಮಾನ ಮಾಡುವುದು ಸರಿ ಹೋಗುವುದಿಲ್ಲ. ಆ ಪ್ರದೇಶದಲ್ಲಿ ಏನಾಗಿದೆ, ಹೆಚ್ಚು ಜನ ಪರಿಶಿಷ್ಟ ಪಂಗಡದವರು ಇಲ್ಲ. ಇತರೆ ವರ್ಗದವರು ಹೆಚ್ಚಿನ ಜನ ಇದ್ದಾರೆ. ಆ ವಸತಿ ಶಾಲೆಯನ್ನು ಮುಚ್ಚಿದರೆ ಬಹಳ ಕಷ್ಟವಾಗುತ್ತದೆ. ದಯಮಾಡಿ ಮಾನವೀಯತೆ ದೃಷ್ಟಿಯಿಂದ ಈ ವರ್ಷದವರೆಗೆ ತಳ್ಳಿ. ಈ ವರ್ಷ ಅಕಾಡೆಮಿಕ್ ಇಯರ್ ಮುಗಿಯಲಿ. ಆಗ ತದ ನಂತರ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ದಯಮಾಡಿ ಇದನ್ನು ಒಪ್ಪಬೇಕು.

ಶ್ರೀ ಎ. ನಾರಾಯಣಸ್ವಾಮಿ(ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಜಯಚಂದ್ರರವರು ಹೇಳಿದ ಒಂದು ವ್ಯವಸ್ಥೆ ಬಗ್ಗೆ

ಇಡೀ ರಾಜ್ಯದಾದ್ಯಂತ ಒಂದು ವರ್ಷದಿಂದ ಹಾಸ್ಟೆಲ್‌ಗಳ ಹಾಜರಾತಿ ಮಾಹಿತಿಯ ದಾಖಲಾತಿ ಪಡೆಯುತ್ತಿದ್ದೇವೆ. ರಾಜ್ಯದಲ್ಲಿ ಒಂದು ಆತಂಕ ಏನಿದೆ ಎಂದರೆ, ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳ ಹಾಜರಾತಿ ರಾಜ್ಯದಲ್ಲಿ ಕಡಿಮೆಯಾಗುತ್ತಿದೆ. ಒಟ್ಟು ವಿದ್ಯಾರ್ಥಿಗಳಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳ ಹಾಜರಾತಿ ಆಗುತ್ತಿಲ್ಲ. ಆದರೆ ಹಿಂದುಳಿದ ವರ್ಗದ ವಿದ್ಯಾರ್ಥಿ ನಿಲಯಗಳು ಹೆಚ್ಚಾಗುತ್ತಿವೆ. ಆದ್ದರಿಂದ ಯಾವ ಹಾಸ್ಟೆಲ್‌ಗಳಲ್ಲಿ ಹಾಜರಾತಿ 20% ಗಿಂತ ಕಡಿಮೆ ಇತ್ತು, ಅದನ್ನು ಮುಚ್ಚುವುದಕ್ಕಿಂತ ಆಪ್ ಗ್ರೇಡ್ ಮಾಡಿ ಎಲ್ಲಿ ಅವಶ್ಯಕತೆ ಇದೆ, ಅಲ್ಲಿ ಪ್ರಾರಂಭ ಮಾಡಿದ್ದೇವೆ. ಯಾವ ಆಶ್ರಮ ಶಾಲೆಯಲ್ಲಿ 10% ಗಿಂತ ಕಡಿಮೆ ವಿದ್ಯಾರ್ಥಿಗಳ ಸಂಖ್ಯೆ ಇದ್ದರೆ ಅದನ್ನು ಮುಚ್ಚಿ ಅದನ್ನು ಆಪ್‌ಗ್ರೇಡ್ ಮಾಡಿ ಯಾವ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ Education Office ಇದೆ, ಅಲ್ಲಿ ಪ್ರಾರಂಭ ಮಾಡುವುದಕ್ಕೆ ಸುಮಾರು 192 ನೂತನ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿದ್ದೇವೆ. ಈ ಬಗ್ಗೆ 18 ಜನ ವಿದ್ಯಾರ್ಥಿಗಳು ಮಾತ್ರ ಆ ವಿದ್ಯಾರ್ಥಿ ನಿಲಯದಲ್ಲಿದ್ದರು. ಆದ್ದರಿಂದ ಅದನ್ನು ಶಿಫ್ಟ್ ಮಾಡುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ತಮ್ಮ ಪ್ರಶ್ನೆ ಬಂದ ನಂತರ ವರದಿ ತರುವುದಕ್ಕೆ ಹೇಳಿದ್ದೇನೆ. ಈಗಾಗಲೇ ನಿಮ್ಮ ಜಿಲ್ಲೆಯಲ್ಲಿಯೂ ಸಹ ಐದು ಹಾಸ್ಟೆಲ್‌ಗಳನ್ನು ಮಂಜುರು ಮಾಡಿದ್ದೇವೆ. ಅಡ್ಮಿಷನ್ ಆದ ಮೇಲೆ ಆ ವರದಿ ಆಧಾರದ ಮೇಲೆ ತಮಗೆ ಮಂಜೂರಾತಿ ಖಂಡಿತವಾಗಿ ನೀಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ:– ಅಲ್ಲಿಯವರೆಗದರೂ ಸ್ಥಗಿತ ಮಾಡಿ. ಏಕೆಂದರೆ ಮಕ್ಕಳು ನಿನ್ನೆ ಊಟ ಇಲ್ಲದೆ ಕೂತಿದ್ದಾರೆ. ಅದು ಅವಮಾನ.

ಶ್ರೀ ಎ. ನಾರಾಯಣ ಸ್ವಾಮಿ:– ಯಾವುದೇ ಮಕ್ಕಳಿಗೆ ತೊಂದರೆಯಾಗುವುದಕ್ಕೆ ಬಿಡುವುದಿಲ್ಲ.

5. **ವಿಷಯ:** ಆಯುರ್ವೇದಿಕ್ ಡಾಕ್ಟರ್‌ಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.

ಶ್ರೀ ಯು.ಟಿ. ಖಾದರ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ರಾಜ್ಯದ ಆರೋಗ್ಯಕ್ಕೆ ಸಂಬಂಧಪಟ್ಟ ಹಾಗೆ ಆಯುರ್ವೇದಿಕ್ ಡಾಕ್ಟರ್ ಅವರದೇ ಆದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಯಾವ ಪ್ರದೇಶದ PHC ಯಲ್ಲಿ ನಮಗೆ ವೈದ್ಯರು ಸಿಗಲಿಲ್ಲವೋ ಅಂತಹ ಪ್ರದೇಶಗಳಲ್ಲಿ ಆಯುರ್ವೇದಿಕ್ ಡಾಕ್ಟರ್ ಗಳ ಸೇವೆಯನ್ನು ಪಡೆದುಕೊಳ್ಳುವುದಕ್ಕೆ ನಾವು ತಯಾರಿಸಿದ್ದೇವೆ. ವೈದ್ಯರು ಮುಷ್ಕರ ನಿರತವಾದ ಸಂದರ್ಭದಲ್ಲಿ ಸರ್ಕಾರದಿಂದ ಆದೇಶ

ಮಾಡಿ ಸಂಬಂಧಪಟ್ಟ PHC ಗಳ ಆರ್ಯುವೇದಿಕ್ ಡಾಕ್ಟರ್‌ಗಳನ್ನು ನಿಯೋಜಿಸಿ ಜನರ ಆರೋಗ್ಯಕ್ಕೆ ತೊಂದರೆಯಾಗದ ಹಾಗೆ ನೋಡಿಕೊಳ್ಳಬೇಕೆಂದು ಆದೇಶ ಕೂಡ ಕೊಟ್ಟಿದ್ದಾರೆ. ಸುಪ್ರೀಂ ಕೋರ್ಟ್ ಕೂಡ ಅವರಿಗೆ ಇಂತಹ ಅವಕಾಶ ಮಾಡಿ ಕೊಡಬಹುದು ಎಂದು ಹೇಳಿರುವುದು ಕೂಡ ಇದೆ. ಇಷ್ಟೆಲ್ಲಾ ಇರುವಾಗ ಇವತ್ತು ಕೆಲವೊಂದು ಸಮಸ್ಯೆಗಳು ಏನಿವೆ ಎಂದರೆ, ತುರ್ತು ಸಂದರ್ಭದಲ್ಲಿ ಪೇಶೆಂಟ್ ರಾತ್ರಿ ಹೊತ್ತು 104 ಡಿಗ್ರಿ ಜ್ವರದಲ್ಲಿ ಹೋದಾಗ ಅದನ್ನು ಕಡಿಮೆ ಮಾಡುವುದಕ್ಕೆ ಆಲೋಪತಿ ಮದ್ದು ಕೊಡಬೇಕೆಂದರೆ ಅವರಿಗೆ ಧೈರ್ಯ ಇರುವುದಿಲ್ಲ. ಅದನ್ನೇ ಹಿಡಿದುಕೊಂಡು ಅವರಿಗೆ ಕಿರುಕುಳ ಕೊಡುವುದಕ್ಕೆ ಅವಕಾಶ ಇದೆ. ಇದನ್ನೆಲ್ಲಾ ಮುಂದಿಟ್ಟುಕೊಂಡು ಆಯುರ್ವೇದಿಕ್ ಡಾಕ್ಟರ್‌ಗಳು ರಾಜ್ಯದಾದ್ಯಂತ ಮುಷ್ಕರವನ್ನು ನಡೆಸುತ್ತಿದ್ದಾರೆ. ತಾವೂ ಕೂಡ ಸರ್ಕಾರದಿಂದ ನಾವು ಮಾಡುತ್ತೇವೆಂದು ಕೂಡ ಹೇಳುವುದಿಲ್ಲ. ನಾನು ಮಂತ್ರಿಗಳಲ್ಲಿ ಕೇಳುವುದು ನಾವು ನೋಡುತ್ತೇವೆಂದು ಹೇಳುವುದಲ್ಲ. ಏನಾದರೂ ಸ್ಪಷ್ಟ ನಿರ್ದೇಶನ ನೀಡಬೇಕು. ನಾವು ಇಲ್ಲಿ ಬಂದು ವರ್ಷ ವರ್ಷ "ಕೋಣದ ಮುಂದೆ ಕಿಂದರಿ ಬಾರಿಸಿದ ಹಾಗೆ ಆಗಿದೆ. ಬೇರೆ ರಾಜ್ಯಗಳಲ್ಲಿ ಪರ್ಮಿಷನ್ ಇದೆ.

ಶ್ರೀ ಎಂ.ಬಿ ಪಾಟೀಲ್ (ಬಬಲೇಶ್ವರ್) : ಮಾನ್ಯ ಅಧ್ಯಕ್ಷರೆ, ಒಂದು ಸಲ್ಯೂಷನ್ ಇದೆ. ಆಯುರ್ವೇದಿಕ್ ಡಾಕ್ಟರ್‌ಗಳಿಗೆ ಒಂದು ಆರು ತಿಂಗಳು ನೀವು ಟ್ರೈನಿಂಗ್ ಪ್ರೋಗ್ರಾಂ ಹಮ್ಮಿಕೊಳ್ಳಬೇಕು. ಎಮರ್ಜೆನ್ಸಿ ಬಂದಾಗ ಚಿಕಿತ್ಸೆ ನೀಡುವಂತಹ ಟ್ರೈನಿಂಗ್ ಪ್ರೋಗ್ರಾಂ ಕೇಂದ್ರ ಸರ್ಕಾರದ ನ್ಯಾಷನಲ್ ರೂರಲ್ ಹೆಲ್ತ್ ಮಿಷನ್ ಆಗಲಿ, ರಾಜ್ಯ ಸರ್ಕಾರದಿಂದ ಎಮರ್ಜೆನ್ಸಿ ಹ್ಯಾಂಡ್ಲ್ ಮಾಡುವುದಕ್ಕೆ ಒಂದು ಟ್ರೈನಿಂಗ್ ಪ್ರೋಗ್ರಾಂ ಮಾಡಿ ಅವರಿಗೆ ಪರ್ಮಿಷನ್ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ ರೂರಲ್‌ನಲ್ಲಿ ಇರುವವರೆಲ್ಲರೂ ಆಯುರ್ವೇದಿಕ್ ಡಾಕ್ಟರ್‌ಗಳು. ಎಲ್ಲಾ ಪ್ರೈಮರಿ ಹೆಲ್ತ್‌ಸೆಂಟರ್‌ಗಳಲ್ಲಿ ಆಯುರ್ವೇದಿಕ್ ಡಾಕ್ಟರ್‌ಗಳನ್ನು ತೆಗೆದುಕೊಂಡಿರುವ ಉದಾಹರಣೆಗಳು ಇವತ್ತು ನಮ್ಮ ಮುಂದಿವೆ. ಅದಕ್ಕೆ ಆರು ತಿಂಗಳ ಒಂದು ಟ್ರೈನಿಂಗ್ ಪ್ರೋಗ್ರಾಂ ಮಾಡಿ ಅದಕ್ಕೆ ಸುಪ್ರೀಂ ಕೋರ್ಟ್ ಒಪ್ಪುತ್ತದೆ, ಹೈಕೋರ್ಟ್ ಒಪ್ಪುತ್ತದೆ, ಕೇಂದ್ರ ಸರ್ಕಾರ ಕೂಡ ಒಪ್ಪುತ್ತದೆ. ಟ್ರೈನಿಂಗ್ ಪ್ರೋಗ್ರಾಂ ಇಲ್ಲದೆ ಮಾಡುತ್ತೇವೆಂದರೆ ಬಹಶಃ ಒಪ್ಪುವುದಿಲ್ಲ. ಕರ್ನಾಟಕ ಸರ್ಕಾರದಿಂದ ಟ್ರೈನಿಂಗ್ ಪ್ರೋಗ್ರಾಂ ಅಳವಡಿಸಿ ಅವರಿಗೆಲ್ಲರಿಗೂ ತಾವು ಪರವಾನಗಿ ಕೊಡಬೇಕೆಂದು ತಮ್ಮ ಮುಖಾಂತರ ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೆ, ಆಯುಷ್ ಆಸ್ಪತ್ರೆಗಳ ಬಗ್ಗೆ ನಾನು ಮತ್ತು ಶ್ರೀ ಶೈಲಪ್ಪ ಬಿದರೂರುರವರು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೇವೆ. ಅದಕ್ಕೆ ಪೂರಕವಾಗಿ ಮಾತನಾಡಿಬಿಡುತ್ತೇವೆ.

ಅಧ್ಯಕ್ಷರು: ಇದು ಶೂನ್ಯ ವೇಳೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಂತ್ರಿಗಳು ನೀವೂ ಮಾತನಾಡಿಬಿಡಿ ಎಂದು ಹೇಳಿದರು.

ಅಧ್ಯಕ್ಷರು: ಅವರು ಉತ್ತರ ಹೇಳಲಿ ನಂತರ ತೆಗೆದುಕೊಳ್ಳೋಣ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ರಾಜ್ಯದಾದ್ಯಂತರ ಆಯುಷ್ ಡಾಕ್ಟರ್‌ಗಳು ನಿರಶನ ಮಾಡುತ್ತಿದ್ದಾರೆ. PHC ಮತ್ತು CHU ಸೆಂಟರ್‌ಗಳಲ್ಲಿ ಮತ್ತು ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿ ಕೂಡ MBBS ಡಾಕ್ಟರ್‌ಗಳು ಇಲ್ಲ.

ಅಧ್ಯಕ್ಷರು: ನಿಮ್ಮ ಗಮನ ಸೆಳೆಯುವ ಸೂಚನೆ ಬೇರೆ ಇದೆ, ಅಗ ಕೇಳಿ.

ಡಾ|| ಹೆಚ್.ಸಿ. ಮಹಾದೇವಪ್ಪ (ಟಿ. ನರಸೀಪುರ): ಮಾನ್ಯ ಅಧ್ಯಕ್ಷರೆ, ಭಾರತ ಒಂದು ಅಭಿವೃದ್ಧಿಶೀಲ ರಾಷ್ಟ್ರ. ನಮ್ಮ ಪುರಾತನ ಕಾಲದಿಂದ ನಮ್ಮ Indian system of medicine practice ಮಾಡಿ, ಯೋಗ ಮತ್ತು ನ್ಯಾಚುರೋಪತಿ ಮುಖಾಂತರ ನಮ್ಮ ಜನರ ಆರೋಗ್ಯ ರಕ್ಷಣೆ ಮಾಡುವುದಕ್ಕೆ ಒಂದು ಪ್ರಬಲವಾದ ವಿಧಾನ. ಇಲ್ಲಿ ಬಂದಿರುವ ಸಮಸ್ಯೆ ಅಲೋಪತಿ ಸಿಸ್ಟಮ್ ಆಫ್ ಮೆಡಿಸಿನ್‌ನಲ್ಲಿ Indian system of medicine practice ಮಾಡುವುದಕ್ಕೆ ಅವಕಾಶವಿದೆ. ಆದರೆ ನಮ್ಮ ಆಯುರ್ವೇದಿಕ್ ಸಿಸ್ಟಮ್‌ನಲ್ಲಿ ಅಲೋಪತಿಯನ್ನು ಪ್ರಾಕ್ಟೀಸ್ ಮಾಡುವುದಕ್ಕೆ ನಮಗೂ ಕೂಡ ಅವಕಾಶ ಕೊಡಿ ಎನ್ನತಕ್ಕಂತಹ ಬೇಡಿಕೆಯನ್ನು ರಾಜ್ಯದಾದ್ಯಂತ ವೈದ್ಯರು ಮುಷ್ಕರ ನಡೆಸಿ ಮಾನ್ಯ ಆರೋಗ್ಯ ಸಚಿವರು ಭೇಟಿ ಮಾಡಿ ಅವರ ಬೇಡಿಕೆಗಳನ್ನು ಕೇಳಿ ಬಂದಿದ್ದಾರೆ. ನಮಗೆ ಇಲ್ಲಿ ಬೇಕಾಗಿರುವುದು ಜನರು Indian system of medicine ನಲ್ಲಿ ಆಸಕ್ತಿ ವಹಿಸಿ ಆ ಸಿಸ್ಟಮ್ ಕಡೆಗೆ ಹೋಗಬೇಕೆಂಬ ಅಭಿಪ್ರಾಯವನ್ನು ಮೂಡಿಸಬೇಕು ಎನ್ನುವಂಥದ್ದು ಅತ್ಯಂತ ಪ್ರಮುಖವಾದ ವಿಷಯ. ಆಯುರ್ವೇದಿಕ್ ಆಸ್ಪತ್ರೆ ಕೊಡುತ್ತೇವೆಂದರೆ ಜನ ಸಾಮಾನ್ಯವಾಗಿ ಬೇಡವೆಂದು ಹೇಳುತ್ತಾರೆ. PHC ಮಾತ್ರ ಕೊಡಿ ಎಂದು ಹೇಳತಕ್ಕಂತಹ ವಾತಾವರಣ ರಾಜ್ಯದ ಉದ್ದಗಲಕ್ಕೂ ಇದೆ. ಆದರೆ ಇವರು ಪ್ರಾಕ್ಟೀಸ್ ಮಾಡಬೇಕಾದರೆ ನಮ್ಮ M.B. ಪಾಟೀಲರು

ಹೇಳಿದ ಹಾಗೆ ನನಗೆ ಗೊತ್ತಿರುವ ಪ್ರಕಾರ ಅವರಿಗೆ ಈಗ ಸದ್ಯಕ್ಕೆ ಅವಕಾಶವಿಲ್ಲ. ಅಲೋಪತಿ ಸಿಸ್ಟಮ್ ಆಪ್ ಮೆಡಿಸಿನ್‌ನಲ್ಲಿ even NIMHANS ನಲ್ಲಿ ಮೆಮೋರಿಗೆ ಆಯುರ್ವೇದಿಕ್ ಸಿಸ್ಟಮ್ ಆಫ್ ಡ್ರಗ್ಸ್ ಪ್ರಿಸ್ಕ್ರೈಬ್ ಮಾಡುತ್ತಾರೆ. ಬೇರೆ ಬೇರೆ ಔಷಧಿಗಳನ್ನು prescribe ಮಾಡುತ್ತಾರೆ. where as Ayurvedic system of medicine ನವರಿಗೆ pharmaceutical ಇದು ಗೊತ್ತಿರುವುದಿಲ್ಲ. ಅದನ್ನು ಅಧ್ಯಯನ ಮಾಡಬೇಕು, ತಿಳಿದುಕೊಳ್ಳಬೇಕು. ಇಲ್ಲಿ ರೋಗಿಗಳ ಜೀವನ ಹಾಗೂ ಆರೋಗ್ಯ ಮುಖ್ಯವಾಗಿರುವುದರಿಂದ ಅವರಿಗೆ ಪೂರಕವಾದ ಆಲೋಪತಿ ಸಿಸ್ಟಮ್ ಆಫ್ ಮೆಡಿಸಿನ್‌ನಲ್ಲಿ ಪ್ರಬಲವಾದ ಭೌತಿಕ ಆಸಕ್ತಿ ಮತ್ತು ತಿಳುವಳಿಕೆ ಇರುವುದು ಖಚಿತಪಡಿಸಿಕೊಂಡು ಆ ಮೇಲೆ ನೀವು ಪರವಾನಗಿ ಕೊಡಬೇಕು. ಏಕಾ ಏಕಿ ಕೊಟ್ಟರೆ we are dealing with human life. ಆ ಹಿನ್ನೆಲೆಯಲ್ಲಿ ನೀವು Ayurvedic system of medicine ಏನು ಅಧ್ಯಯನ ಮಾಡಿದ್ದಾರೆ, ಆ ಡಾಕ್ಟರ್‌ಗಳು ನಿರುದ್ಯೋಗಿಗಳಾಗದೆ ಅವರ ಸೇವೆಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಬಳಸುವುದರ ಮುಖಾಂತರ ದುಬಾರಿಯಾಗಿರುವಂತಹ ಔಷಧಿಗಳ ಖರ್ಚನ್ನು ಭರಿಸಲಿಕ್ಕೆ ಸಾಮಾನ್ಯ ಜನರಿಗೆ ಸಾಧ್ಯವಾಗುತ್ತಿಲ್ಲ. ಗಿಡಮೂಲಿಕೆಗಳಿಂದ ತಯಾರಾದ ಔಷಧಿಗಳನ್ನು ಮತ್ತು ರೋಗ ಬರದೇ ಇರುವ ರೀತಿಯಲ್ಲಿ ನಮ್ಮ ಹಿತ್ತಲಿನಲ್ಲಿಯೇ ಔಷಧಿಗಳನ್ನು ಬೆಳೆಸಿಕೊಂಡು ಅದನ್ನು ಗುಣಪಡಿಸತಕ್ಕಂತಹ ರೀತಿಯಲ್ಲಿ ಈ ಸಿಸ್ಟಮ್ ಅನ್ನು ಅಭಿವೃದ್ಧಿಪಡಿಸಿ ಉತ್ತೇಜನ ಕೊಟ್ಟು ಅವರು ನಿರುದ್ಯೋಗಿಗಳಾಗದೆ ಅವರು ಕಲಿತಿರತಕ್ಕಂತಹ ನಮ್ಮ ದೇಶದ ಪುರಾತನ ವೈದ್ಯ ಪದ್ಧತಿ ನಶಿಸಿ ಹೋಗದೆ ಅದನ್ನು ಉಪಯೋಗಿಸಿಕೊಂಡು ಹೆಚ್ಚು ಹೆಚ್ಚು ಆಯುರ್ವೇದಿಕ್ ಆಸ್ಪತ್ರೆಗಳನ್ನು ಎಲ್ಲಾ ಹಳ್ಳಿಗಳಲ್ಲಿ ಪ್ರಾರಂಭ ಮಾಡಿ ಅವರಿಗೆ ಕೆಲಸ ಕೊಡಿ ಮತ್ತು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅವರೂ ಕೂಡ ಭಾಗಿಯಾಗುವ ರೀತಿಯಲ್ಲಿ ತೀರ್ಮಾನವನ್ನು ಸಮರ್ಪಕವಾಗಿ ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ನಾನು ಸರ್ಕಾರಕ್ಕೆ ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಆಯುಷ್ ಡಾಕ್ಟರುಗಳು ಈಗಾಗಲೇ freedom park ನಲ್ಲಿ ನಿರಂತರವಾಗಿ ಸುಮಾರು 6ನೇ ದಿವಸ ಹರತಾಳ ಮಾಡುತ್ತಿದ್ದಾರೆ. PHU, PHC ಮತ್ತು District Hospital ನಲ್ಲಿ ಕೂಡ ವೈದ್ಯರ ಕೊರತೆ ಇದೆ. ಇಡೀ ರಾಷ್ಟ್ರಾದ್ಯಂತ ಎಂ.ಬಿ.ಬಿ.ಎಸ್. ವೈದ್ಯರ ಕೊರತೆ ಇದೆ. ಅದಕ್ಕೆ ಪೂರಕವಾಗಿ

ರಾಜ್ಯ ಸರ್ಕಾರ ವೈದ್ಯಕೀಯ ಕಾಲೇಜುಗಳನ್ನು ಕೂಡ ಮಂಜೂರು ಮಾಡಬೇಕಾಗಿದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಈಗಾಗಲೇ 12 ರಾಜ್ಯಗಳಲ್ಲಿ ಆಯುಷ್ ಡಾಕ್ಟರಿಗೆ ಅಲೋಪತಿ ಚಿಕಿತ್ಸೆಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ 4,000 ವೈದ್ಯರ ಕೊರತೆ ಇದೆ. ಇವತ್ತಿನ ಪರಿಸ್ಥಿತಿಗೆ ಅನುಗುಣವಾಗಿ ಆ ವೈದ್ಯರಿಗೆ ಅಲೋಪತಿ ಚಿಕಿತ್ಸೆಯನ್ನು ಕೊಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆನ್ನುವ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ. ಅವರು ಈಗಾಗಲೇ ಮಾನ್ಯತೆ ಪಡೆದ ವಿದ್ಯಲಯಗಳಲ್ಲಿ ಪದವಿ ಪಡೆದು ಆಯುಷ್ ವೈದ್ಯರು ಪಠ್ಯಕ್ರಮದಲ್ಲಿ ಆಯುರ್ವೇದ, ಯುನಾನಿ, ಹೋಮಿಯೋಪತಿ ಮತ್ತು ಅಲೋಪತಿಗೆ ಸಂಬಂಧಪಟ್ಟ ವಿಷಯಗಳನ್ನು ಅಧ್ಯಯನ ಮಾಡಿ ಕಲಿಕಾ ಅವಧಿಯಲ್ಲಿ ಎರಡು ವೈದ್ಯ ಪದ್ಧತಿಯಲ್ಲಿ ತರಬೇತಿಯನ್ನು ಪಡೆದುಕೊಂಡಿರುತ್ತಾರೆ. ತಾತ್ಕಾಲಿಕವಾಗಿ ಈ ಒಂದು ಕೊರತೆಯನ್ನು ತುಂಬಿಸಬೇಕಾಗಿರುವುದು ಅತ್ಯಂತ ಅವಶ್ಯಕತೆ ಇದೆ. ಇವತ್ತು ಬಹಳಷ್ಟು ಆಸ್ಪತ್ರೆಗಳನ್ನು ಮುಚ್ಚಿದ್ದಾರೆ, ಆಸ್ಪತ್ರೆಗಳಲಿ ವೈದ್ಯರು ಇಲ್ಲ. ಕೊನೇಪಕ್ಷ ಆಸ್ಪತ್ರೆಗಳಲ್ಲಿ ಆಯುಷ್ ಡಾಕ್ಟರ್‌ಗಳು ಇದ್ದರೆ ಅವರಿಗೆ ತರಬೇತಿ ಇರುವುದರಿಂದ ತುರ್ತು ಪರಿಸ್ಥಿಯಲ್ಲಿ ಚಿಕಿತ್ಸೆ ನೀಡಿದರೆ ಜನರಿಗೆ ಬಹಳ ಅನುಕೂಲವಾಗುತ್ತದೆ. ಆದಕಾರಣಕ್ಕಾಗಿ ತಾವು ಈ ವಿಚಾರವನ್ನು ಪರಿಗಣಿಸುತ್ತೀರೆಂದು ಭಾವಿಸಿ ನಾನು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲ. ಸರ್ಕಾರಿ contract basis ಮೇಲೆ BAMS doctors ಅನ್ನು ಸುಮಾರು ಆಸ್ಪತ್ರೆಗಳಲ್ಲಿ ತೆಗೆದುಕೊಂಡು ಅವರಿಗೆ ಕೆಲಸ ಕೊಟ್ಟಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಅದೇ ವೈದ್ಯರು Allopathic medicine ಬರೆದುಕೊಡುತ್ತಾರೆ. ಆದರೆ ಅವರು practice ಮಾಡುವಂತಹ ಸಂದರ್ಭದಲ್ಲಿ ಅವರು allopathic ಬರೆದುಕೊಡುವುದು ತಪ್ಪು ಎಂದು ಹೇಳಿ ಅವರ ಮೇಲೆ ಹಲವಾರು ಕಡೆ ಪ್ರಕರಣಗಳನ್ನು ದಾಖಲು ಮಾಡಿದ್ದಾರೆ. ಇವತ್ತು ಗುಜರಾತ್, ಮಹಾರಾಷ್ಟ್ರ ಉತ್ತರ ಪ್ರದೇಶ, ಪಂಜಾಬ್ ಮತ್ತು ಮಧ್ಯಪ್ರದೇಶ, ಈ ರೀತಿಯಾಗಿ 12 ರಾಜ್ಯಗಳಲಿ ಆಯುರ್ವೇದಿಕ್ ಮೆಡಿಸಿನ್ ಡಾಕ್ಟರ್‌ಗಳಿಗೆ ಅಲೋಪತಿ ಔಷಧವನ್ನು ಬಳಸುವುದಕ್ಕೆ ಪರವಾನಗಿ ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರದಲ್ಲಿ ಸುಮಾರು ವರ್ಷದಿಂದ ಅವರು ಬೇಡಿಕೆಯನ್ನು ಇಟ್ಟರೂ ಕೂಡ ಅದು ಹಾಗೇ ಪೆಡಂಡಿಂಗ್ ಇದೆ. ಅವರಿಗೆ Allopathic medicine ಬಳಸುವುದಕ್ಕೆ ಅನುಮತಿಯನ್ನು ಕೊಡುವುದು ಬಹಳ

ಸೂಕ್ತ. ಏಕೆಂದರೆ ಹಳ್ಳಿಯಲ್ಲಿ ಯಾರಿಗೆ ಯಾವುದೇ ಖಾಯಿಲೆ ಬಂದರೂ ಕೂಡ ಸರ್ಕಾರಿ ವೈದ್ಯರು ಅವರ ಕೆಲಸದ ಸಮಯ ಮುಗಿದ ಮೇಲೆ ಸಿಗುವುದಿಲ್ಲ. ಅವರು ಎಲ್ಲಿ ಹೋಗಿರುತ್ತಾರೆ ಗೊತ್ತಿರುವುದಿಲ್ಲ. ಸಮಯಕ್ಕೆ ಸರಿಯಾಗಿ ಸಿಗುವ ವೈದ್ಯರು ಎಂದರೆ ಈ ಆಯುರ್ವೇದಿಕ್ ವೈದ್ಯರುಗಳು. ಅದುದರಿಂದ ಅವರಿಗೆ ಪರವಾನಗಿ ನೀಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ತಾವು ಹೇಳಿದ ವಿಚಾರವನ್ನೇ ಹೇಳಬೇಡಿ, ಹೊಸದಾಗಿ ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ವಿಷಯದ ಬಗ್ಗೆ ಬಹಳಷ್ಟು ಮಾನ್ಯ ಸದಸ್ಯರುಗಳು ಬೆಳಕನ್ನು ಚೆಲ್ಲಿದ್ದಾರೆ. ಸುಮಾರು ಒಂದು ವಾರದಿಂದ ಬೆಂಗಳೂರಿನಲ್ಲಿ ಆಯುಷ್ ವೈದ್ಯರುಗಳು ನಮಗೂ ಅಲೋಪತಿಯಲ್ಲಿ practice ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅವರ ಬೇಡಿಕೆ ಇರುವುದು ಇಷ್ಟೆ, ಬೇರೆ 12 ರಾಜ್ಯಗಳಲ್ಲಿ ಅನುಮತಿ ಕೊಟ್ಟಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಕೂಡ ಅನುಮತಿ ಕೊಡಬೇಕು ಎಂದು ಕೇಳುತ್ತಿದ್ದಾರೆ. ಅವರ ಬೇಡಿಕೆಯನ್ನು ಈಡೇರಿಸುವುದು ಸೂಕ್ತ ಎನ್ನುವುದು ನಮ್ಮೆಲ್ಲರ ಅಭಿಪ್ರಾಯ. ಏಕೆಂದರೆ ವೈದ್ಯರುಗಳ ಕೊರತೆಯಿರುವುದರಿಂದ ಆಸ್ಪತ್ರೆಗಳನ್ನು ಮುಚ್ಚಿದ್ದಾರೆ. ಅದರಿಂದ ಅವರ ಬದುಕಿಗೂ ಕೂಡ ದಾರಿ ತೋರಿಸಿದ ಹಾಗೆ ಆಗುತ್ತದೆ. ಅವರ ವಿರುದ್ಧವಾಗಿ ಆಗಬಾರದು, ಅವರಿಗೂ ಕೆಲಸ ಸಿಕ್ಕಿದ ಹಾಗೆ ಆಗುತ್ತದೆ. ಅದಕ್ಕೋಸ್ಕರ ಸರ್ಕಾರ ಇದನ್ನು ಪರಿಗಣಿಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಗ್ರಾಮೀಣ ಪ್ರದೇಶದಲ್ಲಿ ಜ್ವಲಂತ ಸಮಸ್ಯೆಯಾಗಿದೆ. ಒಂದು ಕಡೆ ಸರ್ಕಾರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಡಾಕ್ಟರುಗಳನ್ನು ನೇಮಕ ಮಾಡಿಲ್ಲ. ಅಲ್ಲಿ ಇವರು ಚಿಕಿತ್ಸೆಗಳನ್ನು ಕೊಡುವಂತಹ ಸಂದರ್ಭದಲ್ಲಿ ಅಲೋಪತಿಕ್ ಔಷಧಗಳನ್ನು ಉಪಯೋಗ ಮಾಡುತ್ತಾರೆ. ಇವರಿಗೆ ಉಪಯೋಗ ಮಾಡಬಾರದು ಎಂದು ಅಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳು ಕಿರುಕುಳ ಕೊಡುವಂತಹ ಪ್ರಕರಣಗಳಾಗಿವೆ. ಈಗಾಗಲೇ Indian Medical Council 1970 ರಲ್ಲಿ ಇವರಿಗೆ ವಿಶೇಷವಾದಂತಹ ಪ್ರಕರಣ ಎಂದು ಪರಿಗಣಿಸಿ ಕೊಡಬಹುದು ಎಂದು ಒಂದು ಅಧಿಸೂಚನೆಯನ್ನು ಕೊಟ್ಟಿದೆ. ಅದೇ ರೀತಿ ಮಹಾರಾಷ್ಟ್ರ ಸರ್ಕಾರ 1992 ರಲ್ಲಿ ಪರವಾಗಿಯನ್ನು ಕೊಟ್ಟಿದೆ. 12 ರಾಜ್ಯಗಳಲ್ಲಿ

ಇವರಿಗೆ ಯಾವ ರೀತಿಯಾಗಿ ಅನುಕೂಲ ಮಾಡಿಕೊಟ್ಟಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಕೂಡ ವಿಶೇಷ ಅಧಿಕಾರಿಯನ್ನು ನೇಮಕ ಮಾಡಿ ಅಲ್ಲಿಂದ ಮಾಹಿತಿಯನ್ನು ತರಿಸಿಕೊಂಡು ಅವರಿಗೆ ವಿಶೇಷವಾದ ತರಬೇತಿಯನ್ನು ಕೊಡುವುದರ ಮೂಲಕ ಈ ಒಂದು ಕಾರ್ಯಕ್ರಮವನ್ನು ಜಾರಿಗೊಳಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಯು.ಟಿ. ಖಾದರ್‌ರವರು ಶೂನ್ಯವೇಳೆಯಲ್ಲಿ ತಂದಿರುವಂತಹ ವಿಚಾರದ ಬಗ್ಗೆ ಮಾನ್ಯ ಸದಸ್ಯರುಗಳಾದ ಎಂ.ಬಿ. ಪಾಟೀಲ್, ಕರಡಿ ಸಂಗಣ್ಣ, ಮಹದೇವಪ್ಪನವರು, ಬಿ.ಸಿ. ಪಾಟೀಲ್, ವೆಂಕಟರಾವ್ ನಾಡಗೌಡರು ಮತ್ತು ಅಮರೇಗೌಡ ಬಯ್ಯಾಪುರ್‌ರವರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಮುಷ್ಕರ ನಡೆಯುತ್ತಿಲ್ಲ. ನಾನು ಹೋಗಿ ಅಲ್ಲಿ ಮಾತುಕತೆ ಮಾಡಿದ ನಂತರ ಅವರು ಮುಷ್ಕರವನ್ನು ಕೈ ಬಿಟ್ಟಿದ್ದಾರೆ. ಆ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾರೆ ಆಯುಷ್ ವೈದ್ಯರಿಗೆ ತುರ್ತು ಸಂಧರ್ಭದಲ್ಲಿ ಅಲೋಪತಿ ಔಷಧಗಳನ್ನು ಬಳಸಲು ಅನುಮತಿ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದು, ಇದೀಗ ರಾಜ್ಯದಲ್ಲಿ ಮುಷ್ಕರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆಯುಷ್ ಸಂಘದ ಪದಾಧಿಕಾರಿಗಳೊಂದಿಗೆ ನಾನು ದಿನಾಂಕ: 20-07-2012 ರಂದು ಚರ್ಚಿಸಿರುತ್ತೇನೆ. ರಾಜ್ಯದಲ್ಲಿ 45,746 ಆಯುಷ್ ವೈದ್ಯರೊಂದಿಗೆ ಅಲೋಪತಿ ವಿಭಾಗದಲ್ಲಿ 96,812 ವೈದ್ಯರು ನೋಂದಾಯಿಸಿಕೊಂಡಿದ್ದು, ಸುಮಾರು ಒಂದು ಲಕ್ಷಕ್ಕೂ ಮೀರಿದ ವೈದ್ಯರು ರಾಜ್ಯದಲ್ಲಿ ವೈದ್ಯಕೀಯ ಚಿಕಿತ್ಸೆ ನೀಡುತ್ತಿದ್ದಾರೆ. ಇತರೆ ಕೆಲವು ರಾಜ್ಯಗಳಲ್ಲಿ ಆಯುಷ್ ವೈದ್ಯರಿಗೆ ತುರ್ತು ಸಂದರ್ಭದಲ್ಲಿ ಅಲೋಪತಿ ಔಷದ ಬಳಸಲು ಪರವಾನಗಿ ನೀಡಲಾಗಿದೆ ಎಂದು ಸರ್ಕಾರದ ಗಮನಕ್ಕೆ ತರಲಾಗಿದೆ. ತುರ್ತು ಸಂದರ್ಭದಲ್ಲಿ ಆಯುಷ್ ವೈದ್ಯರು ಅಲೋಪತಿ ಔಷಧ ಬಳಸಲು ಅನುಮತಿಯನ್ನು ನೀಡಬೇಕೆಂಬ ಕೋರಿಕೆಯ ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ. ವಿಧಾನ ಪರಿಷತ್ತಿನ ಭರವಸೆ ಸಮಿತಿಯಲ್ಲಿ ಸಹ ಈ ವಿಷಯ ಪ್ರಸ್ತಾಪವಾಗಿದ್ದು, ರಾಜೀವ್ ಗಾಂಧಿ ವಿಶ್ವವಿದ್ಯಾಲಯದಲ್ಲಿ Integrated Medicine Course ಪುನರ್ ಪ್ರಾರಂಭಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳಲು ಸೂಚಿಸಲಾಗಿತ್ತು. ಅದರನ್ವಯ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತಹ ರಾಜೀವ್ ಗಾಂಧಿ ವಿಶ್ವವಿದ್ಯಾಲಯಲ್ಲಿ Intergrated Medicine Course

ಪುನರ್ ಪ್ರಾರಂಭಿಸುವ ಪ್ರಸ್ತಾವನೆಯೂ ಸಹ ಸರ್ಕಾರದ ಪರಿಶೀಲನೆಯಲ್ಲಿದೆ. ನಾನು ಈ ಹಿನ್ನೆಲೆಯಲ್ಲಿ ಎರಡು ಬಾರಿ ಮಾತುಕತೆ ಆಡಿದ್ದೇನೆ. ಇದರ ಬಗ್ಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುತ್ತದೆ. ಇನ್ನೊಂದು ಅಂಶವನ್ನು ಗಮನಕ್ಕೆ ತಂದಿದ್ದಾರೆ. K.M.P. Act. ಪ್ರಕಾರ 2007 ಮತ್ತು ಆಯುಷ್ ಆಕ್ಟ್ 1961 ಪ್ರಕಾರ ಕ್ರಮ ಜರುಗಿಸುತ್ತಿದ್ದಾರೆನ್ನುವ ಅಂಶವನ್ನು ಗಮನಕ್ಕೆ ತಂದಿದ್ದಾರೆ. ಈಗಾಗಲೇ ನಮ್ಮ ಅಧಿಕಾರಿಗಳು ಸರ್ಕಾರದಲ್ಲಿ ತೀರ್ಮಾನವಾಗುವವರೆಗೂ ಯಾವುದೇ ರೀತಿಯ ಕ್ರಮ ಜರುಗಿಸಬಾರದು ಎನ್ನುವ ನಿರ್ಧಾರವನ್ನು ಕೈಗೊಂಡು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಅತೀ ಶೀಘ್ರದಲ್ಲಿ ಇದರ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇವೆ.

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಇವರು ಹೇಳಿದ್ದು, ಅಡ್ಡ ಗೋಡೆ ಮೇಲೆ ದೀಪ ಇಟ್ಟ ಹಾಗೆ" ಆಯಿತು.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ 12 ರಾಜ್ಯಗಳಲ್ಲಿ ಇದನ್ನು ಅಳವಡಿಸಿದ್ದಾರೆ. ಅದಕ್ಕೆ ನೀವು immediate ಆಗಿ ಘೋಷಣೆ ಮಾಡಿಬಿಡಿ. ಮಾಹಾರಾಷ್ಟ್ರದಲ್ಲಿ ಮಾಡಿದ್ದಾರೆ.

ಶ್ರೀ ಬಿ.ಸಿ. ಪಾಟೀಲ್: ಇದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆ ಏನಿಲ್ಲ, ಐದು ರೂಪಾಯಿ ಬರ್ಡನ್ ಇಲ್ಲ.

ಶ್ರೀ ಬಂಡೆಪ್ಪ ಖಾಶೆಂಪೂರ್: ಇದರಿಂದ ಸರ್ಕಾರಕ್ಕೆ ಏನೂ ಬರ್ಡನ್ ಇಲ್ಲ, ಆರಾಮಾಗಿ ಮಾಡಬಹುದು.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ: ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ 1,200 ಆಸ್ಪತ್ರೆಗಳು close ಆಗಿವೆ.

ಅಧ್ಯಕ್ಷರು: ದಯವಿಟ್ಟು ಎಲ್ಲಾ ಕುಳಿತುಕೊಳ್ಳಿ, ಅವರು ಮಾತನಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಉತ್ತರ ಕೊಡುವುದಕ್ಕೆ

ಅವಕಾಶ ಕೊಡಿ. ಈ ಕುರಿತಂತೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳಾದಂತಹ ಶ್ರೀ ಆರ್. ಅಶೋಕ್‌ರವರು ಹಿಂದೆ ಆರೋಗ್ಯ ಮಂತ್ರಿಗಳಾಗಿದ್ದರು, ಅವರ ಜೊತೆ ಚರ್ಚೆ ಮಾಡಿದ್ದೇನೆ ಇದರಲ್ಲಿ legal Implications ಇದೆ. Supreme Court has given verdict. 12 ರಾಜ್ಯಗಳಲ್ಲಿನ ಆಜ್ಞೆಗಳನ್ನು ಅವರು ತಂದು ಕೊಟ್ಟಿದ್ದಾರೆ. ಯಾವುದೇ ಆಜ್ಞೆ ಮಾಡಿದರೂ ಕೂಡ ಸರ್ಕಾರ ಅದಕ್ಕೆ ಬದ್ಧರಾಗಿರಬೇಕಾಗುತ್ತದೆ. ನಿಮಗೆ ಗೊತ್ತಿರುವ ಹಾಗೆ ಮಾನ್ಯ ಪಾಟೀಲರು ಹೇಳಿದ ಹಾಗೆ ತರಬೇತಿ ಕೊಡುವುದರ ಬಗ್ಗೆ ಕೂಡ ಚಿಂತನೆ ಮಾಡಿ ಎನ್ನುವ ಸಲಹೆಯನ್ನು ಮಾನ್ಯ ಸದಸ್ಯರುಗಳಾದ ಮಹದೇವಪ್ಪನವರು ಮತ್ತು ಪಾಟೀಲರು ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಪರಿಶೀಲನೆ ಮಾಡುತ್ತಿದ್ದೇವೆ. ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಇಲ್ಲೇ ಘೋಷಣೆ ಮಾಡಿ ಎಂದರೆ ಅದನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ಸರ್ಕಾರ ಸಕಾರಾತ್ಮಕವಾಗಿ ಚಿಂತನೆ ಮಾಡುತ್ತಿದೆ ಎನ್ನುವ ಮಾತನ್ನು ನಾನು ಹೇಳಿದೆ. ನಾವು ಅದೇ ದಿಕ್ಕಿನಲ್ಲಿ ಪ್ರಯತ್ನವನ್ನು ಮಾಡುತ್ತೇವೆ.

6. ವಿಷಯ: ಬಡಾವಣೆಗಳನ್ನು ಮಾಡುವಾಗ ಅನುಪಾತದ ಪ್ರಕಾರ ನಿವೇಶವನ್ನು ಹಂಚುವ ಬಗ್ಗೆ

ಶ್ರೀ ಕೃಷ್ಣ ಬೈರೇಗೌಡ: (ಬ್ಯಾಟರಾಯನ ಪುರ): ಮಾನ್ಯ ಅಧ್ಯಕ್ಷರೆ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವೆಂದು ಇದೆ. ಇದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ BMRDA ಇದೆಯೋ, ಅದೇ ರೀತಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಇರುವಂಥ ಪ್ರದೇಶಗಳ ಭೂ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ Bangalore International Area Planning Authority (BIAPA) ಇದೆ. ಇವರು ಮೊದಲು ಬಡಾವಣೆಗಳಿಗೆ ಅನುಮತಿಯನ್ನು ಕೊಡುವಂಥ ಸಂದರ್ಭದಲ್ಲಿ ಶೇ. 50 ರಷ್ಟು ನಿವೇಶನಗಳನ್ನು ಮಾಡುವುದಕ್ಕೆ ಇನ್ನು ಉಳಿದ ಅರ್ಧದಷ್ಟು ರಸ್ತೆ, ಪಾರ್ಕ್ ಆಟದ ಮೈದಾನ ಮತ್ತು Civic Amenity ಇವುಗಳಿಗೆ ಕಾಯ್ದಿರಿಸುತ್ತಿದ್ದರು. ಅದೇ ಪ್ರಕಾರವಾಗಿ ಬಡಾವಣೆಗಳಿಗೆ ಅನುಮತಿಯನ್ನು ಕೊಡುತ್ತಾ ಬಂದಿದ್ದರು. ಕೆಲವು ವರ್ಷಗಳಿಂದ ಏನು ಮಾಡಿದರೆಂದರೆ, ನಿವೇಶನಗಳ ಅನುಪಾತವನ್ನು ಶೇ. 50 ಎಂದು ಇದ್ದದ್ದನ್ನು ಶೇ. 55ಕ್ಕೆ ಏರಿಕೆ ಮಾಡಿದರು, ಮತ್ತೆ public purpose ಗೆ ಇದ್ದದ್ದನ್ನು ಶೇ. 45ಕ್ಕೆ ಇಳಿಸಿದರು. ಈ ರೀತಿ ಇಳಿಕೆ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ,

ಒಳ್ಳೆಯದು. ಆದರೆ BIAPA ರವರು ಏನು ಮಾಡಿದ್ದಾರೆಂದರೆ, ಇವರು ಯಾವತ್ತು rules ಗೆ amendment ಅನ್ನು ತಂದರು. ತದನಂತರ ಬಂಥಂಥ ಬಡಾವಣೆಗಳಿಗೆ ಈ ಅನುಪಾತದಲ್ಲಿ ಅನುಮತಿಯನ್ನು ಕೊಟ್ಟಿದ್ದಿದ್ದರೆ ನಾವು ಒಪ್ಪಬಹುದು. ಆದರೆ ಇವರು ಮೊದಲೇ ನಿರ್ಮಾಣವಾಗಿದ್ದಂಥ ಬಡಾವಣೆಗಳಿಗೂ ಸಹಿತ retrospective ಎಂದು ಕರೆಯುತ್ತೇವೆ. ಆ retrospective ಆಗಿ ಆ ಬಡಾವಣೆಗಳ ನಕಾಶೆಗಳನ್ನು ಬದಲಾವಣೆ ಮಾಡಿ, ಶೇ. 5ರಷ್ಟು extra developerಗಳಿಗೆ ಬಿಟ್ಟು ಕೊಟ್ಟಿದ್ದಾರೆ. ತಾವು ಏನು ಬದಲಾವಣೆಗಳನ್ನು ತಂದಿದ್ದೀರಿ, ಇದಕ್ಕೆ retrospective powers ಇದೆಯೇ ? ಆ ರೀತಿ ಇಲ್ಲದೇ ಹೋದರೆ BIAPAನವರು ಯಾವ ಆಧಾರದ ಮೇಲೆ –ಹಿಂದೆ ನಿರ್ಮಾಣವಾದಂಥ ಬಡಾವಣೆಗಳಿಗೆ 5% extra park, ರಸ್ತೆಯನ್ನು ಕಡಿಮೆ ಮಾಡಿ ಕೊಡುವುದಕ್ಕೆ ಇವರಿಗೆ ಏನು powers ಇದೆ ? ಇಲ್ಲದೇ ಇದ್ದು ಅವರು ಕೊಟ್ಟಿದ್ದರೆ ಕಾನೂನು ಉಲ್ಲಂಘನೆ ಯಾಗುತ್ತದೆ. ಇದು ಸುಮಾರು ನೂರಾರು ಕೋಟಿ ರೂ. ಗಳಿಗೆ ಬೆಲೆ ಬಾಳುವಂಥ ಪ್ರದೇಶವಾಗಿದ್ದು, public purpose ಗೆ ಕಾದಿರಿಸಿರುವಂಥದ್ದನ್ನು ತೆಗೆದು private developers ಗೆ ಬಿಟ್ಟುಕೊಟ್ಟಿದ್ದಾರೆಂದರೆ, ಇದರಿಂದ ಜನರಿಗೆ ಬಹಳ ಅನ್ಯಾಯವಾಗುತ್ತದೆ ಮತ್ತು ಕಾನೂನು ಉಲ್ಲಂಘನೆಯೂ ಆಗುತ್ತದೆ. ಇವರು ಈ ರೀತಿ ಮಾಡಿದ್ದಾರೆನ್ನುವುದಕ್ಕೆ ನನ್ನ ಹತ್ತಿರ ದಾಖಲೆಗಳೂ ಸಹ ಇದೆ. ಆದ್ದರಿಂದ ತಾವು ಈ ರೀತಿ ಇದು ಆಗಿಲ್ಲವೆಂದು ಹೇಳುವಂಥ ಪ್ರಸಂಗವಲ್ಲ. ಇದು ನಮ್ಮ ಕಣ್ಣು ಮುಂದೆ ನಡೆದಿದೆ, ಅದಕ್ಕೆ ನಮ್ಮ ಹತ್ತಿರ ದಾಖಲೆಗಳು ಇವೆ. ಇದು ಹಗಲು ದರೋಡೆ ಎಂದು ಹೇಳದೆ ಮತ್ತೆ ಏನೂ ಹೇಳುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ನಾನು ಅಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ. ಇದನ್ನು ಯಾರು ಮಾಡಿದ್ದಾರೆ, ಅದು BIAPA ಕಾರ್ಯದರ್ಶಿ ಇರಬಹುದು, ಮತ್ತೊಬ್ಬರು ಆಗಬಹುದು. ದಯವಿಟ್ಟು ತಾವು ಕ್ರಮ ತೆಗದುಕೊಳ್ಳಿ, ನಾವು ಇದನ್ನು ಹೇಳಿ ಹೇಳಿ ಸಾಕಾಗಿದೆ. ನಮ್ಮ ಬೆಂಗಳೂರು ಸುತ್ತ-ಮುತ್ತ ಹಗಲು ದರೋಡೆ ನಡೆಯುತ್ತಲೇ ಇದೆ. ನಾವು ಇಲ್ಲಿ ಈ ವಿಷಯಗಳನ್ನು ಬರೀ ಹೇಳುವುದು, ತೌಡು ಕಟ್ಟುವುದು, ಅಲ್ಲಿ ಈ ರೀತಿ ಮಾಡುವುದು. ಇದು ಹೀಗೆ ಆದರೆ, ನಾವು ಇದನ್ನು ನೋಡಿ ಕಣ್ಣು ಮುಚ್ಚಿಕೊಂಡು ಪಕ್ಕಕ್ಕೆ ಮುಖ ತಿರುಗಿಸಿಕೊಂಡು ಹೋಗುವಂಥ ಪ್ರಸಂಗ ಆಗುತ್ತದೆ. ಅದಕ್ಕೋಸ್ಕರ BIAPA ವ್ಯಾಪ್ತಿಯಲ್ಲಿ ಹಿಂದೆ ಆಗಿದ್ದಂಥ ಬಡಾವಣೆಗಳು ಚಾಲ್ತಿಯಲ್ಲಿದ್ದು, ತದನಂತರ ಬದಲಾವಣೆಯಾಗಿದ್ದರೆ ಅದು ಒಂದು ರೀತಿಯಾಗುತ್ತಿದ್ದು. ಆದರೆ ನಿರ್ಮಾಣವಾಗಿ ಹಸ್ತಾಂತರವಾಗಿದ್ದ ಬಡಾವಣೆಗಳನ್ನು ಮತ್ತೊಂದು ಬಾರಿ plan

approval ಕೊಟ್ಟಿರುವಂಥದ್ದು ಕಾನೂನು ಉಲ್ಲಂಘನೆಯಾಗುತ್ತದೆ. ದಯವಿಟ್ಟು BIAPA ದಲ್ಲಿ ಯಾರು ಇದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಮತ್ತೆ ಆ ರೀತಿ ಆಗಿರುವಂಥ ಜಾಗವನ್ನು ವಾಪಸ್ಸು ಪಡೆದುಕೊಂಡು public purpose ಗೆ reserve ಮಾಡಬೇಕೆಂದು ತಮ್ಮನ್ನು ಕೇಳುತ್ತೇನೆ. ಈ ವಿಷಯವಾಗಿ ನಾನು ನಿನ್ನೆ ದಿವಸ ಪ್ರಶ್ನೆಯನ್ನೂ ಸಹ ಹಾಕಿದ್ದೆ, ಇದಕ್ಕೆ ಇಲ್ಲಿಯವರೆಗೂ ಉತ್ತರ ಬಂದಿಲ್ಲ. ಇದಕ್ಕೆ ಉತ್ತರ ತಯಾರಾಗಿದೆ. ಆದರೆ ಇಲ್ಲಗೆ ಬಂದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣ ಭೈರೇಗೌಡ ಶೂನ್ಯ ವೇಳೆಯಲ್ಲಿ ವಿಷಯವನ್ನು ಏನು ಪ್ರಸ್ತಾಪ ಮಾಡಿದ್ದಾರೆ. ಅದು BIAPA ಗೆ ಸಂಬಂಧಪಟ್ಟಂತೆ ಇವತ್ತಿನ rules ಪ್ರಕಾರ 55% residential area ಕ್ಕೆ ನಿವೇಶನಗಳನ್ನು ಮಾಡಲು ಅವಕಾಶ ಕೊಟುವಂಥ ರೂಲ್ಸ್ ಇದೆ. ಹಿಂದೆ ಆ ಅವಕಾಶವಿರಲಿಲ್ಲ, ಹಿಂದೆ ಹಲವಾರು ಬಡಾವಣೆಗಳಿಗೆ retrospective effect ಆಗಿ ಮಾಡಿದ್ದೇವೆಂಬ ಭಾವನೆ ತಮಗಿದೆ. ನಾನು ಹೇಳುವಂಥದ್ದು, ಏನೆಂದರೆ, BIAPA ಗೆ ಸಂಬಂಧಪಟ್ಟ ಹಾಗೆ ದಿನಾಂಕ: 29-01-2009ರವರೆಗೆ ತಮ್ಮದೇ ಆದಂಥ ನಿವೇಶನ ಹಂಚಿಕೆ ಬಗ್ಗೆ ಯಾವುದೇ ರೂಲ್ಸ್ ಇರಲಿಲ್ಲ. ಅದಕ್ಕಿಂತ ಮುಂಚೆ ಯಾವ rules follow ಮಾಡುತ್ತಿದ್ದರೆಂದರೆ , B.D.A. ನಲ್ಲಿ layout ಗಳನ್ನು ಮಂಜೂರು ಮಾಡುವುದು, ಎಷ್ಟು ratio ಎಂಬ ಬಗ್ಗೆ ಬಿ.ಡಿ.ಎ. ರೂಲ್ಸ್ ಅನ್ನು ದಿನಾಂಕ: 29-01-2009ಕ್ಕೆ ಮುಂಚೆ ಆದೇ rules apply ಮಾಡುತ್ತಿದ್ದರು. ಹಿಂದೆ ನಮ್ಮ ಬಿ.ಡಿ.ಎ.ಯಲ್ಲಿ ದಿನಾಂಕ: 02-07-1997 ರಿಂದ ದಿನಾಂಕ: 16.05.2006 ರವರೆಗೆ 50:50 ಎಂದು ಇತ್ತು. ಮತ್ತೆ ಅದೇ ಬಿ.ಡಿ.ಎ. ನಲ್ಲಿ ದಿನಾಂಕ: 16.05.2006 ರಿಂದ ದಿನಾಂಕ: 28-01-2009 ರವರೆಗೆ ratio 55: 45 ಎಂದು ಮಾಡಿದ್ದರು. ಮುಂದೆ BIAPA ನವರು ತಮ್ಮದೇ ಆದಂಥ ರೂಲ್ಸ್ ಅನ್ನು ಮಾಡಿ ದಿನಾಂಕ: 29-01-2009 ನಲ್ಲಿ 55% ಎಂದು ಮಾಡಿದ್ದಾರೆ. ಈಗ ನಾನು ಹೇಳುವಂಥದ್ದು ಏನೆಂದರೆ, ತಾವು ಈಗ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ, ಇದಕ್ಕೆ ಸಂಬಂಧಪಟ್ಟಂತೆ ದಿನಾಂಕ: 16-05-2006 ರಿಂದ 55:45 ratio maintain ಮಾಡಿದ್ದೇವೆ. ದಿನಾಂಕ: 16-05-2006ಕ್ಕಿಂತ ಮುಂಚೆ ಏನಾದರೂ BIAPA ಸಂಸ್ಥೆಯವರು 55% ಯಾವುದಾದರೂ layout ಗೆ retrospective effect ಮಾಡಿಕೊಂಡು ಕೊಟ್ಟಿದ್ದು, ಅಂಥ ಉದಾಹರಣೆಗಳು ತಮ್ಮ ಕಡೆ ಇದ್ದರೆ, ಯಾವುದಾದರೂ ತಮ್ಮ ಗಮನಕ್ಕೆ ಬಂದಿದ್ದರೆ ನಮಗೆ ಮಾಹಿತಿಯನ್ನು

ಕೊಡಿ. ಅದರ ಬಗ್ಗೆ I will take action.

ಅಧ್ಯಕ್ಷರು: ಆಯಿತು.

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಈ ವಿಷಯವಾಗಿ ಚುಕ್ಕೆ ಗುರುತು ರಹಿತ ಪ್ರಶ್ನೆ ಕೇಳಿದ್ದೇನೆ. ಅವರು ಈ ಪ್ರಶ್ನೆಗೆ ಉತ್ತರವನ್ನು ಕೊಟ್ಟರೆ, ನಾವು point out ಮಾಡಬಹುದು. ಅವರು ಉತ್ತರ ಕೊಡದೇ ಹೋದರೆ ನಾವು ಹೇಗೆ point out ಮಾಡಬೇಕೆಂಬುದನ್ನು ಹೇಳಿ. ನಮ್ಮ ಹತ್ತಿರ ಖಾಸಗಿ ದಾಖಲೆಗಳು ಇರುತ್ತವೆ. ನಾನು ಈ ಖಾಸಗಿ ದಾಖಲೆಗಳನ್ನು ತಂದು ಮಾನ್ಯ ಮುಖ್ಯಮಂತ್ರಿಗಯವರ ಮುಂದೆ ಮಂಡನೆ ಮಾಡುವುದು ಸೂಕ್ತವಲ್ಲ. ದಯವಿಟ್ಟು ತಾವು ನನಗೆ ಅವರ ಇಲಾಖೆಯಿಂದ ಉತ್ತರವನ್ನು ಕೊಡಿಸಿ, ಅವರು ಯಾರ್‍ಯಾರಿಗೆ amend ಮಾಡಿದ್ದಾರೆ, ಹಳೆಯ layout approval revise ಮಾಡಿರುವಂಥದ್ದು, ಅದರ ಮಾಹಿತಿಯನ್ನು ನನಗೆ ಕೊಡಿಸಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ಆಯಿತು, ಕೊಡಿಸುತ್ತಾರೆ.

ಶ್ರೀ ಕೃಷ್ಣ ಭೈರೇಗೌಡ : ತಾವು ಶಾಸಕರಿಗೆ ಕೊಡುವುದಕ್ಕೆ ಆಗುವುದಿಲ್ಲವೆಂದರೆ R.T.I. ನಿಂದ ತೆಗೆದುಕೊಂಡು ಬರುತ್ತೇನೆ. ಆ ಪರಿಸ್ಥಿತಿ ಬರುವುದು ಬೇಡ, ತಾವು ದಯವಿಟ್ಟು ಉತ್ತರವನ್ನು ಕೊಡಿ.

ಅದ್ಯಕ್ಷರು: ಆಯಿತು, ಮಾನ್ಯ ವಿರೋಧಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರ ಮೂರು ನಿಲುವಳಿ ಸೂಚನೆಗಳಿವೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಈಗ ಬಂದಿದ್ದೇನೆ. ಬೇರೆಯವರು ಮಾತನಾಡಲಿ, ನಾನು ಕೊನೆಯಲ್ಲಿ ಕೇಳುತ್ತೇನೆ.

ಅಧ್ಯಕ್ಷರು: ಆಯಿತು, ಮಾನ್ಯ ಗೂಳಿಹಟ್ಟಿ ಡಿ. ಶೇಖರ್‌ರವರೆ ಮಾತನಾಡಿ.

7. ವಿಷಯ: ವೃತ್ತಿ ಶಿಕ್ಷಣ ಸೀಟು ನೀಡುವ ವಿಚಾರದಲ್ಲಿ ವಂಚನೆಯಾಗಿರುವ ಬಗ್ಗೆ

ಶ್ರೀ ಗೂಳಿಹಟ್ಟಿ ಡಿ. ಶೇಖರ್: (ಹೊಸದುರ್ಗ): ಮಾನ್ಯ ಅಧ್ಯಕ್ಷರೆ, ಇವತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ಹುಬ್ಬಳ್ಳಿಯಿಂದ ಪ್ರಕಟಣೆಯಾಗಿರುವಂಥ "ತಾಂತ್ರಿಕ ಅಡಚಣೆ; ವೃತ್ತಿ ಶಿಕ್ಷಣ ಸೀಟು ವಂಚಿತೆ ಪುಷ್ಪಾ" ಎಂದು ವರದಿ ಬಂದಿದೆ. ಇದರ ಬಗ್ಗೆ ಮಾನ್ಯ

ಮುಖ್ಯಮಂತ್ರಿಯವರು ದಯಮಾಡಿ ಗಮನಿಸಬೇಕು. ಮಾನ್ಯ ಮುಖ್ಯಮಂತ್ರಿಯವರ ಕ್ಷೇತ್ರದಲ್ಲಿ ಪಿ.ಯು.ಸಿ. ಓದಿರುವಂಥ ವಿದ್ಯಾರ್ಥಿನಿಯಾಗಿದ್ದು, ಇವರು ಸಿ.ಇ. ಟಿಯಲ್ಲಿ 1,186 ಅಂಕ ಪಡೆದು 9ನೇ ರ್‍ಯಾಂಕ್ ಬಂದಿದ್ದಾಳೆ. ಈ ವಿದ್ಯಾರ್ಥಿನಿಗೆ ವೈದ್ಯಕೀಯ ಪ್ರವೇಶ ಮತ್ತು ತಾಂತ್ರಿಕ ಉನ್ನತ ಶಿಕ್ಷಣ ಪ್ರವೇಶ ನಿರಾಕರಿಸಿದ್ದಾರೆ. ಇದಕ್ಕೆ ಕಾರಣವೇನೆಂದರೆ, 7 ವರ್ಷಗಳು ಓದಿಲ್ಲವೆಂದು ಇದೆ. ಇವರ ತಂದೆ ನಾಟಕದ ಕಲಾವಿದರಾಗಿದ್ದು, ಇವರು ಊರಿಂದ ಊರಿಗೆ ಹೋಗುಂಥ ಸಂದರ್ಭದಲ್ಲಿ ಈ ವಿದ್ಯಾರ್ಥಿನಿ 7ನೇ ತರಗತಿಗೆ ನೇರವಾಗಿ ಸೇರಿ ಪಾಸಾಗಿರುವುದರಿಂದ 7,8,9,10 ಈ ರೀತಿಯಾಗಿ 6 ವರ್ಷಗಳು ಓದಿದ್ದು, ಪಿ.ಯು.ಸಿ. ಮತ್ತು ಸಿ.ಇ.ಟಿ.ಯಲ್ಲೂ ಚೆನ್ನಾಗಿ ಅಂಕಗಳನ್ನು ಪಡೆದಿದ್ದಾಳೆ. ಆದರೆ, ಇವಳು 7 ವರ್ಷ ಓದಿಲ್ಲವೆಂಬ ಒಂದೇ ಕಾರಣಕ್ಕೆ admission ಆಗುವುದಕ್ಕೆ ಸಿ.ಇ.ಟಿ. ಯಲ್ಲಿ ರ್‍ಯಾಂಕ್ ಪಡೆದಿದ್ದರೂ ಸಹಿತ ಇವಳಿಗೆ ಇಂಜಿನಿಯರಿಂಗ್‌ಗೂ ಅವಕಾಶ ಕೊಟ್ಟಿಲ್ಲ, ಮೆಡಿಕಲ್ ಗೂ ಅವಕಾಶ ಕೊಟ್ಟಿಲ್ಲ, ಮತ್ತೆ ಬಿ.ಎಸ್ಸಿ. ಪದವಿ ತರಗತಿಗೂ ಅವಕಾಶ ಕೊಟ್ಟಿಲ್ಲ. ಈ ನಿಯಾಮಾವಳಿಗಳನ್ನು ಸರ್ಕಾರ ಮಾಡುವುದು. ಸರ್ಕಾರ ಈ ವಿದ್ಯಾರ್ಥಿನಿಗೆ ಕೊಡಲೇ ಉನ್ನತ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಬೇಕು. ಈ ವಿದ್ಯಾರ್ಥಿನಿ ವೈದ್ಯಕೀಯ ಶಿಕ್ಷಣ ಅಥವಾ ತಾಂತ್ರಿಕ ಶಿಕ್ಷಣ ಯಾವುದನ್ನು ಆಯ್ಕೆ ಮಾಡುತ್ತಾರೋ ಅದನ್ನು ಕಲ್ಪಿಸಬೇಕು. ಸರ್ಕಾರ ಇವತ್ತೇನೆರವಿಗೆ ಬರಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಈಗ ಸರ್ಕಾರಿ ಸೀಟು ಪಡೆಯುವುದಕ್ಕೆ ಅಹರ್ತೆಯನ್ನು CET Council ನಲ್ಲಿ ನಿಗದಿ ಪಡಿಸಿದೆ. ಅದರಲ್ಲಿ ಅಭ್ಯರ್ಥಿ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿದ ವರ್ಷದ ಜುಲೈ ಮೊದಲನೇ ದಿನಾಂಕದಂದು ಕನಿಷ್ಠ ಪಕ್ಷ 7 ಶೈಕ್ಷಣಿಕ ವರ್ಷಗಳನ್ನು, ಅಂದರೆ ಮೊದಲನೇ ತರಗತಿಯಿಂದ 2ನೇ ವರ್ಷದ ಪಿ.ಯು.ಸಿ. ಯವರೆಗೆ ಕರ್ನಾಟಕ ರಾಜ್ಯದಲ್ಲಿರುವ ಒಂದು ಅಥವಾ ಹೆಚ್ಚಿನ ಸರ್ಕಾರಿ ಅಥವಾ ಸರ್ಕಾರದಿಂದ ಮನ್ನಣೆ ಪಡೆದಿರುವಂಥ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿರಬೇಕು. ಕರ್ನಾಟಕ ರಾಜ್ಯದಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಎಸ್.ಎಸ್.ಎಲ್. ಸಿ, 10ನೇ ತರಗತಿ ಅಥವಾ 12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಗೆ ಹಾಜರಾಗಿರಬೇಕು, ಮತ್ತು ತೇರ್ಗಡೆಯಾಗಿರಬೇಕು. ಅಭ್ಯರ್ಥಿ ಒಂದು ತರಗತಿಯಲ್ಲಿ ತೇರ್ಗಡೆ ಹೊಂದಲು ಒಂದು ವರ್ಷಕ್ಕಿಂತ ಹೆಚ್ಚು ಸಮಯಾವಕಾಶವನ್ನು ತೆಗೆದುಕೊಂಡರೆ ಶೈಕ್ಷಣಿಕ ಅಧ್ಯಯನ ವರ್ಷಗಳನ್ನು ಒಂದು ವರ್ಷವೆಂದು ಎಣಿಕೆ ಮಾಡಲಾಗುತ್ತದೆ.

ಇವರು ಉಲ್ಲೇಖ ಮಾಡಿರುವಂಥ ಪುಷ್ಪಾರವರು 7ನೇ ತರಗತಿಯನು direct ಆಗಿ ಕಟ್ಟಿ ಪಾಸಾಗಿದ್ದಾರೆ. ಅವರು ಏಳನೇ ತರಗತಿಯವರೆಗೂ ಎಲ್ಲೂ ವ್ಯಾಸಂಗ ಮಾಡಿಲ್ಲ. ಅದರ ನಂತರ ಮೂರು ವರ್ಷ ಹೈಸ್ಕೂಲು ಮತ್ತು ಎರಡು ವರ್ಷ ಪಿ.ಯು.ಸಿ. ವ್ಯಾಸಂಗ ಮಾಡಿದ್ದಾರೆ. ಏಳನೇ ತರಗತಿಯದೂ ಸೇರಿ ಒಟ್ಟು ಆರು ಶೈಕ್ಷಣಿಕ ವರ್ಷಗಳನ್ನು ಪೂರೈಸಿದ್ದಾರೆ. ಸರ್ಕಾರಿ ಸೀಟುಗಳನ್ನು ಪಡೆಯಲು ಈಗಿರುವ ನಿಯಾಮಾವಳಿಗಳ ಪ್ರಕಾರ ಏಳು ವರ್ಷ ಕಡ್ಡಾಯವಾಗಿ ನಮ್ಮ ರಾಜ್ಯದಲ್ಲಿ ವ್ಯಾಸಂಗ ಮಾಡಿರಲೇಬೇಕು. ಇದೊಂದು ವಿಶೇಷ ಪ್ರಕರಣವಾಗಿದೆ. ಈ ವಿಶೇಷ ಪ್ರಕರಣದ ಹಿನ್ನೆಲೆಯಲ್ಲಿ ನಾವು ಈಗ ನಿಯಮಗಳನ್ನು ಸಡಿಲಿಸಲು ಬರುವುದಿಲ್ಲ. ಒಬ್ಬರಿಗೆ ಸಹಾಯ ಮಾಡಲು ನಿಯಮ ಸಡಿಲಿಸಲು ಹೋದರೆ ಅದರ ದುರುಪಯೋಗವೂ ಆಗುವ ಸಾಧ್ಯತೆಗಳಿರುತ್ತದೆ. ಅವರು ಪದವಿ ಓದಲು ಏನೂ ತೊಂದರೆಯಿಲ್ಲ. ಅವರು ಬಿ.ಎಸ್ಸಿ ಗೆ ಅಡ್ಮಿಷನ್ ಆಗಲು ನಿಯಮ ಅಡ್ಡಿ ಬರುವುದಿಲ್ಲ. ಆದರೆ C.E.T. ನಲ್ಲಿ ಉಚಿತವಾದ ಸರ್ಕಾರಿ ಸೀಟು ಪಡೆಯಲು ಮಾತ್ರ ಈ ನಿಯಮ ಅಡ್ಡಿ ಬರುತ್ತದೆ. ಹಾಗಾಗಿ, ಮಾನವೀತೆಯ ದೃಷ್ಟಿಯಿಂದ ನಾವು ಯಾವುದಾದರೂ ಖಾಸಗಿ ನೆಲೆಯಲ್ಲಿ ಮಾತುಕತೆ ನಡೆಸಿ ಯಾವುದಾದರೊಂದು ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟು ಕೊಡಿಸುವಂಥ ಪ್ರಯತ್ನವನ್ನು ಮಾಡಬಹುದು. ಆದರೆ ಒಬ್ಬರಿಗೆ ಅನುಕೂಲ ಮಾಡಲು ನಿಯಮಗಳನ್ನು ಸಡಿಲಿಸಲು ಹೋದರೆ ಅದರ ದುರುಪಯೋಗವಾಗುವ ಸಾಧ್ಯತೆ ಇರುವುದರಿಂದ ನಿಯಮ ಸಡಿಲಿಸಲು ಆಗುವುದಿಲ್ಲ.

8. ವಿಷಯ: ಮಾನ್ಯ ಸದಸ್ಯರಾದ ಶ್ರೀ ಚಿಕ್ಕಣ್ಣನವರ ಹಕ್ಕುಚ್ಯುತಿ ಬಗ್ಗೆ

ಶ್ರೀ ಸಿ.ಎಂ. ಉದಾಸಿ : (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಚಿಕ್ಕಣ್ಣನವರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ವರದಿ ತರಿಸಿದು, ಅಮಾನತ್ತಿಗೆ ನಾವು ಸೂಚನೆಯನ್ನು ಕೊಟ್ಟು ನಾಳೆ ಅಮಾನತ್ತು ಮಾಡುತ್ತೇವೆ ಎಂದು ಹೇಳಲು ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಸಸ್ಪೆಂಡ್ ಮಾಡಲು ತೀರ್ಮಾನ ಮಾಡಿರುವಿರಾ? ಹಾಗಿದ್ದರೆ ಆರ್ಡರ್ಸ್ ಇಷ್ಯೂ ಮಾಡಿಬಿಡಿ. ಅರ್ಡರ್ ಇಷ್ಯೂ ಮಾಡಲು ಒಂದು ವಾರ ಮಾಡುವುದಕ್ಕೆ ಹೋಗಬೇಡಿ. ಇವತ್ತೇ ಇಷ್ಯೂ ಮಾಡಿಬಿಡಿ.

ಶ್ರೀ ಸಿ.ಎಂ. ಉದಾಸಿ : ನಾಳೆ ಮಾಡುತ್ತೇವೆ.

ಅಧ್ಯಕ್ಷರು: ನಾಳೆ ಎಂದು ಹೇಳಿದ್ದಾರೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ : ನಿನ್ನೆ ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವುದಕ್ಕೆ ಉತ್ತರ ಬಂದಿಲ್ಲ. ನಮಗೆ ಏಕೆ ಉತ್ತರ ಕೊಡಿಸುತ್ತಿಲ್ಲವೆಂದು ಗೊತ್ತಾಗುತ್ತಿಲ್ಲ.

ಅಧ್ಯಕ್ಷರು: ಕೊಡಿಸುತ್ತೇನೆ.

9. ವಿಷಯ: ಮುಳಬಾಗಿಲು ತಾಲ್ಲೂಕಿನಲ್ಲಿರುವ ಬುಡುಗ ಜಂಗಮ ಜನಾಂಗಕ್ಕೆ ಸೇರಿದವರಿಗೆ ಸಿಂಧುತ್ವ ಪ್ರಮಾಣ ಪತ್ರ ನೀಡುವ ಬಗ್ಗೆ.

ಶ್ರೀ ಸಿದ್ದರಾಮಯ್ಯ : (ವಿರೋಧ ಪಕ್ಷದ ನಾಯಕರು): ಮುಳಬಾಗಿಲು ತಾಲ್ಲೂಕಿನಲ್ಲಿ ಬುಡುಗ ಜಂಗಮ ಎನ್ನುವ ಜನರಿದ್ದಾರಂತೆ. ಅವರು Public Service Commissionನಲ್ಲಿ ಆಯ್ಕೆಯಾಗಿದ್ದಾರಂತೆ. ಅವರಿಗೆ ಸಿಂಧುತ್ವ ಪ್ರಮಾಣ ಪತ್ರ ಕೊಡುತ್ತಿಲ್ಲವಂತೆ. They are eligible or not ಎನ್ನುವುದನ್ನು ನೋಡಿ, if they are eligible ಅವರಿಗೆ ಸಿಂಧೂತ್ವ ಪ್ರಮಾಣ ಪತ್ರವನ್ನು ಕೊಡಬೇಕು. ಅವರಿಗೆ S.C. Certificate ಕೊಡಬೇಕು. They belong to S.C. ಎಂದು ಹೇಳುತ್ತಾರೆ. ಅದರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ಆದರೆ ಒಂದು ಗುಂಪು ಜನ, ಈ ರೀತಿ ಅನ್ಯಾಯವಾಗಿದೆ ಎಂದು ನನ್ನ ಬಳಿಗೆ ಬಂದಿದ್ದರು. ಅದನ್ನು verify ಮಾಡಿ, if they are eligible ಅವರಿಗೆ ಸಿಂಧುತ್ವ ಪ್ರಮಾಣ ಪತ್ರವನ್ನು ಕೊಡಬೇಕು.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಸಭಾ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ ಬುಡುಗ ಜಂಗಮ ಸಮಾಜದವರು ಇಲ್ಲ ಎನ್ನುವುದನ್ನು ಆ ಭಾಗದ ಜಿಲ್ಲಾಧಿಕಾರಿಗಳು ಪ್ರತಿಪಾದನೆ ಮಾಡಿ endorsement ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಯಾವುದೇ ಜಾತಿ ಪ್ರಮಾಣ ಪತ್ರವನ್ನು ತಹಶೀಲ್ದಾರ್‌ರವರು ಕೊಡುತ್ತಾರೆ. ತಹಶೀಲ್ದಾರ್ ರವರೇನಾದರೂ ತಪ್ಪು ಕೊಟ್ಟಿದ್ದರೆ, ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಒಂದು ಸಮಿತಿ ಇದೆ. ಆ ಸಮಿತಿಗೆ ಅರ್ಜಿಯನ್ನು ಹಾಕಿದರೆ, ಸಮಿತಿಯವರು ಅದನ್ನು ವಿಮರ್ಶೆ ಮಾಡಿ, ಅದರ ಪ್ರಮಾಣಿಕತೆಯನ್ನು ನೋಡಿ ಪ್ರಮಾಣ ಪತ್ರವನ್ನು ಕೊಡುತ್ತಾರೆ. ನಾನು ತಮ್ಮ ಮುಖಾಂತರ ಹೇಳುವುದೇನೆಂದರೆ, ಬುಡುಗ ಜಂಗಮ ಅಥವಾ ಬೈರಾಗಿ ಎನ್ನುವ caste ಕೋಲಾರ ಜಿಲ್ಲೆಯಲ್ಲಿಲ್ಲ. ಅವರು ರಾಯಚೂರು, ಬಳ್ಳಾರಿ, ಯಾದಗಿರಿ ಈ ಭಾಗಗಳಲ್ಲಿ ಮಾತ್ರ ಇದ್ದಾರೆ. ಅದನ್ನು ನಾನು ಪರಿಶೀಲನೆ ಮಾಡಿದ್ದೇನೆ. ಸಿವಿಲ್ ಕೋರ್ಟ್‌ನಲ್ಲಿ

Caste Certificate ಬಗ್ಗೆ judgement ಕೊಟ್ಟಿದ್ದಾರೆ, ಅದಕ್ಕೆ ಯಾವುದೇ jurisdiction ಇಲ್ಲ. ಅದನ್ನೂ ನಾವು observation ಮಾಡಿದ್ದೇವೆ. ಆದರೂ ಅದನ್ನು ಮತ್ತೊಂದು ಸಾರಿ ಪರಿಶೀಲನೆ ಮಾಡುತ್ತೇನೆ. ಆದರೆ ನನಗೆ ಬಂದಿರುವ ವರದಿಗಳ ಪ್ರಕಾರ ಅದು Gazeteer ಪ್ರಕಾರ ಇರಬಹುದು ಅಥವಾ Supreme Court citation ಪ್ರಕಾರ ಇರಬಹುದು, ಈ ಭಾಗದಲ್ಲಿ ಬುಡುಗ ಜಂಗಮ ಸಮಾಜದವರು ಇಲ್ಲ. ಒಂದು ಆತಂಕದ ವಿಚಾರವಿದೆ. ಅನೇಕ ಕಡೆ fake caste certificate ಬಗ್ಗೆ ನಾನು ಹೇಳಿದ್ದೆ. 1971ರಲ್ಲಿ ಕೇವಲ ಮೂರು ಸಾವಿರಗಳಷ್ಟಿದ್ದ ಕುಟುಂಬಗಳು ಇವತ್ತು ಸುಳ್ಳು ಜಾತಿ ಪ್ರಮಾಣ ಪತ್ರಗಳಿಂದಾಗಿ ಐವತ್ತು ಸಾವಿರಕ್ಕೆ ಹೋಗಿವೆ. ಇದು ಆತಂಕದ ವಿಚಾರವಾಗಿದೆ. ನಾನು ತನಿಖೆ ಮಾಡಿಸುತ್ತಿದ್ದೇನೆ. ತನಿಖಾ ವರದಿ ಬಂದ ಮೇಲೆ ಅದರ ಮೇಲೆ ಕ್ರಮ ಜರುಗಿಸುತ್ತೇನೆ. ಇದನ್ನು ನಾನು ಮತ್ತೊಂದು ಸಾರಿ ಪರಿಶೀಲನೆ ಮಾಡುತ್ತೇನೆ. ಒಟ್ಟಾರೆಯಾಗಿ ಕೋಲಾರ ಮತ್ತು ಈ ಭಾಗದಲ್ಲಿ ಬುಡುಗ ಜಂಗಮ ಸಮಾಜದವರು ಇಲ್ಲ ಎಂದು ನಾನು ಪ್ರತಿಪಾದಿಸುತ್ತೇನೆ.

ಡಾ. ಹೆಚ್. ಸಿ. ಮಹದೇವಪ್ಪ: ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಎಸ್.ಸಿ./ಎಸ್.ಟಿ. ಜನಾಂಗದವರಿಗೆ ಸಂವಿಧಾನಬದ್ಧವಾಗಿ ಕೊಟ್ಟಿರುವ ಸವಲತ್ತುಗಳನ್ನು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಮಾನ್ಯ ಸಚಿವರೇ ಹೇಳಿದ್ದಾರೆ. ಅವರ ಮೇಲೆ ಕ್ರಮ ತೆಗೆಕೊಳ್ಳಬೇಕು ಮತ್ತು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಕೊಟ್ಟ ಅಧಿಕಾರಿಗಳ ವಿರುದ್ಧವೂ ಸೂಕ್ತ ಕ್ರಮ ತೆಗೆದೊಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಆಯಿತು.

10. ವಿಷಯ: ಮುಚ್ಚುತ್ತಿರುವ ನೆಮ್ಮದಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ Computer Operator ಗಳನ್ನು ಸರ್ಕಾರಿ ಹುದ್ದೆಗೆ ನೇಮಕ ಮಾಡಿಕೊಳ್ಳುವ ಬಗ್ಗೆ

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನೆಮ್ಮದಿ ಕೇಂದ್ರಗಳೆಂದು ಹೇಳಿ ಸರ್ಕಾರದವರು ರಾಜ್ಯದ್ಯಂತ ಸುಮಾರು 801 ನೆಮ್ಮದಿ ಕೇಂದ್ರಗಳನ್ನು ತೆರೆದಿದ್ದರು. ಅವುಗಳಲ್ಲಿ ಸುಮಾರು 1,600 ಜನ computer operator ಗಳಿದ್ದರು. ಈಗ ನೆಮ್ಮದಿ

ಕೇಂದ್ರಗಳನ್ನು ಮುಚ್ಚಿದರೆ ಈ 1,600 ಜನ computer operator ಗಳು ಬೀದಿ ಪಾಲಾಗುತ್ತಾರೆ. ನೀವು ನೆಮ್ಮದಿ ಕೇಂದ್ರಗಳನ್ನು ಮುಂದುವರೆಸಬೇಕು. ಎನ್ನುವ ಒತ್ತಾಯಕ್ಕಿಂತ ಹೆಚ್ಚಾಗಿ ಅಲ್ಲಿ ಕೆಲಸ ಮಾಡುತ್ತಿರುವ 1,600 ಜನರ ಭವಿಷ್ಯವೇನು ಏನ್ನುವ ಬಗ್ಗೆ ಯೋಚನೆ ಮಾಡಬೇಕು. ಉದ್ಯೋಗ ಇಲ್ಲದೇ ಇವರು ಬೀದಿ ಪಾಲಾಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ, ಇವರನ್ನು ಸರ್ಕಾರದಲ್ಲಿ recruitment ಮಾಡಿಕೊಳ್ಳುವಂಥ ಕೆಲಸ ಮಾಡಬೇಕು. ಮುಖ್ಯಂತ್ರಿಗಳು ಇಲ್ಲೇ ಇದ್ದಾರೆ. ಸಭಾನಾಯಕರಾದ ಮುಖ್ಯಮಂತ್ರಿಗಳು ಇದ್ದಾಗ, ಬೇರೆ ಮಂತ್ರಿಗಳ ಉತ್ತರವನ್ನೂ ಅವರೇ ಕೊಡಬಹುದು. ಮಂತ್ರಿಗಳೇ ಕೊಡಬೇಕು ಎಂದೇನೂ ಇಲ್ಲ, You are the head of the Government, head of the Council of Ministers. ಹಾಗಾಗಿ ನೀವೇ ಉತ್ತರ ಹೇಳಬಹುದು. ಈ 1,600 ಜನರ ಭವಿಷ್ಯವನ್ನು ಸರಿಮಾಡುವಂಥ ಕೆಲಸವನ್ನು ಸರ್ಕಾರ ಮಾಡಬೇಕಲ್ಲವೇ? otherwise, they are thrown into the streets. ಅವರಿಗೆ ಹೆಂಡತಿ, ಮಕ್ಕಳೆಲ್ಲರೂ ಇದ್ದಾರೆ. ನೆಮ್ಮದಿ ಕೇಂದ್ರಗಳನ್ನು ಮಾಡಿ ಪಾರ್ಲಿಮೆಂಟ್ ಚುನಾವಣೆ ಸಮಯದಲ್ಲಿ ಟೆಂಪೊರರಿ ಬಿ.ಪಿ.ಎಲ್. ಕಾರ್ಡ್‌ಗಳನ್ನು ಇವರ ಮೂಲಕ ಕೊಟ್ಟು 28 ಲಕ್ಷ ಓಟುಗಳನ್ನು ತೆಗೆದು ಹಾಕಿಬಿಟ್ಟದ್ದರು. ಅದು ಬೇರೆ ವಿಚಾರ. ಆದರೆ ಈ 1,600 ಜನರಿಗೆ ಸಹಾಯ ಮಾಡುವಂಥ ಕೆಲಸವನ್ನು ಮಾಡಬೇಕು. Recruitment ಮಾಡುವಾಗ reservation policy ಯನ್ನು follow ಮಾಡಿ. Always that follows. ಯಾವಾಗಲೂ recruitment ಮಾಡುವಾಗ reservation ಅನ್ನು follow ಮಾಡಿಯೇ ಮಾಡಬೇಕು. ಅದನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಮುಖ್ಯಮಂತ್ರಿಗಳೇ ಈಗ ಇಲ್ಲಿ ಇದ್ದಾರೆ. ಸ್ವಲ್ಪ ಸಹಾನುಭೂತಿಯ ದೃಷ್ಟಿಯಿಂದ, ಮಾನವೀಯತೆಯ ದೃಷ್ಟಿಯಿಂದ ಇದನ್ನು ನೋಡುವುದು ಬಹಳ ಒಳ್ಳೆಯದು ಎನ್ನುವುದು ನನ್ನ ಸಲಹೆ. ದಯಮಾಡಿ ಇದನ್ನು ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಾದಂಥ ಶ್ರೀಯುತ ಸಿದ್ದರಾಮಯ್ಯನವರು ರಾಜ್ಯದಲ್ಲಿ 801 ನೆಮ್ಮದಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ 1,600 Computer Operator ಗಳ ಸೇವೆಯನ್ನು ಸರ್ಕಾರದಲ್ಲಿ ವಿಲೀನಗೊಳಿಸುವ ವಿಷಯದಲ್ಲಿ. ಮಾನವೀಯತೆಯ ಕಾರಣಕ್ಕಾಗಿ ಅವರಿಗೆ ಅವಕಾಶವನ್ನು ಕಲ್ಪಿಸಿ ಕೊಡಬೇಕು ಎನ್ನುವ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ವಿಷಯದ ಕುರಿತಂತೆ, ಇವರನ್ನು ಎಲ್ಲಿ

ಹೊಂದಾಣಿಕೆ ಮಾಡಬಹುದು ಎನ್ನುವ ಬಗ್ಗೆ ಕಂದಾಯ ಸಚಿವರಿಂದ ವಿವರವಾದ ಉತ್ತರವನ್ನು ದೊರಕಿಸಿ ಕೊಡುತ್ತೇವೆ.

11. ವಿಷಯ: ನನ್ನ ಮನೆ ನನ್ನ ಸ್ವತ್ತು

ಶ್ರೀ ಸಿದ್ದರಾಮಯ್ಯ : (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನನ್ನ ಮನೆ ನನ್ನ ಸ್ವತ್ತು ಎಂದು ಹೇಳಿ ಬಜೆಟ್‌ನಲ್ಲಿ announce ಮಾಡಿದರು. ನನ್ನ ಮನೆ ಅಂದಮೇಲೆ ಅದು ನನ್ನ ಸ್ವತ್ತೇ. ಹಕ್ಕುಪತ್ರವಿಲ್ಲದಿದ್ದಾಗ ಅದು ನನ್ನ ಸ್ವತ್ತಾಗುವುದಿಲ್ಲ. ಆಶ್ರಯ, ಅಂಬೇಡ್ಕರ್, ಜನತಾ ಮನೆಗಳು ಸೇರಿದಂತೆ ಇಲ್ಲಿ ಸಾಲದ component ಇರುತ್ತದೆ. ಆ ಹಣ ಕಟ್ಟಲು ಅವಧಿಯನ್ನು ದಿ: 31–03–2013ರವರೆಗೆ ವಿಸ್ತರಿಸಿದ್ದಾರೆ. That ends on 31st March, 2013. ಅಲ್ಲಿಯವರೆಗೆ ವಿಸ್ತರಿಸಲಾಗಿದೆ. ಎನ್ನುವ ಒಂದು ಆದೇಶವನ್ನು ಹೊರಡಿಸಿದ್ದಾರೆ. ಬೆಳಗಾಂ ಜಿಲ್ಲೆಯ ಅಥಣಿ ಪುರಸಭಾ ಕಾರ್ಯಾಲಯದಲ್ಲಿರತಕ್ಕಂಥ ಮುಖ್ಯಾಧಿಕಾರಿ ದಿ: 30–06–2012 ರಂದು ಪತ್ರವನ್ನು ಬರೆದು ಕಳುಹಿಸಿದ್ದಾರೆ. ಏನೆಂದರೆ, 21 ದಿವಸ ಗಡುವು ಕೊಟ್ಟು ನೀವು ಅಷ್ಟರಲ್ಲಿ ಈ ಸಾಲವನ್ನು ಕಟ್ಟದಿದ್ದರೆ ನಿಮ್ಮನ್ನೆಲ್ಲ ಒಕ್ಕಲೆಬ್ಬಿಸುತ್ತೇವೆ, ಮನೆಯನ್ನು ಖಾಲಿ ಮಾಡಿಸುತ್ತೇವೆಂದು ಹೇಳಿದ್ದಾರೆ. ಸಾಲ ವಸೂಲಿ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ, ಈಗ ಬರಗಾಲ ಬೇರೆ ಇದೆ. ಇಂಥ ಸನ್ನಿವೇಶದಲ್ಲಿ ಈ ರೀತಿ ಹೇಳಿದ್ದಾರೆ. ಅದೂ ಕೂಡ ಇವರು ವಸೂಲಿ ಮಾಡುವುದಕ್ಕೆ ಹೋಗುತ್ತಿಲ್ಲ. ವಸೂಲಿ ಮಾಡುವುದಕ್ಕೆ ಬೇರೆ ಯಾರಿಗೋ ಅಧಿಕಾರ ಕೊಟ್ಟಿದ್ದಾರೆ. ವಸೂಲಿ ಮಾಡುವುದನ್ನು Total Solutions ಎನ್ನುವಂಥ ಒಂದು NGO ಸಂಸ್ಥೆಗೆ ವಹಿಸಿಕೊಟ್ಟಿದ್ದಾರೆ. ಆ ಸಂಸ್ಥೆಯವರು ದಬ್ಬಾಳಿಕೆ, ಗೂಂಡಾಗಿರಿ ಎಲ್ಲಾ ಮಾಡುತ್ತಿದ್ದಾರೆ. ಅದರ ಬಗ್ಗೆ ಅಥಣಿಯಲ್ಲಿ ಮನೆ ಕಳೆದುಕೊಳ್ಳುವ ಸಾರ್ವಜನಿಕರು ದೊಡ್ಡ ಪ್ರತಿಭಟನೆ ಮಾಡಿದ್ದಾರೆ. ಈ ರೀತಿಯಾಗಿ ಬಲಾತ್ಕಾರವಾಗಿ ಒಕ್ಕಲೆಬ್ಬಿಸುವುದು ಸರಿಯಾದ ಕ್ರಮವಲ್ಲ. ನಾವು ಇಲ್ಲಿ ಒಂದು ಸಾರಿ ಚರ್ಚೆ ಮಾಡಿ ಒತ್ತಾಯ ಮಾಡಿದ್ದೆವು. ತೆಗೆದುಕೊಂಡಿರುವ ಸಾಲವೇನಿದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, ಬಡವರು, ಹಿಂದುಳಿದ ವರ್ಗದವರು ಏನು ಸಾಲ ತೆಗೆದುಕೊಂಡಿದ್ದಾರೆ, ಅವರ ಸಾಲವನ್ನು ಮನ್ನಾ ಮಾಡಬೇಕೆಂದು ಒತ್ತಾಯ ಮಾಡಿದ್ದೆವು. ಸೋಮಣ್ಣನವರು ಈಗ ಸದನದಲ್ಲಿಲ್ಲ. ಅವರು ಇಲ್ಲಿ ಕಳೆದ ಸಾರಿ ಅವರ ಸಾಲವನ್ನೆಲ್ಲ ಮನ್ನಾ ಮಾಡುತ್ತೇವೆಂದು ಒಂದು ಸಾರಿ ಹೇಳಿದ್ದರು. ಖಾಸಗಿಯವರಿಗೆ ವಹಿಸಿದ್ದು, ಅವರು ಬಲಾತ್ಕಾರವಾಗಿ ವಸೂಲಿ ಮಾಡಲು

ಹೋಗಿ, ಅವರು ಹಣ ಕೊಡದಿದ್ದರೆ ಅವರನ್ನು ಬಲಾತ್ಕಾರವಾಗಿ ಎತ್ತಿಹಾಕುತ್ತೇವೆಂದು ಹೇಳದರೆ ಇದು principles of natural justice ಆಗುವುದಿಲ್ಲ. violation of the principles of natural justice. ಬಡವರಿಗೆ ಮಾಡುವ ಅನ್ಯಾಯವಾಗುತ್ತದೆ. ನೀವು ಬಡವರ ಪರವಾಗಿರುವವರು ಈ ತರಹ ಮಾಡಿದರೆ ಹೇಗೆ? ನೀವು ಬಡವರ ಪರವಾಗಿ ಇದ್ದೀರೋ, ಇಲ್ಲವೋ? ಇದ್ದೀರಿ ಎನ್ನುವುದಾದರೆ ಇವೆಲ್ಲವನ್ನು ಮಾಡಬಾರದು. ಕೂಡಲೇ ಇದನ್ನು ನಿಲ್ಲಿಸತಕ್ಕಂಥ ಕೆಲಸ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ನನ್ನ ಮನೆ ನನ್ನ ಸ್ವತ್ತು ಯೋಜನೆಯಡಿಯಲ್ಲಿ ಸಾಲ ವಸೂಲಾತಿಯನ್ನು ಅಥವಾ ಬಡ್ಡಿ ವಸೂಲಾತಿಯನ್ನು ಖಾಸಗಿ ಸಂಸ್ಥೆಯವರಿಗೆ ಕೊಟ್ಟಿರುವುದದರಿಂದಾಗಿ, ಅವರು ಬಲಾತ್ಕಾರವಾಗಿ ವಸೂಲಾತಿ ಮಾಡುತ್ತಿದ್ದಾರೆನ್ನುವ ವಿಷಯವನು ಮಾನ್ಯ ವಿರೋಧ ಪಕ್ಷದ ನಾಯಕರು ಸದನದಲ್ಲಿ ಪ್ರಸ್ತಾಪಿಸದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಿಜ, ಅವರು ಬಡ್ಡಿ ತುಂಬಬೇಕು, ಸಾಲ ಮರು ಪಾವತಿಮಾಡಬೇಕು, ಇತ್ಯಾದಿ ಎಲ್ಲವೂ ಮಾಡಲೇಬೇಕು. ಆದರೆ, ಯಾವುದೇ ಕಾರಣಕ್ಕೆ ಅವರನ್ನು ಮನೆಯಿಂದ ಒಕ್ಕಲೆಬ್ಬಿಸದಂತೆ, ಮನೆಯಿಂದ ಹೊರಗೆ ಹಾಕದೇ ಇರುವಂಥ, ಬಲಾತ್ಕಾರವಾಗಿ ಮನೆಯಿಂದ ಹೊರಹಾಕದಿರುವಂಥ ಸೂಚನೆಯನ್ನು ಸರ್ಕಾರದಿಂದ ನಾವು ಕೊಡುತ್ತೇವೆ. ಆದರೆ, ನ್ಯಾಯಬದ್ಧವಾಗಿ ಕಾನೂನಿನಡಿಯಲ್ಲಿ ಅವರು ಯಾವ್ಯಾವ ರೀತಿಯಲ್ಲಿ ತುಂಬಬೇಕು, ಅದನ್ನು ತುಂಬೇಕಾದರೆ ಕಾಲಾವಕಾಶ ಬೇಕಾದರೆ ಕಾಲಾವಕಾಶವನ್ನು ದೊರಕಿಸಿಕೊಡುವುದಕ್ಕೂ ನಾವು ನಮ್ಮ ಸರ್ಕಾದಿಂದ ಅಗತ್ಯ ಉತ್ತರವನ್ನು ದೊರಕಿಸಿಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಬೇರೆಲ್ಲೂ ನಡೆಯುತ್ತಿಲ್ಲ. ಇವರೊಬ್ಬರು ಮಾತ್ರ ಏಕೆ ವಸೂಲಿ ಮಾಡುತ್ತಿದ್ದಾರೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಅಥಣಿಯ ಅಧಿಕಾರಿಗಳ ಜೊತೆ ಮಾತನಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಅವರ ಜೊತೆ ಕೂಡಲೇ ಮಾತನಾಡಿ, ಇದನ್ನು ನಿಲ್ಲಿಸಿರಿ.

(ಗೊಂದಲ)

ಅಧ್ಯಕ್ಷರು: ಇದು Zero Hour. Please ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಲಕ್ಷಣ ಸಂಗಪ್ಪ ಸವದಿ(ಅಥಣಿ) ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಅಥಣೀ ಪಟ್ಟಣದಲ್ಲಿರುವ ನನ್ನ ಮನೆ ನನ್ನ ಸ್ವತ್ತು ಯೋಜನೆಯಲ್ಲಿ ಸಾಲ ವಸೂಲಾತಿಗೆ ಖಾಸಗಿ ಸಂಸ್ಥೆಗೆ ವಹಿಸಿರುವುದು ನಿಜ. ಆದರೆ, ಅಲ್ಲಿನ ಜನರು ನನ್ನನ್ನು ಭೇಟಿಯಾಗಿ, ಅವರ ಅಹವಾಲನ್ನು ನನಗೆ ತಿಳಿಸಿದರು. ನಾನೂ ಅವರಿಗೆ ನಿಮ್ಮನ್ನು ಯಾವುದೇ ಕಾರಣಕ್ಕೂ ಖಾಸಗಿ ಏಜೆನ್ಸಿ ಮುಖಾಂತರ ಒಕ್ಕಲೆಬ್ಬಿಸುವುದು ಮತ್ತು ನಿಮ್ಮ ಮೇಲೆ ಅನ್ಯಾಯವಾಗದ ರೀತಿಯಲ್ಲಿ ನಾನು ನೋಡಿಕೊಳ್ಳುತ್ತೇನೆನ್ನುವ ಮಾತನ್ನು ಹೇಳಿ, ಅವರು ಧೈರ್ಯವಾಗಿ ಇರಲಿಕ್ಕೂ ಕೂಡ ಹೇಳಿದ್ದೇನೆ. ಆ ನಿಟ್ಟಿನಲ್ಲಿ ಸಿದ್ದರಾಮಯ್ಯನವರು ಹೇಳಿದ ಪ್ರಕಾರ, ಸಾಲ ವಸೂಲಾತಿ ಮಾಡಲಿಕ್ಕೆ ಖಾಸಗಿ ಸಂಸ್ಥೆಗೆ ವಹಿಸಿದ್ದಾರೆ, ಅವರು ಜನರನ್ನು ಒಕ್ಕಲೆಬ್ಬಿಸದ ರೀತಿಯಲ್ಲಿ ಅವರಿಗೆ ತೊಂದತೆಯಾಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದು ಸೂಕ್ತವಾಗಿದೆ. ಆ ನಿಟ್ಟಿನಲ್ಲಿ ಅದು ಬೆಳಗಾಂ ಜಿಲ್ಲೆಯ ಅಥಣಿ ಇರಬಹುದು, ಬೆಳಗಾಂ ಜಿಲ್ಲೆ ಇರಬಹುದು, ಯಾವುದೇ ಕಾರಣದಿಂದ ಬರಗಾಲ ಸ್ಥಿತಿಯಲ್ಲಿ ಬದುಕುತ್ತಿರುವ ಬಡವರಿಗೆ ಇಂಥ ಕಾರ್ಯ ಆಗದ ನಿಟ್ಟಿನಲ್ಲಿ ಸರ್ಕಾರ ಅವರಿಗೆ ಸೂಚನೆಯನ್ನು ಕೊಡಬೇಕು ಎಂದು ನಾನು ನಿಮ್ಮ ಮೂಲಕ ಕೇಳಿಕೊಳ್ಳತ್ತೇನೆ.

ಶ್ರೀ ಸಿದ್ದರಾಮಯ್ಯ : ವಸೂಲಿ ಮಾಡುವುದನ್ನು ಈ ಕೋಡಲೇ ನಿಲ್ಲಿಸಬೇಕು.

(ಗೊಂದಲ)

ಅಧ್ಯಕ್ಷರು: ಇದು ಶೂನ್ಯವೇಳೆ, ಜಯಚಂದ್ರರವರೆ ಕುಳಿತುಕೊಳ್ಳಿ,

ಶ್ರೀವಿಶ್ವೇಶ್ವರ ಹೆಗಡೆ ಕಾಗೇರಿ: ಇದಕ್ಕೆ ಉತ್ತರವನ್ನು ಇಲಾಖಾವತಿಯಿಂದ ದೊರಕಿಸಿಕೊಟ್ಟಿದ್ದಾರೆ. ಈಗ ಸಾಲ ವಸೂಲಾತಿಗೇನು ಕಾಲ ಮಿತಿ ಇತ್ತೋ, ಅದನ್ನು ದಿ: 31–03–2013 ರವರೆಗೆ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದೆ. ಹಾಗಾಗಿ, ಇನ್ನು ಮೇಲೆ ಬಲಾತ್ಕಾರವಾಗಿ ವಸೂಲಾತಿಗೆ ಹೋಗುವ ಪ್ರಶ್ನೆಯೇ ಇಲ್ಲ, ಅವರು ಅಲ್ಲಿ ಉಳಿಯುತ್ತಾರೆ. ವಸೂಲಾತಿಗೆ ಕಾಲಾವಕಾಶವನ್ನು ದಿ: 31–03–2013ರ ತನಕ ವಿಸ್ತರಿಸಿದ್ದೇವೆ.

ಶ್ರೀ ಸಿದ್ದರಾಮಯ್ಯ : ಆ ಮುಖ್ಯಾಧಿಕಾರಿ, why he is interested ? ಏಕೆ ಅವರಿಗೆ ಕೊಟ್ಟಿದ್ದಾರೆ. ಅವರಿಗೆ ನೋಟೀಸ್ ಕೊಡಿ. ಏಕೆ ವಸೂಲಿ ಮಾಡುತ್ತಿದ್ದಾರೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಗತ್ಯ ಮಾಹಿತಿಯನ್ನು ವಿವರಣೆಯನ್ನು ಪಡೆಯುತ್ತೇನೆ.

ಶ್ರೀ ಸಿದ್ದರಾಮಯ್ಯ: ಅವರಿಗೆ ನೋಟೀಸ್ ಕೊಟ್ಟು, ಅವರ ಮೇಲೆ ಕ್ರಮ ತೆಗೆದುಕೊಳ್ಳಿ. As you said, ದಿ: 31-03-2013 ರವರೆಗೆ ಟೈಂ ಇರುವಾಗ ಬೇರೊಂದು ಖಾಸಗಿ NGO ಗೆ ವಹಿಸಿ ಏಕೆ ಅವರು ತೊಂದರೆ ಕೊಡುತ್ತಿದ್ದಾರೆ ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗ ಸಮಯವನ್ನು extend ಮಾಡಿದ್ದೇವೆ. ಮೊದಲು ದಿ: 31-03-2013ಕ್ಕೆ ಮುಕ್ತಾಯವಾಗಿತ್ತು.

ಶ್ರೀ ಸಿದ್ದರಾಮಯ್ಯ: ಈಗ ಆ ಊರಿನಲ್ಲಿ ಜನರು ಪ್ರತಿಭಟನೆ ಮಾಡಿದ್ದಾರೆ. ಅಲ್ಲಿನ ಶಾಸಕರು ಇಲ್ಲಿಯೇ ಇದ್ದಾರೆ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅದಕ್ಕಾಗಿಯೇ, ಈಗ ಸಮಯವನ್ನು ಮುಂದಿನ ಮಾರ್ಚ್ ವರೆಗೆ extend ಮಾಡಿದೆ. ಹಾಗಾಗಿ, ಇನ್ನು ಮೇಲೆ ಅದೆಲ್ಲಾ ಆಗುವುದಿಲ್ಲ.

12. ವಿಷಯ: ರಾಯಚೂರಿನ Rajiv Gandhi Memorial Super Speciality Hospital ನಲ್ಲಿ ನೌಕರರು strike ಮಾಡುತ್ತಿರುವ ಕುರಿತು.

ಶ್ರೀ ಸೈಯದ್ ಯಾಸೀನ್ : (ರಾಯಚೂರು): ಮಾನ್ಯ ಅಧ್ಯಕ್ಷರೆ, ರಾಯಚೂರು ನಮ್ಮ OPEC assisted Rajiv Gandhi Memorial Super Speciality hospital ಬಗ್ಗೆ. Suddenly on 25th May 2012 they have taken a decision. ನಮ್ಮ Rajiv Gandhi Super Speciality Hospital ಅನ್ನು Medical Sciences ಗೆ hand over ಮಾಡಿದ್ದಾರೆ. Suddenly Infrastructure, Building, ಎಲ್ಲಾ hand over ಮಾಡಿದ್ದೀರಿ. They have left 286 employees. They have thrown them out on the road unemployed and they are on strike. ಈಗ strike ಮಾಡುತ್ತಿದ್ದಾರೆ. ಮೇ ತಿಂಗಳಿಂದ ಪ್ರಾರಂಭವಾಗಿ ಮೂರು ತಿಂಗಳಿಂದ ನಡೆಯುತ್ತಿದೆ. You are not asking them. You have not taken care of thos people. This is the urgent matter to be taken care. ಏಕೆಂದರೆ, OPEC hospital ಅನ್ನು Autonomous Body ಮಾಡಬೇಕು. So that they can merge all the employment opportunities. They are nearly about 287 unemployed people, they have to be merged immediately. They

are on the strike. ಅಲ್ಲಿನ Super Speciality concept should be continued. ಅದು ಬಹಳ ಗಂಭೀರವಾದ ವಿಷಯ. ಮೂರು ತಿಂಗಳಿನಿಂದ ಇದ ಬಗ್ಗೆ strike ನಡೆಯುತ್ತಿದ್ದರೂ ಯಾರೂ ಕೇಳುತ್ತಿರಲಿಲ್ಲ. Suddenly, they have taken this decision only to fulfil the desire of the Raichur Institute of Medical Sciences (RIMS). Raichur Institute of Medial Sciences hospital ಗೆ the Government has given....

ಅಧ್ಯಕ್ಷರು: This is Zero Hour. Let the Minister answer. You have already raised.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ : ಈ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಯವರು ಈಗ ಸದನದಲಿಲ್ಲ.

ಅಧ್ಯಕ್ಷರು: ಅವರಿಗೆ joint responsibility ಇದೆ. ಮಾಡುತ್ತಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ : ಈಗ ಅಗಲಿಲ್ಲವೆಂದರೆ ಇದೇ ವಿಷಯವನ್ನು ಸಾಯಂಕಾಲ ಚರ್ಚೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು: ಇಲ್ಲಿ ಕೇಳಿ. ಮೊದಲು ಕರೆದಾಗ ಮಾನ್ಯ ಸದಸ್ಯರು ಸದನದಲ್ಲಿರಲಿಲ್ಲ. ಆಗ ಸದನದಲ್ಲಿ ಮಂತ್ರಿಯವರು ಇದ್ದರು. ಆದರೆ, ನಾನು ಮಾನ್ಯ ಸದಸ್ಯರ request ಮೇಲೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ: ದಯವಿಟ್ಟು, ನಾವೂ ಆ ವಿಷಯದ ಮೇಲೆ ಮಾತನಾಡಲು ಅವಕಾಶ ಕೋರಿದ್ದೇವೆ.

ಅಧ್ಯಕ್ಷರು: ಇಲ್ಲಿ ಕೇಳಿ. ಕರೆದಾಗ ಇಲ್ಲದಿದ್ದರೆ ಏನು ಮಾಡಬೇಕು? ನೀವು ಕೇಳಿದಾಗ ಅವರು ಇಲ್ಲಿ ಕುಳಿತುಕೊಂಡ ಉತ್ತರ ಕೊಡಬೇಕೆಂದರೆ ಆಗುವುದಿಲ್ಲ. ನಾನು ಮೊದಲು ಅವರನ್ನು ಕರೆದಾಗ ಅವರು ಇರಲಿಲ್ಲ. ಆಗ ಮಂತ್ರಿಯವರು ಇದ್ದರು.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ: ಮಾನ್ಯ ಮುಖ್ಯಮಂತ್ರಿಯವರು ಬರಲಿ. ಆಗ ಪ್ರಶ್ನೆ ಕೇಳಬಹುದು.

ಅಧ್ಯಕ್ಷರು : ಹಾಗೆ ಹೇಳುವುದಕ್ಕೆ ಬರುವುದಿಲ್ಲ. ನಾನು ಕರೆಯುವಾಗ ಅವರು ಇರಲಿಲ್ಲ. ಇದನ್ನು ನೀವೂ ಅರ್ಥಮಾಡಿಕೊಳ್ಳಬೇಕು.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ: : ಸನ್ಮಾನ್ಯ ಅಧ್ಯಕ್ಷರೆ, ಅತ್ಯಂತ ಹಿಂದುಳಿದ ಪ್ರದೇಶದಲ್ಲಿರುವಂಥ ಆಸ್ಪತ್ರೆ.

ಅಧ್ಯಕ್ಷರು: ನಾನು ಮೊದಲು ಅವರನ್ನು ಕರೆದಾಗ ಅವರು ಇರಲಿಲ್ಲ. ನೀವು ಸುಮ್ಮನೇಕೆ ವಾದ ಮಾಡುತ್ತೀರಿ?

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ: ಈ ವಿಷಯ ಪ್ರಸ್ತಾಪವಾಗುವಾಗ ಸಂಬಂಧಪಟ್ಟ ಸಚಿವರು ಇರಬೇಕು. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ.

ಅಧ್ಯಕ್ಷರು: First ಕರೆದಾಗ ಮಾನ್ಯ ಸದಸ್ಯರು ಇರಲಿಲ್ಲ. ಆದರೂ ಅವರ request ಮೇಲೆ ನಾನು ಎರಡನೇ ಬಾರಿ ಅವರನ್ನು ಕರೆದಿದ್ದೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ: ಇರಲಿ, ತಪ್ಪೇನಿಲ್ಲ. ದಯವಿಟು, ಅವರು ಬರಲಿ.

ಶ್ರೀ ಅಧ್ಯಕ್ಷರು: ಇದು Zero Hour ಗೆ ಬರುವುದೇ ಇಲ್ಲ. strictly ಮಾತನಾಡುವುದಾದರೆ, ಈ ವಿಷಯ Zero Hour ಗೆ ಬರುವುದಿಲ್ಲ. ಸುಮ್ಮನೆ ಏಕೆ ವಾದ ಮಾಡುತ್ತೀರಿ?

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ನಾಳೆ ಉತ್ತರ ಕೊಡಿ ಸಾರ್.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ರಾಯಚೂರಿನ Rajivgandhi Super Speciality Hospital ಹೇಗೆ ನಡೆಯುತ್ತಿದೆ ಎನ್ನುವ ಬಗ್ಗೆ ನಮಗೆಲ್ಲಾ ಗೊತ್ತಿದೆ. ಅಲ್ಲಿ strike ನಡೆಯುತ್ತಿರುವ ವಿಷಯ ಸರ್ಕಾರದ ಗಮನದಲ್ಲಿದೆ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಇದು ನೇರವಾಗಿ ಸಂಭಂಧಪಟ್ಟಿದ್ದಾಗಿರುತ್ತದೆ. ವೈದ್ಯಕೀಯ ಶಿಕ್ಷಣ ಸಚಿವರು ಇದಕ್ಕೆ ನಾಳೆ ವಿವರವಾದ ಉತ್ತರವನ್ನು ಕೊಡುವುದಕ್ಕೆ ನಾನು ಅವರನ್ನು ಕೋರುತ್ತೇನೆ. ನಾಳೆ ವಿವರವಾದ ಉತ್ತರವನ್ನು ದೊರಕಿಸಿಕೊಡುತ್ತೇನೆ.

ಅಧ್ಯಕ್ಷರು: ಆಯಿತು. ಈಗ ವಿತ್ತೀಯ ಕಾರ್ಯಕಲಾಪಗಳು, ಕಿಮ್ಮನೆ ರತ್ನಾಕರ್ ರವರೆ ಪ್ರಾರಂಭ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಿ. ನಿನ್ನೆ ಸಹ ಗಮನ ಸೆಳೆಯುವ ಸೂಚನೆ ತೆಗೆದುಕೊಂಡಿಲ್ಲ.

ಅಧ್ಯಕ್ಷರು: ಮಧ್ಯಾಹ್ನ ಅವಕಾಶ ಕೊಡುತ್ತೇನೆ. Lunch Break ಆದಮೇಲೆ ಗಮನ ಸೆಳೆಯುವ ಸೂಚನೆ ತೆಗದುಕೊಳ್ಳೋಣ. ಈಗ ಅವರು ಮಾತನಾಡಲಿ.

5. ವಿತ್ತೀಯ ಕಾರ್ಯಕಲಾಪಗಳು

2012–13ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ

ಶ್ರೀ ಕಿಮ್ಮನೆ ರತ್ನಾಕರ್ : (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, Demands, ಮೇಲೆ ನಾನು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆ ಸಲ್ಲಿಸುತ್ತೇನೆ. ಬಹಳ ಪ್ರಮುಖವಾಗಿ, ರಾಜ್ಯ ಸರ್ಕಾರ Demands, ಮೇಲೆ ಸದನ ಒಪ್ಪಗೆ ಕೊಡಬೇಕೆಂದು ಏನು ಹೇಳಿದೆ, ಅದಕ್ಕೆ ಪೂರಕವಾಗಿ ಈವರಗೆ ಕಾರ್ಯನಿರ್ವಹಿಸಿದೆಯೇ ಎನ್ನುವುದು ಬಹಳ ಮುಖ್ಯ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ನನ್ನ ತಿಳುವಳಿಕೆ ಪ್ರಕಾರ, ಈಗಿರುವ ಅರ್ಥಿಕ ವಿವರಣೆ ನೀಡುವ ಸಂದರ್ಭದಲ್ಲಿ ವಾಸ್ತವದಲ್ಲಿ ಸರಿಯಾದ ರೀತಿಯಾದ ಮಾಹಿತಿಯನ್ನು ಕೊಡತಕ್ಕಂಥದ್ದರಲ್ಲಿ ಸರ್ಕಾರ ವಿಫವಾಗಿದೆ. ಎನ್ನುವ ಮಾತನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ, ಕಳೆದ 3–4 ವರ್ಷಗಳಲ್ಲಿ ನಡೆದಿರತಕ್ಕಂಥ ಆರ್ಥಿಕ ಅವಲೋಕನ ಮಾಡಿದೆ. 2009–10, 2010–11, ಈ ರೀತಿ ನಾವು ಯೋಚನೆ ಮಾಡಿದಾಗ ಸರ್ಕಾರದ ಆರ್ಥಿಕ ಪರಿಸ್ಥಿತಿ ಹೇಗಿದೆ? ಕಳೆದ 3 ಅವಧಿಗಳಲ್ಲಿ ಯೋಚನೆ ಮಾಡಿದಾಗ. ಕರ್ನಾಟಕ ರಾಜ್ಯದ ಒಟ್ಟು ಆದಾಯ 65 ಸಾವಿರ ಕೋಟಿ ರೂಪಾಯಿಗಳು, ಶಾಸಾಕಾಂಗ, ಕಾರ್ಯಂಗ ಮತ್ತು ನ್ಯಾಯಾಂಗ ಈ ಮೂರೂ ವ್ಯವಸ್ಥೆಗಳಿಂದ ಒಟ್ಟು ಆದಾಯ ಬಂದಿರುವುದು ಕೇವಲ 65 ಕೋಟಿ ರೂಪಾಯಿಗಳು ಆ 65 ಸಾವಿರ ಕೋಟಿ ರೂಪಾಯಿಗಳಲ್ಲಿ 9–10 ಸಾವಿರ ಕೋಟಿ ರೂಪಾಯಿಗಳು ಕೇಂದ್ರದಿಂದ ಬಂದಿರುವ ಅನುದಾನವಾಗಿದೆ. ರಾಜ್ಯ ಸರ್ಕಾರದ ಆದಾಯ ಕೇವಲ 50 ಸಾವಿರ ಕೋಟಿ ರೂಪಾಯಿ ಮಾತ್ರ ಇದೆ. ಅದನ್ನು ನಮ್ಮಲ್ಲಿರುವ ವೆಚ್ಚಗಳು ಎಷ್ಟೆಂದು ಗಮನಿಸಿದಾಗ, 11–12 ಸಾವಿರ ಕೋಟಿ ರೂಪಾಯಿಗಳು ಸಂಬಳಕ್ಕಾಗಿಯೇ ವೆಚ್ಚವಾಗುತ್ತದೆ. ಕರ್ನಾಟಕ ಸರ್ಕಾರ ಬಿಡುಗಡೆ ಮಾಡತಕ್ಕಂಥ ಸೂಕ್ತ ಮಾಹಿತಿಯಲ್ಲೇ ಅದನ್ನು ತೋರಿಸಿದ್ದಾರೆ. ಸುಮಾರು 12 ಸಾವಿರ ಕೋಟಿ ರೂಪಾಯಿ ಸಂಬಳಕ್ಕೆ ಹೋಗುತ್ತಿದೆ. Pension ಗಾಗಿ 4 ಸಾವಿರ ಕೋಟಿ ರೂಪಾಯಿ ಹೋಗುತ್ತಿದೆ. ಅಂದಾಜು 5900 ಕೋಟಿ ರೂಪಾಯಿಗಳನ್ನು

ವಿವಿಧ ಸಂಸ್ಥೆಗಳಿಗೆ ಕೇವಲ ಬಡ್ಡಿ ರೂಪದಲ್ಲಿ ಕೊಡುತ್ತಿದ್ದೇವೆ. ಹಾಗೇಯೇ, ಒಟ್ಟು 27 ಸಾವಿರ ಕೋಟಿ ರೂಪಾಯಿಗಳಲ್ಲಿ 12 ಸಾವಿರ ಕೋಟಿ ರೂಪಾಯಿ ಸಂಬಳಕ್ಕೆ, ಬಡ್ಡಿ ಪಾವತಿಗಾಗಿ 6 ಸಾವಿರ ಕೋಟಿ ರೂಪಾಯಿಗಳು ಮತ್ತು pension items ಗೆ ನಾವು 4 ಸಾವಿರ ಕೋಟಿ ರೂಪಾಯಿಗಳನ್ನು ವ್ಯಯ ಮಾಡುತ್ತಿದ್ದೇವೆ. ಇನ್ನು ಸಹಾಯ ಧನಗಳ ವಿಷಯ. Social Security and other subsidies ಗೆ ಸುಮಾರು 5,500 ಕೋಟಿ ರೂಪಾಯಿಗಳನ್ನು ವ್ಯಯ ಮಾಡುತ್ತಿದ್ದೇವೆ. ಅಂದರೆ, ನಮ್ಮ ಬಳಿ ಇರುವ ಹಣದಲ್ಲಿ ಅಭಿವೃದ್ಧಿಗೆ ಉಳಿಯುವುದು ಕೇವಲ 8–9 ಸಾವಿರ ಕೋಟಿ ರೂಪಾಯಿಗಳು ಮಾತ್ರ, ಉಳಿದೆಲ್ಲ ಹಣವನ್ನು ನಾವು ಸಾಲದ ರೂಪದಲ್ಲಿ ಅಭಿವೃದ್ಧಿಪಡಿಸಬೇಕು. ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ, ಸರ್ಕಾರದ ಜನಪ್ರಿಯ ಯೋಜನೆಗಳೇನಿವೆ. ಅದನ್ನು cut down ಮಾಡಬೇಕು ಮತ್ತು ಕಡಿಮೆ ಮಾಡಬೇಕು. ಜನಪರವಾದ ಯೋಜನೆಗಳೇನಿವೆ, ಅದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು. ಆದರೆ, ಅದಕ್ಕೆ ಈವರೆಗೂ ಕೂಡ ರಾಜ್ಯ ಸರ್ಕಾರ ಪ್ರಾಮುಖ್ಯತೆ ಕೊಡುತ್ತಿಲ್ಲ. ಇದರಲ್ಲಿ ಬಹಳ ಪ್ರಮುಖವಾದ 2–3 ವಿಷಯಗಳನ್ನು ಇಲಿ ಹೇಳಲು ಪ್ರಯತ್ನಿಸುತ್ತೇನೆ. ನಾವು ಇಲ್ಲಿ 1 ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಹಣಕ್ಕೆ ಸಮ್ಮತಿ ಕೊಟ್ಟಮೇಲೆ ನಮ್ಮ ಆಡಳಿತ ಹೇಗಿರಬೇಕು? ಆದರೆ, ಇವತ್ತು ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಲೋಪದೋಷಗಳೇನಿವೆ? ಬಹಳ ಪ್ರಮುಖವಾಗಿ, ಎಲ್ಲಾ ಇಲಾಖೆಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ನಮಗೆ ಆರ್ಥಿಕ ಇಲಾಖೆಯಿಂದ ತೊಂದರೆ ಇದೆ, ಅನುಮತಿ ಕೊಡುತ್ತಿಲ್ಲವೆಂದು ಹೇಳುತ್ತಾರೆ. ಬಹಶಃ ನಮಗೆ ದಕ್ಷ ಆಡಳಿತ ಕೊಡುವುದಕ್ಕೆ ಬಹಳ ತೊಂದರೆಯಾಗಿರುವುದು, ಬಹಳ ಪ್ರಮುಖವಾಗಿ ನಮ್ಮ ಹತ್ತಿರ Infrastructure ಸರಿ ಇಲ್ಲ. Infrastructure ಅಂದರೆ ಯಾವುದು? 1 ಲಕ್ಷದ 76 ಸಾವಿರ ಹುದ್ದೆಗಳು ರಾಜ್ಯದಾದ್ಯಂತ ಖಾಲಿ ಇವೆ. ಇದು 4 ವರ್ಷಗಳ ಬಿಜೆಪಿ ಆಡಳಿತದ್ದು ಮಾತ್ರ ಎಂದು ನಾನು ಹೇಳುತ್ತಿಲ್ಲ. It is the carried problem from the previous Governments also. Ido not allege only against BJP Government. ಆದರೆ, ನಾವು ಇತರರಿಗಿಂತ ತುಂಬಾ ಭಿನ್ನನಾಗಿ, ಪರಿಶುದ್ಧವಾದ, ಅತ್ಯುತ್ತಮವಾದ, ಕರ್ನಾಟಕಕ್ಕೆ ಬಿಜೆಪಿಯೇ ಪರಿಹಾರ ಎಂದು ಹೇಳಿ ಆಡಳಿತಕ್ಕೆ ಬಂದಾಗ, what are the measures that they have taken from the past four years? There should be a difference. ಹಿಂದೆ ಎಲ್ಲಾ ಆಡಳಿತ ವ್ಯವಸ್ಥೆಯ ವಿಫಲತೆಗಾಗಿ ಅವರೆಲ್ಲರೂ ಬಂದು ಈ ಕಡೆ ಕುಳಿತಿದ್ದಾರೆ. ನೀವು ಆಡಳಿತ ಬಂದಾಗ, what is the measure that you

have taken? ನಮ್ಮ ಒಂದು Assembly segment ನಲ್ಲಿಯೇ 1 ಸಾವಿರ ಹುದ್ದೆಗಳು ಖಾಲಿ ಇವೆ. ಬಹಶಃ ಅದು ಮಂಗಳೂರಿಗೇನೂ ಹೊಸದಲ್ಲ. ಇಡೀ ನನ್ನ Assembly segment ನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ 200 teachers ಇಲ್ಲ. 1996ರಲ್ಲಿ ಉದಾಸಿಯವರೂ ಸಹ ಮಂತ್ರಿಯಾಗಿದ್ದರೆಂದು ನಾನು ಭಾವಿಸಿಕೊಂಡಿದ್ದೇನೆ. ಬಹಶಃ ರಾಮಕೃಷ್ಣ ಹೆಗಡೆಯವರ ಆಡಳಿತದಲ್ಲಿ ಗೋವಿಂದೇಗೌಡರವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದರು. ಅವರನ್ನು ನಮ್ಮಲ್ಲಿ ಮಲೇನಾಡಿನ ಗಾಂಧಿ ಎಂದು ಕರೆಯುತ್ತಿದ್ದಾರೆ. See, at one instance he has taken 14,000 teachers only on merit critiria. ಯಾರೂ ಯಾರೋ influence ಗೂ ಹೋಗಿಲ್ಲ. ಯಾರ ಹತ್ತಿರವೂ ಕೇಳಲಿಲ್ಲ. ಯಾವ Minister, MLA ಬಾಗಿಲಿಗೂ ಹೋಗಿಲ್ಲ. They have sent the orders to their houses. ತಮಗೆ ಕೆಲಸ ಸಿಕ್ಕಿದೆ ಎಂದು ನಮ್ಮ ಮನೆಗೆ ಬಂದು ಹೇಳಿದವರಿದ್ದಾರೆ. ನಾವು ಯಾರನ್ನು ಕೇಳಲಿಲ್ಲ, ಮಾಡಲಿಲ್ಲ, ನಾವು ಅರ್ಜಿ ಹಾಕಿದ್ದೆವು only on merit basis ತಮಗೆ ಕೆಲಸ ಸಿಕ್ಕಿದೆ ಎಂದು ಹೇಳಿದರು. ಈಗೇನಾಗಿದೆ ಎಂದರೆ, ಕಳೆದ 4 ವರ್ಷಗಳಿಂದ teachers problems ಇದೆ. you have not solved it. higher Education ನ ವಿಚಾರದಲ್ಲಿ ನಾನು ಈಗಾಗಲೇ ಮಾತನಾಡುವಾಗ ಕೇವಲ ನಮ್ಮ ತೀರ್ಥಹಳ್ಳಿ ಒಂದು ಕಾಲೇಜಿನಲ್ಲಿ 1500 ಮಕ್ಕಳಿದ್ದಾರೆ. 50–60 ಜನ teachers ಬೇಕಾಗಿತ್ತು, ಆದರೆ ಅಲ್ಲಿಗೆ ಕೇವಲ 18 teachers ನೇಮಿಸಿದ್ದೀರಿ. you have failed. ನಮ್ಮ District Minister ರವರು Deputy Chief Minister. ಆಗಿದ್ದಾರೆ. ಅವರು ನಮ್ಮ ಶಿವಮೊಗ್ಗ ಜಿಲ್ಲೆಯವರು. ತೀರ್ಥಹಳ್ಳಿಯ ಒಂದು ತಾಲ್ಲೂಕು ಕಛೇರಿಯಲ್ಲಿ 32 ಹುದ್ದೆಗಳು ಖಾಲಿ ಇದೆ. How you can give an impressive administration? ನನಗೆ ಅದು ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುವ ಸಮಯದಲ್ಲಿ ಹೇಳಬೇಕು. ಮೀನುಗಾರಿಕೆ ಇಲಾಖೆಯಲ್ಲಿ ಇಡೀ ಶಿವಮೊಗ್ಗ ಜಿಲ್ಲೆಗೆ ಇಬ್ಬರು ಅಧಿಕಾರಿಗಳು ಮಾತ್ರ ಇದ್ದಾರೆ. Youth services ಇಲಾಖೆಯಲ್ಲಿ ಇಡೀ ಶಿವಮೊಗ್ಗ ಜಿಲ್ಲೆಗೆ ಒಬ್ಬ ಅಧಿಕಾರಿ ಮಾತ್ರ ಇದ್ದಾರೆ. ನಮ್ಮ ತಾಲ್ಲೂಕು ಪಂಚಾಯಿತಿ ಇದೆ. Rural Development ಕೂಡ ಅವರಿಗೇ ಬರುತ್ತದೆ. Rural Development ನಲ್ಲಿ Assistant Executive Engineer ಸೇರಿದಂತೆ 9 ಜನ Engineers ಇರಬೇಕಾಗಿತ್ತು. ಆದರೆ ಅಲ್ಲಿ 6 ಜನ Engineers ಇಲ್ಲ. ಹಾಗಾದರೆ, ನೀವು ಹೇಗೆ ಕೆಲಸ ತೆಗೆದುಕೊಳ್ಳುತ್ತೀರಿ? ಕೇರಳದಲ್ಲಿ ಒಂದು ಗ್ರಾಮ ಪಂಚಾಯಿತಿಗೆ 14 ಜನ ನೌಕರರಿದ್ದಾರೆ. Junior Engineer is there to each Gram Panchayat ನಮ್ಮಲ್ಲಿ 10 ಗ್ರಾಮ ಪಂಚಾಯಿತಿಗೆ ಒಬ್ಬ ಇಂಜಿನಿಯರ್

ಇರುತ್ತಾರೆ. How he can draw the bills? How he can place the bills ? ನನಗನಿಸುತ್ತದೆ, it is not at all an administration. ಇದೊಂದು ಆಡಳಿತ ಯಂತ್ರದ ವ್ಯವಸ್ಥೆಯೇ ಅಲ್ಲ. ಇದಕ್ಕಿಂತ ಕುಲಗೆಟ್ಟ ವ್ಯವಸ್ಥೆಯನ್ನು ನಾವು ನೋಡಲಿಕ್ಕೆ ಸಾಧ್ಯವೇ ಇಲ್ಲ. ಈ ಎಲ್ಲಾ ಕಾರಣಗಳಿವೆ. ಟೀಚರ್ಸ್ ಇಲ್ಲವೆಂದು ಶಾಸಕರ ಮನೆಗೆ ಬಂದು ಬಯ್ಯುತ್ತಾರೆ. ಇದರಲ್ಲಿ ಆಡಳಿತ ಪಕ್ಷದ ಶಾಸಕರು, ವಿರೋಧ ಪಕ್ಷದ ಶಾಸಕರು ಎನ್ನುವ ಪ್ರಶ್ನೆ ಇಲ್ಲ. It is concerned to the Education Minister also. ಅವರ ಕ್ಷೇತ್ರದಲ್ಲೂ ಈ ಸಮಸ್ಯೆ ಇದೆ. ಹಾಗಾದರೆ ಅವರೆಲ್ಲರೂ ಬಂದು ಬಯ್ಯುವುದೇನೆಂದರೆ, ನೀವು failure. It is a failure on the part of the Government not on the part of the Legislator. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, when they have taken the responsibility, they have to discharge their duties. Otherwise, they should get down from the responsibilities. ಇದು ಒಂದು ಭಾಗ. ಬಹಳ ಪ್ರಮುಖವಾಗಿರುವ ಅಂಶವೇನೆಂದರೆ, ನಮ್ಮ ಶಾಸಕ ಮಿತ್ರರು ಅಧಿಕಾರಿಗಳ ಬಗ್ಗೆ ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ. ಇತ್ತೀಚೆಗೆ, ಸದಸ್ಯರಾದ ಚಿಕ್ಕಣ್ಣನವರ ಕ್ಷೇತ್ರದಲ್ಲಿ ಒಂದು ಘಟನೆ ನಡೆಯಿತು. ಇಲ್ಲಿರುವ ಎಲ್ಲಾ ಶಾಸಕರಿಗೂ ಕೂಡ ನಾವು ಅಧಿಕಾರಿಗಳ ಜೊತೆ ಹೇಗೆ ನಡೆದುಕೊಳ್ಳಬೇಕೆನ್ನುವುದು ದೊಡ್ಡ ಸಮಸ್ಯೆಯಾಗಿದೆ. ನಾವು ಫೋನ್ ಮಾಡಿ ಹೇಳಿದರೆ ನಮ್ಮ ಮಾತು ಕೇಳುವುದಿಲ್ಲ. ನಾವು ಲೆಟರ್ ಬರೆದರೆ ಅದಕ್ಕೆ ರೆಸ್ಪಾಂಡ್ ಮಾಡುವುದಿಲ್ಲ. ಕಛೇರಿಗೆ ಹೋಗಿ ಅಲ್ಪಮಟ್ಟಿಗೆ ಮಾತನಾಡಿದರೆ ನಾವು ಮಾಡುವುದಕ್ಕಾಗಲ್ಲ ಎನ್ನುತ್ತಾರೆ. ಗಲಾಟೆ ಮಾಡಿದರೆ ನಮ್ಮ ಮೇಲೆ official discharge of duties ಗೆ ತೊಂದರೆ ಕೊಡುತ್ತಾರೆ ಎಂದು ನಮ್ಮ ಮೇಲೆ complaint ಕೊಡುತ್ತಾರೆ. See, ನಾವು ಜಾಸ್ತಿ ಮಾತನಾಡಿದರೆ ರೌಡಿ ಆಗುತ್ತೇವೆ, ಕಡಿಮೆ ಮಾತನಾಡಿದರೆ ಕೆಲಸ ಆಗಲ್ಲ. What is the role of the Legislator in the Taluk Administration? This should be explained ಸರ್ಕಾರ ಅದನ್ನು explain ಮಾಡಬೇಕಾಗುತ್ತದೆ. ಇಲ್ಲಿ ನಮ್ಮ ಪಾತ್ರ ಏನು? ನಾನು ಹೇಳಿದ್ದನ್ನು ಅವರು ಮಾಡುವುದಿಲ್ಲವೆಂದರೆ ಅಥವಾ ನನ್ನ ಪ್ರಶ್ನೆ ಇರುವುದು ಒಂದು ಮಾತ್ರವಲ್ಲ ತೀರ್ಥಹಳ್ಳಿಯಲ್ಲಿ ನಡೆದ ಒಂದು ಘಟನೆ ತಮಗೆ ಹೇಳುತ್ತೇನೆ. ಹಮಾಲಿ ಮಾಡಿದಂಥ ಸಾವಿರ ಜನರಿಗೆ 20–30 ವರ್ಷಗಳಿಂದ ಸೈಟ್ ಸಿಕ್ಕಿಲ್ಲ. ಮನೆ ಕೆಲಸಕ್ಕೆ ಹೋಗುತ್ತಾರೆ, ಅವರಿಗೆ ಸೈಟ್ ಸಿಕ್ಕಿಲ್ಲ. ಅವರು ನಮಗೆ ಸೈಟ್ ಕೊಡಿ ಎಂದು ಕೇಳುತ್ತಿದ್ದಾರೆ. ಹತ್ತಾರು ಸಾರಿ ಪ್ರತಿಭಟನೆ ಮಾಡುತ್ತಾರೆ. ನಾನು ಪುರ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಚೀಫ್ ಆಫೀಸರ್‌ಗೆ

ಕರೆದು ನೀವು 18 ಸೈಟ್ ಮಾರುತ್ತೀರಿ, ಹರಾಜು ಮಾಡುತ್ತೀರಿ ಎಂದು ಹೇಳುತ್ತೀರಿ 10–15 ಲಕ್ಷಕ್ಕೆ ಯಾರೋ ಶ್ರೀಮಂತರಿಗೆ ಆ ಸೈಟ್ ಹೋಗುತ್ತದೆ, ಅವರೆಲ್ಲಾ ನನ್ನ ಹತ್ತಿರ ಬಂದು ಪ್ರತಿಭಟನೆ ಮಾಡುತ್ತಿದ್ದಾರೆ, ಒಂದು ತಿಂಗಳು ಮುಂದಕ್ಕೆ ಹಾಕಿ ಎಂದು ವಿನಂತಿ ಮಾಡಿಕೊಂಡೆ ನಾನು ಹೇಳಿದ್ದು ಇಷ್ಟೇನೆ. I have not taken it as a challenge. ನಾನು ಯಾವುದೇ ಸಂದರ್ಭದಲ್ಲಿ ಇಂಥ challenge ಅನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಅವರನ್ನು ನನ್ನ ಕಛೇರಿಗೆ ಕರೆಸಿ ಟೀ ಕೊಟ್ಟು ಅವರಿಗೆ ಕೇಳಿದೆ. See, they have taken it as a challenge. ನಾವು ನಾಳೆ ಹರಾಜು ಹಾಕುತ್ತೇವೆ ಎಂದರೆ ನಾವೇನು ಮಾಡಬೇಕು? ನಾನು ಡಿ.ಸಿ.ಗೆ ಲೆಟರ್ ಬರೆದಿದ್ದೇನೆ. ಅವರಿಗೂ ಕೇಳಿಕೊಂಡಿದ್ದೇನೆ, ಒಂದು ತಿಂಗಳು ಮುಂದಕ್ಕೆ ಹಾಕಿ ಎಂದು ಅವರನ್ನೆಲ್ಲಾ ಕರೆಸಿ ಕುಳಿತು ಮಾತುಕತೆ ಮಾಡಿ ಬಗೆಹರಿಸೋಣವೆಂದರೆ, they are not obliging it. See, ನಾವೊಬ್ಬ ಶಾಸಕರಾಗಿ ನಾವೇನು ಮಾಡಬೇಕು? ಇವೆಲ್ಲವೂ ಕೂಡ ಬಹುಶಃ ತಾವು ಉತ್ತರ ಕೊಡುವ ಸಮಯದಲ್ಲಿ ಸರ್ಕಾರ ಇದಕ್ಕೆ ಉತ್ತರ ಕೊಡುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲಿ ಬಹಳ ದೊಡ್ಡ ಸಮಸ್ಯೆ ಏನೆಂದರೆ ನಮ್ಮ ಅರಣ್ಯ ಇಲಾಖೆಯಲ್ಲಿದೆ. ನನಗೆ ಏನು ಅನ್ನಿಸಿದೆ ಎಂದರೆ, ಅರಣ್ಯ ಇಲಾಖೆಯ ಅಧಿಕಾರಿಗಳು ಅವರೇನು ಭೂಲೋಕದಲ್ಲಿ ಹುಟ್ಟಿದವರ ಹಾಗೆ ಆಡುತ್ತಿಲ್ಲ. ಆಕಾಶದಿಂದ ಬಂದು ನಾವು ಇಳಿದಿದ್ದೇವೆ ಎನ್ನುವ ರೀತಿಯಲ್ಲಿ ಅವರ behaviour. ಇಲ್ಲಿ ನನಗೆ ಬಹಳ ಮುಖ್ಯವಾಗಿರುವುದು ಕಂದಾಯ ಮತ್ತು ಅರಣ್ಯ ಇಲಾಖೆಯಲ್ಲಿ ಅನೇಕ ಗೊಂದಲಗಳಿರುವುದು. ಅದನ್ನು ಏಕೆ ಸರಿಪಡಿಸಲಿಕ್ಕೆ ಆಗುವುದಿಲ್ಲ? ಇದು ನನಗೆ ಅರ್ಥವಾಗುತ್ತಿಲ್ಲ. ಕಂದಾಯ ಇಲಾಖೆಯ ಸರ್ವೆನಂಬರ್ 6 ರಲ್ಲಿ 300 ಎಕರೆ ಇದ್ದರೆ 150 ಎಕರೆ ಅರಣ್ಯ ಇಲಾಖೆಗೆ ಸೇರಿದ್ದು 150 ಎಕರೆ land revenue ಎಂದು ಇದೆ. ಅದಕ್ಕೆ bifurcate ಆಗಿಲ್ಲ. It has not been divided by metes and bounds. It has not been bifurcated. ನಾವು ಯಾವುದೇ ಬಗರ್ ಹುಕುಂ ಸಮಿತಿ ರಚಿಸಿ grant ಕೊಟ್ಟರೆ ಅದು ನಮ್ಮದು ಫಾರೆಸ್ಟ್ ಎಂದೆನ್ನುತ್ತಾರೆ. ಇಲ್ಲಿ ಬಹಳ problem ಎಂದರೆ 300 ಎಕರೆಯೂ ಫಾರೆಸ್ಟ್ ಇದೆ, 300 ಎಕರೆಯೂ land revenue ಇದೆ. The Government is incapable of solving this problem. ಏಕೆ ಮಾಡುವುದಕ್ಕಾಗುತ್ತಿಲ್ಲ? ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯವರನ್ನು ಕರೆಸಿ ಜಂಟಿ ಸರ್ವೆ ಮಾಡಿಸಿ ಅದನ್ನು bifurcate ಮಾಡಿಸಿ metes and bounds ಮಾಡಿ ಯಾವುದು ಫಾರೆಸ್ಟ್ ಯಾವುದು land revenue ಎಂದು ಮಾಡುವುದಕ್ಕಾಗುವುದಿಲ್ಲವೆ?

ಪ್ರತಿನಿತ್ಯ ಹಳ್ಳಿಯಲ್ಲಿ ಇದರ ಬಗ್ಗೆ ಜಗಳವಾಡುತ್ತಿದ್ದಾರೆ. ಇವರು ಯಾರಿಗಾದರೂ ಅವನಿಗೆ ಬೇಕಾದವರಿಗೆ ಹತ್ತು ಸಾವಿರ ಕೊಟ್ಟರೆ ಇದು ಫಾರೆಸ್ಟ್‌ನೊಳಗೆ ಬರುವುದಿಲ್ಲ, ಹತ್ತು ಸಾವಿರ ಕೊಡದೇ ಇದ್ದರೆ ಫಾರೆಸ್ಟ್‌ನೊಳಗೆ ಬರುತ್ತದೆ. ಹಾಗಾದರೆ where is the solution? Suppose ಫಾರೆಸ್ಟ್‌ನವರನ್ನು ಕೇಳಿದರೆ ಅವರೊಂದು ಹೊಸ map ತಂದು ಚಿತ್ರ ಬಿಡಿಸಿ green ink ಬರೆದು ಇದೆಲ್ಲಾ ಫಾರೆಸ್ಟ್ ಎಂದು ತೋರಿಸುತ್ತಾರೆ, which is not substantiated by metes and bounds. ಟಿಪ್ಪಣಿ ಖಾತೆಯಲ್ಲಿ ಅವನ ಅಡ್ರೆಸ್ ಇಲ್ಲ. ಟಿಪ್ಪಣಿ ಖಾತೆಯಲ್ಲಿ Forest Department ನ ಹೆಸರೇ ಇಲ್ಲ, metes and bounds ಇಲ್ಲ. boundary fix ಆಗಿಲ್ಲ, but they are claiming that they are the owners. ಈ ಎಲ್ಲ ವಿಚಾರಗಳು ಬಗೆಹರಿಯದೆ ನಾಲ್ಕು ವರ್ಷಗಳಾಗಿ ಹೋಯಿತು. ಇನ್ನು ಯಾವಾಗ solve ಮಾಡುವುದು? ಮಾನ್ಯ ಉಪಾಧ್ಯಕ್ಷರಿಗೆ ಹೇಳುತ್ತೇನೆ, ಈಗಾಗಲೇ ನಾಲ್ಕು ವರ್ಷಗಳಾದವು, ನಾನು ಶಿವಮೊಗ್ಗದಲ್ಲಿ Law practice ಮಾಡುತ್ತಿದ್ದಾಗಲೇ, ಮಾನ್ಯ ಮಾಜಿ ಮುಖ್ಯಮಂತ್ರಿಗಳಾಗಿರುವ ಯಡಿಯೂರಪ್ಪನವರು ಎಲ್ಲರಿಗೂ ಕೂಡ ಬಗರ್‌ಹುಕುಂ ಅನ್ನು ಮಂಜೂರು ಮಾಡಬೇಕೆಂದು ಕಾಲ್ನಡಿಗೆಯಲ್ಲಿ ಬಂದಿದ್ದರು. ಅವರು ಮುಖ್ಯಮಂತ್ರಿಗಳಾದರು. ಅವರ ಹೋರಾಟದ ಬಗ್ಗೆ ನನಗೆ ಬಹಳ ಗೌರವವಿದೆ. ಈಗ ನಾಲ್ಕು ವರ್ಷವಾಯಿತು. ನಾನು ನಿನ್ನೆ ಬಗರ್ ಹುಕುಂ ಸಮಿತಿಯಲ್ಲಿ ಏನಾಗಿದೆ ಎಂದು ಪ್ರಶ್ನೆ ಕೇಳಿದ್ದೆ, ಅವರಿನ್ನು ಬಗರ್ ಹುಕುಂ ಸಮಿತಿಯನ್ನೇ 36 ತಾಲ್ಲೂಕುಗಳಲ್ಲಿ ರಚಿಸಿಲ್ಲ. ಇನ್ನು ಯಾವಾಗ ಮಾಡುವುದು? ಇನ್ನು ನಮಗೆ ಉಳಿದಿರುವ ಅವಧಿ 8 ತಿಂಗಳು ಮಾತ್ರ, ಅದು ಭಿನ್ನಮತೀಯ 18 ಜನರು ಸುಮ್ಮನೆ ಇದ್ದರೆ, ಇಲ್ಲಾಂದ್ರೆ ನಾಳೆಯೂ ಇಲ್ಲ. 27ಕ್ಕೆ ಇಲ್ಲ. ನಾನು ಹೇಳುವುದೇನೆಂದರೆ, ನಾಲ್ಕು ವರ್ಷಗಳಿಂದ ಬಗರ್ ಹುಕುಂ ಸಮಿತಿ ರಚನೆ ಮಾಡುವುದಕ್ಕೆ ಆಗಿಲ್ಲವೆಂದರೆ ಹೇಗೆ? ಮೂರೂವರೆ ವರ್ಷವಾದರೂ ಸರ್ಕಾರಕ್ಕೆ ಬಗರ್ ಹುಕುಂ ಸಮಿತಿ ರಚನೆ ಮಾಡುವುದಕ್ಕೆ ಆಗಿಲ್ಲವೆಂದರೆ ಕಾರಣ ಏನು? ಯಾರು ಬೇಡ ಎಂದಿದ್ದರು? ಹಾಗಾದರೆ ಒಂದು ವರ್ಷದ ಸಮಯದಲ್ಲಿ ಅವರ ಸಮಸ್ಯೆ ಎಲ್ಲಾ ನಾವು ಬಗೆಹರಿಸುತ್ತೇವೆಯೆ? ಆ ಜನರು ಬಂದು ಯಾರಿಗೆ ಬಯ್ಯುತ್ತಾರೆ? ಅಲ್ಲಿನ ಶಾಸಕರಿಗೆ. ಅದು ಆಡಳಿತ ಪಕ್ಷದವರಿರಬಹುದು, ವಿರೋಧ ಪಕ್ಷದವರಿರಬಹುದು. ಅಂದರೆ ನಾವು ಮಾಡದಿರುವ ತಪ್ಪಿಗೆ ನಾವು ಅವರ ಹತ್ತಿರ ಯಾವ ಕಾರಣಕ್ಕೆ ಬಯ್ಯಿಸಿಕೊಳ್ಳಬೇಕು? ಇದು ಒಂದು ಭಾಗ. ಇಂಥ ಅನೇಕ ಸಮಸ್ಯೆಗಳನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಬಹಳ ಪ್ರಮುಖವಾಗಿ ನಮ್ಮ ಕಂದಾಯ ಮತ್ತು ಇಂಧನ

ಇಲಾಖೆ ಹಾಗೂ ಭಾರಿ ನೀರಾವರಿ ಇಲಾಖೆಗೆ ಸಂಬಂಧಪಟ್ಟಿರುವುದು. ನಾನು ಮುಳುಗಡೆ ಪ್ರದೇಶದಿಂದ ಬಂದಿರತಕ್ಕಂಥವನು. ಇಡೀ ಕರ್ನಾಟಕದಲ್ಲಿ ಭೌಗೋಳಿಕವಾಗಿ ಅತಿ ದೊಡ್ಡದಾಗಿರುವುದು ತೀರ್ಥಹಳ್ಳಿ ಕ್ಷೇತ್ರ, 61 ಗ್ರಾಮ ಪಂಚಾಯಿತಿಗಳು ಬರುತ್ತವೆ. ನಮಗೆ 3,500 ಕಿ.ಮೀ. ರಸ್ತೆ ಬರುತ್ತದೆ. ಸುಮಾರು 8-9 ಜಿಲ್ಲಾ ಪಂಚಾಯಿತಿ ಸದಸ್ಯರು ನಮ್ಮ ವ್ಯಾಪ್ತಿಗೆ ಬರುತ್ತಾರೆ. ಬಹಳ ದೊಡ್ಡ ಸಮಸ್ಯೆ ಏನೆಂದರೆ, ಅಷ್ಟು ಮುಳುಗಡೆ ಪ್ರದೇಶದ ಸಮಸ್ಯೆಗಳು ಇವತ್ತಿಗೂ ಕೂಡ ಬಗೆಹರಿದಿಲ್ಲ. ನಾನು ಈ ಬಗ್ಗೆ ಪ್ರಶ್ನೆ ಕೇಳಿದಾಗ ಎಲ್ಲವನ್ನೂ ಬಗೆಹರಿಸಿದ್ದೇವೆಂದು ಉತ್ತರ ಬಂತು. ಏನು ಬಗೆಹರಿಸಿದ್ದಾರೆ? ಬಹಳ ದೊಡ್ಡ ಸಮಸ್ಯೆ ಏನೆಂದರೆ, ಇವತ್ತು ನಮ್ಮಲ್ಲಿ ನಕ್ಸಲ್ ಪೀಡಿತ ಪ್ರದೇಶವಿದೆ. ನನಗೆ ಅನ್ನಿಸಿರುವಂಥದ್ದು ನಕ್ಸಲರು ಏನು ತಪ್ಪು ಮಾಡುತ್ತಿದ್ದಾರೆಂದು ನನಗೆ ಭಾವನೆ ಬರುತ್ತಿದೆ. ತಮ್ಮ ಅವಗಾಹನೆಗೆ ತರುತ್ತೇನೆ. ಯಾವ ಪರಿಸ್ಥಿತಿ ಇದೆ ಎಂದರೆ, ಆಗುಂಬೆಯಲ್ಲಿ 42 ಕುಟುಂಬಗಳಿಗೆ ಕರೆಂಟ್ ಲೈನ್ ಇರಲಿಲ್ಲ. ನಕ್ಸಲ್ ಪ್ಯಾಕೇಜ್ ಎಂದು ಇದೆ. ದೇವರ ದಯೆಯಿಂದ ಒಂದು ರೂಪಾಯಿ ಕೊಡಲಿಲ್ಲ. ಉಡುಪಿಯ ಪೇಜಾವರ ಮಠದ ಸ್ವಾಮಿಗಳು ಬಂದು 2 ಕುಟುಂಬಗಳಿಗೆ ಐದ್ಯೈದು ಸಾವಿರ ಹಾಕಿ 3 ಲಕ್ಷ ರೂಪಾಯಿ ಹಾಕಿ ಎಲೆಕ್ಟ್ರಿಕ್ ಕನೆಕ್ಷನ್ ಕೊಡುತ್ತಾರೆ. ಸರ್ಕಾರ ಏನು ಮಾಡುತ್ತದೆ? ಹಾಗಾದರೆ ನಕ್ಸಲ್ ಪ್ಯಾಕೇಜ್ ಯಾರಿಗೋಸ್ಕರ? ಹಾಗಾದರೆ ಇದನ್ನೆಲ್ಲಾ ಯಾರು ಸರಿಪಡಿಸಬೇಕು? ಇದರಲ್ಲಿ ಸರ್ಕಾರದ ನ್ಯೂನತೆಯಿಲ್ಲವೆ? ಅಥವಾ ನಾವೇನಾದರೂ ಜನಪ್ರತಿನಿಧಿಗಳು ನಿಮ್ಮ ಗಮನಕ್ಕೆ ತಂದಿಲ್ಲವೆ? We have brought it to the notice of the Government. ನಾವು ಅದನ್ನು ತಂದಿದ್ದೇವೆ. ಇನ್ನೊಂದು ಬಹಳ ದೊಡ್ಡ ದುರಂತ ಏನೆಂದರೆ, ನಮ್ಮ ಆರ್ಥಿಕ ಇಲಾಖೆಯದು ಬಹಳ ದೊಡ್ಡ ಸಮಸ್ಯೆ. ನಾವು ವಿದೇಶಗಳೆಂದರೆ ಎಲ್ಲಾ ದೇಶಗಳೆಂದು ಹೇಳುವುದಿಲ್ಲ. ಅದು ಇಂಗ್ಲೆಂಡ್ ಇರಬಹುದು, ಅಮೆರಿಕ ಇರಬಹುದು, ಆಸ್ಟ್ರೇಲಿಯಾ ಆಗಬಹುದು ಅಥವಾ developed countries ಗಳ ಬಗ್ಗೆ ನಾವು ಯೋಚಿಸಿದಾಗ, ನಮ್ಮ ರಾಜಕಾರಣಿಗಳಾಗಲಿ ನಾವು ಎಲ್ಲರೂ ಮೊದಲು ಆಶ್ವಾಸನೆಗಳನ್ನು ಕೊಡುತ್ತೇವೆ, programmes announce ಮಾಡುತ್ತೇವೆ without any planning ನಮ್ಮ ಹತ್ತಿರ ಸ್ಥೂಲವಾದ ಪ್ಲಾನಿಂಗ್ ಇರುವುದಿಲ್ಲ. we in order to get the applaud from the mass, ಎದುರುಗಡೆ ಕುಳಿತಿರುವ ಜನ ನಮಗೆ ಎಲ್ಲಾ ಕ್ಲಾಪ್ಸ್ ಹೊಡೆಯುತ್ತಾರೆಂದಾಕ್ಷಣ ಆಶ್ವಾಸನೆ ಕೊಟ್ಟು ಬಿಡುತ್ತೇವೆ without any financial support, without any programme, without any plan ಒಂದು programme announce ಮಾಡಿ ಬಿಡುವುದು. ಇಂಥ ಪ್ರೋಗ್ರಾಂಗಳಿಂದ ಏನೇನು

ಅನಾಹುತಗಳಾಗಿವೆ ಎಂದರೆ, 2006-07 ರಲ್ಲಿ ನಾವು ಕರ್ನಾಟಕದಲ್ಲಿ 700-800 ಸೇತುವೆಗಳನ್ನು ಕಟ್ಟುತ್ತೇವೆಂದು ಹೇಳಿಬಿಟ್ಟರು. ಅದಕ್ಕೆ ಹಣ ಎಷ್ಟು? 1200 ಕೋಟಿ. ಶಂಕುಸ್ಥಾಪನೆ ಮಾಡಿದರು. ನಮ್ಮಲ್ಲಿ PWD Minister ಎಲ್ಲಾ ಬಂದು ಶಂಕುಸ್ಥಾಪನೆ ಮಾಡಿ ಊಟ ಮಾಡಿ ಅಲ್ಲಿ ಎಲ್ಲಾ ಶಾಮಿಯಾನ ಹಾಕಿ ಎಲ್ಲಾ ಆಗಿ ಹೋಯಿತು. ದೇವರ ದಯೆಯಿಂದ ಸೇತುವೆ ಆಗಲಿಲ್ಲ. 5-6 ಕೋಟಿ ರೂಪಾಯಿ ಸೇತುವೆ ಆಗಲಿಲ್ಲ. ನಾನು ಮೊನ್ನೆ ಸಮಿತಿಯಲ್ಲಿ ಪ್ರಧಾನ ಕಾರ್ಯದರ್ಶಿಗಳನ್ನು ಕೇಳಿದೆ. ಯಾವ ಪರಿಸ್ಥಿತಿ ಇದೆ ಎಂದರೆ, ಹಣ ಇಲ್ಲದೆ ಇವರು ಅದರ ಪ್ಲಾನ್ ಮಾಡಿದ್ದಾರೆ. 1200 ಕೋಟಿ ರೂಪಾಯಿಯ ಒಂದು ಪ್ರೋಗ್ರಾಂ ಕೊಟ್ಟರು. 300-500 ಸೇತುವೆಯನ್ನು ಉದ್ಘಾಟನೆ ಮಾಡಿದರು. There is no fund. ಅಲ್ಲಿ ಫಂಡ್ ಇಲ್ಲ. ನಾನು ಕೇಳಿದರೆ ಇದು ಚೆಂಗಾರ ಸೇತುವೆ ಆಗುವುದಿಲ್ಲ, there is no fund. ಮಹಿಷಿ ಸೇತುವೆ, PWD Minister, Deputy Chief Minister ಬಂದಿದ್ದರು, ಉದ್ಘಾಟನೆ ಮಾಡಿದ್ದರು. ಶಂಕುಸ್ಥಾಪನೆ ಮಾಡಿರುವ ಕಲ್ಲು ಅಲ್ಲಿಯೇ ಇದೆ, ಆರು ವರ್ಷವಾಯಿತು. ಫಂಡ್ಸ್ ಇಲ್ಲದಿದ್ದ ಮೇಲೆ why you are preparing for the programme? ಹಣ ಇಲ್ಲದಿದ್ದರೆ ಏಕೆ ಅಂಥ ಪ್ರೋಗ್ರಾಂಗಳನ್ನು ಹಾಕಿಕೊಳ್ಳುತ್ತೀರಿ? ಹಣ ಇಲ್ಲದಿದ್ದ ಮೇಲೆ we should not go for it. ನಮ್ಮ ಕರ್ನಾಟಕ ರಾಜ್ಯದಲ್ಲಿ ನಮ್ಮ ಹತ್ತಿರ ಈಗ ಎಷ್ಟು ಹಣ ಇದೆ? ವರ್ಷದಲ್ಲಿ 8 ಸಾವಿರ ಕೋಟಿ ರೂಪಾಯಿಗಳ ಸಾಲ ತೆಗೆಯುತ್ತಿದ್ದೇವೆ. ತಮಗೆ ಆಶ್ಚರ್ಯವಾಗಬಹುದು, I have taken a document. ಒಂದು ಅವಧಿಯಲ್ಲಿ 8 ಸಾವಿರ ಕೋಟಿ ಸಾಲ ಮಾಡಿ 8 ಸಾವಿರ ಕೋಟಿ ರಿಸರ್ವ್ ಬ್ಯಾಂಕ್‌ಗೆ ಹಣ ಜಮೆ ಮಾಡಿದ್ದೇವೆ. ನಮ್ಮ ಹತ್ತಿರ ಹಣವಿದೆ, ಖರ್ಚು ಮಾಡುವುದಕ್ಕೆ ಆಗಿಲ್ಲ. ನಾನು ಅದರ ಪ್ರಶ್ನೆ ಕೇಳಿದ್ದೆ. ಅದಕ್ಕೆ ಉತ್ತರ ಬಂದಿಲ್ಲ. ಕರ್ನಾಟಕ ಸರ್ಕಾರ ಆರ್‌ಬಿಐಗೆ ಪ್ರತಿ ದಿನ ಜಮೆ ಮಾಡಿರುವ ಹಣದ ಮಾಹಿತಿ ಕೊಡಿ ಎಂದು ಕೇಳಿದ್ದೆ. 8 ಸಾವಿರ ಕೋಟಿ ರೂಪಾಯಿ ಹಣ ಸಾಲ ತಂದು ಹೆಚ್ಚು ಕಡಿಮೆ ನಾವು 8 ಸಾವಿರ ಕೋಟಿ ಬಡ್ಡಿ ಕಟ್ಟಿದ್ದೇವೆ, ಆದರೆ, ನಾವು ಮಾಡಿರುವುದು ನಮ್ಮ ಹತ್ತಿರ ಹಣವಿದೆ, ಬಡ್ಡಿ ದುಡ್ಡನ್ನು ಕೊಡಬೇಕಾದ ಅಗತ್ಯವಿರಲಿಲ್ಲ.

ರಿಸರ್ವ್ ಬ್ಯಾಂಕ್‌ಗೆ ಆ ಹಣವನ್ನು ಕಟ್ಟಿದ್ದೇವೆ. I have taken the documents. ನಿಜವಾಗಿಯೂ ಕೂಡ ನನಗೆ ಇದು ಅರ್ಥವಾಗುತ್ತಿಲ್ಲ. ಇವತ್ತಿನ ದಿವಸ ಎಲ್ಲೋ ಒಂದು ಕಡೆ ನಮ್ಮ ಅಧಿಕಾರಿಗಳೂ ಕೂಡ ಸರಿಯಾದ ರೀತಿಯಲ್ಲಿ ಮಾಹಿತಿಗಳನ್ನು ಕೊಡತಕ್ಕಂಥದ್ದರಲ್ಲಿ ವಿಫಲರಾಗಿದ್ದಾರೆ. ಅದನ್ನು ನಾವುಗಳು

ಅಧ್ಯಯನ ಮಾಡಿ ಕಲಿತುಕೊಳ್ಳಬೇಕು ಅಥವಾ ಅವರನ್ನು ಸರಿಪಡಿಸತಕ್ಕಂಥ ಪ್ರಯತ್ನ ಮಾಡಬೇಕು. ಇವೆರಡೂ ಆಗದೇ ಇದ್ದರೆ ಈ ಕತೆ ಆಗುತ್ತದೆ. ಒಂದು ದೊಡ್ಡ ಸಮಸ್ಯೆ ಬಗ್ಗೆ ಹೇಳುವುದಾದರೆ, ಮೂರು ದಿನದ ಹಿಂದೆ ನನ್ನ ರೂಮ್‌ಗೆ ಯಡಿಯೂರಿನಿಂದ ಒಬ್ಬ ವ್ಯಕ್ತಿ ಬಂದಿದ್ದಾನೆ. 15 ವರ್ಷಗಳಿಂದ ಇಲ್ಲಿಯವರೆಗೆ ಆತನಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಆತನದು 12 ಗುಂಟೆ ಜಮೀನು ಇತ್ತು. ಅದರಲ್ಲಿ 5 ಗುಂಟೆ ಅಣ್ಣ ತಮ್ಮನಿಗೆ ಹಿಸ್ಸೆ ಆಗಿದೆ. ಆ 5 ಗುಂಟೆ ಜಮೀನಿನ ಪರಿಹಾರಕ್ಕೆ 10 ವರ್ಷಗಳಿಂದ ಓಡಾಡುತ್ತಿದ್ದಾನೆ. ಆತ ಓಡಾಡುತ್ತಿರುವ ದಿವಸಗಳನ್ನು ತೆಗೆದುಕೊಂಡರೆ ನಾನು ಮೂರನೇ ಅಥವಾ ನಾಲ್ಕನೇ ಶಾಸಕ ಇರಬಹುದು. ನಮ್ಮ ಇಂಜಿನಿಯರ್‌ಗಳು ಪ್ರಾಜೆಕ್ಟ್ ಮಾಡುವಾಗ ಪರಿಹಾರದ ಪೂರ್ಣ ಮಾಹಿತಿಯನ್ನು ಪಡೆದುಕೊಂಡು ಯಾರಿಗೆ ಕೊಡಬೇಕೆಂಬುದರ ಬಗ್ಗೆ ಯೋಚನೆ ಮಾಡುವುದು ಬೇಡವೇ? ಅಧಿಕಾರಿ ಮಿತ್ರರಿಗೆ ಕೆಲಸ ಸಿಗುವಾಗ ಏನೂ ತೊಂದರೆ ಇರುವುದಿಲ್ಲ. ಆದರೆ, ಕೆಲಸ ಸಿಕ್ಕಿದ ಮೇಲೆ ಅವರ ರೀತಿಗಳೇ ಬೇರೆ ಆಗುತ್ತವೆ. ಅನಾವಶ್ಯಕವಾಗಿ ಪ್ರತಿಯೊಂದಕ್ಕೂ ಸಹ ಅವರು ಕೊಕ್ಕೆ ಹಾಕತಕ್ಕಂಥದ್ದನ್ನು ಮಾಡುತ್ತಾರೆ. 1985ನೇ ಇಸವಿಯಲ್ಲಿ ಜಯಶೀಲಗೌಡನ ತಾಯಿಗೆ ಕೊಡಬೇಕಾಗಿರುವ 60 ಸಾವಿರ ರೂಪಾಯಿ ಪರಿಹಾರದ ಹಣವನ್ನು ದೇವರದಯೇಯಿಂದ ಈ ದಿನದವರೆಗೂ ಸಹ ಒಂದು ರೂಪಾಯಿ ಪೇಮೆಂಟ್ ಮಾಡಿಲ್ಲ. 60 ಸಾವಿರ ರೂಪಾಯಿಗೆ ಅವತ್ತಿನದಿವಸ ಎರಡು ಎಕರೆ ಅಡಕೆ ತೋಟ ಸಿಗುತ್ತಿತ್ತು. ಆದರೆ, ಇವತ್ತಿನ ದಿವಸ ಮೋಟರ್ ಬೈಕ್ ಸಿಗುವುದಿಲ್ಲ. ಆದ್ದರಿಂದ ನನ್ನ ಅಪೇಕ್ಷೆ ಪ್ರಕಾರ ಅವರು ನಕ್ಸಲೈಟ್ ಆಗಬೇಕು. what is the other alternative for him? 1985ನೇ ಇಸವಿಯಿಂದ ಇವತ್ತಿನವರೆಗೆ ಆತನಿಗೆ ಪೇಮೆಂಟ್ ಮಾಡುವುದಕ್ಕೆ ಅನಾವಶ್ಯಕವಾಗಿ ಆತ ಕೆಪಿಸಿ ಕಛೇರಿಯ ಮೇಲೆ ಕೆಳಗೆ ತಿರುಗಿಸುತ್ತಿದ್ದಾರೆಂದರೆ, what is the alternative for him? ನನ್ನ ಕ್ಷೇತ್ರದಲ್ಲಿರತಕ್ಕಂಥ ಸುಮಾರು 500 ಜನ ನಿರುದ್ಯೋಗಿಗಳಿಗೆ ಕೆಲಸ ಕೊಡುತ್ತೇವೆಂದು submission ನಲ್ಲಿ ಹೇಳಿದರು. ಯಾವುದೇ ಸರ್ಕಾರ ಹೇಳಿರಲಿ. It is a carried liability to the Government. ಇವತ್ತಿನವರೆಗೂ ಸಹ ಕೊಟ್ಟಿಲ್ಲ. ಅವರಿಗೋಸ್ಕರ 5 ಕೋಟಿ ರೂಪಾಯಿ ಘೋಷಣೆ ಮಾಡಿದ್ದರೆ ಒಬ್ಬ ಯುವಕನಿಗೆ 3 ಅಥವಾ 4 ಲಕ್ಷ ರೂಪಾಯಿ ಕೊಟ್ಟಿದ್ದರೆ ಆತ ಬೀಡಾ ಅಂಗಡಿಯನ್ನು ಇಟ್ಟುಕೊಳ್ಳುತ್ತಿದ್ದ. ನಾವು ಯಾವುದೋ ಒಂದು ಉತ್ಸವಕ್ಕೆ, ಸಮಾವೇಶಕ್ಕೆ, ದೇವಸ್ಥಾನಕ್ಕೆ, ಅದಕ್ಕೆ ಇದಕ್ಕೆ ಹಣ ಕೊಡುವುದರ ಬದಲು ಅಲ್ಲಿ ಹಣ

ಕೊಟ್ಟಿದ್ದರೆ 500 ಕುಟುಂಬ ಬದುಕುತ್ತಿತ್ತು. ಹಾಗಾದರೆ ಇವೆಲ್ಲ ಯೋಚನೆಗೆ ಬರುವುದಿಲ್ಲವೆ? whether we have not brought it to the notice of the Government? we have brought. ಸರ್ಕಾರದ ಗಮನಕ್ಕೆ ನಾವು ಇದನ್ನು ತಂದಿದ್ದೇವೆ. ಹಾಗಾದರೆ, ಕೆಪಿಸಿ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? They have to do it. ಆ ವ್ಯಕ್ತಿ ನನ್ನ ರೂಮಿಗೆ ಮೂರು ದಿವಸದಿಂದ ಬರುತ್ತಿದ್ದಾನೆ. ನಾನು ಸುಮಾರು 50 ಸಾರಿ ಕೆಪಿಸಿ ಕಛೇರಿಗೆ ಹೋಗಿ ಕೇಳಿರಬಹುದು. ಇನ್ನು ಮುಂದೆ ಅಲ್ಲಿಗೆ ಕಾಲಿಡಬಾರದೆಂದು ಯೋಚನೆ ಮಾಡಿದ್ದೇನೆ. ಆತನಿಗೆ ನೀವು ಏನು ಉತ್ತರ ಹೇಳುತ್ತೀರಿ? 1952ನೇ ಇಸವಿಯಲ್ಲಿ ಮಾನ್ಯ ಕಡಿದಾಳ್ ಮಂಜಪ್ಪನವರು ಉದ್ಘಾಟನೆ ಮಾಡಿ ಕಟ್ಟಿರುವಂಥ ತುಂಗಾ ಅಣೆಕಟ್ಟಿನಲ್ಲಿ ಮುಳುಗಿರುವಂಥ ಜಮೀನಿಗೆ ಇವತ್ತಿನವರೆಗೆ ಪರಿಹಾರ ಸಿಕ್ಕಿಲ್ಲ. ಈಗಾಗಲೇ ಅವರಿಗೆಲ್ಲ ಮೊಮ್ಮಕ್ಕಳು ಬಂದಿದ್ದಾರೆ. ಖಂಡಿತವಾಗಿ ಜನರು ಆಡಳಿತಗಾರರ ಮೇಲೆ, ರಾಜಕಾರಣಿಗಳ ಮೇಲೆ, ಅಧಿಕಾರಿಗಳ ಮೇಲೆ ಏಕೆ ಸಿಟಾಗುತ್ತಾರೆಂದರೆ this is the foundation for it. We are incapable of discharging our duties. We have to accept it. 1952ನೇ ಇಸವಿಯಿಂದ 2012ರವರೆಗೆ ಆ ಕುಟುಂಬಕ್ಕೆ ಪರಿಹಾರ ಸಿಗುವುದಿಲ್ಲವೆಂದರೆ, what is the other alternative for him? We have to insist for the naxalities. ಇದಕ್ಕೆ ಏನೆಂದು ಹೇಳುತ್ತೀರಿ? ನನಗೆ ಇದಕ್ಕೆ ಉತ್ತರ ಬೇಕು. ಸರ್ಕಾರ ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ? ಈ ವಿಷಯವನ್ನು ಮಾತನಾಡುವುದಕ್ಕೆ ನನಗೆ ಬಹಳ ನೋವಾಗುತ್ತದೆ. ಮತ್ತೆ ಮುಂದಿನ ಚುನಾವಣೆಗೆ ಹೋಗಬಾರದೆಂದು ಅನಿಸುತ್ತದೆ. ಏಕೆಂದರೆ, ಇಂಥ ಸರ್ಕಾರಗಳು ಮತ್ತು ಇಂಥ ಆಡಳಿತ ಇದ್ದಾಗ ಏನು ಮಾಡಬೇಕು? ಇದೊಂದೇ ಎಂದು ನಾನು ಹೇಳುತ್ತಿಲ್ಲ. ಹಿಂದೆ ಇದ್ದಂಥ ಎಲ್ಲರೂ ಸಹ failture ಆಗಿದ್ದಾರೆ. ಅಧಿಕಾರಿಗಳಿಂದ ನಾವು ಕೆಲಸ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದರೆ ನಾವು ಇಲ್ಲಿ ಏಕೆ ಇರಬೇಕು? ಇದು ನನಗೆ ಅನಿಸಿದ ವಿಚಾರವಾಗಿದೆ. ನಾವು ಒಂದು ಸ್ಯಾಂಪಲ್ ಅನ್ನು ಮಾತ್ರ ಇಲ್ಲಿ ಹೇಳಿದ್ದೇನಷ್ಟೆ. ಯಡಿಯೂರಿನಲ್ಲಿ ಒಂದು ಆಸ್ಪತ್ರೆಗೆ 10 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಆದರೆ, ಇವತ್ತಿನವರೆಗೂ ಸಹ ಸದರಿ ಕಟ್ಟಡ ಕಂಪ್ಲೀಟ್ ಆಗಿಲ್ಲ. ಅಲ್ಲಿ ಇಸ್ಪೀಟ್ ಆಟ ಆಡುತ್ತಿದ್ದಾರೆ. ಮತ್ತೆ 10-15 ಮರ ಗಿಡಗಳು ಅಲ್ಲಿ ಬೆಳೆದಿವೆ. ಇವತ್ತಿನವರೆಗೂ ಸಹ ಅದನ್ನು ಮುಗಿಸುವುದಕ್ಕೆ ಆಗಿಲ್ಲ. ಇದರ ಬಗ್ಗೆ ನಾವು ಎಷ್ಟು ಸಾರಿ ಪ್ರಶ್ನೆ ಕೇಳಬಹುದು? ನಿಮ್ಮ ಸರ್ಕಾರ ಬರುವುದಕ್ಕಿಂತ

ಮುಂಚೆಯಿಂದ ಕೂಡ ಇದು ಇದೆ. ಎಲ್ಲ ವರ್ಷದ ಬಜೆಟ್ ಪುಸ್ತಕದ ಪ್ರತಿಗಳು ಮತ್ತು ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಗಳನ್ನು ನಾನು ಇಲ್ಲಿ ಇಟ್ಟುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಒಂದು ವಿಷಯ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, 15 ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅಂದರೆ, ಪ್ರತಿ ವರ್ಷ 3 ಲಕ್ಷ ಮನೆಗಳನ್ನು ಕೊಡುತ್ತಾ ಹೋಗುತ್ತೇವೆಂದು ಹೇಳಿದ್ದೀರಿ. ಈಗಾಗಲೇ ನಿಮ್ಮ ಸರ್ಕಾರ ಬಂದು ನಾಲ್ಕು ವರ್ಷ ಆಗಿದೆ. ಆದ್ದರಿಂದ, ಒಟ್ಟು 15 ಲಕ್ಷ ಮನೆಗಳಲ್ಲಿ ಇಲ್ಲಿಯವರೆಗೆ ಎಷ್ಟು ಲಕ್ಷ ಮನೆಗಳನ್ನು ಕೊಡುವುದಕ್ಕೆ ಆಗಿದೆ? ನನಗೆ ಒಂದು ವಿಷಯ ಅರ್ಥವಾಗುತ್ತಿಲ್ಲ. ಅದೇನೆಂದರೆ, ಎಲ್ಲದಕ್ಕೂ ಅಧಿಕಾರಿಗಳನ್ನು ಏಕೆ ಕೇಳಬೇಕು? ಅವರಿಂದ ನಿಮಗೇನು ತೊಂದರೆ? ಮಾನ್ಯ ಸುರೇಶ್ ಕುಮಾರ್‌ರವರೆ, ತಾವು ಕಾನೂನು ಇಲಾಖೆಯ ಸಚಿವರಾಗಿದ್ದೀರಿ. ತಮ್ಮಲ್ಲಿ ಕೇಳುವುದೇನೆಂದರೆ, 4 ಸಾವಿರ ಮನೆಗಳು ಬಂದಿವೆ. ಆದರೆ, 200 ಮನೆಗಳಿಗೆ ನಾವು ಹಕ್ಕು ಪತ್ರ ಕೊಡುವುದಕ್ಕೆ ಆಗಿಲ್ಲ. 200 ಮನೆಗಳನ್ನು ಕಟ್ಟಿಸುವುದಕ್ಕೆ ನಮಗೆ ಆಗಿಲ್ಲ. ಹಾಗಾದರೆ, ನಾವು ಇಲ್ಲಿ ಏತಕ್ಕೆ ಇರಬೇಕು? ಅಲ್ಲಿ ನಾನು ಶಾಸಕ ಎಂದು ಹೇಳುತ್ತೇವೆ. ಆದರೆ ನಾನು ಶಾಸಕನಾಗಿ ಏತಕ್ಕಾಗಿ ಇರಬೇಕು? ಹಕ್ಕು ಪತ್ರ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ಹಕ್ಕು ಪತ್ರವನ್ನು ಕೊಡುವುದಕ್ಕೆ ಇರುವ ಸಮಸ್ಯೆಯನ್ನು ಸರಿಪಡಿಸಿ. ಅದನ್ನು ಏತಕ್ಕೆ ಸರಿಪಡಿಸುವುದಕ್ಕೆ ಆಗುವುದಿಲ್ಲ?

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಮುಂದಿನ ಬೆಂಚ್‌ನಲ್ಲಿ ಬಂದು ಕುಳಿತುಕೊಂಡರೆ ಒಳ್ಳೆಯದು. ಮಾನ್ಯ ಉಮೇಶ್ ಕತ್ತಿಯವರೆ, ತಾವು ಇಲ್ಲಿ ಬಂದು ಎದುರಿಗೆ ಕುಳಿತುಕೊಂಡರೆ ಒಳ್ಳೆಯದು.

ಶ್ರೀ ಕಿಮ್ಮನೆ ರತ್ನಾಕರ್:- ಮಾನ್ಯ ಉಪಾಧ್ಯಕ್ಷರೆ, ನನಗೆ ಬಹಳ ನೋವಾಗುವಂಥದ್ದು ಏನೆಂದರೆ, ಗ್ರಾಮ ಪಂಚಾಯಿತಿಯ ದೃಢೀಕರಣ ಪತ್ರ ಒಂದೇ ಸಾಕು ಎಂದು ಇತ್ತು. ಆದ್ದರಿಂದ, ಇದು ಏನಾಗಿದೆ? ಇದರ ಬಗ್ಗೆ Government Notification ಅನ್ನು ಹೊರ ಹಾಕಿ ಇಷ್ಟು ವರ್ಷಗಳವರೆಗೆ ಬೇರೆ ಸರ್ಕಾರಗಳು ಕೊಟ್ಟಿದ್ದವು. ಗ್ರಾಮಪಂಚಾಯಿತಿ ಕೊಡತಕ್ಕಂಥ ದೃಢೀಕರಣ ಪತ್ರದ ಆಧಾರದ ಮೇಲೆ ಅವರಿಗೆ ಹಕ್ಕು ಪತ್ರ ಕೊಟ್ಟು ಮನೆ ಮಂಜೂರು ಮಾಡಿ. ಇದಕ್ಕೆ ಮತ್ತೆ ಹಕ್ಕು ಪತ್ರ ಬೇಕಾಗಿಲ್ಲ. ಭರತ ಭೂಮಿ, ಮಹಾತ್ಮ ಗಾಂಧಿ , ವಿಧಾನ ಸೌಧ, ಪಾರ್ಲಿಮೆಂಟ್, ನಮ್ಮ Constitution ಇದ್ಯಾವುದೂ ನಮಗೆ ಅನ್ನ ಹಾಕುವುದಿಲ್ಲ. ನಮಗೆ ಬಟ್ಟೆ, ಅನ್ನ

ಮನೆ ಇದ್ದರೆ ಮತ್ತು ವಾಸ ಮಾಡುವುದಕ್ಕೆ 20' x 20' ಸೈಟ್ ಇದ್ದರೆ ಇವೆಲ್ಲವು ಬೇಕು. ಇಲ್ಲದಿದ್ದರೆ ಬದುಕುವುದಕ್ಕೆ ಈ ದೇಶ ಆದರೇನು ಅಥವಾ ಇನ್ನೊಂದು ದೇಶವಾದರೇನು? ಇವತ್ತಿನದಿವಸ ನಕ್ಸಲೈಟ್‌ನವರು ಕೇಳುತ್ತಿರುವುದು that is also one of the grounds. ಮನೆ ಕೊಡುವುದಕ್ಕೆ ಒಂದು ಸೂಕ್ತ ಆದೇಶ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ಇದರ ಬಗ್ಗೆ ನಾವು ಎಷ್ಟು ಸಾರಿ ಪ್ರತಿಭಟನೆ ಮಾಡಬೇಕು? ಹಾಗೆಯೇ ಎಷ್ಟು ಸಾರಿ ಈ ವಿಷಯವನ್ನು ಸದನದಲ್ಲಿ ಕೇಳಬೇಕು? ಇದರ ಬಗ್ಗೆ ಜಿಲ್ಲಾ ಪಂಚಾಯತ್‌ನವರು ಮತ್ತು ತಾಲ್ಲೂಕು ಪಂಚಾಯತ್‌ನವರು ಹಾಗೂ ಗ್ರಾಮ ಪಂಚಾಯತ್‌ನವರು ಒಂದು ನಿರ್ಣಯ ಮಾಡಿದ್ದಾರೆ ಮತ್ತೆ ಸದನದಲ್ಲಿ ಚರ್ಚೆ ನಡೆಯುತ್ತದೆ. Till today he can't give a Land Grant Certificate. ಹಾಗಾದರೆ ನಮ್ಮ ಕರ್ತವ್ಯ ಏನು? 4 ಸಾವಿರ ಮನೆಗಳನ್ನು ಕೇವಲ 200 ಮನೆಗಳಿಗೆ ಮಂಜೂರು ಮಾಡುವುದಕ್ಕೆ ಆಗುತ್ತೆ ಮತ್ತೆ ಅವರಿಗೆ ಮಾತ್ರ ಮನೆ ಕಟ್ಟುವುದಕ್ಕೆ ಅವಕಾಶ ಸಿಗುತ್ತದೆಂದರೆ ಇದು ಏತಕ್ಕೆ ಬೇಕು? We have utterly failed. ನಾನು ಪ್ರಾಮಾಣಿಕವಾಗಿ ಹೇಳುವುದೇನೆಂದರೆ, ಉತ್ಸವಗಳು, ಸಂಸ್ಕೃತಿ, ಕಲೆ ಇವೆಲ್ಲವೂ ಸಹ ಇರಲಿ, ಇದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಆದರೆ, ನಮಗೆ ವಾಸದ ಮನೆ ಆದಮೇಲೆ ಇವೆಲ್ಲವೂ ಬೇಕು. ಅಂದರೆ, ಕಟ್ಟಕಡೆಯ ಬಡವನಿಗೆ ಒಂದು ವಾಸದ ಮನೆ, ಅನ್ನ, ಬಟ್ಟೆ ಸಿಕ್ಕಿದ ಮೇಲೆ ಇವೆಲ್ಲವನ್ನೂ ಕೂಡ ನಾವು ಮಾಡೋಣ. ಆದ್ದರಿಂದ, ಇದಕ್ಕೆ ಆಗುವಂಥ ವೆಚ್ಚವನ್ನು ಕಡಿತಗೊಳಿಸಿ. ಇವತ್ತಿನದಿವಸ ಅವರು ಸೈಟ್ ಕೇಳುವುದಕ್ಕೆ ಹೋದರೆ ಈ ಅರಣ್ಯ ಇಲಾಖೆಯವರದೊಂದು ಸಮಸ್ಯೆ. ಇವರನ್ನು ಏತಕ್ಕೆ ಕೇಳುವುದಕ್ಕೆ ಹೋಗಬೇಕು? ನಮ್ಮಲ್ಲಿ ರೆವಿನ್ಯೂ ಸೈಟ್ ಇಲ್ಲ. ಖಾಸಗಿಯವರಿಗೆ ಬಿಡುತ್ತಿಲ್ಲ. ಆದ್ದರಿಂದ, ಅವರೇನು ನೀರಿನ ಮೇಲೆ ಮನೆ ಕಟ್ಟಿಕೊಳ್ಳಬೇಕೆ? ಇವತ್ತಿನದಿವಸ ಬಡವ ಎಲ್ಲಿ ಮನೆ ಕಟ್ಟಬೇಕು? ಆತ ಮನೆ ಕಟ್ಟಿಕೊಂಡು ಊರಿನಲ್ಲಿರಬೇಕೆ? ಹಾಗಾದರೆ, ಇದು ಹೇಗೆ ಮಾಡುವುದು? ನನಗೆ ನಿಜವಾಗಿಯೂ ಅರ್ಥವಾಗದಂಥ ಸಮಸ್ಯೆಗಳಾಗಿವೆ. ಆಡಳಿತದಲ್ಲಿರುವಾಗ ಇವೆಲ್ಲವನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲವೆ? ಒಂದು ವೇಳೆ ಸರಿ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಖಂಡಿತ ನಾವು ಅದರಿಂದ ಹೊರಕ್ಕೆ ಬರಬೇಕು. ನಾನು ಹೇಳುವುದೇನೆಂದರೆ, ನಮ್ಮಲ್ಲಿರುವ ಕಡು ಬಡವರಿಗೆ ನಾವು ಸರಿಪಡಿಸುವುದಕ್ಕೆ ಆಗುವುದಿಲ್ಲವೆಂದರೆ ಅಂದರೆ, ಆತನಿಗೆ ಕನಿಷ್ಠ ಮಟ್ಟದ ವ್ಯವಸ್ಥೆಯನ್ನು ಮಾಡುವುದಕ್ಕೆ ನಮಗೆ ಆಗಿಲ್ಲವೆಂದರೆ ನಾವೆಂಥ

ಜನಪ್ರತಿನಿಧಿಗಳು? ಈ ಸಂದರ್ಭದಲ್ಲಿ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಈ ರಾಜ್ಯದ 6 ಕೋಟಿ ಜನರು ನಮ್ಮ 300 ಜನರ ಮೇಲೆ ಅವರ ಭಾರವನ್ನು ಕೊಟ್ಟಿದ್ದಾರೆ. ಆ 6 ಕೋಟಿ ಜನ ಬಂದು ವಿಧಾನ ಸೌಧದಲ್ಲಿ ಆಡಳಿತ ಮಾಡುವುದಕ್ಕೆ ಆಗುವುದಿಲ್ಲ ಎಂದು ನಮ್ಮ 300 ಜನರನ್ನು ಇಲ್ಲಿಗೆ ಕಳುಹಿಸಿದ್ದಾರೆ. ಹಾಗಾದರೆ ಇವತ್ತಿನದಿವಸ ನಾವೇನು ಮಾಡಿದ್ದೇವೆ? ಆ 6 ಕೋಟಿ ಜನರ ಎಲ್ಲ ಆಶಯಗಳನ್ನು ಕನಿಷ್ಠ ಮಟ್ಟದ ಪ್ರಯತ್ನ ಮಾಡುವುದಕ್ಕೆ ಆಗುತ್ತದೆಯೇ? ನಮಗೆ ಆಡಳಿತ ಮಾಡುವುದಕ್ಕೆ ಆಗದೆ ಇದ್ದರೆ, we have to get out of the House. ಇವತ್ತಿನದಿವಸ ಭ್ರಷ್ಟಾಚಾರ ನಡೆಯುತ್ತಿದೆ ಎಂದರೆ ಇದರ ಬಗ್ಗೆ ನಾನು ಹೇಳುವುದೇನೆಂದರೆ, the source of corruption is from Vidhana Soudha itself, not from the bottom. It has started from Vidhana Soudha, we have to rectify here itself. If there is any lacunaon the part of a system we have to rectify the system. ಸಿಸ್ಟಮ್‌ನಲ್ಲಿರುವ ನ್ಯೂನತೆಗಳನ್ನು ನಾವು ಸರಿಪಡಿಸಬೇಕು. ಸರಿಪಡಿಸುವುದಕ್ಕೆ ಆಗುವುದಿಲ್ಲವೆಂದರೆ, we should get out of the House, ಆಗುವುದಿಲ್ಲವೆಂದರೆ ಹೇಗೆ? ನಾನು ಒಬ್ಬ ಒಳ್ಳೆಯವನಾಗುವುದರಿಂದ ಬಹಳ ಏನೂ ಆಗುವುದಿಲ್ಲ. ಅಥವಾ ಒಬ್ಬೊಬ್ಬರು ಒಳ್ಳೆಯರಾಗಬೇಕೆಂಬ ಪ್ರಶ್ನೆ ಅಲ್ಲ. We have to change the system. To change the system ಜನ ನಮಗೆ ಅವಕಾಶ ಕೊಟ್ಟಿದ್ದಾರೆ. ಇತಿಹಾಸದ ಬುದ್ಧ, ಮಹಮದ್, ಬಸವಣ್ಣ ಅಥವಾ ಯಾರೇ ಆಗಲಿ, ಆ ಕಾಲದಲ್ಲಿ ಬಂದಿರುವ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಿ ಬದಲಾವಣೆಗಳನ್ನು ತಂದಿದ್ದಾರೆ. ಈಗಲೂ ಕೂಡ ಅದನ್ನೇ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಹಿಂದೆ ಮಾಡಿದ್ದು ಎಲ್ಲವೂ ಸರಿ ಇದೆ ಎಂದು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇವತ್ತು ಈ ಭೂತಕಾಲಕ ತಪ್ಪುಗಳನ್ನು ಕೈಬಿಟ್ಟು ವರ್ತಮಾನಕ್ಕೆ ಬೇಕಾಗಿರತಕ್ಕಂಥ ಮತ್ತು ಭವಿಷ್ಯತ್ತಿಗೆ ಅಗತ್ಯ ಇರತಕ್ಕಂಥ ತಿದ್ದುಪಡಿಗಳನ್ನು ಮತ್ತು ಕಾನೂನುಗಳನ್ನು ಸರಿಪಡಿಸುತ್ತಿಲ್ಲ, ಅದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ನಿಯಮ 60ರ ಮೇಲೆ ಇಲ್ಲಿ ಚರ್ಚೆ ನಡೆಯುತ್ತದೆ, ಏತಕ್ಕೆ ನಡೆಯುತ್ತದೆಂದು ನನಗೆ ಇನ್ನೂ ಗೊತ್ತಾಗಿಲ್ಲ. ಅದನ್ನು ಹತ್ತಾರು ಸಲ ಹಿಂದೆ ಮುಂದೆ ಓದಿದೆ. ಏನಿದೆ ಅದರಲ್ಲಿ ಕಬ್ಬಿಣದ ಕಡಲೆ. 1952ನೇ ಇಸವಿಯಿಂದ ಇಲ್ಲಿಯವರೆಗೆ, I am having a document here, ಕೇವಲ 7 ಸಲ ಮಾತ್ರ ನಿಯಮ 60ರ ಮೇಲೆ ಚರ್ಚೆಗೆ ಕೊಟ್ಟಿದ್ದೀರಿ. 60ರ ಮೇಲೆ ಚರ್ಚೆಗೆ ಕೊಟ್ಟರೆ ಸರ್ಕಾರ ಬಿದ್ದು

ಹೋಗುತ್ತದೆಯೇ? ಸರ್ಕಾರ ಬಿದ್ದು ಹೋಗುವುದಿಲ್ಲ. ನಿಯಮ 60ರ ಮೇಲೆ ಚರ್ಚೆಗೆ ಕೊಟ್ಟಾಗ ಯಾವ ಸರ್ಕಾರವೂ ಬಿದ್ದು ಹೋದ ಉದಾಹರಣೆ ಇಲ್ಲ. 1962 ರಲ್ಲಿ ಮಾನ್ಯ ಸಿದ್ದವೀರಪ್ಪನವರು ಪ್ರಾರಂಭ ಮಾಡಿದಂಥದ್ದರಲ್ಲಿ ಅದು ಅಡ್ಮಿಟ್ ಆಗಿದೆ. 1994 ರಲ್ಲಿ ಎರಡು ಮಾನ್ಯ ಖರ್ಗೆಯವರು ಕೇಳಿದ್ದಾರೆ. ಮಾನ್ಯ ಎಸ್. ಬಂಗಾರಪ್ಪನವರು ಕೇಳಿದ್ದಾರೆ. 1971 ರಲ್ಲಿ ಎಕ್ಸ್‌ಪೊ-70 ಗಲಾಟೆಯಾದಾಗ ಕೇಳಿದ್ದಾರೆ. ಒಟ್ಟು 7 ಸಲ ಮಾತ್ರ ಅವಕಾಶ ಕೊಟ್ಟಿದ್ದಾರೆ. ಚರ್ಚೆಯ ಪೂರ್ಣ ವಿಚಾರ ನನ್ನ ಹತ್ತಿರ ಇದೆ. ಕೊಟ್ಟವರು ಯಾರು ಎನ್ನುವುದು ನನ್ನ ಹತ್ತಿರ ಇದೆ. ಏನು ಘಟನೆ ಆಗಿದೆ, ಈ ನಾಡಿನಲ್ಲಿ ತಿದ್ದುಪಡಿಗೆ ಅವಕಾಶ ಇಲ್ಲವೆ? ನನಗೆ ಅರ್ಥವಾಗುತ್ತಿಲ್ಲ. what is the problem? It is a problem because we have not changed our mind. ನಾವು ನಮ್ಮ ಬದಲಾವಣೆಗಳನ್ನು ಮಾಡಬೇಕಾದಂಥ ಅಗತ್ಯ ಇದೆ ನಾವು ಮಾಡುತ್ತಿಲ್ಲ. ಏನು ಅಗತ್ಯ ಇತ್ತು. ಅದನ್ನು ನಾವು ಮಾಡುತ್ತಿಲ್ಲ. ನಾನು ತಮ್ಮಲ್ಲಿ ಕೇಳಿಕೊಳ್ಳುವಂಥದ್ದು ಇಷ್ಟೆ.

ಲೋಕೋಪಯೋಗಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ ಬಹಳ ಪ್ರಮುಖವಾಗಿ ಇರತಕ್ಕಂಥದ್ದು. ಲೋಕೋಪಯೋಗಿ ಇಲಾಖೆಯಲ್ಲಿ ನಾನು ಎಲ್ಲಾ ಇಲಾಖಾವಾರು ರಸ್ತೆಗಳನ್ನು ನೋಡಿದೆ. ನನಗೆ ಅನಿಸತಕ್ಕಂಥದ್ದು ನೀವು 5 ವರ್ಷದ ಒಂದು ನಿರ್ದಿಷ್ಟವಾದಂಥ ಪ್ಲಾನ್‌ನ್ನು ಇಟ್ಟುಕೊಳ್ಳಬೇಕಾಗಿತ್ತು. ಒಟ್ಟು ಕರ್ನಾಟಕದಲ್ಲಿ ಎಷ್ಟು ಕಿಲೋಮೀಟರ್ ರಸ್ತೆ ಇದೆ? We are having it ಇಲ್ಲಿ. ಎನ್.ಹೆಚ್. ರಸ್ತೆ ಎಷ್ಟು ಇದೆ, ಅದು ನಮ್ಮ ಹತ್ತಿರ ಇದೆ. State Highway ಎಷ್ಟು ಇದೆ, ಇಡೀ ರಾಜ್ಯದಲ್ಲಿ 5 ಅಥವಾ 10 ವರ್ಷದಲ್ಲಿ ಎಲ್ಲಾ ರಸ್ತೆಗಳು ಆಗಬೇಕಾದರೆ ನಮಗೆ ಎಷ್ಟು ಹಣ ಬೇಕಾಗುತ್ತದೆ ಎನ್ನುವುದನ್ನು ಮಾಡಬೇಕು. ಇಡೀ 224 ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕಾದಂಥ ಸಂದರ್ಭದಲ್ಲಿ ಎಲ್ಲವನ್ನೂ ಗಣನೆಗೆ ತೆಗೆದುಕೊಂಡು ಮಾಡಬೇಕು. ಮಿನಿಸ್ಟರ್ ಆದವರಲ್ಲಿ ಪವರ್ ಇದ್ದವರಲ್ಲಿ 50 ಕೋಟಿ ರೂ.ಗಳವರೆಗೆ ನೀವು ಜಾಸ್ತಿ ಮಾಡಿ. But all round development should be there ಎಂದಾಗ ನೀವು ಏನು ಮಾಡಬೇಕು ? 224 ಕ್ಷೇತ್ರದಲ್ಲಿ ಎಷ್ಟು ಕಿ.ಮೀ. ರಸ್ತೆ ಇದೆ, ಎಲ್ಲವನ್ನೂ equal ಆಗಿ development ಮಾಡುವುದಕ್ಕೆ ನಾವು ಎಷ್ಟು ಹಣ ಕೊಡಬೇಕು ಅದಕ್ಕೆ there should be a plan. We are not having a plan. ನನ್ನ ಕ್ಷೇತ್ರಕ್ಕೆ 3500 ಕಿ.ಮೀ. ರಸ್ತೆ ಬರುತ್ತದೆ. ಶಿಕಾರಿಪುರಕ್ಕೆ ಕೊಟ್ಟಷ್ಟು ನನ್ನ ಕ್ಷೇತ್ರಕ್ಕೆ ಕೊಟ್ಟರೆ ಏನು ಉಪಯೋಗ ಇದೆ? ಅದ ಆಗುವುದಿಲ್ಲ. ನಾನು ಏನು ತಪ್ಪು ಮಾಡಿದ್ದೇನೆಂದು ಜನರ ಹತ್ತಿರ ನಾನು

ಬಯ್ಯಿಸಿಕೊಳ್ಳಬೇಕು? Your plan is defective. It is not the failure of an MLA. It is the failure on the part of the Government. ಶಿಕಾರಿಪುರದಲ್ಲಿ 600-700 ಕಿ.ಮೀ. ಜಿಲ್ಲಾ ಪಂಚಾಯಿತಿ ರಸ್ತೆ ಇದೆ. ಆದರೆ ನನ್ನ ಕ್ಷೇತ್ರದಲ್ಲಿ 2500 ಕಿ.ಮೀ. ರಸ್ತೆ ಇದೆ. ಅವರಿಗೂ 10 ಕಿ.ಮೀ. ರಸ್ತೆ ನನಗೂ 10 ಕಿ.ಮೀ. ರಸ್ತೆ ಕೊಡುವುದಾದರೆ ನಾನು resign ಮಾಡಿ ಹೊರಗೆ ಹೋಗುವುದು ಒಳ್ಳೆಯದು. You should plan it. The Government should tackle the problem in that way. ನೀವು ರಸ್ತೆ ರಿಪೇರಿ ಮಾಡುವಾಗ ರಸ್ತೆಗೆ ಹಣ ಕೊಡುವಾಗ ಎಷ್ಟು ಕಿ.ಮೀ. ರಸ್ತೆ ಎನ್ನುವುದನ್ನು ಮಾಡಿ. ನೀವು food ಕೊಡುವಾಗ ಕುಟುಂಬದಲ್ಲಿ ಎಷ್ಟು ಜನ ಇದ್ದಾರೆಂದು ನೋಡಿ ಕೊಡಿ. ಸೀಮೆಎಣ್ಣೆ ಮತ್ತು ಆಹಾರ ಧಾನ್ಯ ಕೊಡುವಾಗ ಜನ ಸಂಖ್ಯೆಯನ್ನು ಆಧರಿಸಿ ಕೊಡುತ್ತೀರಿ. ರಸ್ತೆಯನ್ನು ಕೊಡುವಾಗ ಕಿ.ಮೀ.ನ್ನು ನೋಡಬೇಕು. ಕಿ.ಮೀ. ಮತ್ತು ಜನಸಂಖ್ಯೆಯನ್ನು ಒಂದೇ ಮಾಡಿದಾಗ ಏನು ಅರ್ಥವಿದೆ? ನನಗೆ ಅರ್ಥವಾಗುತ್ತಿಲ್ಲ ನಿಮ್ಮ planning strategy ಏನು? Rural Development ನಲ್ಲಿ ಏನಾಗಿದೆ? ನಮ್ಮ ಮಲೆನಾಡಿನ ಎಲ್ಲಾ ಭಾಗ ನಮ್ಮ ಒಂದೊಂದು ಕ್ಷೇತ್ರಕ್ಕೆ 200 ಸೇತುವೆಗಳು ಬೇಕಾಗುತ್ತದೆ. ನಮಗೆ ಕನಿಷ್ಠ ಒಂದು ವರ್ಷಕ್ಕೆ 50 ಸೇತುವೆಗಳನ್ನು ಕಟ್ಟಿದರೂ ಸಾಕಾಗುವುದಿಲ್ಲ. ನಾನು ಲೋಕೋಪಯೋಗಿ ಸಚಿವರ ಹತ್ತಿರ 4 ವರ್ಷದಿಂದ ಪತ್ರ ಕೊಡುತ್ತಿದ್ದೇನೆ. ಹೊಸಗದ್ದೆ ಎನ್ನತಕ್ಕಂಥದ್ದು ಅರಳಸುರಳಿಯಿಂದ 6 ಕಿ.ಮೀ. ದೂರದಲ್ಲಿದೆ. ಅಲ್ಲಿ ಈಡಿಗ ಸಮುದಾಯದವರು ಇರತಕ್ಕಂಥದ್ದು, ಈಡಿಗ ಸಮುದಾಯದ ಒಬ್ಬ ಹೆಣ್ಣುಮಗಳು ಗ್ರಾಮ ಪಂಚಾಯತಿಯ ಅಧ್ಯಕ್ಷರು. ಅವರು ಅರಳಸುರುಳಿ ಗ್ರಾಮ ಪಂಚಾಯಿತಿಗೆ ಹೋಗಬೇಕಾದರೆ 14 ಕಿ.ಮೀ. ನಡೆದುಕೊಂಡು ಬರಬೇಕು. ನಮಗೆ ಇದರಿಂದ ಹೊರಗೆ ಹೋಗುವುದಕ್ಕೆ ಆಗುವುದಿಲ್ಲವೆ ನಾನು ಅವರ ಹತ್ತಿರ 4 ಸಲ ಹೋಗಿ ಕೊಟ್ಟಿದ್ದೇನೆ. That has been changed. ಏತಕ್ಕೆ ಚೇಂಜ್ ಮಾಡಿದಿರಿ ನನಗೆ ಗೊತ್ತಿಲ್ಲ. ನಾನು Principal Secretary ಅವರಿಗೂ ಹೋಗಿ ಕೊಟ್ಟಿದ್ದೇನೆ. 60 ಲಕ್ಷ ರೂ.ಗಳಲ್ಲಿ ಒಂದು ಸೇತುವೆ ಕಟ್ಟಿದರೆ ಸಾಕು 3. ಕಿ.ಮೀ.ನಲ್ಲಿ ಅವರು ಬರಬಹುದು. ಅಲ್ಲಿ ಹಳ್ಳ ದಾಟುವುದಕ್ಕೆ ಆಗುವುದಿಲ್ಲ. ಒಂದು ಮಳೆ ಬಂದರೆ 6 ಅಡಿ ನೀರು ಬರುತ್ತದೆ. ಅವರು 14 ಕಿ.ಮೀ. ದೂರದಿಂದ ಬರಬೇಕು. 60 ವರ್ಷದಿಂದ ಆ ಊರಿನ ಜನರಿಗೆ ಒಂದು ಸೇತುವೆಯನ್ನು ಮಾಡುವುದಕ್ಕಾಗುವುದಿಲ್ಲವೆಂದರೆ ನಾವು ಏಕೆ ಇಲ್ಲಿ ಇರಬೇಕು? Whether it is a failure on my part? Whether

I have not brought it to the knowledge of the Government? I have brought it to the knowledge of the Government. ಅವರ Signature ಆಗಿರುವ ಲೆಟರ್ ನನ್ನ ಹತ್ತಿರ ಇದೆ. But the programme has not been implemented. ಏನು ಉದ್ದೇಶವಿದೆ ನನಗೆ ಗೊತ್ತಿಲ್ಲ ಎಂತಹ ದುರಂತಗಳು ಎಂದರೆ ನನಗೆ ಬಹಳ ನೋವಾಗುತ್ತದೆ. ಮಾನ್ಯ ಬಸವರಾಜ ಬೊಮ್ಮಾಯಿಯವರು ಸದನದಲ್ಲಿ ಇಲ್ಲ; ಅವರನ್ನು ನಾನು appreciate ಮಾಡುತ್ತೇನೆ. ನಮಗೆ UTP ನಲ್ಲಿ ತುಂಬಾ ಹಣ ಬಂದಿದೆ. ಅವರು ಮೊನ್ನೆ ನನಗೆ ಕೇಳಿದರು, ನೀವು ನಮ್ಮನ್ನು ಕರೆಯಲಿಲ್ಲ, ನಮ್ಮನ್ನು ಅಭಿನಂದಿಸಲಿಲ್ಲ ಎಂದರು. ನಾನೆ ಉದ್ಘಾಟನೆ ಮಾಡಲಿಲ್ಲ. I am not interested in that. ಕಾರ್ಯಕರ್ತರು ಹೇಳಿದರೆ ಮಾತ್ರ ಉದ್ಘಾಟನೆಗೆ ಹೋಗುತ್ತೇನೆ. ಇಲ್ಲವೆಂದರೆ ನಾನು ಹೋಗುವುದಿಲ್ಲ. ನನಗೆ ಆಸಕ್ತಿಯೇ ಇಲ್ಲ. ಏಕೆಂದರೆ ಮಾನ್ಯ ಗೋಪಾಲಗೌಡರು ಮತ್ತು ಕಡಿದಾಳರು ಇಡೀ ತೀರ್ಥಹಳ್ಳಿ ವಿಧಾನಸಭೆ ಕ್ಷೇತ್ರವನ್ನು ಮೊದಲು ಪ್ರತಿನಿಧಿಸುತ್ತಿದ್ದರು. ಇಡೀ ಕ್ಷೇತ್ರದಲ್ಲಿ ಹುಡುಕಿದರೂ ಅವರ ಹತ್ತು ಕಲ್ಲುಗಳು ಇಲ್ಲ. ಆದರೆ ಅವರ ಹೆಸರು ಇಡೀ ತೀರ್ಥಹಳ್ಳಿ ವಿಧಾನಸಭೆ ಕ್ಷೇತ್ರದ ಪ್ರತಿಯೊಬ್ಬರ ಹೃದಯದಲ್ಲಿದೆ. ಉದ್ಘಾಟನೆ ಮಾಡಿದರೆ ಮಾತ್ರ ಜನರಿಗೆ ಗೊತ್ತಾಗುವುದಾ? ನನಗೆ ಒಂದೂ ಅರ್ಥವಾಗುತ್ತಿಲ್ಲ. ಕು.ಶೋಭಾ ಕರಂದ್ಲಾಜೆಯವರು ನಮ್ಮ ಕ್ಷೇತ್ರಕ್ಕೆ ಬರುತ್ತಾರೆ, ನಮಗೆ ಹೇಳುವುದೇ ಇಲ್ಲ. ಲೋಕೋಪಯೋಗಿ ಇಲಾಖೆಯ ಒಂದು ಕಾಮಗಾರಿಗೆ ನಾನು 1.50 ಕೋಟಿ ರೂ.ಗಳನ್ನು ಮಂಜೂರು ಮಾಡಿಸಿಕೊಂಡು ಬಂದೆ, ಅವರು ಬಂದು ಉದ್ಘಾಟನೆ ಮಾಡಿದರು, ಅವರಿಗೆ ಖಂಡಿತ ಒಳ್ಳೆಯದು ಆಗಲಿ. ಅವರು ಇನ್ನೂ 10 ಉದ್ಘಾಟನೆ ಮಾಡಲಿ, ಬೇಜಾರು ಇಲ್ಲ. Atleast ಒಬ್ಬರು ಶಾಸಕರು ಇದ್ದಾರೆ, ನಮಗೆ ಒಂದು courtesy ಗೆ ಆದರೂ ತಿಳಿಸಬೇಕು. ಮೊನ್ನೆ ಶಿವಮೊಗ್ಗ ಗಾಜನೂರು ಪಂಚಾಯಿತಿಯಲ್ಲಿ ಉದ್ಘಾಟನೆ ಸಮಾರಂಭ ಮಾಡಿದರು ಎಂ.ಎಲ್.ಸಿ.ಯವರು. She is my very close friend. ಅವರಂಥ ಒಳ್ಳೆಯ ಜನರನ್ನು ನಾನು ನೋಡಿಯೇ ಇಲ್ಲ. She has practised with me. ಅವರನ್ನು ಉದ್ಘಾಟನೆ ಹಾಕಿ ನನ್ನನ್ನು ಅತಿಥಿಯನ್ನಾಗಿ ಹಾಕಿದ್ದರು. ನಾನು actually ಹೊರಟಿದ್ದೆ ನಮ್ಮ workers ನನಗೆ ಹೋಗುವುದಕ್ಕೆ ಬಿಡಲಿಲ್ಲ. ಏಕೆ ಇಂತಹದ್ದೆಲ್ಲಾ ನಡೆಯುತ್ತದೆ. ನಿಮ್ಮ ವ್ಯವಸ್ಥೆಯಲ್ಲಿ ಏಕೆ ಈ ರೀತಿ? I am not interested in any inaugural functions. ನನಗೆ ಅದರೊಳಗೆ ಆಸಕ್ತಿಯೇ ಇಲ್ಲ. ಏಕೆಂದರೆ, ಈ ವ್ಯವಸ್ಥೆಯೊಳಗೆ ನಾವು

ಬದುಕುಳಿಯುವುದಕ್ಕೆ ಸಾಧ್ಯ ಎನ್ನುವ ಭಾವನೆ ಹೊಂದಿಲ್ಲ. ನಾವು ಅದಕ್ಕೆ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ. ವ್ಯವಸ್ಥೆಯನ್ನು ಸರಿ ಮಾಡುವ ಶಕ್ತಿ ನಮಗೂ ಇಲ್ಲ. ಆದ್ದರಿಂದ ಇಂಥದ್ದೆಲ್ಲಾ ಏಕೆ ನಡೆಯಬೇಕು? ಹಾಗಾದರೆ ಅವರಿಗೂ ಇಂತಹ ಅವಘಡಗಳು ಹಿಂದೆ ನಡೆದಿರಬೇಕು ಅಲ್ಲವೆ? we have not played such humiliation to anybody. ಇದನ್ನೆಲ್ಲಾ ಏಕೆ ಮಾಡುತ್ತಾರೆ? ಅನೇಕ ಸಲ ಬರುತ್ತಾರೆ, ನನಗೆ ಫೋನ್ ಮಾಡುವುದಿಲ್ಲ. ಹತ್ತಾರು ಸಲ ಬಂದಿದ್ದಾರೆ. ಒಂದು ಸಲ ಮಾತ್ರ ನಮ್ಮನ್ನು ಕರೆದು ಅಫಿಷಿಯಲ್ ಮೀಟಿಂಗ್ ಮಾಡಿದ್ದಾರೆ. ಆದರೆ ಸಮಸ್ಯೆ ಏನಿದೆ? ನಾನು ಆರಿಸಿ ಬರುವಾಗ 5000 ಮನೆಗಳಿಗೆ ಕರಂಟ್ ಇರಲಿಲ್ಲ. ಇನ್ನೂ 2000 ಮನೆಗಳಿಗೆ ಕರೆಂಟ್ ಇಲ್ಲ. ನಮಗೆ 159 ಟಿ.ಸಿ. ಬೇಕು. ಅದಕ್ಕೆ ಇನ್ನೂ ದುಡ್ಡು ಬಂದಿಲ್ಲ. 2500 ಜನರಿಗೆ ಕರೆಂಟ್ ಇಲ್ಲ. It includes A.E.H. also. ನಾನು ಮಾಹಿತಿಯನ್ನು ಸಂಗ್ರಹಿಸಿ ಕೊಟ್ಟಿದ್ದೇನೆ. ಅವರು ಇಂಧನ ಸಚಿವರು. ಅವರಿಗೆ 2500 ಮನೆಗಳಿಗೆ ಕರೆಂಟ್ ಕೊಡುವುದಕ್ಕಾಗಿಲ್ಲ. ಈ ರಾಜ್ಯಕ್ಕೆ ನಾವು ಬೆಳಕು ಕೊಟ್ಟಿದ್ದೇವೆ. ಶರಾವತಿ ನಮ್ಮಲ್ಲೇ ಹುಟ್ಟುವುದು, ತುಂಗಾ ನದಿ ನಮ್ಮಲ್ಲಿ ಹರಿಯುತ್ತದೆ. ಮುಳುಗಡೆ ಅನುಭವಿಸುತ್ತಿರುವವರು ನಾವು. ನಮ್ಮ ಇಂಜಿನಿಯರ್ಸ್‌ಗಳು ಯಾವ ಟೈಪ್ ಇದ್ದಾರೆಂದರೆ ಮುಳುಗಡೆ ಆದ ಜಮೀನಿಗೆ ಪರಿಹಾರ ಕೊಡುವಾಗ ಉಳಿದಿರುವವರ ಕತೆ ಏನು ಎಂದು ಯೋಚನೆ ಮಾಡಲಿಲ್ಲ. ಅಲ್ಲಿ ಮಾಗಲು ಎನ್ನತಕ್ಕಂಥ ಒಂದು ಊರು ಇದೆ, ಆ ಊರಿಗೆ ಈಗಲೂ ಕೂಡ ಹೋಗುವುದಕ್ಕೆ ಸಾಧ್ಯವಿಲ್ಲ. ಪರಿಹಾರ ಕೊಟ್ಟು ಅವರನ್ನು ಹೊರಗೆ ಹಾಕಬೇಕು. ಇಲ್ಲವೆಂದರೆ ಅವರಿಗೆ ಸೇತುವೆ ರಸ್ತೆಯನ್ನಾದರೂ ಮಾಡಿ ಕೊಡಬೇಕು. ಸೇತುವೆಯನ್ನು ಮಾಡುವುದಿಲ್ಲ, ಬ್ಯಾಕ್ ವಾಟರ್ ಬಂದು ಬಿಡುತ್ತದೆ. ಇನ್ನು 6 ತಿಂಗಳು ಅವರು ತೆಪ್ಪದಲ್ಲಿ ಓಡಾಡಬೇಕು. ಏಕೆ ಈ ದೇಶ ಬೇಕು, ನನಗೆ ಅರ್ಥವಾಗುತ್ತಿಲ್ಲ. ಇಂತಹ ದೇಶದಲ್ಲಿ ನಾವು ಇದ್ದೇವಲ್ಲಾ! ಇಂತಹ ಆಡಳಿತದಲ್ಲಿ ಏಕೆ ಇರಬೇಕು? It is not the fault on the part of the present Government. It is a carried problem of all the previous Governments. ಇಂತಹ ಘಟನೆಗಳು ನಮ್ಮ ವಿಧಾನಸಭೆ ಕ್ಷೇತ್ರದಲ್ಲಿ ಎಷ್ಟು ಇವೆ ಎಂದರೆ ನಾವು 100 ಘಟನೆಗಳನ್ನು ಹೇಳಬಹುದು. ಹಾಗಾದರೆ, Whether we have not brought it to the knowledge of the Government? I have brought it. ಹಾಗಾದರೆ ಇದನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲವೆ? ಹಣಕಾಸು ಖಂಡಿತ ಇದೆ.

ದುಂದುವೆಚ್ಚಗಳನ್ನು curtail ಮಾಡಬೇಕು, ಅನವಶ್ಯಕವಾದ ಉತ್ಸವಗಳನ್ನು ಮೂರು ವರ್ಷ ನಿಲ್ಲಿಸಬೇಕು. ಅದು ಏನೂ ಬೇಕಾಗಿಲ್ಲ. ಅದರಿಂದ ಏನೂ ಆಗಬೇಕಾಗಿಲ್ಲ, ಮೂರು ವರ್ಷಗಳ ನಂತರ ಪ್ರಾರಂಭ ಮಾಡೋಣ. ನಮ್ಮ ಎಲ್ಲಾ ಅಭಿವೃದ್ಧಿ ಯೋಜನೆಗಳೂ ಕೂಡ ನಾವು ಇನ್ನು 50 ವರ್ಷ ಮುಂದಕ್ಕೆ ಏನು ಬೇಕು ಅದನ್ನು ನೋಡಿ ಮಾಡಬೇಕು. ತಾತ್ಕಾಲಿಕವಾದ ಯೋಜನೆಗಳನ್ನು ನಾವು ಕೈಬಿಡಬೇಕು. ಸೀರೆ ಮತ್ತು ಸೈಕಲ್ ಕೊಡುವುದು, function ಮಾಡುವುದು ಇವೆಲ್ಲಾ waste ಎಂದು ನನಗೆ ಅನಿಸುತ್ತದೆ. ಖಂಡಿತವಾಗಿಯೂ ನೀವು ಸೇತುವೆ ಮಾಡಿ. ನೀವು ಬೇಕಾದರೆ ಕೊಡಿ. ಅದಕ್ಕೆ ನನ್ನ ವಿರೋಧವಿಲ್ಲ. As far as my knowledge is concerned, ನನ್ನ , ವಿಚಾರದಲ್ಲಿ ಇದಕ್ಕಿಂತ ಸೇತುವೆ ಉತ್ತಮವೆಂದು ಹೇಳುತ್ತೇನೆ. ಏಕೆಂದರೆ, ನಮ್ಮ ಕ್ಷೇತ್ರದಲ್ಲಿ ಸೇತುವೆ ಇಲ್ಲದೇ ಎರಡು ಹೆಣ್ಣುಮಕ್ಕಳು ತೇಲಿಕೊಂಡು ಹೋದರು. ಸೀರೆ ಕೊಟ್ಟಿದ್ದರಿಂದ ಏನೂ ಉಪಯೋಗವಾಗಲಿಲ್ಲ. ಸೇತುವೆ ಕೊಟ್ಟಿದ್ದರೆ ಆ ಹೆಣ್ಣುಮಕ್ಕಳು ಉಳಿಯುತ್ತಿದ್ದರು. ಹಾಲಪ್ಪನವರು ಪರಿಹಾರ ಕೊಟ್ಟು ಬಂದರು, ನಾನೂ ಪರಿಹಾರ ಕೊಟ್ಟು ಬಂದೆ. ಮಾನ್ಯ ಬೇಳೂರು ಗೋಪಾಲಕೃಷ್ಣರವರೂ ಪರಿಹಾರ ಕೊಟ್ಟು ಬಂದರು. ಸ್ಕೂಲ್‌ಗೆ ಹೋಗುವಾಗ ನೀರು ಇರಲಿಲ್ಲ. ವಾಪಸ್ಸು ಬರುವಾಗ ನೀರು ಬಂತು. ಎರಡೂ ಮಕ್ಕಳು ತೇಲಿಕೊಂಡು ಸತ್ತೇ ಹೋದರು. ಇದನ್ನೆಲ್ಲಾ ಯಾರು ಮಾಡಬೇಕು? whether it is not civic amenities? ಮಾಡಲಿಲ್ಲ ಎಂದ ತಕ್ಷಣ MLA failure ಆಗುತ್ತಾನೆ ಎಂದಾಗುತ್ತದೆ. Whether we have not brought it to the knowledge of the Government? We have brought it to the knowlege of the Government. It is a failure on the part of the Government. ಇದು ನನ್ನ ಅನಿಸಿಕೆ. ಆರ್ಥಿಕ ಇಲಾಖೆಯ ಬಗ್ಗೆ ಹೇಳುವುದಾದರೆ, ನನ್ನ ಅನಿಸಿಕೆ ಹೇಳುತ್ತಿದ್ದೇನೆ. It is a suggestion to the House. ಪ್ರತಿ ಏಪ್ರಿಲ್ ಒಂದನೇ ತಾರೀಖಿನಿಂದ ಮಾರ್ಚ್, ಡಿಸೆಂಬರ್‌ವರೆಗೆ 224 constituency ಗೆ ಒಂದು ಪುಸ್ತಕವನ್ನು ಹೊರ ತನ್ನಿ. ನಮ್ಮ ಪರಿಚಯ ಪುಸ್ತಕಕ್ಕಿಂತ ಅದು ಒಳ್ಳೆಯದು. ಏಕೆಂದರೆ, all of us should know. ಅಲ್ಲಿ ಮಹಿಳೆಯರ ಸಂಖ್ಯೆ ಎಷ್ಟಿದೆ, ಪುರುಷರ ಸಂಖ್ಯೆ ಎಷ್ಟಿದೆ, literacy ಎಷ್ಟಿದೆ, ಅಲ್ಲಿ education ಎಷ್ಟು ಪ್ರಮಾಣದಲ್ಲಿದೆ. ಎಲ್ಲವೂ ಕೂಡ ಮಾಹಿತಿಯನ್ನು ಒದಗಿಸುವಂತಹ ಪುಸ್ತಕ ಬರಬೇಕು. ಇದಕ್ಕೆ ಎಷ್ಟು ಖರ್ಚು ಬರುತ್ತದೆ? I should know about the facts, about other areas also. ಅಲ್ಲಿ ಮುಖ್ಯ ಬೆಳೆ ಏನು?

ವಾಡಿಕೆ ಮಳೆ ಎಷ್ಟು? ಇಂಥದ್ದು ಒಂದು ಪುಸ್ತಕ ತಂದರೆ, atleast ನಾವು ಅದನ್ನು ನೋಡಬಹುದು. ಎಷ್ಟು ಗ್ರಾಮ ಪಂಚಾಯಿತಿಗಳು ಒಂದು ವಿಧಾನಸಭಾ ಕ್ಷೇತ್ರಕ್ಕೆ ಬರುತ್ತದೆ? ಅಥವಾ ಎಷ್ಟು ಹಣ ತೊಡಗಿಸಬಹುದು, ಇವೆಲ್ಲವೂ ಕೂಡ ಅದರೊಳಗೆ ಆಗುತ್ತದೆ ಎನ್ನುವುದು ನನ್ನ suggestion to the Government.

ಇಲ್ಲಿ ಬಹಳ ಪ್ರಮುಖವಾಗಿ, ನಾನು ಕಳೆದ 4 ವರ್ಷಗಳಿಂದ ನೋಡುತ್ತಿದ್ದೇನೆ, ಗುತ್ತಿಗೆ ನೌಕರರು, ನಮ್ಮ ದಿನಗೂಲಿ ನೌಕರರು 25,000 ಜನರು ಇದ್ದಾರೆ. ನಡೆದ ಎಲ್ಲಾ ಅಧಿವೇಶನಗಳಲ್ಲೂ ಹೆಚ್ಚು ಕಡಿಮೆ ನಾನು ಪ್ರಶ್ನೆ ಕೇಳಿದ್ದೇನೆ ಹಾಗೂ ಉತ್ತರ ಪಡೆದುಕೊಂಡಿದ್ದೇನೆ. ಹಾಗಾದರೆ ಸರ್ಕಾರಕ್ಕೆ ಅವರ ಬಗ್ಗೆ ಏನಾದರೂ ಒಂದು ಯೋಚನೆ ಮಾಡಬೇಕೆಂದು ಅವರಿಗೆ ಯೋಚನೆಯೇ ಇಲ್ಲವೇ? ಒಬ್ಬ Forest Guard ನಿನ್ನೆ ನನಗೆ ಆಗುಂಬೆಯಿಂದ ಫೋನ್ ಮಾಡಿ ನನಗೆ ಸಂಬಳ ಸಿಗದೇ 2–3 ತಿಂಗಳಾಯಿತು ಎಂದು ಹೇಳುತ್ತಾನೆ. ಅವರಿಗೆ ಕೊಡುವುದು ಎಷ್ಟು? ಇವರು collect ಮಾಡುವುದು ಒಬ್ಬನಿಗೆ 3,500, 4,000, 5,000 ರೂಪಾಯಿ ಅವನಿಗೆ ಕೊಡುವುದು 1,000 ರೂಪಾಯಿ, 2000 ರೂಪಾಯಿ. ಅದಕ್ಕೆ ಅವನು 5 ತಿಂಗಳು ಕಾಯಬೇಕು. ಯಾವ ಪರಿಸ್ಥಿತಿ ಇದೆ ಎಂದರೆ, ಒಬ್ಬ ಸತ್ತಾಗ, ಈಗ ಅಲ್ಲಿ ದಿನಗೂಲಿ ನೌಕರರು 40–50 ವರ್ಷದವರು ಇದ್ದಾರೆ. ನಮ್ಮಲ್ಲಿ ಒಬ್ಬ ಕಬ್ಬಡ್ಡಿ ಕ್ಯಾಪ್ಟನ್ ಆದವನು, state represent ಮಾಡಿದವನು, heart attack ಆಗಿ ಸತ್ತು ಹೋದ. Heart attack ಆಗಿ ಸತ್ತು ಹೋದ ತಕ್ಷಣವೇ he did not get anything from the Forest Department. Forest Department ನಿಂದ ಒಂದು ರೂಪಾಯಿಯೂ ಸಿಗಲಿಲ್ಲ. ಅನಂತರ Forestನವರು, RFO ಅವರು ಇವರು ಎಲ್ಲಾ ಸೇರಿಕೊಂಡು 2 ಲಕ್ಷ ರೂಪಾಯಿ ಹಣ ಮಾಡಿದರೆ, ನಮ್ಮಲ್ಲಿ ಪರಿಸರವಾದಿಗಳು ಮತ್ತು ಇವರೆಲ್ಲಾ ಜಾಸ್ತಿ. ರೂಮ್‌ನಲ್ಲಿ ಕುಳಿತುಕೊಂಡು ಕಣ್ಣಿನ ಎದುರುಗಡೆ ಸಾವಿಗೆ 5 ರೂಪಾಯಿ ಹಾಕದಿದ್ದವರು, ಕಾನೂನು, ಕೇಳುತ್ತಾರೆ. ನೀನು ಎಲ್ಲಿಂದ ಕೊಟ್ಟೆ? ಯಾರಿಂದ ಕೊಟ್ಟೆ? ಅದು ಬೇರೆ ಕೇಳುವುದು. ಇವರು 5 ರೂಪಾಯಿ ದಾನ ಮಾಡಿರುವುದಿಲ್ಲ. ಪ್ರಶ್ನೆ 50 ಕೇಳುತ್ತಾರೆ. ನಾನು ಉದಾಹರಣೆ ಏಕೆ ಹೇಳುತ್ತೇನೆಂದರೆ, ಆ 25,000 ನೌಕರರ ಭವಿಷ್ಯವನ್ನು ಹಾಳು ಮಾಡುತ್ತಿರುವವರು ಈ ಸರ್ಕಾರವೇ ಹೊರತು ಬೇರೆ ಯಾರೂ ಅಲ್ಲ. ಹಾಗಾದರೆ ನೀವು ಅವರಿಗೆ ಸರಿಯಾದ ರೀತಿಯಲ್ಲಿ ವೇತನ ಕೊಡುತ್ತಿದ್ದೀರಾ? ನಾನು ಈ ಪ್ರಶ್ನೆಯನ್ನು ಕಾರ್ಮಿಕ ಸಚಿವರಿಗೂ ಕೇಳಿದ್ದೇನೆ. ಅದರ ಬಗ್ಗೆ ಒಂದು

ಸಾರಿ ಉತ್ತರ ಪಡೆದುಕೊಂಡಿದ್ದೇನೆ. what is the minimum wage as per Minimum Wages Act? Whether you are paying the amount like that? You are not paying it. ಬಹಳ ದುರಂತವೆಂದರೆ, ನಮ್ಮ ಶಾಲೆಗೆ ಬರುತ್ತಾರೆ. "ಸಾರ್, 15,000 ಮಾಡಿದ್ದಾರೆ, ನನಗೆ BPL card ಸಿಗುವುದಿಲ್ಲ ಎಂದು ಹೇಳುತ್ತಾರೆ. ಮಾನ್ಯ ಸಭಾಧ್ಯಕ್ಷರಲ್ಲಿ ಹಾಗೂ ಇಲ್ಲಿರುವ ಎಲ್ಲಾ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ರೂ. 11,000ದ ಒಳಗೆ ಆದಾಯ ಇರತಕ್ಕಂಥವರು ಎಷ್ಟು ಜನ ಇದ್ದಾರೆ ಎನ್ನುವುದನ್ನು ನೀವು ಹೇಳಿ. You can't find out a single person. You can't find out. ನಿಮ್ಮ ಉದ್ಯೋಗ ಖಾತ್ರಿ ಯೋಜನೆಯಲ್ಲಿಯೇ ಅದು 155ಕ್ಕೆ ಬಂದಿದೆ. ನೀವು 11,000 ರೂಪಾಯಿ ಒಳಗೆ ಇದ್ದವರಿಗೆ ಕೊಡಿ ಎಂದು ನಾವು village Secretary ಯವರಿಗೆ ಫೋನ್ ಮಾಡಿ ಹೇಳುತ್ತೇವೆ. village Secretary ಯವರೂ ಕೊಡುವುದು ಕಾನೂನು ಬಾಹಿರ. ಅವನು ಕಾನೂನುಬದ್ಧವಾಗಿ 40,000 ಎಂದು ಬರೆದರೆ he will be suspended. ಆದರೆ ಅವರು ಕೊಡದೇ ಇದ್ದರೆ ಇವರಿಗೆ ಕಾಲೇಜಿಗೆ admission ಆಗುವುದಿಲ್ಲ. ಇವರಿಗೆ medical allowance ಸಿಗುವುದಿಲ್ಲ. ಈಗ ನಮಗೆ ಕೊಟ್ಟಿರತಕ್ಕಂಥ C.M. fund ಗೆ ನಾವು ಹಣ ಕೊಟ್ಟರೆ ಅವರಿಗೆ ಆದಾಯ ಪತ್ರ ಕೇಳುತ್ತಾರೆ. ಹಾಗಾದರೆ ಈ 4 ವರ್ಷಗಳಲ್ಲಿ ಇದರೊಳಗೆ ಅವರಿಗೆ 40 ವರ್ಷಕ್ಕೆ, 40,000 ರೂಪಾಯಿಗೋ ಎಷ್ಟಕ್ಕೋ ಒಂದು ಆದಾಯ ಮಿತಿ ಹಾಕುವುದಕ್ಕೆ ಆಗುವುದಿಲ್ಲವೇ? 11,000 ರೂಪಾಯಿ rural ಗೆ, 17,000 ರೂಪಾಯಿ urban ಗೆ Whether you can't change it? ನನಗೆ ಅರ್ಥವೇ ಆಗುತ್ತಿಲ್ಲ. ಈಗ ಹೇಗಾಗಿದೆ ಎಂದರೆ ನಮ್ಮಲ್ಲಿ ಈ ಕಾಡುಪ್ರಾಣಿಗಳಿದ್ದು, Forest Department ನಲ್ಲಿ ಏನು problem ಆಗಿದೆ? Revenue Department ನಲ್ಲೂ ಅಷ್ಟೆ. ಪರಿಹಾರ ಕೊಡುವಾಗ ಒಂದು ಜಮೀನು ತರಿ ತೇಲಿಕೊಂಡು ಹೋಗಿದೆ. ಮಳೆ ಬಂದಿತು ಎಂದರೆ ಒಂದು ಎಕರೆಗೆ 800 ರೂಪಾಯಿ ಕೊಡುತ್ತಾರೆ. ನಮ್ಮಲ್ಲಿ ನಾಲ್ಕು ಆಳು ಕೆಲಸ ಎಂದು ಹೇಳುತ್ತೇವೆ. ನಾಲ್ಕು ಜನ ಕೆಲಸ ಮಾಡಿದರೆ ಅದರ ಕತೆ ಮುಗಿಯಿತು. ಒಂದೂವರೆ, ಎರಡು ಲಕ್ಷ ರೂಪಾಯಿ ಇರತಕ್ಕಂಥ ತರಿ ಮೂರು ವರ್ಷದ ಹಿಂದೆ ಮಣ್ಣು ಬಂದು ಕುಳಿತುಕೊಂಡಿರುವುದು ಇವತ್ತಿನವರೆಗೂ ನೆಡುವುದಕ್ಕಾಗಿಲ್ಲ. 800 ರೂಪಾಯಿ ಸರ್ಕಾರದಿಂದ ಸಿಕ್ಕಿದೆ. ನಾವು ಸರ್ಕಾರದಲ್ಲಿ ಏನು fight ಮಾಡಬಹುದು? ಅವನು ನಮಗೇನು ಬೈಯಬಹುದು? ಹಾಗಾದರೆ ಕಾನೂನುಗಳು ತಿದ್ದುಪಡಿಯಾಗಲು

ಸಾಧ್ಯವೇ ಇಲ್ಲವೇ? ಪರಿಹಾರದ ರೂಪವನ್ನು ಬದಲಾವಣೆ ಮಾಡಲಿಕ್ಕೆ ಸಾಧ್ಯವೇ ಇಲ್ಲವೇ? ಹಾಗಾದರೆ ಅದನ್ನು ಯಾರು ಸರಿ ಮಾಡುವುದು? ನಾವು ಇರುವುದೇ ಅದಕ್ಕೆ. ಶಾಸನ ಸಭೆಯ ಉದ್ದೇಶ ಏನು? ಶಾಸನ ಸಭೆಯ ಅರ್ಥ ಏನು? We are here to change the system. We are here to create the Law. 50-60 ವರ್ಷದ್ದು ಅಪ್ಪನ ಕಾಲದ್ದು, ಅಜ್ಜನ ಕಾಲದ್ದು ಇಟ್ಟುಕೊಂಡು, ನಮ್ಮ ಸಂಪ್ರದಾಯ ಸಂಪ್ರದಾಯಗಳು ಯಾವುವೂ ಕೂಡ ಆಕಾಶದಿಂದ ಬಿದ್ದಿರುವುದು ಅಲ್ಲ. ಯಾವುದೇ ಕಾನೂನು, ಸಂವಿಧಾನ ಎಲ್ಲವೂ ಕೂಡ ಆಕಾಶದಿಂದ ಯಾವುದೂ ಬಿದ್ದಿಲ್ಲ. ನಾವು, ನಮಗಾಗಿ, ಮುಂದಿನ ಜನಾಂಗಕ್ಕೆ ನಾವು ಮಾಡಿಕೊಟ್ಟಿರುವುದು. What is the worng in changing it? ಮೊನ್ನೆ Principal Secretary, Forest Department ನವರು ಬಂದಿದ್ದರು. ಮಂಗ ಯಾವುದಕ್ಕೆ ಬರುತ್ತದೆ ಎಂದು ಕೇಳಿದೆ. ಚೂರು ತಿಳಿದು ಹೇಳುತ್ತೇನೆ ಎಂದು ಇವತ್ತು ಉತ್ತರ ಕೊಟ್ಟಿದ್ದಾರೆ. ಏಕೆಂದರೆ ಮಂಗ, ಕಾಡಿಗೆ ಬರುತ್ತದೆಯೋ, ಮನುಷ್ಯನ ರೂಪ, ಇನ್ನ್ಯಾವುದೋ ಎಂದು. ಇಲ್ಲಿ problem ಏನೆಂದರೆ, ನಮ್ಮಲ್ಲಿ ಮಂಗನ ಕಾಟವಿದೆ. ಅಡಿಕೆ ಫಸಲು ಹಾಳು ಮಾಡುತ್ತದೆ. ಭತ್ತದ ಫಸಲು ಹಾಳು ಮಾಡುತ್ತದೆ. ಬಾಳೆತೋಟ ಹಾಳು ಮಾಡುತ್ತದೆ. ಇದಕ್ಕೆ ಪರಿಹಾರ ಕೊಡುವುದಿಲ್ಲ. ನಾವು ಪರಿಹಾರ ಕೇಳಿದರೆ, ಮಂಗ ವನ್ಯಜೀವಿಯೊಳಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಅದು ಮನುಷ್ಯನೇ? ಸಾಕುಪ್ರಾಣಿಯಾ? Forest Department ನವರೆ ಅಷ್ಟು confusion ನಲ್ಲಿದ್ದರೆ, if Government itself is in such a condition, ಇದಕ್ಕೆ ಅರ್ಥವೇನು? ಇದು ಮೂಲ ಮಾನವ ಎಂದು consider ಮಾಡಿದರೋ ಏನು ಎಂದು ಪ್ರಶ್ನೆ ಕೇಳಿದೆ. ಅದಕ್ಕೆ ಒಂದು ಉತ್ತರ ಕೊಟ್ಟಿದ್ದಾರೆ. ನನ್ನ ಹತ್ತಿರ ಇದೆ. ಅದನ್ನೇನೂ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಏತಕ್ಕೆ ಇದನ್ನು ಹೇಳುತ್ತೇನೆಂದರೆ, ಸರ್ಕಾರವೇ confusion ನಲ್ಲಿದ್ದು ಬಿಟ್ಟರೆ, ಜನರಿಗೆ ಏನು ಆಡಳಿತ ಸಿಗುತ್ತದೆ? ಜನರಿಗೆ ಒಳ್ಳೆಯ ಆಡಳಿತ ಸಿಗುತ್ತದೆಯೇ? ಇವರಿಗೇ ಕಾನೂನು ಗೊತ್ತಿಲ್ಲ. ಮಂಗ ಕಾಡಿಗೆ ಬರುತ್ತದೆಯೋ, ಊರಿನ ಒಳಗೆ ಬರುತ್ತದೆಯೋ, ಸಾಕು ಪ್ರಾಣಿಯೇ ಎನ್ನುವ ಯೋಚನೆಯಲ್ಲಿಯೇ ಅವರು confusion ನಲ್ಲಿದ್ದರೆ, ಅವರು ಇಷ್ಟು ವರ್ಷ ಕಳೆದರಲ್ಲಾ, ಇದಕ್ಕೆ ತಾವೇನೆಂದು ಹೇಳುತ್ತೀರಿ? ಸರ್ಕಾರ ಉತ್ತರ ಹೇಳಬೇಕಾಗುತ್ತದೆ. ಬಹಳ confusion. ಖಂಡಿತವಾಗಿಯೂ ಇವೆಲ್ಲಾ ಬದಲಾವಣೆಗಳನ್ನು ಮಾಡದೇ ಇದ್ದರೆ, ಏನು ಉಪಯೋಗವಿದೆ? ಸಮಾಜ ಕಲ್ಯಾಣ ಇಲಾಖೆಯಿದ್ದು, ನಮ್ಮಲ್ಲಿ

problem ಇದೆ. ಎಷ್ಟು ನೋವಾಗುತ್ತದೆ ಎಂದರೆ, ಈ ಸದನಕ್ಕೆ ಇನ್ನು ಬರಬಾರದೆನ್ನುವಷ್ಟು ಮನಸ್ಸಿಗೆ ನೋವಾಗುತ್ತದೆ. 4 ವರ್ಷಗಳ ಹಿಂದೆ ನಾನು ಆಯ್ಕೆಯಾದೆ. ಹಾಸ್ಟೆಲ್‌ಗೆ 50-60 ಜನ ಹೆಣ್ಣುಮಕ್ಕಳು ಜಾಸ್ತಿ ಸೀಟು ಕೇಳಿದರು. ಕೊಡತಕ್ಕಂಥ ಪರಿಸ್ಥಿತಿ ನಮಗೆ ಇರಲಿಲ್ಲ. ನಮಗೆ ಇರುವುದು 55, ನನಗೆ ಅವರ್‍ಯಾರನ್ನೂ ವಾಪಸ್ಸು ಕಳುಹಿಸುವುದಕ್ಕೆ ಮನಸ್ಸಿರಲಿಲ್ಲ. ಏಕೆಂದರೆ, ಆ ಹೆಣ್ಣುಮಕ್ಕಳೆಲ್ಲಾ 5 ಕಿ.ಮೀ., 6 ಕಿ.ಮೀ. ನಡೆದುಕೊಂಡು ಕಾಲೇಜಿಗೆ ಬರಬೇಕು. 200 ಇಂಚು ಮಳೆ ಇರತಕ್ಕಂಥ ಪ್ರದೇಶ, ಕಾಡು ಪ್ರದೇಶ, ನಕ್ಸಲ್ ಸಮಸ್ಯೆ ಇದೆ. ಸರಿ ಜಾಸ್ತಿ ಮಾಡಿದೆವು. ಅಲ್ಲಿ ಒಬ್ಬರು CS ಇದ್ದರು ನನ್ನ ಹತ್ತಿರ undertake ಮಾಡಿಸಿಕೊಂಡರು. ನಿಮ್ಮ ಪ್ರದೇಶಾಭಿವೃದ್ಧಿ ಹಣದಲ್ಲಿ ನಾನು 2 ಲಕ್ಷ ರೂಪಾಯಿಗಳನ್ನು ಕಟ್ ಮಾಡಿಕೊಳ್ಳುತ್ತೇನೆ. ನೀವು 10 ಲಕ್ಷ ರೂಪಾಯಿಯ building ಕಟ್ಟಿಸಿಕೊಡಿ ಎಂದು ಹೇಳಿದರು. 10 ಲಕ್ಷ ರೂಪಾಯಿದು ನಮ್ಮ ಅನುದಾನದಲ್ಲಿ 2 ರೂಮ್ ಕಟ್ಟಿಸಿದ್ದು ಆಯಿತು, electrification ಕೊಡಿಸಿದ್ದು ಆಯಿತು. ಆ 2 ಲಕ್ಷ ರೂಪಾಯಿಗಳನ್ನು ಬರೆದುಕೊಟ್ಟೆ, ಆನಂತರ D.C. ಯವರು ಇದನ್ನು ಬಿಡುಗಡೆ ಮಾಡುವುದಕ್ಕೆ ಬರುವುದಿಲ್ಲವೆಂದು query ಹಾಕಿದರು. ಈಗ ತಾಲ್ಲೂಕು ಸೊಸೈಟಿಯಲ್ಲಿ food ಕೊಟ್ಟವನು 4 ವರ್ಷದಿಂದ ನನಗೆ ಫೋನ್ ಮಾಡುತ್ತಿದ್ದಾನೆ. ಹಾಗಾದಾಗ ನಾನು Principal Secretary ರವರೆಗೆ ಅರ್ಜಿ ಕೊಟ್ಟೆ, Commissioner ನವರಿಗೆ ಅರ್ಜಿ ಕೊಟ್ಟೆ, Minister ರವರಿಗೆ ಕೊಟ್ಟಿದ್ದೇನೆ. ಜಿಲ್ಲಾ ಪಂಚಾಯತ್‌ನವರಿಗೆ ಹೇಳಿದ್ದೇನೆ. ಇವತ್ತಿನವರೆಗೂ ಆ 2 ಲಕ್ಷ ರೂಪಾಯಿ ಹಣ release ಆಗಿಲ್ಲ. ನಾವು ಏಕೆ ಇಲ್ಲಿ ಇರಬೇಕು? Is there any meaning in it? is it the House of legislation? 2 ಲಕ್ಷ ರೂಪಾಯಿ ಹಣವನ್ನು release ಮಾಡಲು ಒಬ್ಬ ಸ್ಥಳೀಯ ಅಧಿಕಾರಿಗಳಿಗೆ ಆಗುವುದಿಲ್ಲವೆಂದರೆ ಹೇಗೆ? ಅದೂ authenticated, it is not a created document. ನಾವು ಏತಕ್ಕಾಗಿ ಈ ಶಾಸನ ಸಭೆಗೆ ಬರಬೇಕು? ಮಾನ್ಯ ಅಧ್ಯಕ್ಷರು ಸರ್ಕಾರಕ್ಕೆ ಈ ವಿಚಾರಗಳನ್ನೆಲ್ಲಾ ಹೇಳಬೇಕೆನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರಲ್ಲಿ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಈ ರಾಜ್ಯದಲ್ಲಿ 189 ಗ್ರಾಮೀಣ ವಿಧಾನಸಭಾ ಸದಸ್ಯರು ಇದ್ದಾರೆ, as identified by the Rural Development Minister. ನಾನು ಹೇಳುವುದೇನೆಂದರೆ, ಈ .ಬರಕ್ಕಾಗಿ ಇಷ್ಟು 3 ಗಂಟೆ, 4 ಗಂಟೆ, 5 ಗಂಟೆ ಮಾತನಾಡಿದೆವಲ್ಲಾ, ಸರ್, ಹಾಗಾದರೆ ಬರ

ಬರುವುದು, ಅತಿವೃಷ್ಟಿ, ಅನಾವೃಷ್ಟಿ ಸರ್ಕಾರದ ಗಮನದಲ್ಲಿ ಇರುವುದೇ ಇಲ್ಲವೇ ಹಿಂದೆ ಬಂದಿಲ್ಲವೇ? ಮುಂದೆ ಬರುವುದಿಲ್ಲವೇ? ಹಾಗಾದರೆ ಅಂಥದ್ದಕ್ಕೆ ನಾವು ಏನು ಕ್ರಮ ತೆಗೆದುಕೊಳ್ಳಬೇಕು? Drinking Water problem is a permanent problem. ಎರಡೆರಡು ಕೋಟಿ ರೂಪಾಯಿಗಳಂತೆ ಶಾಸಕರ taskforce ಗೆ ನೀವು ಕೊಟ್ಟರೆ, ಏನು ದಂಡವಾಗುತ್ತೆ ಎಂದು ನನಗೆ ಅರ್ಥವಾಗುತ್ತಿಲ್ಲ. ಹೆಚ್ಚು ಕಡಿಮೆ 400 ಕೋಟಿ ರೂಪಾಯಿಗಳಾಗುತ್ತವೆ. ಹೋಗಲಿ ಅವರು ಕೇಳಿರತಕ್ಕಂಥ ಬಾವಿಗೋ, ಕುಡಿಯುವ ನೀರಿಗೋ ಕೊಡುತ್ತಾರೆ. ಅದರಿಂದ ಏನಾಗುತ್ತದೆ? Only for drinking purpose ಗೆ 2 ಕೋಟಿ ರೂಪಾಯಿ ಕೊಡುವುದರಿಂದ ಏನು ತೊಂದರೆಯಾಗುತ್ತದೆ? ಅಲ್ಲಿ ಉತ್ಸವಕ್ಕೆ ಕೊಡುತ್ತಾರೆ. ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಬಳ್ಳಾರಿಯಲ್ಲಿ ಉತ್ಸವಕ್ಕೆ 78 ಕೋಟಿ ರೂಪಾಯಿ ಖರ್ಚಾಯಿತು. ಅವರು ಯಾರಿಂದಲೋ ಡ್ಯಾನ್ಸ್ ಮಾಡಿಸುವುದಕ್ಕೆ ಅವರು ಏರೋಪ್ಲೇನ್‌ನಲ್ಲಿ ಬರುವಂತಹ ಟೀಮ್‌ಗೆ 25 ರಿಂದ 35 ಲಕ್ಷ ರೂಪಾಯಿಗಳನ್ನು ಕೊಟ್ಟರು. ಒಂದು ಉತ್ಸವಕ್ಕಾಗಿ ಸುಮಾರು 78 ಕೋಟಿ ರೂಪಾಯಿಗಳನ್ನು ಕೊಟ್ಟರು. ಇಲ್ಲಿ ನಮಗೆ ಕುಡಿಯುವ ನೀರಿಗಾಗಿ ದುಡ್ಡಿಲ್ಲವೆಂದರೆ why I have to be here? ಅದಕ್ಕೇನಾದರೂ ಅರ್ಥವಿದೆಯಾ? ಹೇಮಮಾಲಿನಿ ಡ್ಯಾನ್ಸ್ programmeಗೆ ಸುಮಾರು 78 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕುಡಿಯುವುದಕ್ಕೆ ನೀರಿಲ್ಲವೆಂದು ನಾವು 189 ಜನ ಪ್ರತಿನಿಧಿಗಳು ಜನರ ಹತ್ತಿರ ಬೈಸಿಕೊಳ್ಳಬೇಕೇ? Is there any meaning in it? ನಮ್ಮ thoughts ಗಳನ್ನು ಬದಲಾವಣೆ ಮಾಡಿಕೊಳ್ಳಬೇಕು. ಆಡಳಿತದಲ್ಲಿರುವಂತಹವರು ತಮ್ಮ ಯೋಚನಾ ಲಹರಿಯನ್ನು ಖಂಡಿತವಾಗಿ ಬದಲಾವಣೆ ಮಾಡಿಕೊಳ್ಳಬೇಕು. ಈ ಬದಲಾವಣೆಗಳನ್ನು ನಾವು ಮಾಡದೆ ಇದ್ದರೆ we cannot change the system. Acquiring power is not important ಇಲ್ಲಿ ಕುರ್ಚಿಯ ಮೇಲೆ ಕುಳಿತುಕೊಳ್ಳುವುದು ಬಹಳ ಮುಖ್ಯವಲ್ಲ. ಕುರ್ಚಿಯ ಮೇಲೆ ಕುಳಿತುಕೊಂಡಾಗ ಏನು ಮಾಡುತ್ತಾರೆಂಬುದು ಬಹಳ ಮುಖ್ಯವಾಗುತ್ತದೆ. ಈ ದೇಶದಲ್ಲಿ ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅರ್ಹತೆ ಇದ್ದವರೆಲ್ಲರೂ ಗೆದ್ದು ಬರುವುದಿಲ್ಲ. ಈ ದೇಶದಲ್ಲಿ ಅರ್ಹತೆ ಇಲ್ಲದೆ ಇದ್ದವರು ಅನೇಕ ಜನರು, ಅನೇಕರು ನಾಮಾವಶೇಷವಾಗಿ ಹೋಗಿದ್ದಾರೆ. We have to accept, ಏಕೆ ಎಂದು ಹೇಳಿದರೆ ತಲೆ ಒಡೆಯುವವರು ಬರುವುದಕ್ಕಿಂತ ತಲೆ ಒಡೆಯುವವರು ಬರುವುದಕ್ಕಿಂತ ತಲೆ ಎಣಿಸಿ ಬರುವುದು ಉತ್ತಮವೆನ್ನುವ ಕಾರಣಕ್ಕಾಗಿ ಇದನ್ನು ನಾವು

ಒಪ್ಪಿಕೊಂಡಿದ್ದೇವಷ್ಟೆ. There is no other alternative method to select this. ಹಾಗಾದರೆ ಈಗ change ಮಾಡುವುದು ಹೇಗೆ? ಶಿವಮೊಗ್ಗ ಜಿಲ್ಲೆಯನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕಿಮ್ಮನೆಯಲ್ಲಿ 250 ಇಂಚು ಮಳೆಯಾಗುತ್ತದೆ, ಆದರೆ ಇನ್ನೂ ಕೂಡ 50 ಇಂಚು ಮಳೆಯಾಗಿರುವುದಿಲ್ಲ. ನಮಗೆ ಮಳೆ ಬರದೆ ಇದ್ದರೆ ಬಯಲು ಸೀಮೆಯ ಎಲ್ಲಾ ಭಾಗಕ್ಕೂ ನಮ್ಮದು ಎಂದರೆ ನಮ್ಮದು ಮಾತ್ರವಲ್ಲ, ಚಿಕ್ಕಮಗಳೂರು, ಮೂಡಿಗೆರೆ ಸೇರಿ, ನಮ್ಮಲ್ಲಿ ಮಳೆ ಬಾರದೆ ಇದ್ದರೆ ಎಲ್ಲಾ ಕಡೆಗೂ ತೊಂದರೆಯಾಗುತ್ತದೆ. ಆದ್ದರಿಂದ ಈ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸರ್ಕಾರ ಖಂಡಿತವಾಗಿಯೂ ಕೂಡ ಆಸಕ್ತಿಯನ್ನು ವಹಿಸಿ ಎಲ್ಲಾ ಪ್ರಮುಖ ವಿಚಾರಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆನ್ನುವಂತಹ ಮಾತನ್ನು ಹೇಳುತ್ತೇನೆ. ನಮಗೆ ಇನ್ನೂ ಕೂಡ 100 ಸೀಟು ಹೆಚ್ಚಿಗೆ ಕೊಡಬೇಕೆಂದು ನಮ್ಮ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಕೃಷಿ ಸಚಿವರು ಮತ್ತು Horticulture Minister ರವರು ಈ ಸದನದಲ್ಲಿದ್ದಾರೆ. ಈ ಬಗ್ಗೆ ಎರಡು ಪ್ರಮುಖವಾದಂತಹ ವಿಚಾರಗಳನ್ನು ಹೇಳುತ್ತೇನೆ. ನಮ್ಮ ತೀರ್ಥಹಳ್ಳಿಯಲ್ಲಿ ಸುಮಾರು ನಾಲ್ಕು ಕಟ್ಟಡಗಳು ಆಗಿದೆ. ಮಾನ್ಯ ಕೃಷಿ ಸಚಿವರೆ, ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಎರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲು ವ್ಯವಸ್ಥೆ decentralize ಆಗಿತ್ತು. ಈಗ centralize ಆಗಿದೆ. ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ 3,000 ರೂಪಾಯಿಗಳಿಗೆ ಸಿಗುವಂತಹ ನಮ್ಮ agricultural implements ಸುಮ್ಮನೆ 8,000 ರೂಪಾಯಿಗಳಿಗೆ ಹೋಗಿದೆ. ನಾವು ನೇರವಾಗಿ ಕಾರ್ಖಾನೆಗೆ ಹೋದರೆ 2,500 ರೂಪಾಯಿಗಳಿಗೆ ಸಿಗುತ್ತದೆ. ನಿಮ್ಮ ಸಬ್ಸಿಡಿ ನಮಗೆ ಸಿಗುವುದೇ ಇಲ್ಲ. ಇದನ್ನು ಆ ಮಧ್ಯವರ್ತಿಯು ತೆಗೆದುಕೊಂಡು ಹೋಗುತ್ತಿದ್ದಾರೆ. ಇದನ್ನು you have to change it. ನಾನು ನನ್ನ ಮಾತನ್ನು complete ಮಾಡಿಬಿಡುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ : ನಾನು ಈ ಬಗ್ಗೆ ಮಾತನಾಡುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ ; ನಾನು ಒಂದು ನಿಮಿಷ ಹೇಳುತ್ತೇನೆ. ನಾನು ನನ್ನ ಮಾತನ್ನು ಹೇಳಿ ಮುಗಿಸಿಬಿಡುತ್ತೇನೆ.

ಉಪಾಧ್ಯಕ್ಷರು ; ಮಾನ್ಯ ಸಚಿವರು ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶವನ್ನು ಕೊಡಿ.

ಶ್ರೀ ಕಿಮ್ಮನೆ ರತ್ನಾಕರ್ : ನನ್ನ ಮಾತನ್ನು ಹೇಳಿ ಮುಗಿಸುತ್ತೇನೆ.

ಉಪಾಧ್ಯಕ್ಷರು ; ಮಾನ್ಯ ರತ್ನಾಕರ್‌ರವರೆ, ಮಾನ್ಯ ಸಚಿವರು ಒಂದು ಸಲ ಮಾತನಾಡಲಿ.

ಶ್ರೀ ಕಿಮ್ಮನೆ ರತ್ನಾಕರ್ : ಇಲ್ಲಾ ಸ್ವಾಮಿ, ನಾನು ನನ್ನ ಮಾತನ್ನು close ಮಾಡಿಬಿಡುತ್ತೇನೆ. ಏಕೆಂದರೆ ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳು. ನಾನು ಮಾತನಾಡುವ ಬಗ್ಗೆ ಪೂರ್ಣವಾಗಿ prepare ಆಗಿರಲಿಲ್ಲ. ನಾನು ಮತ್ತೆ ಮಾತನಾಡುತ್ತೇನೆಂದರೆ, ನನಗೆ ಮಾತನಾಡುವುದಕ್ಕೆ ಅವಕಾಶವೇ ಸಿಗುವುದಿಲ್ಲ. ನಾನು ಮಾತನಾಡಬೇಕೆಂದು ಇಡೀ ದಿನ ಒಂದೊಂದು ಗಂಟೆ ಕಾದು ಮನೆಗೆ ಹೋಗಿದ್ದೇನೆ. ಆದ್ದರಿಂದ ನಾನು ಎದ್ದು ನಿಂತುಕೊಂಡು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದೇನೆ. ಏತಕ್ಕಾಗಿ ಈ ಮಾತನ್ನು ಹೇಳುತ್ತೇನೆಂದರೆ, ಇವತ್ತು ಟಿಲ್ಲರ್, ಟ್ರಾಕ್ಟರ್‌ಗಳು ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ Area processing ತೆಗೆದುಕೊಂಡರೆ ಅವನು ಅದನ್ನು 50,000 ರೂಪಾಯಿಗಳಿಗೆ ಕೊಡುವುದಕ್ಕೆ ರೆಡಿಯಾಗಿದ್ದಾನೆ. ಆದರೆ ಅಲ್ಲಿ ಏನಾಗಿದೆ ಎಂದರೆ ಸಬ್ಸಿಡಿಯನ್ನು ನೇರವಾಗಿ ಅವನಿಗೆ ಕೊಡುವುದರಿಂದ they have raised the bill. ಇದರಿಂದ ರೈತನಿಗೆ 5 ಪೈಸೆ ಉಪಯೋಗವಾಗುತ್ತಿಲ್ಲ. ನೀವು ಏನು ರೈತನಿಗೆ ಹಣ ಕೊಡಬೇಕೆಂದು ಇದ್ದೀರೋ ನೀವು ಅವನಿಗೆ original bills ಅನ್ನು ಕೊಡುವುದಕ್ಕೆ ಹೇಳಿ ಅವನಿಗೆ ಪೇಮೆಂಟ್ ಮಾಡಿ. ಇದು ಯಾತಕ್ಕೆ ಆಗಿತ್ತು. ಎಂದರೆ, ನನಗೆ ಮೂರು ವರ್ಷದಿಂದ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಇದ್ದರು, ಅವರು ಕರೆದರು, Copper Sulphate ಬಂದಿದೆ ನೀವು distribute ಮಾಡಬೇಕು ಅದಕ್ಕೆ subsidy rate ನಲ್ಲಿ ಕೊಡುತ್ತಿದ್ದಾರೆಂದು ಹೇಳಿದರು. ನಾನು ಅಲ್ಲಿಗೆ ಬಹಳ ಖುಷಿಯಲ್ಲಿ ಹೋದೆ. Copper Sulphate ಅನ್ನು distribute ಮಾಡುವುದಕ್ಕೆ ಹೋದೆ. ಬೆಳಿಗ್ಗೆ ಅಲ್ಲಿಗೆ ಹೋಗಿ ಚೌಚೌಬಾತ್ ತಿಂದಿದ್ದು ಆಯಿತು. Copper Sulphate distribute ಮಾಡುವುದಕ್ಕೆ ಹೋದರೆ ಒಂದು ಕೆಜಿಗೆ ಎಷ್ಟೆಂದರೆ 131 ರೂಪಾಯಿಗಳು ಆಗುತ್ತದೆ. ನಾನು ಬೆಂಗಳೂರಿನಲ್ಲಿರುವ ನಮ್ಮ ಸ್ನೇಹಿತರಿಗೆ phone ಮಾಡಿ ನಿಮ್ಮಲ್ಲಿ ಎಷ್ಟು ಇದೆ ಎಂದು

ಕೇಳಿದೆ. ಇಲ್ಲಿ ಲೋಕಲ್‌ನಲ್ಲಿ ಅದಕ್ಕೆ 87.00 ರೂಪಾಯಿ ಇದೆ ಎಂದು ಹೇಳಿದರು. ಈ ಸಬ್ಸಿಡಿಯನ್ನು ಫ್ಯಾಕ್ಟರಿಯವರು ತಿಂದುಕೊಂಡು ಹೋಗುತ್ತಿದ್ದಾರೆ. It is a lapse on the part of the government. The Commission is going to, the commission agent, not to the farmer. ರೈತರಿಗೆ 87 ರಿಂದ 100 ರೂಪಾಯಿಗೆ ಸಿಗುವಂತಹ Copper Sulphate ಗೆ ಸುಮ್ಮನೆ ಸರ್ಕಾರವು 131.00 ರೂಪಾಯಿಗಳನ್ನು ಮಾಡಿ ಅವನನ್ನು ಮಂಗನನ್ನಾಗಿ ಮಾಡುವುದಕ್ಕೆ ಅಂತ ಏತಕ್ಕಾಗಿ ಸಾರ್ ನಾವು ಇಲ್ಲಿ ಇರಬೇಕು? ರೈತನ ಉಪಕರಣಗಳು ನೀವು ಥಾಯ್‌ಲ್ಯಾಂಡ್‌ಗೆ ಹೋಗಿ, ಚೈನಾಕ್ಕೆ ಹೋಗಿ 2700 ರೂಪಾಯಿಗಳಿಗೆ ಕೆಲವು ವೀಡಿಂಗ್ ಮೆಷಿನ್‌ಗಳು ಸಿಗುತ್ತದೆ. It is available here also. ಸಬ್ಸಿಡಿ ವ್ಯವಹಾರದಲ್ಲಿ ಅದೆಲ್ಲವೂ ವ್ಯತ್ಯಾಸವಾಗುತ್ತದೆ. ಸಬ್ಸಿಡಿ ಸಿಗುತ್ತದೆ ಎಂದು ಹೇಳಿ ರೇಟ್ ಅನ್ನು ಸುಮ್ಮನೆ ರೈಸ್ ಮಾಡಿಕೊಂಡು ಬಿಲ್ ರೆಡಿ ಮಾಡಿಕೊಳ್ಳುವುದಕ್ಕೆ, ಬಿಲ್ ಅನ್ನು ಕೊಡುವುದಕ್ಕೆ ಒಂದಷ್ಟು ಜನರು ಇದ್ದಾರೆ. ಅವರ ಹತ್ತಿರ ಫ್ಯಾಕ್ಟರಿಯೂ ಸಹ ಇಲ್ಲ, ಏನೂ ಇಲ್ಲ. ಆ ಬಿಲ್ ಅನ್ನು ಕೊಡುವುದಕ್ಕೆ ಒಂದಷ್ಟು ಜನರು ತಯಾರಾಗಿದ್ದಾರೆ. They are not having any implements. They are printing. ಇಲ್ಲಿ ನಾನು ಹೇಳುವುದೇನೆಂದರೆ, ನೀವು ಮುಂದಿನ ಎಲ್ಲಾ ದಿನಗಳಲ್ಲಿ ರೈತರಿಗೆ ನೇರವಾಗಿ ತಲುಪುವಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕು. ನೀವು ಸಬ್ಸಿಡಿಯನ್ನು ಕೊಟ್ಟು ಆ commission agents ಗೆ ಹೋಗುವುದಾದರೆ ಇದರಿಂದ 5 ಪೈಸೆ ಉಪಯೋಗವಿಲ್ಲ. ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ನಮ್ಮಲ್ಲಿ ನಾಲ್ಕು ಕೃಷಿ ಕೇಂದ್ರಗಳು open ಆಗಿವೆ. ಅಲ್ಲಿ ಬಿಲ್ಡಿಂಗ್ ರೆಡಿಯಾಗಿದೆ. ಇದು ಯಾವಾಗ inaugurate ಆಗುತ್ತದೆ ಎಂದು ಕೇಳುತ್ತಿರುತ್ತಾರೆ. ಇದರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅಲ್ಲಿ problem ಏನೆಂದರೆ, ಅದನ್ನು ಯಾರು ಕಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಯಾರು ಕಟ್ಟುತ್ತಿದ್ದಾರೆಂದು ಸಹ ಗೊತ್ತಿಲ್ಲ. ಯಾರೋ ಒಬ್ಬ ಬೆಂಗಳೂರಿನವನಂತೆ ಅವನು ಇಡೀ ರಾಜ್ಯದ್ದು ಹಿಡಿದವನಂತೆ ಎಂದು ಹೇಳಿದರು. ಅಲ್ಲಿ ಒಬ್ಬ ಯಾವ ಒಬ್ಬ ಕೂಲಿ ಕಾರ್ಮಿಕ ಮೂರು-ಮೂರು ಕೋಟ್ ಅನ್ನು ಹಾಕಿಕೊಂಡು ಸುಮ್ಮನೆ ನಿಂತುಕೊಂಡಿರುತ್ತಾನೆ. ಅಲ್ಲಿ ಯಾರು ಕೆಲಸವನ್ನು ಮಾಡುತ್ತಾರೋ, ಏನೋ ಎಂದು ಒಂದೂ ನಮಗೆ ಗೊತ್ತಿಲ್ಲ. ಕೇಳುವುದಕ್ಕೆ ಹೋದರೆ ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಯಾರು ಟೆಂಡರ್ ಹಿಡಿದಿದ್ದಾರೋ ಗೊತ್ತಿಲ್ಲ. Where we have to enquire ? ಇದನ್ನು ಜಿಲ್ಲೆಗೆ ವಹಿಸಿ, ಜಿಲ್ಲಾ ಟೆಂಡರ್‌ಗೆ

ವಹಿಸಿದರೆ ನಾವು ಪ್ರಶ್ನೆಗಳನ್ನು ಕೇಳಬಹುದು. ಇದರ ಬಗ್ಗೆ ಯಾರಿಗೆ ಕೊಟ್ಟಿದ್ದಾರೆ, ಯಾರು ಟೆಂಡರ್ ಹಾಕಿದ್ದಾರೆಂದು ಗೊತ್ತಾಗುತ್ತದೆ. ಸಿಂಗಲ್ ಟೆಂಡರ್ ಅನ್ನು ಏತಕ್ಕಾಗಿ ಮಾಡುವುದಕ್ಕೆ ಹೋಗಬೇಕು? ಸಿಂಗಲ್ ಟೆಂಡರ್ ಮಾಡುವುದಕ್ಕೆ ಹೋದರೆ ಏನಾಗುತ್ತದೆ.? ನಾನು ಹೇಳುವುದಾದರೆ ನಾವು ಜನರ ಪರವಾಗಿ ಯೋಜನೆಯನ್ನು ಮಾಡುತ್ತಿರುವವರು ಎಂದು ಹೇಳಿ ಹಣವನ್ನು ಅನಾವಶ್ಯಕವಾಗಿ waste ಮಾಡಬಾರದು ಎಂದು total tender ಅನ್ನು ಏತಕ್ಕಾಗಿ ಕೊಡಬೇಕು. ಅಂತಹ ಬಿಲ್ಡಿಂಗ್ ಅನ್ನು ತಾಲ್ಲೂಕು ಹಾಗೂ ಜಿಲ್ಲೆಗೆ ಮಾಡಿದರೆ ಅವರು ಕಟ್ಟಿಕೊಂಡು ಹೋಗುತ್ತಾರೆ. ಇವೆಲ್ಲವು ನನಗೆ ಅರ್ಥವೇ ಆಗುತ್ತಿಲ್ಲ. You see, we are spoilling the system, we are not amending the system, we are not correcting the system. We are creating a problem to the nation. We are creating a problem to the people at large. ಹಾಗಾದರೆ ಇದನ್ನು ಸರಿ ಮಾಡುವುದಕ್ಕಾಗುವುದಿಲ್ಲವೇ? ಏತಕ್ಕಾಗಿ ಸರಿಮಾಡುವುದಕ್ಕಾಗುವುದಿಲ್ಲ, ಏತಕ್ಕಾಗಿ ಹೀಗೆ ಆಗುತ್ತಿದೆ. ನನ್ನ ಸ್ನೇಹಿತರೆ Areca machine ತಯಾರು ಮಾಡುತ್ತಿದ್ದಾರೆ. ನಾವು ಇದನ್ನು ಕಡಿಮೆಗೆ ಕೊಡಬಹುದು ಎಂದು ಅವರು ನನಗೆ ಹೇಳುತ್ತಿದ್ದಾರೆ. ಏಕೆ ಕೊಡುವುದಕ್ಕಾಗುವುದಿಲ್ಲವೆಂದರೆ it is due to the policy of the Government. ಅವರಿಗೆ ಏನು problem ಇದೆ ಎಂದರೆ, ಸಬ್ಸಿಡಿಯನ್ನು ಅವರು ಸರ್ಕಾರದಿಂದಲೇ ತೆಗೆದುಕೊಳ್ಳಬೇಕು. ಅವನು ತೆಗೆದುಕೊಳ್ಳುವುದಕ್ಕೆ ಇಲ್ಲಿ ಬಂದು ದುಡ್ಡನ್ನು ಕಟ್ಟಿದರೆ ಮಾತ್ರ release ಆಗುವುದು. ಇದು ಎಂತಹ ದುರಂತವೆಂದರೆ, ಅವರಿಗೆ 25 ಲಕ್ಷ ರೂಪಾಯಿಗಳು ದುಡ್ಡು ಬರಬೇಕಾಗಿದೆ. ಇಲ್ಲಿ ಮೇಲಿರುವವರು ಅವರಿಗೆ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಇವರಿಗೆ ಹಣವನ್ನು ಕೊಟ್ಟರೆ ಮಾತ್ರ ಅವರು ಬಿಡುಗಡೆ ಮಾಡುತ್ತಾರೆ. We are spoilling the system. We are not here to spoil the system. We are here to the rectify the system, to change the system. ಆದ್ದರಿಂದ ಇಂತಹ ವಿಚಾರಗಳಲ್ಲಿ ನಾನು ಆಪಾದನೆಯನ್ನು ಸಹ ಮಾಡುವುದಿಲ್ಲ. But you have to the change the corrective measure. ಇದನ್ನು ತೆಗೆದುಕೊಳ್ಳದೆ ಹೋದರೆ ಖಂಡಿತವಾಗಿ ಜನರು ನಮ್ಮನ್ನು ಉಳಿಸುವುದಿಲ್ಲ. ಜನರಿಗೆ ನಮ್ಮ ಮೇಲೆ ಸಾರ್ವಜನಿಕವಾಗಿ ನಾವು ಎಲ್ಲೂ ಬಸ್‌ಸ್ಟಾಂಡ್‌ನಲ್ಲಿ ಎಂಎಲ್‌ಎ ಎಂದು ಹೇಳಿಕೊಳ್ಳುವುದಿಲ್ಲ. ಜನರಿಗೆ ನಮ್ಮ ಬಗ್ಗೆ ಗೌರವವೇ ಹೋಗಿಬಿಟ್ಟಿದೆ. ಮಾಧ್ಯಮದವರ ಹಾಗೂ ನಮ್ಮ ಸ್ಥಿತಿಯೂ ಒಂದೇ

ಆಗಿದೆ. ಅಂತಹ ಪರಿಸ್ಥಿತಿ ಆಗಿದೆ. ನಾನು KSRTC ಬಸ್ಸಿನಲ್ಲಿ ಪ್ರತಿನಿತ್ಯ ರೆಗ್ಯುಲರ್ ಆಗಿ ಓಡಾಡುತ್ತೇನೆ. ಒಂದಿಬ್ಬರು ವಯಸ್ಸಾದವರು ಹಿಗ್ಗಾಮುಗ್ಗ ಬೈದು ಬಿಟ್ಟರು. ನಾನು ಅವರು ಹೇಳಿರುವ ಮಾತನ್ನು ಸದನದಲ್ಲಿ ಹೇಳುವಹಾಗಿಲ್ಲ. ನಾನು ಶಾಸಕನೆಂದು ಅವರಿಗೆ ಗೊತ್ತಿಲ್ಲ. ದೇವರ ದಯೆಯಿಂದ ಅದೃಷ್ಟ ನಾನು ಸುಮ್ಮನಾದೆ, ಎಲ್ಲಾದರೂ ನಾನು ಮೊದಲೇ identify card ಅನ್ನು ಕೊಟ್ಟಿದ್ದರೆ ಅವರು ಹೇಳಿರುವ ಮಾತೆಲ್ಲವೂ ನನಗೆ apply ಆಗಿಬಿಡುತ್ತಿತ್ತು. ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, We have to change the system, ಇದನ್ನು change ಮಾಡುವುದಕ್ಕಾಗುವುದಿಲ್ಲವೆಂದರೆ ನಾವು ಏತಕ್ಕಾಗಿ ಇಲ್ಲಿಗೆ ಬರಬೇಕು? We should not come here. ನಮಗೆ ಜನರು change ಮಾಡಬೇಕೆಂದು ಅವಕಾಶವನ್ನು ಕೊಟ್ಟಿದ್ದಾರೆ. ಇದನ್ನು ಏತಕ್ಕಾಗಿ change ಮಾಡುವುದಕ್ಕಾಗುವುದಿಲ್ಲ? ನಾವು ಇದನ್ನು change ಮಾಡುವುದಕ್ಕಾಗದಿದ್ದರೆ we should not be here. We should get out of the House. ಆದ್ದರಿಂದ corrective measure ಅನ್ನು ತಾವು ಮಾಡಿಕೊಳ್ಳಬೇಕೆಂಬ ಮಾತನ್ನು ನಾನು ಹೇಳುತ್ತೇನೆ. ಗ್ರಾಮೀಣ ಪ್ರದೇಶದ ಏನು problems ಇವೆ ಅದನ್ನು ಕೂಡ, ನಾನು ಸರ್ಕಾರಕ್ಕೆ ಹೇಳುವುದಿಷ್ಟೇ, ಗ್ರಾಮೀಣ ಪ್ರದೇಶದ ವಿಧಾನಸಭಾ ಸದಸ್ಯರು ಏನು ಇದ್ದಾರೆ, ಅವರೆಲ್ಲರಿಗೂ ಕೂಡ immediately ಬರದ ಅನುದಾನದಡಿಯಲ್ಲಿ ಕನಿಷ್ಠ 2–2 ಕೋಟಿ ರೂಪಾಯಿಗಳನ್ನು ನೀವು taskforce ಗೆ, exclusively for the drinking water ಎಂದು ಮಾಡಬೇಕೆನ್ನುವಂತಹ ಮಾತನ್ನು ಹೇಳುತ್ತೇನೆ. ನನಗೆ ಅನೇಕ ವಿಚಾರಗಳ ಬಗ್ಗೆ ಮಾತನಾಡಬೇಕೆಂದು ಇದೆ. ಆದರೆ ಈ ಸದನದ ಎಲ್ಲಾ ಸದಸ್ಯರು ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ನಾನು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಯನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಸದನವು ಮಧ್ಯಾಹ್ನ 3–00 ಗಂಟೆಗೆ ಮತ್ತೆ ಸೇರಲಾಗುವುದು.

(ಸದನವು ಭೋಜನದ ವಿರಾಮಕ್ಕೆ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3–00 ಗಂಟೆಗೆ ಸಮಾವೇಶಗೊಳ್ಳುತ್ತದೆ).

---

* ಮಾನ್ಯ ಸದಸ್ಯರಿಂದ ಭಾಷಣವು ಪರಿಷ್ಕರಿಸಲ್ಪಟ್ಟಿದೆ.

(ಸದನವು ಪುನಃ ಮಧ್ಯಾಹ್ನ 3 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತ್ತು
ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯ ಅವರು ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ತುಕಾರಾಮ್.ಈ (ಸಂಡೂರು): ಸನ್ಮಾನ್ಯ ಸಭಾಧ್ಯಕ್ಷರೆ, ನನಗೆ ಬೇಡಿಕೆಗಳ ಮೇಲೆ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಬೇಡಿಕೆಗಳ ಮೇಲೆ ಅನೇಕ ನಮ್ಮ ನಾಯಕರು ಮತ್ತು ಅನೇಕ ನಮ್ಮ ಶಾಸಕ ಮಿತ್ರರು ಇವತ್ತು ಬೆಳಕನ್ನು ಚೆಲ್ಲಿದ್ದಾರೆ. ಈ ನಿಟ್ಟಿನಲ್ಲಿ ನಾನು ನನ್ನ ಕ್ಷೇತ್ರದ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕೆ ಇಷ್ಟಪಡುತ್ತೇನೆ. ನಂಜುಂಡಪ್ಪ ವರದಿ ಪ್ರಕಾರ ನನ್ನ ಕ್ಷೇತ್ರ ಬಹಳ ಹಿಂದುಳಿದ ಕ್ಷೇತ್ರವಾಗಿದೆ. ಈ ನಿಟ್ಟಿನಲ್ಲಿ ಇವತ್ತಿನ ದಿವಸ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದೇವೆ. ಬಹಳ ಮುಖ್ಯವಾಗಿ ನಮ್ಮಲ್ಲಿ ರಸ್ತೆಗಳು ಇರಬಹುದು, ವೈದ್ಯರ ಕೊರತೆ ಇರಬಹುದು, ಶಿಕ್ಷಕರ ಕೊರತೆ ಇರಬಹುದು, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅನೇಕ ಸಿಬ್ಬಂದಿ ಕೊರತೆಯನ್ನು ನಾವು ಅನುಭವಿಸುತ್ತಿದ್ದೇವೆ. ಮುಖ್ಯವಾಗಿ ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ಆಡಳಿತ ಆರೋಗ್ಯಕರವಾಗಿ ಇರಬೇಕು, ಫಲಪ್ರದವಾಗಿ ಇರಬೇಕೆಂದು ಹೇಳಿದರೆ, ಮೊದಲನೆಯದಾಗಿ, ಸುಗಮ ಆಡಳಿತಕ್ಕೆ ಬೇಕಾಗಿರುವಂಥ ಮೂಲಭೂತ ಸೌಕರ್ಯ ಒದಗಿಸಬೇಕಾಗಿದೆ. ಅದನ್ನು ಸರ್ಕಾರ ಬಹಳ ಪ್ರಾಧಾನ್ಯತೆಗೆ ತೆಗೆದುಕೊಳ್ಳಬೇಕಾಗಿದೆ. ಇವತ್ತಿನ ದಿನ ನಾವು ಎಲ್ಲೋ ಒಂದು ಕಡೆ ಎಡವುತ್ತಿದ್ದೇವೆಂದು ಕಾಣಿಸುತ್ತಿದೆ. ನಿಜವಾಗಿಯೂ ನಾವು ಒಳ್ಳೆಯ ರಾಷ್ಟ್ರ ಕಟ್ಟಬೇಕು, ಒಳ್ಳೆಯ ನಾಡನ್ನು ಕಟ್ಟಬೇಕು, ಸಮಾಜಕ್ಕೆ ಏನಾದರೊಂದು ಬಲವಾದ ಶಕ್ತಿ ಕೊಡಬೇಕೆಂದರೆ ಅದು ಶಿಕ್ಷಣದಿಂದ ಮಾತ್ರ. ಇವತ್ತು ನಾವು ಗಮನಿಸುತ್ತಿರಬಹುದು, ಸುಮಾರು ನನ್ನ ಕ್ಷೇತ್ರದಲ್ಲಿ ಕೇವಲ ಇವತ್ತಿಗೂ 40% ಮಾತ್ರ ನಾನು ಇರುವುದಕ್ಕಿಂತ ಹೆಚ್ಚಿಗೆ ಹೇಳುತ್ತಿದ್ದೇನೆ, 35 ರಿಂದ 40% ಮಾತ್ರ ಶಿಕ್ಷಣವನ್ನು ಪಡೆದಿದ್ದಾರೆ. ಸ್ವಾತಂತ್ರ್ಯ ಬಂದು 64 ವರ್ಷಗಳಾಗಿದೆ. ಸುಮಾರು 60% ಜನ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇದಕ್ಕೆ ಮೂಲ ಕಾರಣವೇನೆಂದರೆ ನಮ್ಮ ಸರ್ಕಾರದ ಕಳಕಳಿ ಏನಿದೆ, ಅದರಲ್ಲಿ ನಾವು ಕುಂಠಿತವಾಗುತ್ತಿದ್ದೇವೆ. ನಿಜವಾಗಿಯೂ ಹೇಳಬೇಕೆಂದರೆ ಮೊನ್ನೆ ಒಂದು ಸಮಿತಿ ಸಭೆಯಲ್ಲಿ ಹೇಳಿದ್ದೇನೆ. ಉದಾಹರಣೆಗೆ ಹೇಳಬೇಕೆಂದರೆ ನಾನು M.Com ಮಾಡಿಕೊಂಡು PG Diploma in Business Administration & Finance ಅನ್ನು 1992ರಲ್ಲಿ ಮುಗಿಸಿದ್ದೇನೆ. ಯಶವಂತನಗರ ವಿಲೇಜ್‌ನಲ್ಲಿ 20 ವರ್ಷಗಳಾದರೂ ಒಬ್ಬ ಮಾಸ್ಟರ್ ಡಿಗ್ರಿ ಮಾಡಿರುವಂಥ ಒಬ್ಬ ವ್ಯಕ್ತಿ ಇಲ್ಲ. ನಾನು ವಾಲ್ಮೀಕಿ ಜನಾಂಗದಲ್ಲಿ ಇದ್ದೇನೆ. ಒಬ್ಬರೂ ಕೂಡಾ ಇಲ್ಲ. ಕಾರಣವೇನೆಂದರೆ ನಮ್ಮ ಈ ರೀತಿಯ ವ್ಯವಸ್ಥೆ ತನ್ನ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದೆ. ಈ ರೀತಿಯಾದರೆ ನಾವು ಯಾವಾಗ ನಾಡನ್ನು ಕಟ್ಟುವುದಕ್ಕೆ

ಸಾಧ್ಯವಾಗುತ್ತದೆ? ಇವತ್ತಿನ ದಿನ ಲಕ್ಷ ಕೋಟಿಗಳ ಬಜೆಟ್ ಮಂಡನೆ ಮಾಡಿದ್ದಾರೆ. ಶಿಕ್ಷಣ ಇಲಾಖೆಯ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಏಕೆಂದರೆ ನನಗೆ ಸಿಕ್ಕಿದಂಥ ಶಿಕ್ಷಣ ಇವತ್ತು ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಸಿಗಬೇಕಾಗಿತ್ತು. ನಿಜವಾಗಿಯೂ ಒಬ್ಬ ಬಡ ರೈತ ತನ್ನ ಮಗನಿಗೆ ಶಿಕ್ಷಣ ಕೊಡುವುದಕ್ಕೆ ಆಗುತ್ತಿಲ್ಲ. ಇವತ್ತಿನ ದಿನ ಇಂಥದೊಂದು ಸ್ಥಿತಿಗೆ ಬರುತ್ತಿದ್ದಾರೆ. ನಿಜವಾಗಿಯೂ ಹೇಳುತ್ತಿದ್ದೇನೆ, ಎಸ್.ಎಸ್.ಎಲ್.ಸಿ. ಮಾಡಿದವನಿಗೆ ಸಂಪೂರ್ಣ A,B,C,D ಬರೆಯುವುದಕ್ಕೆ ಆಗುತ್ತಿಲ್ಲ. ಇಂಥ ಒಂದು quality of education ಇವತ್ತು ಕಡಿಮೆಯಾಗುತ್ತಿದೆ. ಇದನ್ನು ಸರ್ಕಾರ ಗಮನಿಸಬೇಕು, ಅನೇಕ ನಿಯಮಾವಳಿಗಳ ಪ್ರಕಾರ ಸರ್ಕಾರವನ್ನು ಇವತ್ತು ಕೇಳಿಕೊಂಡಿದ್ದೇವೆ. ಬಹು ಮುಖ್ಯವಾಗಿ ಶಿಕ್ಷಕರ ಕೊರತೆಯನ್ನು ನೀಗಿಸಬೇಕು. ಈಗಾಗಲೇ ಸರ್ಕಾರ ಭರವಸೆ ಕೊಟ್ಟಿದ್ದಾರೆ. ಅದನ್ನು ಪೂರ್ತಿ ಮಾಡಿಕೊಡಬೇಕು. ಕೂಡಲೇ ಒದಗಿಸಿದರೆ, ವಿದ್ಯಾರ್ಥಿಗಳು ಒಂದು ಆದರ್ಶ ಸತ್ಪ್ರಜೆಯಾಗಿ ಒಂದು asset ಆಗುತ್ತಾರೆ. ಈ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಜೊತೆಗೆ 1 ಲಕ್ಷ ಕೋಟಿಗಳ ಬಜೆಟ್ ಮಂಡನೆ ಮಾಡಿದ್ದಾರೆ. ಸುಮಾರು ನನ್ನ ಕ್ಷೇತ್ರದಲ್ಲಿ RDPR ವ್ಯಾಪ್ತಿಯ 21 ಗ್ರಾಮಪಂಚಾಯತಿಗಳಿವೆ, ಕೇವಲ 7 ಜನ ಪಿ.ಡಿ.ಓ.ಗಳು ಮಾತ್ರ ಇದ್ದಾರೆ, 14 ಜನ ಪಿ.ಡಿ.ಓ. ಹುದ್ದೆಗಳು shortage ಇದ್ದಾರೆ, ಇಂಜಿನಿಯರ್‌ಗಳು 3 ಜನ shortage ಇದ್ದಾರೆ. ಈ ರೀತಿಯಾದರೆ implementation ಮಾಡಲು ಹೇಗೆ ಆಗುತ್ತದೆ? ನಮ್ಮಲ್ಲಿ ಇರಬಹುದು, ಆದರೆ ಅದನ್ನು ಕಾರ್ಯರೂಪಕ್ಕೆ ತರುವ ವ್ಯವಸ್ಥೆ ಸರಿಯಿಲ್ಲ ಎಂದ ಮೇಲೆ ತೆಗೆದುಕೊಂಡು ಏನು ಮಾಡಬೇಕು? ಇದರ ಬಗ್ಗೆ ಸೂಕ್ಷ್ಮವಾಗಿ ಗಮನ ಹರಿಸಬೇಕು, ಒಬ್ಬ ತಹಶೀಲ್ದಾರ್ ಕೂಡಾ ಇಲ್ಲ. ಸರ್ಕಾರದಲ್ಲಿ ಕೇಳಿಕೊಳ್ಳುವುದು ರಾಜ್ಯದಲ್ಲಿ ಎಲ್ಲಿ ತಹಶೀಲ್ದಾರರುಗಳಿಲ್ಲ, ಎಲ್ಲಿ ಶಿರಸ್ತೇದಾರರುಗಳಿಲ್ಲ, ಎಲ್ಲಿ E.O. ಗಳಿಲ್ಲ. ಇಂಥ ಸಿಬ್ಬಂದಿಗಳ ಕೊರತೆಯನ್ನು ಹೋಗಲಾಡಿಸಲು ಸರ್ಕಾರ ಕೂಡಲೇ appoint ಮಾಡಬೇಕು. ಈ ನಿಟ್ಟಿನಲ್ಲಿ ಸುಮಾರು 100 ಬೆಡ್ ಆಸ್ಪತ್ರೆ, 2011 ರಲ್ಲಿ ಉದ್ಘಾಟನೆ ಆಗಿದೆ. ಇವತ್ತಿನವರೆಗೂ 100 ಬೆಡ್ ಆಸ್ಪತ್ರೆ ಓಪನ್ ಆಗಿ, ಒಬ್ಬೇ ಒಬ್ಬ ಡಾಕ್ಟರನ್ನು ಕೊಟ್ಟಿದ್ದಾರೆ. X-ray equipments, total blood equipments ಇತ್ಯಾದಿ ಎಲ್ಲಾ equipment ಗಳು ಬಂದು ಆಸ್ಪತ್ರೆಯಲ್ಲಿ ಬಿದ್ದಿದೆ, ಆದರೆ operate ಮಾಡುವವರು ಇಲ್ಲದೇ 100– Bed Hospital infrastructure total collapse ಆಗುತ್ತಿದೆ. ನಾವು ಎಲ್ಲಿಗೆ ಹೋಗುತ್ತಿದ್ದೇವೆ? ಇವತ್ತು ಇಂಥ ಬರಗಾಲ ಬಂದಿದೆ, ಇದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಇವತ್ತು 100 ರೂ. ಸಿಗುವುದು ಕೂಡಾ ಕಷ್ಟವಾಗುತ್ತಿದೆ. ಸರಿಯಾದ ವೈದ್ಯಕೀಯ ಸೌಲಭ್ಯ ಕೊಟ್ಟಿಲ್ಲವೆಂದರೆ ಹಳ್ಳಿಗಳಿಗೆ ಇವತ್ತಿನ

ದಿನ ಸರಿಯಾದ ಆರೋಗ್ಯ ಕೂಡಾ ಸಿಗುವುದಿಲ್ಲ. Private ಆಸ್ಪತ್ರೆಗಳಿಗೆ ರೂ.300, ರೂ.400 ಕೊಡುವುದಕ್ಕೆ ಆಗುತ್ತಿಲ್ಲ. ಯಾರ ಮೇಲೆ ಇದು ಪರಿಣಾಮ ಬೀರುತ್ತಿದೆ. ನಮ್ಮ ರಾಷ್ಟ್ರ ಬಡವರ ರಾಷ್ಟ್ರ, ನಾವೆಲ್ಲರೂ ಅಧಿಕಾರಿಗಳು, ಪ್ರಜಾಪ್ರಭುತ್ವ ಅಸ್ತಿತ್ವದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಲ್ಲರೂ ಗಮನಿಸಬೇಕಾಗಿದೆ. ಇವತ್ತಿನ ದಿನ ನಾವು ಬಡ ಜನರಿಗೆ, ರೈತನಿಗೆ ಸರಿಯಾದ ಒಂದು ಮೂಲಭೂತ ಸೌಕರ್ಯಗಳನ್ನು ಕೊಟಿಲ್ಲವೆಂದರೆ ನಾವು ಆಡಳಿತ ಮಾಡುವುದರಲ್ಲಿ ಅರ್ಥವೇನಿದೆ? ಇದನ್ನು ಬಹಳ ಸೂಕ್ಷ್ಮವಾಗಿ ಗಮನಿಸಬೇಕು. ಎರಡನೆಯದಾಗಿ, ಅನೇಕ ಸಾರಿ ಕೆಲವೊಂದು ಬೇಡಿಕೆಗಳ ಬಗ್ಗೆ ಚರ್ಚೆ ಮಾಡಬೇಕಾದರೆ, ನನಗೆ ಬಹಳ ಬೇಜಾರಾಗುತ್ತಿದೆ, ಕುಡಿತಿನಿ ಎನ್ನುವ ಒಂದು ಗ್ರಾಮ ಪಂಚಾಯತಿ, ರಾಜ್ಯದಲ್ಲಿ ಕುಡಿಯುವ ನೀರಿಲ್ಲದೆ 2002ರಲ್ಲಿ ಸುಮಾರು 3 ಕೋಟಿ ರೂ.ಗಳ ವೆಚ್ಚದಲ್ಲಿ project ಪ್ರಾರಂಭ ಮಾಡಿದ್ದು, ಇವತ್ತು 2012, ಅಂದರೆ 10 ವರ್ಷಗಳಾಗಿದ್ದರೂ ಇವತ್ತಿಗೂ ಕೂಡಾ ನೀರು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಸುಮಾರು 6 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಳಪೆ ಕಾಮಗಾರಿಯಾಗಿದೆ. ಇನ್ನೂ ಒಂದು ಪೈಪ್‌ಲೈನ್ ಬೇರೆ ತರಬೇಕು ಎಂದು ಹೇಳುತ್ತಿದ್ದಾರೆ. ಇನ್ನೊಂದು 6 ಕೋಟಿ ರೂಪಾಯಿಗಳು ಬೇಕಾಗಬಹುದು, ಈ ರೀತಿಯ ದಾರಿ ತಪ್ಪಿಸುವ ಕೆಲಸ ಆಗುತ್ತಿದೆ ಎಂದರೆ ಇನ್ನು 100 ವರ್ಷವಾದರೂ ಖಂಡಿತವಾಗಿಯೂ ಈ ದೇಶಕ್ಕೆ ನಾವು ಕಂಡಂಥ. ಕನಸನ್ನು ಸಾಕಾರ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬೇಕಾಗುತ್ತದೆ. ಒಂದು ಕುಡಿಯುವ ನೀರಿನ ಯೋಜನೆಗೆ 10 ವರ್ಷ ಬೇಕೇ ನಮಗೆ? ಇದನ್ನು ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳಬೇಕು. ಮೊನ್ನೆ ಕೂಡಾ ಒಂದು ಕೆರೆ ಒಡೆದಿರುವುದನ್ನು ತೋರಿಸಿದ್ದೇವೆ. (ಈ ಹಂತದಲ್ಲಿ ಕೆರೆ ಹೊಡೆದಿರುವ ಛಾಯಾಚಿತ್ರವನ್ನು ಸದನದಲ್ಲಿ ತೋರಿಸಿದರು) ಇದು ಅಂಕುಬ್ನಾಳ ಕೆರೆ, 2010ರಲ್ಲಿ ಈ ಕೆರೆ ಒಡೆದಿದೆ, ರಾಜ್ಯದಲ್ಲಿ ಏನೇನಾಗುತ್ತಿದೆ ಎನ್ನುವುದಕ್ಕೆ ಉದಾಹರಣೆ ಅಷ್ಟೇ ಮಾನ್ಯ ಅಧ್ಯಕ್ಷರೆ, ಅಂಕುಬ್ನಾಳ ಕೆರೆ ಇದರ ಹಿಂದೆ ಸುಮಾರು 400 ಎಕರೆ ಪ್ರದೇಶಗಳಿಗೆ ನೀರಾವರಿ ನಡೆಯುತ್ತಿದೆ, ಜೊತೆಗೆ ಯಶವಂತನಗರ, ಸೋಮಲಾಪುರ, ಅಂಕುಬ್ನಾಳು ಮತ್ತು ಮಲ್ಲಾಪುರ ಗ್ರಾಮಗಳಿಗೆ ಸುಮಾರು 10 ಸಾವಿರ ಜನರಿಗೆ ಕುಡಿಯುವ ನೀರು ground water improve ಆಗಿ, ಕುಡಿಯುವ ನೀರಿಗೆ ಪಂಪುಸೆಟ್ಟುಗಳಿಗೆ ವ್ಯವಸ್ಥೆ ಆಗುತ್ತಿದೆ. ಸುಮಾರು 2 ವರ್ಷಗಳ ಕಾಲ ಕೇಳಿದರೂ ಇದರ ಬಗ್ಗೆ ಕಳಕಳಿ ಇಲ್ಲ, ಸುಮಾರು 4 ಕೋಟಿ ರೂಪಾಯಿಗಳು ಬೇಕಾಗಬಹುದು. ಇಂಥ ಒಂದು ವ್ಯವಸ್ಥೆ warfooting ನಲ್ಲಿ ಕೆಲಸ ಮಾಡಬೇಕಾಗಿರುವ ಕಡೆ ವಿಘ್ನ ಬಂದರೆ ನಾವು ಜನರಿಗೆ ಏನು ಉತ್ತರ ಹೇಳಬೇಕು?

ನಾವು ಎಲ್ಲಿಗೆ ಹೋಗುತ್ತಿದ್ದೇವೆ? ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಬೇಕು, ಮೊದಲನೆಯದಾಗಿ ಬೇಕಾಗಿರುವುದು ಮೂಲಭೂತವಾಗಿ ಕುಡಿಯುವ ನೀರಿನ ವ್ಯವಸ್ಥೆ, ಸರಿಯಾದ ಅಧಿಕಾರಿಗಳು ಕೆಲಸ ಮಾಡುವ ವ್ಯವಸ್ಥೆ, ಆ ಕೆಲಸವನ್ನು ಅನುಷ್ಠಾನ ಮಾಡುವ ವ್ಯವಸ್ಥೆ ಮಾಡಬೇಕಾಗಿದೆ. ಜೊತೆಗೆ ಇವತ್ತಿನ ದಿನ ಬರಗಾಲದ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇವೆ. ತಾವು ಬೇಡಿಕೆಗಳ ಬಗ್ಗೆ ಮಾತನಾಡಿ ಎಂದು ಹೇಳಿದ್ದೀರಿ, ಬಹು ಮುಖ್ಯವಾಗಿ ನಮ್ಮಲ್ಲಿ ಕೂಡಾ ಇವತ್ತು ಬರಗಾಲವಿದೆ. ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು. ಗುಡ್ಡಗಾಡು ಪ್ರದೇಶದಲ್ಲಿ ಹೇಳಬೇಕೆಂದರೆ ಸುಮಾರು 12 ರಿಂದ 13 ಪಂಚಾಯಿತಿಗಳಲ್ಲಿ fluoride contents ಕುಡಿಯುವ ನೀರಿನಲ್ಲಿ ಮಿಕ್ಸ್ ಆಗಿರುವ ವ್ಯವಸ್ಥೆ ಇದೆ. ಇವತ್ತು ಸುಮಾರು ಆಸ್ಪತ್ರೆಗಳು ಇಲ್ಲ. ಜೊತೆಗೆ ಶಿಕ್ಷಣ ಇಲ್ಲ. ಕುಡಿಯುವ ನೀರಿಗೂ ಈ ರೀತಿಯ ವ್ಯವಸ್ಥೆ ಇದೆ ಎಂದರೆ ಇನ್ನೆಷ್ಟು ವರ್ಷ ಬೇಕಾಗುತ್ತದೆ ಜನಗಳಿಗೆ ಉತ್ತಮ ವ್ಯವಸ್ಥೆ ಕೊಡುವುದಕ್ಕೆ? ಸರ್ಕಾರದಲ್ಲಿ ಕೇಳಿಕೊಳ್ಳುವುದಿಷ್ಟೇ, ಆಗಿರುವ ತಪ್ಪು ಆಗಿರಬಹುದು, ಮುಂದೆ ಏನು ಮಾಡಬೇಕು ಎನ್ನುವ ಬಗ್ಗೆ ನಾವೆಲ್ಲರೂ ಪಕ್ಷಾತೀತವಾಗಿ ಕುಳಿತುಕೊಂಡು ದೃಢ ನಿರ್ಧಾರಕ್ಕೆ ಬಂದು ಇದನ್ನೆಲ್ಲಾ ಕಷ್ಟಗಳನ್ನು end ಮಾಡಲಿಕ್ಕೆ ಎಲ್ಲರೂ ಒಂದಾಗಿ ಹೋದರೆ ಒಳ್ಳೆಯದಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡಬೇಕು. ಅದಕ್ಕೆ ಏನು support ಬೇಕೋ, ಇವತ್ತು ನಮ್ಮ ನಾಯಕರೂ ಸಹ ಅನೇಕ ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಅಭಿವೃದ್ಧಿ ಮಾಡುವುದಕ್ಕೆ majority ನಿಮ್ಮ ಸರ್ಕಾರ ಇದೆ, ಖಂಡಿತವಾಗಿಯೂ ಒಳ್ಳೆಯದಕ್ಕೆ ನಾವು support ಕೊಡುತ್ತೇವೆ. ನೀವು ನಿರ್ಭಯವಾಗಿ ಮುಂದೆ ಹೋಗಿ, ನಿಮಗೆ ಏನು ಬೇಕೋ ಮಾಡುತ್ತೇವೆ ಎಂದು ಹೇಳಿದರೂ ಸಹ, ಸರ್ಕಾರ ಬಂದು ಇವತ್ತು 4 ವರ್ಷವಾಗುತ್ತಾ ಬಂದರೂ ಸರಿಯಾದ ಒಂದು ನಿಟ್ಟಿನಲ್ಲಿ ಆಗುತ್ತಿಲ್ಲ. ನಾನು ಕೇಳುವುದಿಷ್ಟೇ, ವ್ಯವಸ್ಥಿತವಾದ ರೀತಿಯಲ್ಲಿ ಏನು ಒಂದು ನಾವು vision ಕಾಣಬೇಕಾಗಿತ್ತೋ ಈ ನಿಟ್ಟಿನಲ್ಲಿ ಕೆಲಸ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದೇನೆ. ಇವತ್ತಿನ ದಿನ ಬಹುಮುಖ್ಯವಾಗಿ ಮೀನುಗಾರರದ್ದು, ಬರಗಾಲ ಬಂದಿದೆ, ಇವತ್ತು ಏನಾಗಿದೆ ಎಂದರೆ ಮಳೆಗಾಲ ಇದ್ದರೂ ಎಲ್ಲಾ ಕೆರೆಗಳು ಬತ್ತಿ ಹೋಗಿವೆ. ಇದು ಬಹಳ ಮುಖ್ಯವಾದುದು. ಕಳೆದ ಬಾರಿ ಟೆಂಡರ್ ಕಾಮಗಾರಿ ಮುಗಿದು ಮೀನುಗಾರಿಕೆಗೆ ಅವಕಾಶ ಮಾಡಿಕೊಟ್ಟಿದ್ದರು. ಈಗ ಕೆರೆಗಳು ಬತ್ತಿ ಹೋಗಿರುವುದರಿಂದ ಮತ್ತೆ ಟೆಂಡರ್ ಮಾಡಲು ಯೋಚಿಸುತ್ತಿದ್ದಾರೆ. ಕಳೆದ ಬಾರಿ ಆಗಿರುವ ಟೆಂಡರನ್ನೇ ಮುಂದುವರೆಸಲು ಅವಕಾಶ ಮಾಡಿಕೊಡಬೇಕು. ನಾಳೆ ಕೂಡಾ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

2007ರಲ್ಲಿ ನೀಡಲಾಗಿರುವ Order copy ಬೇಕಾದರೆ ಕೊಡುತ್ತೇನೆ. ಮೊನ್ನೆ ಕೂಡಾ ಇಲಾಖೆ ಕಡೆಯಿಂದ ಹೋಗಿ ಅವರ ಮೇಲೆ ದೌರ್ಜನ್ಯ ಮಾಡುವಂತಹ ರೀತಿ ನಡೆದಿದೆ. ಹಿಂದೆ ಏನು ಅವರು ನಷ್ಟ ಅನುಭವಿಸಿದ್ದಾರೆ, ಅವರಿಗೆ ನ್ಯಾಯ ಕೊಟ್ಟು ಮುಂದಿನ ವರ್ಷಕ್ಕೆ ಮುಂದುವರೆಸಲು ಅವಕಾಶ ಮಾಡಿಕೊಡಬೇಕೆಂದು ಸರ್ಕಾರಕ್ಕೆ ನಾನು ಮನವಿ ಮಾಡುತ್ತೇನೆ. ಇವತ್ತಿನ ದಿನ NREGS ಕಾರ್ಯಕ್ರಮದಡಿ ಏಪ್ರಿಲ್ ತಿಂಗಳಿನಿಂದ ವಿಠಲಾಪುರ ಕೆರೆಯಲ್ಲಿ ಹೂಳು ತೆಗೆಯುವ ಕೆಲಸ ನಡೆಯುತ್ತಿದೆ. ಅಲ್ಲಿ ಕೇವಲ 25 ಜನರ ಕೂಲಿಗೆ ಮಾತ್ರ ಕೆಲಸ ಇರುವುದು. ಆದರೆ ಸುಮಾರು 65 ಜನರು ನಮಗೆ ಕೆಲಸ ಕೊಡಿ ಎಂದು ಹೋಗುತ್ತಿದ್ದಾರೆ. ಇಂತಹ ದುರಂತ ಸ್ಥಿತಿ ನಮ್ಮ ಕ್ಷೇತ್ರದಲ್ಲಿದೆ. ನಮ್ಮಲ್ಲಿ ಯೋಜನೆಗೆ approval ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಏಪ್ರಿಲ್‌ನಿಂದ ಜುಲೈವರೆಗೆ ಒಂದು ಕೆಲಸವನ್ನು ಪ್ರಾರಂಭ ಮಾಡಿಲ್ಲ. ನಾನು ಕೇಳಿಕೊಳ್ಳುವುದಿಷ್ಟೆ. ಸರ್ಕಾರ ಕೂಡಲೇ ಈ ಬರಗಾಲದಲ್ಲಿ ಕೂಲಿಗಾಗಿ ಕಾಳು ಇಂತಹ ಯೋಜನೆಗಳ ಮೂಲಕ ವ್ಯವಸ್ಥೆ ಮಾಡಿಕೊಟ್ಟರೆ ಜನರಿಗೆ ಅನುಕೂಲವಾಗುತ್ತದೆ. ಜೊತೆಗೆ ನನ್ನ ಕ್ಷೇತ್ರದಲ್ಲಿ ರಸ್ತೆಗಳು ಹದಗೆಟ್ಟಿದೆ. ಈ ಕುರಿತು ಮಾನ್ಯ ಉದಾಸಿ ಸಾಹೇಬರಿಗೆ ಮನವಿ ಮಾಡಿದ್ದೇವೆ. ಅವರು ಸ್ಪಂದಿಸಿ ಮಾಡಿಕೊಡುವುದಾಗಿ ಹೇಳಿದ್ದಾರೆ. Financial year ಪ್ರಸಕ್ತ 2012-13ನೇ ಸಾಲಿನಲ್ಲಿ ಮಾಡಿಕೊಡಿ ಎಂದು ಮನವಿ ಮಾಡುತ್ತಾ, ಮೊದಲನೆಯದಾಗಿ ನಮ್ಮ ಸಮಾಜಕ್ಕೆ ಬೇಕಾಗಿರುವುದು ಶಿಕ್ಷಣ. Academic year ಪ್ರಾರಂಭವಾಗುತ್ತಿದ್ದಂತೆಯೇ ಶಿಕ್ಷಕರ ನೇಮಕಾತಿ ಮಾಡಬೇಕಿತ್ತು. ಸುಮಾರು 3 ವರ್ಷಗಳಿಂದ ಮಾಡಿಲ್ಲ. ಮಾನ್ಯ ಸಚಿವರು ಈಗ ಭರವಸೆ ಕೊಟ್ಟಿದ್ದಾರೆ. ಅವರಲ್ಲಿ ಕಳಕಳಿಯ ಮನವಿ ಮಾಡುತ್ತೇನೆ. ದಯಮಾಡಿ ಮಾಡಿಕೊಡಿ. ಏಕೆಂದರೆ ನಾವು ಕ್ಷೇತ್ರಕ್ಕೆ ಹೋಗುವ ಪರಿಸ್ಥಿತಿ ಇಲ್ಲ. ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ಕಂದಾಯ ಇಲಾಖೆಗಳಲ್ಲಿ 50% ಸಿಬ್ಬಂದಿಗಳ ಕೊರತೆ ಇದೆ. ಹೀಗಾದರೆ implement ಹೇಗೆ ಮಾಡುವುದು? ಸರ್ಕಾರ ಇದನ್ನು ಮೊದಲ ಆದ್ಯತೆಯ ಮೇಲೆ ತೆಗೆದುಕೊಂಡು ಬರಗಾಲದ ತಾಲ್ಲೂಕುಗಳಲ್ಲಿ ತಹಶೀಲ್ದಾರರನ್ನು, ಶಿರಸ್ತೇದಾರರನ್ನು, ಪಿ.ಡಿ.ಓ.ಗಳನ್ನು ನೇಮಕ ಮಾಡಿ fulfilment ಮಾಡಿಕೊಡಬೇಕು. ಎಲ್ಲೆಲ್ಲಿ ಹಿಂದುಳಿದ ಪ್ರದೇಶಗಳಿವೆ, ಮತ್ತು ಎಲ್ಲೆಲ್ಲಿ ವೈದ್ಯಾಧಿಕಾರಿಗಳ ಕೊರತೆ ಇದೆ. ಮೊದಲ ಆದ್ಯತೆ ರೈತರಿಗೆ, ಬಡವರಿಗೆ ಒಳ್ಳೆಯ ಆರೋಗ್ಯ ಕೊಡಬೇಕೆಂದರೆ, ವೈದ್ಯಾಧಿಕಾರಿಗಳ ನೇಮಕಾತಿಯನ್ನು ಮೊದಲ ಆದ್ಯತೆಯಲ್ಲಿ ಮಾಡಿ ಹಳ್ಳಿಗಳಲ್ಲಿ ವೈದ್ಯಕೀಯ ಸೌಲಭ್ಯ ಕೊಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ನಾನು ಗಂಭೀರವಾದ ವಿಚಾರವನ್ನು ಹೇಳುತ್ತಿದ್ದೇನೆ. ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆ ಹೆಚ್ಚಾಗಿ ಕಂಡುಬರುತ್ತಿದ್ದು,

7-8 ನೇ ತರಗತಿಯಲ್ಲಿ ಓದುವ ಮಕ್ಕಳು 1 ಕಿ.ಮೀ.ಎದ್ದು ನಡೆಯದಂತಹ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಹೀಗೆ ಮುಂದುವರೆದರೆ ನಾವು ನಮ್ಮ ಮುಂದಿನ ಪೀಳಿಗೆಯನ್ನು ದುರಂತಕ್ಕೆ ಈಡು ಮಾಡುತ್ತೇವೆ. ಮೊನ್ನೆ ದಿನವೂ ಕೂಡಾ ಮಂತ್ರಿಗಳಾದ ಅಪ್ಪಚ್ಚು ರಂಜನ್ ರವರನ್ನು ಕೇಳಿಕೊಂಡಿದ್ದೆ. ಅವರು ಒಳ್ಳೆಯ ಮಂತ್ರಿಗಳು. ಮುಂದಿನ ಯುವ ಪೀಳಿಗೆ, ಯುವ ಶಕ್ತಿಗೆ ಬೇಕಾದ ರೂಪುರೇಷೆಗಳನ್ನು ತಾವು ಮಾಡಬೇಕು. ಮುಂದಿನ ದೇಶದ ಭವಿಷ್ಯವನ್ನು ರೂಪಿಸುವುದಕ್ಕಾಗಿ ಇದನ್ನು challenging ಆಗಿ ತೆಗೆದುಕೊಂಡು ಇರುವ 10 ತಿಂಗಳ ಅವಧಿಯನ್ನು ಸದುಪಯೋಗ ಮಾಡಿಕೊಂಡು 10 ವರ್ಷಗಳ ಕೆಲಸವನ್ನು ಮಾಡಬೇಕು. ಅದನ್ನು ನೀವು ಮಾಡಿ ತೋರಿಸುತ್ತೀರೆಂದು ನಾವು ನಂಬಿದ್ದೇವೆ. ಇಂದಿನ ಮಕ್ಕಳು physically unfit ಇದ್ದಾರೆ. ಅವರನ್ನು strengthen ಮಾಡಿದರೆ ಮಾತ್ರ ಅವರಿಗೆ ಒಳ್ಳೆಯ ಮೌಲ್ಯಾಧಾರಿತ ಶಿಕ್ಷಣ ದೊರೆತು, ಜೀವನದಲ್ಲಿ ಮುಂದೆ ಧೈರ್ಯವಾಗಿ ಬದುಕಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಇಲಾಖೆ-ಇಲಾಖೆಗಳ ನಡುವೆ lack of co-ordination ಇದೆ. ಒಂದಕ್ಕೊಂದು "ನಾನೊಂದು ತೀರ, ನೀನೊಂದು ತೀರ" ಎಂದು ನಡೆಯುತ್ತಿದೆ. ಇದನ್ನು avoid ಮಾಡಿಕೊಳ್ಳಬೇಕು. ಎಲ್ಲಾ ಇಲಾಖೆಗಳಿಗೂ inter links ಇರುತ್ತದೆ. ಒಂದು team work ಮಾಡಿದಾಗ ಮಾತ್ರ ನಮ್ಮ ಗುರಿ ಮುಟ್ಟಲು ಸಾಧ್ಯವಾಗುತ್ತದೆ. Revenue ಮತ್ತು Forest Department ಗಳಿಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, Forest Department ನವರು ನಮಗೆ ಸಂಬಂಧವಿಲ್ಲ ಎನ್ನುತ್ತಾರೆ. ಕಳೆದ ಬಾರಿಯ ಅಧಿವೇಶನದಲ್ಲಿಯೂ ಕೂಡಾ ರೈತರನ್ನು ಒಕ್ಕಲೆಬ್ಬಿಸುತ್ತಿರುವ ವಿಷಯವನ್ನು ತಮ್ಮ ಗಮನಕ್ಕೆ ತಂದಿದೆ ಮಾನ್ಯ ಅಧ್ಯಕ್ಷರೆ. ಇಂದು ಕಿಮ್ಮನೆ ರತ್ನಾಕರ್‌ರವರು ಕೂಡಾ ಅದರ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ನಮ್ಮ ಕ್ಷೇತ್ರದಲ್ಲಿ unreserved villages ಬಹಳಷ್ಟಿದೆ. Joint survey ಮಾಡಿ ತಕ್ಷಣವೇ ರೈತರ revenue land ಯಾವುದು forest land ಯಾವುದು ಎಂದು separate ಮಾಡಿಕೊಡಬೇಕೆಂದು ಹೇಳುತ್ತಾ ವಿಠಲಾಪುರ, ರಾಮಸಾಗರ ಮೆಟ್ರಿಕ್ಕಿ, ಹುಲಿಕುಂಟೆ ಗ್ರಾಮಗಳಲ್ಲಿ ಮಾಡಬೇಕೆಂದು ತಾವು ಅಂದು ಆದೇಶ ಮಾಡಿದಿರಿ. ಆದರೆ ತಮ್ಮ ಆದೇಶವನ್ನು Forest Department ನವರು ಧಿಕ್ಕರಿಸಿದ್ದಾರೆ. Forest Departmentನ ಶಂಕರ್ ಎನ್ನುವವರು , ನಿಜವಾಗಿಯೂ ನಾನು ಈ ವಿಷಯವಾಗಿ privilege move ಮಾಡಬೇಕಾಗಿತ್ತು. ಏನ್ರಿ ಇಂತಹದನ್ನು ಮಾಡಲಾಗುವುದಿಲ್ಲವೇ ಎಂದರೆ,...

ಶ್ರೀ ಅಪ್ಪಚ್ಚುರಂಜನ್ (ಯುವಜನ ಸೇವೆ ಮತ್ತು ಕ್ರೀಡಾ ಸಚಿವರು): ಒಂದು ನಿಮಿಷ ಮಾನ್ಯ ಅಧ್ಯಕ್ಷರೆ, ಈಗಾಗಲೇ youth policy ಯನ್ನು ಸಮಗ್ರವಾಗಿ change ಮಾಡಬೇಕೆಂದು

ಚರ್ಚೆಯಾಗಿದೆ. ಅದರ ಜೊತೆಗೆ ನಾನು ಎಲ್ಲಾ ಶಾಸಕರಿಗೂ ಕೂಡಾ ಪತ್ರಗಳನ್ನು ಬರೆದಿದ್ದೇನೆ. ಅವರ ಸಲಹೆಗಳನ್ನು ಆದಷ್ಟು ಬೇಗ ಕಳುಹಿಸಿದರೆ ಬಹಳ ಉತ್ತಮ ಎಂದು ತಮ್ಮ ಮುಖಾಂತರ ಹೇಳಲಿಚ್ಛಿಸುತ್ತೇನೆ.

ಶ್ರೀ ಯು.ಟಿ. ಖಾದರ್: ನಮಗೆ ಸಮಯವನ್ನು ಕೊಟ್ರೆ ಯುವ ನೀತಿಯಲ್ಲಿ ಏನು ಬದಲಾವಣೆ ಮಾಡಬೇಕೆಂದು ನಾವು ಹೇಳುತ್ತೇವೆ.

ಶ್ರೀ ಅಪ್ಪಚ್ಚು ರಂಜನ್:– ನೋಡಿ draft ಕೊಡಲು ಬರುವುದಿಲ್ಲ. Final ಹಂತದಲ್ಲಿ ಬರುವಂತಹದು. ತಾವು ತಮ್ಮ ಸಲಹೆಗಳನ್ನು ಕಳುಹಿಸಿಕೊಡಿ. ಅದನ್ನು ಚರ್ಚೆ ಮಾಡಿ ಅದನ್ನು ಏನು improve ಮಾಡಬೇಕು.. ಅದನ್ನು ಮಾಡೋಣ. ನೀವು search ಮಾಡಬೇಕು. yo have to search. ನಾನು ಈಗ ಏನು ಮಾಡಿದ್ದೇನೆ? ಎಲ್ಲಾ ರಾಜ್ಯದ ಮೂಲೆ ಮೂಲೆಯಿಂದ ತರಿಸುವಂತಹ ವ್ಯವಸ್ಥೆ ಮಾಡಿದ್ದೇನೆ. ಹೊರದೇಶದಲ್ಲಿ ಯುವನೀತಿ ಯಾವ ರೀತಿ ಇದೆ ಎನ್ನುವುದನ್ನು ತಿಳಿದುಕೊಳ್ಳುವಂತಹ ವ್ಯವಸ್ಥೆ ಮಾಡಿದ್ದೇನೆ. ತಮ್ಮ ವಿಚಾರವನ್ನು ಅದರಲ್ಲಿ include ಮಾಡಲು ತಾವೂ ಕೂಡಾ ಯುವನೀತಿ ಯಾವರೀತಿ ತರಬಹುದು, ಹೊರರಾಜ್ಯದಲ್ಲಿ, ಹೊರದೇಶದಲ್ಲಿ ಹೇಗಿದೆ, ನಿಮ್ಮ self-experience ಹೇಗಿದೆ ಎಂಬುದನ್ನು ಕೊಟ್ಟರೆ ಒಳ್ಳೆಯದು. ನಾವು ಕೊಟ್ಟದ್ದನ್ನು ನೀವು change ಮಾಡುವುದರಲ್ಲಿ ಅರ್ಥವೇನಿದೆ? ನೀವು search ಮಾಡಬೇಕಾಗುತ್ತದೆ. Internet ವ್ಯವಸ್ಥೆ ಇದೆ, search ಮಾಡಿ ನನಗೆ ಕೊಡಿ.

ಶ್ರೀ ಈ. ತುಕಾರಾಂ: ನಾವೆಲ್ಲಾ ಇದರ ಕುರಿತು ಚರ್ಚೆ ಮಾಡಿದ್ದೇವೆ. ನಮ್ಮ vision ಏನಿದೆ, ಮುಂದಿನ ಪೀಳಿಗೆಗೆ ಏನೇನು ಮಾಡಬೇಕೆಂಬ ಬಗ್ಗೆಯೂ ನಾವೆಲ್ಲಾ ಸಲಹೆ ಸೂಚನೆ ಕೊಡುತ್ತೇವೆಂದು ಹೇಳಿದ್ದೇವೆ. ನಮಗೇನು ಸಾರ್, ನಾವು ಕೊಟ್ಟಿರುವ ಸಲಹೆ ಸೂಚನೆಗಳನ್ನು ದಯಮಾಡಿ implementation ಮಾಡಿ. ನಮಗೇನು result ಬರಬೇಕಷ್ಟೆ

ಮಾನ್ಯ ಅಧ್ಯಕ್ಷರೆ, ನಮ್ಮ ವ್ಯವಸ್ಥೆಯಲ್ಲಿ ಇವತ್ತಿನ ದಿನ ಸಮಾಜವನ್ನು ಹಾದಿ ತಪ್ಪಿಸುವ ಕೆಲಸವಾಗುತ್ತಿದೆ. Forest Department ನಲ್ಲಿರುವ ಶಂಕರ್ ಎನ್ನುವವರು ಒಂದು ಬೇರೆ ಅರ್ಥದಲ್ಲಿ ಹೇಳಿದರು. ಈ ಕೆಲಸ 1979–80ರಲ್ಲಿ ಎಂ.ವೈ. ಘೋರ್ಪಡೆಯವರು ಮಾಡಬೇಕಿತ್ತು. ಅವರು ಏಕೆ ಮಾಡಲಿಲ್ಲವೆಂದರು. ಈ ತರಹದ ದುರ್ವರ್ತನೆ ಸರಿಯಲ್ಲ. ಇಡೀ ವಿಧಾನಸೌಧಕ್ಕೆ ಒಂದು ಇತಿಹಾಸ ತರುವಂತಹ ವ್ಯಕ್ತಿಗಳು ತಮ್ಮದೇ ನಿಟ್ಟಿನಲ್ಲಿ ಸಂವಿಧಾನಕ್ಕೆ ಒಂದು ಕಳೆಯನ್ನು ಕೊಟ್ಟಿದ್ದಾರೆ. ಅಂಹ ವ್ಯಕ್ತಿಯ ಬಗ್ಗೆ ಅವರು ತಮ್ಮ

ಲೋಪವನ್ನು ಇಟ್ಟುಕೊಂಡು ಮಾತನಾಡುವುದು ಅಸಮಂಜಸ. ಅಧಿಕಾರಿಗಳು ಹೀಗೆ ಮಾತನಾಡಬಾರದು. ಇವತ್ತು ಚಿಕ್ಕಣ್ಣನವರು ಕೂಡಾ ತಾವು ಗಮನಿಸಿರಬಹುದು. ಅವರ ಬಗ್ಗೆಯೂ ನಮಗೆ ಗೌರವ ಇರುತ್ತದೆ. ಅವರೂ ಕೂಡಾ ಒಂದು ಕಣ್ಣು, ನಾವೂ ಕೂಡ ಒಂದು ಕಣ್ಣು. ಎರಡೂ ಕಣ್ಣುಗಳು ಸಮಾಜವನ್ನು ಒಂದು ದೃಷ್ಟಿಯಿಂದ ನೋಡಬೇಕು. ಇದೇ ರೀತಿ ಅವರದು ಒಂದು ಹೆಜ್ಜೆಯಾದರೆ, ನಮ್ಮದು ಒಂದು ಹೆಜ್ಜೆ. ಎರಡೂ ರೀತಿಯಲ್ಲಿ ಹೋದಾಗ ಮಾತ್ರ ನಾವು ಕಂಡ ಕನಸನ್ನು ನನಸು ಮಾಡಲು ಸಾಧ್ಯವಾಗುತ್ತದೆ. ಆ ಒಂದು ವಾತಾವರಣವನ್ನು ಸರ್ಕಾರ ಅವರಿಗೆ ಮಾರ್ಗದರ್ಶನ ಹೋಗಬೇಕು. ಎಲ್ಲರೂ ಒಂದು Family team ಆಗಿ ಹೋದಾಗ ಮಾತ್ರ ನಮ್ಮೆಲ್ಲರ ಉದ್ದೇಶ ಸಫಲವಾಗುತ್ತದೆ. ಈ ರೀತಿ ಒಂದು ಆಡಳಿತ ಬಂದಾಗ ಮಾತ್ರ ನಮ್ಮ ಕನಸು ನನಸು ಮಾಡಲು ಸಾಧ್ಯವಾಗುತ್ತದೆ. ಜೊತೆಗೆ ಇವತ್ತು ಅನೇಕ ವಿಷಯಗಳನ್ನು ನಾವು ಗಮನಿಸಿದ್ದೇವೆ. ಬಹಳ ಮುಖ್ಯವಾಗಿ ಇವತ್ತಿನ ದಿನ ನಾವು ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ, ಅವು ಸರಿಯಾಗಿ ಆಗುತ್ತಿಲ್ಲ. ಮುಂದಿನ ದಿನಗಳಲ್ಲಿ ಒಂದು ಸದೃಢ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಸರ್ಕಾರ ಹೋಗಬೇಕು. ಅನೇಕ ಇಲಾಖೆಗಳಲ್ಲಿ District Officers ಮಾತ್ರ ಇರುತ್ತಿದ್ದಾರೆ. ತಾಲ್ಲೂಕು ಮಟ್ಟದ ಕಛೇರಿಗಳಿಗೆ ಹೋದರೆ ಸಾರ್ವಜನಿಕರಿಗೆ ಸರಿಯಾದಂತಹ ಸ್ಪಂದನೆ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ಇವತ್ತೇನು ಹಿರಿಯರು ಗಮನಿಸಿದ್ದಾರೋ, ಅದನ್ನೆಲ್ಲಾ ಸರ್ಕಾರ ಮಾಡಿಕೊಡಲಿಕ್ಕೆ ಬದ್ಧರಾಗಬೇಕು. ಮುಂದಿನ ದಿನಗಳಲ್ಲಿ ಒಳ್ಳೆಯದಾಗಲಿ ಎಂದು ಆಶಿಸುತ್ತಾ, ಇಷ್ಟು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಂತಹ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಈಗ 4 ಗಂಟೆಯಾಗಿದೆ. ದಯವಿಟ್ಟು ಈಗಲೇ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಿ. ನಿನ್ನೆ ರಾತ್ರಿ ಚರ್ಚಿಸಲು ಅವಕಾಶ ಸಿಗಲಿಲ್ಲ.

ಅಧ್ಯಕ್ಷರು:– ಈ ಚರ್ಚೆ ಕೂಡ ಮುಗಿಯಬೇಕಲ್ಲವೆ? ಇದು ಮುಗಿದ ಮೇಲೆ ನಂತರ ಅವುಗಳನ್ನೂ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ:– ಈ ಚರ್ಚೆ ಮುಗಿದ ಮೇಲೆ ಅವಕಾಶ ಕೊಡುತ್ತೀರಲ್ಲವೆ? ಹಾಗಾದರೆ ಸರಿ.

ಶ್ರೀ ಯು.ಟಿ. ಖಾದರ್ (ಮಂಗಳೂರು):– ಮಾನ್ಯ ಸಭಾಧ್ಯಕ್ಷರೆ, ಅನುದಾನ ಬೇಡಿಕೆಗಳ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಯಾವುದೇ ಒಂದು ಸರ್ಕಾರವನ್ನು ಐದು ವರ್ಷಗಳ ಅವಧಿಗೆ ಮತ ಹಾಕಿ ಏತಕ್ಕಾಗಿ ಆರಿಸಿ ಕಳುಹಿಸುತ್ತಾರೆ ಎಂದರೆ, ನಾವು ಜನಪರವಾಗಿದ್ದು, ಜನರಿಗೆ ಬೇಕಾದಂತಹ ಅಥವಾ ಸಮಾಜದಲ್ಲಿರುವ ಕಟ್ಟಕಡೆಯ ವ್ಯಕ್ತಿಗೆ ಸ್ವಾಭಿಮಾನದ ಬದುಕು ನೀಡಲಿಕ್ಕೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಇವತ್ತು ಜನ ಸರ್ಕಾರಕ್ಕೆ ಮತ ಕೊಟ್ಟು ಆರಿಸಿ ಕಳುಹಿಸುತ್ತಾರೆ. ಅಂತಹ ಸಂದರ್ಭದಲ್ಲಿ ಕಳೆದ ನಾಲ್ಕು ವರ್ಷಗಳಾಯಿತು, ಬಹುಶಃ ಇದು last year 5ನೇ ವರ್ಷದಲ್ಲಿ ನಾವಿದ್ದೇವೆ. ಈ ವರ್ಷದಲ್ಲಿ ಸಲಹೆ/ಸೂಚನೆಗಳನ್ನು ಪಡೆದುಕೊಂಡು, ಐದನೇ ವರ್ಷದ ಯೋಜನೆಯಲ್ಲಿ ಸೇರಿಸಲಿಕ್ಕೆ ಬಹುಶಃ ಯಾರಿಂದಲೂ ಸಾಧ್ಯವಿಲ್ಲ. ಏಕೆಂದರೆ, ಈ session ಮುಗಿದು, ಮುಂದಿನ session ಬರುವುದರೊಳಗಾಗಿ election ಬರುವಂತಹ ಪರಿಸ್ಥಿತಿ ಇದೆ. ಇಷ್ಟರತನಕ ಮತ್ತು ಈಗ ಆಗಿರುವಂತಹ ಯೋಜನೆಗಳನ್ನು ಅನುಷ್ಠಾನಗೊಳಿಸುವಂತಹ ಕೆಲಸವನ್ನು ಇವತ್ತು ನಮ್ಮ ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛಿಸುತ್ತೇನೆ. ಕಳೆದ ನಾಲ್ಕೂವರೆ ವರ್ಷಗಳಿಂದ ನಾನು ನೋಡಿರುವಂತಹ ರೀತಿಯಲ್ಲಿ ಈ ಸರ್ಕಾರ ಜನಪರವಾಗಿರುವಂತಹ ಸರ್ಕಾರವಲ್ಲ, ಇದು ಜನ ವಿರೋಧಿಯಾಗಿರುವ ಸರ್ಕಾರವಾಗಿದೆ ಎಂದು ನಾನು ಹೇಳಲಿಚ್ಛಿಸುತ್ತೇನೆ. ಜನಪರವಾದಂತಹ ಯಾವುದೇ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾರದಂತಹ ಪರಿಸ್ಥಿತಿ ಈ ಸರ್ಕಾರದ್ದಾಗಿದೆ. ಸರ್ಕಾರ ಒಂದು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವಾಗ, ಒಂದು ಯೋಜನೆ ಯಾವ ರೀತಿ ಇರಬೇಕೆಂದರೆ, ಯಾರು ಒಂದು ಹೊತ್ತು ಊಟ ಮಾಡುತ್ತಿದ್ದಾನೋ, ಅವನು ಎರಡು ಹೊತ್ತು ಊಟ ಮಾಡುವಂತಾಗಬೇಕು. ಯಾರು ಎರಡು ಹೊತ್ತು ಊಟ ಮಾಡುತ್ತಿದ್ದಾನೋ, ಅವನು ಮೂರು ಹೊತ್ತು ಊಟ ಮಾಡುವಂತಾಗಬೇಕು. ಯಾರು ಮೂರು ಹೊತ್ತು ಊಟ ಮಾಡುತ್ತಿದ್ದಾನೋ, ಅವನು ಇನ್ನೊಬ್ಬನಿಗೆ ಊಟ ಕೊಡುವಂತಹ ಶಕ್ತಿ ಆ ಕಾರ್ಯಕ್ರಮದಿಂದ ಬರಬೇಕು. ಆ ಒಂದು ಯೋಜನೆ, ಕೇವಲ ಕೆಲವರಿಗೇ ಸೀಮಿತವಾಗಿರುವಂತಹ ಯೋಜನೆಯಾಗಬಾರದು. ಅದು ರಾಜ್ಯದಲ್ಲಿನ ಸಮಾಜದ ಎಲ್ಲಾ ವರ್ಗದವರಿಗೂ, ಜನ ಸಾಮಾನ್ಯರಿಗೂ ಆ ಒಂದು ಯೋಜನೆಯಿಂದ ಪ್ರೇರಣೆ ಸಿಗುವಂತೆ ಆಗುವಂತಹ ಅವಕಾಶ ಆಗಬೇಕು. ನಾನು ಇವತ್ತು ಈ ಸರ್ಕಾರವನ್ನು ಕೇಳುವುದೇನೆಂದರೆ, ಕಳೆದ ನಾಲ್ಕು ವರ್ಷಗಳಿಂದ ಈ

ರಾಜ್ಯದ ಉದ್ದಗಲಕ್ಕೂ ಸರ್ವರಿಗೂ ಪ್ರಯೋಜನವಾಗುವಂತಹ ಏನಾದರೂ ಒಂದೇ ಒಂದು ಯೋಜನೆ, ಈ ಸರ್ಕಾರ ಕೊಟ್ಟಿದೆಯೇ? ಎಂದು ಕೇಳಲಿಕ್ಕೆ ಇಚ್ಛಿಸುತ್ತೇನೆ. ಸರ್ವರಿಗೂ ಪ್ರಯೋಜನವಾಗುವಂತಹ ಒಂದೇ ಒಂದು ಯೋಜನೆ ಈ ಸರ್ಕಾರ ಮುಖಾಂತರ ಜಾರಿಯಾಗಲಿಲ್ಲ. ಇವತ್ತು ನಾವು ಸರ್ಕಾರಕ್ಕೆ ನೀವು ಏನು ಯೋಜನೆಗಳನ್ನು ಕೊಟ್ಟಿದ್ದೀರಿ ಎಂದು ಕೇಳಿದರೆ, ನಾವು ಸೈಕಲ್ ಕೊಟ್ಟಿದ್ದೇವೆ, ನಾವು ಭಾಗ್ಯಲಕ್ಷ್ಮಿ ಬಾಂಡ್ ಕೊಟ್ಟಿದ್ದೇವೆ, ನಾವು ಸ್ಯಾರಿ ಕೊಟ್ಟಿದ್ದೇವೆ ಎನ್ನುತ್ತಾರೆ. ಇನ್ನೂ ಏನು ಕೊಟ್ಟಿದ್ದೀರಿ ಎಂದರೆ, ಕೈಯಲ್ಲಿ ತಟ್ಟೆ ಕೊಡುತ್ತೇವೆ, ಅದರಲ್ಲಿ ಬೇಡಿ ಎನ್ನುವುದನ್ನು ಬಿಟ್ಟು ಬೇರೇನನ್ನೂ ಕೂಡ ಹೇಳುವುದಕ್ಕೆ ಈ ಸರ್ಕಾರ ಹೋಗುವುದಿಲ್ಲ. ಎಂದು ನಾನು ಹೇಳಲಿಚ್ಛಿಸುತ್ತೇನೆ, ಬಹುಶಃ ಎಲ್ಲರಿಗೂ ಅನುಕೂಲವಾಗುವಂತಹ ಒಂದೇ ಒಂದು ಕಾರ್ಯಕ್ರಮವನ್ನು ಈ ಸರ್ಕಾರ ಅನುಷ್ಠಾನಕ್ಕೆ ತರಲಿಲ್ಲ. ಇವತ್ತು ಯಾರು ಐದು ಸೆಂಟ್ಸ್ ಜಾಗದ ಆಶ್ರಯ ಮನೆಯಲ್ಲಿ ವಾಸಿಸುತ್ತಿದ್ದಾನೋ, ಅವನಿಗೆ ಬೇಕಾದಂತಹ ಸೌಕರ್ಯಗಳನ್ನು ಕಲ್ಪಿಸುವಂತಹ ಅವಕಾಶ ಈ ಸರ್ಕಾರದಿಂದ ಆಗಬೇಕಾಗಿತ್ತು. ಕಳೆದ ನಾಲ್ಕು ವರ್ಷಗಳಲ್ಲಿ ಸರಿಯಾಗಿ ಒಂದೇ ಒಂದು ಮನೆಯನ್ನು ಬಡವರಿಗೆ ಕೊಡುವಂತಹ ಕೆಲಸ ನಮ್ಮಿಂದಾಗಲಿಲ್ಲ. ಸರ್ಕಾರದ ಜಾಗದಲ್ಲಿ ಈಗಾಗಲೇ ಇರುವವರಿಗೆ ಒಂದೇ ಒಂದು ಹಕ್ಕುಪತ್ರ ಕೊಡುವಂತಹ ಪರಿಸ್ಥಿತಿ ಇವತ್ತು ಇಲ್ಲ. ಸ್ವಾಭಿಮಾನದಿಂದ ಊಟ ಮಾಡಲು ಆಹಾರ ಧಾನ್ಯಗಳನ್ನು ಕೊಡುವಂತಹ ಅವಕಾಶ ಬಹುಶಃ ಇವತ್ತು ಆಗಲಿಲ್ಲ. ಮಕ್ಕಳಿಗೆ ಓದಲಿಕ್ಕೆ ಸ್ಕೂಲ್ ಕೊಡಲಿಕ್ಕಾಗಲಿಲ್ಲ. ಇಡೀ ರಾಜ್ಯದಲ್ಲಿ ಇವತ್ತು ಬಹುಶಃ ಒಂದೇ ಒಂದು ಹೈಸ್ಕೂಲ್ ಅನ್ನು ಸಹ ಸರ್ಕಾರ ಪ್ರಾರಂಭ ಮಾಡಲಿಲ್ಲ. ಒಂದೇ ಒಂದು ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಸಹ ಈ ಸರ್ಕಾರ ಇವತ್ತು ಪ್ರಾರಂಭ ಮಾಡಲಿಲ್ಲ. ಒಂದೇ ಒಂದು ಸರ್ಕಾರಿ Degree College ಆದರೂ ಕಳೆದ 4 ವರ್ಷಗಳಲ್ಲಿ ರಾಜ್ಯದ ಉದ್ದಗಲದಲ್ಲಿ ಎಲ್ಲಿಯೂ ಕೂಡ ಪ್ರಾರಂಭವಾಗಲಿಲ್ಲ. ವಾಸಕ್ಕೆ ಮನೆಯಿಲ್ಲ, ತಿನ್ನಲಿಕ್ಕೆ ಆಹಾರ ಧಾನ್ಯ ಇಲ್ಲ. ಮಕ್ಕಳು education ಕಲಿಯಲಿಕ್ಕೆ ಆಗಲಿಲ್ಲ. ಹೀಗಿರುವಾಗ ಈ ಸರ್ಕಾರವನ್ನು ಜನಪರ ಸರ್ಕಾರ ಎಂದು ಹೇಗೆ ಹೇಳಲಿಕ್ಕಾಗುತ್ತದೆ? ಆದ ಕಾರಣ ಇನ್ನಾದರೂ ಕೂಡ, ಯಾವುದು ಸಾಧ್ಯವಿದೆಯೋ, ಜನರಿಗೆ ಪ್ರಯೋಜನವಾಗುತ್ತದೆಯೋ, ಅಂತಹ ಕಾರ್ಯಕ್ರಮಗಳನ್ನು ಉಳಿದ ಅವಧಿಯಲ್ಲಿ ಈ ಸರ್ಕಾರ ಮಾಡಬೇಕೆಂದು ಕೇಳುವಂತಹ ಪರಿಸ್ಥಿತಿ ಉಂಟಾಗಿದೆ. ಇನ್ನು ನಮ್ಮ ಜಿಲ್ಲೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಕರಾವಳಿ ಭಾಗಕ್ಕೆ ಯಾವತ್ತಿಗೂ ಅನ್ಯಾಯವಾಗುತ್ತಿದೆ. ನಾವು ಯಾವಾಗಲೂ ಕೂಡ ನಿರ್ಲಕ್ಷಕ್ಕೆ ಒಳಪಡುತ್ತೇವೆ. ಕರಾವಳಿ

ಮತ್ತು ಕೊಡಗು ಪ್ರದೇಶದವರಾದ ನಾವು ಯಾವತ್ತಿಗೂ ನಮಗೆ ಏತ ನೀರಾವರಿಗಾಗಿ 1 ಸಾವಿರ ಕೋಟಿ ರೂ.ಗಳನ್ನು ಕೊಡಿ, ಡ್ಯಾಂ ನಿರ್ಮಾಣಕ್ಕಾಗಿ 500 ಕೋಟಿ ರೂ. ಗಳನ್ನಾದರೂ ಕೊಡಿ ಎಂದೇನೂ ಕೂಡಾ ನಾವು ಕೇಳುವುದಿಲ್ಲ.

ನಮ್ಮ ಕರಾವಳಿ ಪ್ರದೇಶದ ಜನರು ಕೇಳುವುದು ಏನಾದರೂ ಇದ್ದರೆ, ಅದು 50 ಕೋಟಿ ರೂ. ಗಳನ್ನು ನಮ್ಮ ರಸ್ತೆಗೆ ಕೊಡಿ, ಕುಡಿಯಲಿಕ್ಕೆ ನೀರು ಕೊಡಿ ಎನ್ನುವುದನ್ನು ಬಿಟ್ಟರೆ, ಬೇರೇನನ್ನೂ ದೊಡ್ಡ ಯೋಜನೆಗಳನ್ನು ಕೇಳುವುದಿಲ್ಲ. ಇವತ್ತು ಕರ್ನಾಟಕದಲ್ಲಿಯ ಕರಾವಳಿ ಪ್ರದೇಶ ಅತ್ಯುನ್ನತ ಸ್ಥಾನಕ್ಕೆ ಹೋಗಿದ್ದರೆ, ಇದರಲ್ಲಿ ಸರ್ಕಾರದ ಕೊಡಗೆ ಬಹಳಷ್ಟು ಕಡಿಮೆ ಎಂದೇ ಹೇಳಬೇಕು. ಆ ಪ್ರದೇಶದ ಜನ ಸಾಮಾನ್ಯರು Bombay, Gulf ಮುಂತಾದ ಬೇರೆ ಬೇರೆ ಕಡೆಗಳಿಗೆ ಹೋಗಿ ಬಹಳ ಕಷ್ಟಪಟ್ಟು ದುಡಿದ ಕಾರಣ, ಸ್ವಾಭಿಮಾನದ ಬದುಕನ್ನು ಈ ಕರಾವಳಿ ಪ್ರದೇಶದ ಜನರು ರೂಪಿಸಿಕೊಂಡಿದ್ದಾರೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬೇರೆ ಕಡೆಗಳಿಗೆ ಹೋಲಿಸಿದಾಗ ನಮಗೆ ಬಹಳ ಅನ್ಯಾಯವಾಗಿದೆ. ಡಾ॥ ನಂಜುಂಡಪ್ಪ ವರದಿಯನ್ನು ಆಧಾರವಾಗಿಟ್ಟುಕೊಂಡು ಉತ್ತರ ಕರ್ನಾಟಕ ಭಾಗಗಳಿಗೆ ಹೆಚ್ಚಿನ ಹಣ ಕೊಡುತ್ತಿದ್ದಾರೆ. ಈ ಹಿಂದೆ ಕೂಡ, ನಮಗೆ ಕೊಡುವಷ್ಟೇ ಗ್ರ್ಯಾಂಟ್ ಅನ್ನು ಅವರಿಗೂ ಕೊಡುತ್ತಿದ್ದರು. ಅವರ ತಪ್ಪಿನಿಂದಾಗಿ ಬಹುಶಃ ಅವರು ಹಿಂದುಳಿದಿದ್ದಾರೆ. ನಾವು ಕಷ್ಟಪಟ್ಟು, ಶ್ರಮ ಪಟ್ಟಿದ್ದಕ್ಕಾಗಿ ಇವತ್ತು ನಮಗೆ ಏಕೆ ಶಿಕ್ಷೆ? ಡಾ॥ ನಂಜುಂಡಪ್ಪ ವರದಿಯಿಂದಾಗಿ, ಇದ್ದ ಎಲ್ಲಾ ಅನುದಾನಗಳು ಮತ್ತು ಬೇರೆ ಬೇರೆ ಯೋಜನೆಗಳನ್ನು ಆ ಪ್ರದೇಶಕ್ಕೆ ನೀಡಲಾಗಿದ್ದು, ನಮಗೇನು ಇಲ್ಲದಂತಹ ಪರಿಸ್ಥಿತಿ ಇವತ್ತು ಉಂಟಾಗಿದೆ. ಡಾ॥ ನಂಜುಂಡಪ್ಪ ವರದಿ ಏನಾದರೂ ಇದೇ ರೀತಿಯಲ್ಲಿ ಅನುಷ್ಠಾನವಾಗುತ್ತಿದ್ದರೆ, ಹಿಂದುಳಿದಿರುವ ಜಿಲ್ಲೆಗಳು ನಮ್ಮ ತರಹ ಮುಂದುವರೆದ ಜಿಲ್ಲೆಗಳಾಗುವುದಿಲ್ಲ. ಮುಂದುವರೆದಿರುವಂತಹ ಜಿಲ್ಲೆಗಳು ಹಿಂದುಳಿದಿರುವಂತಹ ಜಿಲ್ಲೆಗಳಾಗುವ ಪರಿಸ್ಥಿತಿ ಉಂಟಾಗಬಹುದು. ಆದ ಕಾರಣ ಯಾವ ರೀತಿಯಲ್ಲಿ ಡಾ॥ ನಂಜುಂಡಪ್ಪ ವರದಿಯನ್ನು ಆಧಾರವಾಗಿಟ್ಟುಕೊಂಡು ಹಿಂದುಳಿದ ಪ್ರದೇಶದ ಜಿಲ್ಲೆಗಳಿಗೆ ಬೇರೆ ಬೇರೆ ರೀತಿಯ ಸವಲತ್ತುಗಳನ್ನು ಕೊಡುತ್ತಿದ್ದೀರೋ, ಅದೇ ರೀತಿಯಲ್ಲಿ ಮುಂದುವರೆದ ಜಿಲ್ಲೆಗಳೇನಿವೆಯೋ, ಅವುಗಳನ್ನು ಇನ್ನಷ್ಟು ಮುಂದುವೆಸಲು ಮತ್ತು ಅಭಿವೃದ್ಧಿಪಡಿಸಲು ಇನ್ನಷ್ಟು ಬೇರೆ ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕೆ ಇವತ್ತು ಅವಕಾಶವಾಗಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಬರಗಾಲಪೀಡಿತ ಪ್ರದೇಶದಲ್ಲಿ ನಮ್ಮನ್ನು ಸೇರಿಸಿಲ್ಲ.

ಶ್ರೀ ಅಮರೇಶ್:- ಮಾನ್ಯ ನಂಜುಂಡಪ್ಪನವರ ವರದಿಯ ಬಗ್ಗೆ ಈಗ ಉಲ್ಲೇಖ ಮಾಡಿದಿರಿ. ಆ ವರದಿ ಆಧಾರವಾಗಿಟ್ಟುಕೊಂಡು ಯಾವುದೇ ಸವಲತ್ತುಗಳನ್ನು ನಮ್ಮ ಜಿಲ್ಲೆಗೆ ಕೊಡುತ್ತಿಲ್ಲ. ಡಾ॥ ನಂಜುಂಡಪ್ಪ ವರದಿಯಲ್ಲಿ ಸರ್ಕಾರದ ಮಾನದಂಡಗಳೇನಿವೆಯೋ, ಆ ಮಾನದಂಡಗಳು ಯಾವುವು ಕೂಡ ಈ ಜಿಲ್ಲೆಗಳಿಗೆ ಸಿಗುತ್ತಿಲ್ಲ. ಆ ಮಾನದಂಡಗಳನ್ನು ತೆಗೆಯಬೇಕೆಂದು ನಿಜವಾಗಿಯೂ ಕೂಡ ನೀವು Suggestion ಅನ್ನು ಕೊಡಬೇಕು. ಏಕೆಂದರೆ, ಬಯಲುಸೀಮೆ ಇರಬಹುದು, ನಂಜುಂಡಪ್ಪ ವರದಿ ಇರಬಹುದು, ಇದೆಲ್ಲವೂ ಕೂಡ ಆ ಮಾನದಂಡಗಳನ್ನು ಒಳಗೊಂಡು ಕೆಲಸವನ್ನು ಮಾಡಬೇಕಾಗುತ್ತದೆ.

ಶ್ರೀ ಯು.ಟಿ. ಖಾದರ್:- ಡಾ: ನಂಜುಂಡಪ್ಪ ವರದಿಯಲ್ಲಿನ ಮಾನದಂಡಗಳನ್ನು ತೆಗೆಯಬೇಕೆಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಬಹುಶಃ ಅದೇ ರೀತಿಯ ಏನಾದರೊಂದು ವರದಿ ತರಿಸಿಕೊಂಡು, ನಮ್ಮ ಈ ಪ್ರದೇಶಕ್ಕೆ ಏನಾದರೊಂದು ಯೋಜನೆ ತರುವಂತಹ ಕೆಲಸವಾಗಬೇಕಾಗಿದೆ. ಡಾ: ನಂಜುಂಡಪ್ಪ ವರದಿಯ ಫಲಶೃತಿ ಸಹ ಆ ಜಿಲ್ಲೆಗಳಿಗೆ ಮುಟ್ಟುವಂಥಾದ್ದು ಆಗಬೇಕಾಗಿದೆ ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಕರಾವಳಿ ಭಾಗದಿಂದ ಮುಖ್ಯಮಂತ್ರಿಗಳೊಬ್ಬರು ಇದ್ದರು. ಅವರನ್ನೂ ಕೂಡಾ ಅಧಿಕಾರದಿಂದ ಇಳಿಸುವಂತಹ ಪರಿಸ್ಥಿತಿ ಉಂಟಾಯಿತು. ಒಬ್ಬ ಮಂತ್ರಿಗಳು ಇದ್ದರು. ಆ ಮಂತ್ರಿಗಳು ಕೂಡ ಇಲ್ಲದಂತಹ ಪರಿಸ್ಥಿತಿ ಇವತ್ತು ನಮ್ಮ ಜಿಲ್ಲೆಯಲ್ಲಿ ನಿರ್ಮಾಣವಾಗಿದೆ. ಈ ರೀತಿಯಲ್ಲಿ ಆರ್ಥಿಕವಾಗಿಯೂ, ರಾಜಕೀಯವಾಗಿಯೂ ಸಂಪೂಣವಾಗಿ ನಮ್ಮ ಜಿಲ್ಲೆಯನ್ನು ನಿರ್ಲಕ್ಷಿಸುವಂತಹ ಕೆಲಸ ನಡೆದಿದೆ. ಇದು ಸರಿಯಿಲ್ಲವೆಂದು ನಾನು ಈ ಸರ್ಕಾರಕ್ಕೆ ಹೇಳಲಿಚ್ಛಿಸುತ್ತೇನೆ. ಇನ್ನು ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಈ ಕಡೆಯ ಪ್ರದೇಶದ ಜನರಿಗೆ ಅಥವಾ ಉತ್ತರ ಕರ್ನಾಟಕದ ಕಡೆಯ ಜನರಿಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನೂ ಸಮಸ್ಯೆಯಿಲ್ಲ, ಒಂದು ಕಡೆ ಸಮುದ್ರವಿದೆ, ಇನ್ನೊಂದು ಕಡೆ ಮಳೆ ಬರುತ್ತದೆ ಎಂದು ಅನಿಸಿರಬಹುದು. ಇವತ್ತೂ ಕೂಡ ನನ್ನ ಕ್ಷೇತ್ರದಲ್ಲಿ ಹಲವರು ಕಡೆಗಳಲ್ಲಿ ಕುಡಿಯಲಿಕ್ಕೆ ನೀರಿಲ್ಲ. ಯಾವುದೇ ಒಂದು ಅನುದಾನವನ್ನೂ ಕೂಡ ನಮಗೆ ಕೊಡುವಂತಹ ಪರಿಸ್ಥಿತಿ ಇಲ್ಲ. ಇದೇ ವಿಧಾನಸಭೆಯಲ್ಲಿ ಹಿಂದಿನ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದರು. ಎಲ್ಲಾ ಕ್ಷೇತ್ರಗಳಿಗೂ ನಾನು 30 ಲಕ್ಷ ರೂ.ಗಳ ಅನುದಾನವನ್ನು ಕೊಡುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದರು. ನಮ್ಮ ಜಿಲ್ಲೆಗೆ ಒಂದೇ ಒಂದು ರೂಪಾಯಿಯಾದರೂ ಇವತ್ತಿನ ದಿವಸ ನೀರಿನ ವ್ಯವಸ್ಥೆಗಾಗಿ ಬರಲಿಲ್ಲ. ಹೀಗಾದರೆ

ಹೇಗೆ? ನಮಗೆ ಏಕೆ ಹಣ ಕೊಟ್ಟಿಲ್ಲ ಎಂದು ಕೇಳಿದರೆ, ಎಲ್ಲಿ ಬರಗಾಲ ಬಂದಿದೆಯೋ, ಅಲ್ಲಿಗೆ ಮಾತ್ರ 30 ಲಕ್ಷ ರೂ.ಗಳನ್ನು ಕೊಡುವಂತಹ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳುತ್ತಾರೆ. ನಮಗೆ ಯಾವುದೇ ಅನುದಾನ ಬರುವುದಿಲ್ಲ ಎನ್ನುವುದಾದರೆ, ನಾವು ಏನು ಮಾಡಬೇಕು ಎನ್ನುವುದನ್ನು ನೀವು ಆಲೋಚನೆ ಮಾಡಬೇಕಾಗುತ್ತದೆ. ಬರಗಾಲ ಪೀಡಿತ ಪ್ರದೇಶಕ್ಕೆ ನಮ್ಮ ಜಿಲ್ಲೆಯನ್ನು ಸಹ ಸೇರಿಸಬೇಕು. ಕುಡಿಯುವ ನೀರಿಗಾಗಿ Task Forceಗಳಿಗೆ 2 ಕೋಟಿ ರೂ.ಗಳನ್ನು ಪ್ರತಿ ಕ್ಷೇತ್ರಕ್ಕೆ ಕೊಡಿ ಎಂದು ಮಾನ್ಯ ಸದಸ್ಯರು ಮಾತನಾಡಿ ಸಲಹೆ ನೀಡಿದ್ದಾರೆ. ನಾನು 2 ಕೋಟಿ ರೂ.ಗಳನ್ನು ಕೊಡಿ ಎಂದು ಮಾತ್ರ ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರಕ್ಕೆ ಎಷ್ಟು ಆಗುತ್ತದೋ ಅಷ್ಟನ್ನು ಕೊಡಿ. ಕನಿಷ್ಠ ಒಂದು ಗ್ಲಾಸ್ ಕುಡಿಯುವ ನೀರನ್ನು ಕೊಡಲಿಕ್ಕಾದರೂ ವ್ಯವಸ್ಥೆ ಮಾಡುವುದಕ್ಕೆ ಆಗುವಷ್ಟು ಹಣವನ್ನು ನಮಗೆ ಬಿಡುಗಡೆ ಮಾಡಬೇಕೆಂದು ಈ ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಬಹಳಷ್ಟು ಆಲೋಚನೆ ಮಾಡಬೇಕಾಗಿದೆ. ಅಲ್ಲಿ ಮಳೆ ಬರುತ್ತಿದೆ ಎಂದುಕೊಂಡು ನಾವು ಸುಮ್ಮನೆ ಕುಳಿತುಕೊಂಡರೆ ಆಗುವುದಿಲ್ಲ. ಕುಡಿಯುವ ನೀರಿನ ಸರಬರಾಜಿಗಾಗಿ ಏನಾದರೊಂದು ಯೋಜನೆಯನ್ನು ಸರ್ಕಾರ ರೂಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ರಸ್ತೆ ಬಗ್ಗೆ ಹೇಳುವುದಾದರೆ, ಹಿಂದಿನ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಗುಂಡಿರಹಿತ ರಸ್ತೆಯುಳ್ಳ ರಾಜ್ಯವನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದರು. ಆದರೆ ಈಗ ಇದ್ದ ಗುಂಡಿಗಳೂ ಹೆಚ್ಚಾಗಿ ರಸ್ತೆಯಲ್ಲಿ ಓಡಾಡದಂತಹ ಪರಿಸ್ಥಿತಿ ಉಂಟಾಗಿದೆ. ರಸ್ತೆಯಲ್ಲಿರುವ ಒಂದೇ ಒಂದು ಗುಂಡಿಯನ್ನಾಗಲಿ ಮುಚ್ಚುವಂತಹ ವ್ಯವಸ್ಥೆಯನ್ನು ಈ ಸರ್ಕಾರ ಮಾಡಲಿಲ್ಲ. ನಮಗೆ ಯಾವುದೇ ಅನುದಾನ ಬರುವುದಿಲ್ಲ. ಶಾಸಕರ ನಿಧಿಯ ಅನುದಾನ ಸಹಿತ ಮೊನ್ನೆತನಕ ನಮಗೆ ಬಂದಿರಲಿಲ್ಲ. ಇಲ್ಲಿ ಅಸೆಂಬ್ಲಿ ಪ್ರಾರಂಭವಾಗುತ್ತದೆ ಎಂದು ಗೊತ್ತಾದ ತಕ್ಷಣ ಬಹುಶಃ ಶಾಸಕರ ನಿಧಿಯ ಮೊದಲನೇ ಕಂತು sanction ಆಗಿದೆ. ಈ ರೀತಿಯಾದರೆ ಹೇಗೆ? ಇಲ್ಲಿ ಕುಡಿಯಲಿಕ್ಕೆ ನಿರಿಲ್ಲ. ನಿಲ್ಲಲಿಕ್ಕೆ ಮನೆ ಇಲ್ಲ, ಓಡಾಡಲಿಕ್ಕೆ ಸರಿಯಾದ ರಸ್ತೆಗಳಿಲ್ಲ ಎನ್ನುವುದಾದರೆ ನಮ್ಮ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಿ. ಇನ್ನು ಕೊಟ್ಟಂತಹ ಅನುದಾನ ಸರಿಯಾಗಿ implement ಆಗುತ್ತಿದೆಯೋ, ಇಲ್ಲವೋ ಎನ್ನುವುದನ್ನು ಕೂಡ ಸರ್ಕಾರದವರು ನೋಡಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ 8 ಗ್ರಾಮ ಪಂಚಾಯಿತಿಗಳಿಗೂ ಒಬ್ಬನೇ ಇಂಜಿನಿಯರ್ ಇದ್ದಾನೆ. ಅ ಒಬ್ಬ ಇಂಜಿನಿಯರ್ ಎಂ.ಎಲ್.ಎ ನಿಧಿಯ ಅನುದಾನದ ಕೆಲಸವನ್ನೂ ಕೂಡ ನೋಡಿಕೊಳ್ಳಬೇಕು. ಎಂ.ಪಿ.ನಿಧಿ ಅನುದಾನದ ಕೆಲಸಗಳನ್ನೂ ಸಹ

ನೋಡಿಕೊಳ್ಳಬೇಕು, ಜಿಲ್ಲಾ ಪಂಚಾಯಿತಿಯ ಅನುದಾನ ಕೆಲಸವನ್ನೂ ನೋಡಿಕೊಳ್ಳಬೇಕು. ತಾಲ್ಲೂಕು ಪಂಚಾಯಿತಿಯ ಅನುದಾನದ ಕೆಲಸಗಳನ್ನೂ ಸಹ ನೋಡಿಕೊಳ್ಳಬೇಕು, ಗ್ರಾಮ ಪಂಚಾಯಿತಿ ಅನುದಾನ ಕೆಲಸಗಳನ್ನೂ ಸಹ ಅವನೇ ನೋಡಿಕೊಳ್ಳಬೇಕು. NREGA ಹಾಗೂ ಇನ್ನಿತರ ಎಲ್ಲಾ ಯೋಜನೆಗಳ ಕೆಲಸಗಳನ್ನೂ ಸಹ ಒಬ್ಬನೇ ಇಂಜಿನಿಯರ್ ನೋಡಿಕೊಳ್ಳಬೇಕಾಗಿದೆ. ಬಹುಶಃ ಒಬ್ಬನೇ ಎಲ್ಲಾ ಕಡೆಗೂ ಹೋಗಿ ನೋಡಲಿಕ್ಕೆ ಆಗುತ್ತದೆಯೇ? ಇಲ್ಲವೇ? ಎನ್ನುವುದನ್ನಾದರೂ ಸರ್ಕಾರ ಯೋಚಿಸಬೇಕು. ನಮಗೆ ಅತ್ಯಗತ್ಯವಾಗಿ ಇಂಜಿನಿಯರ್‌ಗಳ ಅವಶ್ಯಕತೆ ಇದೆ. ಬಹುಶಃ ಸೇತುವೆಗೆಂದು ಇಂಜಿನಿರ್ ಕೊಡುವಂತಹ ಅವಶ್ಯಕತೆ ಇದೆ. RDPR ನವರು ಈ ಬಗ್ಗೆ ಆಲೋಚಿಸಿ, ಸೂಕ್ತವಾದಂತಹ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇನ್ನು PWD ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ನಾವು ಬಹಳಷ್ಟು ಹೇಳುವುದಿದೆ. ನಮ್ಮ ಜಿಲ್ಲೆಯಲ್ಲಿ ಇವತ್ತು PWD ಗುತ್ತಿಗೆದಾರರು Strike ಮಾಡುತ್ತಿದ್ದಾರೆ. ಒಂದೇ ಒಂದು ಗುಂಡಿಯನ್ನಾಗಲಿ, ಹೊಂಡವನ್ನಾಗಲಿ ಮುಚ್ಚಲಿಕ್ಕೆ ಅವರು ಮುಂದೆ ಬರುತ್ತಿಲ್ಲ. ಇದಕ್ಕೆ ಕಾರಣವೇನೆಂದು ಕೇಳಿದರೆ, ಹಿಂದೆ ಕೆಲಸ ಮಾಡಿರುವುದಕ್ಕೆ ಸಂಬಂಧಿಸಿದಂತೆ 40 ಕೋಟಿ ರೂ.ಗಳ ಬಾಕಿ ಹಣ ನಮಗೆ ಬರುವುದಿದೆ. ನಾವೇ ಇಂದು ಆತ್ಮಹತ್ಯೆ ಮಾಡಿಕೊಳುವಂತಹ ಪರಿಸ್ಥಿತಿಯಲ್ಲಿದ್ದೇವೆ, ಆದ್ದರಿಂದ Strike ಮಾಡುತ್ತಿದ್ದೇವೆ ಎಂದು ಇಂಜಿನಿಯರ್‌ಗಳು ಹೇಳುತ್ತಾರೆ. ಬಹುಶಃ ಅವರು ಇನ್ನು ಕೆಲಸ ಪ್ರಾರಂಭ ಮಾಡುವಂತಾಗಲಿಲ್ಲ. ಕಳೆದ ವರ್ಷ ಮಂಜೂರಾದ ನಬಾರ್ಡ್ ಯೋಜನೆಗೆ ಇನ್ನೂ ಕೂಡ ಯಾರೂ ಟೆಂಡರ್ ಹಾಕುವುದಕ್ಕೆ ಬರುತ್ತಿಲ್ಲ. ಏಕೆ ನೀವು ಮುಂದೆ ಬರುವುದಿಲ್ಲವೆಂದು ನಾವು ಗುತ್ತಿಗೆದಾರರನ್ನು ಕೇಳಿದರೆ, ಹಿಂದೆ ಮಾಡಿದ ನಬಾರ್ಡ್ ಕೆಲಸದ ದುಡ್ಡನ್ನೇ ಇನ್ನೂ ಕೊಡಲಿಲ್ಲವಂತೆ. ಬಹುಶಃ ನಬಾರ್ಡ್‌ನಿಂದ ಬರುವ ಹಣವನ್ನು ಡೈವರ್ಟ್ ಮಾಡಿ ಬೇರೆ ಕಡೆಗೆ ಕೊಟ್ಟರೆ, ಯಾವ ರೀತಿ ಇವತ್ತು ಗುತ್ತಿಗೆದಾರರಿಗೆ ವಿಶ್ವಾಸ ಬರುವಂಥ ಕೆಲಸವಾಗುತ್ತದೆ. 8 ತಿಂಗಳಾಯಿತು ಇನ್ನೂ ಟೆಂಡರ್ ಹಾಕುವುದಕ್ಕೆ ಬರಲಿಲ್ಲ. ಡಿಸೆಂಬರ್ ನಲ್ಲಿ P.W.D. ಅಪೆಂಡಿಕ್ಸ್-ಸಿ ಬಂತು, ಎಸ್ಟಿಮೇಟ್ ಆಗಿ ಇನ್ನೂ ಟೆಂಡರ್ ಆಗಲಿಲ್ಲ. ಬಹುಶಃ ಈ ರೀತಿಯಾದರೆ ಪರಿಸ್ಥಿತಿ ಯಾವ ರೀತಿ ಇರಬಹುದೆಂದು ತಾವು ಇವತ್ತು ಆಲೊಚನೆ ಮಾಡಬೇಕು. ಮೊನ್ನೆ ನಾನು ಹೇಳಿದ್ದೇನೆ, ದಯವಿಟ್ಟು ನಮಗೆ ಇನ್ನು ಅನುದಾನ ಬೇಡ, ತಾವು ಕಳೆದ ವರ್ಷ ಕೊಟ್ಟಿದ್ದೀರಿ, ಕೊಟ್ಟಿರುವ ಅನುದಾನವನ್ನು ಖರ್ಚು ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಿ. ಹಿಂದಿನ ಗುತ್ತಿಗೆದಾರರ ಸಮಸ್ಯೆ

ಏನೆಂದು ಕೇಳಿ ಅದನ್ನು ಬಗೆಹರಿಸಿ, ಅದನ್ನು ಮುಂದೆ ತೆಗೆದುಕೊಳ್ಳುವಂಥ ಅವಕಾಶವನ್ನು ಮಾಡಿಕೊಡಿ. ಇವತ್ತು ಪ್ರತಿಯೊಂದು ಇಲಾಖೆಗಳ ಇಂಜಿನಿಯರ್ಸ್ ಸಮಸ್ಯೆಯಿಂದ ನಮಗೆ ಇಲ್ಲಿ ಕಿರಿಕಿರಿ. ಬಹುಶಃ ಎಲ್ಲಿ ಇಂಜಿನಿಯರ್ಸ್ ಸರಿಯಾಗಿ ಮುಂದೆ ಹೋಗುವುದಿಲ್ಲವೋ ಅದನ್ನು ನೋಡಿಕೊಂಡು ಸರಿಪಡಿಸುವುದಕ್ಕೆ, ಮುಂದೆ ತೆಗೆದುಕೊಂಡು ಹೋಗುವಂಥ ರೀತಿ ಅವಕಾಶ ಇವತ್ತು ಆಡಳಿತ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇಲ್ಲಿ ಲೋಕೋಪಯೋಗಿ ಸಚಿವರಿದ್ದಾರೆ, ಮೊನ್ನೆ ತಾನೆ ಅವರೊಡನೆ ನಾನು ಮಾತನಾಡಿದ್ದೇನೆ. ನಮ್ಮ ಜಿಲ್ಲೆಯ 40 ಕೋಟಿ ರೂಪಾಯಿಗಳ ಕೆಲಸ ಮಾಡಿರುವ ಬಾಕಿ ಕೊಡಬೇಕು, ಅವರೂ ಕೂಡ ಬದುಕಬೇಕು, ಅವರ ಮಕ್ಕಳು ಹೆಂಡತಿ ಕುಟುಂಬವನ್ನು ಸಾಕಬೇಕು. ಬಹುಶಃ ಅವರು ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಕೆಲಸ ಮಾಡಿ, ಅವರಿಗೆ ಇವತ್ತು ದುಡ್ಡು ಕೊಡದಿದ್ದರೆ, ಮುಂದೆ ಅವರು ಹೇಗೆ ಕೆಲಸ ಮಾಡಲಾಗುತ್ತದೆನ್ನುವುದನ್ನು ಹಿರಿಯರಾದ ತಾವು ಆಲೋಚನೆ ಮಾಡಿ. ಅದನ್ನು ಏತಕ್ಕೆ ತಡೆಹಿಡಿಯಲಾಗಿದೆ ಎಂದು ಗೊತ್ತಾಗುತ್ತಿಲ್ಲ. ಅವರು ಕೆಲಸ ಮಾಡಿದ್ದಾರೆ. ಕೆಲಸ ಮಾಡದಿರುವ ಯಾರಿಗೂ ತಾವು ದುಡ್ಡು ಕೊಡಬೇಡಿ. ಕೆಲಸ ಮಾಡಿದವರಿಗಾದರೂ ತಾವು ದುಡ್ಡು ಕೊಡಬೇಕಲ್ಲಾ? ಅದನ್ನು ಕೊಟ್ಟರೆ ಮಾತ್ರ ಮುಂದಿನ ಕೆಲಸವನ್ನು ಅವರು ಪ್ರಾರಂಭಿಸುತ್ತಾರೆ. ಅದಕ್ಕಾಗಿ ನಾನು ತಮ್ಮನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಚರ್ಚೆ ಮಾಡಿದ್ದೇನೆ. ತಮ್ಮಲ್ಲಿ ಇನ್ನೊಮ್ಮೆ ಕಳಕಳಿಯ ವಿನಂತಿ, ಅದಷ್ಟು ಬೇಗನೆ ನಮ್ಮ ಜಿಲ್ಲೆಯ PWDಯ ಆರ್ಥಿಕ ವ್ಯವಸ್ಥೆಯ ಯಾವ್ಯಾವುದು ಬಾಕಿ ಇದೆ, ಅದನ್ನು ಸರಿಪಡಿಸಬೇಕು.

ಇನ್ನು ಶಿಕ್ಷಣ ಇಲಾಖೆ, ಈ ದೇಶ ಅಭಿವೃದ್ಧಿಯಾಗಬೇಕಾದರೆ, ಸಮಾಜದಲ್ಲಿ ಶಾಸಕರು ವಿಧಾನಸೌಧದಲ್ಲಿ ಬಲಿಷ್ಠರಾದರೆ ಸಾಕಾಗುವುದಿಲ್ಲ. ಪಾರ್ಲಿಮೆಂಟ್‌ನಲ್ಲಿ ಕುಳಿತುಕೊಳ್ಳುವಂಥ ಸಂಸತ್ ಸದಸ್ಯರು ಬಲಿಷ್ಠರಾದರೆ ಸಾಕಾಗುವುದಿಲ್ಲ, ಎ.ಸಿ. ರೂಂ.ನಲ್ಲಿ ಕುಳಿತುಕೊಳ್ಳುವಂಥ ಐಎಎಸ್ ಅಧಿಕಾರಿಗಳು ಅಥವಾ ವ್ಯಾಪಾರಸ್ಥರು ಬಲಿಷ್ಠರಾದರೆ ಸಾಕಾಗುವುದಿಲ್ಲ. ಈ ದೇಶ ಬಲಿಷ್ಠವಾಗಬೇಕಾದರೆ, ಕ್ಲಾಸ್ ರೂಂ. ಮತ್ತು ಪ್ಲೇ ಗ್ರೌಂಡ್ ನಲ್ಲಿ ಆಡುವಂಥ ವಿದ್ಯಾರ್ಥಿಗಳು ಬಲಿಷ್ಠರಾದಾಗ ಮಾತ್ರ ಈ ದೇಶ ಬಲಿಷ್ಠವಾಗುತ್ತದೆಂದು ನಾವು ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ಬೇಕಾದ ಪೂರಕ ಯೋಜನೆಯನ್ನು ರೂಪಿಸುವಂಥ ಜವಾಬ್ದಾರಿ ಇವತ್ತು ಸರ್ಕಾರದ ಮೇಲಿದೆ. ಇವತ್ತು ಶಿಕ್ಷಣ ಇಲಾಖೆಯಲ್ಲಿ ಯಾವ ರೀತಿ ಕೆಲಸವಾಗುತ್ತಿದೆ? ಇವತ್ತು ಸರಿಯಾದ ಶಿಕ್ಷಕರ ವ್ಯವಸ್ಥೆ ಇಲ್ಲ. ನಿನ್ನೆ ಈ ಬಗ್ಗೆ ಚರ್ಚೆಯಾಗಿದೆ.

ನನ್ನ ಕ್ಷೇತ್ರ ಸೇರಿದಂತೆ ಯಾವುದಾದರೂ ಒಂದು ಕ್ಷೇತ್ರದಲ್ಲಿ ಇವತ್ತು ಶಿಕ್ಷಕರ ವ್ಯವಸ್ಥೆ ಸರಿಯಾಗಿದೆ ಎಂದು ಹೇಳುವವರಿದ್ದಾರೆಯೇ? ಎಲ್ಲಿಯೂ ಕೂಡ ಇಲ್ಲದಿರುವ ಪರಿಸ್ಥಿತಿ ಇವತ್ತಿದೆ. ಮುಂದಿನ ಹಂತದಲ್ಲಿ ನಾವು ನೇಮಕ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇಲ್ಲಿಯವರೆಗೆ ಅತಿಥಿ ಉಪನ್ಯಾಸಕರು ಮಾಡಲಿ. ಈಗ ನಿವೃತ್ತ ಶಿಕ್ಷಕರನ್ನು ನೇಮಕ ಮಾಡುವುದೆಂದು ಮಾಡಿದ್ದಾರೆ, ನಿವೃತ್ತರಾದವರು ಅಷ್ಟು ದೂರದಿಂದ ಬರುವವರು ಯಾರಿದ್ದಾರೆ? ಬಹುಶಃ ನಿವೃತ್ತರಾದವರು ಮಾಡಲು ಬಂದರೆ ಕೊಡಬಹುದು. ಅದರ ಜೊತೆಗೆ ಇವತ್ತು ಬಿಎಡ್ ಮಾಡಿ ಯಾರು ಕೆಲಸವಿಲ್ಲದೆ ಇದ್ದಾರೆ, ಅವರಿಗೂ ಕೂಡ ನಾವು ಇವತ್ತು ಅವಕಾಶ ಕೊಟ್ಟರೆ, ಅವರಿಗೂ ಒಂದು ಉದ್ಯೋಗ ಸಿಕ್ಕಿದಂತಾಗುತ್ತದೆ, ಶಾಲೆಯ ಸುತ್ತಮುತ್ತಲಿರುವ ಟೀಚರ್ಸ್ ಬಂದು ಕಲಿಸುವಂಥ ಒಂದು ವ್ಯವಸ್ಥೆಯಾಗುತ್ತದೆಂದು ನಾನು ಹೇಳುತ್ತೇನೆ. ಆದ ಕಾರಣ ಒಂದು ಯೋಜನೆ ತರುವಾಗ ಈ ರೀತಿಯ ಒಂದು ಗೈಡ್ ಲೈನ್ಸ್ ಅಳವಡಿಸಿಕೊಂಡು ತರಬೇಕು. ನಮಗೆ ಒಂದೇ ಒಂದು ಹೈಸ್ಕೂಲ್ ಇಲ್ಲ. ಇವತ್ತು ಕೇಂದ್ರ ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ಕೇಂದ್ರ ಸರ್ಕಾರ ಬೇರೆ ಬೇರೆ ಯೋಜನೆಗಳ ಮೂಲಕ, ಬಹುಶಃ ಸರ್ವಶಿಕ್ಷಣ ಇಲಾಖೆ ಯೋಜನೆಯಡಿಯಲ್ಲಿ, ಇವತ್ತು ಎಲ್ಲಿ ಪ್ರೈಮರಿ ಸ್ಕೂಲಿಗೆ ಕಟ್ಟಡವಿಲ್ಲ, ಅಲ್ಲಿಗೆ ಅತ್ಯುತ್ತಮವಾದ ಶಾಶ್ವತ ಕಟ್ಟಡವನ್ನು ಕೊಡುವಂಥ ವ್ಯವಸ್ಥೆಯನ್ನು ಇವತ್ತು ಕೇಂದ್ರ ಸರ್ಕಾರ ಮಾಡುತ್ತಿದೆ. ರಾಷ್ಟ್ರೀಯ ಮಾಧ್ಯಮ ಶಿಕ್ಷಣದ ಮೂಲಕ ಹೈಸ್ಕೂಲಿಗೆ ಇವತ್ತು ಕಟ್ಟಡ ನಿರ್ಮಾಣ ಮಾಡಿ ಕೊಡುತ್ತದೆ. ಹಿಂದೆ ಕಟ್ಟಡಕ್ಕೆ ಅನುದಾನ ಕೊಡಬೇಕೆನ್ನುವ ಇದ್ದ ಸಮಸ್ಯೆ ಬಹುಶಃ ಇವತ್ತಿಲ್ಲ. ಆದುದರಿಂದ ಇವತ್ತು ಇರುವುದನ್ನು ಆಲೋಚನೆ ಮಾಡಿಕೊಂಡು ಬಹುಶಃ ಉತ್ತಮ ಶಿಕ್ಷಕರನ್ನು ನೇಮಕ ಮಾಡುವ ಜೊತೆಯಲ್ಲಿ ಇಂಗ್ಲೀಷ್ ವಿಷಯವನ್ನು ಆರಂಭದಿಂದಲೇ ಕಲಿಸುವಂಥ ಒಂದು ಅವಕಾಶವನ್ನು ಕಲ್ಪಿಸಬೇಕು. ಇವತ್ತು ಕನ್ನಡದಲ್ಲಿ ಎಷ್ಟೇ ಉತ್ತಮವಾಗಿ ಮಾಡಿದರೂ ಕೂಡ ಬಹುಶಃ ಮುಂದೆ ಇಂಗ್ಲೀಷ್ ಪ್ರತಿಯೊಬ್ಬರಿಗೂ ಬೇಕೇ ಬೇಕು. ಕನ್ನಡ ನಮ್ಮ ರೀಜನಲ್ ಭಾಷೆ, ಹಿಂದಿ ನಮ್ಮ ನ್ಯಾಷನಲ್ ಭಾಷೆ, ಇಂಗ್ಲೀಷ್ ನಮ್ಮ ಇಂಟರ್ ನ್ಯಾಷನಲ್ ಭಾಷೆ. ಮುಂದಿನ ದಿವಸಗಳಲ್ಲಿ ಭಾರತ ದೇಶದ ಯುವಕರು ವಿದ್ಯಾರ್ಥಿಗಳು ಇಂಟರ್ ನ್ಯಾಷನಲ್ ಮಟ್ಟದಲ್ಲಿ ತಮ್ಮದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕಾದರೆ ಅವರು ಇಂಗ್ಲೀಷ್ ಅನ್ನು ಕಲಿಯಲೇಬೇಕಲ್ಲಾ? ಇವತ್ತು ಆರ್.ಟಿ.ಇ. ಮುಖಾಂತರ ಕಡ್ಡಾಯ ಶಿಕ್ಷಣ ಮುಖಾಂತರ ನಾವು ಕಡ್ಡಾಯ ಶಿಕ್ಷಣವೆಂದು ಮಾಡುತ್ತಿದ್ದೇವೆ. ಸೆಂಟ್ರಲ್ ಸಿಲಬಸ್ ಎಂದು ಮಾಡಿದ್ದೇವೆ. ಬಹುಶಃ ನಾವು ಸೆಂಟ್ರಲ್ ಸಿಲಬಸ್ ಅನ್ನು ಅಳವಡಿಸುವಾಗ

ಸರ್ಕಾರಿ ಶಾಲೆಗಳಲ್ಲಿ ಆಗುವಂಥ ಪರಿಸ್ಥಿತಿಯನ್ನು ನಾವು ಚರ್ಚೆ ಮಾಡುವಂಥ ಅವಕಾಶ ಈ ಶಿಕ್ಷಣ ಇಲಾಖೆಯಿಂದ ಆಗಿದೆಯೇ? ಇವತ್ತು ಬೇರೆ ಖಾಸಗಿ ಶಾಲೆಗಳಲ್ಲಿ ಸೆಂಟ್ರಲ್ ಸಿಲಬಸ್ ಆರಂಭದಿಂದ ಬರುತ್ತದೆ, ನಮ್ಮವರಿಗೆ ಇದು ಸಡನ್ ಆಗಿ ಬಂದಾಗ ನಾಳೆ ದಿವಸ ಇವರು ಸಿಇಟಿ ಪರೀಕ್ಷೆಗೆ ಕುಳಿತುಕೊಂಡಾಗ ಖಾಸಗಿ ಶಾಲೆಯ ಮಕ್ಕಳ ಜೊತೆಯಲ್ಲಿ ಸರ್ಕಾರಿ ಶಾಲೆಯ ಮಕ್ಕಳು ಸ್ಪರ್ಧೆ ನಡೆಸುವುದಕ್ಕೆ ಸಾಧ್ಯವಿದೆಯಾ ಎಂದು ನಾವು ಇವತ್ತು ಆಲೋಚನೆ ಮಾಡಬೇಕು. ಅವರು ಇವತ್ತು ಯಾವ ರೀತಿ ಸ್ಪರ್ಧೆ ಕೊಡುವುದಕ್ಕೆ ಸಾಧ್ಯವಾಗುತ್ತದೆ? ನಮ್ಮಲ್ಲಿ ಸರಿಯಾದ ಸಿಬ್ಬಂದಿ ಇಲ್ಲ. ಅವರಿಗೆ ಸರಿಯಾದ ತರಬೇತಿ ಇಲ್ಲ, ಬಹುಶಃ ಈ ಸೆಂಟ್ರಲ್ ಸಿಲಬಸ್ ಅಳವಡಿಸುವಲ್ಲಿಯೂ ಕೂಡ, ಶಿಕ್ಷಕರಿಗೆ ಸೆಂಟ್ರಲ್ ಸಿಲಬಸ್ ಬಗ್ಗೆ ತರಬೇತಿ ಕೊಡುವಂಥ ಅವಕಾಶ ಇವತ್ತು ಆಗಬೇಕೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಬಹುಶಃ ಈ ರೀತಿಯ ಒಂದು ಅವಕಾಶ ಮಾಡಿಕೊಡುವ ಜೊತೆಯಲ್ಲಿ, ಬಹುಶಃ ಇದು ಸಾಧ್ಯವಿದೆಯೋ ಇಲ್ಲವೋ, ಯಾವ ಕಾನೂನು ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸರ್ಕಾರಿ ಹೈಸ್ಕೂಲಿನಲ್ಲಿ 8 ನೇ ತರಗತಿಯಲ್ಲಿ ಹುಡುಗರಿಗೆ ರೂ. 230 ಫೀ ಚಾರ್ಜ್ ಮಾಡುತ್ತೇವೆ. ಫೀ ಚಾರ್ಜ್ ಮಾಡಿದ ನಂತರ, ಬಹುಶಃ private ಕ್ಷೇತ್ರದಲ್ಲಿ ಶಿಕ್ಷಕರ ಕೊರತೆಯಾಗುತ್ತದೆ, ಬೆಟರ್‌ಮೆಂಟ್ ಕಮಿಟಿಯಲ್ಲಿ ಒಂದೇ ಒಂದು ಪೈಸೆ ದುಡ್ಡಿರುವುದಿಲ್ಲ. ತಾವು ಇವತ್ತು develoment fee ಎಂದು ಕಮಿಟಿಯವರು ರೂ.200, ರೂ. 300 ತೆಗೆದುಕೊಳ್ಳುವಂಥ ಅವಕಾಶವನ್ನು ಕೊಟ್ಟರೆ ಇಂದರಿಂದಲಾದರೂ ಕೆಲವೊಂದು ವ್ಯವಸ್ಥೆ ಮಾಡುವಂಥ ಅವಕಾಶವಾಗುತ್ತದೆ. ಕಾನೂನು ಮಾಡಿದರೆ, ಎಂಥವರೂ ಕೂಡ ಕೊಡಲು ಇವತ್ತು ತಯಾರಿದ್ದಾರೆ. ಒಂದು ಸರ್ಕಾರಿ ಶಾಲೆಗೆ ಮಗು ಬಂದು 8,9,10ನೇ ತರಗತಿಯಲ್ಲಿ ಕಲಿತು, ಶಾಲೆಯಿಂದ ಹೋಗುವಾಗ ಅವರು ಖಾಸಗಿ ಕಾಲೇಜಿಗೆ ಹೋಗುತ್ತಾರೆ, ಅಲ್ಲಿ ಅವರು ರೂ.10,000 ಕೊಡುತ್ತಾರೆ. ಬಹುಶಃ ಇಲ್ಲಿಯೂ ಕೂಡ ಯಾರಿಗೆ ಇಷ್ಟವಿದೆ, ಅವರಿಗೆ development fee ಕೊಡಿ ಎಂದು ನೀವು ಫಿಕ್ಸ್ ಮಾಡಿ ಇಂಥ ಒಂದು ಅವಕಾಶವನ್ನು ಶಾಲೆಗೆ ಕೊಟ್ಟರೆ ಖಂಡಿತವಾಗಿಯೂ ಅವರು ಕೊಡುವ ಸ್ವಲ್ಪಮಟ್ಟಿನ ಅನುದಾನದಿಂದ ಬೇರೆ ಸವಲತ್ತುಗಳನ್ನು ಆ ಶಾಲೆಯ ವಿದ್ಯಾರ್ಥಿಗಳಿಗೆ ಕೊಡುವಂಥ ಅವಕಾಶವಾಗುತ್ತದೆಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಮಗ್ರವಾಗಿ ಶಿಕ್ಷಣದ ಬಗ್ಗೆ ಆಲೋಚನೆ ಮಾಡಿಕೊಂಡು ಭವಿಷ್ಯ ರಾಜ್ಯದ ಮತ್ತು ದೇಶದ ಹಿತವನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾದ ಒಂದು ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ವಸತಿ ಯೋಜನೆಯ ಮೂಲಕ 60,000 ವಸತಿಗಳನ್ನು

ಕೊಡುವಂಥ ಅವಕಾಶವಿತ್ತು ಅದು ಆಗುತ್ತಿಲ್ಲ. ಒಂದನೇ ಕಂತು ಬಂದವರು ಫೌಂಡೇಷನ್ ಹಾಕಿದ್ದಾರೆ, ಎರಡನೇ ಕಂತು ಇನ್ನೂ ಕೂಡ ಬರದಿರುವ ಪರಿಸ್ಥಿತಿ ಇದೆ, ಅವನು ಅರ್ಧಕ್ಕೆ ಕಟ್ಟಿ ನಿಲ್ಲಿಸುವಂಥ ಪರಿಸ್ಥಿತಿ ಇದೆ. ಬಹುಶಃ ಬಡ ಜನಸಾಮಾನ್ಯರಿಗೆ ಕೊಡುವ ಈ ಯೋಜನೆಗೆ ಇಷ್ಟು ಸಮಸ್ಯೆ ಏಕೆ ಎಂದು ನಮಗೆ ಇವತ್ತು ಅರ್ಥವಾಗುವುದಿಲ್ಲ. ಯವುದೇ ಬಡ ಜನಸಾಮಾನ್ಯರ ಯೊಜನೆಯನ್ನು ಅನುಷ್ಠಾನಗೊಳಿಸಬೇಕಾದರೆ, ಅದಕ್ಕೆ ಜಾಸ್ತಿ ಖರ್ಚು ಮಾಡಬೇಕೆಂದಿಲ್ಲ, ಅದಕ್ಕೆ ಪುರುಸೊತ್ತು ಮಾಡಿಕೊಳ್ಳಬೇಕು. ಜನಸಾಮಾನ್ಯರ ಬೇರೆ ಬೇರೆ ಕಾರ್ಯಕ್ರಮವನ್ನು ಇವತ್ತು ಹಮ್ಮಿಕೊಳ್ಳುವುದಕ್ಕೆ ಸರ್ಕಾರ ಪುರುಸೊತ್ತು ಮಾಡಿಕೊಂಡು ಮುಂದೆ ಹೋಗುವಂಥ ವ್ಯವಸ್ಥೆ ಇವತ್ತು ಆಗಬೇಕು. ಇಲ್ಲದಿದ್ದರೆ, ನಮ್ಮ ಡೆಮಾಕ್ರಸಿಗೆ ಮತ್ತು ಬ್ರಿಟಿಷರಿಗೆ ಇರುವಂಥ ವ್ಯತ್ಯಾಸವೇನೆಂದು ಅರ್ಥ ಮಾಡಿಕೊಳ್ಳಬೇಕು. ನಮಗೂ ಅವರಿಗಿರುವ ವ್ಯತ್ಯಾಸವೇನು? ಬಹುಶಃ ಇಲ್ಲಿಗೆ ಬ್ರಿಟಿಷರು ವ್ಯಾಪಾರ ಮಾಡಲೆಂದು ಬಂದು ಇಲ್ಲಿ ರಾಜಕೀಯ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಈಗಿನ ಪರಿಸ್ಥಿತಿ, ರಾಜಕೀಯವನ್ನು ಮೊದಲು ಮಾಡುವುದು ನಂತರ ವ್ಯಾಪಾರ ಮಾಡುವುದು, ವ್ಯತ್ಯಾಸ ಅಷ್ಟೇ ಬರುವಂಥ ಪರಿಸ್ಥಿತಿ ಇವತ್ತಾಗಿದೆ. ಸರ್ಕಾರವೆಂದರೆ, ಬಹುಶಃ ಹೇಗಿರಬೇಕು? ಒಂದು ಕಡೆ ಕುಳಿತುಕೊಂಡು ರಾಜ್ಯದ ಉದ್ದಗಲಕ್ಕೂ ಜನಸಾಮಾನ್ಯರ ಬಗ್ಗೆ ಆಲೋಚನೆ ಮಾಡಿಕೊಂಡು ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಒಂದು ಕಡೆ ಕುಳಿತುಕೊಂಡು ಜನಸಾಮಾನ್ಯರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. ಇವತ್ತು ಪರಿಸ್ಥಿತಿ ಏನಾಗಿದೆ? ಇವತ್ತು ಸರ್ಕಾರ ಜನಸಾಮಾನ್ಯರ ಬಗ್ಗೆ ಆಲೋಚನೆ ಮಾಡುವುದಲ್ಲ, ಜನಸಾಮಾನ್ಯರು ಬೆಳಿಗ್ಗೆ 6 ಗಂಟೆ ಸರ್ಕಾರವಿದೆಯೋ ಬಿದ್ದಿದೆಯೋ ಎಂದು ಪತ್ರಿಕೆ ನೋಡುತಿದ್ದಾರೆ. ಇವತ್ತು ಜನಸಾಮಾನ್ಯರು ಸರ್ಕಾರದ ಬಗ್ಗೆ ತಲೆಕೆಡಿಸಿಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಇವತ್ತು ಜನಸಾಮಾನ್ಯರ ಬಗ್ಗೆ ಆಲೋಚನೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಆರೋಗ್ಯಕ್ಕೆ ಸಂಬಂಧಿಸಿದಂತೆ, ಕಳೆದ 4 ವರ್ಷದಲ್ಲಿ ಒಂದೇ ಒಂದು Primary Health Centre ನಮ್ಮ ಕಡೆಯಾಗಲಿಲ್ಲ. ಇವತ್ತು ಕೇಂದ್ರ ಸರ್ಕಾರ ಮೇಲ್ದರ್ಜೆಗೇರಿಸಲು ಅವಕಾಶ ಮಾಡಿಕೊಡಿ ಎಂದು ಹೇಳಿ ಅನುದಾನ ಕೊಟ್ಟರೂ ಇಲ್ಲೊಂದು ಗೈಡ್‌ಲೈನ್ ಮಾಡಿ, ನಾವು ಇಂಥದ್ದಕ್ಕೆ ಮೂಲಭೂತ ಸೌಕರ್ಯ ಕೊಡುತ್ತೇವೆ. ನಾವು ಮೇಲ್ದರ್ಜೆಗೆ ಏರಿಸುವುದಿಲ್ಲವೆನ್ನುವ ಪರಿಸ್ಥಿತಿಯಾಗಿದೆ. ಇದ್ದಕಡೆ ಇವತ್ತು ಡಾಕ್ಟರ್

ಗಳಿಲ್ಲ. ನನ್ನ ಕ್ಷೇತ್ರದ ಉಲ್ಲಾಳದ PHC ನಲ್ಲಿ 50,000 ಜನಸಂಖ್ಯೆ ಇದೆ, ಪಕ್ಕದಲ್ಲಿರುವ ಸೋಮೇಶ್ವರದಲ್ಲಿ 20,000 ಜನಸಂಖ್ಯೆ ಇದೆ, ಇದನ್ನು ಕ್ಲಬ್ ಮಾಡಿ 70,000 ಜನಸಂಖ್ಯೆಗೆ ಒಂದು PHC ಇದೆ. ಆ PHC ಮೊನ್ನೆತನಕ ಚೆನ್ನಾಗಿತ್ತು, ಡಾಕ್ಟರುಗಳಿಗೆ ಚೆನ್ನಾಗಿರುವ ಎಲ್ಲಾ ವ್ಯವಸ್ಥೆ ಇತ್ತು. ಇವತ್ತು ಅವರನ್ನು ವರ್ಗಾವಣೆ ಮಾಡಿ ಡಾಕ್ಟರಿಲ್ಲದಿರುವ ಪರಿಸ್ಥಿತಿ ಇದೆ. 70,000 ಜನಸಂಖ್ಯೆ ಇರುವ PHC ಜಾಗದಲ್ಲಿ ಒಬ್ಬ ಡಾಕ್ಟರೂ ಇಲ್ಲದಿದ್ದರೆ ಅಲ್ಲಿಯ ಪರಿಸ್ಥಿತಿ ಏನಾಗಬೇಕೆಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ, ಸ್ವಲ್ಪವಾದರೂ ಕಾಳಜಿ ವಹಿಸಬೇಲ್ಲವೇ? ಬಹುಶಃ ನನ್ನ ಪುಣ್ಯವೇನೆಂದ್ರೆ, 4–5 ಮೆಡಿಕಲ್ ಕಾಲೇಜಿನವರು ಇದ್ದ ಕಾರಣ ರೋಗಿಗಳ ಸಮಸ್ಯೆ ನಿಭಾಯಿಸುವುದಕ್ಕೆ ಸಾಧ್ಯವಾಗಿರುವುದು ನನ್ನ ಅದೃಷ್ಟವೆಂದು ನಾನು ಹೇಳುತ್ತೇನೆ. ಇಲ್ಲದಿದ್ದರೆ ಇವತ್ತು ರೋಗಿಗಳ ಪರಿಸ್ಥಿತಿ ಹೇಗೆ ಆಗಬೇಕೆಂದು ಆಲೋಚನೆ ಮಾಡಬೇಕು. ಅಲ್ಲಿ ನಮ್ಮದು ಸಮುದ್ರದ ಪ್ರದೇಶ, ಟೂರಿಸಂಗೆ ಬರುವವರು ಬೀಚ್ ನೋಡಿ ಬಹಳ ಸಂತೋಷವಾಗಿ ಹೋಗುವ ಪರಿಸ್ಥಿತಿ ಒಂದೆಡೆ ಆದರೆ, ಮತ್ತೊಂದೆಡೆ ಅಲೆಗಳಲ್ಲಿ ತೇಲಿ ಹೋಗಿ ಸಾವಿಗೀಡಾಗುವುದನ್ನು ಇವತ್ತು ಬಹಳಷ್ಟು ಕಡೆ ನೋಡುತ್ತಿದ್ದೇವೆ. ಸರಿಯದ ಒಂದು ಪೋಸ್ಟ್ ಮಾರ್ಟಂ ಮಾಡುವ ಒಂದು ಕೊಠಡಿ ಇಲ್ಲವೆಂದು ನಾನು ಹಲವಾರು ಸಾರಿ ಬೇಡಿಕೆ ಇಟ್ಟಿದ್ದೇನೆ. ಇದುವರೆವಿಗೂ ಪೋಸ್ಟ್ ಮಾರ್ಟಂ ಕೊಠಡಿ ಕಾರ್ಯರೂಪಕ್ಕೆ ಬರುವ ಅವಕಾಶವಾಗಲಿಲ್ಲ. ಇಂತಹ ಪ್ರದೇಶಗಳಲ್ಲಿ ಉತ್ತಮವಾದ post mortem ವ್ಯವಸ್ಥೆ ಹಾಗೂ ಕೊಠಡಿಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. Employment generation ಬಗ್ಗೆ ಹೇಳಬೇಕೆಂದರೆ, ಉದ್ಯೋಗಗಳನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರ ಏನು ಮಾಡುತ್ತಿದೆ ಎಂದು ಕುಳಿತು ಆಲೋಚನೆ ಮಾಡಬೇಕು. ಬೇರೆ ಬೇರೆ ಯೋಜನೆಗಳು ಅಲ್ಲಿ industrial park, ಇಲ್ಲಿ industrial area, ಅದರಲ್ಲಿ ಇಷ್ಟು ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂದು ನಾವು ಮಾತನಾಡಿಕೊಳ್ಳುತ್ತೇವೆ. ಇದು ಸರಿಯಾದ ರೀತಿಯಲ್ಲಿ ಕಾರ್ಯರೂಪಕ್ಕೆ ಬರುತ್ತಿದೆಯೇ ಇಲ್ಲವೆಂದು ನಾವು ನೋಡಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಒಂದು IT park ಇದೆ. ಈ IT park ನಲ್ಲಿ ಕೇವಲ Infosys ನವರು ಪ್ರಾರಂಭ ಮಾಡಿರುವುದು ಬಿಟ್ಟರೆ ಬೇರೆ ಯಾವುದೇ ಕೈಗಾರಿಕೆಗಳು ಅಲ್ಲಿ ಪ್ರಾರಂಭವಾಗಿಲ್ಲ. ಏಳು ವರ್ಷಗಳಾದವು. ಖಾಸಗಿ ಸಂಸ್ಥೆಯವರಿಗೆ ಏಳು ವರ್ಷಗಳಿಂದ ಅವರಿಗೆ ಜಾಗವನ್ನು ಕೊಟ್ಟು ಅವರು ಇನ್ನೂ ಕೂಡ ಅಲ್ಲಿ ಯಾವುದೇ ಸಂಸ್ಥೆಗಳನ್ನು ಪ್ರಾರಂಭ ಮಾಡದೇ ಇದ್ದರೆ ಉದ್ಯೋಗ ಹೇಗೆ ಸೃಷ್ಟಿಯಾಗುತ್ತದೆ ಎಂದು ನಾನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಎರಡು-ಮೂರು ವರ್ಷಗಳಲ್ಲಿ ಅವರು ಪ್ರಾರಂಭ ಮಾಡಲಿಲ್ಲವೆಂದರೆ ಅದನ್ನು ರದ್ದುಪಡಿಸುವುದಕ್ಕೆ ಸರ್ಕಾರಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಸರ್ಕಾರದವರು ಅವರನ್ನು ಕರೆದು ನೀವು ಏಕೆ ಪ್ರಾರಂಭ ಮಾಡಿಲ್ಲ ಎಂದು ಹೇಳಿ ಕೆಲಸ ಪ್ರಾರಂಭಿಸುವ ಹಾಗೆ ಕ್ರಮ ಕೈಗೊಳ್ಳಬೇಕು. ಈ ವ್ಯವಸ್ಥೆಯಲ್ಲಿ ಉದ್ಯೋಗ ಹೇಗೆ ಸೃಷ್ಟಿಯಾಗುತ್ತದೆ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಈರೋಡ್‌ನಲ್ಲಿ Industrial area ಎಂದು compound wall ಒಂದು ಕಟ್ಟುತ್ತಾರೆ. KIADB ಯವರಿಗೆ ಇದು ಬಿಟ್ಟರೆ ಏನೂ ಕೆಲಸ ಇಲ್ಲ. ಸಿಕ್ಕಿದಂತಹ ದುಡ್ಡಿನಲ್ಲಿ ಜಾಗವನ್ನು ಖರೀದಿ ಮಾಡಿ ಕಾಂಪೌಂಡ್ ವಾಲ್ ದೊಡ್ಡ ಇಂಡಿಯಾ ಚೈನಾ ಬಾರ್ಡ್‌ರ್ ಅಥವಾ ಪಾಕಿಸ್ಥಾನ ಇಂಡಿಯಾ ಬಾರ್ಡರ್ ತರಹ ದೊಡ್ಡ ವಾಲ್ ಬಾರ್ಡ್‌ರ್ ಕಟ್ಟುತ್ತಾರೆ. ಅಷ್ಟು ದೊಡ್ಡ ಕಾಂಪೌಂಡ್ ವಾಲ್ ಕಟ್ಟುವ ಅಗತ್ಯವಿಲ್ಲ. IT park ನಲ್ಲಿ ಯಾರೂ ಯುದ್ಧಕ್ಕೆ ಹೋಗುವುದಿಲ್ಲ. ಅಷ್ಟು ಕೋಟಿಗಟ್ಟಲೆ ಹಣ ಖರ್ಚು ಮಾಡಿ compound wall ಮಾಡುತ್ತಾರೆ. ಅದು ಬೇಕು ಬೇಡವೆಂದೂ ಆಲೋಚನೆ ಮಾಡುವುದಿಲ್ಲ. ನಮ್ಮ ಹೈವೇಯಲ್ಲಿ ಇದ್ದಂತಹ ರಸ್ತೆ ಬಹುಶಃ ಅಲ್ಲಿ ಇಂಡಸ್ಟ್ರೀಗಳು ಬರಲಿ ಎಂದು ದುಡ್ಡು ಖರ್ಚು ಮಾಡುತ್ತಾರೆ, ಅಲ್ಲಿ ಯಾರೂ ಒಬ್ಬರು ಬರುವ ವ್ಯವಸ್ಥೆಯಾಗಿಲ್ಲ. ಮಂಗಳೂರಿನ ಗಂಧಿ ಮಠದಲ್ಲಿ Export oriented park ಇದೆ ಒಬ್ಬರೂ ಕೂಡ ಇವತ್ತು ಪ್ರಾರಂಭ ಮಾಡಲಿಲ್ಲ. ಕಾಂಪೌಂಡ್ ವಾಲ್ ಹಾಕಿದ್ದಾರೆ. 10 ವರ್ಷಗಳಾದರೂ ಒಬ್ಬರೂ ಪ್ರಾರಂಭ ಮಾಡಲಿಲ್ಲ. ಹಾಗಾದರೆ ನಾವು ಯುವಕರಿಗೆ ಉದ್ಯೋಗ ಸೃಷ್ಟಿಸುತ್ತೇವೆಂದು ಹೇಗೆ ಹೇಳುವುದು? ಈ ರೀತಿಯ ಬೇರೆ ಬೇರೆ ಸಮಸ್ಯೆಗಳನ್ನು ಸರ್ಕಾರ ಅರ್ಥ ಮಾಡಿಕೊಂಡು ಮುಂದೆ ಹೋಗುವ ಅವಶ್ಯಕತೆ ಇದೆ ಎಂದು ಹೇಳುತ್ತಾ, ಸಮಾಜದ ಅಭಿವೃದ್ಧಿಗೆ ಬೇರೆ ಬೇರೆ ರೀತಿಯಲ್ಲಿ ಸರ್ಕಾರಿ ನೌಕರರು ಅವರು ಶಿಕ್ಷಕರಿರಲಿ, ಆಫೀಸಿನಲ್ಲಿರಲಿ, ತಾಲ್ಲೂಕು ಆಫೀಸ್‌ನವರು ಇರಲಿ, ಕಾಲೇಜ್ ಲೆಕ್ಚರರ್ಸ್ ಇರಲಿ ಅವರೂ ಕೂಡ ವಿಶೇಷವಾದ ಕೊಡುಗೆಯನ್ನು ಕೊಟ್ಟಿದ್ದಾರೆಂದು ಮನಗಾಣಬೇಕು. ಅವರು ಸ್ವಾಭಿಮಾನದ ಬದುಕು ಮಾಡುವುದಕ್ಕೆ

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅವರಿಗೆ ಬೇಕಾದಂತಹ ವ್ಯವಸ್ಥೆಯನ್ನು ಕೊಡುವ ಜವಾಬ್ದಾರಿ ಇದೆ. ಸರ್ಕಾರಿ ನೌಕರರು ಅಂದ ತಕ್ಷಣ ಅವರಿಗೆ ಬೇಕಾದ ಸರಿಯಾದ ಸವಲತ್ತುಗಳನ್ನು ಕೊಟ್ಟಾಗ ಸಮಸ್ಯೆಯಲ್ಲಿರುವ ಶೇಕಡ 50 ರಷ್ಟು ಸಮಸ್ಯೆಗಳು ಬಗೆಹರಿಯುತ್ತವೆ ಎಂದು ನಾನು

ಹೇಳಬಯಸುತ್ತೇನೆ. ಒಬ್ಬ ಸರ್ಕಾರಿ ನೌಕರನ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡುವ ವ್ಯವಸ್ಥೆಯಾಗಬೇಕು. ಒಬ್ಬ ಸರ್ಕಾರಿ ನೌಕರ ಅವನ ಮಗನಿಗೆ ಇಂಜಿನಿಯರ್ ಮಾಡಬೇಕಾದರೆ ಅವರಿಗೆ ವರ್ಷಕ್ಕೆ ಎರಡು ಲಕ್ಷ ಖರ್ಚು ಬರುತ್ತದೆ. ಅವನಿಗೆ ತಿಂಗಳಿಗೆ ಸಂಬಳ 20,000 ಸಿಗುವ ಪರಿಸ್ಥಿತಿ ಇದೆ. ಅವನ ಮನೆಯಲ್ಲಿ ಅವರ ವ್ಯವಸ್ಥೆಯನ್ನು ನೋಡಬೇಕು. ಅವರ ಆರೋಗ್ಯ ಇವನ್ನೆಲ್ಲಾ ನೋಡಿದರೆ ಯಾವ ರೀತಿ ಅವನು ಸ್ವಾವಲಂಬಿ ಬದುಕು ಬದುಕುವುದಕ್ಕೆ ಸಾಧ್ಯವಿದೆ? ಪ್ರತಿಯೊಬ್ಬ ಸರ್ಕಾರಿ ನೌಕರನ ಕನಸು ಒಂದು ಸಣ್ಣ ಮನೆ ಕಟ್ಟಿಕೊಳ್ಳಬೇಕೆಂದು ಇರುತ್ತದೆ. ಅವರಿಗೆ ಮನೆ ಕಟ್ಟುವುದಕ್ಕೆ ಸಾಧ್ಯವಿದೆಯೇ? ಆದಕಾರಣ ಸರ್ಕಾರ ಯಾವ ರೀತಿ ನಮ್ಮ ಸಮಾಜಕ್ಕೆ, ರಾಜ್ಯಕ್ಕೆ ಹಾಗೂ ದೇಶಕ್ಕೆ, ರೈತರು ವಿಶೇಷವಾದ ಸೇವೆಯನ್ನು ಕೊಟ್ಟಿದ್ದಾರೆ, ಸರ್ಕಾರಿ ನೌಕರರೂ ಕೂಡ ಅಷ್ಟೇ ಸೇವೆಯನ್ನು ಕೊಟ್ಟಿರುವುದನ್ನು ನಾವು ಮನಗಾಣಬೇಕು. ನಮ್ಮ ರೈತರಿಗೆ 0% ನಲ್ಲಿ ಲೋನ್ ಕೊಡುತ್ತಿದ್ದೇವೆ. ಸರ್ಕಾರಿ ನೌಕರರಿಗೆ 0% ಕೊಡುವುದು ಬೇಡ. ಒಂದು 3% ನಲ್ಲಿ ಕೆಳಮಟ್ಟದ ಸರ್ಕಾರಿ ನೌಕರರು ಯಾರಿದ್ದಾರೆ ಪೊಲೀಸ್‌ನವರು, ಶಿಕ್ಷಕರು, 20,000 ದ ಒಳಗೆ ಸಂಬಳ ತೆಗೆದುಕೊಳ್ಳುವ ಸರ್ಕಾರಿ ನೌಕರರಿಗೆ 3% ನಲ್ಲಿ ಗೃಹ ಸಾಲ ಕೊಡುವ ವ್ಯವಸ್ಥೆ ಮಾಡಿ ಇವತ್ತು ಸ್ವಾಭಿಮಾನದ ಬದುಕು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ನಮ್ಮ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು back'ward community ಹಾಸ್ಟೆಲ್‌ಗಳನ್ನು ಎಷ್ಟು ಸಾಧ್ಯವೋ ಅಷ್ಟು ತೆಗೆಯುವುದಕ್ಕೆ ಅವಕಾಶವಾಗಬೇಕು. ಇಡೀ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಮಂಗಳೂರು ವಿಶ್ವವಿದ್ಯಾಲಯ ಒಂದೇ ಇದೆ. ಇದರಲ್ಲಿ ಕೊಡಗು ಕೂಡ ಸೇರಿದೆ. ಅದು ನನ್ನ ಮತ ಕ್ಷೇತ್ರದಲ್ಲಿದೆ. ಅಲ್ಲಿಗೆ ದೂರ ದೂರದ ಪ್ರದೇಶಗಳಿಂದ ಕುಂದಾಪುರ, ಬೈಂದೂರು, ಹಾಗೂ ಮಡಿಕೇರಿಯಿಂದ ಬಂದಂತಹ ಮಹಿಳೆಯರಿಗೆ ಹಾಸ್ಟೆಲ್ ಸೌಲಭ್ಯವನ್ನು ಮಾಡದೇ ಇದ್ದರೆ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗದ ಮಹಿಳೆಯರು ಹೇಗೆ ವಿದ್ಯೆ ಕಲಿಯುವುದಕ್ಕೆ ಸಾಧ್ಯವಾಗುತ್ತದೆ? ಆದ ಕಾರಣ ಹಾಸ್ಟೆಲ್‌ಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮಗೆ ರಾಜ್ಯ ಮಟ್ಟದಲ್ಲಿ ಇವತ್ತು ಎರಡು ಖಾತೆಗಳು ಇವೆ. ಸಮಾಜ ಕಲ್ಯಾಣ ಸಚಿವರು ಬೇರೆ ಇದ್ದಾರೆ. ಮತ್ತು ಅಲ್ಪ ಸಂಖ್ಯಾತ ಸಚಿವರು ಇದ್ದಾರೆ. ಆದರೆ ಇಲಾಖೆಯಲ್ಲಿ ಅಧಿಕಾರಿ ಒಬ್ಬರೇ. ಅಲ್ಲಿ ಸರಿಯಾದ ಅಧಿಕಾರಿ ವರ್ಗ ಇಲ್ಲ. ಸಚಿವರು ಬೇರೆ ಬೇರೆ ಇರುವಾಗ ನಿಮಗೆ ಕಛೇರಿಗಳನ್ನು ಬೇರೆ ಬೇರೆ ಮಾಡುವುದಕ್ಕೆ ಏನು ಸಮಸ್ಯೆ ಎಂದು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಆಡಳಿತವನ್ನು ಸುಸಜ್ಜಿತಾಗಿ

ಮಾಡಲಿಕ್ಕೆ ಸರ್ಕಾರದಿಂದ ಸಿಕ್ಕುವ ಸವಲತ್ತುಗಳು ಆದಷ್ಟು ಬೇಗ ಜನಸಾಮಾನ್ಯರಿಗೆ ಮುಟ್ಟುವುದಕ್ಕೆ ಪ್ರತ್ಯೇಕವಾದ ಕಛೇರಿಗಳನ್ನು ಮಾಡಿ. ಎಲ್ಲಾ ಜಿಲ್ಲೆಗಳಲ್ಲಿ ಪ್ರತ್ಯೇಕವಾದ ಕಛೇರಿಗಳನ್ನು ಪ್ರಾರಂಭ ಮಾಡಿ ಅದಕ್ಕೆ ಬೇಕಾದ ಅಧಿಕಾರಿಗಳನ್ನು ನೇಮಿಸಬೇಕೆಂದು ಹೇಳಬಯಸುತ್ತೇನೆ. ನನಗೆ ಮಾತನಾಡುವುದು ಬಹಳಷ್ಟು ಇದೆ, ಬೇರೆ ಬೇರೆ ಸದ್ಯರುಗಳು ಮಾತನಾಡುವವರು ಇರುವುದರಿಂದ ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. ನಾವು ಶಾಸಕರಾಗಿ ಕೆಲಸ ಮಾಡಬೇಕೆಂದರೆ ಶಾಸಕರ ನಿಧಿಗೆ ಸರಿಯಾಗಿ ದುಡ್ಡು ಬರುತ್ತಿಲ್ಲ. ಹಲವಾರು ವರ್ಷಗಳಿಂದ ನಾವು ಒಂದು ಕೋಟಿಯಲ್ಲಿಯೇ ಇದ್ದೇವೆ. ಅದರಲ್ಲಿ 27% ನಾವು ಇದಕ್ಕೆ ಕೊಡಬೇಕಾಗುತ್ತದೆ. 60 ಲಕ್ಷ ದಲ್ಲಿ ನವು ಎಷ್ಟು ಕಿ.ಮೀ. ರಸ್ತೆ ಮಾಡಬಹುದು ಎಷ್ಟು ತೋಡು ಕಟ್ಟಬಹುದು, ಎಷ್ಟು ಬೋರ್ ಹೊಡೆಸಬಹುದು, ಏನು ಮಾಡುವುದು ಎಂದು ನಾವು ಆಲೋಚನೆ ಮಾಡಬೇಕಾಗುತ್ತದೆ. ಇದನ್ನು ಸ್ವಲ್ಪ ಜಾಸ್ತಿ ಮಾಡಬೇಕು. ಇದನ್ನು ನಾವು ಹಲವಾರು ಸಾರಿ ಬೇಡಿಕೆ ಇಟ್ಟಿದ್ದೇವೆ. ಮುಂದಿನ ಸಲ ಮಾಡುತ್ತೇವೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರದವರು ಒಬ್ಬ MP ಗೆ 5 ಕೋಟಿ ರೂ. ಕೊಡುವ ಅವಕಾಶ ಇದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಎಲ್ಲಾ ಮಂತ್ರಿಗಳಲ್ಲಿ ನನ್ನ ಕಳಕಳಿಯ ವಿನಂತಿ ನಮ್ಮ ಶಾಸಕರ ನಿಧಿಯನ್ನು ಕನಿಷ್ಠ 3 ಕೋಟಿಗಾದರೂ ಜಾಸ್ತಿ ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ ಇದನ್ನು implement ಮಾಡುವುದಕ್ಕೆ ಸರಿಯದ ವ್ಯವಸ್ಥೆಯಾಗಬೇಕು. ವಿಧಾನಸಭೆಯಲ್ಲಿ ಏನು ಹೇಳುತ್ತಾರೆ. ನೀವು ಒಂದು ಕೋಟಿ ಎಸ್ಟಿಮೇಟ್ ಮಾಡಿ ಕೆಲಸ ಮಾಡಿ ಆ ದುಡ್ಡು ಮಾರ್ಚ್‌ವರೆಗೆ ಬರುತ್ತದೆ ಎಂದು ಹೇಳುತ್ತಾರೆ. ಅಲ್ಲಿ ಡಿಸಿ ಬಳಿ ಹೊದಾಗ ನಮಗೆ ದುಡ್ಡು ಬರದೆ ನಾವು ರಿಲೀಸ್ ಮಾಡುವುದಿಲ್ಲ. ನಾಳೆ ಸರ್ಕಾರ ಬಿದ್ದರೆ ನಮಗೆ ದುಡ್ಡು ಕೊಡುವವರು ಯಾರು ಎಂದು ಕೇಳುವ ಪರಿಸ್ಥಿತಿಗೆ ಅವರು ಬಂದು ನಿಂತಿದ್ದಾರೆ. ಅವರು ದುಡ್ಡಿಗೆ ಅಪ್ರೂವಲ್ ಕೊಡುವುದಿಲ್ಲ. ಇಂಜಿನಿಯರ್ ಎಸ್ಟಿಮೇಟ್ ಮಾಡುವುದಿಲ್ಲ. ಇಂಜಿನಿಯರ್ ಎಸ್ಟಿಮೇಟ್ ಮಾಡಿದರೆ contractor ಕೆಲಸ ಮಾಡುವುದಿಲ್ಲ. ಅಭಿವೃದ್ಧಿ ಕಾರ್ಯ ಕೈಗೊಳ್ಳುವುದಕ್ಕೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕು. ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾದ ನಿರ್ದೇಶನ ಕೊಡಬೇಕು. ನಾನು ಬಹಳಷ್ಟು ಬೇಸರದಿಂದ ಹೇಳುವುದು ಎಲ್ಲಾ IAS ಅಧಿಕಾರಿಗಳು ಒಂದೆ ಕಡೆ ಕಾಲ ಕಳೆಯುತ್ತಿದ್ದಾರೆ. ಬೇರೆ ಬೇರೆ ಜಿಲ್ಲೆಗೆ ಹೋದಾಗ ಒಂದೊಂದು ಐಡಿಯಾ. ಒಬ್ಬ ಡಿಸಿ ಬಂದು ಒಂದು ಐಡಿಯ ಮಾಡಿ ರೂಲ್ ಮಾಡುತ್ತಾರೆ. ಒಂದು ವರ್ಷಕ್ಕೆ ಅವರು ಇರುವುದಿಲ್ಲ. ಅದು ಬಿಟ್ಟು ಇನ್ನೊಂದು ಗ್ರಾಮಕ್ಕೆ ಹೊಗುತ್ತಾರೆ. ಜನರು ಇಲ್ಲಿ

ಹೊಂದಿಕೊಳ್ಳಬೇಕೋ ಅಥವಾ ಅಲ್ಲಿ ಬಂದಂತಹ ಡಿಸಿಗೆ ಹೊಂದಿಕೊಳ್ಳಬೇಕೋ ಎಂದು ಆಲೋಚನೆ ಮಾಡಬೇಕಾಗುತ್ತದೆ. ಅದ ಕಾರಣ ನಮ್ಮ ಶಾಸಕರ ನಿಧಿಗೆ ಆದಷ್ಟು ಬೇಗ ಅನುಮೋದನೆ ಕೊಟ್ಟರೆ ಜಿಲ್ಲಾಧಿಕಾರಿಗಳಿಗೆ ದುಡ್ಡು ಬರುತ್ತದೆ. ಅನುಮೋದನೆ ಕೊಡುವ ಆದೇಶವನ್ನು ಸರ್ಕಾರ ಹೊರಡಿಸಬೇಕೆಂದು ಕೇಳಿಕೊಂಡು, ಮಲೆನಾಡಿನ ಬಗ್ಗೆ ಬಜೆಟ್‌ನಲ್ಲಿ ದುಡ್ಡು ಇಟ್ಟಿದ್ದಾರೆ. ಇದುವರೆಗೂ ಮೀಟಿಂಗ್ ಕರೆದಿಲ್ಲ. ಡಿಸೆಂಬರ್‌ನಲ್ಲಿ ಚುನಾವಣೆ ಇರಬಹುದು, ಚುನಾವಣೆ ಎಷ್ಟು ಮುಂದೆ ಹೋದರೂ ಮಾರ್ಚ್ ನಂತರ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಿಂತ ಮುಂಚೆ ಕೆಲಸ ಮಾಡಿ ಮುಗಿಸಬೇಕಾಗುತ್ತದೆ. ಮಲೆನಾಡಿನ ದುಡ್ಡು ಇನ್ನೂ ಬರಬೇಕು. ಮೀಟಿಂಗ್‌ಗೆ ಕಾಲ ನಿಗಧಿ ಮಾಡುವ ಕೆಲಸ ಇನ್ನೂ ಆಗಲಿಲ್ಲ. ಮೊನ್ನೆತನಕ ನಾವು ಕೇಳಿದರೆ ಸಚಿವರು ಇಲ್ಲವೆಂದು ಹೇಳಿದರು. ಈಗ ಕಾನೂನು ಸಚಿವರು ಅದಕ್ಕೆ ಸಚಿವರಾಗಿದ್ದಾರೆ. ಆದಷ್ಟು ಬೇಗ ಮಲೆನಾಡು ಮತ್ತಿತರೆ ಬೋರ್ಡುಗಳ ಮೀಟಿಂಗ್ ನಡೆಸಿ ಅನುದಾನ ಬಿಡುಗಡೆ ಮಾಡುವುದಕ್ಕೆ ನಮಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಶಾಸಕರ ನಿಧಿಯನ್ನು ಕಂತು ಕಂತಿನಲ್ಲಿ ಬಿಡುಗಡೆ ಮಾಡುವುದು ಬಿಟ್ಟು ಒಂದೇ ಸಾರಿ ಬಿಡುಗಡೆ ಮಾಡುವ ಹಾಗೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ, ಈ ಎಲ್ಲಾ ಮಾತುಗಳನ್ನು ನಾವು ಬರೆದು ಇಟ್ಟುಕೊಂಡು ಚರ್ಚೆ ಮಾಡುವಂಥದ್ದಲ್ಲ. ನಾವು ನಮ್ಮ ಕ್ಷೇತ್ರಕ್ಕೆ ಹೋದಂತಹ ಸಂದರ್ಭದಲ್ಲಿ ಆದಂತಹ ಅನುಭವವನ್ನು ನಾವು ಇಲ್ಲಿ ಹೇಳುತ್ತಿದ್ದೇವೆ. ಜನರ ಸಮಸ್ಯೆಗಳನ್ನು ನಾವು ನಿಮ್ಮ ಮುಂದೆ ಬಂದು ಹೇಳುವಂತಹ ಅವಕಾಶವಾಗಿದೆ. ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ನಾನು ಹೇಳಿದ್ದು ಆಗುತ್ತದೆ ಎಂದು ಅಲ್ಲ, ಅಥವಾ ಇನ್ನೊಬ್ಬರು ಹೇಳಿದ್ದು ಆಗುತ್ತದೆ ಎಂದು ಅಲ್ಲ. ಎಲ್ಲವನ್ನು ಮಾಡುವುದಕ್ಕೆ ಯಾರಿಗೂ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ. ಕನಿಷ್ಠ ಮಟ್ಟದ ರೂಪುರೇಷೆಯನ್ನು ಮಾಡಿ ಡಿಸೆಂಬರ್ ತಿಂಗಳೊಳಗೆ ಎಲ್ಲಾ ಯೋಜನೆಗಳು ಕಾರ್ಯಗತ ಆಗುವ ಒಂದು ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಆಶಿಸಿ, ಸರ್ಕಾರ ಪೂರ್ಣ ಅವಧಿಯನ್ನು ಪೂರೈಸಲಿ ಎಂದು ನಾನು ಶುಭ ಹಾರೈಸುತ್ತಾ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ):- ಮಾನ್ಯ ಉಪಾಧ್ಯಕ್ಷರೆ, ಅನುದಾನ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ

ವಂದಿಸುತ್ತೇನೆ. ಬಹುಶಃ ನಮ್ಮದು ಆ ಭಾಗದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸಾಕಷ್ಟು ಗ್ರಾಮಾಂತರ ಭಾಗದ ಮತ್ತು ಇತರ ಜನಗಳ ಸಮಸ್ಯೆಗಳಿದ್ದು, ಆ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸುತ್ತದೆ ಎನ್ನುವ ಇಚ್ಛೆಯನ್ನಿಟ್ಟುಕೊಂಡು ವಿವಿಧ ಇಲಾಖೆಗಳಿಗೆ ಸೇರಿದಂಥ ಕೆಲವು ವಿಚಾರಗಳನ್ನು ಈ ಸದನದ ಮುಂದೆ ನಾನು ಪ್ರಸ್ತಾವಿಸುವುದಕ್ಕೆ ಬಯಸುತ್ತೇನೆ. ಬಹುಶಃ ಅನೇಕ ನಮ್ಮ ಶಾಸಕ ಸ್ನೇಹಿತರುಗಳು ಅಭಿಪ್ರಾಯ ಪಟ್ಟಂತೆ ಶಿಕ್ಷಣದ ಬಗ್ಗೆ ಸಾಕಷ್ಟು ಸುಧಾರಣೆಗಳು ಇನ್ನೂ ನಮ್ಮ ಭಾಗದಲ್ಲಿ ಆಗಬೇಕಾಗಿದೆ, ನಮ್ಮ ಸರ್ಕಾರ ಬಹಳ ದೊಡ್ಡ ಸಂಖ್ಯೆಯಲ್ಲಿ ಶಿಕ್ಷಕರುಗಳನ್ನು ನೇಮಿಸಿಕೊಂಡು ಶಾಲೆಗಳನ್ನು ಪ್ರಾರಂಭ ಮಾಡುತ್ತಾ ಹೈಸ್ಕೂಲ್‌ಗಳನ್ನೂ ಕೂಡ ಕೊಟ್ಟಿದೆ. ಆದರೆ ಸಾರ್ವಜನಿಕರ ಬೇಡಿಕೆಗಳಿಗನುಗುಣವಾಗಿ ಶೇಕಡ ನೂರಕ್ಕೆ ನೂರರಷ್ಟು ಆಗಿಲ್ಲವೆಂದು ನನಗನ್ನಿಸುತ್ತಿದೆ. ಬಹುಶಃ ನಮ್ಮ ಭಾಗದಲ್ಲಿ ಶಿಕ್ಷಕರುಗಳು ಮತ್ತು ಹೈಸ್ಕೂಲ್‌ಗಳು ಇನ್ನೂ ಬೇಕಾಗಿದೆ. ನನ್ನ ಕ್ಷೇತ್ರವಾದ ಜಮಖಂಡಿಯ ಸಾವಳಗಿ ರೆವಿನ್ಯೂ ಸೆಂಟರ್ ಆಗಿದ್ದು ಆ ಭಾಗದ ಸುತ್ತಮುತ್ತಲು ಸುಮಾರು 22 ಹಳ್ಳಿಗಳಿದ್ದು ಸಾವಳಗಿಯಲ್ಲಿ ಕಾಲೇಜ್ ಇದೆ, ಹೈಸ್ಕೂಲ್ ಕೂಡ ಇದೆ. ಆದರೆ ಅಲ್ಲಿ ಜೂನಿಯರ್ ಕಾಲೇಜ್ ಇಲ್ಲ. ನಮ್ಮ ಸರ್ಕಾರ, ಹಿಂದಿನ ಸರ್ಕಾರ, ನಮ್ಮ ಹಿಂದಿನ ಶಾಸಕರ ಪ್ರಯತ್ನಗಳಿಂದಾಗಿ ಅಲ್ಲಿ ಜೂನಿಯರ್ ಕಾಲೇಜ್‌ಗೆ ಕಟ್ಟಡವನ್ನು ಕಟ್ಟಲಾಗಿದೆ. ಒಂದು ವಿಶೇಷತೆ ಏನೆಂದರೆ ಅಲ್ಲಿ ಕಟ್ಟಡ ಕಟ್ಟಲಾಗಿದೆಯಾದರೂ ಅಲ್ಲಿಗೆ ಜೂನಿಯರ್ ಕಾಲೇಜ್ ಮಂಜೂರಾಗಿಲ್ಲ. ನಾನು ಇದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನವನ್ನೂ ಸೆಳೆದ. ಅದಷ್ಟು ಬೇಗನೇ ಅಲ್ಲಿಗೆ ಜೂನಿಯರ್ ಕಾಲೇಜ್ ಕೊಟ್ಟು ಸಾವಳಗಿ ಮತ್ತು ಸುತ್ತಮುತ್ತಲೂ ಬರತಕ್ಕಂಥ 22 ಹಳ್ಳಿಗಳ ಸಾಮಾನ್ಯ ಬಡವರ ಮಕ್ಕಳಿಗೆ ಪದವಿ ಪೂರ್ವ ಕಾಲೇಜನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಆದಷ್ಟು ಬೇಗನೇ ಮಾಡಬೇಕೆನ್ನುವ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡಬಯಸುತ್ತೇನೆ. ಇದರ ಜೊತೆಗೆ ನನ್ನ ಕ್ಷೇತ್ರದ ನನ್ನ ತಾಲ್ಲೂಕಿನಲ್ಲಿ ಶಿಕ್ಷಣದ ಬಗ್ಗೆ ಇರತಕ್ಕಂಥ ಒಂದು ಸಮಸ್ಯೆಯೇನೆಂದರೆ ಜಮಖಂಡಿ ತಾಲ್ಲೂಕಿನ ಮಧ್ಯದಲ್ಲಿ ಕೃಷ್ಣಾ ನದಿ ಹರಿದುಹೋಗಿದೆ. ಬಹುಶಃ ಸರ್ಕಾರ 519.6 ಮೀ ಹಿನ್ನೀರು ಅಲ್ಲಿಗೆ ಬಂದು ಸುಮಾರು ನನ್ನ ಕ್ಷೇತ್ರದ 13 ಹಳ್ಳಿಗಳು ಮುಳುಗಡೆಯಾಗುತ್ತವೆಂದು ಸುಮಾರು ಹದಿನೈದು ಇಪ್ಪತ್ತು ವರ್ಷಗಳ ಹಿಂದೆಯೇ ಪರಿಗಣಿಸಿ ಆ ಮುಳುಗಡೆ ಗ್ರಾಮಗಳಿಗೆ ಒಂದು ಪುನರ್ವಸತಿ ಯೋಜನೆಗೆ ಸ್ಥಳವನ್ನು ತೋರಿಸಿದ್ದಾರೆ. ಆ ಒಂದು ಹಿನ್ನೀರಿನಲ್ಲಿ ಮುಳುಗಡೆಯಾಗುವ ಗ್ರಾಮಗಳಿಗೆ ಕೊಡಬೇಕಾದಂಥ ಪರಿಹಾರವನ್ನು ಕೂಡ ಕೊಟ್ಟಿದ್ದಾರೆ. ಆದರೆ ನೂರಕ್ಕೆ

ತೊಂಭತ್ತೊಂಭತ್ತರಷ್ಟು ಜನರು ಕೃಷಿಯನ್ನೇ ಮಾಡುವಂಥವರು ಆ ಗ್ರಾಮಾಂತರ ಭಾಗದಲ್ಲಿರುವುದರಿಂದ ಅಲ್ಲಿ ಉಳಿದಿರುವಂಥ ಜಮೀನು, ಪಂಪ್‌ಸೆಟ್ ಹಾಗೂ ಇತ್ಯಾದಿಗಳನ್ನು ಬಿಟ್ಟು ಪುನರ್ವಸತಿ ಕೇಂದ್ರಕ್ಕೆ ಇನ್ನೂ ಯಾರೂ ಹೋಗಿಲ್ಲ. ಹೀಗಾಗಿ ಅಲ್ಲಿರುವಂಥ ಜನರು ಆ ಗ್ರಾಮಗಳಿಂದ ಹೊರ ಬರುವುದಕ್ಕೆ ಸಿದ್ಧರಿಲ್ಲ. ಬಹುಶಃ ನನಗನ್ನಿಸುತ್ತಿದೆ 524 ಮೀಟರ್ ಎತ್ತರವಾಗುವವರೆಗೆ, ಎಲ್ಲಿಯವರೆಗೆ ಆ ಗ್ರಾಮದಲ್ಲಿ ಪ್ರತ್ಯಕ್ಷ ನೀರು ಬರುವುದಿಲ್ಲವೋ ಅಲ್ಲಿಯವರೆಗೆ ಜನರು ತಮ್ಮ ಹಳೆಯ ಸ್ಥಳವನ್ನು ಬಿಟ್ಟು ಹೊಸ ಗ್ರಾಮಕ್ಕೆ ಹೋಗುವುದಕ್ಕೆ ರೆಡಿಯಿಲ್ಲ. ಸಾಕಷ್ಟು ಅಭಿವೃದ್ಧಿ ಕೆಲಸಗಳ ಹಿನ್ನೆಲೆಯಲ್ಲಿ ಆ ಗ್ರಾಮಗಳಿಗೆ ಉಳಿದೆಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿದರೂ ಕೂಡ ಶಿಕ್ಷಣದ ಬಗ್ಗೆ ಸ್ವಲ್ಪ ಸರ್ಕಾರ ಗಮನವನ್ನು ಕೊಟ್ಟಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಏಕೆಂದರೆ ಇವತ್ತು ಶಿಕ್ಷಣ ಇಲಾಖೆಯಿಂದ ಬರತಕ್ಕಂಥ ಹಣ, ಈ ಒಂದು 13 ಹಳ್ಳಿಗಳಲ್ಲಿ, ನಾನೊಂದು ಪಟ್ಟಿಯನ್ನು ಮಾನ್ಯ ಶಿಕ್ಷಣ ಸಚಿವರಿಗೆ ಕೊಟ್ಟಿದ್ದೇನೆ, 13 ಹಳ್ಳಿಗಳಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ, ಹಳೆಯ ಶಾಲೆಗಳಲ್ಲಿರುವ ಕೋಣೆಗಳು ಸಂಪೂರ್ಣ ರಿಪೇರಿಗೆ ಬಂದಿವೆ. ಇವತ್ತು ಶಾಲಾ ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಹೊಸ ಕಟ್ಟಡದ ಅವಶ್ಯಕತೆ ಇದೆಯಾದ ಕಾರಣ ಅಲ್ಲಿ ಶಾಲಾ ಕಟ್ಟಡವಾಗಬೇಕೆಂದಾಗ ಅಲ್ಲಿರುವಂಥ ಅಧಿಕಾರಿಗಳು ಈ ಗ್ರಾಮಗಳು ಮುಳುಗಡೆ ಗ್ರಾಮಗಳಾಗಿರುವುದರಿಂದ ಹೊಸ ಕಟ್ಟಡಗಳನ್ನು ಕಟ್ಟುವುದಕ್ಕೆ ಅವಕಾಶವಿಲ್ಲವೆನ್ನುವಂಥ ಮಾತನ್ನು ಹೇಳುತ್ತಾರೆ. ಜಿಲ್ಲಾ ಮಟ್ಟದಲ್ಲಿ ನಡೆಯುವ ಸಭೆಯಲ್ಲಿಯೂ ಕೂಡ ಈ ಬಗ್ಗೆ ಸಾಕಷ್ಟು ಬಿಸಿ ಬಿಸಿಯಾದ ಚರ್ಚೆಗಳಾದರೂ ಕೂಡ ಆ ಅಧಿಕಾರಿಗಳು ಒಪ್ಪದೇ ಇರುವುದರಿಂದ ಆ 13 ಹಳ್ಳಿಗಳ ಶಾಲಾ ಕಟ್ಟಡಗಳ ಪರಿಸ್ಥಿತಿ ಹೇಗಿದೆಯೆಂದರೆ ಇವತ್ತೇನಾದರೂ ಮಳೆ ಬಂದುಬಿಟ್ಟರೆ ಶಾಲೆಗಳಲ್ಲಿರುವ ಮಕ್ಕಳುಗಳು ಶಾಲೆ ಬಿಟ್ಟು ಮನೆಗೆ ಹೋಗುವಂಥ ಪರಿಸ್ಥಿತಿ ಇದೆ. ಹೀಗಾಗಿ ಮಾನ್ಯ ಶಿಕ್ಷಣ ಸಚಿವರಲ್ಲಿ ಮತ್ತು ಸರ್ಕಾರಕ್ಕೆ ವಿಶೇಷವಾದ ಮನವಿಯನ್ನು ನಾನು ಮಾಡುತ್ತೇನೆ, ಈ 13 ಗ್ರಾಮಗಳಲ್ಲಿರುವ ಶಾಲಾ ಕಟ್ಟಡಗಳ ರಿಪೇರಿ ಮಾಡಲು ಸುಮಾರು ಒಂದು ಕೋಟಿ ರೂ. ಗಳಷ್ಟು ಹಣದ ಅವಶ್ಯಕತೆ ಇದೆ ಮತ್ತು ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ 22 ಹೊಸ ಕೊಠಡಿಗಳು ಕೂಡ ಬೇಕಾಗಿದೆ. ಇದಕ್ಕೆ ಬೇಕಾದಂಥ ದುಡ್ಡನ್ನು ಶಿಕ್ಷಣ ಇಲಾಖೆಯಿಂದ ಅಥವಾ ಕೃಷ್ಣಾ ಮೇಲ್ದಂಡೆಯ ಪುನರ್ವಸತಿ ಯೋಜನೆಯ ಬಜೆಟ್‌ನಿಂದಲಾದರೂ ಹಣವನ್ನು ಮಂಜೂರು ಮಾಡಿ ತಕ್ಷಣ ಶಾಲಾ ಕೊಠಡಿಗಳ ರಿಪೇರಿ ಮತ್ತು ಹೊಸ ಕಟ್ಟಡಕ್ಕೆ ಅವಕಾಶ ಮಾಡಿಕೊಡಬೇಕೆನ್ನುವ ವಿನಂತಿಯನ್ನು

ಈ ಸಂದರ್ಭದಲ್ಲಿ ಮಾಡುತ್ತೇನೆ. ಇನ್ನು ನಮ್ಮ ಭಾಗದಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರಿದ್ದಾರೆ. ಜಮಖಂಡಿ ಮತ್ತು ಬೀಳಗಿ ಭಾಗವೆಂದರೆ, ಅದರಲ್ಲಿಯೂ ವಿಶೇಷವಾಗಿ ಕೃಷ್ಣಾ, ಘಟಪ್ರಭ ಮತ್ತು ಮಲಪ್ರಭ ನದಿ ಹರಿದಿರುವಂಥ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬನ್ನು ರೈತರು ಬೆಳೆದಿದ್ದಾರೆ. ಆ ಕಬ್ಬನ್ನು ನುರಿಸುವಂಥ ಕಾರ್ಖಾನೆಗಳೂ ಕೂಡ ಸಾಕಷ್ಟು ಹುಟ್ಟಿಕೊಂಡಿವೆ. ಹೀಗಾಗಿ ಜಮಖಂಡಿ ಸುತ್ತಮುತ್ತಲೂ ಕಾರ್ಮಿಕರ ಸಂಖ್ಯೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಬೆಳಿಗ್ಗೆಯಿಂದ ಆಸ್ಪತ್ರೆಗಳ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆ ಭಾಗದಲ್ಲಿರುವಂಥ ತೇರದಾಳ ಇರಬಹುದು, ಮಹಾಲಿಂಗಪುರ ಇರಬಹುದು, ಜಮಖಂಡಿ ಇರಬಹುದು, ಮುಧೋಳ ಇರಬಹುದು, ಇಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೆ ಬೇಕಾಗಿರುವಷ್ಟು ವೈದ್ಯರುಗಳ ಸಂಖ್ಯೆಯಿಲ್ಲ. ಈ ಆಸ್ಪತ್ರೆಗಳಲ್ಲಿ ಅವಶ್ಯಕತೆಯಿರುವಷ್ಟು ವೈದ್ಯರುಗಳಿಲ್ಲದೇ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಗಳಾಗಿವೆ. ಹೀಗಾಗಿ ಈ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯ ಸಚಿವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಅಲ್ಲೊಂದು ಕಾರ್ಮಿಕ ಇಲಾಖೆಗೆ ಸೇರಿದಂತೆ ಒಂದು ಆಸ್ಪತ್ರೆಯನ್ನು ಮಾಡುವುದಕ್ಕೆ ತಾವೇನಾದರೂ ಮಂಜೂರಾತಿ ಕೊಟ್ಟರೆ ಸುಮಾರು ಎರಡೂ ಮೂರು ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಅಲ್ಲಿ ಎರಡು-ಮೂರು ತಾಲ್ಲೂಕುಗಳಿಗೆ ಅನುಕೂಲವಾಗುವಂಥ ಇ.ಎಸ್.ಐ. ಆಸ್ಪತ್ರೆಯನ್ನು ಮಾಡುವುದಕ್ಕೆ ಸಾಧ್ಯತೆ ಇದೆ. ಅದಕ್ಕೆ ಮಂಜೂರಾತಿಯನ್ನು ಸರ್ಕಾರ ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು ಜಮಖಂಡಿ ತಾಲ್ಲೂಕಿನ ಭಾಗದಲ್ಲಿ ಐ.ಟಿ.ಐ ಕಾಲೇಜ್ ಬೇಕೆಂದು ಈ ಹಿಂದೆ ಸರ್ಕಾರದ ಗಮನವನ್ನು ಸೆಳೆದಿದ್ದೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದೆ. ಕೇವಲ ನಾಲ್ಕು ಜನ ಮಂತ್ರಿಗಳು ಮಾತ್ರ ಸದನದಲ್ಲಿದ್ದಾರೆ. ಈ ಬಗ್ಗೆ ನೀವು ಸರ್ಕಾರಕ್ಕೆ ಏಕೆ ಎಚ್ಚರಿಕೆಯನ್ನು ಕೊಡುತ್ತಿಲ್ಲ? ಇಬ್ಬರು ಉಪ ಮುಖ್ಯಮಂತ್ರಿಗಳಿರುವಾಗ ಅವರಿಬ್ಬರೂ ಮೇಲ್ಮನೆಯಲ್ಲಿರುತ್ತಾರೆಯೇ? ಒಬ್ಬ ಉಪ ಮುಖ್ಯಮಂತ್ರಿಯಾದರೂ ಈ ಸದನದಲ್ಲಿ ಇರಬೇಡವೇ? ಹೋಗಲಿ ಇನ್ನೂ ಇಬ್ಬರನ್ನೂ ಉಪ ಮುಖ್ಯಮಂತ್ರಿಗಳನ್ನಾಗಿ ಮಾಡಿಬಿಡಲಿ, ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ. ಹೇಗಿದ್ದರೂ ಪರಿಶಿಷ್ಟ ಜಾತಿಯವರಿಗೆ ಅನ್ಯಾಯವಾಗಿದೆಯೆಂದು ಹೇಳಲಾಗಿದೆ.

ಶ್ರೀ ಉಮೇಶ್ ವಿ. ಕತ್ತಿ:- Deputy Chief Minister ಎಂದು ಮಾಡಬೇಕೇ?

ಶ್ರೀ ಸಿದ್ದರಾಮಯ್ಯ:– Deputy Chief Minister ಎನ್ನುವ ಪದ Constitutionನಲ್ಲಿ ಇಲ್ಲ. ರಾಜಕೀಯಕ್ಕೋಸ್ಕರ ಇದನ್ನು ಮಾಡಿಕೊಂಡಿರುವುದು. ನೀವು ರಾಜಕೀಯಕ್ಕಾಗಿ ಅವರನ್ನೂ ಡಿ.ಸಿ.ಎಂ. ಆಗಿ ಮಾಡಿಕೊಳ್ಳಿ. There is no provision as such in the Constitution. Constitution ನಲ್ಲಿ Deputy Chief Minister ಎಂದು ಇಲ್ಲ. Only Chief Minister and Ministers ಎಂದು ಇರುವುದು.

ಶ್ರೀ ಉಮೇಶ್ ವಿ. ಕತ್ತಿ:– ನೀವೂ ಕೂಡ Deputy Chief Minister ಆಗಿದ್ದಿರಲ್ಲ.

ಶ್ರೀ ಸಿದ್ದರಾಮಯ್ಯ:– ನನಗೂ ಕೂಡ ಹಾಗೇ ಕರೆಯುತ್ತಿದ್ದದ್ದು. Constitutionನಲ್ಲಿ Deputy Chief Minister ಎಂದು ಹೇಳಿಲ್ಲದಿದ್ದರೂ ಕೂಡ ನನ್ನನ್ನೂ Deputy Chief Minister ಆಗಿ ಮಾಡಲಾಗಿತ್ತು. ನನಗೂ ಕೂಡ ಇದೇ ರೀತಿಯಲ್ಲಿಯೇ ಡಿ.ಸಿ.ಎಂ. ಎಂದು ಮಾಡಿದ್ದು. ಅರ್ಥವಾಯಿತೆ, ನಾನೇ ಈ ಬಗ್ಗೆ ಹೇಳಿದ್ದೇನೆ, Constitution ನಲ್ಲಿ Deputy Chief Minister ಎಂದು ಇಲ್ಲ, ನಮ್ಮನ್ನು ಖುಷಿ ಪಡಿಸುವುದಕ್ಕೆ ಈ ರೀತಿ ಮಾಡಿದ್ದಾರೆಂದು ನಾನು ಹಿಂದೆಯೇ ಹೇಳಿದೆ. ನಮ್ಮನ್ನು ಸಮಾಧಾನ ಮಾಡುವುದಕ್ಕೆ ಮಾಡಿದ್ದಾರೆಂದು ಹೇಳಿದ್ದೆ. ಅದೇ ರೀತಿ ನೀವೂ ಕೂಡ ಖುಷಿ ಪಡಿಸುವುದಕ್ಕೆ ಇಬ್ಬರನ್ನು Deputy Chief Minister ಆಗಿ ಮಾಡಿದ್ದೀರಿ. ಇನ್ನೂ ಇಬ್ಬರನ್ನು ಮಾಡಿ. ಅಲ್ಲೊಂದಿಬ್ಬರು, ಇಲ್ಲೊಂದಿಬ್ಬರು ಇರಲಿ. Deputy Chief Minister ಎಂದು ಹೇಳಿದ ತಕ್ಷಣ ಅದಕ್ಕೊಂದು ತೂಕ ಬರುತ್ತದೆ. ಈ ಯಡಿಯೂರಪ್ಪನವರು ಇದರ ಬಗ್ಗೆ ಸರಿಯಾಗಿ ಅಡ್ವೈಸ್ ಮಾಡುವುದಿಲ್ಲ. ಯಡಿಯೂರಪ್ಪನವರೆ, ನಿಮ್ಮದೇ ಸರ್ಕಾರವಿದೆ. You are the De facto Chief Minister, You are the Boss. ನೋಡಿ ನೀವು ಹೇಳಿದ ತಕ್ಷಣ ಸಾಲ ಮನ್ನಾ ಮಾಡಿಬಿಟ್ಟರು. ನಾವು ಎಷ್ಟು ಶಂಖಹೊಡೆದುಕೊಂಡರೂ ಮಾಡಲಿಲ್ಲ. ಆದರೆ ನೀವು ಅರ್ಧ ಗಂಟೆಯಲ್ಲಿ ಮಾತನಾಡಿ ಸಾಲ ಮನ್ನಾ ಮಾಡಿಸಿಬಿಟ್ಟಿರಿ. ಈ ಸರ್ಕಾರದಲ್ಲಿ ಇನ್ನೇನಾದರೂ ಆಗಬೇಕಾಗಿದ್ದರೆ ನಾವು ನಿಮಗೇ ಹೇಳಿಕೊಳ್ಳಬೇಕೆಂದು ತೀರ್ಮಾನ ಮಾಡಿಬಿಟ್ಟಿದ್ದೇವೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):– ಮಾನ್ಯ ಸಿದ್ದರಾಮಯ್ಯನವರೆ, 2005ರಲ್ಲಿ ನಿಮ್ಮನ್ನು ಉಪ ಮುಖ್ಯಮಂತ್ರಿಗಳು ಎಂದೇ ಮಾಡಿದ್ದರು. ನಡಾವಳಿಯಲ್ಲಿಯೂ ಅದೇ ರೀತಿ ಇದೆ.

ಶ್ರೀ ಸಿದ್ದರಾಮಯ್ಯ:- ಉದಾಸಿಯವರೆ, ನಾನೇ ಹೇಳಿದ್ದೇನಲ್ಲ. ನಾನೇ ಒಂದು ಸಾರಿ ಇಲ್ಲಿ ಹೇಳಿದ್ದೇನೆ, ಇದೇ ರೀತಿಯಲ್ಲಿ ಒಂದು ಬಾರಿ ಈ ವಿಷಯ ಚರ್ಚೆಗೆ ಬಂದಾಗ Constitution ನಲ್ಲಿ Deputy Chief Minister ಎನ್ನುವ ಪದವಿಲ್ಲ. ನನಗೆ ರಾಜಕೀಯವಾಗಿ ಸಮಾಧಾನ ಮಾಡುವುದಕ್ಕೋಸ್ಕರವಾಗಿ ನನಗೆ ಆ ಹುದ್ದೆಯನ್ನು ಕೊಟ್ಟಿದ್ದಾರೆಂದು ಹೇಳಿದ್ದೇನೆ. ನೀವು ಮಾಡಿರುವುದು ಅದೇ ಕೆಲಸ. ಇದು Constituition ನಲ್ಲಿ ಇದೆಯೇ? Chief Minister & Council of Ministers ಎಂದು ಇರುವುದು ಬಿಟ್ಟರೆ ಆ ಪದ ಎಲ್ಲಿದೆ? ನಾವು Deputy Chief Minister ಎಂದು ಪ್ರಮಾಣ ವಚನ ಸ್ವೀಕಾರ ಮಾಡುವ ಹಾಗೆ ಇಲ್ಲ. ನಾನು ಉಪ ಮುಖ್ಯಮಂತ್ರಿಯಾಗಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಮಂತ್ರಿಯಾಗಿ ಎಂದು ಹೇಳಬೇಕು. ಆ ರೀತಿ ಹೇಳಿದರೆ it is againist the Constitution.ಅದು ಏನೇ ಇರಲಿ, ಇಲ್ಲಿ demands ಮೇಲೆ ಚರ್ಚೆ ಮಾಡುವಾಗ ಸದನದಲ್ಲಿ ಮಂತ್ರಿಗಳು ಇಲ್ಲದೆ ಖಾಲಿ ಇದೆ. ನಮಗೆ Council ನಲ್ಲಿ ಮಂತ್ರಿಗಳು ಯಾರಿದ್ದಾರೆ, ಅಲ್ಲಿಗೆ ಯಾರನ್ನು ಅಲಾಟ್ ಮಾಡಿದ್ದೀರಿ, ಇಲ್ಲಿ ಯಾರಿದ್ದಾರೆ ಎಂದು ಒಂದು ಪಟ್ಟಿಯನ್ನು ಕೊಡಿ. ಅವರು ಅಲ್ಲಿಗೂ ಹೋಗಬೇಕು, ಇಲ್ಲಿಗೂ ಬರಬೇಕು. ಯಾರ್ಯಾರನ್ನು ಎಲ್ಲಿಗೆ ಮಾಡಿದ್ದೀರಿ ಎಂದು ಒಂದು ಪಟ್ಟಿಯನ್ನು ಕೊಡಿ. ಇಲ್ಲಿ ಮಂತ್ರಿಗಳೇ ಇಲ್ಲದೆ ಹೋದರೆ ಎಂ.ಎಲ್.ಎ. ಗಳು ಏಕೆ ಇರುತ್ತಾರೆ? ಅವರು ಕೇಳಿದ ಪ್ರಶ್ನೆಗೆ ಉತ್ತರ ಹೇಳುವವರು ಇಲ್ಲದೆ ಹೋದರೆ ಯಾರೂ ಬರುವುದಿಲ್ಲ. ದಯಮಾಡಿ ನೀವು ಅವರಿಗೆ ಹೇಳಬೇಕು. ಮಂತ್ರಿಗಳು ಬರದೇ ಹೋದರೆ ಅಧಿಕಾರಿಗಳು ಬರುವುದಿಲ್ಲ, ಈ ಕಡೆ ತಲೆ ಹಾಕುವುದಿಲ್ಲ. ಅವರು ಮಂತ್ರಿಗಳು ಬಂದರೆ ಮಾತ್ರ ಈ ಕಡೆ ಬರುತ್ತಾರೆ. ಸೆಕ್ರೆಟರಿಗಳು ಬರುವುದಿಲ್ಲ. ಅವರು ಡೆಪ್ಯುಟಿ ಸೆಕ್ರೆಟರಿಯನ್ನು ಕಳುಹಿಸಿಬಿಟ್ಟು ಆಫೀಸ್‌ನಲ್ಲಿ ಕುಳಿತುಕೊಂಡು ಬಿಡುತ್ತಾರೆ. ಇವರು ಆಫೀಸ್‌ನಲ್ಲಿ ಕೆಲಸ ಮಾಡುವುದಿಲ್ಲ. ಆಫೀಸಿಗೆ ಫೋನ್ ಮಾಡಿದರೆ ಅಸೆಂಬ್ಲಿಗೆ ಹೋಗಿದ್ದಾರೆಂದು ಹೇಳುತ್ತಾರೆ. ಇಲ್ಲಿ ನೋಡಿದರೆ ಒಬ್ಬರೂ ಇರುವುದಿಲ್ಲ. ಅದಕ್ಕೆ ಸರ್ಕಾರದ ಬಿಗಿ ತಪ್ಪಿದರೆ, ಹಳಿ ತಪ್ಪಿದರೆ ಈ ರೀತಿಯಾಗುತ್ತದೆ. ಆದುದರಿಂದ Parlimentary Affairs Minister ಗೆ ನಾನು ಹೇಳುವುದೇನೆಂದರೆ ಎಲ್ಲರಿಗೂ ಇಲ್ಲಿ ಇರುವುದಕ್ಕೆ ಹೇಳಿ.

ಶ್ರೀ ಶ್ರೀಕಾಂತ್ ಸುಬ್ಬರಾವ್ ಕುಲಕರ್ಣಿ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ಭಾಗದಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ರೈತರು, ಕೃಷಿ ಕಾರ್ಮಿಕರು, ಬಡವರು ಮತ್ತು ಹಿಂದುಳಿದ

ವರ್ಗದ ಜನರು ಇರುವುದರಿಂದ ಅವರ ಮಕ್ಕಳಿಗೆ ಸರಿಯಾಗಿ ಶಿಕ್ಷಣ ಕೊಡಿಸುವಂತಹ ವ್ಯವಸ್ಥೆಯಾಗಬೇಕಾಗುತ್ತದೆ. ಸಮಾಜ ಕಲ್ಯಾಣ ಇಲಾಖೆ ಮೂಲಕ ಅಲ್ಲಲ್ಲಿ ಮೊರಾರ್ಜಿ ವಸತಿ ಶಾಲೆಗಳನ್ನು ತೆರೆಯವುದರ ಮೂಲಕ ಬಡವರಿಗೆ ವ್ಯವಸ್ಥೆಗಳನ್ನು ಮಾಡಿದ್ದಾರೆ. ಆದರೆ ಒಂದು ದುರ್ದೈವ ಎಂದರೆ ನನ್ನ ಜಮಖಂಡಿ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಒಂದೂ ಕೂಡ ಮೊರಾರ್ಜಿ ಶಾಲೆಯಿಲ್ಲ. ಹೀಗಾಗಿ ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಮಂತ್ರಿಗಳಿಗೆ ನಾನು ಒಂದು ಮನವಿಯನ್ನು ಮಾಡುತ್ತೇನೆ. ಈ ಜಮಖಂಡಿ ಕ್ಷೇತ್ರಕ್ಕೆ ಪ್ರಥಮ ಆದ್ಯತೆ ಕೊಟ್ಟು ಒಂದು ಮೊರಾರ್ಜಿ ಶಾಲೆಯನ್ನು ಮಂಜೂರು ಮಾಡಬೇಕು. ಅದರ ಜೊತೆಗೆ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಹೆಸರಿನಲ್ಲಿ ವಸತಿ ಶಾಲೆಯನ್ನು ಮಾಡಬೇಕೆನ್ನುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಅದು ವಿಭಾಗ ಮಟ್ಟಕ್ಕೆ ಒಂದು ಶಾಲೆ ಆಗಬೇಕೆಂದು ಇದೆ. ನಮ್ಮ ಭಾಗದಲ್ಲಿ ಇದಕ್ಕೆ ಬೇಕಾದಂತಹ ಸ್ಥಳಾವಕಾಶ, ಆ ಭಾಗದ ಬಡವರ ಮಕ್ಕಳಿಗೆ ಅನುಕೂಲವಾಗುವಂತಹ ಒಂದು ವ್ಯವಸ್ಥೆ ಮಾಡುವುದಕ್ಕೆ ಸರ್ವ ರೀತಿಯಿಂದಲೂ ಸಹಕಾರ ಮಾಡುವುದಕ್ಕೆ ನಾವು ತಯಾರಿದ್ದೇವೆ. ಜಮಖಂಡಿ ತಾಲ್ಲೂಕಿನಲ್ಲಿ ಅಟಲ್ ಬಿಹಾರಿ ವಾಜಪೇಯಿ ಹೆಸರಿನಲ್ಲಿ ಒಂದು ವಸತಿ ಶಾಲೆಯನ್ನು ಸರ್ಕಾರ ಮಂಜೂರು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತೇನೆ.

ಬೆಳಿಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ವೈದ್ಯರುಗಳು ಬೇಕು ಎಂದು ಸಾಕಷ್ಟು ಚರ್ಚೆಯಾಗಿದೆ. ಗ್ರಾಮಾಂತರ ಭಾಗದಲ್ಲಿ ಕೂಡ ಇವತ್ತು ವೈದ್ಯರುಗಳ ಸಂಖ್ಯೆ ಬಹಳಷ್ಟು ಕಡಿಮೆ ಇದೆ. ಕೆಲವು ಕಡೆ ವೈದ್ಯರುಗಳು ಇಲ್ಲ. ವೈದ್ಯರು ಸಕಾಲಕ್ಕೆ ಆಸ್ಪತ್ರೆಗಳಿಗೆ ಬರುವುದಿಲ್ಲ, ಅಲ್ಲಿ ಬರುವಂತಹ ಬಡವರಿಗೆ ಚಿಕಿತ್ಸೆಯನ್ನು ಕೊಡುವುದಿಲ್ಲ. ಅದರ ಬಗ್ಗೆ ನಾವೇನಾದರೂ ಜೋರಾಗಿ ಕೇಳಿದರೆ, ಗದರಿಸಿದರೆ ಬಹಳ ಜನ ರಜೆ ಹಾಕಿ ಹೋಗುತ್ತಾರೆ. ಇಲ್ಲದಿದ್ದರೆ ರಾಜೀನಾಮೆ ಕೊಟ್ಟು ವಾಪಸ್ಸು ಹೋಗಿ ಬಿಡುತ್ತಾರೆ. ಇವತ್ತು ಏನು ಒಂದು ಮೆಂಟಾಲಿಟಿ ವೈದ್ಯರುಗಳಲ್ಲಿ ಬೆಳೆದಿದೆ ಎಂದರೆ ಸರ್ಕಾರಿ ಸೇವೆ ಮಾಡುವುದಕ್ಕೆ ಯಾರೂ ಸಿದ್ಧರಿಲ್ಲ. ಡಾಕ್ಟರ್ ಹುದ್ದೆಗೆ ಕಾಲ್‌ಫಾರ್ ಮಾಡಿದರೆ ಅರ್ಜಿ ಹಾಕುವುದಿಲ್ಲ, ಸೆಲೆಕ್ಷನ್ ಆದರೂ ಕೂಡ ಸಿಟಿ ಬಿಟ್ಟು ಗ್ರಾಮಾಂತರ ಪ್ರದೇಶಕ್ಕೆ ಬರುವುದಕ್ಕೆ ತಯಾರಿಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ಬಡವರ ಆರೋಗ್ಯ ಕಾಪಾಡುವಂತಹ ಒಂದು ಜವಾಬ್ದಾರಿ ಸರ್ಕಾರದ ಮೇಲಿದೆ. ಅದರ ಬಗ್ಗೆ ವಿಶೇಷ ಚಿಂತನೆಯನ್ನು ಮಾಡಬೇಕು ಮತ್ತು ಇನ್ನು ಖಾಲಿಯಿರುವಂತಹ ವೈದ್ಯರ ಹುದ್ದೆಗಳನ್ನು

ತುಂಬಬೇಕು ಮತ್ತು ಇನ್ನೂ ಕೆಲವು ಗ್ರಾಮಾಂತರ ಭಾಗದಲ್ಲಿ ಆರೋಗ್ಯ ಕಾಪಾಡುವಂತಹ ಆಸ್ಪತ್ರೆಗಳನ್ನು ಪ್ರಾರಂಭ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರ ಸಾಕಷ್ಟು UGD ಕೆಲಸಗಳನ್ನು ಮಾಡುತ್ತಾ ಬಂದಿದೆ. ಜಮಖಂಡಿಗೆ ಸುಮಾರು 32 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ, UGD ಯೋಜನೆಯಲ್ಲಿ ಒಳಚರಂಡಿ ವ್ಯವಸ್ಥೆಯಿಂದ ವಂಚಿತರಾದ ಸಾರ್ವಜನಿಕರಿಗೆ ವ್ಯವಸ್ಥೆ ಮಾಡಿಕೊಡಬೇಕೆಂದು ಕಾರ್ಯ ಪ್ರಾರಂಭ ಮಾಡಿದೆ. ಅದಕ್ಕೆ ಎಸ್ಟಿಮೇಟ್ ಮಾಡುವ ಸಂದರ್ಭದಲ್ಲಿ ಆ ಪಟ್ಟಣದ ಹೊಸ ಹೊಸ ಬಡಾವಣೆಗಳಲ್ಲಿ ಕೆಲವು ಕಡೆ ಇನ್ನೂ ಮನೆಗಳನ್ನು ಕಟ್ಟಿರಲಿಲ್ಲ. ಹೀಗಾಗಿ ಆ ಏರಿಯಾದಲ್ಲಿ ಇವತ್ತು ಆ ಮನೆಗಳು ಯೋಜನೆಯಲ್ಲಿ ಸೇರಿಲ್ಲ. ಆದುದರಿಂದ ನಗರಾಭಿವೃದ್ಧಿ ಮಂತ್ರಿಯವರಿಗೆ ನನ್ನ ವಿಶೇಷ ಮನವಿ ಏನೆಂದರೆ ಯಾವ ಏರಿಯಾ ಈ ರೀತಿ ಉಳಿದಿದೆ, ಉದಾಹರಣೆಗೆ ಟೀಚರ್ಸ್ ಕಾಲೋನಿ ಉಳಿದುಹೋಗಿದ್ದು, ಈ ಕಾಲೋನಿಗಳನ್ನು ಸೇರಿಸಿಕೊಂಡು ಅದಕ್ಕೆ ಬೇಕಾಗುವಂತಹ ಹಣಕಾಸಿನ ವ್ಯವಸ್ಥೆಯನ್ನೂ ಕೂಡ ಮಂಜೂರು ಮಾಡಿ UGD ಕೆಲಸ ಆಗಬೇಕು. ಅದರ ಜೊತೆಗೆ ಆ ಭಾಗದಲ್ಲಿ Solid waste management ಏನಿದೆ, ಅದರ ವ್ಯವಸ್ಥೆ ಸ್ವಲ್ಪಮಟ್ಟಿಗೆ ಆಗಿದೆ. ಅದನ್ನು ಇನ್ನೂ ಸರಿಯಾಗಿ ಮಾಡಬೇಕಿರುವ ಹಿನ್ನೆಲೆಯಲ್ಲಿ ಹಣಕಾಸಿನ ವ್ಯವಸ್ಥೆ ಮಾಡಬೇಕಾಗುತ್ತದೆ. ಜಮಖಂಡಿ ಪಟ್ಟಣ ಎಂದರೆ ಹಳೇ ನಗರದಲ್ಲಿ UGD ಸುಮಾರು 40 ವರ್ಷಗಳ ಹಿಂದೆ ಮಾಡಿದೆ. ಇವತ್ತು ಅದರ ಸ್ಥಿತಿ ಸಂಪೂರ್ಣ ಕೆಟ್ಟುಹೋಗಿ UGD pipes break ಆಗಿ ದುರ್ವಾಸನೆ ಬರುವುದು ಪ್ರಾರಂಭವಾಗಿದೆ. ಹೀಗಾಗಿ ಆ ಹಳೇ ಜಮಖಂಡಿ ನಗರದಲ್ಲಿ ಕೂಡ ಹೊಸ UGD ಮಾಡುವ ದೃಷ್ಟಿಯಿಂದ ಒಂದು ಎಸ್ಟಿಮೇಟ್ ಮಾಡಿಸಿ ಈ ಸರ್ಕಾರಕ್ಕೆ ಮಂಜೂರು ಮಾಡುವುದಕ್ಕೆ ಕೊಟ್ಟು, ಅದನ್ನು ಕೂಡ ಸೇರಿಸಿ ಮಂಜೂರು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

ಜಮಖಂಡಿಯಲ್ಲಿರುವಂತಹ ಕೆ.ಎಸ್.ಆರ್.ಟಿ.ಸಿ ಡಿಪೋ ಹತ್ತಾರು ವರ್ಷಗಳ ಹಿಂದೆ ಬಹಳಷ್ಟು ಆದಾಯವನ್ನು ತರುವಂತಹ ಡಿಪೋ ಆಗಿತ್ತು. ಸನ್ಮಾನ್ಯ ಎಸ್.ಎಂ. ಕೃಷ್ಣ ರವರು ಈ ರಾಜ್ಯದ ಮುಖ್ಯಮಂತ್ರಿಯಗಿದ್ದಂತಹ, ತಾಳೀಕೋಟೆ ಜೊತೆಗೆ ಜಮಖಂಡಿಯಲ್ಲಿರುವ ಡಿಪೋವನ್ನೂ ಕೂಡ ಮೇಲ್ದರ್ಜೆಗೇರಿಸಬೇಕೆನ್ನುವ ಚಿಂತನೆಯಾಗಿತ್ತು. ಆದರೆ ಅದು ಯಾವುದೋ ಕಾರಣದಿಂದ ಬಿಟ್ಟು ಹೋಗಿತ್ತು. ಇವರತ್ತು ಅಲ್ಲಿರುವಂತಹ

ಓಬೀರಾಯನ ಕಾಲದ ಬಸ್‌ಸ್ಟಾಂಡ್‌ಗೆ ಹತ್ತಾರು ಕಡೆಯಿಂದ ನೂರಾರು ವಾಹನಗಳು ಮಹಾರಾಷ್ಟ್ರ ಮತ್ತು ಬೇರೆ ಬೇರೆ ಕಡೆಯಿಂದ ಬಂದು ಹೋಗುವಂತಹ ಒಂದು ಕೇಂದ್ರೀಯ ನಗರವಾದಂತಹ ಜಮಖಂಡಿಗೆ ಒಂದು ಹೊಸ ಡಿಪೋ ಆಗಬೇಕು ಮತ್ತು ಅದನ್ನು ಮೇಲ್ದರ್ಜೆಗೇರಿಸಬೇಕು. ಅಲ್ಲಿ ವಾಹನಗಳು ಹತ್ತಾರು ಸಾವಿರ ಕಿಲೋಮೀಟರ್ ಓಡಿ, ಈಗ ಓಡುವುದಕ್ಕೆ ಅಶಕ್ತವಾದಂತಹ ಬಸ್ಸುಗಳನ್ನು ಬದಲಾವಣೆ ಮಾಡಿ, ಅಲ್ಲಿಗೆ ಹೊಸ ಹೊಸ ವಾಹನಗಳನ್ನು ಕೊಟ್ಟು ಅಲ್ಲಿರುವಂತಹ ಸಾರ್ವಜನಿಕರಿಗೆ ಅನುಕೂಲ ಮಾಡುವಂತಹ ಹಿನ್ನೆಲೆಯಲ್ಲಿ ಮಾನ್ಯ ಸಾರಿಗೆ ಮಂತ್ರಿಗಳು ಇದರ ಬಗ್ಗೆ ಯೋಜನೆ ಮಾಡಿ ಸರಿಯಾದಂತಹ ಕ್ರಮಗಳನ್ನು ತೆಗೆದುಕೊಳ್ಳುವುದರ ಮೂಲಕ ಜಮಖಂಡಿಯ ಕೆ.ಎಸ್.ಆರ್.ಟಿ.ಸಿ ಡಿಪೋವನ್ನು ಮೇಲ್ದರ್ಜೆಗೇರಿಸುವುದರ ಜೊತೆಗೆ ಹೊಸ ಒಂದು ವರ್ಕ್‌ಶಾಪ್ ಅನ್ನು ಹೊರಗಡೆ ಮಂಜೂರು ಮಾಡಿಕೊಡಬೇಕೆನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಸಾಕಷ್ಟು ಕಬ್ಬು ಬೆಳೆಯುವಂತಹ ಪ್ರದೇಶವಿರುವುದರಿಂದ, ಬಹಳ ದೊಡ್ಡ ಪ್ರಮಾಣದಲ್ಲಿ ಲೋಡ್ ಮಾಡಿಕೊಂಡು ವಾಹನಗಳು ಓಡಾಡುವುದರಿಂದ ಲೋಕೋಪಯೋಗಿ ಮತ್ತು ಜಿಲ್ಲಾ ಪಂಚಾಯತ್ ರಸ್ತೆಗಳು ಆಗಾಗ ಕೆಟ್ಟು ಹೋಗುತ್ತವೆ. ಲೋಕೋಪಯೋಗಿ ರಸ್ತೆಗಳನ್ನು ಸರಿ ಮಾಡಬೇಕೆಂದು ಸರ್ಕಾರ ಸಾಕಷ್ಟು ಪ್ರಯತ್ನ ಮಾಡಿದೆ. ಆದರೆ ಇನ್ನೂ ಕೆಲವು ಲೋಕೋಪಯೋಗಿ ಇಲಾಖೆಗೆ ಸೇರಿದಂತಹ ರಸ್ತೆಗಳು, ನನ್ನ ಕ್ಷೇತ್ರದಲ್ಲಿ 141 ಕಿಲೋಮೀಟರ್ ರಸ್ತೆ ಜಿಲ್ಲಾ ಪಂಚಾಯತಿಯಿಂದ ಲೋಕೋಪಯೋಗಿ ಇಲಾಖೆಗೆ ಮೇಲ್ದರ್ಜೆಗೇರಿಸಲ್ಪಟ್ಟಿದ್ದು, ಅದಕ್ಕೆ ಎಷ್ಟು ಧನಸಹಾಯ ಬೇಕಾಗಿತ್ತು ಅಷ್ಟು ಸಿಕ್ಕಿಲ್ಲ. ಅದಕ್ಕೋಸ್ಕರ ತಕ್ಷಣ ಒಂದು ವಿಶೇಷ ಅನುದಾನ ಬಿಡುಗಡೆ ಮಾಡಿ ಆ ರಸ್ತೆಗಳನ್ನು ರಿಪೇರಿ ಮಾಡಬೇಕೆಂದು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ನಾನು ಒಂದು ವಿಚಾರ ಬಹಳ ಸಂತೋಷದಿಂದ ಮತ್ತು ಅಭಿಮಾನದಿಂದ ಹೇಳುವುದೇನೆಂದರೆ ನಮ್ಮ ಭಾಗದಲ್ಲಿ ಕೃಷ್ಣಾ ನದಿಗೆ ಜಮಖಂಡಿಯಿಂದ ನೇರವಾಗಿ ಪಂಡರಾಪುರಕ್ಕೆ, ಜಮಖಂಡಿಯಿಂದ ನೇರವಾಗಿ ಸಾಂಗ್ಲಿ, ಪೂನಾ ಮತ್ತು ಉತ್ತರ ಭಾರತಕ್ಕೆ ಹೋಗುವುದಕ್ಕೆ ಒಂದು ಸಂಚಾರಕ್ಕೊಂದು ಸೇತುವೆ ಬೇಕಾಗಿತ್ತು. ಜಮಖಂಡಿ ಮಹಾರಾಜರು ಈ ಹಿಂದೆ ಇಡೀ ದೇಶದಲ್ಲಿ ಸಂಸ್ಥಾನ ವಿಲಿನೀಕರಣವಾಗುವಾಗ ಮೊಟ್ಟಮೊದಲ ಸಂಸ್ಥೆ ಯಾವುದಾದರೂ ವಿಲಿನೀಕರಣಕ್ಕೆ ಒಪ್ಪಿದರು ಎಂದರೆ ಅದು ಜಮಖಂಡಿ ಸಂಸ್ಥಾನ ಎಂದು ಹೇಳುತ್ತೇನೆ. ಆ ಸಂದರ್ಭದಲ್ಲಿ ಜಮಖಂಡಿ ಮಹಾರಾಜರು

ಮತ್ತು ಸರ್ದಾರ್ ವಲ್ಲಭಬಾಯಿ ಪಟೇಲ್‌ರವರ ನಡುವೆ ಪಂಡರಾಪುರದಲ್ಲಿ ಒಂದು ಒಪ್ಪಂದವಾಗಿತ್ತು. ಈ ಜಮಖಂಡಿ ಸಂಸ್ಥಾನವನ್ನು disolve ಮಾಡಿದರೆ ನಮ್ಮ ಮೂರು ಬೇಡಿಕೆಗಳನ್ನು ಈಡೇರಿಸಬೇಕೆಂದು ಎಂದು ಹೇಳಿದ್ದರು. ಅದರಲ್ಲಿ ಮೊದಲ ಬೇಡಿಕೆ ಯಾವುದೆಂದರೆ ಕೃಷ್ಣ ನದಿಗೆ ಜಂಬಗಿ ಹತ್ತಿರ ಸೇತುವೆ ಆಗಬೇಕು. ಅದರಿಂದ ಜಮಖಂಡಿಯಿಂದ ಮಹಾರಾಷ್ಟ್ರ ಮತ್ತು ಉತ್ತರ ಭಾರತದ ಅನೇಕ ಭಾಗಗಳಿಗೆ ಸಮರ್ಪಕಕ್ಕೆ ಉತ್ತಮವಾದಂತಹ ರಸ್ತೆಯಾಗುತ್ತದೆ ಎನ್ನುವಂತಹ ಬೇಡಿಕೆ ಇತ್ತು. ನನು ಬಹಳ ಸಂತೋಷದಿಂದ ಹೇಳುವುದೇನೆಂದರೆ ಮಾನ್ಯ ಯಡಿಯೂರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ನಮ್ಮ ಸರ್ಕಾರಕ್ಕೆ ಆ ಒಂದು ಸೇತುವೆ ಬೇಡಿಕೆಯನ್ನು ಇಟ್ಟಾಗ 40 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು, ಇವತ್ತಿನ ದಿವಸ ಆ ಸೇತುವೆ ಕಾರ್ಯ ಪ್ರಗತಿಯಲ್ಲಿದೆ. ಬಹುಶಃ ಬರುವಂತಹ ಜನವರಿ ಫೆಬ್ರವರಿ ತಿಂಗಳಿನಲ್ಲಿ ಆ ಸೇತುವೆ ಕಾರ್ಯ ಸಂಪೂರ್ಣವಾಗಿ ಮುಗಿದು ಸಾರ್ವಜನಿಕರ ಸಂಚಾರಕ್ಕೆ ಉಪಯೋಗವಾಗುವಂತಹ ವ್ಯವಸ್ಥೆಗೆ ಬಂದಿದೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಇನ್ನೊಂದು ವಿನಂತಿ ಏನೆಂದರೆ 40 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಸಮೀಪದ ರಸ್ತೆ ಮಾಡಿದ್ದು, ಬಳ್ಳಾರಿಯವರು ಪೂನಾಗೆ ಹೋಗಬೇಕಾದರೆ ಜಮಖಂಡಿಗೆ ಬಂದು ಈ ಸೇತುವೆ ಮೇಲೆ ಹೋದರೆ ಸುಮಾರು 40 ರಿಂದ 50 ಕಿಲೋಮೀಟರ್ ಅಂತರ ಉಳಿಯುತ್ತದೆ ಎಂದರೆ ಒಂದು ದಿವಸಕ್ಕೆ ಎಷ್ಟು ವಾಹನಗಳು ಅಲ್ಲಿ ಓಡಾಡುತ್ತವೆ, ಅದರಿಂದ ಎಷ್ಟು ಇಂಧನ ಉಳಿಯುತ್ತದೆ, ಎಂಬುದನ್ನು ಲೆಕ್ಕ ಹಾಕಬೇಕು. ಒಂದು ದಿವಸಕ್ಕೆ ಎಷ್ಟು ವಾಹನಗಳು ಓಡಾಡುತ್ತವೆ ಮತ್ತು ಒಂದು ವಾಹನಕ್ಕೆ 40-50 ಕಿ.ಮೀ. ಉಳಿದರೆ ಎಷ್ಟು ಇಂಧನ ಉಳಿಯುತ್ತದೆ, ಒಂದುವಾರಕ್ಕೆ ಎಷ್ಟು, ಒಂದು ತಿಂಗಳಿಗೆ ಎಷ್ಟು ಒಂದು ವರ್ಷಕ್ಕೆ ಎಷ್ಟೆಂಬುದನ್ನು ಲೆಕ್ಕ ಹಾಕಿದರೆ, ನೂರಾರು ಕೋಟಿ ರೂ.ಗಳಲ್ಲ, ಸಾವಿರಾರು ಕೊಟಿ ರೂ.ಗಳು ಉಳಿತಾಯವಾಗಬಹುದು. ಇದಕ್ಕೆ ಅಭಿವೃದ್ಧಿ ಎನ್ನುತ್ತಾರೆ, ಇದು ನೂರಾರು ವರ್ಷದ ಬೇಡಿಕೆಯಾಗಿದ್ದು, ಇದನ್ನು ಹಿಂದೆ ಯಾವ ಸರ್ಕಾರವೂ ಮಂಜೂರು ಮಾಡಲಿಲ್ಲ, ಇವತ್ತು ನಮ್ಮ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಇದಕ್ಕೆ ಮಂಜೂರು ಕೊಟ್ಟು ಇವತ್ತು ಈ ಸೇತುವೆ ಕೆಲಸ ಮುಕ್ತಾಯದ ಹಂತಕ್ಕೆ ಬಂದಿದೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮತ್ತು ಕ.ಘಾ.ಆ. ಇಲಾಖೆಗೆ ಇನ್ನೊಂದು ವಿನಂತಿ ಏನೆಂದರೆ, ಈ ರಸ್ತೆಗೆ ಕ್ವಾಮಗಾರಿ ಮುಗಿಯುವುದರೊಳಗಾಗಿ ಜಮಖಂಡಿಯಿಂದ ಜಂಬಗಿಗೆ, ಜಂಬಗಿಯಿಂದ ಸಾವಳಗಿ,

ಸಾವಳಗಿಯಿಂದ ಅಥಣಿ, ಬಿಜಾಪುರದ state highway ಮುಟ್ಟುವಂಥ ಸುಮಾರು 31 ಕಿ.ಮೀ. ರಸ್ತೆಯನ್ನು ಆ ಕಡೆ ಒಂದು, tate highway ಮತ್ತು ಈ ಕಡೆಗೆ ಒಂದು state highway ರಸ್ತೆ ಇದ್ದು, ಈ ಎರಡು ರಸ್ತೆಗಳು ಜಂಬಗಿ ಸೇತುವೆಗೆ ಮುಟ್ಟುವಂಥ 31 ಕಿ.ಮೀ. ರಸ್ತೆಯನ್ನು ಮಾಡಿದರೆ, ಈ ಭಾಗದ ಜನರಿಗೆ ಸಾಕಷ್ಟು ಅನುಕೂಲವಾಗುತ್ತದೆ. ಅದಕ್ಕಾಗಿ 31 ಕಿ.ಮೀ. ರಸ್ತೆಯನ್ನು ಮಂಜೂರು ಮಾಡಬೇಕೆಂದು ಬರಗಾಲದ ವೀಕ್ಷಣೆಗೆ ನಮ್ಮ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸದಾನಂದ ಗೌಡರು ಬಂದಾಗ ಸಾರ್ವಜನಿಕವಾಗಿ ವಿನಂತಿ ಮಾಡಿದೆವು. ಅವರೂ ಸಹ ಸಾರ್ವಜನಿಕವಾಗಿ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಹಾಗಾಗಿ ಇದನ್ನು ತಕ್ಷಣ ಜಾರಿಗೆ ತರವಂಥ ವ್ಯವಸ್ಥೆಯನ್ನು ಈ ಸರ್ಕಾರ ಮಾಡಬೇಕೆಂದು ಆ ಭಾಗದ ಸಾರ್ವಜನಿಕರ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಅದೇ ರೀತಿಯಲ್ಲಿ ಇವತ್ತು ನೀರಾವರಿಗಳ ಮೂಲಕ ಆ ಭಾಗದ ಒಣ-ಪ್ರದೇಶಕ್ಕೆ ಕುಡಿಯುವ ನೀರಿನ ಸಮಸ್ಯೆ ಏನು ಇದೆ. ಆ ಭಾಗದ ಜನರಿಗೆ ನೀರು ಕೊಡಬೇಕು, ನೀರಾವರಿ ಕೊಡಬೇಕು, ಕುಡಿಯುವ ನೀರನ್ನು ಕೊಡಬೇಕೆಂಬ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ನೀರಾವರಿ ದಶಕವೆಂದು ಘೋಷಣೆ ಮಾಡಿ ಅನೇಕ ಯೋಜನೆಗಳನ್ನು ಮಂಜೂರು ಮಾಡಿದ್ದಾರೆ. ನಮಗೆ ಗೊತ್ತಿರುವಂಥ ಅಖಂಡ ಬಿಜಾಪುರ ಜಿಲ್ಲೆಯಲ್ಲಿ 5 ನದಿಗಳು ಹರಿದರೂ ಕೂಡ ನೀರಾವರಿ ಇಲ್ಲ UKP dam ಕಟ್ಟಿದ ನಂತರ ನೀರು ಸಿಗಲಿಲ್ಲ. ಇದರ ಬಗ್ಗೆ ನಮ್ಮ ಸರ್ಕಾರ ಸಾಕಷ್ಟು ಚಿಂತನೆ ಮಾಡಿ ನಮ್ಮದು ಬಹಳ ವರ್ಷದಿಂದ ಒಂದು ಬೇಡಿಕೆ ಇತ್ತು, ಅದು ಚಿಕ್ಕಲಗಿ ಹತ್ತಿರ ಎಲ್ಲಿ ಕುಡಿಯುವ ನೀರು ಇಲ್ಲ, ಬರಗಾಲ ಪ್ರದೇಶ ಇದೆ, ಆ ಭಾಗದಲ್ಲಿ ನೀರಾವರಿ ಆಗಬೇಕೆಂದು ಹೇಳಿದಾಗ minor irrigation ಮೂಲಕ ಸುಮಾರು 45 ಕೋಟಿ ರೂ.ಗಳು ಮಂಜೂರು ಆಗಿ, ಇದು ಟೆಂಡರ್ ಹಂತದಲ್ಲಿದೆ. ಇದರಲ್ಲಿ ಸುಮಾರು ಐದು ಸಾವಿರ ಎಕರೆಗೆ ನೀರು ಕೊಡುವಂಥ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಹಾಗಾಗಿ ಈ ಸಂದರ್ಭದಲ್ಲಿ ಆ ಭಾಗದ ರೈತರ ಪರವಾಗಿ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ನಮಗೆಲ್ಲಾ ಗೊತ್ತಿರುವ ಹಾಗೆ ಕೊಯಿನಾ ಡ್ಯಾಮ್‌ನಿಂದ ನೀರು ಬರಬೇಕಾಗಿತ್ತೋ ಅದು ಸಾವಳಗಿ ಮತ್ತು ಬಬಲೇಶ್ವರ ಭಾಗಗಳಿಗೆ ಕೃಷ್ಣ ನದಿಯಿಂದ ನೀರು ಬೇಕೆಂದು ವಿಧಾನ ಸಭೆಯಲ್ಲಿ ನಾವು ಆಗಾಗ ಪ್ರಶ್ನೆಗಳ ಮೂಲಕ ಸರ್ಕಾರದ ಗಮನವನ್ನು ಸೆಳೆದಾಗ ನಮ್ಮ ಸರ್ಕಾರ ಅತ್ಯಂತ ಕ್ರಿಯಾಶೀಲವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ನೀರಾವರಿ ಮಂತ್ರಿಯವರು ಸಾಕಷ್ಟು ಸ್ಪಂದನೆ ನೀಡಿ, ಗೋದಾವರಿ diversion ನಿಂದ ಸಿಕ್ಕಿರುವಂಥ

21 ಟಿ.ಎಂ.ಸಿ. ನೀರಲ್ಲಿ 2.8 ಟಿ.ಎಂ.ಸಿ. ನೀರನ್ನು ಈ ಅವಕಾಶ ವಂಚಿತ ಪ್ರದೇಶಕ್ಕೆ allocation ಮಾಡಿದ್ದಾರೆ. ಇದಕ್ಕೆ ಸುಮಾರು 460 ಕೋಟಿ ರೂ.ಗಳಷ್ಟು estimate ಅನ್ನು ಸಿದ್ಧಪಡಿಸಿ ಇದನ್ನು ತಕ್ಷಣ ಪ್ರಾರಂಭ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಇನ್ನಷ್ಟು speed ಅನ್ನು ಕೊಟ್ಟು, ಚಾಲನೆ ಕೊಟ್ಟು, ಒಂದೆರಡು ತಿಂಗಳಲ್ಲಿ ಕೆಲಸ ಕಾರ್ಯಾರಂಭ ಮಡುವ ಪ್ರಯತ್ನವನ್ನು ಮಾಡಬೇಕು. ಇದು ನೂರಾರು ವರ್ಷಗಳ ಬೇಡಿಕೆಯಾಗಿದ್ದು, ಹಿಂದಿನ ಯಾವುದೇ ಸರ್ಕಾರಗಳು, ಮುಖ್ಯಮಂತ್ರಿಗಳು ಸ್ಪಂದನೆ ಮಾಡದೇ ಇದ್ದರೂ, ಹಿಂದಿನ ಮುಖ್ಯಮಂತ್ರಿಯವರು ಅದೇ ಭಾಗದವರಿದ್ದರೂ ಕೊಯಿನಾ ಡ್ಯಾಮ್ ಅನ್ನು ಕಟ್ಟುವಂಥ ಸಂದರ್ಭದಲ್ಲಿ ನಮಗೆ ಬರಬೇಕಾದಂಥ 25 ಟಿ.ಎಂ.ಸಿ. ನೀರಿಗೆ ನಮ್ಮ ಪಾಲಿನ ಹಣವನ್ನು ಕಟ್ಟಿದರೆ ನಮಗೆ ನೀರು ಬರುತ್ತಿತ್ತು. ಆದರೆ ಈ ಕೆಲಸವಾಗಲಿಲ್ಲ, ಇದು ಒಂದು ದೊಡ್ಡ ದುರಂತವಾಗಿದೆ. ಈ ಒಂದು ಸಂದರ್ಭದಲ್ಲಿ ನಮ್ಮ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದು ಬಿಜಾಪುರ ಮತ್ತು ಬಾಗಲಕೋಟೆಯ ಭಾಗದ ಜನರಿಗೆ ನೀರಾವರಿ ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡು ಇದರಲ್ಲಿ ಅತ್ಯಂತ ಯಶಸ್ವಿಯಾಗಿದೆ. ಈ ಸಂದರ್ಭದಲ್ಲಿ ಹೇಳಬಯುಸುವುದೇನೆಂದರೆ, ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಬಿಜಾಪುರ ಅಖಂಡ ಜಿಲ್ಲೆಯ ಕೆರೆಗಳನ್ನು ತುಂಬಬೇಕೆಂಬ ಮನವಿಯನ್ನು ಇಟ್ಟಾಗ ಮೊದಲನೇ ಹಂತದಲ್ಲಿ ನನ್ನ ಕ್ಷೇತ್ರದ ಹಿರೇಪಡಸಲಗಿ ಹತ್ತಿರ ಕೃಷ್ಣಾ ನದಿ ನೀರನ್ನು ಎತ್ತಿ ಜಮಖಂಡಿಯ ತಾಲ್ಲೂಕಿನ 7 ಕೆರೆಗಳು ಮತ್ತು ಬಿಜಾಪುರ ಜಿಲ್ಲೆಯ 15 ಕೆರೆಗಳು ಮತ್ತು ಐದು ಬಾಂದರ್ ಗಳನ್ನು ತುಂಬುವಂಥ ಯೋಜನೆ ಸುಮಾರು 109 ಕೋಟಿ ರೂ. ಯೋಜನೆಯ ಕಾರ್ಯ ಪ್ರಾರಂಭವಾಗಿ ಇನ್ನೂ ಒಂದು-ಒಂದೂವರೆ ತಿಂಗಳಲ್ಲಿ ಇಲ್ಲಿ pump set button ಅನ್ನು ಒತ್ತಿ ಬಿಟ್ಟರೆ ಮಳೆ ಆಗದಿದ್ದರೂ, ಬರ ಬಿದ್ದರೂ ಅಲ್ಲಿ ಕೆರೆಗಳನ್ನು ತುಂಬಿದರೆ ನೀರಿನ ಮಟ್ಟ ಹೆಚ್ಚುತ್ತದೆ. ಬಹುಶಃ ಇನ್ನು ಒಂದು-ಒಂದೂವರೆ ತಿಂಗಳಲ್ಲಿ ನೀರೆತ್ತುವ ಕಾರ್ಯ ಪ್ರಾರಂಭವಾಗಿ ಕೆರೆಗಳನ್ನು ತುಂಬುವಂಥ ವ್ಯವಸ್ಥೆಯಾಗುತ್ತದೆ. ಇಂಥ ದೊಡ್ಡ ದೊಡ್ಡ ಯೋಜನೆಗಳನ್ನು ಸರ್ಕಾರ ಅಲ್ಲಿ ಜಾರಿಗೆ ತಂದಿದೆ. ಆ ಭಾಗದ ಬರಗಾಲದ ಪರಿಸ್ಥಿತಿಗೆ ಸರಿಯಾದಂಥ, ಶಾಶ್ವತವಾದಂಥ ಪರಿಹಾರವನ್ನು ಕೊಡಬೇಕೆಂಬ ಹಿನ್ನೆಲೆಯಲ್ಲಿ ಸರ್ಕಾರ ಸಾಕಷ್ಟು ಚರ್ಚೆಯನ್ನು ಮಾಡಿ, ಕೇವಲ ಚರ್ಚೆ ಮಾಡದೇ, ಕೇವಲ ಮಾತುಗಳಲ್ಲಿ ಹೇಳದೆ, ಅವುಗಳನ್ನು ಸಂಪೂರ್ಣ ಅನುಷ್ಠಾನಕ್ಕೆ ತಂದಿರುವಂಥದ್ದು ನಮ್ಮ ಭಾಗದ ಸುದೈವವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇವತ್ತು ಯುವಜನ ಸೇವಾ ವಿಭಾಗದಲ್ಲೂ ಕೂಡ ಜಮಖಂಡಿ ಭಾಗದಲ್ಲಿ ಸಾಕಷ್ಟು ಕ್ರೀಡಾ ಪಟುಗಳು ಅವರು ಸೈಕಲಿಸ್ಟ್ ಇರಬಹುದು, ಕಬಡ್ಡಿ ಆಡುವಂಥ ಯುವಕರು ಇರಬಹುದು, ಕಲ್ಲು ಎತ್ತುವವರು ಇರಬಹುದು ಅಥವಾ ಕುಸ್ತಿ ಪೈಲ್ವಾನ್ ಗಳಿರಬಹುದು. ಯಾವತ್ತೂ ಕ್ರೀಡೆಯಲ್ಲಿ ಭಾಗವಹಿಸುವಂಥವರಲ್ಲಿ ಮಂಚೂಣಿಯಲ್ಲಿ ಯಾರು ಇರುತ್ತಾರೆಂದರೆ, ಉತ್ತರ ಕರ್ನಾಟಕದ ಜಮಖಂಡಿ ಭಾಗದವರು ಇರುತ್ತಾರೆ. ಈ ಸಂದರ್ಭದಲ್ಲಿ ಜಮಖಂಡಿಯಲ್ಲಿ Indoor Stadium ಅನ್ನು ಕಟ್ಟಬೇಕೆಂದು ಸುಮಾರು 8–9 ವರ್ಷಗಳ ಹಿಂದೆ ಇದ್ದ ಸರ್ಕಾರ 10 ಲಕ್ಷ ರೂ.ಗಳನ್ನು ಖರ್ಚು ಮಾಡಿ, ಅದನ್ನು ಅಷ್ಟಕ್ಕೆ ಬಿಟ್ಟಿತ್ತು. ನಾನು ನಮ್ಮ ಸರ್ಕಾರ ಬಂದಮೇಲೆ ಮಾನ್ಯ ಮುಖ್ಯಮಂತ್ರಿಯವರ ಮತ್ತು ಮಾನ್ಯ ಮಂತ್ರಿಯವರ ಗಮನಕ್ಕೆ ತಂದಾಗ ಇದಕ್ಕೆ ಹಣ ಮಂಜೂರಾಗಿ ಕೆಲಸ ಪುನಃ ಪ್ರಾರಂಭವಾಗಿದೆ. ಇದಕ್ಕೆ ಬೇಕಾಗುವಷ್ಟು ಹಣವನ್ನು ಮಂಜೂರು ಮಾಡಿ, ಆ ಭಾಗದಲ್ಲಿ ಇವತ್ತು ಯಾರು ಅಂತರರಾಷ್ಟ್ರೀಯ ಮಟ್ಟದಲ್ಲಿ cyclist ಎಂದು championship ಅನ್ನು ಪಡೆಯುತ್ತಾರೋ, ಅಂಥವರಿಗೆ ಹೊಸ ಹೊಸ ಆಧುನಿಕ ಸೈಕಲ್‌ಗಳನ್ನು ಕೊಡಬೇಕಾಗುತ್ತದೆ. ತಾವು ಈ ಬಗ್ಗೆ ಪಟ್ಟಿಯನ್ನು ಮಾಡಿದ್ದೀರಿ, ಅವರಿಗೆಲ್ಲಾ ಸೈಕಲ್‌ಗಳನ್ನು ಕೊಡುವ ವ್ಯವಸ್ಥೆ ಸರ್ಕಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ.

ಇದರ ಜೊತೆಗೆ ನಮ್ಮ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬು ಬೆಳೆಗಾರರು ಯಾರಾದರೂ ಇದ್ದರೆ ಅವರು ಸಾಕಷ್ಟು ಗುಣಮಟ್ಟದ ಕಬ್ಬನ್ನು ಹೆಚ್ಚು ಸಕ್ಕರೆಗೆ ಪೂರೈಸುವಂಥ ಕಬ್ಬು ಬೆಳಗಾಂ ಭಾಗದಲ್ಲಿ ಯಾವುದೆಂದರೆ ಅದು ನಮ್ಮ ಜಮಖಂಡಿ ಭಾಗದಲ್ಲಿ ಎಂದು ಅಭಿಮಾನದಿಂದ ಹೇಳುತ್ತೇನೆ. ಇವತ್ತು ಈ ಕಬ್ಬು ಬೆಳೆಗಾರರಿಗೆ ಅಷ್ಟೇ ಸಂಕಷ್ಟ ಬಂದಿದೆ. ಕೃಷ್ಣಾ ನದಿ ಒಣಗಿ ಹೋಗಿ ಇದರಲ್ಲಿ ಒಂದು ಹನಿ ನೀರು ಇಲ್ಲದೇ ಇರುವಂಥ ಸಂದರ್ಭದಲ್ಲಿ ಕಬ್ಬು ಬೆಳೆ ಬಚಾವು ಆಗದೇ ಸಂಪೂರ್ಣವಾಗಿ ಒಣಗಿ ಹೋಗಿದೆ. ನಮ್ಮ ಸರ್ಕಾರ ರೈತರು 25,000 ರೂ.ಗಳವರೆಗೆ ಬೆಳೆ ಸಾಲವನ್ನು ಮನ್ನಾ ಮಾಡುವಂಥ ಒಂದು ನಿರ್ಣಯವನ್ನು ತೆಗೆದುಕೊಂಡು ಇಡೀ ಕರ್ನಾಟಕದಲ್ಲಿ ಇವತ್ತು ಒಂದು ಸಂತೋಷದ ವಾತವರಣವನ್ನು ತಂದಿದೆ. ಆದರೆ ಕಬ್ಬು ಬೆಳೆಗಾರರಿಗೆ ಇದರಿಂದ ಸಾಕಷ್ಟು ಪ್ರಯೋಜನವಾಗಲಿಲ್ಲವೆಂದು ನನ್ನ ಅನಿಸಿಕೆ. ಈಗ ಇರುವಂಥ standing crop ಸಂಪೂರ್ಣ ಒಣಗಿದ್ದರಿಂದ ಅವರಿಗೆ ಬರೀ 25,000 ರೂ. ಸಾಲವನ್ನು ಮನ್ನಾ ಮಾಡಿದರೆ ಸರಿಯಾದಂಥ ಪರಿಹಾರವಾಗುವುದಿಲ್ಲ. ಇವತ್ತು ಯಾವ ಕಬ್ಬು ಒಣಗಿ ಹೋಗಿದೆ, ಅದು ಒಂದು ಎಕರೆಗೆ ಎಷ್ಟು yield ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲ. ಇವತ್ತು ಒಣಗಿ ಹೋಗಿರುವ ಕಬ್ಬನ್ನು

ಕಟಾವ್ ಮಾಡಿ ಮತ್ತೊಮ್ಮೆ cultivation ಮಾಡಿ, re-plantation ಮಾಡಬೇಕೆಂದರೆ, ಆ ರೈತನಿಗೆ ಬರುವ ಖರ್ಚು ಎಷ್ಟೆಂಬುದನ್ನು ಯೋಚನೆ ಮಾಡಿದರೆ, ರೈತನ ಕಬ್ಬು ಏನು ಒಣಗಿ ಹೋಗಿದೆ, ಅದಕ್ಕೆ ಸರಿಯಾದಂಥ ಪರಿಹಾರವನ್ನು ಕೊಡಬೇಕು, ಹೊಸ ಕಬ್ಬನ್ನು ನಾಟಿ ಮಾಡಬೇಕಾದರೆ ಆ ರೈತನಿಗೆ ಹೊಸದಾಗಿ ಸಾಲ ಬೇಕಾಗುತ್ತದೆ. ಹಾಗಾಗಿ ಸರ್ಕಾರ ಒಂದು ವಿಶೇಷ ಆಜ್ಞೆಯನ್ನು ಮಾಡಿ ಜಮಖಂಡಿ ಮಾತ್ರವಲ್ಲ, ಬೀಳಗಿ, ಮುಧೋಳ ಭಾಗದ ಕಬ್ಬು ಬೆಳೆಗಾರರಿಗೆ ಹೊಸ ಕಬ್ಬು ನಾಟಿ ಮಾಡುವುದಕ್ಕೆ ಹೊಸ ಬೆಳೆ ಸಾಲವನ್ನು ಮಂಜೂರು ಮಾಡಬೇಕು, additional loan ಮಂಜೂರು ಮಾಡಬೇಕು. ಆ ರೈತನಿಗೆ ಆದಂಥ ಹಾನಿಗೆ, ಒಣಗಿ ಹೋಗಿರುವಂಥ ಕಬ್ಬಿಗೆ ಸರಿಯಾದಂಥ ಪರಿಹಾರವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು, ಸನ್ಮಾನ್ಯ ಕೃಷಿ ಮಂತ್ರಿಯವರು ಚಿಂತನೆ ಮಾಡಿ, ಈ ಇಲಾಖೆಯ ಹಿರಿಯ ಅಧಿಕಾರಿಗಳೊಡನೆ ಚರ್ಚೆ ಮಾಡಿ, ಆ ಜನರಿಗೆ ಪರಿಹಾರ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತಾರೆಂಬ ನಂಬಿಕೆ ನನಗಿದೆ. ಈ ಸಂದರ್ಭದಲ್ಲಿ ಅಲ್ಲಿ ಕಬ್ಬಿನ ಜೊತೆಗೆ ಅರಿಶಿನ ಬೆಳೆ ಬಗ್ಗೆ ಬೆಳಗಾಂ ಡಿವಿಜನ್‌ನಲ್ಲಿರಬಹುದು, ಚಾಮರಾಜನಗರ ಈ ಜಿಲ್ಲೆಗಳಲ್ಲಿ ಅರಿಶಿನ ಬೆಳೆಗಾರರು ಸಾಕಷ್ಟು ಅರಿಶಿನ ಬೆಳೆಯನ್ನು ಬೆಳೆಯುತ್ತಾರೆ. ಕಳೆದ ವರ್ಷ ಬಹಳ ದೊಡ್ಡ ಪ್ರಮಾಣದಲ್ಲಿ ಅರಿಶಿನದ rate ಏರಿಕೆಯಾಗಿದ್ದರಿಂದ ರೈತರು ಬಹಳ ಖುಷಿಯಿಂದ ಓಡಾಡಿದರು ಮತ್ತು ಬಹಳ ಹೆಚ್ಚಿನ ಪ್ರಮಾಣದಲ್ಲಿ ಅರಿಶಿನ ಬೆಳೆಯನ್ನು ಬೆಳೆದರು. ಆದರೆ ಈ ವರ್ಷದಲ್ಲಿ ಅರಿಶಿನ ಬೆಲೆ ಸಂಪೂರ್ಣ ಕುಸಿದು ಬಿದ್ದು, ಮಾರುಕಟ್ಟೆಯಲ್ಲಿ ಅರಿಶಿನವನ್ನು ಯಾರೂ ಕೇಳದೇ ಇರುವಂಥ ಸ್ಥಿತಿ ಬಂದಾಗ, ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಚರ್ಚೆ ಆಯಿತು. ಕೇಂದ್ರ ಸರ್ಕಾರ ಘೋಷಣೆ ಮಾಡಿದಂಥ ಬೆಲೆಯ ಜೊತೆಗೆ ಒಂದು ಕ್ವಿಂಟಾಲ್ 3,000 ರೂ.ಗಳಿಗೆ ಖರೀದಿ ಮಾಡಬೇಕೆಂದು ನಿರ್ಣಯವಾಗುವುದರ ಜೊತೆಗೆ ನಮ್ಮ ಸರ್ಕಾರವು ಸುಮಾರು 800 ಕ್ಕಿಂತ ಜಾಸ್ತಿ 1,000 ರೂ.ಗಳನ್ನು ಇದಕ್ಕೆ ಸೇರಿಸಿ ಒಂದು ಕ್ವಿಂಟಾಲ್‌ಗೆ 4,000 ರೂ.ಗಳಿಗೆ ಅರಿಶಿನವನ್ನು ಖರೀದಿ ಮಾಡಬೇಕೆಂದು ಖರೀದಿ ಕೇಂದ್ರಗಳನ್ನು ತೆಗೆದಿದ್ದೇವೆ. ಆ ಬಾಗದಲ್ಲಿ ರೈತರು ಬೆಳೆದಂಥ ಅರಿಶಿನವನ್ನು ಸರ್ಕಾರ ಖರೀದಿ ಮಾಡಿ store ಮಾಡಿದೆ, ಸುದೈವವೆಂದರೆ 4,000 ರೂ.ಗಳು ಇದ್ದಂತೆ ಬೆಲೆ ಇವತ್ತು 8,000 ರೂ.ಗಳಾಗಿದೆ. ಈ ಸಂದರ್ಭದಲ್ಲಿ ಸರ್ಕಾರದಲ್ಲಿ ನನ್ನ ವಿನಂತಿ ಏನೆಂದರೆ, ರೈತನಿಂದ ಅಗ್ಗದ ದರದಲ್ಲಿ ಅರಿಶಿನವನ್ನೂ ಖರೀದಿ ಮಾಡಿ ಹೆಚ್ಚಿನ ಬೆಲೆಗೆ ಹೊರಗೆ ಮಾರಾಟ ಮಾಡಿ ಲಾಭ ಮಾಡುವಂಥ ಅವಶ್ಯಕತೆ ಇಲ್ಲ. ಯಾವ ರೈತ ಪರಿಶ್ರಮ ಪಟ್ಟಿದ್ದಾನೆ, ಇವತ್ತು

ಕಷ್ಟ-ಸುಖದಲ್ಲಿ ಅರಿಶಿಣ ಬೆಳೆದು ಕೊಟ್ಟಿದ್ದಾನೆ, ಯಾರು ಬೆವರು ಹರಿಸಿದ್ದಾರೆ, ಅವರಿಗೆ ಸರಿಯಾದಂಥ ಬೆಲೆಯನ್ನು ಕೊಡಬೇಕೆಂಬ ಹಿನ್ನೆಲೆಯಲ್ಲಿ ಏನು ಲಾಭವಾಗುತ್ತದೆ. ಇವತ್ತು ಯಾವ ಮಾರುಕಟ್ಟೆಯಲ್ಲಿ ಅರಿಶಿಣ ಮಾರಾಟವಾಗುತ್ತದೆ, ಅದರಿಂದ ಬರುವ ಲಾಭಾಂಶವನ್ನು ಸರ್ಕಾರ ವೆಚ್ಚವನ್ನು ಮಾತ್ರ ತೆಗೆದು, ಆ ಹಣವನ್ನು ವಾಪಸ್ಸು ರೈತನ ಮನೆಗೆ ಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ಶುದ್ಧವಾದ ನೀರನ್ನು ಕೊಡುವಂಥದ್ದು ಬಹಳ ಅಗತ್ಯವಿದೆ. ನನಗೆ ಬಹಳ ಅಭಿಮಾನವೆನಿಸುತ್ತದೆ, ನಮ್ಮ ಭಾಗದಲ್ಲಿ ಇವತ್ತು ಬೋರ್ ವೆಲ್ ನೀರನ್ನು ಅನಿವಾರ್ಯ ಬಂದಾಗ, ಬರ ಬಿದ್ದಾಗ 500-600-1000 ಅಡಿವರೆಗೆ ಬೋರ್‌ವೆಲ್ ಕೊರೆದು ಜನರಿಗೆ ನೀರನ್ನು ಕೊಡತ್ತೇವೆ.

ವೈದ್ಯಕೀಯ ವಿಬಾಗದಲ್ಲಿ ಕೆಲಸ ಮಾಡುವ ಕೆಲವು ಹಿರಿಯ ಅಧಿಕಾರಿಗಳು ಮತ್ತು ಕೆಲವು ಎಕ್ಸ್‌ಪರ್ಟ್‌ಗಳು ಹೇಳುತ್ತಾರೆ, 200 ಅಡಿಗಿಂತ ಆಳವಿರುವ ಬೋರ್‌ವೆಲ್‌ನ ನೀರು ಫ್ಲೋರೈಡ್ ಯುಕ್ತ ನೀರಾಗಿರುತ್ತದೆ, ಆ ನೀರನ್ನು ಕುಡಿದರೆ ಮನುಷ್ಯನ ಆರೋಗ್ಯ ಸಂಪೂರ್ಣ ಕೆಟ್ಟುಹೋಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಫ್ಲೋರೈಡ್‌ಯುಕ್ತ ನೀರನ್ನು ಜನರಿಗೆ ಕೊಡಬಾರದು ಎನ್ನುವ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಸಾಕಷ್ಟು ಚರ್ಚೆಯನ್ನು ಮಾಡಿ Multi-Village Scheme ಗಳನ್ನು ಮಾಡುವುದರ ಮೂಲಕ ಕೆರೆ, ನದಿ, ಹಳ್ಳ ಹೀಗೆ ಭೂಮಿಯ ಮೇಲೆ ಇರುವಂಥ ನೀರನ್ನು ಮಾತ್ರ ಮೇಲಕ್ಕೆತ್ತಿ ಅದನ್ನು ಶುದ್ಧೀಕರಿಸಿ ಕೊಡುವಂಥ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಬಹಳ ದೊಡ್ಡ ಸಂಖ್ಯೆಯಲ್ಲಿ ನೂರಾರು ಹಳ್ಳಿಗಳಿಗೆ ಶುದ್ಧವಾದ ನೀರನ್ನು ಕೊಡುವಂಥ ಕೆಲಸವನ್ನು ಸರ್ಕಾರ ಮಾಡಿದೆ. ಅದಕ್ಕಾಗಿ ಸರ್ಕಾರಕ್ಕೆ ಅಭಿನಂದನೆಗಳು. ಈ ಸಂದರ್ಭದಲ್ಲಿ ನನ್ನದೊಂದು ಸಲಹೆ ಎಂದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಮೂಲಕ ಒಂದು ಕ್ರಾಂತಿಕಾರಿ ನಿರ್ಣಯವನ್ನು ನಮ್ಮ ಸರ್ಕಾರ ಮಾಡಿದರೆ, ಶುದ್ಧ ಕುಡಿಯುವ ನೀರನ್ನು ಕೊಡುವಂಥ ಘಟಕಗಳನ್ನು ಮಾಡಲು ಸಾಧ್ಯವಿದೆ. ಬಹುಶಃ ತಾವು ಕೇಳಿರಬಹುದು ಅಥವಾ ಪತ್ರಿಕೆಗಳಲ್ಲಿ ಓದಿರಬಹುದು, ಗದಗ್ ಜಿಲ್ಲೆಯಲ್ಲಿ ಅಲ್ಲಿನ ಅನೇಕ ಸಹಕಾರಿ ಸಂಘಗಳ ಧುರೀಣರು ಪ್ರತಿಯೊಂದು ಹಳ್ಳಿಗೆ ಒಂದೊಂದು ಕುಡಿಯುವ ನೀರಿನ ಶುದ್ಧೀಕರಣ ಘಟಕ ಮಾಡುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಸುಮಾರು ಐದಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಘಟಕವನ್ನು ಮಾಡಿದರೆ, ಎರಡು ರೂಪಾಯಿ ನಾಣ್ಯವನ್ನು ಹಾಕಿದರೆ 20 ಲೀಟರ್ ಶುದ್ಧವಾದಂಥ ನೀರು ಸಿಗುತ್ತದೆ. ಬೋರ್ ವೆಲ್ ನೀರು ಇರಬಹುದು, ಹೊಳೆ

ನೀರು ಇರಬಹುದು, ಯಾವುದೇ ನೀರು ಇರಬಹುದು, ಯಾವುದೇ ನೀರನ್ನು ಆ ಘಟಕಕ್ಕೆ ಕನೆಕ್ಷನ್ ಕೊಟ್ಟರೂ ಕೂಡ, ಬಡವರ ಕುಟುಂಬಗಳಿಗೆ ಎರಡು ರೂಪಾಯಿಗಳಲ್ಲಿ ಇಪ್ಪತ್ತು ಲೀಟರ್ ಶುದ್ಧವಾದಂಥ ನೀರು ಕೊಟ್ಟರೆ ಆ ಕುಟುಂಬ ನೆಮ್ಮದಿಯಿಂದ ಜೀವನ ಮಾಡುತ್ತದೆ. ಆಗ ಯಾವುದೇ ಸಣ್ಣಪುಟ್ಟ ರೋಗಗಳು ಬರುವುದಿಲ್ಲ. ಇವತ್ತು ಮನುಷ್ಯನಿಗೆ ಬರುವಂಥ ರೋಗಗಳಲ್ಲಿ ಹೆಚ್ಚಿನ ರೋಗಗಳು ಅಶುದ್ಧವಾದ ನೀರನ್ನು ಕುಡಿಯುವುದರಿಂದ ಬರುತ್ತವೆ. ಅದನ್ನು ತಪ್ಪಿಸಬೇಕೆಂದರೆ, ಪ್ರತಿ ಗ್ರಾಮಕ್ಕೂ ಐದೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈ ರೀತಿಯ ಶುದ್ಧೀಕರಣ ಘಟಕಗಳನ್ನು ಪ್ರಾರಂಭ ಮಾಡಿದರೆ, ಬಹಳ ದೊಡ್ಡ ಪ್ರಮಾಣದಲ್ಲಿ ನಾವು ಕ್ರಾಂತಿಯನ್ನು ಮಾಡಿದ ಹಾಗಾಗುತ್ತದೆ. ಆಗ ದವಾಖಾನೆಗಳ ಅಗತ್ಯತೆ ಬೀಳುವುದಿಲ್ಲ, ಔಷಧಗಳು ಅಗತ್ಯತೆ ಬೀಳುವುದಿಲ್ಲ, ವೈದರ ಅಗತ್ಯತೆ ಬೀಳುವುದಿಲ್ಲ. ಆದ್ದರಿಂದ ಶುದ್ದವಾದ ನೀರನ್ನು ಕೊಡಬೇಕೆನ್ನುವ ಹಿನ್ನೆಲೆಯಲ್ಲಿ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡು ಗ್ರಾಮ ಪಂಚಾಯಿತಿಗಳಿಗೆ ಕೊಡುವ ಅನುದಾನದ ಜೊತೆಗೆ ಯವುದಾದರೂ ಇಲಾಖೆಗಳಲ್ಲಿ ಬೇರೆ ಬೇರೆ ಅನಾವಶ್ಯಕ ಖರ್ಚುಗಳಾಗುತ್ತಿದ್ದರೆ, ಅದನ್ನು ತಡೆದು ಆ ದುಡ್ಡನ್ನು ಇದಕ್ಕೆ ಡೈವರ್ಟ್ ಮಾಡಿ ಒಂದೊಂದು ಹಳ್ಳಿಗೂ ಒಂದು ಶುದ್ಧ ಕುಡಿಯುವ ನೀರಿನ ಘಟಕವನ್ನು ಮತ್ತು ನಗರ ಮಟ್ಟದಲ್ಲೂ ಸಹ ವಾರ್ಡ್‌ಗೊಂದೊಂದು ಇಂಥ ಘಟಕಗಳನ್ನು ಮಾಡಿಬಿಟ್ಟರೆ ಬಹುಶಃ ಕುಡಿಯುವ ನೀರಿನ ಸಮಸ್ಯೆಯಾಗುವುದಿಲ್ಲ. ಬಳಕೆಗೆ ಬೇಕಾಗುವಂಥ ನೀರು, ಬಟ್ಟೆ ತೊಳೆಯಲು ಬೇಕಾಗುವಂಥ ನೀರು, ಜಾನುವಾರುಗಳಿಗೆ ಬೇಕಾಗುವಂತ ನೀರನ್ನು ಬೇರೆ ಮೂಲಗಳಿಂದ ಕೊಡಬಹುದು. ಆದ್ದರಿಂದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಾಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ.

ಇನ್ನು, ರಾಜ್ಯದ ಎಲ್ಲ ಕಡೆಯೂ ವಿದ್ಯುತ್ ಬಹಳ ಅಗತ್ಯವಿದೆ. ಮಳೆಯಾಗದಿದ್ದರೂ, ಡ್ಯಾಂನಲ್ಲಿ ನೀರಿಲ್ಲದಿದ್ದರೂ, ಕೇಂದ್ರದಿಂದ ಸಕಾಲಕ್ಕೆ ಸಾಕಷ್ಟು ಕಲ್ಲಿದ್ದಲು ಬರದಿದ್ದರೂ ಕೂಡ ವಿದ್ಯುತ್ ವಿಷಯದಲ್ಲಿ ಎಲ್ಲಿಯೂ ಕೂಡ ಜನರಿಗೆ ದೊಡ್ಡ ಪ್ರಮಾಣದಲಿ ತೊಂದರೆಯಾಗಿಲ್ಲ. ವಿದ್ಯುತ್ತನ್ನು ಖರೀದಿ ಮಾಡಿ, ಸಾಕಷ್ಟು ಹೊಸಹೊಸ ಯೋಜನೆಗಳನ್ನು ಜಾರಿಗೆ ತಂದು ಸರ್ಕಾರ ಕ್ರಾಂತಿಕಾರಿ ನಿರ್ಣಯಗಳನ್ನು ತೆಗೆದುಕೊಂಡು ಜನರಿಗೆ ಸಾಕಷ್ಟು ವಿದ್ಯುತ್ತನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಅಷ್ಟೇ ಅಲ್ಲ, ಗುಜರಾತ್‌ನಲ್ಲಿ ನಿರಂತರ ಜ್ಯೋತಿ ತರಬೇಕೆಂದು ಅಲ್ಲಿನ ಮುಖ್ಯಮಂತ್ರಿಗಳು ಯಾವ ರೀತಿಯ ಕಾರ್ಯಕ್ರಮವನ್ನು ಮಾಡಿದರೋ ಅದನ್ನೇ ಕರ್ನಾಟಕದಲ್ಲಿ ಇವತ್ತು ನಮ್ಮ ಸರ್ಕಾರ ಕೂಡ ಮಾಡಿದೆ. ಸುದೈವದಿಂದ ಮೊದಲನೇ ಕಂತಿನಲ್ಲಿ ನಮ್ಮ ತಾಲ್ಲೂಕು ಕೂಡ ಇದೆ.

ಜಮಖಂಡಿ ತಾಲ್ಲೂಕಿಗೆ 10 ಕೋಟಿ ರೂಪಾಯಿ ಮಂಜೂರಾಗಿದ್ದು, ಅಲ್ಲಿ ಕೆಲಸ ಮುಕ್ತಾಯದ ಹಂತಕ್ಕೆ ಬಂದಿದೆ, ಇನ್ನೊಂದು 15–20 ದಿವಸಗಳಲ್ಲಿ ಆ ಕೆಲಸ ಮುಗಿದರೆ, ಗ್ರಾಮಾಂತರ ಭಾಗದಲ್ಲಿ ವಾಸಿಸುವ ಜನರಿಗೆ ತಡೆರಹಿತವಾಗಿ 24 ಘಂಟೆಯೂ ವಿದ್ಯುತ್ತನ್ನು ಕೊಡುವಂಥ ಒಂದು ಕ್ರಾಂತಿಕಾರಿ ಕಾರ್ಯಕ್ರಮ ಜಾರಿಗೆ ಬರುತ್ತದೆ ಎಂದು ಬಹಳ ಅಭಿಮಾನದಿಂದ ಮತ್ತು ಸಂತೋಷದಿಂದ ಹೇಳಲು ಬಯಸುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ವಿನಂತಿಯೇನೆಂದರೆ, ಇಂಧನ ಇಲಾಖೆಯ ಮಂತ್ರಿಗಳಿಗೆ ಮತ್ತು ಅಧಿಕಾರಿಗಳ ಗಮನಕ್ಕೆ ತರುವುದೇನೆಂದರೆ, ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿ ಎಡಭಾಗಕ್ಕೆ ಬಹಳ ದೂರದಿಂದ ವಿದ್ಯುತ್ ಬರುತ್ತದೆ. ಅಲ್ಲಿಗೆ ಅಥಣಿಯ 220 ಕೆ.ವಿ. ಸ್ಟೇಷನ್‌ನಿಂದ ಬರಬೇಕು. ವಿದ್ಯುತ್ ಬರಬೇಕು ಅಥವಾ ಬಸವನಬಾಗೇವಾಡಿಯು 220 ಕೆ.ವಿ. ಸ್ಟೇಷನ್‌ನಿಂದ ಬರಬೇಕು. ದೂರದಿಂದ ಬರುವಂತ ವಿದ್ಯುತ್ 110 ಕೆ.ವಿ. ನಂತರ 33 ಕೆ.ವಿ. ಸ್ಟೇಷನ್‌ಗೆ ಬಂದರೆ ಗುಣಮಟ್ಟದ ವಿದ್ಯುತ್ ಕೊಡಲು ಸಾಧ್ಯವಾಗುವುದಿಲ್ಲ. ಮುಂದೆ, ನಮ್ಮಲ್ಲಿ ಕೆರೆ ತುಂಬುವ ಯೋಜನೆ ಸಾವಳಗಿ ಭಾಗದಲ್ಲಿದೆ, ಪ್ರತಿಹಳ್ಳಿಗೂ Multi-Village Scheme ನಲ್ಲಿ ಕೃಷ್ಣಾ ನದಿಯ ನೀರನ್ನು ಎತ್ತಿ ಕೊಡಬೇಕಾಗುತ್ತದೆ. ಬಬಲೇಶ್ವರ ಮತ್ತು ಸಾವಳಗಿ ಲಿಫ್ಟ್ ಇರಿಗೇಷನ್ ಆದರೆ ಅದಕ್ಕೆ ಸುಮಾರು 460 ಕೋಟಿ ರೂಪಾಯಿ ಖರ್ಚು ಮಾಡಿ ಈ ಲಿಫ್ಟ್ ಇರಿಗೇಷನ್ ಅನ್ನು ಮಾಡಿ ರೈತರ ಜಮೀನಿಗೆ ಕೊಡಬೇಕಾಗುತ್ತದೆ. ಚಿಕ್ಕಲಗಿಯ 45 ಕೋಟಿ ರೂಪಾಯಿಗಳ ಲಿಫ್ಟ್ ಇರಿಗೇಷನ್‌ಗೆ ಕೂಡ ವಿದ್ಯುತ್ ಬೇಕಾಗುತ್ತದೆ. ಹೀಗಾಗಿ ಮುಂಬರುವಂಥ ದಿವಸಗಳಲ್ಲಿ ಬಹಳಷ್ಟು ವಿದ್ಯುತ್ತಿನ ಬೇಡಿಕೆ ಜಮಖಂಡಿ ತಾಲ್ಲೂಕಿನ ಸಾವಳಗಿ ಭಾಗದಲ್ಲಿರುವುದರಿಂದ ಅಲ್ಲಿ 220 ಕೆ.ವಿ. ಸ್ಟೇಷನ್ ಮಾಡಬೇಕೆನ್ನುವುದು ನನ್ನ ವಿನಂತಿ. ಈ ಬಗ್ಗೆ 351ರ ಕೆಳಗೆ ನಾನು ಒಂದು ಪ್ರಶ್ನೆಯನ್ನು ಕೂಡ ಸರ್ಕಾರಕ್ಕೆ ಕೇಳಿದ್ದೆ, ಅದೇನೆಂದರೆ, ಸಾವಳಗಿ ಭಾಗದಲ್ಲಿ 220 ಕೆ.ವಿ. ಸ್ಟೇಷನ್ ಮಾಡಿ, ಬಸವನಬಾಗೇವಾಡಿ ಮೂಲಕ ತಂದು ಅಲ್ಲಿ ಕೊಟ್ಟರೆ ಮುಂದೆ ಅಲ್ಲಿ ಯಾವುದೇ ರೀತಿಯಲ್ಲಿ ವಿದ್ಯುತ್ತಿನ ಕೊರತೆಯಾಗುವುದಿಲ್ಲ. ಆದ್ದರಿಂದ ಜಮಖಂಡಿಯಲ್ಲಿ 220 ಕೆ.ವಿ. ಸ್ಟೇಷನ್ ಮಂಜೂರು ಮಾಡುವಂಥ ಕಾರ್ಯಕ್ರಮಕ್ಕೆ ಸರ್ಕಾರ ಚಾಲನೆಯನ್ನು ಕೊಡಬೇಕು ಎನ್ನುವ ವಿಶೇಷವಾದ ವಿನಂತಿಯನ್ನು ಮಾಡುತ್ತೇನೆ. ಅದರ ಜೊತೆಗೆ, ಈ ಭಾಗದಲ್ಲಿ ಮುಂದೆ ಅಗತಕ್ಕಂಥ ನೀರಾವರಿ ಯೋಜನೆಗಳು, ಅಥಣಿ ತಾಲ್ಲೂಕಿನ ಮೂಲಕ ತುಂಗಳ್–ಸಾವಳಗಿ ಲಿಫ್ಟ್ ಇರಿಗೇಷನ್ ಸಂಪೂರ್ಣ ಸಜ್ಜಾಗಿದೆ. 1000 ಹೆಚ್.ಪಿ.ಯ ನಾಲ್ಕು ಮೋಟಾರ್ ಗಳಿವೆ. ಅದರಲ್ಲಿ 1000 ಹೆಚ್.ಪಿ.ಯ ಮೂರು ಮೋಟರ್ ಗಳನ್ನು

ಡಿಸೆಂಬರ್ 27 ರಂದು ರನ್ ಮಾಡುವುದರ ಮೂಲಕ ಸನ್ಮಾನ್ಯ ಲಕ್ಷ್ಮಣ ಸವದಿಯವರು ಮತ್ತು ನಾವು ಕೂಡಿ ಸಾಂಕೇತಿಕವಾಗಿ ಚಾಲೂ ಮಾಡಿದೆವು. ಸಣ್ಣಪುಟ್ಟ ಕೆಲಸಗಳು ಬಾಕಿಯಿದ್ದವು. ಅದು ಮುಕ್ತಾಯವಾಗುತ್ತದೆ. 29ನೇ ತಾರೀಖಿನ ದಿವಸ ಪಂಪ್ ರನ್ ಆಗಿಬಿಟ್ಟರೆ, ನನ್ನ ಕ್ಷೇತ್ರದಲ್ಲಿ 18 ಸಾವಿರ ಎಕರೆ ಬರಪೀಡಿತ ಪ್ರದೇಶಕ್ಕೆ ನೀರು ಬರುತ್ತದೆ ಮತ್ತು ಅದರಿಂದ ರೈತರು ನೀರಾವರಿ ಬೆಳೆಯನ್ನು ಮಾಡಲು ಸಾಧ್ಯವಾಗುತ್ತದೆ. ಇವತ್ತು ನಮ್ಮ ಭಾಗದಲ್ಲಿ ಕೆರೆ ತುಂಬುವ ಯೋಜನೆ ಬಂತು, ತುಂಗಳ್–ಸಾವಳಗಿ ಲಿಫ್ಟ್ ಇರಿಗೇಷನ್ ಬಂತು. ಮುಂದೆ ಚಿಕ್ಕಲಗಿ ಲಿಫ್ಟ್ ಇರಿಗೇಷನ್ ಬರುತ್ತದೆ. ನೀರಾವರಿ ಇಲಾಖೆ ಇವುಗಳನ್ನೆಲ್ಲ maintain ಮಾಡಬೇಕಾದರೆ ಸಾವಳಗಿಯಲ್ಲೊಂದು Assistant Executive Engineer Post ಅನ್ನು ಮಂಜೂರು ಮಾಡಿ ಒಂದು ಉಪ ವಿಭಾಗವನ್ನು ಪ್ರಾರಂಭ ಮಾಡಿದರೆ ಅಲ್ಲಿಯ ನೀರಾವರಿ ಯೋಜನೆಗಳೆಲ್ಲವನ್ನೂ manage ಮಾಡಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಲ್ಲಿಗೆ ಒಂದು A.E.E. Post ಅನ್ನು ಮಂಜೂರು ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಇನ್ನು ಆ ಭಾಗದ ಹತ್ತಾರು ಸಮಸ್ಯೆಗಳನ್ನು ಬೇರೆಬೇರೆ ಸಂದರ್ಭಗಳಲ್ಲಿ ನಾವೇನು ಪ್ರಸ್ತಾಪ ಮಾಡಿರುತ್ತೇವೆ, ಅವುಗಳ ಬಗ್ಗೆ ಹೆಚ್ಚು ಒತ್ತು ಕೊಟ್ಟು ಸರ್ಕಾರ ಅದನ್ನು ಜಾರಿಗೆ ತರಬೇಕು ಎನ್ನುವ ವಿನಂತಿಯನ್ನು ಮಾಡುತ್ತೇನೆ. ಕೊನೆಯದಾಗಿ, ಒಂದು ವಿಷಯವನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತೇನೆ. ತಮಗೆ ಗೊತ್ತಿದೆ, ಸ್ವಾತಂತ್ರ್ಯ ಸಿಕ್ಕ ನಂತರ ರಾಜ್ಯಗಳ ವಿಲೀನೀಕರಣ ಆಗುವಂಥ ಸಂದರ್ಭದಲ್ಲಿ ಮೊಟ್ಟಮೊದಲು ಯಾರಾದರೂ ಮುಂದೆ ಬಂದಿದ್ದರೆ ಅದು ಜಮಖಂಡಿ ಸಂಸ್ಥಾನದ ಪಟವರ್ಧನ ಮಹಾರಾಜರು. ಅವರು ಸರದಾರ್ ವಲ್ಲಭಬಾಯಿಯವರ ಜೊತೆ ಮೂರು ಕಂಡೀಷನ್ ಗಳನ್ನು ಹಾಕಿದ್ದರು. ಕಂಡೀಷನ್ ನಂಬರ್ 1, ಜಂಬಗಿ ಬ್ರಿಡ್ಜ್ ಆಗಬೇಕು ಎನ್ನುವುದು. ನಮ್ಮ ಸರ್ಕಾರ ಅದನ್ನು ಈಡೇರಿಸಿದೆ. ಕಂಡೀಷನ್ ನಂಬರ್ 2 ಕುಡಚಿಯಿಂದ ಬಾಗಲಕೋಟೆಯವರೆಗೆ ರೈಲ್ವೆ ಲೈನ್ ಜಮಖಂಡಿ ಮೂಲಕ ಹೋಗಬೇಕು ಎನ್ನುವುದಾಗಿತ್ತು. ಅದು ವಿಳಂಬವಾದರೂ ಈಗ ಕೇಂದ್ರ ಸರ್ಕಾರ ಅದಕ್ಕೆ ಹಣವನ್ನು ಕೊಟ್ಟಿದೆ. ಹಿಂದಿನ ಅಧಿವೇಶನದಲ್ಲಿ ನಮ್ಮ ಮುಖ್ಯಮಂತ್ರಿಗಳು 860 ಕೋಟಿ ರೂಪಾಯಿಗಳ ಹಣವನ್ನು ಕರ್ನಾಟಕ ಸರ್ಕಾರದಿಂದ ಕೊಡುತ್ತೇವೆ ಎನ್ನುವ ಘೋಷಣೆಯನ್ನು ಮಾಡಿದ್ದಾರೆ. ಅದಕ್ಕೆ ಇನ್ನಷ್ಟು ಚಾಲನೆಯನ್ನು ಕೊಟ್ಟು ಕುಡಚಿಯಿಂದ ಬಾಗಲಕೋಟೆಯವರೆಗೆ ಜಮಖಂಡಿ ಮೂಲಕ ರೈಲ್ವೆ ಲೈನ್ ಹೋದರೆ ಆ ಮಹಾರಾಜರು ಹಾಕಿದ ಎರಡನೇ ಕಂಡೀಷನ್ ಅನ್ನೂ ಕೂಡ ನಾವು

ಈಡೇರಿಸಿದ ಹಾಗಾಗುತ್ತದೆ. ಮೂರನೇ ಕಂಡೀಷನ್ ಏನೆಂದರೆ, ಆವತ್ತು ಜಮಖಂಡಿಯಲ್ಲಿ ದಿವಾನ್ ಎನ್ನುವ ಹುದ್ದೆಯಿತ್ತು. ಆ ಹುದ್ದೆ ಖಾಯಂ ಆಗಿ ಉಳಿಯಬೇಕೆಂದು ಅವರು ಹೇಳಿದ್ದರು. ದಿವಾನ್ ಹುದ್ದೆ ಎಂದರೆ ಜಿಲ್ಲಾಧಿಕಾರಿ ಹುದ್ದೆ. ಜಮಖಂಡಿ ಜಿಲ್ಲಾ ಕೇಂದ್ರವಾಗಲಿಕ್ಕೆ ಬಹಳ ಯೋಗ್ಯವಾಗಿದೆ. ಆದರೆ ಅಲ್ಲಿ ಹಿಂದಿನ ಜನಪ್ರತಿನಿಧಿಗಳು ಯಾವ ಒಂದು ಆಯೋಗವನ್ನು ನೇಮಿಸಿದ್ದರು, ಯಾವ ಒಂದು ಕಮಿಟಿ ಬಂದಿತ್ತು, ಅದರ ಮುಂದೆ ಹೇಳಬೇಕಾದುದನ್ನು ಹೇಳಲಿಲ್ಲವಾದ್ದರಿಂದ ಜಮಖಂಡಿಯ ಬದಲು ಬಾಗಲಕೋಟೆ ಜಿಲ್ಲಾ ಕೇಂದ್ರವಾಗಿಬಿಟ್ಟಿತು. ಆದರೆ ನಿಜವಾಗಿ ಜಿಲ್ಲಾ ಕೇಂದ್ರವಾಗಬೇಕಾಗಿದ್ದದು ಜಮಖಂಡಿಯಾಗಿತ್ತು. ಜಮಖಂಡಿಯಲ್ಲಿ ಜನಸಾಂದ್ರತೆ ಹೆಚ್ಚಿದೆ. ಜಮಖಂಡಿಯ ಸುತ್ತಮುತ್ತ ಬರುವಂಥ ಅಥಣಿ, ರಾಯಭಾಗ, ಬೀಳಗಿ ಮತ್ತು ಮುಧೋಳಗಳನ್ನು ತಾಲ್ಲೂಕುಗಳ ಜೊತೆಗೆ ತೇರದಾಳವನ್ನು ಹೊಸ ತಾಲ್ಲೂಕೆಂದು ಘೋಷಣೆ ಮಾಡಿ, ನೀರಾವರಿ ಭೂ ಪ್ರದೇಶವಿರುವಂಥ ನಾಲ್ಕೈದು ತಾಲ್ಲೂಕುಗಳನ್ನು ಸೇರಿಸಿ ಮಾಡಬೇಕು. ಇಡೀ ಬಾಗಲಕೋಟೆಯಲ್ಲಿ ಒಂದು ದಿವಸಕ್ಕೆ ಎಷ್ಟು mutations ಆಗುತ್ತದೋ, ಜಮಖಂಡಿಯಲ್ಲಿ ಒಂದು ದಿವಸಕ್ಕೆ ಅಷ್ಟು ಆಗುತ್ತದೆ. ಹೀಗಾಗಿ ಜಮಖಂಡಿಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದರೆ, ಮುಂದಿನ ದಿನಗಳಲ್ಲಿ ಸರ್ಕಾರದ ಆಡಳಿತವನ್ನು ಸರಿಯಾಗಿ ಅಧಿಕಾರ ವಿಕೇಂದ್ರೀಕರಣ ಮಾಡುತ್ತಾ ಜನರ ಕಷ್ಟಸುಖಗಳನ್ನು ಅರ್ಥ ಮಾಡಿಕೊಂಡು ಸರ್ಕಾರ ಕ್ರಿಯಾಶೀಲವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಜಮಖಂಡಿಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕು ಎನ್ನುವ ಯೋಚನೆಯನ್ನು ಸರ್ಕಾರ ಮಾಡಬೇಕು. ಅದಕ್ಕೆ ಬೇಕಾಗುವಂಥ ಎಲ್ಲಾ ಚರ್ಚೆಯನ್ನು ಮಾಡಿ, ಬೇಕಾದರೆ ಒಂದು ಸಮಿತಿಯನ್ನು ನೇಮಿಸಿ, ಅದು ಅಲ್ಲಿಗೆ ಹೋಗಿ ಅಧ್ಯಯನ ಮಾಡಿ, ಅದನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದರೆ ಆ ಭಾಗದ ಜನರ ಕನಸು ನನಸಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟಂಥ ತಮಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಗೂಳಿಹಟ್ಟಿ ಡಿ. ಶೇಖರ್ ರವರು

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ): ಮಾನ್ಯ ಉಪಾಧ್ಯಕ್ಷರೆ, ಬಜೆಟ್ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. 27ನೇ

ತಾರೀಖು ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ ಮತ್ತು Finance bill pass ಆಗಬೇಕೆಂದು BAC ಯಲ್ಲಿ ಎಲ್ಲರೂ ಸೇರಿ ಮಾತನಾಡಿದ್ದೀರಿ ಎಂದು ನನಗನನ್ನಿಸುತ್ತದೆ. ಆದರೆ, ಇವತ್ತು 25ನೇ ತಾರೀಖು, ನಾಳೆ ಒಂದು ದಿವಸ ಮಾತ್ರ ಚರ್ಚೆಗೆ ಅವಕಾಶವಿದೆ. ಆದ್ದರಿಂದ, ನನ್ನ ಒಂದು ಮನವಿ ಇದೆ. ಸದನವನ್ನು ಮೊಟಕು ಮಾಡುವಂಥದ್ದು ಮುಂದೆ ಈ ರೀತಿ ಆಗಬಾರದು. ಏಕೆಂದರೆ, ಈ Subject Committees ಅನ್ನು ಸಹ abolish ಮಾಡಿದ್ದೀರಿ. ಯಾವ್ಯಾವ ಇಲಾಖೆಯ Subject Committees ಇದ್ದಿದ್ದರೆ atleast ನಾವು ಬೇರೆ ಬೇರೆ MLAs ಒಂದೊಂದು ಇಲಾಖೆ ಮೇಲೆ ಚರ್ಚೆ ಮಾಡುತ್ತಿದ್ದು, ಸಲಹೆಗಳನ್ನು ಕೊಡುತ್ತಿದ್ದೆವು ಮತ್ತು ಎಲ್ಲಿ ಅವ್ಯವಹಾರವಾಗುತ್ತಿದೆ ಅದನ್ನು ಕಡಿವಾಣ ಹಾಕಲಿಕ್ಕೆ ಏನು ಸಲಹೆ ಬೇಕೋ ಅದನ್ನೂ ಕೊಡುತ್ತಿದ್ದೆವು ಮತ್ತು wasteful expenditure ಎಲ್ಲಿ ಆಗುತ್ತಿದೆ ಕ್ರಿಯಾಶೀಲವಾಗಿ ಯುವ ರೀತಿ ಹಣ ಬಳಕೆ ಮಾಡಬಹುದೆಂದು advise ಮಾಡಬಹುದಾಗಿತ್ತು. ಅದಕ್ಕೂ ಅವಕಾಶವಿಲ್ಲ. ಈ ಸದನದಲ್ಲಿ ನಾವು ಈ ಬೇಡಿಕೆ ಮೇಲೆ ಚರ್ಚೆ ಮಾಡಬೇಕೆಂದು ಇಲ್ಲಿ ಪ್ರಯತ್ನ ಮಾಡಿದರೆ, ಇಲ್ಲಿ ನಮಗೆ ಈ ಅವಕಾಶಗಳ ಕಾಲಮಿತಿಯ ಒಂದು ಚೌಕಟ್ಟನ್ನು ಹಾಕುತ್ತೀರಿ. ಇನ್ನು ಎರಡೇ ದಿವಸಗಳಲ್ಲಿ ಎಲ್ಲಾ ಇಲಾಖೆಗಳ ಬಗ್ಗೆ ನಾವು ಚರ್ಚೆಯನ್ನೂ ಮಾಡುವ ಹಾಗಿಲ್ಲ. ಚರ್ಚೆ ಮಾಡಬೇಕೆನ್ನುವ ಉತ್ಸಾಹದಿಂದ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ Assembly ಯಲ್ಲಿ ಕುಳಿತರೂ ಸಹ ಸರ್ಕಾರದ ವತಿಯಿಂದ ನಮಗೆ ಸಿಗಬೇಕಾಗಿರತಕ್ಕಂಥ ಮಾಹಿತಿಗಳು ಸಿಗುತ್ತಿಲ್ಲ. You are witness to this House. ಇನ್ನೂ ವಾರ್ಷಿಕ ವರದಿ ಕೊಡುತ್ತಿಲ್ಲ. ಇಲಾಖೆಯ ಮೇಲೆ ನಿಮ್ಮ Performance Report on budget ಕೊಡುತ್ತಿಲ್ಲವೆಂದು ನಾನು 4–5 ದಿವಸಗಳ ಹಿಂದೆಯೇ ಹೇಳಿದ್ದೆ ಇಲ್ಲಿಯವರೆಗೂ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ಇಲಾಖೆಗಳ demands ಒಟ್ಟಿಗೇ ಇಟ್ಟಿದ್ದೀರಿ. ಕೆಲವು ವಿಷಯಗಳಿಗೆ ಸಂಬಂಧಪಟ್ಟಂತೆ Performance Report ಬಂದಿದೆ. ಇನ್ನೂ ಕೂಡ ಅನೇಕ ಇಲಾಖೆಗಳ Performance Report ಬಂದಿಲ್ಲ. How can MLAs participate in the discussion? ಸರ್ಕಾರ ಇದೆಯೇ? ಹಾಗಾದರೆ, demands ಗೆ subject ಗಳನ್ನು ಏಕೆ ಇಟ್ಟಿದ್ದೀರಿ? If you don't furnish the Performance Report ಹೇಗೆ ಚರ್ಚೆ ಮಾಡುವುದು? Without knowing how that Department is functioning ಮಾಹಿತಿ ಇಲ್ಲದೆ ಹೇಗೆ ಮಾತನಾಡುತ್ತಾರೆ?

Is it not mandatory when the Demand is moved on the floor of the House? Along with the Demand, Performance Report should also be furnished. ಎಲ್ಲಿದೆ? ಇವರಿಗೆ ಏನು ಬಂದಿದೆ? ಇವರಿಗೆ ಎಷ್ಟು ಸಾರಿ ಹೇಳುವುದು?

ಉಪಾಧ್ಯಕ್ಷರು: ಸುರೇಶ್ ಕುಮಾರ್ ರವರೆ, ಇದರ ಬಗ್ಗೆ ಗಮನಹರಿಸಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಕೆಲವು ಇಲಾಖೆಗಳ ವಾರ್ಷಿಕ ವರದಿ ಮತ್ತು ನಿರ್ವಹಣಾ ವರದಿ ಬಂದಿದೆ. ಇನ್ನೂ ಕೆಲವು ಇಲಾಖೆಗಳ ವರದಿ ಬರಬೇಕು. ನಾನು ಸೂಚನೆ ಕೊಟ್ಟು ಬರುವ ಹಾಗೆ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನೀವು Parliamentary Minister. ನಿಮಗೆ ಹೇಳಬೇಕೆನ್ನುವ ಕಾರಣಕ್ಕೋಸ್ಕರ ಅಲ್ಲ.

Sri S. Suresh Kumar: You are right. I fully agree with you

ಶ್ರೀ ಸಿದ್ದರಾಮಯ್ಯ: ಇವತ್ತು ಮತ್ತು ನಾಳೆಯೊಳಗೆ ಬಜೆಟ್ ಮೇಲೆ ಮಾತನಾಡಿ ಮುಗಿಸಬೇಕೆಂದಿದ್ದೀರಿ. ಹಾಗಾದರೆ, how to participate? How can we participate

Sri S. Suresh Kumar: Actually, I agree with you

ಶ್ರೀ ಸಿದ್ದರಾಮಯ್ಯ: ನೀವು ಆ ವರದಿಯನ್ನು ಇವತ್ತು ಕೊಡದಿದ್ದರೆ ನಾಳೆ nobody can participate.

ಶ್ರೀ ಎಸ್. ಸುರೇಶ್ ಕುಮಾರ್: ತರಿಸಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಇವತ್ತೇ ತರಿಸಲು ಕ್ರಮ ತೆಗೆದುಕೊಳ್ಳಿ, ಯಾವ್ಯಾವ ಇಲಾಖೆಯವರು ವರದಿ ಕೊಟ್ಟಿದ್ದಾರೆ, ಆ ಇಲಾಖೆಗಳ ಬಗ್ಗೆ ಮಾತ್ರ ಸದಸ್ಯರು ಮಾತನಾಡುತ್ತಾರೆ. ಬೇರೆ ಇಲಾಖೆಗಳ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ. ನಿಮ್ಮ Legislature Secretariat ಗೆ ಯಾವ್ಯಾವ ಇಲಾಖೆಗಳಿಂದ ಬಂದಿದೆ, ಯಾವ್ಯಾವ ಇಲಾಖೆಗಳಿಂದ ಬಂದಿಲ್ಲ ಎನ್ನುವ ಬಗ್ಗೆ ಕೂಡಲೇ ಅವರಿಗೆ ತಿಳಿಸಿ, ಅದನ್ನು ಕೂಡಲೇ ಕೊಡಬೇಕು. ಅದನ್ನು ಕೊಡದೇ ಹೋದರೆ we cannot participate, thereby you are preventing the Members from participating in the debate. It amounts to breach of privilege of the

Members. It is our right. ಈ ತರಹವಾದರೆ, this is not the way. ಈ ತರಹ ಸರ್ಕಾರ ನಡೆದುಕೊಂಡರೆ ಏನು ಮಾಡಬೇಕು ಹೇಳಿ? ಮಾನ್ಯ ಉಪಾಧ್ಯಕ್ಷರೆ, ನಿಮಗೆ ನಾವು ಮನವಿ ಮಾಡಿಕೊಳ್ಳುತ್ತಿದ್ದೇವೆ. ನೀವು ಆ ಕೆಲಸ ಮಾಡಿಸಲಿಲ್ಲವೆಂದರೆ, ಸದನವನ್ನು ಮುಂದಕ್ಕೆ ಹಾಕಿಬಿಡಿ, ಚರ್ಚೆ ಮಾಡುವುದು ಬೇಡ. ಆಮೇಲೆ ನಾವು ಬಿಲ್ ಅನ್ನು approve ಮಾಡಿಕೊಡುವುದಿಲ್ಲ.

ಉಪಾಧ್ಯಕ್ಷರು: ನಾಳೆಯೊಳಗೆ ತಲುಪಿಸುವ ನಿಟ್ಟಿನಲ್ಲಿ ಸೂಚನೆ ಕೊಡಲಾಗಿದೆ

ಶ್ರೀ ಸಿದ್ಧರಾಮಯ್ಯ: ಹಾಗಾದರೆ, ನಾವು ಒಂದೂ ಬಿಲ್ ಅನ್ನು approve ಮಾಡಿಕೊಡುವುದಿಲ್ಲ. ಚರ್ಚೆ ಮಾಡದೆ ಸುಮ್ಮನೆ approve ಮಾಡಿಕೊಡುವುದಕ್ಕೆ ನಾವೇನು ಇಲ್ಲಿ ಕಡಲೆಪುರಿ ತಿನ್ನುವುದಕ್ಕೆ ಬಂದಿದ್ದೇವೆಯೇ? ಒಂದೊಂದು ಇಲಾಖೆಗೆ 5 ಸಾವಿರ ಕೋಟಿ, 6 ಸಾವಿರ ಕೋಟಿ, 4 ಸಾವಿರ ಕೋಟಿ ಹೀಗೆ ಹಣ ಮೀಸಲಿಟ್ಟಿರುತ್ತಾರೆ. ಅದನ್ನು ಇಲ್ಲಿ approve ಮಾಡಬೇಕು. ತೆಗೆದುಕೊಂಡು ಹೋಗಿ ಖರ್ಚು ಮಾಡಿ, ಯಾರಾದರೂ ತಿಂದುಕೊಂಡು ಹೋಗಿ ಎಂದು ಕೊಟ್ಟು ಬಿಡುವುದಕ್ಕಾಗುತ್ತದೆಯೇ? ಜವಾಬ್ದಾರಿ ಇರಬೇಕಲ್ಲವೇ? Demands ಎಂದರೇನು? ಸರ್ಕಾರ ಇದರ ಬಗ್ಗೆ ಹೆಚ್ಚು ಜವಾಬ್ದಾರಿಯಿಂದ ಇರಬೇಕಾಗುತ್ತದೆ. See, Finance Bill, Demands, ಇದು pass ಆಗಬೇಕು. then only they can spend. We should all not only opposition, entire Legislature has to pass, approve it, other wise they cannot spend. ಕೋಟ್ಯಾಂತರ ರೂಪಾಯಿ ನಿಗದಿಯಾಗಿರುತ್ತದೆ. ಚರ್ಚೆ ಮಾಡದೆ approve ಮಾಡಿದರೆ ಜನ ಏನು ಅನ್ನುತ್ತಾರೆ? ಕಣ್ಣುಮುಚ್ಚಿಕೊಂಡು ಒಪ್ಪಿಗೆ ಕೊಡುವುದಕ್ಕಾಗುತ್ತದೆಯೇ? ಅದು ಜನರು ಕೊಡುವ ತೆರಿಗೆ ಹಣ. ಸಾರ್ವಜನಿಕರ ಹಣವನ್ನು ನಾವು ಹಾಗೆಲ್ಲಾ ಮನಸ್ಸೋ ಇಚ್ಛೆ ಖರ್ಚು ಮಾಡುವುದಕ್ಕೆ ಬಿಡುವುದಕ್ಕಾಗುವುದಿಲ್ಲ. ದಯಮಾಡಿ, you pull the Government. ನೀವು ಅವರಿಗೆ ಹೇಳಿ, ಅವರ ಕಿವಿ ಹಿಂಡಿ. ಅವರಿಗೆ ಎಷ್ಟು ಸಾರಿ ಹೇಳುವುದು? ಅವರಿಗೆ ಎಚ್ಚರಿಕೆ ಕೊಡಿ. ಇವತ್ತು ಆ ವರದಿ ಬರದೇ ಹೋದರೆ ನಾಳೆ ನಾವು ಯಾರೂ demands ಮೇಲೆ participate ಮಾಡುವುದಿಲ್ಲ.

ಉಪಾಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, Secretariat ಕಡೆಯಿಂದ ಯಾವುದು ಈಗಾಗಲೇ ಬಂದಿದೆ, ಯಾವುದು ಬರಲಿಕ್ಕೆ ಬಾಕಿ ಇದೆ ಎನ್ನುವ ಮಾಹಿತಿಯನ್ನು ತಕ್ಷಣ ಸರ್ಕಾರಕ್ಕೆ ತಲುಪಿಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿದ್ಧರಾಮಯ್ಯ: ಯಾವ ಇಲಾಖೆಯ ವರದಿ ಬಂದಿಲ್ಲ ಎನ್ನುವುದು Secretariat ಗೆ ಗೊತ್ತಿದೆ.

ಉಪಾಧ್ಯಕ್ಷರು: ಅವರು ತಕ್ಷಣ ಇದಕ್ಕೆ ಸ್ಪಂದಿಸುತ್ತಾರೆನ್ನುವ ವಿಶ್ವಾಸವಿಟ್ಟು ಕೊಂಡಿದ್ದೇನೆ. ಯಾವುದು ಬಾಕಿ ಇದೆ, ಯಾವ ವರದಿಯನ್ನು ಕೊಡುವುದು ಬಾಕಿ ಇದೆ, ಯಾವ ಇಲಾಖೆಯದ್ದು ಕೊಟ್ಟಿದ್ದಾರೆ ಎಲ್ಲಾ ವಿವರಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ಧರಾಮಯ್ಯ: ಅದನ್ನು ಕೊಡದೇ ಇರುವ ಇಲಾಖೆಗಳ ಬಗ್ಗೆ Demands ಮೇಲೆ ಚರ್ಚೆ ಮಾಡಿ ಒಪ್ಪಿಗೆ ಕೊಡುವುದಕ್ಕೆ ತಯಾರಿಲ್ಲ. Participate ಮಾಡುವುದಕ್ಕೂ ತಯಾರಿಲ್ಲ.

ಉಪಾಧ್ಯಕ್ಷರು: ಇದಕ್ಕೆ ಅವರು serious ಅಗಿ ಸ್ಪಂದಿಸುತ್ತಾರೆನ್ನುವ ವಿಶ್ವಾಸವಿದೆ.

ಶ್ರೀ ಸಿದ್ಧರಾಮಯ್ಯ: ಇದೇ ತಿಂಗಳ 30ನೇ ತಾರೀಖಿನೊಳಗೆ Finance Bill pass ಆಗಬೇಕಲ್ಲವೇ?

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಸ್ವತಃ ನಾನೇ Question Branch ಗೆ ಹೋಗಿ ಯಾವ್ಯಾವ ಇಲಾಖೆಯದ್ದು ಬಂದಿದೆ ಎಂದು ಹುಡುಕಾಡಿ ನೋಡಿದರೂ ಕೇವಲ ಎರಡೇ ಎರಡು ಇಲಾಖೆಗಳ ವರದಿಗಳು ಬಂದಿದೆ. PWD and Health Department, ಈ ಎರಡು ಇಲಾಖೆಗಳ ವರದಿಗಳು ಬಂದಿವೆ. ಬೇರೆ ಯಾವ ಇಲಾಖೆಯ ವರದಿ ಬಂದಿಲ್ಲ. ಕೆಲವು ಇಲಾಖೆಗಳ ವಾರ್ಷಿಕ ವರದಿ ಬಂದಿದೆ. it is a handicap for me. ನಾನು ಅಂಕಿ ಅಂಶಗಳನ್ನಿಟ್ಟುಕೊಂಡು ಮಾತನಾಡುವ ಹಾಗಿಲ್ಲ. Ihave to tell in general, I hav e to speak generally as to what is happening in the State. ನಮ್ಮ constituency ಯಲ್ಲಿ ಏನಾಗುತ್ತದೆ? ಯಾವ ಜಿಲ್ಲೆಯಲ್ಲಿ ಏನಾಗುತ್ತದೆ? ಸಾರ್ವಜನಿಕರ ಹಿತಾಸಕ್ತಿಯಿಂದ ಮಾತನಾಡಬೇಕು. I have to speak generally now. I cannot quote facts and figures. ಈ ರೀತಿ ನಾವು ಪದೇ ಪದೇ ಹೇಳುತ್ತಾ ಬಂದಿದ್ದೇವೆ. ಇದು ಮೊದಲನೇ ಸಾರಿ ಅಲ್ಲ. I have been stating this in the last 5 days. Five days back, I have reinded the Government. But still the Government is not responding. What to say? ಈಗೇನಾಗಿದೆ ಎಂದರೆ, opposition ನಲ್ಲಿ, we have resign to our fate. ಸರ್ಕಾರ ಅಂತೂ they are not

going to respond to whatever suggestions we give. We give only constructive suggestions.

ಶ್ರೀ ಕೆ. ಬಿ. ಚಂದ್ರಶೇಖರ್: ಸರ್ಕಾರ ಏನು ತಿಳಿದುಕೊಂಡಿದೆ ಎಂದರೆ, "ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ" ಎನ್ನುವ ರೀತಿಯ ಭಾವನೆಯಿಂದ ಈ ಸರ್ಕಾರ ನಡೆಸುವುದಾದರೆ, ಇದನ್ನು 6 ಕೋಟಿ ಜನ ಯಾರೂ ಒಪ್ಪುವುದಿಲ್ಲ. ದಯಮಾಡಿ, ಸರಿಯಾದ ಮಾಹಿತಿಯನ್ನು ಕೊಡುವ ವ್ಯವಸ್ಥೆ ಮಾಡುವುದಕ್ಕೆ ಹೇಳಿ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ನಾನು ಕಳೆದ ಸದನದಲ್ಲಿ ಒಂದು ಪ್ರಶ್ನೆ ಕೇಳಿದ್ದೆ. ಆ ಪ್ರಶ್ನೆ ಬಹಳ Simple ಆಗಿತ್ತು. ಏನೆಂದರೆ, ನೀವು ಯಾವ್ಯಾವ ಇಲಾಖೆಗಳಲ್ಲಿ Plan Outlay ನಲ್ಲಿ ಎಷ್ಟೆಷ್ಟು ಹಣ allocate ಮಾಡಿದ್ದೀರಿ? ಎಷ್ಟೆಷ್ಟು ಬಿಡುಗಡೆಯಾಗಿದೆ? ಎಷ್ಟೆಷ್ಟು expenditure ಆಗಿದೆ ಎಂಬ ಬಗ್ಗೆ ಸ್ವಲ್ಪ ಮಾಹಿತಿ ಕೊಟ್ಟರೆ ಒಳ್ಳೆಯದೆಂದು ಕೇಳಿದ್ದೆ. My intention was good. ನಾನೇನು Government ಗೆ criticize ಮಾಡಬೇಕು, ನಿಮ್ಮ ಮೇಲೆ ಗೂಬೆ ಕೂರಿಸಬೇಕೆನ್ನುವ ಉದ್ದೇಶದಿಂದ ನಾನು ಹೇಳುತ್ತಿಲ್ಲ. ಈ ರಾಜ್ಯದ ಜನರ ಅಭಿವೃದ್ಧಿಯಾಗಬೇಕು, ಈ ರಾಜ್ಯದಲ್ಲಿ ಯಾವ ಹಣವನ್ನು plan expenditure ಗೆಂದು set aside ಮಾಡುತ್ತೇವೆ, ಅದು ಜನರಿಗೆ ತಲುಪಬೇಕು, ನಮ್ಮ ರಾಜ್ಯ ಅಭಿವೃದ್ಧಿಯಾಗಬೇಕೆನ್ನುವ ಸದುದ್ದೇಶದಿಂದ ನಾನು ಪ್ರಶ್ನೆ ಕೇಳಿದ್ದೆ, ಕಳೆದ ಸಾರಿಯೂ ಸಹ ಅದಕ್ಕೆ ಉತ್ತರ ಕೊಡಲಿಲ್ಲ. ಏನೆಂದರೆ, ನೀವು ಲೆಕ್ಕ ಆಗಿಲ್ಲ, up to end of January, up to end of February ಎಂದು ನನಗೆ ಏನೋ ಮಾಹಿತಿ ಕೊಟ್ಟಿರಿ. ಆದರೆ, ಈ ಸಾರಿ ನಾನು ಮಾತನಾಡಬೇಕಾದರೆ, what is your expenditure for the year 2011-12 ಎಂದು ಖಚಿತವಾಗಿ ಹೇಳಬೇಕಲ್ಲವೇ/ ಆ ಮಾಹಿತಿ ನನಗೆ ಲಭ್ಯವಿಲ್ಲ. ನಾನು Opposition Leader ಕಡೆಯಿಂದ request ಮಾಡಿ ಯಾವ್ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ, ಎಷ್ಟೆಷ್ಟು ಹಣ ಖರ್ಚಾಗಿದೆ ಎನ್ನುವ ಬಗ್ಗೆ ನಿಮ್ಮ ಇಲಾಖೆಗೆ ಪತ್ರ ಬರೆದರೂ ಕೂಡ ಮಾಹಿತಿ ಕೊಟ್ಟಿಲ್ಲ. ಅದಕ್ಕೋಸ್ಕರ ಈ ಸಾರಿ ಕೂಡ question ಕೇಳಿದ್ದೆ. ನಿನ್ನೆ ಒಂದು question ನಲ್ಲಿ, you have given me the information which is very alarming. Question Hour ನಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾಗ ಸದನದಲ್ಲಿ ನಾನು ನಿನ್ನೆ ಹೇಳಿದ್ದೇನೆ. ಏನೆಂದರೆ, 15 ಸಾವಿರ ಕೋಟಿ ರೂಪಾಯಿಗಳನ್ನು ನೀವು ಎರಡೇ ತಿಂಗಳಲ್ಲಿ ಹೇಗೆ ಖರ್ಚು ಮಾಡಿದಿರಿ?

ಶ್ರೀ ಸಿದ್ದರಾಮಯ್ಯ: I will tell you, ನಿನ್ನೆ furnish ಮಾಡಿರತಕ್ಕಂಥದ್ದು, they are not the correct figures. ಏಕೆಂದರೆ, 34 ಸಾವಿರ ಕೊಟಿ ರೂಪಾಯಿಗಳ ಪ್ಲಾನ್ ಎಂದರೆ 35 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಮಾಹಿತಿ ಕೊಟ್ಟಿದ್ದಾರೆ. Totally it is not correct. ಅಂದರೆ, plan expenditure is more than 100% in the last year. Every year Audit Report ನಲ್ಲಿ 8 ಸಾವಿರ, 12 ಸಾವಿರ, 13 ಸಾವಿರ, 15 ಸಾವಿರ ಕೋಟಿ ರೂಪಾಯಿ unspent ಎಂದು ಬರುತ್ತದೆ? What is that amount? If they assured the plan size then why they are furnishing figures like that? is it true? That is misleading the Members. 2009-10 ರ AG's report ನೋಡಿ. 2010-11 ರ AG's report ತೆಗೆದು ನೋಡಿ. Rs. 13,000 crores, Rs. 12,000 crores unspent ಎಂದು ತೋರಿಸಿದ್ದೀರಿ? What is this unspent money? The unspent money is, it is not released, it has not been spent. That is the meaning of unspent money.

ಈ ವರ್ಷವೂ more than 100% release ಆಗಿದೆಯೇ? Totally not correct. ಏಕೆ ಈ ರೀತಿ ಅವರಿಗೆ ಕೊಡುತ್ತೀರಿ? ಈ ತರಹ ಕೊಟ್ಟರೆ ಅವರು ಯಾವುದರ ಮೇಲೆ ಮಾತನಾಡಬೇಕು? See, this is not the way. ಸರ್ಕಾರ ನಡೆಸುವುದಕ್ಕಾಗದಿದ್ದರೆ ನೀವು ಬಿಟ್ಟು ಹೋಗಿ ಎಂದರೆ ನೀವು ಅದೂ ಮಾಡುವುದಿಲ್ಲ.

ಡಾ|| ಶರಣ ಪ್ರಕಾಶ ರುದ್ರಪಪ್ ಪಾಟೀಲ್: ಈ ರೀತಿಯ facts, figures ಗಳನ್ನು ನೋಡಿದರೆ, ಏಕೆ ನನಗೆ ಇದರಲ್ಲಿ ನಂಬಿಕೆ ಬರುತ್ತಿಲ್ಲವೆಂದರೆ ಕೆಲವು ಇಲಾಖೆಗಳಲ್ಲಿ allocation ಗಿಂತ ಜಾಸ್ತಿ ಖರ್ಚು ಮಾಡಿದ್ದೀರಿ. For example I will cite you, RDPR ಇಲಾಖೆಯಲ್ಲಿ 3,045 ಕೋಟಿ ರೂಪಾಯಿ ಪ್ಲಾನ್ allocation ಇತ್ತು. ಆದರೆ, ಖರ್ಚಾಗಿದ್ದು 4,081 ಕೋಟಿ ರೂಪಾಯಿಗಳು. 1 ಸಾವಿರ ಕೋಟಿ ರೂಪಾಯಿಗಳನ್ನು ನೀವು ಪ್ಲಾನ್‌ನಲ್ಲಿ ಹೆಚ್ಚಿಗೆ ಖರ್ಚು ಮಾಡಿದ್ದರೆ, I am happy for it. ನಿಜವಾಗಿಯೂ ಸಾರ್ವಜನಿಕ ಹಿತಾಸಕ್ತಿಯಿಂದ ಖರ್ಚಾಗಿರುತ್ತದೆ. ಸಾರ್ವಜನಿಕ ಹಿತಾಸಕ್ತಿಯಿಂದ ಖರ್ಚಾಗಿದ್ದರೆ, I will definitely welcome it. ಏಕೆಂದರೆ ನಾವು non-plan expenditure ಕಡಿಮೆ ಮಾಡಬೇಕು, plan expenditure ಜಾಸ್ತಿ ಮಾಡಬೇಕೆನ್ನುವ ಉದ್ದೇಶವಿದೆ. ಏಕೆಂದರೆ, any prudent state ಆರ್ಥಿಕ ವ್ಯವಸ್ಥೆ ಸದೃಡವಾಗಿ ಬೆಳೆಯಬೇಕೆಂದರೆ, ideally what we feel is plan and non-plan should be 50% each. 505 ಪ್ಲಾನ್

ಇದ್ದರೆ 50% non-plan ಇದ್ದರೆ it is acceptable. ಆದರೆ, ಆ ರೀತಿ ನಮ್ಮ ದೇಶದ ಯಾವ ರಾಜ್ಯದಲ್ಲೂ ಇಲ್ಲ. At least, 60-40 ಆದರೂ ಇರಬೇಕೆಂಬುದು ನಮ್ಮ ಉದ್ದೇಶ. ಆದರೆ, ರಾಜ್ಯದಲ್ಲಿ ಇವತ್ತು it has come down to 25-75%, plan outlay is only 25% of our expenditure. ರಾಜ್ಯ ಸರ್ಕಾರ ರಾಜಕೀಯ ಉದ್ದೇಶದಿಂದ ಮಾಡಿದೆಯೋ ಅಥವಾ ಜನರನ್ನು ತಪ್ಪು ದಾರಿಗೆ ಎಳೆಯಬೇಕೆಂದು, ಜನರಿಗೆ ಮರೆಮಾಚಬೇಕೆಂಬ ಉದ್ದೇಶದಿಂದ ಮಾಡಿದೆಯೋ ನನಗೆ ಗೊತ್ತಿಲ್ಲ. 1 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಂಡನೆ ಮಾಡುವ ಅವಶ್ಯಕತೆ ಇರಲಿಲ್ಲವೆಂದು ನಾನು ಆವತ್ತೂ ಕೂಡ ಪ್ರಸ್ತಾಪ ಮಾಡಿದ್ದೆ. ಇವತ್ತೂ ಕೂಡ ಅದೇ ಮಾತನ್ನು ಹೇಳುತ್ತಿದ್ದೇನೆ. What are the resources? ಒಂದು ವೇಳೆ ಇವತ್ತು ನೀವು Finance Department ಮೇಲೆ ಒಂದು ವೇಳೆ Performance Budget Book ಕೊಟ್ಟಿದ್ದರೆ, I would have thrown more light on the situation of the financial condition in the State. ಆದರೆ, ನನಗೆ ಅದನ್ನು ಕೊಟ್ಟಿಲ್ಲ. This is the handicaped with which I am speaking. ಇವತ್ತಿಗೂ ಕೂಡ ಕೇಂದ್ರ ಸರ್ಕಾರದಿಂದ Centrally Sponsored Scheme, Central by Aided Schemes ಮತ್ತು ಬೇರೆ ಬೇರೆ ಆದಾಯಗಳಿಂದ ಬರುವಹಣ ಸೇರಿಸಿದರೆ ನಾವು ಒಂದು ಲಕ್ಷ ಕೋಟಿ ರೂಪಾಯಿಗಳಿಗೂ ತಲುಪುವುದಿಲ್ಲ. ಸಾಲ ಮಾಡಿ ಜನರಿಗೆ ತೋರಿಸುವುದಕ್ಕೆ we are growing this side ಎಂದು ಹೇಳಿ, ಜನರಿಗೆ ಮರೆಮಾಚಲಿಕ್ಕೆ ಮಾತ್ರ ನೀವು ಒಂದು ಲಕ್ಷ ಕೋಟಿ ರೂಪಾಯಿಗಳೆಂದು ಬಜೆಟ್ ಮಂಡಿಸಿದ್ದೀರಿ ವಿನಃ ಅದರಿಂದ ನಮ್ಮ ರಾಜ್ಯಕ್ಕೆ ಯಾವುದೂ ಲಾಭವಾಗುವುದಿಲ್ಲ and it is not good for the health of our State. I think it would have taken another 2-3 years for us to reach that level. ಪರವಾಗಿಲ್ಲ ಏನೋ ಉದ್ದೇಶದಿಂದ ಏನೋ ಒಂದು ನೀವು ಮಾಡಿದ್ದೀರಿ. ಸರಿಯಾಗಿ ಅದನ್ನು ನಿಭಾಯಿಸುತ್ತಿರಿ ಎಂದು ಅಪೇಕ್ಷೆಪಡುತ್ತೇನೆ. ಏಕೆಂದರೆ, Finance Department ಮೇಲೆ ಇವತ್ತು ನಾನು ಜಾಸ್ತಿ ಏಕೆ ಮಾತನಾಡುವುದಕ್ಕೆ ಹೋಗುವುದಿಲ್ಲವೆಂದರೆ, ಮಾನ್ಯ ಪ್ರತಿಪಕ್ಷದ ನಾಯಕರಿಗೆ ನಾವು ಇದರ ಬಗ್ಗೆ sum up ಮಾಡಿದಾಗ ತಾವು ಇದರ ಬಗ್ಗೆ ಸುದೀರ್ಘವಾಗಿ ಮಾತನಾಡುತ್ತೇನೆಂದು ನನಗೆ ಹೇಳಿದ್ದಾರೆ. ಅದಕ್ಕೋಸ್ಕರ ನಾನು ಕೆಲವು ಇಲಾಖೆಗಳಲ್ಲಿ ನಡೆಯತಕ್ಕಂಥದ್ದರ ಬಗ್ಗೆ ಮತ್ತು ಆ ಇಲಾಖೆಗಳಿಗೆ ನನ್ನ ಸಲಹೆ ಇದೆ. ಏಕೆಂದರೆ, I always believe ಏನೆಂದರೆ ಸುಮ್ಮನೆ ಟೀಕೆ ಮಾಡುವುದು, ಏನೂ ಆಗದಿರುವುದನ್ನು ಹೇಳಿ, ಇವತ್ತು ನಾವು Opposition ನಲ್ಲಿದ್ದೇವೆಂದು ಬೇಜವಾಬ್ದಾರಿತನದಿಂದ ನಾನೆಂದೂ

ಮಾತನಾಡಿಲ್ಲ. Whatever I speak here today, has to be in the interest of the public and it should be based on facts ಮತ್ತು ಅದಕ್ಕೆ ನನ್ನ ಸಲಹೆ ಮತ್ತು ಅದಕ್ಕೆ ಏನು ಪರಿಹಾರವಿದೆ ಎನ್ನುವ ಆಧಾರದ ಮೇಲೆಯೇ ನಾನು ಯಾವತ್ತೂ ಮಾತನಾಡುತ್ತೇನೆ. If I state something is wrong, I always suggest a way out for it and what is the solution for it. ಅದು ಗೊತ್ತಿದ್ದರೆ ಮಾತ್ರ ನಾನು ಹೇಳುತ್ತೇನೆ. ಇಲ್ಲದಿದ್ದರೆ ಅದು ನನಗೆ ಗೊತ್ತಿಲ್ಲ, ದಯವಿಟ್ಟು ಇಲ್ಲಿರುವ seniors ನನಗೆ guide ಮಾಡಬೇಕೆಂದು ಹೇಳುತ್ತೇನೆ. 2011-12ನೇ ಸಾಲಿನಲ್ಲಿ Agriculture department ಬಗ್ಗೆ ಇವತ್ತು ನಾವು ಮೊದಲು ಮಾತನಾಡಬೇಕಾಗುತ್ತದೆ. ಏಕೆಂದರೆ, ಈ ರಾಜ್ಯ ಭೀಕರವಾದ ಬರಗಾಲವನ್ನು ಎದುರಿಸುತ್ತಿದೆ. ಬರಗಾಲ ಬರುತ್ತಿರುವುದು ಸತತವಾಗಿ ಇದು ಎರಡನೇ ವರ್ಷ, ಕಳೆದ ಸಾರಿ ನಮ್ಮ ರಾಜ್ಯದಲ್ಲಿ ಹೊಸ ಕೃಷಿ ಬಜೆಟ್ ಅನ್ನು ಮಂಡಿಸುತ್ತೇವೆಂದು ಮಾನ್ಯ ಯಡಿಯೂರಪ್ಪನವರು ಘೋಷಣೆ ಮಾಡಿದ್ದರು. ಅದನ್ನು ಘೋಷಣೆ ಮಾಡಿದ ಮೇಲೆ ಹೊಸ ಕಾರ್ಯಕ್ರಮವನ್ನೂ ಕೂಡ ಅಂದರೆ ಸುವರ್ಣ ಭೂಮಿ ಎನ್ನುವ ಕಾರ್ಯಕ್ರಮವನ್ನು ಜಾರಿಗೆ ತಂದರು. ಅದರಲ್ಲಿ 10 ಸಾವಿರ ರೂಪಾಯಿಗಳನ್ನು ಕೊಡುವುದು, ಮೊದಲನೇ ಕಂತಿನಲ್ಲಿ 5 ಸಾವಿರ ರೂಪಾಯಿಗಳೆಂದು ಎಲ್ಲಾ ರೈತರಿಗೆ ಕೊಡುತ್ತೇವೆಂದು ಹೇಳಿದ್ದರು. ಅದನ್ನು implement ಮಾಡುವ ಪ್ರಯತ್ನ ಮಾಡಿದ್ದರು, ಆದರೂ ಅದು complete ಆಗಿ implement ಆಗಲಿಲ್ಲ. ಈ ವರ್ಷ ಕೂಡ ಆ ಕೆಲಸ ನಡೆಯುತ್ತಿದೆ. ಅದಕ್ಕೆ ನಾನೇನೂ ಟೀಕೆ ಮಾಡುವುದಿಲ್ಲ. ಏಕೆಂದರೆ, ನಾವು ರೈತರಿಗೆ ಏನೂ ಕೊಟ್ಟರೂ ಕಡಿಮೆಯೇ. ರಾಜ್ಯದಲ್ಲಿ ಎಲ್ಲರಿಗಿಂತ unprivileged class ಯಾವುದೆಂದರೆ, ಅದು ಯಾವುದೂ caste, creed ಅಲ್ಲ, it is farmer class. ಅವರು ಬೆಳೆದಿರುವ ಬೆಳೆಗೆ ನಾವು ವೈಜ್ಞಾನಿಕ ಬೆಲೆ ಕೊಡುವುದಕ್ಕಾಗುವುದಿಲ್ಲ. ಸಕಾಲದಲ್ಲಿ ಗುಣಮಟ್ಟದ ಬೀಜವನ್ನು ಅವರಿಗೆ ಕೊಡುವುದಕ್ಕಾಗುವುದಿಲ್ಲ. ಅವರು ಸಂಪೂರ್ಣವಾಗಿ ಪರಿಸರದ ಮೇಲೆ ಅವಲಂಬನೆಯಾಗಿದ್ದಾರೆ. ಏಕೆಂದರೆ, ಮಳೆ ಸಮಯಕ್ಕೆ ಸರಿಯಾಗಿ ಬರಲಿಲ್ಲವೆಂದರೆ, ಅದಕ್ಕೆ ಮೊದಲು ರೈತ ತುತ್ತಾಗುತ್ತಾನೆ. ಅದಕ್ಕಾಗಿ ನಾವು ರೈತರಿಗೆ ಎಷ್ಟು ಸಹಾಯ ಮಾಡಿದರೂ ಅದು ಕಡಿಮೆಯೇ. ನಾವು ಕೃಷಿ ಬಜೆಟ್ ಮಂಡಿಸಿ, ಕೃಷಿಕರಿಗೆ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡುತ್ತೇವೆಂದು ಸರ್ಕಾರ ಮುಂದೆ ಬಂದಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಅದು ಕಾರ್ಯರೂಪಕ್ಕೆ ಬರದಿರುವುದು ಬಹಳ ನೋವಾಗುತ್ತದೆ. ಏಕೆಂದರೆ, 2011-12ನೇ ಸಾಲಿಗೆ ಬಜೆಟ್‌ನ Plan outlay ಯಲ್ಲಿ 2,627 ಕೋಟಿ

ರುಪಾಯಿಗಳನ್ನು ನೀವು ನಿಗದಿಪಡಿಸಿದ್ದೀರಿ. This was your outlay. ಆದರೆ, ನೀವು 2011–12ನೇ ಸಾಲಿನಲ್ಲಿ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ನೀವು ಖರ್ಚು ಮಾಡಿರುವುದು 1829 ಕೋಟಿ ರೂಪಾಯಿಗಳು ಅಂದರೆ 800 ಕೋಟಿ ರೂಪಾಯಿಗಳನ್ನು ಕಳೆದ ವರ್ಷ Agriculture department ನಲ್ಲಿ spend ಮಾಡಲಿಲ್ಲ. That to when, ಯಾವಾಗ? ಈ ರಾಜ್ಯ ಭೀಕರ ಬರಗಾಲದಲ್ಲಿದ್ದಾಗ Agriculture Department ಗೆ allocate ಆಗಿರುವಂಥ 800 ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡದಿದ್ದರೆ, then what is the committment? is this is the way you are committed to the cause of the agriculture in the State? We have to question the intention of the Government. ಏಕೆಂದರೆ, I am talking on the basis of the facts given to me by the Government itself. ಅದಕ್ಕೆ ಸರ್ಕಾರದ ಬದ್ಧತೆ ಏನಿದೆ ಎಂಬುದನ್ನು ತೋರಿಸುತ್ತದೆ. ಅದಕ್ಕಾಗಿ ಬರಗಾಲ ಎದುರಿಸುತ್ತಿರುವ ಸಂದರ್ಭದಲ್ಲಿ ಕಳೆದ ವರ್ಷ ಸರ್ಕಾರ 800 ಕೋಟಿ ರೂಪಾಯಿಗಳನ್ನು Agriculture Department ನಲ್ಲಿ ಖರ್ಚು ಮಾಡದೇ ಇರುವುದು ಖಂಡಿತವಾಗಿ ವಿಷಾದನೀಯ. ಏಕೆ ಈ ಹಣ ಖರ್ಚು ಮಾಡಲಿಲ್ಲವೆಂದು ಸರ್ಕಾರ ಉತ್ತರ ಕೊಡಬೇಕಾಗುತ್ತದೆ, ಸಂಬಂಧಪಟ್ಟ ಸಚಿವರೂ ಉತ್ತರ ಕೊಡಬೇಕಾಗುತ್ತದೆ. ಬೇರೆ ಇಲಾಖೆಯವರು ಸಾವಿರ ಕೊಟಿ ರೂಪಾಯಿಗಳನ್ನು ಹೆಚ್ಚು ಖರ್ಚು ಮಾಡುತ್ತಾರೆ. ಆದರೆ, ನಿಮಗೆ ಕೊಟ್ಟಿರುವ ಹಣವನ್ನು ನೀವು ಖರ್ಚು ಮಾಡುವುದಿಲ್ಲ. ಹೀಗಾದರೆ ಹೇಗೆ ಇವತ್ತು ರಾಜ್ಯ ಬರಗಾಲವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ನಾನು ಬರದ ಬಗ್ಗೆ ಮಾತನಾಡುವಾಗ ಒಂದು ಸಲಹೆ ಕೊಟ್ಟಿದ್ದೆ. ಏನೆಂದರೆ, ನಮ್ಮ ರಾಜ್ಯದ 70% ರೈತರು rain-fed area ಏನಿದೆ, 190 ಲಕ್ಷ ಭೌಗೋಳಿಕ ವಿಸ್ತರಣೆ ಏನಿದೆ, ಅದರಲ್ಲಿ 70% agriculturists are dependant on rain ಅಂದರೆ, ಒಣ ಬೇಸಾಯದ ಮೇಲೆ 70% ರೈತರು depend ಆಗಿದ್ದಾಗ, ಪದೇ ಪದೇ ಈ ಭಾಗದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಕೂಡ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಸತತವಾಗಿ ನಾವು ಬರಗಾಲವನ್ನು ಎದುರಿಸುತ್ತಿದ್ದೇವೆ. ಕ್ರಮೇಣವಾಗಿ ಈ ಸರ್ಕಾರ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಯಾವುದೇ ಸರ್ಕಾರವಿದ್ದಾಗ ನಾವು Long Term Plan ಮಾಡಬೇಕು ಎಂದು ಈ ಸದನದಲ್ಲಿ ನಾನು 2004ರಿಂದಲೂ ಹೇಳುತ್ತಾ ಬಂದಿದ್ದೇನೆ. What is the Long Term Plan? You should do some drought proofing it is possible. ನೀವು ಮಾಡಿರುವ ನಿದರ್ಶನಗಳಿದ್ದರೆ, ಅಲ್ಲಿ experiment ಮಾಡಿರುವುದು ಇದೆ, ಅದನ್ನು ನೀವು ಅನುಸರಿಸಿ,

ಅದನ್ನು ರಾಜ್ಯಕ್ಕೆ ವಿಸ್ತರಣೆ ಮಾಡಿ. ದೊಡ್ಡ ಪ್ರಮಾಣದಲ್ಲಿ ಹಣದ ಅವಶ್ಯಕತೆ ಅದಕ್ಕಿಲ್ಲ. ಎಲ್ಲೆಲ್ಲಿ ನಮಗೆ ನೀರಾವರಿ ದೊಡ್ಡ ಪ್ರಮಾಣದಲ್ಲಿ ಮಾಡಲಿಕ್ಕೆ ಸಾಧ್ಯವಿದೆ ಅದನ್ನು ಮಾಡಬೇಕು. ಎರಡನೆಯದಾಗಿ, ಸಣ್ಣ ಪುಟ್ಟ ಟ್ಯಾಂಕ್ ಮೂಲಕ ನೀರಾವರಿ ಮಾಡಲಿಕ್ಕೆ ಸಾಧ್ಯವಿದೆ ಎಂದರೆ ಅದನ್ನು ಮಾಡಬೇಕು. ಅದಾದ ಮೇಲೆ, ಸಂಪೂರ್ಣವಾಗಿ ಮಳೆ ಮೇಲೆ ಅವಲಂಬಿತವಾಗಿರುವ ಪ್ರದೇಶದಲ್ಲಿ ಪದೇ ಪದೇ ಬರಗಾಲ ಬರುತ್ತಿರುವ ಪ್ರದೇಶದಲ್ಲಿ, we have to do drought proofing and it is being done. ನಾನು ಮೊನ್ನೆ ಹೇಳಿದ್ದೆ ಏನೆಂದರೆ ಗದಗ್‌ನಲ್ಲಿ ಕೃಷಿ ವಿಜ್ಞಾನ ಕೇಂದ್ರದವರು 7 ವರ್ಷಗಳಿಂದ experiment ಮಾಡುತ್ತಿದ್ದಾರೆ. ನಾನು ಅದನ್ನು ನೋಡಲಿಕ್ಕೆ ಹೋಗಿದ್ದೆ. ಅಲ್ಲಿ ಏನು ಮಾಡುತ್ತಿದ್ದಾರೆಂದರೆ, alternative land use ಅಂದರೆ agriculture ನಲ್ಲಿ ನಾವು ಸಂಪೂರ್ಣವಾಗಿ cereals or pulses or oilseed ಮೇಲೆಯೇ depend ಆಗುವುದಕ್ಕಾಗುವುದಿಲ್ಲ. We have to mix it with the horticulture ಅವರು ದೊಡ್ಡ ಪ್ರಮಾಣದಲ್ಲಿ ಮೂರು ಸಾವಿರ ಎಕರೆಯಲ್ಲಿ experiment ಮಾಡಿದ್ದಾರೆ ಅಲ್ಲಿ Alphonso ಎನ್ನುವ ಮಾವು ಅನ್ನು ಹಾಕಿದ್ದಾರೆ. ಆಮೇಲೆ ಹುಣಿಸೆ ಹಾಕಿದ್ದಾರೆ. ಇದು alternate cropping ಒಂದೊಂದು ಎಕರೆಯಲ್ಲಿ ಕನಿಷ್ಠವಾಗಿ ಮಳೆ ಬರಲಿ ಬರದೇ ಹೋಗಲಿ 3 ರಿಂದ 5 ಸಾವಿರ ರೂಪಾಯಿ ಆದಾಯ ಬರುವ ರೀತಿಯಲ್ಲಿ ಅವರು ಅದನ್ನು ಮಾಡಿದ್ದಾರೆ, ಇದನ್ನು ಇಡೀ ರಾಜ್ಯಕ್ಕೆ ನಾವು ಮಾಡಬಹುದು. ನಾವು concentrate ಆಗಿ ಒಂದು ಪ್ಲಾನ್ ಮಾಡಿ ಸರಿಯಾಗಿ ಮಾಡಿದರೆ ಇಡೀ ರಾಜ್ಯದಲ್ಲಿ ಮಾಡಬಹುದು. ಇದರ ಜವಾಬ್ದಾರಿ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಇದು Long Term Plan ಇರಬೇಕು. ಒಂದೇ ವರ್ಷದಲ್ಲಿ ನಾವು ಇದೆಲ್ಲಾ ಮಾಡುವುದಕ್ಕಾಗಲ್ಲ. It should be 10 year plan. ಹತ್ತು ವರ್ಷದಲ್ಲಿ ನಾವು ಇಷ್ಟು ಏರಿಯಾವನ್ನು drought proofing ಮಾಡುತ್ತೇವೆ ಎನ್ನುವ ಒಂದು ಪ್ಲಾನ್ ಸರ್ಕಾರಕ್ಕೆ ಇದೆಯೇ/ ಆ ಬದ್ಧತೆ ಸರ್ಕಾರಕ್ಕೆ ಇದೆಯೇ? ಆ ಚಿಂತನೆ ಸರ್ಕಾರಕ್ಕೆ ಇದೆಯೇ ಎನ್ನುವುದು ನನ್ನ ಪ್ರಶ್ನೆ. ಏಕೆಂದರೆ,ಇವತ್ತು ಮಳೆ ಹವಾಮಾನದ ವೈಪರೀತ್ಯದಿಂದ ಯಾವ ತಿಂಗಳಲ್ಲಿ ಬರುತ್ತದೆ ಎಂದು predict ಮಾಡುವುಧಕ್ಕಾಗಲ್ಲ. ನಾವು ನಿರ್ದಿಷ್ಟವಾದ ಬೆಳೆಗಳನ್ನು ಬೆಳೆಯಬೇಕಾದರೆ ಕೆಲವೊಮ್ಮೆ ಉದ್ದು ಮತ್ತು ಹೆಸರು ಬೆಳೆಯಬೇಕಾದರೆ ಜೂನ್ ನಲ್ಲಿ ಮಳೆ ಬಂದರೆ ಮಾತ್ರ ಇವುಗಳನ್ನು ಬೆಳಯುವುದಕ್ಕೆ ಸಾಧ್ಯವಾಗುತ್ತದೆ. ತೊಗರಿಯಾಗಲಿ, ಜೋಳವಾಗಲಿ, ಬೇರೆ ಬೇರೆ ಬೆಳೆ ಬೆಳೆಯಬೇಕಾದರೆ ಸಮಯಕ್ಕೆ ಸರಿಯಾಗಿ ಮಳೆ ಬಂದರೆ ಮಾತ್ರ ಸಾಧ್ಯ. ಆದರೆ, ನಾವು ಈ drought

proofing ಮಾಡಿದರೆ ಒಂದು ವರ್ಷದಲ್ಲಿ ನಮಗೆ ಯಾವಾಗಲಾದರೂ ಮಳೆ ಬಂದರೆ ರೈತರಿಗೆ ರಕ್ಷಣೆ ಕೊಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಉದ್ದೇಶದಿಂದ ನಾನು ಈ ಮಾತು ಹೇಳುತ್ತಿದ್ದೇನೆ. ನನ್ನ ಮಾತನ್ನು ಯಾರು ಎಷ್ಟರ ಮಟ್ಟಿಗೆ ಕೃಷಿ ಮಂತ್ರಿಗಳು ನೋಟ್ ಮಾಡಿಕೊಳ್ಳುತ್ತಾರೋ ನನಗೆ ಗೊತ್ತಿಲ್ಲ. ಆದರೆ, ಹೇಳುವುದು ನನ್ನ ಕರ್ತವ್ಯ ನಾನು ಅದನ್ನು ಮಾಡುತ್ತಿದ್ದೇನೆ. ಕೃಷಿ ಮಂತ್ರಿಗಳು ಇಲ್ಲೆಯೇ ಇದ್ದರೆ, ಆದರೆ ಅವರು ತಮ್ಮ ಸ್ಥಾನದಲ್ಲಿ ಇಲ್ಲ ಅವರೇನೂ ಬೇರೆ ಚಟುವಟಿಕೆಯಲ್ಲಿ ಸ್ವಲ್ಪ ಬಿಸಿಯಾಗಿದ್ದಾರೆ. ಅವರು ಕೇಳಲಿ ಬಿಡಲಿ ನಾನು ಅವರಿಗೆ ಏನು ಹೇಳುವುದಕ್ಕೆ ಸಾಧ್ಯವಿದೆ?

ಉಪಾಧ್ಯಕ್ಷರು: ಕೃಷಿ ಮಂತ್ರಿಗಳು ತಮ್ಮ ಸ್ಥಾನಕ್ಕೆ ಬರಬೇಕು

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಇಲ್ಲಿ ಏನಾಗಿದೆ ಎಂದರೆ, ಎಲ್ಲಾ Senior Ministers ಇದ್ದಾರೆ, ನಾವೆಲ್ಲ ಸಣ್ಣ ಹುಡುಗರು ಇದ್ದೇವೆ ನಾವು ಹೇಳಿದರೆ, ಇವರಿಗೆ ಏನು ಐಡಿಯಾ ಇರುತ್ತದೆ ಎಂದು ಅವರು ತಿಳಿದುಕೊಂಡು ಹೇಳುತ್ತಿರಬಹುದು. ಆದರೆ, we are doing our job. ನಾವು ನಮ್ಮ ಕರ್ತವ್ಯವನ್ನು ಮಾಡುತ್ತಿದ್ದೇವೆ. ಈ ರಾಜ್ಯದಲ್ಲಿ ರೈತನಿಗೆ ಇನ್ನೊಂದು ಮುಖ್ಯವಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಆಗಬೇಕಾದ ಕೆಲಸ ಎಂದರೆ, ಯಾವ ಪ್ರದೇಶದಲ್ಲಿ ನೀರಾವರಿಗೆ ಅವಕಾಶವಿಲ್ಲ. ಎಲ್ಲಿ ಸಂಪೂರ್ಣವಾಗಿ ಮಳೆ ಅವಲಂಬಿತವಾದ ಒಣ ಬೇಸಾಯ ಇದೆ, ಅಲ್ಲಿ ನಾವು ಏನು ಮಾಡಬೇಕು, ಅಲ್ಲಿ watershed activity ಯನ್ನು ಸಂಪೂರ್ಣವಾಗಿ ನಾವು ಮಾಡಬೇಕು. ನೀವು ಕೊಟ್ಟಿರುವ ಅಂಕಿ-ಅಂಶದ ಪ್ರಕಾರ ಈ ರಾಜ್ಯದಲ್ಲಿ ಸುಮಾರು 50 ಲಕ್ಷ ಹೆಕ್ಟೇರ್‌ಗೆ ಇನ್ನು ನಾವು treatment ಮಾಬೇಕಾಗಿದೆ. 50 ಲಕ್ಷ ಹೆಕ್ಟೇರ್ ಮಾಡಬೇಕೆಂದು ಒಂದು ಕಡೆ ಹೇಳಿದ್ದಾರೆ. ಅಂದರೆ, watershed coverage ಆಗಬೇಕಾದರೆ ಇನ್ನು 50 ಲಕ್ಷ ಹೆಕ್ಟೇರ್ ಆಗಬೇಕಾಗಿದೆ. 55 lakhs hectare, he is correcting me.

ಶ್ರೀ ಉಮೇಶ್ ವಿ. ಕತ್ತಿ: 75 ಲಕ್ಷ ಹೆಕ್ಟೇರ್. ಈ ಪಂಚವಾರ್ಷಿಕ ಯೋಜನೆಯಲ್ಲಿ 32½ ಲಕ್ಷ ತೆಗೆದುಕೊಂಡಿದ್ದೇವೆ. ಒಟ್ಟಾಗಿ 75 ಲಕ್ಷ ಹೆಕ್ಟೇರ್ treatment ಮಾಡಬೇಕಾಗಿದೆ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಎಲ್ಲಿ ನಮಗೆ ನೀರಾವರಿಗೆ ಅವಕಾಶ ಇಲ್ಲ, ಎಲ್ಲಿನಮ್ಮ ರೈತರಿಗೆ ನಮಗೆ ಬಿದ್ದಿರತಕ್ಕಂಥ ಮಳೆಯನ್ನು ಸಂಪೂರ್ಣವಾಗಿ utilize ಮಾಡಿ, ಅಂದರೆ, it is only possible through watershed activity ಸರಿಯಾಗಿ land levelling ಆಗಲಿ, check-bunds ಆಗಲಿ ಅಥವಾ ಕೃಷಿ ಹೊಂಡ ಆಗಲಿ ಅಥವಾ

bunding ಆಗಲಿ ಅಥವಾ counter bunding ಆಗಲಿ ಇದೆಲ್ಲಾ ಮಾಡಿದರೆ ಮಾತ್ರ ನಮಗೆ ಬಿದ್ದಿರತಕ್ಕಂಥ ಮಳೆಯಲ್ಲಿಯೇ ನಾವು ಉತ್ತಮವಾದ ಬೆಳೆ ಬೆಳೆಯಲಿಕ್ಕೆ ಸಾಧ್ಯವಿದೆ ಮತ್ತು ನಮ್ಮ ground water recharge ಮಾಡಲಿಕ್ಕೆ ಸಾಧ್ಯವಿದೆ. ಅದನ್ನಾದರೂ ನಾವು Warfooting ನಲ್ಲಿ ಮಾಡುತ್ತಿದ್ದೇವೆಯೆ ಎನ್ನುವುದು ನನ್ನ ಪ್ರಶ್ನೆ. Watershed Department is giving around Rs. 5,000/- per acre for the watershed activities. If I am wrong, you have to correct me because you have not given me the correct figures and I am telling whatever is based on facts given in this ವಾರ್ಷಿಕ ವರದಿಯಲ್ಲಿ ಏನು ಹೇಳಿದ್ದಾರೆ ಅದನ್ನು ನಾನು ಹೇಳುತ್ತಿದ್ದೇನೆ ಮತ್ತು ನಾನು ಕೆಲವು ಜನಗಳಿಂದ ತಿಳಿದುಕೊಂಡು ಹೇಳುತ್ತಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ: ರೂ. 15,000/– per hectare maximum, minimum Rs. 12,000/- per hectare. ಅದು area-wise vary ಆಗುತ್ತದೆ.

ಡಾ|| ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ನಾನೂ ಕೂಡ ರೂ. 5,000/– per acre ಎಂದು ಹೇಳಿದೆ. It amounts to same. ನೀವು ಹೆಕ್ಟೇರಿನಲ್ಲಿ ಹೇಳುತ್ತಿದ್ದೀರಿ ನಾನು ಎಕರೆಯಲ್ಲಿ ಹೇಳುತ್ತಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ: ರೂ. 15,000/– ತೆಗೆದುಕೊಂಡು ಲೆಕ್ಕ ಮಾಡಿ

ಡಾ|| ಶರಣ ಪ್ರಕಾಶ ರುದ್ರಪ್ಪ ಪಾಟೀಲ್: But, now as per the advice of the experts ಪ್ರತಿ ಎಕರೆಗೆ, not hectare at least Rs. 25,000/- spend ಮಾಡಿದರೆ ಮಾತ್ರ ನೀವು ಸಮರ್ಪಕವಾಗಿ ಮಾಡಲಿಕ್ಕೆ ಸಾಧ್ಯವಿದೆ ಎಂದು ನನಗೆ experts ಹೇಳಿದ್ದು. ಕೇಂದ್ರ ಸರ್ಕಾರ ಕೊಡುತ್ತದೆಯೋ ರಾಜ್ಯ ಸರ್ಕಾರ ಕೊಡುತ್ತದೆಯೋ ಅದನ್ನು ನೀವು ಡಿಸೈಡ್ ಮಾಡಬೇಕು. ಏಕೆಂದರೆ, ನೀವು ಕೃಷಿ ಇಲಾಖೆಯ ಜವಾಬ್ದಾರಿಯನ್ನು ಹೊತ್ತು ಕೊಂಡಿದ್ದೀರಿ. ನಾನು ಇವತ್ತೇ ಮಾಡಿ ಎಂದು ಹೇಳುತ್ತಿಲ್ಲ. I am not telling we should do it in one year. You make a plan. ನನಗೆ surprising ಏನು ಎಂದರೆ, ಈ ನಮ್ಮ ಕೃಷಿ ಇಲಾಖೆಯ ವಾರ್ಷಿಕ ವರದಿಯನ್ನು ನಾನು ಓದಿದೆ. They have only told ಏನೆಂದರೆ ನಮಗೆ 75 ಲಕ್ಷ ಹೆಕ್ಟೇರ್‌ಗೆ water treatment ಮಾಡಬೇಕು ಅದರೆ, 25–30 ಸಾವಿರ ಎಕರೆ ಮಾತ್ರ ಮಾಡಿದ್ದೇವೆ, ಇನ್ನು ಮಾಡುವುದಿದೆ. ಆದರೆ ನಾವು ಯಾವ ರೀತಿ ಮಾಡಬೇಕು? ಎಷ್ಟು ವರ್ಷದಲ್ಲಿ ಮಾಡಬೇಕು? ಅದಕ್ಕೆ ಎಷ್ಟು ಹಣ

ಬೇಕಾಗುತ್ತದೆ? ಅದಕ್ಕೆ ನಮ್ಮ ಏನು ಪ್ಲಾನ್ ಏನಿದೆ? There is no plan. ಈಗ ನಾವು ಯಾವುದೇ ಒಂದು ಇಲಾಖೆಯಲ್ಲಿ ಯಾವುದೇ ಒಂದು ಕೆಲಸವನ್ನು ಇಷ್ಟು ದಿನದಲ್ಲಿ ಮಾಡಬೇಕೆಂದರೆ, we should have a time-bound plan for that. ಈಗಲ್ಲ ನಿಮಗೆ ಐದು ವರ್ಷದಲ್ಲಿ ಮಾಡುವುದಕ್ಕೆ ಆಗುವುದಿಲ್ಲ ತಾನೆ, O.K. accepted, ನೀವು 20 years programme ಮಾಡಿ. 20 ವರ್ಷದಲ್ಲಿ ನಾನು ಸಂಪೂರ್ಣವಾಗಿ ಈ ರಾಜ್ಯದಲ್ಲಿ ಎಲ್ಲಾ ಕಡೆ watershed activities 100% cover ಮಾಡುವ ಹಾಗೆ ನಾನು ಪ್ರಯತ್ನ ಮಾಡುತ್ತೇನೆ. ಯಾಕೆಂದರೆ this is the need of the hour. Every year the rain fall is decreasing. ನಾನು ಇಸ್ರೇಲ್ ಗೆ ಹೋಗಿದ್ದೆ. ಅಲ್ಲಿ ಎಷ್ಟು ಕಡಿಮೆ ಮಳೆಯಾಗುತ್ತಿದೆ ಮತ್ತೆ ಅವರು ಯಾವ ರೀತಿ ಕೃಷಿ ಮಾಡುತ್ತಿದ್ದಾರೆಂದರೆ. . .

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಸದಸ್ಯರು ಹೇಳಿದ ಹಾಗೆ ಇದನ್ನು ಮಾಡಬೇಕಾದುದು ಸರ್ಕಾರದ ಜವಾಬ್ದಾರಿ. ಕೇಂದ್ರ ಸರ್ಕಾರ 90% ಅನುದಾನ ಕೊಡುತ್ತಿದೆ, ರಾಜ್ಯ ಸರ್ಕಾರ 10% ಕೊಡಲೇಬೇಕೆಂದು mandate ಇರುವುದರಿಂದ ನಾವು ಕೊಡುತ್ತಿದ್ದೇವೆ. ಬರುವ ಪಂಚವಾರ್ಷಿಕ ಯೋಜನೆಯಲ್ಲಿ 32½ ಸಾವಿರ ಹೆಕ್ಟೇರ್‌ಗೆ ಈಗಾಗಲೇ ನಾವು sanction ಕೊಟ್ಟು ಕೆಲಸ ಪ್ರಾರಂಭ ಮಾಡಿದ್ದೇವೆ. ಈ ವರ್ಷದಿಂದ ಪ್ರಾರಂಭವಾಗಿದೆ. ಬರುವ ಐದು ವರ್ಷಗಳಲ್ಲಿ 32½ ಸಾವಿರ ಹೆಕ್ಟೇರ್‌ಗೆ treatment ಅನ್ನು ಮಾಡುತ್ತೇವೆ. ಇದಲ್ಲದೆ ಕಳೆದ ಒಂದು ತಿಂಗಳ ಹಿಂದೆ ಮಾನ್ಯ ಜಯರಾಂ ರಮೇಶ್ ರವರು ಮಾನ್ಯ ಪಂಚಾಯತ್ ರಾಜ್ ಮಂತ್ರಿಗಳು ದೆಹಲಿಯಲ್ಲಿ ಒಂದು ಸಭೆಯನ್ನು ಕರೆದು ಬರುವ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣ ಪ್ರಮಾಣದ ರಾಜ್ಯದ ಎಲ್ಲಾ ಜಿಲ್ಲೆಯಲ್ಲಿ treatment ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೂ ಸಹ ಅನುಗುಣವಾಗಿ ಪ್ಲಾನ್ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದಕ್ಕೆ ಮಂಜೂರಾತಿ ಕೊಟ್ಟರೆ 100% within these 5 years we will treat all 75 lakhs hectares. ಈ ಪಮಚವಾರ್ಷಿಕ ಯೋಜನೆಯಲ್ಲಿ ಮಂಜೂರಾತಿ ಕೊಟ್ಟಿರುವುದು 32½ ಸಾವಿರ ಹೆಕ್ಟೇರ್, ಆದರೆ, ಕಳೆದ ಒಂದು ತಿಂಗಳ ಹಿಂದೆ ಏನು ಸಭೆ ನಡೆಯಿತು, ಆ ಸಭೆಯಲ್ಲಿ ಹೇಳಿದ್ದು ಇದೇ ಪಂಚವಾರ್ಷಿಕ ಯೋಜನೆಯಲ್ಲಿ 75 ಲಕ್ಷ ಹೆಕ್ಟೇರ್ ಗಳಿಗೆ treatment ಕೊಡಬೇಕೆಂದು ಹೇಳಿದಾಗ ನಾವು ಪ್ಲಾನ್ ಅನ್ನು ಮತ್ತು ನಮ್ಮ ಎಲ್ಲಾ ಬಜೆಟ್‌ನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ submit ಮಾಡಿದ್ದೇವೆ. ಅದಕ್ಕೆ ಮಂಜೂರಾತಿ ಸಿಕ್ಕರೆ ಬರುವ ಐದು ವರ್ಷಗಳಲ್ಲಿ ಇದು ಮಾಡುವುದಕ್ಕೆ ಸಾಧ್ಯವಿದೆ. ದುಡ್ಡಿಗೆ sanction ಕೊಟ್ಟರೆ ಮಾಡುವುದಕ್ಕೆ ಸಾಧ್ಯವಿದೆ,

ನಾವು ಮಾಡುತ್ತೇವೆ. ಅದರಲ್ಲೇನೂ ತೊಂದರೆಯಿಲ್ಲ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾಡುತ್ತೇವೆಂದರೆ ಅದಕ್ಕೆ ನಮ್ಮ ದನ್ಯವಾದಗಳು. ಕೇಂದ್ರ ಸರ್ಕಾರದಲ್ಲಿ ಯಾವುದಾದರೂ clearance ಸಿಕ್ಕಿಲ್ಲವೆಂದರೆ ಖಂಡಿತವಾಗಿ ನಾವು ನಮ್ಮ ನಾಯಕರಿಗೆ ಹೇಳಿ ನಮ್ಮ ಪ್ರಯತ್ನ ಮಾಡುತ್ತೇವೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದು ಬೇರೆ ವಿಷಯ ನಿಮ್ಮ ಪ್ರಯತ್ನ ನೀವು ಮಾಡಲೇಬೇಕು time bound ಆಗಿ ಅದನ್ನು ನೀವು ಮಾಡಬೇಕು. ರಾಜ್ಯದ ಹಾಗೂ ರೈತರ ಹಿತದೃಷ್ಟಿಯಿಂದ ನೀವು ಇದನ್ನು ಮಾಡಬೇಕು.

ಶ್ರೀ ಉಮೇಶ್ ವಿ. ಕತ್ತಿ: ವಿಶೇಷವಾಗಿ ಹೈದರಾಬಾದ್ ಕರ್ನಾಟಕದ ಹಿತ ದೃಷ್ಟಿಯಿಂದ ಮಾಡಬೇಕು.

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್: ಹೌದು, ಏಕೆಂದರೆ, ಹೈದರಾಬಾದ್ – ಕರ್ನಾಟಕಕ್ಕೆ ವಿಶೇಷವಾದ ಸ್ಥಾನಮಾನ ಕೂಡ ಸಿಗುವುದಿದೆ. because of the backwardness of that area. ಒಂದು ವೇಳೆ ಈ ಕಳಕಳಿ ನಮ್ಮ ಕೃಷಿ ಸಚಿವರು ಹಿಂದೆ ತೋರಿಸಿದ್ದರೆ ನನಗೆ ಬಹಳ ಖುಷಿಯಾಗುತ್ತಿತ್ತು. ಏಕೆಂದರೆ, ಕೇಂದ್ರ ಸರ್ಕಾರ 90% ಹಣವನ್ನು watershed activity ಕೊಡುವುದಕ್ಕೆ ಸಿದ್ಧವಿದೆ. ರಾಜ್ಯ ಸರ್ಕಾರ ಅದನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಿದೆ ಎಂದರೆ ನಾವು, we will play our part, we will definitely empower it. ನಮ್ಮ ರಾಜ್ಯದ ಹಿತದೃಷ್ಟಿಯಿಂದ ಏನೇನು ಮಾಡಬೇಕೋ ಅದನ್ನೆಲ್ಲಾ ನಾವು ಮಾಡುವುದಕ್ಕೆ ಸಿದ್ಧರಿದ್ದೇವೆ. ಆದರೆ, ಮಾನ್ಯ ಕೃಷಿ ಸಚಿವರಿಗೆ ನನ್ನದೊಂದು ಪ್ರಶ್ನೆ ಏನೆಂದರೆ, ಕೃಷಿ ಇಲಾಖೆಯಲ್ಲಿ ಎಷ್ಟು percent ಹುದ್ದೆಗಳು ಖಾಲಿ ಇವೆ ಎಂದು ನೋಡಿದೆ. ನನ್ನ ಹತ್ತಿರ ಇರುವ ವಾರ್ಷಿಕ ವರದಿಯಲ್ಲಿ ಈ ಮಾಹಿತಿ ತೋರಿಸುತ್ತೇನೆ. 45% of the posts are vacant ನಾನು ಯಾವ ಕ್ಯಾಟಗರಿ ಎಂದು ನೋಡಿದೆ. ಎಂದು A,B,C,D category ಎಂದು ಮಾಡಿದ್ದಾರೆ. 'B' category ಯಲ್ಲಿ Highest vacancies ಇವೆ and they are the most important people in the ground reality, ಈಗ ಅಲ್ಲಿ field ನಲ್ಲಿ ಹೋಗಬೇಕು. ಕೆಲಸ ಮಾಡಬೇಕಾದ Extension Officers 'B' category ಯವರು, ಆದರೆ, ಸುಮಾರು 45 ರಿಂದ 50% ಹುದ್ದೆಗಳು ಖಾಲಿ ಇದ್ದರೆ ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ? That is same in

watershed department also. ನಮ್ಮ ಸಚಿವರು ಅದರಲ್ಲಿ ಒಂದು ಗೊಂದಲ ಸೃಷ್ಟಿ ಮಾಡಿದ್ದಾರೆ. ಏನೆಂದರೆ, Agriculture ಮತ್ತು Watershed Department ಅನ್ನು merge ಮಾಡುತ್ತೇನೆಂದು ಹೇಳಿಕೆ ಕೊಟ್ಟರು. ಅವರು ಮಾಡಿದರೋ ಬಿಟ್ಟರೋ ನನಗಂತೂ ಗೊತ್ತಾಗಲಿಲ್ಲ. ಅವರು ಏಕೆ ಮಾಡಲಿಲ್ಲವೆಂತಲೂ ಗೊತ್ತಾಗಲಿಲ್ಲ. ಏಕೆ ಹೇಳಿಕೆ ಕೊಟ್ಟಿರಿ, ಏಕೆ ಮಾಡಲಿಲ್ಲ ಎಂದು ನಾನು ನಿಮ್ಮನ್ನು ಕೇಳುತ್ತಿಲ್ಲ. ಅದರಿಂದ ನಮಗಂತೂ ಏನೂ ಉಪಯೋಗವಾಗಲಿಲ್ಲ. ಸಚಿವರು ಏನೊಂದು ಕ್ರಾಂತಿಕಾರಿ ಬದಲಾವಣೆ ತರುತ್ತಿದ್ದಾರೆ ಇದರಿಂದ ನಮಗಂತೂ ಏನಾದರೂ ಉಪಯೋಗವಾಗಲೆಂದು ನಾವು ತಿಳಿದುಕೊಂಡೆವು. ಆದರೆ, ಇವತ್ತಿನ ದಿವಸ ನಾವು ನೋಡುತ್ತಿರುವ ಹಾಗೆ ಕೃಷಿ ಇಲಾಖೆಯಲ್ಲಿ ಯಾರೂ ಸಹ ಕೆಲಸ ಮಾಡುವುದಕ್ಕೆ ರೆಡಿ ಇಲ್ಲ. Everybody wants to run to the watershed Department ಅಲ್ಲಿ ಏಕೆ ಈ ರೀತಿಯಾಗುತ್ತಿದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಆದರೆ, ಇವತ್ತಿನ ದಿವಸ ಏನಾಗಿದೆ ಎಂದರೆ, ಆ ಇಲಾಖೆಯಲ್ಲಿ ಮತ್ತು ಈ ಇಲಾಖೆಯಲ್ಲಿಯೂ ಸಹ ಕೋರಿಕೆ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ವಾಟರ್ ಟ್ರೀಟ್‌ಮೆಂಟ್ ಬಗ್ಗೆ ಬಹಳ ಸವಿಸ್ತಾರವಾಗಿ ಚರ್ಚೆಯಾಗುತ್ತಿದೆ. ಮಾನ್ಯ ಕೃಷಿ ಸಚಿವರಲ್ಲಿ ಕೇಳುವುದೇನೆಂದರೆ ವಾಟರ್ ಟ್ರೀಟ್‌ಮೆಂಟ್ ಯಾವ ರೀತಿಯಾಗಿ ಮಾಡುತ್ತಿದ್ದಾರೆಂದು ತಾವು ಸ್ಪಾಟ್‌ಗೆ ಹೋಗಿ ನೋಡಿದ್ದೀರಾ? ವಾಟರ್ ಟ್ರೀಟ್‌ಮೆಂಟ್ ಮಾಡುವುದಕ್ಕೆ ಅಲ್ಲಿ ಟೆಕ್ನಿಕಲ್ ಹ್ಯಾಂಡ್ಸ್ ಯಾರಾದರೂ ಅಲ್ಲಿರುತ್ತಾರೆಯೇ? ಇವತ್ತಿನ ದಿವಸ ಏನಾಗಿದೆ ಎಂದರೆ, ಜೆಸಿಬಿ ಯಲ್ಲಿ ಒಂದು ಕಡೆಯಿಂದ ಮಣ್ಣನ್ನು ತೆಗೆದುಕೊಂಡು ಹೋಗುತ್ತಿದ್ದರೆ ಮತ್ತೆ ಹಿಂದಿನಿಂದ ಆತ ಮಣ್ಣು ಮುಚ್ಚಿಕೊಂಡು ಬರುತ್ತಾನೆ. ಈ ರೀತಿಯಾಗಿ ದೇಶದ ದುಡ್ಡು ಸುಮ್ಮನೆ ಹಾಳಾಗುತ್ತಿದೆ. ನೀರಿನ ಸಮಸ್ಯೆಯನ್ನು ಅರಿತು ವಾಟರ್ ಟ್ರೀಟ್‌ಮೆಂಟ್ ಮೂಲಕ ನೀರನ್ನು ಇಂಗಿಸುವ ಒಂದು ಪ್ರಾಮಾಣಿಕವಾದಂಥ ಪ್ರಯತ್ನ ಇದುವರೆಗೂ ಸಹ ನಡೆದಿಲ್ಲವೆಂದು ಘಂಟಾಘೋಷವಾಗಿ ನಾನು ಹೇಳುವುದಕ್ಕೆ ಬಯಸುತ್ತೇನೆ. ತಾವು ಬಂದರೆ ಅದನ್ನು ತೋರಿಸುತ್ತೇನೆ. ನಾವೆಲ್ಲಾ ಇಲ್ಲಿ ಕುಳಿತುಕೊಂಡು ಸುಮ್ಮನೆ ಭಾಷಣ ಮಾಡಿ ಮನೆಗೆ ಹೋಗುತ್ತೇವೆ. ಅಷ್ಟು ಮಾಡಿದೆವು. ಇಷ್ಟು ಮಾಡಿದೆವು ಎಂಬುದು ಕೇವಲ ಪುಸ್ತಕದಲ್ಲಿ ಮಾತ್ರ ಇರುತ್ತದೆ. ತಾವು ಬಂದರೆ ನೀರು ಎಲ್ಲಿ ನಿಂತಿದೆ ಎಂದು ತೋರಿಸುತ್ತೇವೆ. ವಾಟರ್ ಟ್ರೀಟ್‌ಮೆಂಟ್ ಅನ್ನು ನಿಜವಾಗಿ ಯಾವ ರೀತಿಯಾಗಿ ಮಾಡಬೇಕೆಂಬ ಬಗ್ಗೆ ಸದನದಲ್ಲಿ ಚರ್ಚೆ ಇಡಿ ಪ್ರಾಕ್ಟಿಕಲ್ ಆಗಿ ಗ್ರಾಸ್‌ರೂಟ್

ಲೆವೆಲ್‌ನಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ನಮ್ಮ ಅನುಭವದ ಕೆಲವು ಸಲಹೆಗಳನ್ನು ಕೊಡುತ್ತೇವೆ. ವಾಟರ್ ಟ್ರೀಟ್‌ಮೆಂಟ್ ಮಾಡಿದರೆ ಮಾತ್ರ ಅಂತರ್ಜಲ ಹೆಚ್ಚಾಗುತ್ತದೆ. ಇವತ್ತಿನದಿವಸ ಅಂತರ್ಜಲ ಬತ್ತಿ ಹೋಗಿದೆ. ಅಂತರ್ಜಲ ಬತ್ತಿ ಹೋದಂಥ ಕಾಲದಲ್ಲಿ ನೀರನ್ನು ತಡೆದಿಡುವುದಕ್ಕೆ ಏನೇನು ಮಾಡಬೇಕೆಂದು ಮತ್ತು ಯಾವ್ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಯೋಜನೆ ಮಾಡಬೇಕೆಂಬುದರ ಬಗ್ಗೆ ಆಲೋಚನೆ ಮಾಡಬೇಕು.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕರೆ, ಈ ಜಲಾನಯನ ಯೋಜನೆಯ ಬಗ್ಗೆ ಹೇಳುವುದಾದರೆ. ಆ ಭಾಗದಲ್ಲಿ ಬರುವಂಥ ಎಲ್ಲಾ ರೈತರನ್ನು ಒಟ್ಟುಗೂಡಿಸಿ ಈ ಜಮೀನನ್ನು ಸಮಾಂತರ ಮಾಡುವುದಾಗಲಿ, ಬಂಡ್ ಹಾಕುವುದರಲ್ಲಿ, ಚೆಕ್‌ಡ್ಯಾಂ ಕಟ್ಟುವುದಕ್ಕಾಗಲಿ ಆ ಭಾಗದ ರೈತರು ಸಭೆ ಮಾಡಿ ಇದರ ಬಗ್ಗೆ ಅಲ್ಲಿನ ರೈತರೆ ತೀರ್ಮಾನ ಮಾಡುತ್ತಾರೆ. ಆದ್ದರಿಂದ ಇದಕ್ಕೆ ಯಾವ ಟೆಕ್ನಿಕಲ್ ಪರ್ಸನ್ ಬೇಕಾಗಿಲ್ಲ. ಏಕೆಂದರೆ, ಆ ಭಾಗದಲ್ಲಿ ಅಲ್ಲಿನ ರೈತರು ಮೊದಲಿನಿಂದ ಇದ್ದು, ಎಲ್ಲೆಲ್ಲಿ ಟ್ರೀಟ್‌ಮೆಂಟ್ ಮಾಡಬೇಕೆಂದು ಮತ್ತು ಯಾವ ರೀತಿಯಾಗಿ ಬಂಡ್ ಹಾಕಬೇಕೆಂದು ಮತ್ತು ಯಾವ ರೀತಿಯಾಗಿ ಕೆರೆಕಟ್ಟೆಗಳನ್ನು ಕಟ್ಟಬೇಕೆಂದು ಹಾಗೂ ಇದರ ಜೊತೆಗೆ ಯಾವ್ಯಾವ ಗಿಡಗಳನ್ನು ನೆಡಬೇಕೆಂಬುದನ್ನು ಅವರು ತೀರ್ಮಾನ ಮಾಡುತ್ತಾರೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಯಾವ್ಯಾವ ಗ್ರಾಮಗಳಲ್ಲಿ ಏನಾಗುತ್ತಿದೆ ಎಂದು ಗೊತ್ತಿದೆ. ಆದ್ದರಿಂದ, ಇದರ ಬಗ್ಗೆ ಒಂದು ದಿವಸ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಮಾನ್ಯ ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಮಾತನಾಡಲಿ, ದಯವಿಟ್ಟು ಕುಳಿತುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಸಚಿವರು ಕಲ್ಪನಾ ಲೋಕದಲ್ಲಿದ್ದಾರೆ. ನನ್ನದೊಂದು ಸಲಹೆ ಏನೆಂದರೆ, ನೀವು ನಮ್ಮ ಜಿಲ್ಲೆಗಳಿಗೆ ಬಂದು ಅಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ ಎಂಬುದನ್ನು ನೋಡಿ. ಲ್ಯಾಂಡ್ ಲೆವೆಲ್ ಬಗ್ಗೆ ತಾವು ಹೇಳಿದ್ದೀರಿ. ಆದರೆ, ಲ್ಯಾಂಡ್ ಲೆವೆಲ್ ಆಗುತ್ತಿಲ್ಲ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ, ಇದು World Bank ಯೋಜನೆಯಾಗಿದೆ. ಮತ್ತೆ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ನಾವು

ಮಾಡಲೇಬೇಕಾಗುತ್ತದೆ. 15 ಸಾವಿರದ ಹೆಕ್ಟೇರ್ ಪ್ರದೇಶ ಕೊಟ್ಟಾಗ ನಾವು ಲ್ಯಾಂಡ್ ಲೆವೆಲ್ ಮತ್ತು ಮತ್ತೊಂದನ್ನು ಮಾಡುತ್ತೇವೆಂದು ಮಾಡುವುದಕ್ಕೆ ಅಗುವುದಿಲ್ಲ. ಇರುವ ಜಮೀನಿನಲ್ಲಿ ಬಂಡ್ ಹಾಕಿ ಮಳೆ ಬಂದಂಥ ಸಂದರ್ಭದಲ್ಲಿ ಲೆವೆಲ್ ಆಗುತ್ತದೆಂಬ ಒಂದು ಚಿಂತನೆ ಆಗಿದೆ. ಆ ಭಾಗದ ರೈತರೆಲ್ಲರೂ ಕುಳಿತು ಸಭೆ ಮಾಡಲಿ ಅವರು ಮಾಡುವಂಥ ಕಾರ್ಯಕ್ರಮಗಳಿಗೆ ಸರ್ಕಾರ ಅನುದಾನ ಕೊಡುತ್ತದೆ. ಮತ್ತೆ ಸರ್ಕಾರದ ಅಧಿಕಾರಿಗಳು ಅದಕ್ಕೆ ರೂಪುರೇಷೆಗಳನ್ನು ತಯಾರು ಮಾಡಿಕೊಡುತ್ತಾರೆ. ಇದು ಅಲ್ಲದೆ Google ನಿಂದ ಪೂರ್ಣ ಚಿತ್ರ ತೆಗೆದುಕೊಂಡು ಹಿಂದೆ ಹೇಗಿತ್ತು, ಟ್ರೀಟ್‌ಮೆಂಟ್ ಆದ ಮೇಲೆ ಏನಾಯಿತ್ತೆಂಬ ಎರಡು ಚಿತ್ರಗಳು ಇವೆ. ತಮಗೆ ಬೇಕಾದರೆ ಈ ಚಿತ್ರಗಳನ್ನು ಒದಗಿಸುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಏರಿಯಾದ ಚಿತ್ರದ ನಕಾಷೆಯನ್ನು ನಾನು ತರಿಸಿ ನೋಡಿದ್ದೇನೆ. ಆದರೆ, ಉದ್ಯೋಗಖಾತ್ರಿ ಯೋಜನೆ ಮತ್ತು ನಿಮ್ಮ ಯೋಜನೆಯನ್ನು ಕ್ಲಬ್ ಮಾಡಿ ಮಾಡಿದರೆ ಸಾಕಷ್ಟು ಕೆಲಸವನ್ನು ಮಾಡಬಹುದು.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ, ಉದ್ಯೋಗಖಾತ್ರಿ ಯೋಜನೆ ಪಂಚಾಯಿತಿ ವ್ಯಾಪ್ತಿಗೆ ಮಾತ್ರ ಸೀಮಿತವಾಗಿದೆ. ಅದು ಒಬ್ಬನಿಗೆ 100 ದಿವಸ ಕೂಲಿ ಕೊಡುವ ಕೆಲಸ ಆಗಿದೆ. ಆ 100 ದಿವಸದಲ್ಲಿ ಊರಿನಲ್ಲಿ ಚರಂಡಿ, ರಸ್ತೆ ಮಾಡುವುದಕ್ಕೆ ಆ ಹಣ ಖರ್ಚು ಮಾಡುತ್ತಾರೆ. ಆದ್ದರಿಂದ, ಅದನ್ನು ಇದಕ್ಕೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ನಾವು ಸಾಕಷ್ಟು ಪ್ರಯತ್ನ ಮಾಡಿದ್ದೇವೆ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್ ಗೌಡ: ಮಾನ್ಯ ಅಧ್ಯಕ್ಷರೆ, ಉದ್ಯೋಗಖಾತ್ರಿ ಯೋಜನೆಯ ಹಣ 100% ಜಮೀನಿಗೆ ಖರ್ಚಾಗುತ್ತದೆ.

ಅಧ್ಯಕ್ಷರು: ಮಾನ್ಯ ರುದ್ರೇಶ್ ಗೌಡರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಡಾ: ಹೆಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಉದ್ಯೋಗಖಾತ್ರಿ ಯೋಜನೆಯಲ್ಲಿ small and maginal farmers ಜಮೀನುಗಳನ್ನು ಹದಮಾಡಿ ಬದು ಹಾಕುವುದಕ್ಕೆ ಅವಕಾಶ ಇದೆ. ಉದ್ಯೋಗಖಾತ್ರಿ ಯೋಜನೆ ಕೇವಲ ಉದ್ಯೋಗ

ಕೊಡುವುದಲ್ಲದೆ. See, Agriculture is also a sector which comes under Panchayath Raj Institution. The State sector should hand it over to District Sector ಈ ರೀತಿಯಾದ ಮೇಲೆ ನಿಮ್ಮದು ಸಹ ಅಲ್ಲಿಗೆ ಬರುತ್ತದೆಯಲ್ಲವೆ?

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಡಾಕ್ಟರ್‌ರವರೆ, ನಿಮ್ಮ ತಾಲ್ಲೂಕಿಗೆ ಹೋಗೋಣ ಪಂಚಾಯತಿಯಲ್ಲಿ ಠರಾವು ಮಾಡಿಸಿ ಮಾಡಿ ನಾವು ನಿಮ್ಮ ಜೊತೆ ಬರುತ್ತೇವೆ.

(ಗೊಂದಲ)

ಅಧ್ಯಕ್ಷರು: ವಿಷಯಾಂತರ ಬೇಡ. ದಯಮಾಡಿ ತಾವು ಕುಳಿತುಕೊಳ್ಳಿ, ಈ ರೀತಿಯಾದರೆ ಅವರು ಹೇಗೆ ಮಾತನಾಡುವುದಕ್ಕೆ ಆಗುತ್ತದೆ?

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್ ಗೌಡ: ಆ ರೀತಿಯಾಗಿ ಮಾಡಬೇಕೆಂದು ಕೇಂದ್ರದ ಗೈಡ್‌ಲೈನ್ಸ್ ಬಹಳ ಕ್ಲಿಯರ್ ಆಗಿದೆ.

ಡಾ: ಹೆಚ್.ಸಿ. ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೆ, ಶಾಸಕರು, ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮಪಂಚಾಯತ್, ಎಲ್ಲರೂ ಮಾಡೋಣ. But the Government should know that NREGP is also a programme where you can take up the land leveling. ಆ ರೀತಿಯಾದ ಐಡಿಯಾಗಿ ಗೊತ್ತಿಲ್ಲದೆ ಇದ್ದರೆ ಯಾವ ರೀತಿಯಾಗಿ ಮಾಡುತ್ತೀರಿ? How are you going to build the nation?

ಅಧ್ಯಕ್ಷರು: ಮಾನ್ಯ ಸಚಿವರೆ, ತಾವು ರಿಪ್ಲೈ ಕೊಡುವಂಥ ಸಂದರ್ಭದಲ್ಲಿ ಉತ್ತರ ಹೇಳಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ನಾನಾದರೂ ಮಾತನಾಡುವುದಕ್ಕೆ ಎದ್ದು ನಿಂತುಕೊಂಡರೆ ಮಾನ್ಯ ಉಮೇಶ್ ವಿ. ಕತ್ತಿಯವರ ಪರವಾಗಿ ಮಾತನಾಡುತ್ತಾರೆಂಬ ಭಾವನೆ ಎಲ್ಲರಿಗೂ ಬರುತ್ತಿದೆ. ಇವತ್ತಿ ದಿವಸ ಉದ್ಯೋಗಖಾತ್ರಿ ಯೋಜನೆಗೆ ಗ್ರಾಮಪಂಚಾಯತಿಯವರೆ ಕ್ರಿಯಾ ಯೋಜನೆಯನ್ನು ಮಾಡುತ್ತಾರೆ. ಅಲ್ಲಿ ಏನಾಗುತ್ತದೆಂದು ನಮಗ್ಯಾರಿಗೂ ಸಹ ಇದುವರೆಗೂ ಗೊತ್ತಿಲ್ಲ. ನಾನು ಇದನ್ನು ಪ್ರತಿ

ವರ್ಷ ನೋಡುತ್ತಿದ್ದೇನೆ. ಅವರಿಗೆ ನೀವು ಹಣ ಕೊಡುತ್ತೀರಿ. ಅವರವರ ಸಭೆ ಮಾಡಿ ಕ್ರಿಯಾಸಯೋಜನೆಯನ್ನು ತಯಾರು ಮಾಡುತ್ತಾರೆ. ಅವರ್ಯಾರು ನಮ್ಮನ್ನು ಮಾತನಾಡಿಸುವುದಿಲ್ಲ. ನಾವು ಮಾತನಾಡಿಸುವುದಕ್ಕೆ ಹೋದರೆ ಈ ವಿಷಯವನ್ನು ಅವರು ನಮಗೆ ಹೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಆಯಿತು, ತಾವು ಕುಳಿತುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಮೇಶ್ ವಿ. ಕತ್ತಿಯವರೆ, ಮಾಡುವುದಕ್ಕೆ ಅವಕಾಶ ಇಲ್ಲವೆಂದು ಇಲ್ಲ. ಆದರೆ, ಅವರ ಮನವೊಲಿಸಿದರೆ ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ಅದನ್ನು ಮಾಡಬೇಕೆಂಬುದು ನನ್ನ ಸಲಹೆ ಆಗಿದೆ. ನನ್ನ ಸಲಹೆಯನ್ನು ಅವರು ತೆಗೆದುಕೊಳಲ್ಲಿ ಅಥವಾ ಬಿಡಲಿ ಅದನ್ನು ಅವರಿಗೆ ಬಿಡುತ್ತೇನೆ. ಮತ್ತೊಂದು ವಿಚಾರ ಏನೆಂದರೆ, ಮೊನ್ನೆದಿವಸ ಮಾನ್ಯ ಮುಖ್ಯ ಮಂತ್ರಿಗಳು ರೈತರ ಸಾಲ ಮನ್ನಾದ ಬಗ್ಗೆ ಘೋಷಣೆ ಮಾಡಿದರು. ಆದರೆ, ಘೋಷಣೆ ಮಾಡಿರುವುದರಲ್ಲಿ ಒಂದು ಸ್ಪಷ್ಟೀಕರಣ ಇಲ್ಲ. ಏನೆಂದರೆ, ನಾವು ಆಗಸ್ಟ್ ತಿಂಗಳಿಂದ ಜೂನ್ ತಿಂಗಳವರೆಗೆ ಸಾಲ ತೆಗೆದುಕೊಂಡು ಮರುಪಾವತಿ ಮಾಡದೆ ಇರುವವರಿಗೆ ಮಾತ್ರ ಮಾಡುತ್ತೇವೆಂದು ಹೇಳಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಕಳೆದ ಜೂನ್‌ನಿಂದ ಇಲ್ಲಿಯವರೆಗೆ ನಾವು ಬರಗಾಲದಲ್ಲಿದ್ದೇವೆ. ಸಾಲ ಮನ್ನಾ ವಿಷಯ ಒಂದು ಸಾಲಿನಲ್ಲಿ ಇರಬೇಕಾಗಿತ್ತು. ರಾಜ್ಯದಲ್ಲಿ ರೈತರು ಪಡೆದಿರುವ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದರೆ ಮುಗಿದು ಹೋಗುತ್ತಿತ್ತು. ಕೇಂದ್ರ ಸರ್ಕಾರ ಇಡೀ ದೇಶದಲ್ಲಿ 70 ಸಾವಿರ ಕೋಟಿ ರೂಪಾಯಿ ಸಾಲವನ್ನು ಮನ್ನಾ ಮಾಡಿತ್ತು ಮಾನ್ಯ ಉಮೇಶ್ ಕತ್ತಿಯವರಿಗೆ ಇದು ನೆನಪಿರಬೇಕೆಂದು ತಿಳಿದುಕೊಂಡಿದ್ದೇನೆ. ಆದ್ದರಿಂದ, ಇದು one line ಆಗಿರಬೇಕಿತ್ತು. ಅಂದರೆ, ಮುಖ್ಯ ಮಂತ್ರಿಗಳು ಏನು ಹೇಳಬೇಕಾಗಿತ್ತೆಂದರೆ ಒಂದು ವೇಳೆ Co operative Banks, Co-operative sector ನಲ್ಲಿ ಮಾಡಬೇಕೆಂದಿದ್ದರೆ ಯಾರ್ಯಾರು ರೈತರು Co-operative sector ನಲ್ಲಿ ಸಾಲ ತೆಗೆದುಕೊಂಡಿದ್ದರೆ ಅದರಲ್ಲಿ 25 ಸಾವಿರ ರೂಪಾಯಿಯವರೆಗೆ ಮನ್ನಾ ಮಾಡುತ್ತೇವೆಂದು ಹೇಳಿದ್ದರೆ We would have welcomed it. ಆದರೆ, ಇವತ್ತಿನ ದಿವಸ ಆ date ಈ date ಹಾಕಿ ಅದು ಯಾರಿಗೆ ಸಿಗುತ್ತದೆ, ಯಾರಿಗೆ ಸಿಗುವುದಿಲ್ಲ. ಸೃಷ್ಟಿ

ಮಾಡುವ ಉದ್ದೇಶದಿಂದ ಮಾಡಿದ್ದರೆ ಏಕೆಂದರೆ ನೀವು ರೈತರಿಗೆ ಸ್ಪಷ್ಟವಾಗಿ ತಿಳಿಸಬೇಕು. ಅಂದರೆ, ರೈತ copoperative sector ನಿಂದ ಸಾಲ ತೆಗೆದುಕೊಂಡಿರುವುದರಲ್ಲಿ 25 ಸಾವಿರ ರೂಪಾಯಿಯವರೆಗೆ ಮನ್ನಾ ಮಾಡುತ್ತೇವೆಂದು ಹೇಳಿದ್ದರೆ we wood have welcomed it. ಆದರೆ ಏತಕ್ಕಾಗಿ ಈ ರೀತಿಯಾದ ಗೊಂದಲವನ್ನು ಸೃಷ್ಟಿ ಮಾಡುತ್ತಿದ್ದಾರೆ ನನಗಂತೂ ಅರ್ಥವಾಗುತ್ತಿಲ್ಲ. ಇವರಿಗೆ ಯಾರು advise ಮಾಡುತ್ತಿದ್ದಾರೆಯೋ ಏತಕ್ಕೆ ಈ ರೀತಿಯಾಗಿ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಡುವಂಥ ಸಂದರ್ಭದಲ್ಲಿ ದಯವಿಟ್ಟು ಇದರ ಬಗ್ಗೆ ಕ್ಲಾರಿಪೈ ಮಾಡಬೇಕು.

ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು) : ಮಾನ್ಯ ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿರುವುದು ಕ್ಲಿಯರ್ ಆಗಿದೆ. ಅದೇನೆಂದರೆ, ದಿನಾಂಕ 1-08-2011 ರಿಂದ 31-06-2012 ರ ವರೆಗೆ ಕೃಷಿ ಸಾಲ ತೆಗೆದುಕೊಂಡಿದ್ದರೆ ಅದರಲ್ಲಿ 25 ಸಾವಿರ ರೂಪಾಯಿ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಈ ರೀತಿಯಾಗಿದ್ದರೆ ನನ್ನದೇನೂ ಅಭ್ಯಂತರ ಇಲ್ಲ. ಏಕೆಂದರೆ, ನಿನ್ನೆದಿವಸ ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ನಾನು enquiry ಮಾಡಿದೆ. ಇವತ್ತು ಡಿಸಿಸಿ ಬ್ಯಾಂಕ್ ನಲ್ಲಿ, ನಮ್ಮ ಜಿಲ್ಲೆಯಲ್ಲಿ ಎಲ್ಲಕ್ಕಿಂತ ಕಡಿಮೆ ಇದೆ 125 ಕೋಟಿ ರೂಪಾಯಿ ಸಾಲ ಕೊಟ್ಟಿದ್ದಾರೆ, ಆದರೆ ಸಾಲ ಕೊಡುವ ಅವಧಿ ಯಾವುದೆಂದರೆ, 1 ಏಪ್ರಿಲ್ 31ನೇ ಮಾರ್ಚಿಗೆಲ್ಲಾ ಕ್ಲಿಯರ್ ಮಾಡಬೇಕು. 1 ಏಪ್ರಿಲ್‌ಗೆ ಸಾಲ ಕೊಟ್ಟಿದ್ದಾರೆ. ಹಾಗಾದರೆ, ನೀವು ನಮ್ಮ ಹತ್ತಿರ ಜೂನ್‌ನಲ್ಲಿ ಸಾಲವನ್ನೇ ತೆಗೆದುಕೊಳ್ಳುವುದಿಲ್ಲ. ಆಗಸ್ಟ್‌ನಲ್ಲಿ ತೆಗೆದುಕೊಳ್ಳಬೇಕಾದರೆ, ಹಿಂಗಾರಿಗೆ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ.ಜೆ. ಪುಟ್ಟಸ್ವಾಮಿ: ಕ್ಲಿಯರ್ ಮಾಡಿರುವವರು ಪುನಃ ಸಾಲ ತೆಗೆದುಕೊಂಡಿರುತ್ತಾರಲ್ಲ. ಸಾಲ ತೆಗೆದುಕೊಂಡಿರುವವರು ಎಲಿಜಿಬಲ್ ಇರುತ್ತಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಎಲಿಜಿಬಲ್ ಇರುತ್ತಾರೆಂದರೆ ಅಭ್ಯಂಥರವಿಲ್ಲ. ಅದಕ್ಕೆ ನೀವು ಯಾರಾದರು ರೂ. 25,000 ಸಾಲವಿದೆ ಎಲ್ಲಾ ಮನ್ನ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಬೇಕಾಗಿತ್ತು. ನಾನು ಇವತ್ತು ವಿರೋಧ ಪಕ್ಷದಲ್ಲಿದ್ದೇನೆಂದು ಸರ್ಕಾರದ ಮೇಲೆ ಗೂಬೆ ಕೂರಿಸಲು ಹೇಳುತ್ತಿಲ್ಲ. ಇವತ್ತು

ಸರ್ಕಾರ ಸಾಲ ಮನ್ನಾ ಮಾಡಿದೆ ಎಂದರೆ, we welcome it. It is a positive step ಏಕೆಂದರೆ, ನೀವೊಂದು ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿದ್ದೀರಿ, ಆದರೆ ಒಂದೇ ಒಂದು ಸ್ಪಷ್ಟೀಕರಣವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಡಾಕ್ಟರೇ ಬರೀ ಪ್ರಶಂಸೆ ಮಾಡಿದರೆ ಸಾಲದು. ಕೇಂದ್ರದಲ್ಲಿ ತಮ್ಮ ಪ್ರಭಾವವಿದೆ, ಕೇಂದ್ರ ಸಚಿವರಾಗಿ ತಮ್ಮ ಗುರುಗಳಿದ್ದಾರೆ ಅವರಿಗೆ ಹೇಳಿ. ಇಡೀ ದೇಶದಲ್ಲಿ ಬರಗಾಲವಿದೆ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕವೂ ಕೇಂದ್ರ ಸರ್ಕಾರ ಸಾಲ ಮನ್ನಾ ಮಾಡುವುದನ್ನು ಘೋಷಣೆ ಮಾಡಿಸಿದರೆ ನಿಜವಾದ ಕಳಕಳಿ ಎನಿಸುತ್ತದೆ. ಇಲ್ಲದಿದ್ದರೆ, ನೀವು ಇಲ್ಲಿ ಹೇಳುವುದಕ್ಕೆ ಮಾತ್ರ ಮಾಡುವವರಲ್ಲವೆನ್ನುವ ಭಾವನೆ ಬರುತ್ತದೆ. ಹಾಗೆ ಬರಬಾರದು ಎಂದಿದ್ದಾರೆ, ದಯಮಾಡಿ, ಅಲ್ಲಿಂದಲೇ ಸಾಲ ಮನ್ನಾ ಮಾಡಿಸುವಂಥ ಆದೇಶ ಹೊರಡಿಸಿದರೆ, ರೈತರು ಅಪ್ಪನ ಕೈಯಲ್ಲಿ ತಿಂದರೇನು ಅಮ್ಮನ ಕೈಯಲ್ಲಿ ತಿಂದರೇನು? ಎಲ್ಲಾ ಕಡೆಯಿಂದ ರೈತರಿಗೆ ಲಾಭ, ಅನುಕೂಲವಾಗಬೇಕು. ಆ ಕಾಳಜಿಗೆ ನಿಜವಾದ ಅರ್ಥವಿರುತ್ತದೆ, ದಯಮಾಡಿ ಮಾಡಿಸಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ರವಿಯವರು ಹೇಳಿರುವುದನ್ನು ನಾವು ಅಕ್ಸೆಪ್ಟ್ ಮಾಡುತ್ತೇವೆ, ಖಂಡಿತವಾಗಿ ಪ್ರಯತ್ನ ಮಾಡೋಣ, ಹಿಂದಿನದನ್ನು ಒಂದೇ ಒಂದು ನೆನಪು ಮಾಡಿಸುತ್ತೇನೆ, ಹಿಂದೆ ಕೇಂದ್ರ ಸರ್ಕಾರ 70,000 ಕೋಟಿ ಸಾಲ ಮನ್ನಾ ಇಡೀ ದೇಶದಲ್ಲಿ ಮಾಡಿತ್ತು.

ಶ್ರೀ ಬಿ.ಜೆ. ಪುಟ್ಟಸ್ವಾಮಿ: ಕರ್ನಾಟಕ ರಾಜ್ಯಕ್ಕೆ 70,000 ಕೋಟಿ ಸಾಲ ಮನ್ನಾ ಮಾಡಿದರೆ? ಕರ್ನಾಟಕದ್ದು ಎಷ್ಟು? ಈಗ 19,000 ಕೋಟಿಯದು ಇದೆಯಲ್ಲಾ ಅದನ್ನು ಮಾಡಿಸಿ.

ಶ್ರೀ ತನ್ವೀರ್ ಸೇಠ್: ಈಗ ಬೇರೆಯದನ್ನು ಮಾತನಾಡುವುದು ಬೇಡ, ಕೇಂದ್ರ ಸರ್ಕಾರ ಮಾಡುವುದಕ್ಕೆ ಈಗ ರವಿಯವರು ಏನು ಹೇಳಿದ್ದಾರೆ. ನಮ್ಮ ಪ್ರಭಾವವೇನಿದೆಯೋ ಅದನ್ನು ಮಾಡೋಣ ಈ ರಾಜ್ಯದಲ್ಲಿ ನಮ್ಮ ಸರ್ಕಾರ ಏನು ಮಾಡಬೇಕೆನ್ನುವುದನ್ನು ತಿಳಿದುಕೊಳ್ಳೋಣ.

ಶ್ರೀ ಲಕ್ಷ್ಮಣ ಸವದಿ: 70,000 ಕೋಟಿ ಸಾಲ ಮನ್ನಾ ಮಾಡಿದ್ದರಲ್ಲಿ ಕರ್ನಾಟಕ ರಾಜ್ಯಕ್ಕೆ ಎಷ್ಟು ಬಂತು?

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅದನ್ನು ನೀವು ಹೇಳಬೇಕು, ಏಕೆಂದರೆ, ನಮಗೆ ಅಂಕಿ ಅಂಶಗಳನ್ನು ಸರಿಯಾಗಿ ಕೊಡುತ್ತಿಲ್ಲ.

ಶ್ರೀ ಲಕ್ಷ್ಮಣ ಸವದಿ: ಕರ್ನಾಟಕಕ್ಕೆ ಆ ದುಡ್ಡೇ ಬರಲಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಏತಕ್ಕೆ ಬರಲಿಲ್ಲ?

ಶ್ರೀ ಲಕ್ಷ್ಮಣ ಸವಧಿ: ಕಾರಣ, ಜಾಯಿಂಟ್ ಸರ್ಕಾರದಲ್ಲಿ ನಾವು ಸಾಲ ಮನ್ನಾ ಮಾಡಿದ್ದು ನಮಗೂ ವಾಪಸ್ ಕೊಡಿ ಎಂದರೆ ಮಾಡಲೇ ಇಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಮೊದಲೇ ಅಡ್ವಾನ್ಸ್ ಆಗಿ ಮಾಡಿದಿರಿ, ನಿಮಗೆ ತಾಳ್ಮೆ ಇರಲಿಲ್ಲ, ನೀವು ಸುಮ್ಮನಿದ್ದರೆ ನಮ್ಮ ರಾಜ್ಯಕ್ಕೆ ಹತ್ತಾರು ಕೋಟಿ ಬರುತ್ತಿತ್ತು., ಸಹಕಾರ ಸಚಿವರು ನಮ್ಮ ಮಿತ್ರರು.

ಶ್ರೀ ಸಿ.ಟಿ. ರವಿ: ಯು.ಪಿ.ಎ. ಛೇರ್ಮನ್ ಅವರು ರಾಜ್ಯಕ್ಕೆ ಭೇಟಿ ಕೊಟ್ಟಾಗ ಇಡೀ ರಾಜ್ಯದ ಬಗ್ಗೆ ಸಮೀಕ್ಷೆ ಮಾಡಿದ್ದರು> ಅಲ್ಲಿಂದ ಗುರುಗಳ ಆಶೀರ್ವಾದ ಪಡೆದು, ಬರ ಪ್ರದೇಶಕ್ಕೆ ಭೇಟಿ ಕೊಟ್ಟು, ಬರದ ಬವಣೆಯನ್ನು ಕಣ್ಣಾರೆ ಕಂಡು ಕಣ್ಣೀರು ಹಾಕಿದ ನಂತರ ಖಂಡಿತವಾಗಿ ಯು.ಪಿ.ಎ. ಛೇರ್ಮನ್ ಅವರು ಪ್ರಧಾನ ಮಂತ್ರಿಗಳಿಗೆ ಹೇಳಿ ಕರ್ನಾಟಕ ರಾಜ್ಯಕ್ಕೆ ಒಂದು special package ಕೊಡಿಸುತ್ತಾರೆಂದು ಕಾತುರದಿಂದ ಕಾಯುತ್ತಿದ್ದೇವೆ. ತಿಂಗಳು ಉರುಳಿ ಹೋದವು special package ಬರಲಿಲ್ಲ. ನಿಮ್ಮ ಎಲ್ಲರ ಗೌರವದ ಪ್ರಶ್ನೆ. ಅವರ ಕಣ್ಣೀರಿಗೆ ಬೆಲೆ ಬರಬೇಕು ಎಂದರೆ ನೀವೆಲ್ಲರೂ ಧರಣಿ ಕುಳಿತಾದರೂ ಸರಿ, ಹೆಚ್ಚು ಎಂದರೆ ನಿಮ್ಮನ್ನು ಕಾಂಗ್ರೆಸ್‌ನಿಂದ ಹೊರಗೆ ಹಾಕಬಹುದು. ಆದರೆ ರಾಜ್ಯದ ಜನರು ನಿಮ್ಮನ್ನು ಮೆಚ್ಚುತ್ತಾರೆ. ಧರಣಿ ಕುಳಿತಾದರೂ ಸರಿ ಕರ್ನಾಟಕ ರಾಜ್ಯಕ್ಕೆ special package ತನ್ನಿ ಆಗ ಖಂಡಿತಾ ಆ ಕಣ್ಣೀರಿಗೆ ಬೆಲೆ ಬರುತ್ತದೆ. ಇಲ್ಲದಿದ್ದರೆ ಕಣ್ಣೀರು ಒಂದೊಂದು ರೀತಿ ನಾಟಕದಲ್ಲಿ ಗ್ಲಿಸರಿನ್ ಹಾಕಿಕೊಂಡು ಕಣ್ಣೀರು ಹಾಕುತ್ತಾರಲ್ಲ. ಆ ರೀತಿ ಅನಿಸುತ್ತದೆ. ನಿಜವಾದ ಕಾಳಜಿ ಇರುವುದನ್ನು ನಾನು ಒಪ್ಪುತ್ತೇನೆ, ದಯಮಾಡಿ ಕಣ್ಣೀರಿಗೆ ಬೆಲೆ ಬರುವ ರೀತಿಯಲ್ಲಿ 25,000 ಕೋಟಿ ರೂಪಾಯಿಗಳ ಪ್ಯಾಕೇಜ್ ಕೊಡಿಸಿ ರಾಜ್ಯಕ್ಕೆ ಲಾಭವಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಬರ ಬಂದ ಹಿನ್ನೆಲೆಯಲ್ಲಿ ಇವತ್ತು ಸಾಲ ಮನ್ನಾ ಮಾಡಿದ್ದೀರಿ. ಇವತ್ತು ನಾವು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಮನ್ನಾ ಮಾಡಬೇಕಾದಾಗ, ಇದು ರಾಜ್ಯಕ್ಕೆ ಸೀಮಿತವಾದುದ್ದಲ್ಲ.

ದೇಶಕ್ಕೆ ಸೀಮಿತವಾದುದು. ಯಾವ ರಾಜ್ಯವೆನ್ನುವ ಪ್ರಶ್ನೆ ಅಲ್ಲ. ಇಡೀ ದೇಶಕ್ಕೆ ಮಾಡಬೇಕಾಗುತ್ತದೆ. ಯಾವ್ಯಾವ ಸಂದರ್ಭದಲ್ಲಿ ಭಾರತ ಸರ್ಕಾರ ಸಾಲ ಮನ್ನಾ ಮಾಡಿದೆ, ಅದು ಇಡೀ ದೇಶಕ್ಕೆ ಅನ್ವಯಿಸುತ್ತದೆ. ಹಾಗಾಗಿ ಈ ಸಾರಿ 8 ರಾಜ್ಯಗಳಲ್ಲಿ ಮಳೆ ಕೊರತೆಯಾಗಿ ಮುಂಗಾರು ಮಳೆ ವಿಫಲವಾದ ಹಿನ್ನೆಲೆಯಲ್ಲಿ ಕಾಲಪಕ್ವವಾಗಿದೆ ಅದನ್ನು ಅರ್ಜ್ ಮಾಡುವುದಕ್ಕೆ ಕಾಲಪಕ್ವವಾಗಿದೆ, ನಾವು ಇಲ್ಲವೆನ್ನುವ ಮಾತನ್ನು ಹೇಳುತ್ತಿಲ್ಲ. ಭಾರತ ಸರ್ಕಾರವೂ ಕೂಡ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲವನ್ನು ಇವತ್ತು ಮನ್ನಾ ಮಾಡುವುದಕ್ಕೆ ಮುಂದಾದಲ್ಲಿ ಒಳ್ಳೆಯದು ಅದಾಗಬೇಕೆನ್ನುವ ಒತ್ತಾಯವನ್ನು ನಾವು ಮಾಡುವಂತಹವರು. ಆ ಯಾವ ವಿಚಾರದಲ್ಲಿ ನಾವು ಹಿಂದೆ ಹೇಳುವ ಪ್ರಶ್ನೆ ಇಲ್ಲ. ಈಗ ನೀವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಈಗ ಸಾಲ ಮನ್ನಾ ಮಾಡಬೇಕಾದಾಗ, ಈಗಾಗಲೇ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ, ಇನ್ನು ಎರಡು ದಿವಸ ಸಮಯವಿದೆ, ಹಣಕಾಸು ಬಿಲ್ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಇನ್ನೂ ಹೆಚ್ಚು ಸೇರಿಸಿ ರೈತರಿಗೆ ಕೊಡುವ ರೀತಿಯಲ್ಲಿ ನಾವು ತೆರೆದ ಮನಸ್ಸಿನಿಂದ ಮಾತನಾಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆ, ಅದು ಒಳ್ಳೆಯದು ನಾವು ಸ್ವಾಗತ ಮಾಡುತ್ತೇವೆ. ಈ ಎಲ್ಲಾ ವಿದ್ಯಮಾನಗಳನ್ನು ಕೂಡ ನಾವು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡುವ ಕೆಲಸವನ್ನು ಮಾಡಿದರೆ ಖಂಡಿತವಾಗಿಯೂ ಕೂಡ ಕೇಂದ್ರ ಸರ್ಕಾರ ಸಹಾಯಕ್ಕೆ ಬರುತ್ತದೆ. ಏಕೆಂದರೆ, ಇವತ್ತು 8 ರಾಜ್ಯದಲ್ಲಿ ಇವತ್ತು ಮಳೆ ವಿಫಲವಾಗಿದೆ. ಈಗಾಗಲೇ ಅದನ್ನು ಪ್ರಧಾನ ಮಂತ್ರಿಗಳಿಗೂ ಕೂಡ ರಿವ್ಯೂ ಮಾಡಿ ಸೀರಿಯಸ್ ಅಗಿ ಇದನ್ನು ತೆಗೆದುಕೊಳ್ಳಬೇಕೆನ್ನುವ ಆದೇಶವನ್ನು ಕೂಡ ಪಾರ್ಲಿಮೆಂಟರಿ ಸೆಕ್ರೆಟೇರಿಯೇಟ್‌ನಲ್ಲಿ ಕೊಟ್ಟಿದ್ದಾರೆ. ನಮ್ಮ ರಾಜ್ಯದ ಬೆಳವಣಿಗೆಯ ಬಗ್ಗೆ ನೋಡಬೇಕು. ನೀವು ಇನ್ನೊಂದು ಮಾತನ್ನು ಹೇಳಿದಿರಿ, ಸೋನಿಯಾ ಗಾಂಧಿ, ಯು.ಪಿ.ಎ. ಛೇರ್ಮನ್ ಅವರು ಬಂದು ಹೋದರು. 25,000 ಕೋಟಿ ರೂಪಾಯಿಗಳನ್ನು ಕೊಡಿಸಬೇಕೆಂದು ಹೇಳಿದಿರಿ.

ಶ್ರೀ ಸಿ.ಟಿ. ರವಿ: ನೀವು ಕೊಡಿಸೇ ಕೊಡಿಸುತ್ತೀರೆನ್ನುವ ಬಲವಾದ ನಂಬಿಕೆ ಇದೆ. ನೀವು ಮರೆತುಬಿಟ್ಟಿದ್ದೀರೇನೋ ಎಂದು ನೆನಪು ಮಾಡಿದೆ.

ಶ್ರೀ ಟಿ.ಬಿ. ಜಯಚಂದ್ರ: ತಾವು ಮಂತ್ರಿಯಾಗಿದ್ದೀರಿ, ಭಾರತ ಸರ್ಕಾರ ಯಾವುದೇ ಕೆಲಸ ಮಾಡಬೇಕಾದರೂ ಒಂದು ನಿಯಮಾವಳಿಯ ಚೌಕಟ್ಟಿನಲ್ಲಿ

ಮಾಡುವುದು. 13ನೇ ಹಣಕಾಸಿನದಿರಬಹುದು ಅಥವಾ ಈ ರೀತಿಯಾದ ಬರ ಬಂದಂಥ ಸಂದರ್ಭದಲ್ಲಿ ಸ್ಟಡಿ ಟೀಂ ಕೊಡುವ ವರದಿಯನ್ನು ಆಧರಿಸಿಯೇ ಅವರು ವರದಿಯನ್ನು ಕೊಡುವುದು. ಆ ಪ್ರಕಾರವೇ ಇವತ್ತು 292 ಕೋಟಿ ಇಲ್ಲಿಯವರೆವಿಗೂ 471 ಕೋಟಿ ಬರುವುದು ಆ ಕಾರಣಕ್ಕೋಸ್ಕರವೇ. ನಾನು ಬೆಳಿಗ್ಗೆ ಮಾತನಾಡುವಾಗ ನೀವು ಹೊಸ ಕಾಲೇಜಗಳಿಗೆ ಹೆಚ್ಚು ಹಣ ತರಬೇಕೆಂದು ಹೇಳಿದೆ. ದಯಮಾಡಿ, ಭಾರತ ಸರ್ಕಾರದ ಯೋಜನೆಗಳೇನಿವೆ, ಅವನ್ನು ಅಧ್ಯಯನ ಮಾಡಿ, ಒಂದು ನಿಯಮಾವಳಿ ಪ್ರಕಾರ ಮಾಡುತ್ತಾರೆ. ಕೇಂದ್ರದಲ್ಲಿ ಯು.ಪಿ.ಎ. ಇರಲಿ ಎನ್‌ಡಿಎ ಇರಲಿ, ಎನ್.ಡಿ.ಎ. ಇದ್ದಂಥ ಸಂದರ್ಭದಲ್ಲೂ ಕೂಡ ನಾವು ಇಲ್ಲಿ ರಾಜ್ಯಭಾರ ಮಾಡುತ್ತಿದ್ದೇವು. ಆಗಲೂ ಕೂಡ same prcedure ಪಾಲಿಸಲಾಗುತ್ತಿತ್ತು. Government of India works under a system ಆ ಸಿಸ್ಟಂಗೆ ಅನುಗುಣವಾಗಿ ನಾವು ಹೋಗಬೇಕು. ನೀವು ಏನು ತಪ್ಪು ಮಾಡಿದ್ದೀರಿ? ಕೃಷಿ ಮಂತ್ರಿಗಳು ಇಲ್ಲಿದ್ದಾರೆ, ನಾನು ಹೇಳುತ್ತೇನೆ., ಸ್ಟಡಿ ಟೀಂ ಕಳುಹಿಸಬೇಕಾದಾಗ, ಸ್ಟಡಿ ಟೀಂ ಬಗ್ಗೆ ನೀವು memorandum ಕೊಡುವಾಗ ಕೇಂದ್ರಕ್ಕೆ ಒತ್ತಾಯ ಮಾಡಲಿಲ್ಲ. ಮಳೆ ಬಂದ ಮೇಲೆ ಟೀಂ ಅನ್ನು ಕರೆದುಕೊಂಡು ಬಂದಿರಿ, ಅಲ್ಲಿ ಲೋಪವಿದೆ. ಅದು ಏಕಾಯಿತು ಎಂದರೆ, ನಿಮ್ಮ ಆಂತರಿಕ ಒಳಜಗಳ ಪ್ರಮುಖವಾಯಿತೇ ವಿನಹಾ ರಾಜ್ಯದ ಹಿತ ನಿಮಗೆ ಬೇಕಾಗಿರಲಿಲ್ಲ. ನೀವು ಮಾಡಿದ ತಪ್ಪಿನಿಂದ ನಮಗೆ ಬರಬೇಕಾದ್ದು ತಪ್ಪುತ್ತಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಉಮೇಶ್ ವಿ. ಕತ್ತಿ: ಕೇಂದ್ರ ಸರ್ಕಾರ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವಾಗ ರಾಜ್ಯ ಸರ್ಕಾರ ಅದನ್ನು ಬಿಟ್ಟು ಕೆಲಸ ಮಾಡುವುದಕ್ಕಾಗುತ್ತದೆಯೇ? ನಾವು ಕೂಡ ಕಾನೂನಿನ ಚೌಕಟ್ಟಿನ ಅಡಿಯಲ್ಲೇ ಮಾಡುವುದು. ಕೇಂದ್ರ ಸರ್ಕಾರದ ತಂಡವನ್ನು ನಾವು ಕರೆದ್ದದ್ದಲ್ಲ.ಅವರು ಕಳುಹಿಸಿದ ಟೀಂ ಮಳೆಗಾಲದಲ್ಲಿ ಬಂದರೆ ನಾವೇನು ಮಾಡುವುದಕ್ಕಾಗುತ್ತದೆ?

ಶ್ರೀ ಟಿ.ಬಿ. ಜಯಚಂದ್ರ: ಇವರು ಏನು memorandum ಕೊಟ್ಟಿದ್ದರೆನ್ನುವುದನ್ನು ನಾವು ಕೂಡ ನೋಡಿದ್ದೇವೆ, ಒಂದು ಬಾಂಡ್ ಪೇಪರ್‌ನಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಯಾವುದೇ ಅಂಕಿಅಂಶಗಳಿಲ್ಲ. ನಿಮಗೆ ರಾಜ್ಯದ ಜನರ ಬಗ್ಗೆ ಎಷ್ಟು ಕಳಕಳಿ ಇದೆಯೋ ನಮ್ಮ ಕೇಂದ್ರ ಸರ್ಕಾರವಿದ್ದಂಥ ಸಂದರ್ಭದಲ್ಲಿ ನಮ್ಮ ಮಂತ್ರಿಗಳ ಹತ್ತಿರ ಅದನ್ನು ಪ್ರಸ್ತಾಪ ಮಾಡೇ ಮಾಡುತ್ತೇವೆ. ನೀವು ಕೊಟ್ಟಿರುವ memorandum ಅನ್ನು ತರಿಸಿ

ನೋಡಿ. is it in accordance with the law, is it in accordance with the procedure of the Government of India ಎಂದು ನೋಡಿ. ಮುಖ್ಯಮಂತ್ರಿಗಳು ರಾಜ್ಯಕ್ಕೆ ಪ್ರಧಾನಮಂತ್ರಿಗಳನ್ನು ನೋಡುವುದಕ್ಕೆ ಹೋದರು, ಆಗ ಒಂದು ಅರ್ಜಿ ಕೊಟ್ಟರು, ಅದು ಮನವಿಯಾಗುವುದಿಲ್ಲ.

ಶ್ರೀ ಸಿ.ಟಿ. ರವಿ: ವಸ್ತುಸ್ಥಿತಿ ನಿಮಗೆ ಚೆನ್ನಾಗಿ ಗೊತ್ತು. ನಿಮಗೆ ಎಲ್ಲವನ್ನೂ ಮನವರಿಕೆ ಮಾಡುವಂತಹ ಸಾಮರ್ಥ್ಯವಿದೆ.

ಶ್ರೀ. ಟಿ.ಬಿ. ಜಯಚಂದ್ರ: ಸಭೆ ಕರೆಯಿರಿ ಚರ್ಚೆ ಮಾಡಿ ಈ ಎಲ್ಲಾ ವಿಚಾರಗಳು ಗೊತ್ತಾಗುತ್ತದೆ ಎನ್ನುವ ಉದ್ದೇಶಕ್ಕೆ ಹೇಳುತ್ತಿದ್ದದ್ದು ನಾವೂ ಇವತ್ತು ಕೂಡ ತಯಾರಿದ್ದೇವೆ. ನಿಮ್ಮ ಬಜೆಟ್ 90,000 ಕೋಟಿ. 1 ಲಕ್ಷ ಕೋಟಿ ಎಂದರೆ, ಭಾರತ ಸರ್ಕಾರ ಕೊಟ್ಟಿರುವುದನ್ನು ಅಕೌಂಟ್‌ಗೆ ತೆಗೆದುಕೊಂಡಿದ್ದರಿಂದ 1 ಲಕ್ಷ ಕೋಟಿ ಆಯಿತು. ನೀವು ಕೂಡ ಹಿಂದೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯರಾಗಿದ್ದಿರಿ. ನಾವು ಕೊಟ್ಟ recommendation ಮೇಲೆ ಅಕೌಂಟ್‌ಗೆ ತೆಗೆದುಕೊಂಡಿದ್ದಕ್ಕೆ 1 ಲಕ್ಷದ ಕೋಟಿ ಮೇಲೆ ಹೋಯಿತು. ಹಾಗಾಗಿ ಎಲ್ಲಾ ವಿಧದಲ್ಲೂ 90,000 ಕೋಟಿ ಮೇಲೆ ಹೋಗುವುದಿಲ್ಲ. ದಯಮಾಡಿ ಅರ್ಥ ಮಾಡಿಕೊಳ್ಳಿ. ನೀವು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಸದಸ್ಯರಾಗಿ ಪಾರ್ಟಿಸಿಪೇಟ್ ಮಾಡಿ ಆಕ್ಟಿವ್ ಆಗಿದ್ದವರು, ಹಣ ಹೇಗೆ ತರುವುದೆನ್ನುವುದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) :- 66 ಸಾವಿರ ಕೋಟಿ ರೂಪಾಯಿಯ special package, ತಮ್ಮ ಪ್ರಭಾವ ಬಳಸಿ ಆ ರೀತಿ ಒಂದು special package ಕೊಡಿಸಿ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಭಾರತ ಸರ್ಕಾರಕ್ಕೆ ಯಾವ ಸಂದರ್ಭದಲ್ಲಿ ಮನವಿ ಮಾಡಬೇಕು ಎನ್ನುವುದೇ ತಮಗೆ ಗೊತ್ತಿಲ್ಲ. ಬರ ಇದ್ದಾಗ ರೆಸಾರ್ಟ್‌ನಲ್ಲಿ ಕಾಲ ಕಳೆದುಬಿಟ್ಟು, ಮಳೆ ಬಂದಾಗ ಮನವಿ ಕೊಟ್ಟರೆ ಏನು ಮಾಡುತ್ತಾರೆ ? That is not the timing at all.

(ಗೊಂದಲ)

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, I am not yielding to anybody.

ಅಧ್ಯಕ್ಷರು :- ತಾವು yield ಆಗಬೇಡಿ.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಾನು yield ಆಗುವುದಿಲ್ಲ. ಆದರೆ ಅವರು ಎದ್ದುನಿಂತು ಮಾತನಾಡಿದರೆ ಏನು ಹೇಳುವುದಕ್ಕಾಗುತ್ತದೆ? ಮಾನ್ಯ ರವಿಯವರು ಯಾವ ಉದ್ದೇಶದಿಂದ ಹೇಳಿದ್ದಾರೋ ಗೊತ್ತಿಲ್ಲ. ಆದರೆ ನಿಮಗೆ ನಾನು ಸ್ವಲ್ಪ ನೆನಪಿಸುತ್ತೇನೆ. ಮೂರು ವರ್ಷಗಳ ಹಿಂದೆ ಈ ರಾಜ್ಯದಲ್ಲಿ floods ಬಂದಾಗ, ಇವತ್ತು ಕೇಂದ್ರ ಸರ್ಕಾರ ನಿಮಗೆ 1,800 ಕೋಟಿ ರೂಪಾಯಿಗಳನ್ನು ಕೊಟ್ಟಿತು. ಈ ರಾಜ್ಯದ ಜನ 300 ಕೋಟಿ ರೂಪಾಯಿಗಳನ್ನು ದಾನವಾಗಿ ಕೊಟ್ಟರು. 2,100 ಕೋಟಿ ರೂಪಾಯಿಗಳಲ್ಲಿ ಈ ರಾಜ್ಯಾದ್ಯಂತ ಸುಮಾರು 50,000–60,000 ಮನೆ ಜನ ಕಟ್ಟಿಸಿದರು. ಸರ್ಕಾರವಲ್ಲ. ರಾಜ್ಯ ಸರ್ಕಾರದಿಂದ ನೀವು ಒಂದು ನಯಾಪೈಸೆ ಖರ್ಚು ಮಾಡಲಿಲ್ಲ. ಇದರಿಂದ ನಿಮಗೆ ಎಷ್ಟು ಕಳಕಳಿ ಇದೆ ಎಂದು ತೋರಿಸುತ್ತಿದ್ದೀರಿ. Flood ಬಂದಾಗ ರಾಜ್ಯ ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಿದ್ದೀರಿ ? If you prove me wrong, I will resign. ನೀವು ಒಂದು ನಯಾಪೈಸೆಯನ್ನು ಖರ್ಚು ಮಾಡಲಿಲ್ಲ. ಇವರು ಇವತ್ತು ಹೇಳುತ್ತಿದ್ದಾರೆ. I welcome this. ಏನೆಂದರೆ flood ಬಂದಾಗ ನೀವೂ ಏನೂ ಮಾಡಲಿಲ್ಲ. ಇವತ್ತು ಸಹಾಯ ಮಾಡಲಿಕ್ಕೆ ಹೊರಟಿದ್ದೀರಿ, we will welcome it. ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತೇವೆ. ಆದರೆ ಒಂದು ಮಾತನ್ನು ಮಾನ್ಯ ಕೃಷಿ ಸಚಿವರು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇವತ್ತು ಕೃಷಿ ಇಲಾಖೆಯಲ್ಲಿ ಮತ್ತು ಆರೋಗ್ಯ ಇಲಾಖೆಯಲ್ಲಿ ಬರತಕ್ಕಂಥ 75% ಹಣ Central Government Fund. ರಾಜ್ಯ ಸರ್ಕಾರದ್ದು ಎಷ್ಟಿದೆ ಎಂದು ತೆಗೆದು ನೋಡಿ. 3ನೇ ಒಂದು ಭಾಗ ಶೇಕಡ 65ರಷ್ಟು ಹಣ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ. ಇವತ್ತು ಆರೋಗ್ಯ ಇಲಾಖೆಯಲ್ಲಿ, NRHMನಲ್ಲಿ, ಎಲ್ಲಾ planned scheme, ಎಲ್ಲಾ activities ಕೇಂದ್ರ ಸರ್ಕಾರದ ಹಣದಿಂದ ಆಗುತ್ತದೆ. ಇವತ್ತು ರಾಜ್ಯ ಸರ್ಕಾರ ಏನು ಮಾಡುತ್ತಿದೆ ಎಂದರೆ, ಕೇವಲ ವೇತನಕ್ಕೆ ಹಣ ಕೊಡುತ್ತಿದೆ. only for salaries and maintenance and some 10% of the Planning Expenditure. ಉಳಿದಿದ್ದು ಕೇಂದ್ರ ಸರ್ಕಾರದ್ದೇ ಹಣ. ಇವೆಲ್ಲಾ ಮರೆತು ಹೋಗಬೇಡಿ

ಮಾನ್ಯ ರವಿಯವರೆ, ಇವೆಲ್ಲಾ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ಹಿತಕ್ಕಾಗಿ ಹೊರತು.

(ಗೊಂದಲ)

ಶ್ರೀ ಸಿ.ಟಿ. ರವಿ :- ಡಾಕ್ಟರೆ, ಕರ್ನಾಟಕ ಸರ್ಕಾರದಿಂದ ಒಂದೇ ಒಂದು ರೂಪಾಯಿಯೂ ತೆರಿಗೆ ಸಂಗ್ರಹ ಮಾಡುತ್ತಿಲ್ಲ. ಹಾಗೆ ಉದಾರವಾಗಿ ಕೊಡುತ್ತಿದ್ದಾರೆ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಹಕ್ಕಿದೆ, ಹಕ್ಕಿಲ್ಲ ಎಂದು ಹೇಳುವುದಿಲ್ಲ. ಹಕ್ಕಿದ್ದರೆ ನೀವು ಕೇಂದ್ರ ಸರ್ಕಾರದ ಹಣದಿಂದ deposit ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಸಿ.ಟಿ. ರವಿ :- ಯಾವುದೇ tax ಇಲ್ಲ, Income tax ಇಲ್ಲ, ಯಾವ ತೆರಿಗೆಯೂ ಇಲ್ಲದೇ ಉದಾರವಾಗಿಯೇ ಕೊಡುತ್ತಿದ್ದಾರೆ. ಅಲ್ಲವೇ ಡಾಕ್ಟರೇ ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ನಾನು ಯಾರಿಗೂ ಕೆರಳಿಸುವಂತೆ ಮಾಡುತ್ತಿಲ್ಲ. ಅವರು ಏನೋ ಹೇಳಿದರು ಅದಕ್ಕೆ ನಾನು ಹೇಳಿದೆ. ಇವತ್ತು ಇದು ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ, ನಿಜ. I am stating the facts.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ :- ಮಾನ್ಯ ರವಿಯವರೆ, ಉದಾಸಿಯವರೆ, ಉಮೇಶ್ ಕತ್ತಿಯವರೆ ಎಂದು ಹೇಳಿದರೆ ನಾವು ಏನು ಮಾಡಬೇಕು ?

(ಗೊಂದಲ)

ಅಧ್ಯಕ್ಷರು :- ಕುಳಿತುಕೊಳ್ಳಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :-ನೀವು ಹೇಳಿದ್ದೀರಿ, ನೀವು ಇಲಾಖೆಯವರು ಇದ್ದೀರಿ ಅದಕ್ಕೆ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ :- ಮಾನ್ಯ ಅಧ್ಯಕ್ಷರೆ, ದಯಮಾಡಿ ಅವರಿಗೆ ಈ ರೀತಿ

ಮಧ್ಯೆ ಮಧ್ಯೆ ನಮ್ಮ ಹೆಸರನ್ನು ಹೇಳಬೇಡಿ ಎಂದು ಹೇಳಿ.

(ಗೊಂದಲ)

ಅಧ್ಯಕ್ಷರು :- ಆನಂತರ ತಾವು note ಮಾಡಿಕೊಂಡು ಮಾತನಾಡಿ. ಈ ರೀತಿ ನೀವು ಮಧ್ಯೆ ಮಧ್ಯೆ ಎದ್ದು ನಿಂತರೆ ಹೇಗೆ ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಹೋಗಲಿ ಬಿಡಿ. ಆ ರೀತಿ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಏನೋ ನಮ್ಮ ಸ್ನೇಹಿತರು ಎಂದು ಹೆಸರು ಹೇಳಿದೆ. ಹೆಸರು ಹೇಳಬಾರದೆಂದರೆ ಹೇಳುವುದಿಲ್ಲ. ನನ್ನದೇನಿದೆ ?

ಅಧ್ಯಕ್ಷರು :- ಆಯಿತು, ತಾವು continue ಮಾಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ಕೇಂದ್ರ ಸರ್ಕಾರ ಹಣ ಕೊಡಲಿ, ನೀವೂ Agriculture Departmentಗೆ ಹೆಚ್ಚು ಹಣ ಕೊಡಿ. ನಿಮಗೆ ಯಾರಾದರೂ ಕೊಡಬೇಡಿ ಎಂದು ಹೇಳಿದ್ದಾರಾ ? ಕೇಂದ್ರ ಸರ್ಕಾರದ ಹಣದಿಂದ ನೀವು ಇಲಾಖೆ ನಡೆಸಿ ಎಂದು ನಾವು ಹೇಳುತ್ತಿದ್ದೇವಾ ? ನೀವೂ ಇಲಾಖೆಗೆ ಜಾಸ್ತಿ ಹಣ ಕೊಡಿ. ರಾಜ್ಯ ಸರ್ಕಾರದಿಂದ Agriculture Departmentಗೆ, Health Department ಗೆ ಹೆಚ್ಚು ಹಣ ಕೊಡಿ. ನಾವೇನೂ ಬೇಡ ಎಂದು ಹೇಳುತ್ತಿದ್ದೇವಾ? ಬೇರೆ ಬೇರೆ ಇಲಾಖೆಯ ಬಗ್ಗೆ ಮಾತನಾಡುವುದಿದೆ. ಕೃಷಿ ಇಲಾಖೆ ಬಗ್ಗೆ ನನ್ನದು ಒಂದು ಸಲಹೆ ಇದೆ. ನಾನು 2000ನೇ ಇಸವಿಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದೆ, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷನಾಗಿದ್ದೆ. ಆವತ್ತಿನಿಂದ ಪ್ರಯತ್ನ ಮಾಡುತ್ತಿದ್ದೇನೆ ಮಾನ್ಯ ಅಧ್ಯಕ್ಷರೆ, ಏನೆಂದರೆ ಕೃಷಿ ಚಟುವಟಿಕೆಗೆ ಕೃಷಿ ಪರಿಕರಗಳನ್ನು ಏನು ಉಪಯೋಗಿಸುತ್ತೇವೆ, ಅದಕ್ಕೆ ನಿಜವಾಗಿರತಕ್ಕಂಥ 50% ಸಬ್ಸಿಡಿಯನ್ನು ರೈತರಿಗೆ ಮುಟ್ಟಿಸಬೇಕೆಂದು ನಾನು ಶತ ಪ್ರಯತ್ನ ಮಾಡಿದೆ. ಆದರೆ ನನ್ನ ಕೈಯಲ್ಲಂತೂ ಆಗಲಿಲ್ಲ. ಏಕೆಂದರೆ, it is a fact. ಈ ಸದನದಲ್ಲಿರುವ ಶಾಸಕರನ್ನು ಕೇಳಿ. ಇವತ್ತು ಯಾವ ರೀತಿ rate fix ಆಗುತ್ತಿದೆ ? Agriculture implementsಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಹಣ ಕೊಡುತ್ತಿದೆ. ಆದರೆ ಆ ಹಣ ರೈತರಿಗೆ ಸಬ್ಸಿಡಿ ರೂಪದಲ್ಲಿ ಹೋಗುತ್ತಿಲ್ಲ. ಆ ಹಣ ಮಧ್ಯವರ್ತಿಗಳಿಗೆ ಹೋಗುತ್ತಿದೆ. ಮಧ್ಯವರ್ತಿಗಳಿಗೆ ಹಣ ಹೋಗುತ್ತಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. Agriculture Minister ರವರು ಇಲ್ಲೇ ಇದ್ದಾರೆ. ಇವತ್ತು ಟೆಂಡರ್

ಮಾಡುತ್ತಾರೆ, ಮಾರ್ಕೆಟ್‌ನಲ್ಲಿ 1,000 ರೂಪಾಯಿಗೆ best quality spray ಸಿಗುತ್ತಿದ್ದರೆ, ಇವತು 1500 ರೂಪಾಯಿಗೆ ಬೆಲೆ ನಿಗದಿ ಮಾಡುತ್ತಾರೆ. 50% ಸಬ್ಸಿಡಿ ಎಂದು ಹೇಳಿ 900 ರೂಪಾಯಿ ಕೊಡುತ್ತಾರೆ. ರೈತನಿಗೆ ಸಿಗಬೇಕಾಗಿರತಕ್ಕಂಥ 50% ಸಬ್ಸಿಡಿ ಸಿಗುವುದಿಲ್ಲ. 10–20% ಸಬ್ಸಿಡಿ ಸಿಗುತ್ತಿದೆ. ಇದಕ್ಕೆ ನೀವು ಕಡಿವಾಣ ಹಾಕಲು ಆಗುವುದಿಲ್ಲವೇ ? ನಮ್ಮ ರಾಜ್ಯದಲ್ಲಿ ಬೀಜ ನಿಗಮ ಇದೆ. ಇವತ್ತು ಅವರು ಏನು ಮಾಡುತ್ತಿದ್ದಾರೆಂದರೆ, ನಮ್ಮ system ಏನಿದೆ, ಟೆಂಡರ್ ಕರೆಯುತ್ತಾರೆ, ಟೆಂಡರ್ ಕರೆದಿರತಕ್ಕಂಥ ಬೀಜ supply ಮಾಡತಕ್ಕಂಥ ಸಂದರ್ಭದಲ್ಲಿ, ನೀವು ಟೆಂಡರ್ ಕರೆದಾಗ ನೀವು ಅವರ ಜೊತೆ compete ಮಾಡಿ, competitive rate ನಲ್ಲಿ ಒಂದು ವೇಳೆ ಅದಕ್ಕೆ price fix ಆದರೆ ರೈತರಿಗೆ ನಿಜವಾದ ಕಡಿಮೆ ದರದಲ್ಲಿ ಬೀಜ ಸಿಗುತ್ತದೆ. ನೀವು ಹೇಳುವುದಕ್ಕೆ 70% ಸಬ್ಸಿಡಿ. ಆದರೆ ಅದು ಮಾರ್ಕೆಟ್ price ನಲ್ಲಿ ಸಿಗುವಷ್ಟು ರೇಟ್‌ನಲ್ಲಿಯೇ ಸಿಗುತ್ತದೆ. ಇದರಿಂದ ಯಾವುದೂ ನಮ್ಮ ರೈತನಿಗೆ ಸಹಾಯವಾಗುತ್ತಿಲ್ಲ. ಸಬ್ಸಿಡಿ ಹಣ ಮಧ್ಯವರ್ತಿಗಳ ಪಾಲಾಗುತ್ತಿದೆ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಿ ಸರಿ ಮಾಡಬೇಕಾಗಿತ್ತು. ಮೂರು ವರ್ಷಗಳ ಹಿಂದೆ ಈ ಮಾತನ್ನು ಸದನದಲ್ಲಿ ಹೇಳಿದ್ದೇನೆ. ಪದೇ ಪದೇ ಈ ಮಾತನ್ನು ಹೇಳುತ್ತಿದ್ದೇನೆ. You have to bring in a system, where the subsidy which is earmarked by the Government, should go to the farmers. ಅದನ್ನು ಮಾಡುವುದಕ್ಕೆ ಆಗುವುದಿಲ್ಲವೇ, ಮಾನ್ಯ ಅಧ್ಯಕ್ಷರೆ ? ಅದನ್ನು ಮಾನ್ಯ ಸಚಿವರಿಗೆ ಸಲಹೆ ಮಾಡಿ. ಏಕೆಂದರೆ, ಅವರು ನಮ್ಮ ಮಾತನ್ನಂತೂ ಕೇಳುತ್ತಿಲ್ಲ. ಇದಕ್ಕೆ ಒಳ್ಳೆಯ system ಅನ್ನು ತಂದು, ಇವತ್ತು ರೈತರಿಗೆ ಸಿಗಬೇಕಾದಂತಹ ಸಹಾಯ ಧನ ಸಿಗುವಂತಹ ಪರಿಸ್ಥಿತಿ ಆಗದೇ ಹೋದರೆ, ನಾವು ಶಾಸಕರಾಗಿ ಏನು ಸಲಹೆ ಕೊಟ್ಟರೂ, ನಾವು ಏನೇ ಹೇಳಿದರೂ ನೀವು ಹೇಳುವುದನ್ನು ಹೇಳಿ, ನಾವು ಮಾಡುವುದನ್ನು ಮಾಡುತ್ತೇವೆ ಎಂದರೆ ಅದು ನಿಮಗೆ ಬಿಟ್ಟ ವಿಚಾರ. ಏಕೆಂದರೆ ರಾಜ್ಯದ ಜನ ಇದನ್ನು ಗಮನಿಸುತ್ತಿರುತ್ತಾರೆ. ನಮ್ಮ constituencyಗೆ sprinkler ಕೊಡಬೇಕಾದರೆ ಅದು ಸಚಿವರ ಅನುಮೋದನೆಗೆ ಹೋಗಬೇಕಾಗುತ್ತದೆ. ಅದು ಹೋಗಿ 3–4 ತಿಂಗಳಿಗೆ ನೀವು ಏನು ಅನುಮೋದನೆ ಮಾಡುತ್ತೀರೋ ಗೊತ್ತಿಲ್ಲ. ಅದು ಬರತಕ್ಕಂಥ ಸಮಯದಲ್ಲಿ ರೈತನಿಗೆ ಅದರ ಅವಶ್ಯಕತೆಯೇ ಇರುವುದಿಲ್ಲ. ದಯವಿಟ್ಟು ತಮ್ಮ process ಅನ್ನು ಸ್ವಲ್ಪ speed up ಮಾಡಿ. ಬಹಳ ವಿಳಂಬವಾಗುತ್ತಿದೆ. ಬರಗಾಲದ ಸಮಯವಿರುವುದರಿಂದ Agriculture Department ನವರು Long Term Plan ಮಾಡಬೇಕು. ನಮ್ಮ ರೈತರಿಗೆ ಶಾಶ್ವತವಾಗಿರತಕ್ಕಂಥ ಬರಗಾಲವನ್ನು ನಿಭಾಯಿಸುವ

ರೀತಿಯಲ್ಲಿ drought proofingಗೆ plan ಹಾಕಿಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಯಾವುದು ಮಳೆ ಅವಲಂಬಿತ ಪ್ರದೇಶವಾಗಿರುತ್ತದೆ ಅದನ್ನು ಕ್ರಮೇಣವಾಗಿ 5 ಅಥವಾ 10 ವರ್ಷದಲ್ಲಿ watershed complete activities ಅನ್ನು ಮಾಡಬೇಕು. ಅವರು 5 ವರ್ಷದಲ್ಲಿ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ನೋಡೋಣ. ನಾವು ಕೇಂದ್ರ ಸರ್ಕಾರಕ್ಕು ಕೂಡ ಮನವಿ ಮಾಡುತ್ತೇವೆ. ಆದರೆ ನೀವು ಒಂದು ಸರಿಯಾದಂತಹ concrete plan ಅನ್ನು submit ಮಾಡಿದರೆ we can recommend.

ಇನ್ನೊಂದು ಕೊನೆಯದಾಗಿ ಮಾನ್ಯ ಸಚಿವರು ಗಮನವಹಿಸಬೇಕು. ನೀವು Agriculture Department ನಲ್ಲಿ Research and Developmentಗೆ ಹೆಚ್ಚು ಹಣ ಕೊಡಬೇಕು. ರೈತನಿಗೆ ನಾವು ಯಾವ ರೀತಿ ಸಹಾಯ ಮಾಡಬಹುದೆಂದರೆ ಒಳ್ಳೆಯ ಗುಣಮಟ್ಟದ, ಒಳ್ಳೆಯ ತಳಿಯಿರುವ ಬೀಜ ಕೊಡಬೇಕು. ಜಾಸ್ತಿ yield ಬರುವ ಬೀಜಗಳನ್ನು ಸಂಶೋಧನೆ ಮಾಡಬೇಕು. ನೀವು ಸಮಯಕ್ಕೆ ಸರಿಯಾಗಿ ಗೊಬ್ಬರ supply ಮಾಡಿದರೆ ಸಾಕು. ಇವತ್ತು ಗೊಬ್ಬರದ ರೇಟ್ ಜಾಸ್ತಿಯಾಗಿದೆ, ಅದಕ್ಕೆ ನೀವು ಇವತ್ತು 1,000 ರೂಪಾಯಿ ಕೊಡುವಂಥದ್ದು ಆಗಿದೆ. ನೀವು ಕೇಂದ್ರ ಸರ್ಕಾರದ ಮೇಲೆ ಹೇಳುತ್ತೀರಿ. ಆದರೆ ರಾಜ್ಯ ಸರ್ಕಾರ ಏಕೆ ಸಬ್ಸಿಡಿ ಕೊಡಬಾರದು ? ನಿಮಗೆ ಯಾರಾದರೂ ನಿಬಂಧನೆ ಹಾಕಿದ್ದಾರೆಯೇ ?

ಶ್ರೀ ಉಮೇಶ್ ವಿ. ಕತ್ತಿ :- ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷದಲ್ಲಿ....

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ, ಗೊಬ್ಬರದ ರೇಟ್ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ಅದಕ್ಕೆ ತಾವು ಉತ್ತರ ಕೊಡುವಾಗ ಹೇಳಿ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ :- ಮೂರು ವರ್ಷದಲ್ಲಿ 370% ಬೆಲೆ ಹೆಚ್ಚಾಗಿದೆ. ಯಾವ ರೈತನಿಗೂ ಗಿಟ್ಟುವುದಿಲ್ಲ. ಗೊಬ್ಬರ ಹಾಕುವುದಕ್ಕಾಗುವುದಿಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ನಮ್ಮ ದೇಶದಲ್ಲೇ ಅಷ್ಟೇ ಅಲ್ಲ, it is depending on international prices also, ಅದು ನಿಮಗೆ ಗೊತ್ತಿದೆ ಮಾನ್ಯ ಸಚಿವರೆ, ಮತ್ತೆ ತಾವು ನನಗೇ ಈ ರೀತಿ ಹೇಳಿದರೆ ಹೇಗೆ ? ರಾಜ್ಯ ಸರ್ಕಾರಕ್ಕೆ ಗೊಬ್ಬರಕ್ಕೆ ಸಬ್ಸಿಡಿ ಕೊಡಬೇಡಿ ಎಂದು ಯಾರು ನಿಮಗೆ ಹೇಳಲಿಲ್ಲವಲ್ಲಾ. ನೀವು ಗೊಬ್ಬರಕ್ಕೆ 25% ಸಬ್ಸಿಡಿ

ಕೊಡಿ. ಇನ್ನೊಂದು ಬಹಳ ಆಶ್ಚರ್ಯಕರವಾದ ಸಂಗತಿ ಏನೆಂದರೆ ನನ್ನ ಮತ ಕ್ಷೇತ್ರದಲ್ಲಿ, ನಮ್ಮ ಜಿಲ್ಲೆಯಲ್ಲಿ ನಡೆದಿದ್ದು, I have to fight tooth and nail for this. ಏನೆಂದರೆ ಕೆಲವು Pesticide companies ಅಂದರೆ, they are not registered companies. Bio-fertilizer ಎನ್ನುವ ಸುಳ್ಳು ಹೆಸರಿನಲ್ಲಿ, ಅದು fake name. ಅವು ಯಾವುದೇ Companies Act ನಲ್ಲಿ register ಆಗಿಲ್ಲ. ಅಂತಹ ಕಂಪನಿಗಳು ಏನು ಮಾಡುತ್ತಿವೆ ಎಂದರೆ ಕೆಲವೊಂದು chemical mix ಮಾಡಿ, ಮಾರ್ಕೆಟ್‌ನಲ್ಲಿ ಅಗ್ಗದ ದರದಲ್ಲಿ ಮಾರಿ ಇವತ್ತು ರೈತರಿಗೆ ತೊಂದರೆ ಮಾಡತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ Agriculture Department ಅಂಕುಶ ಹಾಕಲಿಕ್ಕೆ ಆಗಲಿಲ್ಲ. ನಾವು ಅಲ್ಲಿರತಕ್ಕಂಥ AD ಮತ್ತು JDಗೆ ಬಹಳ ಸಿಟ್ಟು ಮಾಡಿ ಹೇಳಬೇಕಾಯಿತು ನನ್ನ ಮತ ಕ್ಷೇತ್ರದಲ್ಲಿ ಇದಕ್ಕೆ ಹೆಚ್ಚು ಅವಕಾಶ ಕೊಡಬೇಡಿ ಎಂದು ನಾನು ಗಟ್ಟಿ ಧ್ವನಿಯಾಗಿ ಹೇಳಿದಾಗ, ಅದನ್ನು stop ಮಾಡಿದ್ದಾರೆ. ಮಾನ್ಯ ಕೃಷಿ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ ಎಂದು ಹೇಳಬೇಕು. ಇದೊಂದು ದೊಡ್ಡ ದಂಧೆ ಆಗಿ ಬಿಟ್ಟಿದೆ. ಇದರಿಂದ ಏನು ಹಾನಿ ಇದೆ ಎಂದರೆ, ಅವರು ಇವತ್ತು fertilizers mix ಮಾಡಿ long term ನಲ್ಲಿ resistance develop ಆಗುತ್ತದೆ pest ಗೆ, long term ನಲ್ಲಿ ರೈತರಿಗೆ ಬಹಳ ದೊಡ್ಡ ಹಾನಿ ಆಗುತ್ತದೆ.

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) :- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, fake ಗೊಬ್ಬರ fake pesticides ಇದರ ಮೇಲೆ ಕ್ರಮ ಜರುಗಿಸುವುದಕ್ಕೆ ನಮ್ಮ ಇಲಾಖೆಯ ಅಧಿಕಾರಿಗಳು ಸಂಬಂಧಪಟ್ಟ ತಹಶೀಲ್ದಾರ್‌ಗಳು ಎಲ್ಲರಿಗೂ ನಿಗಾ ವಹಿಸಿ ಕ್ರಮ ಜರುಗಿಸಬೇಕೆಂದು ಹೇಳಿದ್ದೇವೆ. ತಾವು ಇವತ್ತು ಮಾಹಿತಿ ಕೊಟ್ಟರೆ special team ಕಳುಹಿಸಿ definitely we will take serious action against them. ನೀವು ಈ ರೀತಿ ವೇಗವಾಗಿ ಹೇಳಿದರೆ ಗೊತ್ತಾಗುವುದಿಲ್ಲ. Correct ಆದ ಮಾಹಿತಿ ನಿಮ್ಮ ಕಡೆ ಇದ್ದರೆ ನಮ್ಮ ತಹಶೀಲ್ದಾರ್ ಕಡೆ ಕೊಡಿ ಅಥವಾ ನಮ್ಮ JDಗೆ ಕೊಡಿ ಅಥವಾ ನಮಗಾದರೂ ನೀವು ಮಾಹಿತಿಯನ್ನು ಕೊಟ್ಟರೆ definitely we will take action. ರಾಯಚೂರಿನಲ್ಲಿ ಕಳಪೆ ಬೀಜ, ಕಳಪೆ ಗೊಬ್ಬರ ಬಂತು, ಕೂಡಲೇ ಕ್ರಮ ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಮಾಹಿತಿ ಬರುತ್ತದೆ, ಅಲ್ಲೆಲ್ಲಾ ಕ್ರಮ ತೆಗೆದುಕೊಂಡಿರುತ್ತೇವೆ. ನಿಮ್ಮ ಹತ್ತಿರ ಬಂದಿರುವ ಬಗ್ಗೆ ಮಾಹಿತಿಯನ್ನು ಕೊಡಿ definitely I will take action. ರಾಜ್ಯದಲ್ಲಿ ಕ್ರಮ ಕೈಗೊಳ್ಳುವ ವ್ಯವಸ್ಥೆಯನ್ನು ಮುಂದುವರೆಸುತ್ತಿದ್ದೇವೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, actually ಅದನ್ನು fake company ಯಿಂದ ಮಾಡುತ್ತಿರುವುದು. ಅದನ್ನು ಅವರ ಇಲಾಖೆಯ JD ಯವರ ಗಮನಕ್ಕೆ ತಂದು ಅದನ್ನು ನಿಬಂಧನೆ ಹೇಳತಕ್ಕಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ. ಅದು ನಿಮ್ಮ ಗಮನಕ್ಕೆ ಬಂದಿಲ್ಲವೆ ? ಇದಕ್ಕೆ ತಾವು ಕಡಿವಾಣವನ್ನು ಹಾಕಬೇಕು. ಅವರು ದೊಡ್ಡ ಪ್ರಮಾಣದಲ್ಲಿ ಅಧಿಕಾರಿಗಳನ್ನು ಬುಕ್ ಮಾಡುತ್ತಿದ್ದಾರೆ. ಅವರಿಗೆ ದೊಡ್ಡ ಪ್ರಮಾಣದಲ್ಲಿ ಲಾಭವಿದೆ. ಅವು ಯಾವುದೂ registered company ಅಲ್ಲ. ಅವರು ಕೆಮಿಕಲ್ ಅನ್ನು ಮಿಕ್ಸ್ ಮಾಡಿ ಮಾರುತ್ತಿದ್ದಾರೆ. ಅವರು ಯಾವುದೇ ಟ್ಯಾಕ್ಸ್ ಅನ್ನು ಕಟ್ಟುವುದಿಲ್ಲ. ಅವರಿಗೆ ಯಾವುದೂ ಖರ್ಚು ಇರುವುದಿಲ್ಲ. ಹಾಗಾಗಿ ಅವರು ಏನು ಮಾಡುತ್ತಿದ್ದಾರೆಂದರೆ ಯಾರು ಟ್ರೇಡರ್ಸ್ ಇದ್ದಾರೆ, ಟ್ರೇಡರ್ಸ್‌ಗೆ huge margin ಕೊಡುವುದರಿಂದ ಅವರು market ನಲ್ಲಿ ಮಾರುತ್ತಿದ್ದಾರೆ. ಇದರಿಂದ ಮುಂದೆ ನಮ್ಮ ಪೆಸ್ಟ್‌ಗೆ ರೆಸಿಸ್ಟೆನ್ಸ್ ಬಂತೆಂದರೆ ನಮ್ಮ ರೈತರು ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಅದಕ್ಕೆ ತಾವು ಅವಕಾಶವನ್ನು ಕೊಡಬಾರದೆಂದು ನಾನು ಸದನದ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಕೃಷಿ ಇಲಾಖೆಯ ಬಗ್ಗೆ ಹೇಳಬೇಕಾದರೆ ಬಹಳಷ್ಟು ಇದೆ. ನಾವು ಬೇರೆ ಬೇರೆ ಇಲಾಖೆಗಳ ಬಗ್ಗೆ ಹೇಳಬೇಕಾಗಿದೆ. ತಾವು ಸಮಯದ ಮಿತಿಯನ್ನು ತೋರಿಸುತ್ತೀರೆಂದು ನಾನು ಮುಂದಿನ ಇಲಾಖೆಯ ಬಗ್ಗೆ ಮಾತನಾಡುವುದಕ್ಕೆ ಹೋಗುತ್ತಿದ್ದೇನೆ. ಇವತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಬಗ್ಗೆ ನನಗೆ ಒಂದೇ ಒಂದು ಖುಷಿ ಎಂದರೆ ಇವತ್ತು 3,000 ಕೋಟಿ ರೂಪಾಯಿಗಳು ಇರುವಂತಹದ್ದನ್ನು 4,000 ಕೋಟಿ ರೂಪಾಯಿಗಳಿಗೆ ನಾವು ಖರ್ಚು ಮಾಡಿದ್ದೇವೆಂದು ಇವತ್ತು ತಾವು ನನಗೆ ಲೆಕ್ಕವನ್ನು ಕೊಟ್ಟಿದ್ದೀರಿ, ನನಗೆ ಬಹಳ ಸಂತೋಷವಾಗಿದೆ. ಆದರೆ ಅದನ್ನು ಯಾವಯಾವ ರೀತಿಯಾಗಿ ಮಾಡಿದ್ದೀರೆಂದು ನಾನು ವಿವರಣೆಯ ರೂಪದಲ್ಲಿ ಕೇಳುತ್ತೇನೆ. ಏಕೆಂದರೆ ಅದರ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಸಿಕ್ಕಿರುವುದಿಲ್ಲ. ನಾನು ಒಂದು ಹಳ್ಳಿಗೆ ಹೋದೆ. ಅಲ್ಲಿ ಜನರು ಬಹಳ ದೊಡ್ಡಪ್ರಮಾಣದಲ್ಲಿ ನಿರೀಕ್ಷೆಯನ್ನು ಇಟ್ಟುಕೊಂಡಿರುವುದಿಲ್ಲ. ಅವರು ನಮಗೆ ಏನು ಕೇಳುತ್ತಾರೆಂದರೆ ನಮ್ಮ ಊರಿಗೊಂದು ಒಳ್ಳೆಯ ರಸ್ತೆ ಇರಲಿ, ಒಂದು ಒಳ್ಳೆಯ ಶಾಲೆ ಇರಲಿ, ಕುಡಿಯುವ ನೀರಿನ ವ್ಯವಸ್ಥೆ ಇರಲಿ, ಊರಲ್ಲಿ ಚರಂಡಿ ವ್ಯವಸ್ಥೆ ಮತ್ತು ರೋಡಿನ ವ್ಯವಸ್ಥೆ ಇರಲಿ, ಇಷ್ಟನ್ನು ಅವರು ಕೇಳುವುದು ತಪ್ಪೇ ? ಇದಕ್ಕೆ ನಿಮ್ಮ ಹತ್ತಿರ ಒಂದು ಪ್ಲಾನ್ ಆದರೂ ಇರಲೇಬೇಕಲ್ಲವೇ ? ಇದಕ್ಕೆ ನಾವು ಒಂದು ದೊಡ್ಡ ಪ್ರಮಾಣದ ಬೆಂಗಳೂರು-ಮೈಸೂರು ತರಹ ದೊಡ್ಡ ದೊಡ್ಡ ಆಕಾಂಕ್ಷೆಗಳು ಇಲ್ಲ. ಪಾಪ,

ಅವರು ಏನೋ personal benefitಗಳನ್ನು ಕೇಳುತ್ತಿಲ್ಲ. ಈ ಊರಿನ ಅಭಿವೃದ್ಧಿಯ ಬಗ್ಗೆ ನಾನು ಕಳೆದ ಸಾರಿ ಹೇಳಿದ್ದೆ. ಒಂದು appreciate ಮಾಡುತ್ತೇವೆಂದರೆ ಸುವರ್ಣಗ್ರಾಮ ಮಾಡಿದ್ದೀರಿ ಅದು ಒಳ್ಳೆಯ ಕಾರ್ಯಕ್ರಮವಾಗಿದೆ. ಇದು appreciate ಮಾಡಬೇಕಾಗಿದೆ. ತಾವು ಎಸ್‌ಸಿ ಬಡಾವಣೆಗಳಿಗೆ ಹೆಚ್ಚಿನ ಹಣವನ್ನು ಕೊಡುತ್ತಿದ್ದೀರಿ, ಅದನ್ನೂ ಸಹ ನಾವು appreciate ಮಾಡಬೇಕಾಗುತ್ತದೆ. ಇವೆಲ್ಲವೂ ಒಳ್ಳೆಯ ಕಾರ್ಯಕ್ರಮಗಳಾಗಿದೆ. ನಾನು ಸರ್ಕಾರವನ್ನು ಟೀಕೆ ಮಾಡುವಂತಹದ್ದನ್ನು ಹೇಳುತ್ತಿಲ್ಲ. ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದರೆ ಅದಕ್ಕೆ ನಾವು appreciate ಮಾಡುತ್ತೇವೆ. ನೀವು ಕೆಟ್ಟಕೆಲಸವನ್ನು ಮಾಡುವುದಕ್ಕೂ ಅದಕ್ಕೆ ತಪ್ಪು ಇದೆ ಎಂದು ತೋರಿಸುವುದು ಸಹ ನಮ್ಮ ಕರ್ತವ್ಯವೇ. Suvarnagrama is a good scheme, I appreciate it. ಆದರೆ ಅದರಲ್ಲಿ ಒಂದು ನ್ಯೂನ್ಯತೆ ಏನು ಮಾಡಿದ್ದಾರೆಂದರೆ 2001 ಸೆನ್ಸಸ್ ಪ್ರಕಾರ ಮಾಡಿದ್ದಾರೆ. ನಾನು ಏನಾದರೂ ತಪ್ಪು ಹೇಳಿದರೆ ನೀವು ಹೇಳಿ. 2001ರ ಸೆನ್ಸಸ್ ಪ್ರಕಾರ ನೀವು allocation ಮಾಡಿದ್ದೀರಿ. 2011ರ ಪ್ರಕಾರ ನೀವು allocation ಮಾಡಬೇಕಾಗಿತ್ತು. ಮಾನ್ಯ ಅಧ್ಯಕ್ಷರೆ, ನೀವು ಈ ಮಾತನ್ನು ಒಪ್ಪಿಕೊಳ್ಳುತ್ತೀರಿ. ನಮ್ಮ ಹತ್ತಿರ figures ಇಲ್ಲ ಅದಕ್ಕೋಸ್ಕರ 2001ರ ಪ್ರಕಾರ ಮಾಡಿಬಿಟ್ಟಿದ್ದೇವೆ. ಇನ್ನೊಂದು ಒಳ್ಳೆಯ ಕೆಲಸವನ್ನು ನೀವು ಏನು ಮಾಡಿದ್ದೀರೆಂದರೆ ಹೋದ ಸಾರಿ ನಾನು ಈ ಬಗ್ಗೆ ಈ ಸದನದಲ್ಲಿ ಸಲಹೆಯನ್ನು ಕೊಟ್ಟಿದ್ದೆ. ನೀವು ಸುಮ್ಮನೆ ರಸ್ತೆಯನ್ನು ಮಾಡುತ್ತಿದ್ದೀರಿ. ಅದರಿಂದ ನಮಗೆ ಅನುಕೂಲವಾಗುತ್ತಿಲ್ಲ. ಪ್ರತಿ ವಿಧಾನಸಭಾ ಮತಕ್ಷೇತ್ರಕ್ಕೆ 50 ಕಿ.ಮೀ. ನೀವು ರೋಡ್ ಅನ್ನು ಡೆವಲಪ್ ಮಾಡಿ. ಅಂದರೆ ಇವತ್ತು visible development ಆಗುತ್ತದೆ ಎಂದು ನಾನು ಸಲಹೆಯನ್ನು ಕೊಟ್ಟಿದ್ದೆ. ನೀವು ಹೋದ ವರ್ಷ ಸುಮಾರು 20 ಕಿ.ಮೀ. ರಸ್ತೆಯನ್ನು ಮಾಡಿದ್ದೀರಿ. ಈ ವರ್ಷ ನೀವು 30 ಕಿ.ಮೀ. ರಸ್ತೆಯನ್ನು ಮಾಡುತ್ತೇವೆಂದು ಹೇಳಿದ್ದೀರಿ. I welcome it, it is a very good scheme. ನಿಮಗೆ ಇನ್ನು 8 ತಿಂಗಳ ಅವಧಿ ಇದೆ. ನೀವು ಈ ಎಂಟು ತಿಂಗಳ ಅವಧಿಯಲ್ಲಿಯೇ ಪೂರ್ಣ ಮಾಡಬೇಕು. ಮುಂದಿನ ವರ್ಷದಲ್ಲಿ ಮಾಡುವುದಕ್ಕೆ ಹೋದರೆ ಇದರಿಂದ ಏನೂ ಉಪಯೋಗವಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಇವತ್ತು ಕುಡಿಯುವ ನೀರಿಗೆ ನೀವು ಕೊಟ್ಟಿರುವಂತಹ ಅಂಕಿ ಅಂಶದ ಪ್ರಕಾರ ನಮಗೆ ಕಳೆದ ಸಾರಿ 800 ಕೋಟಿ ರೂಪಾಯಿಗಳ ಕುಡಿಯುವ ನೀರಿಗಾಗಿ ಇವತ್ತು ಹಣವನ್ನು ಉಪಯೋಗ ಮಾಡುವುದಕ್ಕಾಗಲಿಲ್ಲ. ನೀವು 600 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ಸಲುವಾಗಿ ಇವತ್ತು ಕೇಂದ್ರ ಸರ್ಕಾರ ಹಣ ಕೊಡುತ್ತಿತ್ತು. ಆದರೂ ಹಣವನ್ನು ಉಪಯೋಗ

ಮಾಡುವುದಕ್ಕಾಗಲಿಲ್ಲ. ಇವತ್ತು ರಾಜ್ಯದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬರಗಾಲವಿದೆ. ನೀರಿಗಾಗಿ ಇವತ್ತು ಬಹಳಷ್ಟು ಹಳ್ಳಿಗಳಲ್ಲಿ ಹಾಹಾಕಾರ ಇದೆ. ಆದರೂ ಕೂಡ ನೀವು ಕುಡಿಯುವ ನೀರಿಗಾಗಿ ಕೊಟ್ಟಿರುವಂತಹ ಹಣ ಸಂಪೂರ್ಣವಾಗಿ ಖರ್ಚು ಮಾಡಲಿಲ್ಲವೆಂದರೆ, whom should we blame ? ನನಗೆ ಏನು ಅನಿಸುತ್ತದೆ ಅಂದರೆ ನೀವು ಜಿಲ್ಲಾವಾರು ಹೋಗಿ, ಜಿಲ್ಲೆಗಳಿಗೆ ಹೋಗಿ ಅಲ್ಲಿ review ಮಾಡಿ ನಿಮಗೆ ಎಷ್ಟು ಹಣವು allocate ಆಗಿದೆ, ಎಷ್ಟು ಟೆಂಡರ್ ಆಗಿದೆ ಎಂದು ನೋಡಬೇಕು. ಟೆಂಡರ್ ಮಾಡುವುದಕ್ಕೆ ಸುಮಾರು 6–6 ತಿಂಗಳ ಸಮಯ ಹಾಳು ಮಾಡುತ್ತಾರೆ. ಅದು approve ಆಗಿ implement ಆಗುವುದಕ್ಕೆ ಒಂದು ವರ್ಷದಲ್ಲಿ ಆಗುವ ಕೆಲಸಕ್ಕೆ ಎರಡು ವರ್ಷದಲ್ಲಿ ಮಾಡುತ್ತಾರೆ. ಇದರಿಂದ ಯಾರಿಗೆ ಅನಾಹುತ ಆಗುತ್ತದೆ ಎಂದರೆ ನಮಗೆ ಆಗುತ್ತದೆ. ಕೇಂದ್ರ ಸರ್ಕಾರದವರು ಕೊಡತಕ್ಕಂತಹ ಹಣವನ್ನು ಸಹ ನಾವು ಸರಿಯಾಗಿ ಉಪಯೋಗ ಮಾಡುವುದಕ್ಕಾಗುತ್ತಿಲ್ಲ. ಇವತ್ತು ಈ ಸದನದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲ. ಆದರೂ ನಾನು ಸದನದ ಗಮನಕ್ಕೆ ತರುತ್ತಿದ್ದೇನೆ. ಇದನ್ನು ತಪ್ಪಿಸುವಂತಹ ಕೆಲಸವನ್ನು ತಾವು ಮಾಡಬೇಕು. ಇವತ್ತು Housing Departmentನಲ್ಲಿ ಸೋಮಣ್ಣನವರು ಈ ಕಡೆಗೆ ಬಂದ ಮೇಲೆ ಸ್ವಲ್ಪ ಹೆಚ್ಚಿನ ಮನೆಗಳನ್ನು ಕೊಡುವುದನ್ನು ಮಾಡಿದ್ದಾರೆ. We appreciate it. ಅದರಲ್ಲಿ ಒಂದು ಒಳ್ಳೆಯ ಕೆಲಸ ಏನಾಗಿದೆ ಎಂದರೆ ಅವರು GPS ಅಳವಡಿಸಿ ಅಲ್ಲಿ ಮನೆಯಾಗಿದೆ ಅಥವಾ ಇಲ್ಲವೆಂದು ನಾವು satellite ಮುಖಾಂತರ verify ಮಾಡಿ ಹಣ ಬಿಡುಗಡೆ ಮಾಡುವುದು ಅದು ಒಂದು ಒಳ್ಳೆಯ ಪದ್ಧತಿಯಾಗಿದೆ. ಏಕೆಂದರೆ ಅಲ್ಲಿ ಅವ್ಯವಹಾರಗಳು ಆಗುವುದಿಲ್ಲ. ಇವತ್ತು ಬೋಗಸ್ ಬಿಲ್ಲಿಂಗ್ ಆಗುವುದಿಲ್ಲ. ಯಾರು ಮನೆಯನ್ನು ಕಟ್ಟಿಸುವಂತಹ ಆಸಕ್ತಿ ಹೊಂದಿರುತ್ತಾರೋ ಅವರು ಮಾತ್ರ ಮನೆಯನ್ನು ಕಟ್ಟಿಸಿಕೊಳ್ಳುತ್ತಾರೆ. ಇದು ಒಂದು good scheme ಆಗಿದೆ. ಇದಕ್ಕೆ ಇನ್ನು ಹೆಚ್ಚಿನ ಹಣವನ್ನು ರಾಜ್ಯ ಸರ್ಕಾರವು ಕೊಡಬೇಕಾಗಿತ್ತು. Housing Department ಇನ್ನೊಂದು ಒಳ್ಳೆಯ ಸಲಹೆಯನ್ನು ಕೊಡುತ್ತೇನೆ. ಇವತ್ತು ನಮ್ಮ ಕಡೆಯಲ್ಲಿ ಏನಿದೆ ಎಂದರೆ ಇವತ್ತು almost ಮನೆಗಳನ್ನು ಕೊಟ್ಟ ಮೇಲೆ ಇನ್ನೊಂದು ಹೊಸ ಸ್ಕೀಮ್ ಅನ್ನು ತರಬೇಕು. ಅದೇನೆಂದರೆ, ಈ ಕಚ್ಚಾ ಇರತಕ್ಕಂತಹ ಮನೆಗಳನ್ನು ಪಕ್ಕಾ ಮಾಡುವಂತಹದ್ದು ಆಗಬೇಕು. ಏಕೆಂದರೆ ನಮ್ಮ ಕಡೆಯಲ್ಲಿ ಇವತ್ತು earthquake prone area ಅದು. Seismic Zone ನಲ್ಲಿ earthquake ಆಗುವಂತಹ ಸಂಭವ ಇದೆ Geography Department ನವರು ಹೇಳುತ್ತಾರೆ. ಅದಕ್ಕೆ ಇವತ್ತು ನಮ್ಮ ಕಡೆಗಳಲ್ಲಿ ಅಡ ಚಪ್ಪರದ ಮನೆಗಳನ್ನು ಇರುತ್ತವೆ. ಒಂದು ವೇಳೆ

ಇವತ್ತು earthquake ಆಯಿತೆಂದರೆ, ಕಿನಾರೆಯಲ್ಲಿ ಎಂತಹ ದೊಡ್ಡ ಪ್ರಮಾಣದ ಅನಾಹುತ ಆಯಿತು ಆ ರೀತಿ ಅನಾಹುತ ಆಗುತ್ತದೆ. ಯಾವ ಯಾವ ಅಡ ಚಪ್ಪರ ಮನೆಗಳು ಇವೆ, ಅವುಗಳಿಗೆ ನೀವು ಚೆತ್ ಹಾಕುವುದಕ್ಕೆ ಸಹಾಯ ಮಾಡಿ. ಹೊಸ ಮನೆಗಳನ್ನು ಕಟ್ಟತಕ್ಕಂಥ ಅವಶ್ಯಕತೆ ಇಲ್ಲ. ಅಷ್ಟೇ ಹಣದಲ್ಲಿ ಇರತಕ್ಕಂಥ ಮನೆಗಳನ್ನು ಪಕ್ಕಾ ಮಾಡುವುದು. ಒಂದು ಹಳ್ಳಿಯಲ್ಲಿ 300 ಮನೆಗಳು ಇವೆ, ಅವರಿಗೆ ನೀವು ಮುಂದೆ ನಿಮ್ಮ ಎಲ್ಲಾ ಮನೆಗಳನ್ನು ಪಕ್ಕಾ ಮಾಡುತ್ತೇವೆ, ನಿಮಗೊಂದು RCC concrete ಹಾಕುತ್ತೇವೆ ಎನ್ನುವಂಥ ಒಂದು ಯೋಜನೆ ಮಾನ್ಯ ಸೋಮಣ್ಣನವರು ತರಬೇಕೆನ್ನುವುದು ನನ್ನ ಒಂದು ಮನವಿ.

ಶ್ರೀ ವಿ. ಸೋಮಣ್ಣ (ಮಾನ್ಯ ವಸತಿ ಸಚಿವರು) :– ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಇವತ್ತು awareness create ಅಂತೂ ಆಗಿದೆ. ವಿಶೇಷವಾಗಿ ಬೀದರ್, ಗುಲ್ಬರ್ಗಾ, ರಾಯಚೂರು, ಬಿಜಾಪುರ ಈ ಜಿಲ್ಲೆಗಳ ಬಗ್ಗೆ ಸನ್ಮಾನ್ಯ ಸದಸ್ಯರು ಹೇಳುತ್ತಿರುವಂಥದ್ದು, ಜನರ ಜೀವನಮಟ್ಟ ಇನ್ನು ಕೂಡ ಸಾಕಷ್ಟು ಬದಲಾವಣೆ ಆಗಬೇಕಾಗಿದೆ. ಅದಕ್ಕೋಸ್ಕರವಾಗಿ ನಾವು ಈ ವರ್ಷದ ಸೆಪ್ಟೆಂಬರ್‌ನಲ್ಲಿ ಒಂದು ಯೋಜನೆಯನ್ನು ರೂಪಿಸುತ್ತಿದ್ದೇವೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ರಾಜೀವ್ ಆವಾಸ್ ಯೋಜನೆಯನ್ನು ನಾವು ಆಗಸ್ಟ್ ಮೊದಲನೆಯ ವಾರದಲ್ಲಿ introduce ಮಾಡುತ್ತಿದ್ದೇವೆ. ಆ introduce ಮಾಡತಕ್ಕಂಥ ಸಂದರ್ಭದಲ್ಲಿ ಹೆಚ್ಚಿನ ಭಾಗವನ್ನು ಹೈದ್ರಾಬಾದ್–ಕರ್ನಾಟಕ ಮತ್ತು ಬಾಂಬೆ–ಕರ್ನಾಟಕಕ್ಕೆ ಮತ್ತು ಎಲ್ಲೆಲ್ಲಿ ಈ ರೀತಿಯ ತೊಂದರೆಗಳು ಇವೆ, ವಿಶೇಷವಾಗಿ ಚಾಮರಾಜನಗರ ಇರಬಹುದು ಮತ್ತು ಬಹುತೇಕ ಜಿಲ್ಲೆಗಳಿಗೆ ಆದ್ಯತೆ ಕೊಡುವುದಕ್ಕೆ ಸರ್ಕಾರ ಒಂದು ಹೆಜ್ಜೆ ಮುಂದೆ ಇಟ್ಟಿದೆ. ಒಂದು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, GPS ಮಾಡಿದ್ದೇವೆನ್ನುವಂಥ ಒಂದು ದೊಡ್ಡ ಮಾತನ್ನು ತಾವು ಹೇಳಿದ್ದೀರಿ. ಇಡೀ ಈ ನಮ್ಮ ವ್ಯವಸ್ಥೆಯನ್ನು ಕೇಂದ್ರ ಸರ್ಕಾರವು ಮನವರಿಕೆ ಮಾಡಿ ಇಡೀ ರಾಷ್ಟ್ರದಲ್ಲಿ ಇದನ್ನು ತರುತ್ತಿದ್ದಾರೆ. ನಾನು ತಮ್ಮ ಮೂಲಕ ಎಲ್ಲಾ ಮಾನ್ಯ ಸದಸ್ಯರಿಗೆ ಮನವಿ ಮಾಡುವುದು ಇಷ್ಟೆ. ಯಾವುದೇ ಕಾರಣಕ್ಕೆ ನಮ್ಮ ನೋಡಲ್ ಆಫೀಸರ್‌ಗಳನ್ನು, ನಮ್ಮ ಪಿಡಿಓ ಗಳನ್ನು ಮತ್ತು Executive Officer ಗಳಿಗೆ ಹೇಳಿ ಒತ್ತಡ ತರುವುದು. Digital ನಲ್ಲಿ ಕೆಲವು photo ಗಳನ್ನು ಹಾಕುವಂಥದ್ದು, ತಲೆ ಒಬ್ಬರದು, ಕಾಲು ಒಬ್ಬರದು, ಕೈ ಒಬ್ಬರದು ಇರತ್ತದೆ. ಇಂತಹ ಕೆಲಸ ಮಾಡುವಂಥದ್ದನ್ನು ಮಾನ್ಯ ಶಾಸಕರುಗಳ ಗಮನಕ್ಕೆ ತಂದರೆ ದಯಮಾಡಿ ಯಾವುದೇ ಕಾರಣಕ್ಕು ಉತ್ತೇಜನ ಕೊಡತಕ್ಕಂಥದ್ದು ಅಲ್ಲ, ಇದೊಂದು ಪಾರದರ್ಶಕವಾಗಿ ನಡೆಯುವಂಥದ್ದು, ತಮ್ಮ ಸಲಹೆಯನ್ನು ನಾನು ಸ್ವೀಕಾರ ಮಾಡುತ್ತೇನೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ :- ಮಾನ್ಯ ಅಧ್ಯಕ್ಷರೆ, ಎಂ.ಎಲ್.ಸಿ.ಗಳನ್ನು ಉಪಾಧ್ಯಕ್ಷರನ್ನಾಗಿ ಮಾಡಿದ್ದಾರೆ. ಹಿಂದೆ ಎರಡು ಮೂರು ಸಲ ಹೇಳಲಾಗಿದೆ. ದಯಮಾಡಿ ಅದನ್ನು ತೆಗೆದರೆ ಬಹಳ ಒಳ್ಳೆಯದು.

ಅಧ್ಯಕ್ಷರು :- ಮಾನ್ಯ ಸದಸ್ಯರು ಮಾತನಾಡುವುದನ್ನು ಮುಗಿಸಲಿ.

ಶ್ರೀ ಟಿ.ಬಿ. ಜಯಚಂದ್ರ :- ಬಹಳ ಮುಖ್ಯವಾದಂಥ ವಿಚಾರ.

ಅಧ್ಯಕ್ಷರು :- Please, ಅವರು yield ಆಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಈಗ ಡಾ|| ಶರಣ ಪ್ರಕಾಶ್ ಪಾಟೀಲ್‌ರವರು ನೀವು ಪಾರದರ್ಶಕತೆ ತರುವಂಥ ಪ್ರಯತ್ನ ಮಾಡಿದ್ದೀರೆಂದು ತಮ್ಮನ್ನು ಮುಕ್ತಕಂಠದಿಂದ ಹೊಗಳಿದರು, ಅದನ್ನು ನಾನೂ ಕೂಡ ಒಪ್ಪುತ್ತೇನೆ. ನೇರವಾಗಿ ಆ ಹಣ ಅವನ ಅಕೌಂಟಿಗೆ ಹೊಂದಾಣಿಕೆ ಆಗತಕ್ಕಂಥದ್ದು ಒಳ್ಳೆಯದು. ಮಧ್ಯವರ್ತಿಗಳ ಪಾತ್ರ ಕಡಿಮೆ ಆಗಿದೆ. ನಾನು ಇನ್ನೊಂದು ಮುಖ್ಯವಾದ ವಿಷಯವನ್ನು ಪದೇ ಪದೇ ಹೇಳುತ್ತಿದ್ದೇನೆ. ಇವತ್ತು ನೀವು ಯಥೇಚ್ಛವಾಗಿ ಮನೆಗಳನ್ನು ಕೊಟ್ಟಿದ್ದೀರಿ. 2011-12, 2012-13ನೇ ಸಾಲಿಗೆ ಯಾರಿಗೂ ಒಂದು ಮನೆಯನ್ನು ಕೊಡುವುದಕ್ಕೆ ನಿಮ್ಮಿಂದ ಆಗಿಲ್ಲ. ನಿಮಗೆ demand ಕಡಿಮೆ ಆಗುವುದಕ್ಕೆ ಕಾರಣವೇನೆಂದರೆ ನಿವೇಶನಗಳು ಇಲ್ಲದಿರುವುದು ನಿಮ್ಮಲ್ಲಿರುವ ದೊಡ್ಡ ತೊಂದರೆ. ಸನ್ಮಾನ್ಯ ದೇವರಾಜ್ ಅರಸ್‌ರವರು ಇದ್ದಂಥ ಸಂದರ್ಭದಲ್ಲಿ Landless House Sites Act of 1972 ಇತ್ತು. ಆ Act ಅನ್ನು ನಾವು replace ಮಾಡಿ annual ಮಾಡಿ ಸುಮಾರು ಒಂದು ವರ್ಷವಾಯಿತು. ಅದಾದ ಮೇಲೆ ಬೇರೆ act ತರಬೇಕೆಂಬ ಮಾತನ್ನು ಹೇಳಿದರು. ಇವತ್ತು ನೀವು ಹೇಳಿ ಸ್ವಾಮಿ. ಯಾವ Act ಪ್ರಕಾರ ನೀವು ನಿವೇಶನವನ್ನು ತರಲಿಕ್ಕೆ ಸಾಧ್ಯ. ನೀವು Land Acquisition Act ಪ್ರಕಾರ acquire ಮಾಡಲಿಕ್ಕೆ ಹೋದರೆ ಖಂಡಿತವಾಗಿಯೂ guidance value ಒಳಗೆ ಮೂರರಷ್ಟು ಕೊಟ್ಟರೂ ಕೂಡ ನಿವೇಶನಕ್ಕೆ ಯಾರೂ ಬರುತ್ತಿಲ್ಲ. ಅದಕ್ಕೆ ವಿಶೇಷವಾಗಿರತಕ್ಕಂಥ ಒಂದು ಕಾನೂನು ಮಾಡಿ ಎಂದು ನಾವು ಸಲಹೆ ಕೊಡುತ್ತಲೇ ಇದ್ದೇವೆ. ಆ ಕಾನೂನು ಮಾಡಿದರೆ ನಿಜವಾಗಿಯೂ ಕೂಡ ಸಹಾಯವಾಗುತ್ತದೆ. ಅದರ ಬಗ್ಗೆ ಯೋಚನೆ ಮಾಡಿ. ಈಗಲೂ ಕೂಡ ಕಾಲ ಮಿಂಚಿಲ್ಲ. ಒಳ್ಳೆಯ ಹೆಸರು ಬರುತ್ತದೆ. ಎರಡನೆಯದಾಗಿ, ಭಾರತ ಸರ್ಕಾರ ಈಗಲೇ ರಾಜೀವ್ ಆವಾಸ್ ಯೋಜನೆ ಏನು ತರಬೇಕೆಂದು ಮಾಡಿದ್ದಾರೆ. ನಾನೂ ಕೂಡ 15 ದಿವಸಗಳ ಕೆಳಗೆ ದೆಹಲಿಗೆ ಹೋದಾಗ ಕುಮಾರಿ ಶೆಲ್ಜಾರವರನ್ನು ಭೇಟಿ ಮಾಡಿದ್ದೇನೆ.

ರಾಜೀವ್ ಆವಾಸ್ ಯೋಜನೆ ಇನ್ನೂ ಅಂತಿಮವಾಗಿ ಫೈನಲ್ ಆಗುತ್ತಿದೆ. ಇದೆಲ್ಲಕ್ಕಿಂತ ಮುಂಚೆ IHSBP 2nd Phaseಗೆ ಪ್ರಪೋಸಲ್ ಕೇಳುತ್ತಿದ್ದಾರೆ. ಅದಕ್ಕೆ ಏನಾದರೂ ಮಾಡಿ 50 ತಾಲ್ಲೂಕುಗಳನ್ನು ಸೇರಿಸುವಂಥ ಕೆಲಸವನ್ನು ಮಾಡಿ ಬೇಗ ಪ್ರಪೋಸಲ್ ಕಳುಹಿಸಿ, ಜಯಚಂದ್ರರವರೇ ಪ್ರಪೋಸಲ್ ಕೊಟ್ಟಿದ್ದೇವೆ, ನೀವು ಹೋಗಿ ಮಾಡಿಕೊಂಡು ಬನ್ನಿ ಎಂದು ಹೇಳುವಂಥ ಕೆಲಸವನ್ನು ಮಾಡಬೇಕು. ಆ ಸಂದರ್ಭದಲ್ಲಿ ಶಿರಾ ಬಿಟ್ಟು ಬೇರೆ ತಾಲ್ಲೂಕುಗಳ ಹೆಸರುಗಳನ್ನು ಕಳುಹಿಸಬೇಡಿ. ಶಿರಾ ಬೇಕು.

ಶ್ರೀ ವಿ. ಸೋಮಣ್ಣ (ಮಾನ್ಯ ವಸತಿ ಸಚಿವರು) :- ಮಾನ್ಯ ಅಧ್ಯಕ್ಷರೆ, ನಾವು IHSBP ಯಲ್ಲಿ ಈ ತಿಂಗಳ 30 ನೇ ತಾರೀಖು ನಮ್ಮ ಅಧಿಕಾರಿಗಳು ಹೋಗುತ್ತಿದ್ದಾರೆ. 50 ತಾಲ್ಲೂಕುಗಳನ್ನು ಈಗಾಗಲೇ ಆಯ್ಕೆ ಮಾಡಲಾಗಿದೆ. ಅದರಲ್ಲಿ ಶಿರಾ ಕೂಡ ಇದೆ. ಆದರೆ ನಾವು ಒಂದು ಮಾಡಿದ್ದೇವೆ ನಾವು ಯಾವು ಯಾವುದೇ ಒಂದು ಪಕ್ಷಕ್ಕೆ ಎಲ್ಲೆಲ್ಲಿ ಇದರ ಅವಶ್ಯಕತೆ ಇದೆ. ಎಲ್ಲಿ ಇದಕ್ಕೆ ತೊಂದರೆ ಜಾಸ್ತಿ ಇದೆ. ಅಂಥ places ನಾವು ಆಯ್ಕೆ ಮಾಡಿಕೊಂಡಿದ್ದೇವೆ. ಅದಲ್ಲದೆ ರಾಜೀವ್ ಆವಾಸ್‌ನಲ್ಲಿ 75 ತಾಲ್ಲೂಕುಗಳನ್ನು ಮಾಡಬೇಕೆನ್ನುವ ಒಂದು ಯೋಜನೆಯನ್ನು ಮಾಡಿದ್ದೇವೆ. ಈ ಎಲ್ಲದರ ನಡುವೆ ದೇವರಾಜ್ ಅರಸ್‌ರವರು ಇದ್ದಾಗ ಒಂದು ಕಾನೂನು ಮಾಡಿದ್ದೇವೆಂದು ಹೇಳಿದಿರಿ. ಅದನ್ನು ನಾನು ಈಗಾಗಲೇ ಎರಡು ಮೂರು ಸಾರಿ ವಿಮರ್ಶೆ ಮಾಡಿದೆ. ತಾವು ಶುಕ್ರವಾರ ಬೆಂಗಳೂರಿನಲ್ಲಿ ಇರುವುದಾದರೆ ಮಧ್ಯಾಹ್ನ ಒಂದು ಸಭೆಯನ್ನು ಕರೆಯುತ್ತೇನೆ. ತಾವು ದಯಮಾಡಿ ಬಂದರೆ ನಮ್ಮ ಕಾರ್ಯದರ್ಶಿಗಳನ್ನು ಕೂರಿಸಿಕೊಂಡು ಅದನ್ನು ಒಂದು ಮಾಡೋಣ. ಎರಡನೆಯದು ಅಧ್ಯಕ್ಷರೆ, ನಾವು ತಮ್ಮ ಮೂಲಕ ನಾವು ಇವತ್ತಿನವರೆಗೆ 2010-11, 2011-12, 2012-13 ರಲ್ಲಿ ರೈತರ ಹತ್ತಿರವೇ ಡೈರೆಕ್ಟ್ ಆಗಿ 2100 ಎಕರೆ ಜಮೀನನ್ನು ಈ ಆಶ್ರಯ ಮನೆಗಳಿಗೆ ಈಗಾಗಲೇ ಖರೀದಿ ಮಾಡಿ ಕೆಲವು ಕಡೆ ಮಾಡಿದ್ದೇವೆ. ಅದನ್ನು ನಾವು meet ಮಾಡಲಿಕ್ಕೆ ಆಗುವುದಿಲ್ಲ. ತಾವು ಏನು ಹೇಳಿದ್ದೀರಿ ಇವತ್ತು, ಅದನ್ನು ಮಾಡದೇಹೋದರೆ ಮುಂದೆ ಈ ರೀತಿಯಾದ ಸೂರನ್ನು ಒದಗಿಸುವುದು ಕಷ್ಟವಾಗುತ್ತದೆ. ಹಾಗಾಗಿ ತಾವು ಶುಕ್ರವಾರ ಬಂದರೆ ಕುಳಿತುಕೊಂಡು ಮಾತನಾಡಿ ಅದಕ್ಕೊಂದು ರೂಪ ಕೊಡೋಣ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಇಲಾಖೆಯಲ್ಲಿ ಸುಮಾರು ಒಂದು ಲಕ್ಷ ಕಿ.ಮೀ. ರಸ್ತೆ village roads ಇದೆ. ನಮ್ಮ ರಾಜ್ಯದ ರಸ್ತೆ ಜಾಲದಲ್ಲಿ ನಾವು ನೋಡುತ್ತೇವೆ,

State Highways, National Highways, major district roads, other district roads and village roads. ನಮ್ಮ ಸರ್ಕಾರದ ಆದ್ಯತೆ ಹಳ್ಳಿಗಳ ರಸ್ತೆಗಳನ್ನು ಅಭಿವೃದ್ಧಿಗೊಳಿಸುವುದಾಗಿರಬೇಕು. ಸುಮಾರು ಒಂದು ಲಕ್ಷ ಕಿ.ಮೀ. ರಸ್ತೆಗಳು ಇವತ್ತು ನಮ್ಮ ರಾಜ್ಯದಲ್ಲಿದೆ. ಆದರೆ ಎಷ್ಟು ಹಣವನ್ನು ನಾವು ಇದಕ್ಕೆ ಕೊಡುತ್ತಿದ್ದೇವೆ. ಇಲ್ಲಿ ಹಣದ ಕೊರತೆ ಬಹಳ ಇದೆ ಅಧ್ಯಕ್ಷರೆ, ಒಂದು ವರ್ಷಕ್ಕೆ ಸುಮಾರು 20000 ಕಿ.ಮೀ. ನಷ್ಟು ರಸ್ತೆ ಮಾಡತಕ್ಕಂಥದ್ದಕ್ಕೆ ನಾವು plan ಹಾಕಿಕೊಳ್ಳಬೇಕು. ನಾವು 5 ವರ್ಷದಲ್ಲಿ ಎಲ್ಲಾ ಗ್ರಾಮೀಣ ರಸ್ತೆಗಳನ್ನು ಡಾಂಬರೀಕರಣ ಮಾಡಬೇಕಾದರೆ ಒಂದು ವರ್ಷದಲ್ಲಿ at least 10000 ಕಿ.ಮೀ. ರಸ್ತೆಯನ್ನು ಮಾಡತಕ್ಕಂಥ ಯೋಜನೆಯನ್ನು ಹಾಕಿಕೊಂಡಿಲ್ಲವೆಂದರೆ ಮಾನ್ಯ ಅಧ್ಯಕ್ಷರೆ, ನಮ್ಮ ಹಳ್ಳಿಗಳು ಉದ್ಧಾರವಾಗುವುದು ಹೇಗೆ ? ನಾವು ಬೆಂಗಳೂರಿನಲ್ಲಿ ನೋಡುತ್ತೇವೆ. ಟಾರ್ ಮೇಲೆ ಟಾರ್ ಹಾಕಿ ಒಂದು foot ಟಾರ್ ಆಗಿದೆ. I really surprised. ಎಷ್ಟು ಟಾರ್ ಹಾಕುತ್ತಾರೆಂದರೆ ಒಂದೂವರೆ feet ಟಾರ್ ಹಾಕಿದ್ದಾರೆ. ಅಂದರೆ ಇದನ್ನು ಯಾರು ಕೇಳುವವರೆ ಇಲ್ಲವೇ ? ನಮ್ಮ ಕಡೆ ಇವತ್ತು ರಸ್ತೆಗಳಿಗೆ ಒಂದು ಸಾರಿಯೂ ಟಾರ್ ಹಾಕಲಿಕ್ಕೆ ಆಗಿಲ್ಲ. ನಾವು ಟಾರ್ ನೋಡಿಲ್ಲ. ಅದು 20 ಮಿಲಿಮೀಟರ್ ಟಾರ್ ಹಾಕದೇನೆ ಇವರು ಟಾರ್ ಮೇಲೆ ಟಾರ್ ಹಾಕಿಕೊಂಡು ಹಳ್ಳಿಗಳಿಗೆ ಅನ್ಯಾಯವಾಗುತ್ತಿದೆ. ಮಾನ್ಯ ಅಶೋಕ್‌ರವರು ಬೆಂಗಳೂರಿಗೆ ಮಾತ್ರ ಸಚಿವರಲ್ಲ. ಈಗ ಪ್ರಭಾವಿ ಉಪ ಮುಖ್ಯಮಂತ್ರಿಗಳಾಗಿದ್ದೀರಿ. ಸ್ವಲ್ಪ ರೈತರ ಕಡೆಯೂ ಹಳ್ಳಿ ಭಾಗದ ಕಡೆಯೂ ನೋಡಬೇಕು. ನಿಮ್ಮ ಬಸ್‌ಗಳು ಓಡಾಡಬೇಕು. ಏನೆಂದರೆ ನಮ್ಮ ಹಳ್ಳಿಗಳಲ್ಲಿ it is so surprising. ಇದನ್ನು ನಮ್ಮ ಸಚಿವರ ಗಮನಕ್ಕೂ ತಂದಿದ್ದೇನೆ. ನನ್ನ ಮತ ಕ್ಷೇತ್ರದಲ್ಲಿ 30% villages ಗೆ ಇವತ್ತು ಬಸ್‌ಗಳು ಹೋಗುವುದಿಲ್ಲ. ರಸ್ತೆ ಮಾಡಿದ್ದೇವೆ, ಆದರೆ ನಿಮ್ಮವರು ಬಸ್ ಓಡಿಸಲಿಕ್ಕೆ ತಯಾರಿಲ್ಲ. ನಾನು ಹತ್ತು ಸಾರಿ ಮನವಿ ಮಾಡಿದ್ದೇನೆ. ಏನೆಂದರೆ ನಮ್ಮ ಸೇಡಂ ಡಿಪೋಗೆ ನೀವು ಇನ್ನೊಂದು 20 ಷೆಡ್ಯೂಲ್ಸ್ ಜಾಸ್ತಿ ಕೊಡಿ ಎಂದರೆ ಇಲ್ಲಿಯವರೆಗೆ ಕೊಟ್ಟಿಲ್ಲ. ಆರು ವರ್ಷಗಳ ಹಿಂದೆ ಏನು open ಆದಾಗ 40 ಷೆಡ್ಯೂಲ್ಸ್‌ನಲ್ಲಿ ಓಡಿಸುತ್ತಿದ್ದರು, ಇನ್ನೂ ಅದೇ 40 ಷೆಡ್ಯೂಲ್ಸ್ ಓಡಿಸಲಿಕ್ಕೆ ಆಗುತ್ತಿಲ್ಲ ಅವರಿಗೆ. ಏಕೆಂದರೆ ನಾವು ಗಡಿಭಾಗದಲ್ಲಿದ್ದೇವೆ ಎಂದು ಹಳೆಯ ಬಸ್‌ಗಳನ್ನು ಕೊಡುವುದು. ಆ ಬಸ್‌ಗಳೆಲ್ಲಾ ಬ್ರೇಕ್ ಡೌನ್ ಆಗುವುದು. ಇಲ್ಲವಾದರೆ ಕಂಡೆಕ್ಟರ್ಸ್ shortage ಇದ್ದಾರೆಂದು ಹೇಳಿ ಇವತ್ತು ಸುಮಾರು ನಾಲ್ಕೈದು ಷೆಡ್ಯೂಲ್ಸ್ ಇರುವುದಿಲ್ಲ. 20 ಷೆಡ್ಯೂಲ್ಸ್ ಜಾಸ್ತಿ ಮಾಡಿಕೊಡಿ ಎಂದು ನಾನು ಇಪ್ಪತ್ತು ಸಾರಿ ಅಶೋಕ್‌ರವರ ಹತ್ತಿರ ಮನವಿ

ಮಾಡಿಕೊಂಡಿದ್ದೇನೆ. ಮಾನ್ಯ ಅಶೋಕ್‌ರವರು ಖಂಡಿತವಾಗಿ ಅದನ್ನು ಮಾಡಿಕೊಡಬೇಕು. ಏಕೆಂದರೆ ಗ್ರಾಮೀಣ ಭಾಗದಲ್ಲಿ ರಸ್ತೆ ಮಾಡದೆಹೋದರೆ ನಾವು ಯಾವರೀತಿಯಾಗಿ ಈ ರಾಜ್ಯವನ್ನು ಅಭಿವೃದ್ಧಿ ಮಾಡಿದ್ದೇವೆಂದು ಹೇಳುವುದಕ್ಕಾಗುತ್ತದೆ ?

ಶ್ರೀ ಆರ್. ಅಶೋಕ್ (ಮಾನ್ಯ ಉಪ ಮುಖ್ಯಮಂತ್ರಿಗಳು) :–ನಮ್ಮ ರಾಜ್ಯದಲ್ಲಿ ಒಂದೇ ಕಡೆ 23000 ಬಸ್‌ಗಳು ಇರುವುದು . ನಮ್ಮದು ಸಣ್ಣ ರಾಜ್ಯ, ಬೇರೆ ರಾಜ್ಯಕ್ಕೆ compare ಮಾಡಿದರೆ ಉತ್ತರ ಪ್ರದೇಶ, ಬಿಹಾರ್‌ನಲ್ಲಿ 23000 ಬಸ್‌ಗಳಿವೆ. ಹಳೆಯ ಬಸ್‌ಗಳನ್ನು ಈಗ ಕೊಡುವ systemನಲ್ಲಿ ಹಿಂದೆ ಎಲ್ಲಾ ಕೊಟ್ಟಿದ್ದರು. ಬೆಂಗಳೂರಿನಿಂದ free ಆಗಿ ಬಸ್‌ಗಳನ್ನು ಕೊಡುತ್ತಿದ್ದರು. ಈಗಿಲ್ಲ. ಅಲ್ಲಿ especially ಗುಲ್ಬರ್ಗಾ division ಏನಿದೆ ಅದೇ ಸ್ವತಂತ್ರವಾಗಿ ನಿಲ್ಲುವಂಥ ಶಕ್ತಿ ಬಂದಿದೆ. ಪ್ರತಿ ವರ್ಷ ಸುಮಾರು 800–900 ಹೊಸ ಬಸ್‌ಗಳನ್ನು ಕೊಡುತ್ತಿದ್ದರು. ಈ sleepers ಅನ್ನು ಮೊದಲೇ introduce ಮಾಡುತ್ತಿದ್ದಿರಿ. ನಮ್ಮ ಉದ್ದೇಶವಿರುವುದು ಪ್ರತಿ ಹಳ್ಳಿಗೆ loss ಆಗುತ್ತದೋ gain ಆಗುತ್ತದೋ ನಾನು ಹೇಳಿದೆ ಮೊನ್ನೆ ಹಳ್ಳಿಗಳಲ್ಲಿ ಬಸ್ ಓಡಿಸುವುದರಿಂದ ಪ್ರತಿ ವರ್ಷ 400 ಕೋಟಿ ರೂಪಾಯಿಗಳಷ್ಟು loss ಆಗುತ್ತಿದೆ. ಆದರೂ ಅದು ನಮ್ಮ priority ನಾವು ಮಾಡಬೇಕು ನಮ್ಮ ಕರ್ತವ್ಯ. ತಾವು ಮೊನ್ನೆ ನನ್ನ ಭೇಟಿ ಮಾಡಿದ್ದೀರಿ. ಪ್ರತಿ ಹಳ್ಳಿಗೆ ನಮ್ಮ ಬಸ್ ಹೋಗಬೇಕು. ಅದು ನಮ್ಮ ಉದ್ದೇಶವಿದೆ. ಆ ರೀತಿ ನಾವು ಕೆಲಸ ಮಾಡುತ್ತೇವೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಇವತ್ತು ಸಚಿವರು ಹೇಳಿದ್ದಕ್ಕೆ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ದಯವಿಟ್ಟು ಮಾನ್ಯ ಅಶೋಕ್‌ರವರೆ ತಾವು ಒಂದು ಸಾರಿ ಗುಲ್ಬರ್ಗಾಕ್ಕೆ ಬನ್ನಿ. ಬಂದು ನಮ್ಮ NEKRTC ಯಲ್ಲಿ ಎಲ್ಲಾ ಶಾಸಕರನ್ನು ಕರೆದು ಅಲ್ಲಿ ಏನೇನು ಸಮಸ್ಯೆಗಳಿವೆ, ಅದರ ಬಗ್ಗೆ ಚರ್ಚೆ ಮಾಡೋಣ. ಏನಾಗುತ್ತದೆಂದರೆ ನೀವು ನಮ್ಮ ಜಿಲ್ಲೆಗೆ ಬಂದು ಚರ್ಚೆ ಮಾಡಿ ಏನೇನಿದೆ ಎಂದರೆ ನಾವು ನಿರ್ದಿಷ್ಟವಾಗಿ ಹೇಳಬಹುದು. ಇಲ್ಲೇ ಸಭೆಯನ್ನು ಕರೆಯಿರಿ. ಇನ್ನು ನಮ್ಮ ಮತಕ್ಷೇತ್ರದಲ್ಲಿ ಕೆಲವು ಕಡೆ ನಮ್ಮ ಹತ್ತಿರ bus stand up-gradation ಆಗಬೇಕು. ಏಕೆಂದರೆ ನೀವು ಹೊಸ ಬಸ್‌ಗಳನ್ನು ಕೊಟ್ಟರೆ appreciate ಮಾಡುತ್ತೇವೆ. We have to strengthen the Public Transport. ಇವತ್ತು ಬಾಂಬೆ ಲೋಕಲ್ ಏನಿದೆ, ಬಾಂಬೆಯಲ್ಲಿರತಕ್ಕಂಥ system, one of th best in the country. ಆ ರೀತಿ ಬೆಂಗಳೂರಿನಲ್ಲಿಯೂ ಸಾಕಷ್ಟು improvement ಆಗಿದೆ. ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಆರ್. ಅಶೋಕ್ (ಮಾನ್ಯ ಉಪ ಮುಖ್ಯಮಂತ್ರಿಗಳು) :– ತಪ್ಪು, ಬಾಂಬೆ ಅಲ್ಲ, ಬೆಂಗಳೂರು best in the country. Best award ಬಂದಿರುವುದು ಬೆಂಗಳೂರಿಗೆ. ಕರ್ನಾಟಕಕ್ಕೆ best award ಬಂದಿರುವುದು. ನಾನು ಅಭಿನಂದನೆ ಸಲ್ಲಿಸುತ್ತೇನೆ. ಗುಲ್ಬರ್ಗಾ division ನಲ್ಲಿ ಖರ್ಗೆಯವರಿದ್ದಾಗ tax exemption ಕೊಟ್ಟರು. ಇವತ್ತು ಗುಲ್ಬರ್ಗಾ division ಏನಾದರೂ ಒಳ್ಳೆಯ ದಾರಿಯಲ್ಲಿ ಹೋಗುತ್ತಿದೆ, ಸಾರಿಗೆ ವ್ಯವಸ್ಥೆ ಬದಲಾವಣೆ ಆಗುತ್ತಿದೆ ಎಂದರೆ ಅವತ್ತು exemption ಕೊಟ್ಟಿದ್ದರಿಂದ. ಅದಾದ ಮೇಲೆ ನಮ್ಮ ಸರ್ಕಾರ ಕಳೆದ ನಾಲ್ಕು ವರ್ಷಗಳಿಂದ tax exemption ಅನ್ನು ಕೊಟ್ಟಿದ್ದೀರಿ. ಹುಬ್ಬಳ್ಳಿಗೆ compare ಮಾಡಿದರೆ Gulbarga is very very better. Positive ಆಗಿ ಕೆಲಸ ಮಾಡುತ್ತಿದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :–ಧನ್ಯವಾದಗಳು, ಇನ್ನೂ ಸ್ವಲ್ಪ ಸುಧಾರಣೆ ಮಾಡಿದರೆ ನಮಗೆ ಇನ್ನೂ ಸಹಕಾರವಾಗುತ್ತದೆ. ಏಕೆಂದರೆ ನನಗೆ ಬಲವಾದ ನಂಬಿಕೆ ಇದೆ. Public Transport System ಅನ್ನು ನಾವು strengthen ಮಾಡಬೇಕು. ಈಗೇನಾಗುತ್ತಿದೆ ಅಂದರೆ ಈ ಜಾಗತೀಕರಣದಿಂದ ಎಲ್ಲರ ಹತ್ತಿರ ಕಾರುಗಳಿವೆ, ಎಲ್ಲರೂ ಬಹಳ ಶ್ರೀಮಂತರಾಗಿಬಿಟ್ಟಿದ್ದಾರೆ. The gap between rich and poor has increased so much that everybody is owning four four cars. ಹಣವಿದ್ದವರು ಐದು, ಆರು ಕಾರುಗಳನ್ನು ಇಟ್ಟುಕೊಂಡಿದ್ದಾರೆ. ಪಾಪ, ಬಡವನ ಹತ್ತಿರ ಒಂದು ಸೈಕಲ್, ಮೋಟರ್ ಸೈಕಲ್ ಸಹ ಇಲ್ಲ. ಅವನು ಇನ್ನು ಬಸ್ ಮೇಲೆ ಅವಲಂಬಿತನಾಗಿದ್ದಾನೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದು ಕೇವಲ ಶ್ರೀಮಂತರಿಗೋಸ್ಕರ ಅಲ್ಲ ಅಧ್ಯಕ್ಷರೆ, ಇಲ್ಲಿರುವ ಬಡವರಿಗೆ ಒಳ್ಳೆಯ ಬದುಕು ಕೊಡಬೇಕಾಗಿದೆ. This is our priority. This should be our priority. So, Public Transport System ಅನ್ನು ನಾವು strengthen ಮಾಡಬೇಕು. ಬಡವರಿಗೆ ಅನುಕೂಲ ಮಾಡಬೇಕು. ಅದರಿಂದ ನಮಗೆ ನಷ್ಟವಾದರೂ ಪರವಾಗಿಲ್ಲ. ಹಾಗಾಗಿ ನೀವು ದಯವಿಟ್ಟು ನಿಮ್ಮ MD ಗಳಿಗೆ directions ಕೊಡಿ. ನಮಗೆ ಲಾಸ್ ಆಗುತ್ತದೆಂದು ಹೇಳಬಾರದು. ನೀವು ಅಲ್ಲಿ ಬೆಂಗಳೂರಿನಲ್ಲಿ ಹಣ ಗಳಿಸುತ್ತಿದ್ದೀರಲ್ಲಾ, ನೀವು ಹಳ್ಳಿ ಪ್ರದೇಶದಲ್ಲಿ ಸ್ವಲ್ಪ ಬಡವರಿಗೆ ಸಹಾಯ ಮಾಡಿ, ನಿಮಗೇನೂ ಕಷ್ಟವಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, Public Transport System .... ಅಧ್ಯಕ್ಷರೆ ಇನ್ನೂ ಬಹಳಷ್ಟಿದೆ. ಇನ್ನೂ ಸಮಯ ಇದೆ. ಇನ್ನೂ ಬಹಳಷ್ಟು ಜನರಿದ್ದಾರೆ. ಚರ್ಚೆ ಮಾಡೋಣ. ಇನ್ನೂ ಸ್ವಲ್ಪ ಒಂದು ಗಂಟೆ.

ಅಧ್ಯಕ್ಷರು :- ಮಾತನಾಡಿ ಮುಗಿಸಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :-ಇನ್ನೂ ಎರಡು ಇಲಾಖೆಗಳಿವೆ. ಮಾನ್ಯ ಅಧ್ಯಕ್ಷರೆ, ನಾನು ಸುಮ್ಮನೆ ಕಾಲಹರಣ ಮಾಡುತ್ತಿಲ್ಲ. Constructive opinion ಕೊಡುತ್ತಿದ್ದೇನೆ. ಕಂದಾಯ ಇಲಾಖೆ ಬಗ್ಗೆ ಇದೆ. ಜಯಚಂದ್ರರವರು ಮಾತನಾಡಿದ್ದಾರೆ. ಕಂದಾಯ ಇಲಾಖೆಯ ಬಗ್ಗೆ ನಾನು ಜಾಸ್ತಿ discuss ಮಾಡಲಿಕ್ಕೆ ಹೋಗುವುದಿಲ್ಲ. ಏಕೆಂದರೆ ಬರಗಾಲದ ಮೇಲೆ ಸುಧೀರ್ಘವಾಗಿ ಚರ್ಚೆಯಾಗಿದೆ. ಒಂದೇ ಒಂದು ನನ್ನ ಸಲಹೆ ಇದೆ. ಏನೆಂದರೆ Stamp and Registration ಕಂದಾಯ ಇಲಾಖೆಯಡಿ ಬರುತ್ತದೆ. Land guidance value ಬಗ್ಗೆ ಜಯಚಂದ್ರರವರು ಹೇಳಿದರು. ನೀವು ಭೂಮಿಯನ್ನು ಹೇಗೆ ಖರೀದಿ ಮಾಡುತ್ತೀರಿ ? Land guidance value is so low in rural area.ನಮ್ಮ ಕಡೆ ಒಂದು ಎಕರೆಗೆ Land guidance value 40,000 ರೂ.ಗಳಿವೆ. ಆದರೆ ಬೆಂಗಳೂರಿನಲ್ಲಿರುವ Land guidance value 40 ಲಕ್ಷ ರೂ.ಗಳು, 30 ಲಕ್ಷ ರೂ.ಗಳು. ಇದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ನಾನು ಒಂದು ಸಾರಿ ಆ ಇಲಾಖೆಯನ್ನು Land Guidance Value ವನ್ನು ಯಾವ ಆಧಾರದ ಮೇಲೆ ನೀವು ಫಿಕ್ಸ್ ಮಾಡುತ್ತೀರೆಂದು ಕೇಳಿದೆ. What is the criteria ? Land guidance value fix ಮಾಡುವುದಕ್ಕೆ ಮಾನದಂಡವೇನಿದೆ ? ನಮ್ಮ ಕಡೆ ಇರುವ ಭೂಮಿ ಫಲವತ್ತಾಗಿದೆ, ಒಳ್ಳೆಯ ಬೆಳೆ ಬೆಳೆಯುವಂತಹ ಭೂಮಿಯಾಗಿದ್ದರೂ ಅಲ್ಲಿ Land guidance value 40,000 ರೂ.ಗಳಿವೆ. ಆದರೆ ಬೆಂಗಳೂರಿನ ಸುತ್ತಮುತ್ತ ಇರುವುದು ಬರಡು ಭೂಮಿಯಾಗಿದ್ದು ಇಲ್ಲಿ ಏನೊಂದು ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಆದರೆ, Land guidance value 40 ಲಕ್ಷ ರೂ.ಗಳಿವೆ. ನಮ್ಮ ಕಡೆ Public propose ಗೆ land purchase ಮಾಡಬೇಕಾದರೆ ಯಾವ ರೈತರೂ ಕೂಡ ಎಕರೆಗೆ 40,000 ರೂ.ಗಳಿಗೆ ಡಿ.ಸಿ.ಗೆ request ಮಾಡಿದರೆ ಅವರು three times enhance ಮಾಡಿ ಒಂದೂವರೆ ಲಕ್ಷಕ್ಕೆ ಯಾರೂ ಕೊಡುವುದಿಲ್ಲ. Kindly enhance the Land guidance value. ಹಳ್ಳಿ ಪ್ರದೇಶದಲ್ಲಿ land guidance value enhance ಮಾಡಿ, enhance ಮಾಡುವಾಗ ಕೆಲವು ಜನ objection ಮಾಡುತ್ತಾರೆ. ಲ್ಯಾಂಡ್ purchase ಮಾಡುವಾಗ ನಮ್ಮ ಸ್ಟ್ಯಾಂಪ್ ಡ್ಯೂಟಿಯನ್ನು ಶೇ. ಎಷ್ಟು ಪರ್ಸೆಂಟ್ ಮಾಡಿದ್ದೀರಿ, ಅದಕ್ಕೆ ಬಹಳ ಹಣ ಕೊಡಬೇಕಾಗುತ್ತದೆ. Kindly reduce the stamp duty and increase the land guidance value. ನೀವು ಈ

ರೀತಿ ಮಾಡಿದರೆ ರೈತರಿಗೆ ಮನೆಯಲ್ಲಿಯೇ ಕೂರಿಸಿ ಆದಾಯ ಹೆಚ್ಚು ಮಾಡಿದಂತಾಗುತ್ತದೆ. ಅವರ ಲ್ಯಾಂಡ್ ಹೋಲ್ಡಿಂಗ್ಸ್ ಪ್ರಕಾರ ಅವರಿಗೆ ಜಾಸ್ತಿ ಆದಾಯ ಬಂದಂತಾಗುತ್ತದೆ. 10 ಎಕರೆ ಭೂಮಿಯನ್ನು ಬ್ಯಾಂಕಿನಲ್ಲಿ ಅಡವಿಟ್ಟರೆ 5 ಲಕ್ಷ ರೂ.ಗಳನ್ನು ಸಾಲ ಕೊಡುವುದಕ್ಕೆ ಯಾರೂ ತಯಾರಿರುವುದಿಲ್ಲ. ಆದರೆ, ಬೆಂಗಳೂರಿನಲ್ಲಿ 30x40 ಅಳತೆಯ ಒಂದು ನಿವೇಶನವಿದ್ದರೆ ಅದಕ್ಕೆ 50 ಲಕ್ಷ ರೂ.ಗಳ ಸಾಲ ಕೊಡುವುದಕ್ಕೆ ತಯಾರಿದ್ದಾರೆ. ರಾಜ್ಯದಲ್ಲಿರುವ ರೈತರಿಗೆ, ಬಡವರಿಗೆ ಪಾಲೇ ಇಲ್ಲವೇ ? ಯಾರೂ ಇದನ್ನು ಕೇಳುವವರೇ ಇಲ್ಲವೇ ? ಈ ಮಾತನ್ನು ನಾನು ಕಳೆದ ಮೂರು ವರ್ಷಗಳಿಂದ ಹೇಳುತ್ತಿದ್ದೇನೆ. ಆದರೂ ಮಾನ್ಯ ಕಂದಾಯ ಸಚಿವರು ಇದನ್ನು ಕೇಳುತ್ತಿಲ್ಲ. land guidance value ಜಾಸ್ತಿ ಮಾಡದೇ ಹೋದರೆ ಆಶ್ರಯ ಮನೆಗಳಿಗೆ ಭೂಮಿ ಸಿಗುವುದಿಲ್ಲ. ಆಸ್ಪತ್ರೆಗಳಿಗೆ ಭೂಮಿ ಸಿಗುವುದಿಲ್ಲ, ಕಾಲೇಜ್‌ಗಳನ್ನು ಕಟ್ಟಬೇಕಾದರೆ ಭೂಮಿ ಸಿಗುವುದಿಲ್ಲ. ಹಳ್ಳಿಯಾಗಲಿ, ನಗರ ಪ್ರದೇಶಗಳಲ್ಲಾಗಲಿ ಭೂಮಿ ಸಿಗುತ್ತಿಲ್ಲ. ಇವತ್ತು ನೀವು ನಿರ್ಬಂಧ ಹಾಕುತ್ತೀರಿ. Deputy Commissioner ಅವರು three timesಗಿಂತ ಜಾಸ್ತಿ enhancement ಕೊಡುವುದಿಲ್ಲವೆನ್ನುವುದನ್ನಾದರೂ ಸಡಿಲ ಮಾಡಿ. Public purposesಗೆ market value ಅಲ್ಲಿ purchase ಮಾಡುತ್ತೇವೆಂದು ಸ್ಟೇಟ್‌ಮೆಂಟ್ ಕೊಡಿ. ಈ ರೀತಿ ಮಾಡುತ್ತಿಲ್ಲವಾದ್ದರಿಂದ ಪ್ರಗತಿ ಕೂಡ ಆಗುತ್ತಿಲ್ಲ. ಇದನ್ನು ಸರಿಪಡಿಸಬೇಕೆಂಬುದೇ ನನ್ನ ಮನವಿ.

ಇಂಧನ ಇಲಾಖೆ ಬಗ್ಗೆ ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಎರಡೇ ಡರಡು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಇವತ್ತು ಕೂಡ ನಮ್ಮ ರಾಜ್ಯದಲ್ಲಿ ನಿಮ್ಮ transmission I ಲಾಸ್ ಎಷ್ಟಿದೆ ಗೊತ್ತಿದೆಯೇ ? 30% ನಷ್ಟಿದೆ. Distribution and Transmission Loss is 30% highest in the Country. ಇದನ್ನು ನೀವು ಒಂದು ವೇಳೆ reduce ಮಾಡಬೇಕಾದರೆ, you should improve the system. 33% ಸಬ್ ಸ್ಟೇಷನ್‌ನ್ನು ಜಾಸ್ತಿ ಮಾಡಿ. 110 ಕೆ.ವಿ. ಸಬ್ ಸ್ಟೇಷನ್‌ನ್ನು ಮಾಡಿ, ಲೈನ್ improvement ಮಾಡಿ. 11 ಕೆ.ವಿ. ಲೈನ್‌ನ್ನು replace ಮಾಡಿ, re-conducting ಮಾಡಿ. ಹಳ್ಳಿಗಳಲ್ಲಿ ಸುಮಾರು 40 ವರ್ಷಗಳ ಹಿಂದೆ ಹಾಕಿರುವ ವೈರ್‌ಗಳನ್ನು ಇಂದಿಗೂ ಬದಲಾವಣೆ ಮಾಡಿಲ್ಲ, ಅವುಗಳು ಕಡಿದು ಬೀಳುವುದರಿಂದ ನಮ್ಮ ರೈತರು ಸಾಯುತ್ತಿದ್ದಾರೆ. ಅದನ್ನು ಬದಲಾವಣೆ ಮಾಡಿ. ಹೀಗಿರುವಂತಹ ವ್ಯವಸ್ಥೆಯನ್ನು ಸುಧಾರಣೆ ಮಾಡುವುದರಿಂದ ನಿಮ್ಮ transmission loss ಕಡಿಮೆಯಾಗುತ್ತದೆ. ಪ್ರತಿಯೊಂದು ಟ್ರಾನ್ಸ್‌ಫಾರ್ಮರ್‌ಗೆ ಒಂದು ಮೀಟರ್‌ನ್ನು ಅಳವಡಿಸಬೇಕೆಂದು ಕಳೆದ ಸಾರಿ ಅಧಿವೇಶನದಲ್ಲಿಯೇ ಸಲಹೆ

ನೀಡಿದ್ದೇನೆ. ಕೆಲವು ಕಡೆಗಳಲ್ಲಿ oppose ಮಾಡುತ್ತಿದ್ದಾರೆ. ಏಕೆಂದರೆ ನೀವು ಏನು blame ಮಾಡುತ್ತಿದ್ದೀರೆಂದರೆ, ನಮ್ಮಲ್ಲೇನು theft ಇದೆ, ಅದನ್ನೆಲ್ಲಾ ರೈತರ ಮೇಲೆ ಹಾಕುವುದು ಅಥವಾ ಏನು ಅಗ್ರಿಕಲ್ಚರ್‌ಗೆ ಕೊಟ್ಟಿದೆಯೋ ಅದರ ಮೇಲೆ ಹಾಕುತ್ತಾರೆ. Theft ಆಗುವುದು Industries ಹಾಗೂ town ಗಳಲ್ಲಿ ಮಾತ್ರ, ರೈತರಿಂದ ಯಾವುದೇ ರೀತಿಯ theft ಆಗುತ್ತಿಲ್ಲ. ನೀವು ಪುಕ್ಕಟೆಯಾಗಿ ವಿದ್ಯುತ್ ಕೊಡುತ್ತೇವೆಂದು ಏನು ಹೇಳುತ್ತಿದ್ದೀರಿ, ಅದನ್ನು ಕೊಡಬೇಡಿ, ಬೇಕಾದರೆ ಚಾರ್ಜ್ ಮಾಡಿ. ಒಳ್ಳೆಯ ಗುಣಮಟ್ಟದ ವಿದ್ಯುತ್ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ ಪ್ರತಿ ಸಾರಿ ನಾವು ಗ್ರಾಮೀಣ ಪ್ರದೇಶಗಳಿಗೆ ಹೋದಾಗ ರೈತರನ್ನು face ಮಾಡಬೇಕಾಗುತ್ತದೆ. ಏನ್ರೀ 6 ಗಂಟೆಗಳ ವಿದ್ಯುತ್ ಕೊಡುತ್ತಿಲ್ಲ., 3 ಗಂಟೆಗಳ ಕಾಲ ವಿದ್ಯುತ್ ಕೊಟ್ಟು, ಇದರಿಂದ ಯಾವುದೇ ಬೆಳೆ ಬೆಳೆಯುವುದಕ್ಕೂ ಸಹ ಆಗುತ್ತಿಲ್ಲ ಎಂದು ಹೇಳುತ್ತಾರೆ. ಇಂದು ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಓದುವುದಕ್ಕೂ ಆಗುತ್ತಿಲ್ಲ. ಏಕೆಂದರೆ ಸಿಂಗಲ್ ಫೇಸ್ ಕರೆಂಟ್ ಸಹ ಕೊಡುತ್ತಿಲ್ಲ. ಈಗೇನು 'ನಿರಂತರ ಜ್ಯೋತಿ' ಎಂಬ ಒಂದು ಸ್ಕೀಮ್‌ನ್ನು ತಂದಿದ್ದಾರೆ ಅದು ಬಹಳ ವಿಳಂಬವಾಗಿ ನಡೆಯುತ್ತಿದೆ. ಆದರೆ ನಿರಂತರ ಜ್ಯೋತಿ is a good scheme. I don't differ with that, Implementation ಸರಿಯಾದ ರೀತಿಯಲ್ಲಿ ಆಗಬೇಕು. ಮೂರು ವರ್ಷಗಳಲ್ಲಿ implement ಆಗುವುದನ್ನು ನೀವು ಆರಾರು ವರ್ಷಗಳಿಗೆ ತೆಗೆದುಕೊಂಡು ಹೋದರೆ ಯಾವಾಗ ಅದು ಮುಗಿಯುವುದು ? ಆದಕಾರಣ ಅದನ್ನು ಶೀಘ್ರದಲ್ಲಿ ಮುಗಿಸುವ ಕೆಲಸವನ್ನು ಮಾಡಬೇಕು. ನನಗೆ ಬಹಳ surprise ಆಗಿರುವ ವಿಷಯವೇನೆಂದರೆ ಇವತ್ತು we have spent nearly Rs. 10,000 crores for power purchase. ಈ ರಾಜ್ಯದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಹಣವನ್ನು ವಿದ್ಯುತ್ ಖರೀದಿ ಮಾಡುವುದಕ್ಕೆ ಉಪಯೋಗ ಮಾಡಿದ್ದೇವೆಂದರೆ ಖಂಡಿತವಾಗಿ there is some malpractice in this. ಇದರ ಬಗ್ಗೆ ತನಿಖೆಯಾಗಬೇಕು, ಇದಕ್ಕೊಂದು ಸದನ ಸಮಿತಿ ರಚನೆಯಾಗಬೇಕು. ಈ ರಾಜ್ಯದ ಸುಮಾರು 9 ರಿಂದ 10 ಸಾವಿರ ಕೋಟಿ ರೂ.ಗಳ ಹಣವನ್ನು ನಾವು ವಿದ್ಯುತ್ ಖರೀದಿ ಮಾಡುವುದಕ್ಕೆ ಉಪಯೋಗಿಸುತ್ತಿದ್ದೇವೆಂದರೆ ನಾವು ಯಾರ್‍ಯಾರ ಹತ್ತಿರ ವಿದ್ಯುತ್ ಖರೀದಿ ಮಾಡುತ್ತಿದ್ದೇವೆ, ಯಾವ ದರದಲ್ಲಿ ವಿದ್ಯುತ್ ಖರೀದಿ ಮಾಡುತ್ತಿದ್ದೇವೆ, ಇದರಲ್ಲಿ ಪಾರದರ್ಶಕತೆ ಇಲ್ಲ. ಈ ರಾಜ್ಯದ ಜನ ಅನುಮಾನದಿಂದ ನೋಡುವ ರೀತಿ. ಇವತ್ತು ಈ ರಾಜ್ಯದಲ್ಲಿ ವಿದ್ಯುತ್ ಖರೀದಿ ನಡೆಯುತ್ತಿದೆ. ಯಾರ್‍ಯಾರ ಹತ್ತಿರ power purchase ಮಾಡುತ್ತಿದ್ದೀರಿ, ಏನೇನು ದರದಲ್ಲಿ purchase ಮಾಡುತ್ತಿದ್ದೀರಿ ಎಂಬುದನ್ನು

ತಿಳಿಯುವ ಕಾರಣದಿಂದ ಒಂದು ಸದನ ಸಮಿತಿಯನ್ನು ಮಾಡಬೇಕು. ಇದರಲ್ಲಿ ಖಂಡಿತವಾಗಿಯೂ ಅವ್ಯವಹಾರ ನಡೆಯುತ್ತಿದೆ.

ಶ್ರೀ ಸಿದ್ದರಾಮಯ್ಯ :- ಹೈ ಕಾಸ್ಟ್‌ನಲ್ಲಿ ಪವರ್ purchase ಮಾಡುತ್ತಿದ್ದಾರೆ, ಖಾಸಗಿಯವರು ಮಾಡುತ್ತಿರುವ ಸಕ್ಕರೆ ಕಾರ್ಖಾನೆಗಳು ಹಾಗೂ ಬೇರೆ ಬೇರೆಯವೆಲ್ಲ ಇವೆ. ಅಲ್ಲಿ ಬಿಟ್ಟು ಬೇರೆ ಕಡೆ ಖರೀದಿ ಮಾಡುತ್ತಿದ್ದಾರೆ. ಏಕೆ ಹೀಗೆ ಮಾಡುತ್ತಿದ್ದಾರೆ ? ಇಷ್ಟೊಂದು costly power ನ್ನು ಏಕೆ ಖರೀದಿ ಮಾಡುತ್ತಿದ್ದಾರೆ ? ಇಷ್ಟೆಲ್ಲಾ ಖರೀದಿ ಮಾಡಿದರೂ ಸಹ ಕೇವಲ ಹಗಲು ವೇಳೆಯಲ್ಲಿ 2-3 ಗಂಟೆಗಳ ಕಾಲ ಮಾತ್ರ ಏಕೆ ವಿದ್ಯುತ್ ಕೊಡತ್ತಿದ್ದೀರಿ. ಇಲ್ಲಿಯವರೆಗೆ ಸುಮಾರು 9 ಸಾವಿರ ಕೋಟಿ ರೂ.ಗಳ ವಿದ್ಯುತ್ purchase ಮಾಡಿದರೂ ರೈತರಿಗೆ ಪವರ್ ಇಲ್ಲ, ಪಂಪ್‌ಸೆಟ್ ಓಡುವುದಿಲ್ಲವೆಂದರೆ ಏಕೆ ಇಷ್ಟೊಂದು ಹಣವನ್ನು ಖರ್ಚು ಮಾಡಿದ್ದೀರಿ ?

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಸುಮಾರು ಎಷ್ಟೋ ಮೆಗಾ ವ್ಯಾಟ್‌ಗಳ ಲೆಕ್ಕ ಸಿಗುತ್ತಿಲ್ಲವೆಂದು ಈ ಹಿಂದೆ ಮಾನ್ಯ ಇಂಧನ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಎಲ್ಲಿಗೆ ಹೋಗುತ್ತಿದೆ ಎನ್ನುವುದೇ ಇಂಧನ ಸಚಿವರಿಗೆ ಗೊತ್ತಿಲ್ಲ, ಮಾನ್ಯ ಇಂಧನ ಸಚಿವರೇ ಈ ರೀತಿ ಹೇಳಿದರೆ ರಾಜ್ಯದ ಜನರಿಗೆ ಸಂಶಯ ಬರುವುದಿಲ್ಲವೇ ? ಮಾನ್ಯ ಇಂಧನ ಸಚಿವರೇ ಈ ರೀತಿ ಹೇಳಿದರೆ ನಾವು ಏನೆಂದು ಅರ್ಥ ಮಾಡಿಕೊಳ್ಳಬೇಕು. Power purchase ಗೆ ಇಂದು ಅಗ್ರಿಮೆಂಟ್ ಆಗಿರುವುದು ರಿವೈಸ್ ಆಗುತ್ತಿದೆ. ಇದು ಯಾವ ಕಾರಣಕ್ಕೆ ಆಗುತ್ತಿದೆ, what is the reason behind it ? ಕಡಿಮೆ ದರದಲ್ಲಿ ವಿದ್ಯುತ್ ಕೊಡುವುದಕ್ಕೆ ರೆಡಿಯಿರುವ ಕಂಪನಿಗಳ ಹತ್ತಿರ purchase ಮಾಡುತ್ತಿಲ್ಲ. ಹೈ ಕಾಸ್ಟ್ ವಿದ್ಯುತ್ ಪರ್ಚೇಸ್ ಮಾಡುವುದಕ್ಕೆ ಸರ್ಕಾರಕ್ಕೆ ಏನು commitment ಇದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಖಂಡಿತವಾಗಿಯೂ ಇದರ ಬಗ್ಗೆ ಸದನ ಸಮಿತಿ ರಚನೆಯಾಗಬೇಕು ಹಾಗೂ ತನಿಖೆಯಾಗಬೇಕು. ಇದೇ ರೀತಿಯಲ್ಲಿ ಮುಂದುವರೆದರೆ ಮುಂದೆ ಎಂದೂ situation improve ಆಗುವುದಿಲ್ಲ. ಏಕೆಂದರೆ ಇದರಲ್ಲಿ ಕೆಲವು ಅಧಿಕಾರಿಗಳು, ಜನಪ್ರತಿನಿಧಿಗಳು gang up ಆಗಿ ನಮ್ಮ ರಾಜ್ಯದಲ್ಲಿ ಶಾಶ್ವತವಾಗಿ ವಿದ್ಯುತ್ ಅಭಾವವನ್ನು maintain ಮಾಡುತ್ತಾರೆ. ಏಕೆಂದರೆ ಅವರ ಆದಾಯ ಕಡಿಮೆ ಆಗಬಾರದೆಂಬ ದೃಷ್ಟಿಯಲ್ಲಿ ಶಾಶ್ವತವಾಗಿರುವ ಅಭಾವವನ್ನು ಕ್ರಿಯೇಟ್ ಮಾಡುವುದಕ್ಕೆ ರೆಡಿಯಾಗುತ್ತಾರೆ. ಆದ್ದರಿಂದ ಸರ್ಕಾರ ನಮಗೆ ಎಷ್ಟು ವಿದ್ಯುತ್

ಅವಶ್ಯಕತೆಯಿದೆಯೋ, ಅಷ್ಟಕ್ಕೆ ಅನುಗಣವಾಗಿ ಮಾತ್ರ ಉತ್ಪಾದನೆ ಮಾಡುವುದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಸರ್ಕಾರ ಕಳೆದ ಐದು ವರ್ಷದಲ್ಲಿ ವಿದ್ಯುತ್ತಿನ ಯಾವುದೇ ಒಂದು ಹೊಸ ಯೋಜನೆಯನ್ನು ಅನುಷ್ಠಾನ ಮಾಡಿಲ್ಲ, ಒಂದು ಮೆಗಾವ್ಯಾಟ್‌ನ್ನೂ ಸಹ ಇವರು ಹೊಸದಾಗಿ ಉತ್ಪಾದನೆ ಮಾಡಿರುವುದಿಲ್ಲ. ಇದರ ಹಿಂದೆ ದುರುದ್ದೇಶವಿರಬಹುದು ಎನ್ನುವ ಸಂಶಯ ನನಗೆ ಬರುತ್ತಿದೆ. ಹೆಚ್ಚಿನ ವಿದ್ಯುತ್‌ನ್ನು ಉತ್ಪಾದನೆ ಮಾಡಿದರೆ ಪರ್ಚೇಸ್ ಮಾಡುವುದು ಕಡಿಮೆ ಆಗುತ್ತದೆ ಎನ್ನುವ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆಂಬ ಸಂಶಯ ಈ ರಾಜ್ಯದ ಜನತೆಗೆ ಬರುತ್ತಿದೆ. ಆದಕಾರಣ ಇದರ ಬಗ್ಗೆ ಒಂದು ಸದನ ಸಮಿತಿಯನ್ನು ಮಾಡಬೇಕೆಂದು ನನ್ನ ಸಲಹೆ.

ಆಹಾರ ಇಲಾಖೆಯಲ್ಲಿ ಇವತ್ತಿನ ದಿನಗಳಲ್ಲಿ ಪಡಿತರದಲ್ಲಿ ಎಷ್ಟು ಗೊಂದಲವಿದೆ ಎನ್ನುವ ಬಗ್ಗೆ ಈಗಾಗಲೇ ಬಹಳಷ್ಟು ಚರ್ಚೆಯಾಗಿದೆ. ಆದರೆ ಒಂದೇ ಒಂದು ಸಲಹೆ ಇದೆ. ಇವತ್ತು ಈ ರಾಜ್ಯದಲ್ಲಿ ಬರಗಾಲವಿದೆ. ಈ ಬರಗಾಲದಲ್ಲಿ ಏನು ಮಾಡಬೇಕೆಂದರೆ We have to give food security to the people. ವಿಶೇಷವಾಗಿ ಬಡವರಿಗೆ, ಸಾಮಾನ್ಯ ಜನರಿಗೆ, ಆದಾಯಕ್ಕಿಂತ ಕಡಿಮೆ ಅಂದರೆ ಬಡತನ ರೇಖೆಗಿಂತ ಕಡಿಮೆ ಇರುವವರಿಗೆ, ಯಾರೇ ವ್ಯಕ್ತಿಯಾಗಲಿ ಈ ರಾಜ್ಯದಲ್ಲಿ ಆಹಾರ ಧಾನ್ಯಗಳು ಬೇಕೆಂದು ಬಂದಾಗ ಅವರಿಗೆ ಮುಕ್ತವಾಗಿ ಕೊಡುವಂತಹ ವ್ಯವಸ್ಥೆಯಾಗಬೇಕು. ಇದಕ್ಕೆ ಒಂದೇ ಒಂದು ಸಲಹೆ ಎಂದರೆ ಈ ವರ್ಷ ಸರ್ಕಾರ APL, BPL ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ, ನಗರ ಪ್ರದೇಶಗಳಲ್ಲಿರತಕ್ಕಂಥಹ ಯಾರೇ ಆಗಲಿ ರೇಷನ್ ಡಿಪೋಗಳಿಗೆ ಬಂದರೆ ನೀವು ಅವರಿಗೆ subsidized food-grains ನ್ನು ಕೊಡಬೇಕು. ಇದರಿಂದ ಸರ್ಕಾರಕ್ಕೆ ದೊಡ್ಡ ಹೊಣೆಯೇನೂ ಆಗುವುದಿಲ್ಲ, ಏಕೆಂದರೆ ಈಗ Right to Food Act ಬಂದ ಮೇಲೆ, ಕೇಂದ್ರ ಸರ್ಕಾರದವರೇ ಸುಮಾರು 65% ರಷ್ಟು food-grains ಕೊಡುತ್ತಿದ್ದಾರೆ. ಮುಂದೆ ನೀವು 100%ನ್ನು ಜನರಿಗೆ ಕೊಡುವಂತಹದ್ದನ್ನು ಮಾಡಬಹುದು. ಇದರಿಂದ ಸರ್ಕಾರಕ್ಕೆ ಬಹಳ ಭಾರವೇನೂ ಆಗುವುದಿಲ್ಲ. ತಮಿಳುನಾಡು ರಾಜ್ಯದಲ್ಲಿ APL, BPL ಕುಟುಂಬಗಳಿಗೆಲ್ಲರಿಗೂ subsidized food-grains ಕೊಡುತ್ತಿದ್ದಾರೆ. ಇದು ಎಲ್ಲಾ ನಾಗರೀಕ ಸರ್ಕಾರಗಳ ಆದ್ಯತೆಯಾಗಿರಬೇಕು. ನಮ್ಮ ದೇಶದಲ್ಲಿ ಯಾವುದೇ ಒಬ್ಬ ವ್ಯಕ್ತಿ, ಯಾರೇ ಆಗಿರಲಿ ಉಪವಾಸದಿಂದ ಸಾಯಬಾರದು, ಉಪವಾಸದಿಂದ ಮಲಗಬಾರದು. ಕೆಲವು ಜನ underserving ಇರುವವರಿಗೆ ಕೊಟ್ಟರೂ ಪರವಾಗಿಲ್ಲ. ಆದರೆ deserving ಇರುವ ಒಬ್ಬೇ ಒಬ್ಬ ವ್ಯಕ್ತಿಗೂ ಕೂಡ ಈ food grains ನಿಂದ ವಂಚನೆಯಾಗಬಾರದು, ಅವನು

ಉಪವಾಸ ಮಲಗಬಾರದು. ಈ ರೀತಿಯ ವ್ಯವಸ್ಥೆಯನ್ನು ಆಹಾರ ಇಲಾಖೆಯವರು ಮಾಡಬೇಕೆಂಬುದೇ ನನ್ನ ಸಲಹೆ.

ಪಶುಸಂಗೋಪನೆ ಇಲಾಖೆಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಇವತ್ತು ಮೇವಿನ ಕೊರತೆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದನ್ನು ಈಗ ಏನೂ ಮಾಡುವುದಕ್ಕಾಗುವುದಿಲ್ಲ. ಸರ್ಕಾರ ಇದನ್ನು ಯಾವ ರೀತಿ ನಿಭಾಯಿಸುತ್ತದೆ ಎನ್ನುವುದು ನನಗಂತೂ ಗೊತ್ತಿಲ್ಲ. I am at loss of words. ಏಕೆಂದರೆ this is going to be the situation ಎಂದು ಈ ಸಲಹೆಗಳನ್ನು ನಾವು 6 ತಿಂಗಳ ಹಿಂದೆಯೇ ಕೊಟ್ಟಿದ್ದೇವೆ. ಆ ಸಮಯದಲ್ಲಿ ಇಲಾಖೆ ಎಚ್ಚೆತ್ತುಕೊಳ್ಳಲಿಲ್ಲ, ಯಾವುದೇ ಪ್ರಿಪರೇಷನ್ ಮಾಡಿಲ್ಲ. ಇಂದು ಯಾವ ರೀತಿ ಮೇವನ್ನು ಸಂಗ್ರಹಿಸುತ್ತಾರೆಂಬುದು ನನಗೆ ಗೊತ್ತಿಲ್ಲ. it is left to the Government and concerned department to find a solution to this.

ಶಿಕ್ಷಣ ಸಚಿವರು ಸದನದಲ್ಲಿಯೇ ಇದ್ದಾರೆ. ನಾನೇನೂ ದೊಡ್ಡ ನಿರೀಕ್ಷೆಯಿಂದ ಹೇಳುತ್ತಿಲ್ಲ. ಏಕೆಂದರೆ ಈ ಸದನದಲ್ಲಿ ಬೆಳಿಗ್ಗೆಯಿಂದಲೂ ಬಹಳಷ್ಟು ಚರ್ಚೆಯಾಗಿದೆ. ಇಂದು ಪ್ರಾಥಮಿಕ ಶಿಕ್ಷಣದಲ್ಲಿ ಕೇಂದ್ರ ಸರ್ಕಾರವು Right to Education Bill ಅನ್ನು ಜಾರಿಗೆ ತಂದ ಮೇಲೆ 6–14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ it is a fundamental right of every child. Education is a fundamental right. ಅದಕ್ಕಾಗಿ, ಯಾವುದೇ ಹಳ್ಳಿ ಪ್ರದೇಶ, ಗುಡ್ಡ ಗಾಡು ಪ್ರದೇಶ, ಯಾವುದೇ ತಾಂಡವಿರಲಿ, ಅಲ್ಲಿನ ಮಕ್ಕಳು ಶಾಲೆಗೆ ಹೋಗುವುದಕ್ಕೆ ಅಪೇಕ್ಷೆಪಟ್ಟರೆ ಖಂಡಿತವಾಗಿಯೂ ಅಲ್ಲಿ ಶಾಲೆಯ ವ್ಯವಸ್ಥೆಯಿರಲೇಬೇಕು. It is the responsibility of the Government, not the parents, to give a quality education to the child. ಶಿಕ್ಷಣ ಇಲಾಖೆಯಲ್ಲಿ ಇಂದು 14,000 ಹುದ್ದೆಗಳನ್ನು ತುಂಬಬೇಕಾಗಿದೆ. ಆದರೆ ತುಂಬಿಲ್ಲ, ತುಂಬುತ್ತೇವೆ, ಇಲ್ಲದಿದ್ದರೆ guest lecturers ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಶಿಕ್ಷಣ ಸಚಿವರು ಹೇಳಿದ್ದಾರೆ. ಕಳೆದ ನಾಲ್ಕು ವರ್ಷದಿಂದ ಈ ಸರ್ಕಾರ ಬಂದ ಮೇಲೆ ಒಂದೇ ಒಂದು ಹೈಸ್ಕೂಲು ಆಗಲಿ, ಜೂನಿಯರ್ ಕಾಲೇಜ್ ತೆರೆಯಲಿಲ್ಲವೆಂದು ಬಹಳ ವಿಷಾದದಿಂದ ಹೇಳುತ್ತೇನೆ. ಡಿಗ್ರಿ ಕಾಲೇಜ್ ಕೊಟ್ಟರು. ಈ ಬಗ್ಗೆ ನಾನು ಪ್ರತಿ ಸದನದಲ್ಲೂ ಈ ವರ್ಷ ಎಷ್ಟು ಜೂನಿಯರ್ ಕಾಲೇಜ್‌ಗೆ, ಹೈಸ್ಕೂಲ್‌ಗೆ ಎಷ್ಟು ಅಲೋಕೇಷನ್ ಆಗಿದೆ ಎನ್ನುವ ಪ್ರಶ್ನೆಯನ್ನು ಕೇಳುತ್ತಲೇ ಇರುತ್ತೇನೆ. ಒಂದೂ ಮಾಡಲಿಲ್ಲ. This shows the commitment of the Government towards

eduction. ಇದು ಬದಲಾಗಬೇಕು. ಇದನ್ನು ಮುಂದೆ ಸರಿಪಡಿಸುವುದಕ್ಕೆ ಇವರ ಹತ್ತಿರ ಸಮಯವೂ ಇಲ್ಲ. ಏಕೆಂದರೆ, ಬಿಜೆಪಿ ಮುಂದೆ ಅಧಿಕಾರಕ್ಕೆ ಬರುತ್ತದೆಯೆನ್ನುವುದು ಕನಸಿನಲ್ಲಿಯೂ ಕಾಣುತ್ತಿಲ್ಲ. ಆದರೆ ಮುಂದೆ ಇದನ್ನು ಸುಧಾರಣೆ ಮಾಡುವುದಕ್ಕೆ ಸಮಯವೂ ಇಲ್ಲ. ಅದಕ್ಕಾಗಿ ಇದೇ ವರ್ಷದಲ್ಲಿ ಮರು ಹೊಂದಾಣಿಕೆ ಮಾಡಿಕೊಂಡು ಹೈಸ್ಕೂಲಿಗೆ, ಜೂನಿಯರ್ ಕಾಲೇಜಿಗೆ ಸ್ವಲ್ಪ ಹಣವನ್ನು ನೀಡಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡುತ್ತಿದ್ದೇನೆ.

ಸಮಾಜ ಕಲ್ಯಾಣ ಇಲಾಖೆಯ ಸಚಿವರು ಸದನದಲ್ಲಿದ್ದರು. ಸರ್ಕಾರಕ್ಕೆ ಒಂದು ಕಳಕಳಿಯ ಮನವಿಯಿದೆ. ನಮ್ಮ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನ, ವಿಶೇಷವಾಗಿ ಯಾರೆಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು. ಪರಿಶಿಷ್ಟ ವರ್ಗದವರ ಓಣಿಯಲ್ಲಿರತಕ್ಕಂತಹ ಜನ, I can say 100% of the People are below poverty line. what is the plan of the Government for the poverty alleviation? ಇವತ್ತು ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಿರತಕ್ಕಂತಹ ಹಣ ಬಹಳ ಕಡಿಮೆಯಾಗಿದೆ. ಈ ವರ್ಗದ ಜನರಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳನ್ನು ತರಬೇಕಾಗಿದೆ. ಸಾಲ ಮನ್ನಾ ಮಾಡುವ ಸಮಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದವರು ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡಿ. ಈ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರು ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡುತ್ತೇವೆ. ಎನ್ನುವ ಕಮಿಟ್‌ಮೇಂಟ್‌ನ್ನು ತೋರಿಸಿ. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಹೊಣೆಯಾಗುವುದಿಲ್ಲ. ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ವರ್ಗದವರ ಎಷ್ಟು ಲ್ಯಾಂಡ್ ಹೋಲ್ಡಿಂಗ್ಸ್ ಬಹಳ ಕಡಿಮೆ ಇರುವುದದರಿಂದ ಆ ಎಲ್ಲಾ ಲ್ಯಾಂಡ್ ಹೋಲ್ಡಿಂಗ್‌ಗೆ ನಾವು ಇರಿಗೇಷನ್ ಫೆಸಿಲಿಟಿಯನ್ನು ಕೊಡುತ್ತೇವೆ, ಮುಖ್ಯವಾದ ವಿಚಾರಗಳಿರುವುದರಿಂದ ಉಳಿದ 15 ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ನಿಮ್ಮ ಕಮಿಟ್‌ಮೆಂಟ್ ಏನಿದೆ ಎರಡು ಮೂರು ವರ್ಷದ ಹಿಂದೆ ರಾಜ್ಯ ಸರ್ಕಾರ ಒಂದು ಸುತ್ತೋಲೆ ಹೊರಡಿಸಿತ್ತು ಅದೇನೆಂದರೆ, Pooled funds ಯಾವುದೇ ಕಾರಣಕ್ಕೂ lapsable ಅಲ್ಲ ಎನ್ನುವ ಒಂದು ಸುತ್ತೋಲೆಯನ್ನು ಕಳೆದ 2-3 ವರ್ಷಗಳ ಹಿಂದೆ ರಾಜ್ಯ ಸರ್ಕಾರದಲ್ಲಿ ಹೊರಡಿಸಲಾಗಿತ್ತು. ಒಂದು ವರ್ಷ ಪೂಲ್ಡ್ ಫಂಡ್‌ನ್ನು ನೀವು ಯಟಿಲೈಸ್ ಮಾಡದೇ ಇದ್ದರೆ It should be carried over for the next year

ಎನ್ನುವ ವಿಷಯ ತಮ್ಮ ಗಮನದಲ್ಲಿರಲಿ. ಆದರೆ ಇದು ಯಾವ ಇಲಾಖೆಯಲ್ಲಿಯೂ ಆಗುತ್ತಿಲ್ಲ. ಇವತ್ತು pooled fund ನಲ್ಲಿ ಎಷ್ಟು ಹಣ ಬರಬೇಕಿತ್ತೋ ಅಷ್ಟು ಹಣ ಬಂದಿರುವುದಿಲ್ಲ ಮತ್ತು ಬಂದಿರುವಂತಹ ಹಣವು ಸಂಪೂರ್ಣವಾಗಿ ಉಪಯೋಗವಾಗಿರುವುದಿಲ್ಲ. ಆದಕಾರಣ ಎಸ್.ಸಿ./ಎಸ್.ಟಿ. ಲ್ಯಾಂಡ್ ಎಲ್ಲೆಲ್ಲಿದೆಯೋ ಅಂತಹ ಕಡೆಗಳಲ್ಲಿ minor irrigation, lift irrigation ಗೆ ಸಂಪೂರ್ಣವಾಗಿ ನೀರಾವರಿ ಬಳಕೆಗೆ ಹೆಚ್ಚಿನ ಹಣವನ್ನು ಕೊಡಬೇಕು. This is the only way you can help them. ಬ್ಯಾಂಕಿನಲ್ಲಿ ಸಾಲ ಪಡೆಯುವುದಕ್ಕಾಗಿ ಎಸ್.ಸಿ./ಎಸ್.ಟಿ ಜನಗಾಂಗದವರು ಅರ್ಜಿಯನ್ನು ಸಲ್ಲಿಸುತ್ತಾರೆ. ನಿಗಮದಿಂದ ಸಾಲವನ್ನು ವಿತರಣೆ ಮಾಡುವ ಯೋಜನೆಗೆ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಆದರೆ ಅಲ್ಲಿನ ಟಾರ್ಗೆಟ್ ಎಷ್ಟು ಲೋ ಇದೆ ಎಂದರೆ ನಾವು ಅಲ್ಲಿ ಪಾಪ್ಯುಲರ್‌ಗಿಂತ ಹೆಚ್ಚಾಗಿ ಅನ್-ಪಾಪ್ಯುಲರ್ ಆಗುತ್ತಿದ್ದೇವೆ. This is the not way to conduct it. ಈ ಜನಾಂಗದವರು ಯಾರೇ ಆಗಲಿ ಸಾಲ ಬೇಕೆಂದು ಬ್ಯಾಂಕಿಗೆ ಅರ್ಜಿ ಹಾಕಿದರೆ 100% ಆಗಿ The state Government should stand guarantee for that ಎಂದು ಸಲಹೆ ಮಾಡಿದ್ದೆ, ಮತ್ತು ನೀವು ಅವರಿಗೆ back hand ಸಬ್ಸಿಡಿ ಕೊಡಿ. ಮರುಪಾವತಿ ಮಾಡುವ ಯಾರೇ ಆಗಲಿ ಅವರಿಗೆ ನೀವು back hand ಸಬ್ಸಿಡಿ ಕೊಡಿ. ಇದಕ್ಕೇನು ಜಾಸ್ತಿ ಹಣ ಬೇಕಾಗುವುದಿಲ್ಲ. ನಿಮ್ಮ ಹತ್ತಿರ ಕಮಿಟ್‌ಮೆಂಟ್ ಇರುವುದರಿಂದ ನೀವು ಮಾಡಬಹುದು. But nobody is trying to do this. ಎಸ್.ಸಿ. ಓಣಿಗಳಿಗೆ ಹಣ ಕೊಡುವ ಪ್ರಯತ್ನವನ್ನು ಮಾನ್ಯ ಸಚಿವರು ಏನು ಮಾಡುತ್ತಿದ್ದಾರೆ, ಅದು ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ಆಗಬೇಕು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಇನ್ನೂ ಹೆಚ್ಚಿನ ಹಣವನ್ನು ಕೊಡುವಂತಹ ಪ್ರಯತ್ನ ಮಾಡಬೇಕು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬಗ್ಗೆ ಇಂದು ಬೆಳಿಗ್ಗೆಯೇ ಚರ್ಚೆಗೆ ಬಂದಿತ್ತು. ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯನ್ನು ನೀಗಿಸಬೇಕಾದರೆ ಬಿಲ್ ಅನ್ನು ತನ್ನಿ ಎಂದು ಕಳೆದ 4ವರ್ಷಗಳಿಂದ ಸಲಹೆಯನ್ನು ಕೊಡುತ್ತಿದ್ದೇನೆ. ಇಂದು ಮಾನ್ಯ ವೈದ್ಯಕೀಯ ಸಚಿವರು We are going to introduce a Bill on 30th of this month ಎಂದು ಹೇಳಿದರು. ನನಗೆ ಬಹಳ ಖುಷಿಯಾಯಿತು. ಆ ಬಿಲ್ ಅನ್ನು ನೀವು introduce ಮಾಡಿದರೆ ಖಂಡಿತವಾಗಿಯೂ ಈ ಸಮಸ್ಯೆ ಮುಂದಿನ ವರ್ಷ ಇರುವುದಿಲ್ಲ. ಈ ರಾಜ್ಯದಲ್ಲಿ ಪಾಸ್ ಆಗುವ ಎಲ್ಲಾ MBBS, MD ಯವರು ಒಂದು ವರ್ಷ ಕಡ್ಡಾಯವಾಗಿ

ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ನಿಬಂಧನೆಯನ್ನು ಹಾಕಬೇಕು. ಹಾಗೂ ಅವರಿಗೆ ಒಳ್ಳೆಯ ಸಂಬಳವನ್ನು ಕೊಡಬೇಕು. ಆದರಿಂದ ಅವರಿಗೇನೂ ನಷ್ಟವಾಗುವುದಿಲ್ಲ ಇದರಿಂದ ಬೇರೆಯವರು ಬೇರೆ ಬೇರೆ ರೀತಿಯಲ್ಲಿ ತಿಳಿದುಕೊಳ್ಳಬಹುದು. ಇದರಿಂದ ಅವರಿಗೆ ಒಳ್ಳೆಯ ಅನುಭವವಾಗುತ್ತಿದೆ. ನೀವು ಪ್ರಾರಂಭದ ದಿನಗಳಲ್ಲಿ ಒಳ್ಳೆಯ ಸಂಬಳವನ್ನು ನೀಡುವುದರಿಂದ ಅವರು ಬೇರೆ ಕಡೆ Practice ಗೆ ಹೋದರೂ ಅಷ್ಟು ಹಣ ಸಿಗುವುದಿಲ್ಲ. ಅದಕ್ಕಾಗಿ ಇದಕ್ಕೆ ಒಂದು ಬಿಲ್‌ಅನ್ನು ತರಬೇಕೆಂದು ಸಲಹೆ ಮಾಡುತ್ತೇನೆ. ಆರೋಗ್ಯ ಇಲಾಖೆಗೆ ಎಷ್ಟು ಹಣವನ್ನು ಸರ್ಕಾರ ಕೊಟ್ಟಿದೆ? ಬಹಳ ಕಡಿಮೆ ಹಣವನ್ನು ಕೊಟ್ಟಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ 30,000 ಜನರಿಗೆ ಒಂದು ಪಿ.ಎಚ್.ಸಿ. ಯನ್ನು ಮಾಡಿದ್ದೇವೆ. ಆದರೆ ಅಲ್ಲಿ ಸರಿಯಾದ ರೀತಿಯಲ್ಲಿ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಆಗಿಲ್ಲ. "ಆರೋಗ್ಯ ಶ್ರೀ" ಯೋಜನೆಯಿಂದ ಬಿಪಿಎಲ್ ಕಾರ್ಡುದಾರರಿಗೆ, ವಿಶೇವಾಗಿ heart ailments, cancer, kidney ailments ಆಗಲಿ, ಹೀಗೆ ಹೆಚ್ಚಿನ ಪ್ರಮಾಣದಲ್ಲಿ ಹಣ ಖರ್ಚಾಗುವ ಚಿಕಿತ್ಸೆಗೆ ನೆರವಾಗುತ್ತಿದೆ ಎನ್ನುವ ರಿಲೀಫ್ ಇದೆ. ಇದು ಒಂದು ಉತ್ತಮ ಕೆಲಸವನ್ನು ಈ ಸರ್ಕಾರ ಮಾಡಿದೆ ಎಂದು ಹೇಳಲೇಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಒಳ್ಳೆಯ ವ್ಯವಸ್ಥೆಯನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ, ಏಕೆಂದರೆ ವೈದ್ಯರುಗಳು ಹಾಗೂ ಅಲ್ಲಿರುವ other staff support ಕೊಡದೇ ಇರುವ ಕಾರಣದಿಂದ ಈ ರೀತಿ ಆಗುತ್ತಿದೆ. ಈ ವ್ಯವಸ್ಥೆಯನ್ನು ಸಹ ಉತ್ತಮಗೊಳಿಸಬೇಕೆಂದು ನನ್ನ ಸಲಹೆ ಇದೆ.

Industries Department ಗೆ ಸಂಬಂಧಿಸಿದಂತೆ, ಕಳೆದ ಸಾರಿ ಒಂದು ಪ್ರಶ್ನೆ ಬಂದಿದ್ದು, ಅದಕ್ಕೆ ಸಲಹೆಯನ್ನು ಸಹ ನೀಡಿದ್ದೆ. Industries Department ನಲ್ಲಿ ಇವತ್ತು ಅಗತ್ಯಕ್ಕಿಂತ ಹೆಚ್ಚಿನ ಭೂಮಿಯನ್ನು ಮಂಜೂರು ಮಾಡುತ್ತಿದ್ದಾರೆ. GIM ನಲ್ಲಿ ಇಂಪ್ಲಿಮೆಂಟ್ ಮಾಡುತ್ತೇವೆಂದು ಪ್ರಾಮಿಸ್ ಮಾಡಿದ ಎಲ್ಲಾ ಯೋಜನೆಗಳು ಅನುಷ್ಠಾನಗೊಳ್ಳುತ್ತಿಲ್ಲ. ದಿನೇ ದಿನೇ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿರುವ ಕಾರಣದಿಂದ ಇದಕ್ಕೆ ತಾವು ವಿಶೇಷವಾಗಿ ಕಾಳಜಿ ವಹಿಸಿ ಹೆಚ್ಚಿನ ರೀತಿಯಲ್ಲಿ ಕೈಗಾರಿಕೆಗಳು ಸ್ಥಾಪಿಸುವಂತಾಗಬೇಕು. ಕಡಿಮೆ ಮಾಡುವ ದೃಷ್ಟಿಯಿಂದ Employment intensive industriesಗೆ encouragement ಮಾಡಬೇಕೇ ವಿನಃ Employment curtailing Industries ಗೆ ಹೆಚ್ಚಿನ ಗೆ ಆದ್ಯತೆ ಕಟ್ಟರೆ ನಮಗೇನೂಲಾಭವಾಗುವುದಿಲ್ಲ.

ಲೋಕೋಪಯೋಗಿ ಇಲಾಖೆಯ ಬಗ್ಗೆ ಕೆಲವೊಂದು ಸಲಹೆಗಳಿರುವ ಕಾರಣದಿಂದ ಮಾನ್ಯ ಲೋಕೋಪಯೋಗಿ ಸಚಿವರು ಸದನದಲ್ಲಿದ್ದು ಅವರು ಈ ಬಗ್ಗೆ ಸ್ವಲ್ಪ ಗಮನಹರಿಸಬೇಕು. ನಮ್ಮ ರಾಜ್ಯದಲ್ಲಿ ಎಷ್ಟು ಸ್ಟೇಟ್ ಹೈವೇಗಳಿವೆ, ಅವುಗಳ maintenance ಗಾಗಿ ಅವುಗಳೆಲ್ಲವನ್ನೂ ನೀವು privatize ಮಾಡಿ. ಏಕೆಂದರೆ BOOT ನಲ್ಲಿ ನಮ್ಮ ರಾಜ್ಯದಲ್ಲಿರುವ ಎಲ್ಲಾ ಸ್ಟೇಟ್ ಹೈವೇಗಳನ್ನು ಕೊಟ್ಟರೂ ಅವುಗಳನ್ನು maintain ಮಾಡುವುದಕ್ಕೆ ಜನ ತಯಾರಿದ್ದಾರೆ. ಇಲ್ಲವೆಂದರೆ viability gap ನಲ್ಲಿ ಮಾಡಿ. ಯಾವುದೋ ಒಂದು ಖಾಸಗಿ ಸಹಭಾಗಿತ್ವದಿಂದ ರಾಜ್ಯದ ಹೆದ್ದಾರಿಗಳನ್ನು ನಿರ್ವಹಣೆ ಮಾಡುವುದಕ್ಕೆ ಕಡ್ಡಾಯವಾಗಿ ಆಗಬೇಕು. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ಆದ್ಯತೆ, our priority should be village roads and Major District Roads. Village roads ಮತ್ತು Major District Roads ಗೆ ಸಾರ್ವಜನಿಕರಿಂದ ಬಂದಿರತಕ್ಕಂಥ ಹಣ ಖರ್ಚು ಆಗಬೇಕು. National Highways, State Highways ಅನ್ನು ನೀವು ಖಾಸಗಿ ಸಹಭಾಗಿತ್ವದಿಂದ ಮಾಡಬೇಕು. ಇನ್ನೂ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ನನ್ನ ಮತ ಕ್ಷೇತ್ರದಲ್ಲಿ MDRs improvement ಆಗಬೇಕಾಗಿದೆ. ಇವತ್ತು ಇಡೀ ರಾಜ್ಯದ ಪರಿಸ್ಥಿತಿ ನೋಡಿದರೆ MDRs ಗೆ ಇನ್ನೂ ಹೆಚ್ಚಿನ ಹಣ ಬೇಕಾಗಿದೆ. ಇವತ್ತು ಮಾನ್ಯ ಹಣಕಾಸು ಸಚಿವರು ಇಲ್ಲ. ನಾವು PWD ಇಲಾಖೆಗೆ ಹೆಚ್ಚಿನ ಹಣ ಕೊಡಬೇಕಾಗಿದೆ. ಏಕೆಂದರೆ, ಈ ರಾಜ್ಯದಲ್ಲಿ ಒಂದು ಒಳ್ಳೆಯ ರಸ್ತೆ ಜಾಲ ಇದ್ದಾಗ ಮಾತ್ರ ಈ ರಾಜ್ಯದ ಆರ್ಥಿಕ ಬೆಳವಣಿಗೆ ಆಗುವ ಸಾಧ್ಯತೆ ಇದೆ. ಹಿಂದೆ ನಾನು ಬಹಳಷ್ಟು ಕಡೆ ಓದಿದ್ದೇನೆ. ಅಮೇರಿಕಾದಲ್ಲಿ economic development fast ಆಗಬೇಕಾದರೆ. it is because of the good road network. Road network is a very important indicator for the economic development of the region. ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಹಣವನ್ನು ಕೊಡಬೇಕು ಮತ್ತು ನಮ್ಮ ಮಾನ್ಯ ಲೋಕೋಪಯೋಗಿ ಸಚಿವರು ಹಣದ ಬಗ್ಗೆ ಅವಲಂಬಿತವಾಗಿರಬಾರದು. You have to find out innovative ways. ಇವತ್ತು ಖಾಸಗಿ ಸಹಭಾಗಿತ್ವದಲ್ಲಿ ಯಾವುದು ಮಾಡುವುದಕ್ಕೆ ಸಾಧ್ಯವಿದೆ. ಮತ್ತು ಬೇರೆ ಬೇರೆ ರೀತಿಯಲ್ಲಿ ಹಣ ಯಾವ ರೀತಿ ಸಂಗ್ರಹ ಮಾಡಬೇಕೆಂದು ವಿಚಾರ ಮಾಡಿ. ನೀವು ಒಂದು ಹೆಜ್ಜೆ ಮುಂದೆ ಹೋಗಿ, ಬೇರೆ ಬೇರೆ ಕಡೆ ಯಾವ ರೀತಿ ಮಾಡುತ್ತಿದ್ದಾರೆ. ಎಂದು ನೋಡಬೇಕು ಇನ್ನೊಂದು ಬಹಳ ಮುಖ್ಯವಾದ ವಿಚಾರವೆಂದರೆ, ನಮ್ಮ road designing ಸಮರ್ಪಕವಾಗಿ ಆಗುತ್ತಿಲ್ಲ. ಕೆಲವು ಕಡೆ ಅನಾವಶ್ಯಕವಾಗಿ ಹೆಚ್ಚಿನ ಒಂದು

ರೀತಿಯಲ್ಲಿ inflated estimates ಆಗುತ್ತಿದೆ. ಕೆಲವೊಂದು ಕಡೆ ಏನಾಗುತ್ತಿದೆ ಎಂದರೆ ಸರಿಯಾಗಿ quality parameters ನ್ನು meet ಮಾಡದಂಥ estimates ಆಗುತ್ತಿದೆ. ಇವತ್ತು ಬೇರೆ ಬೇರೆ ರಾಜ್ಯಗಳಲ್ಲಿ development ಆಗಿರತಕ್ಕಂಥ road network ಎಲ್ಲಿ ಚೆನ್ನಾಗಿ ಆಗಿದೆ, ಅದನ್ನು ನೋಡಿ. ಅದನ್ನು ನೋಡಿ ನೀವು ಒಂದು innovative method ತಂದು ಈ ರಾಜ್ಯದ ರಸ್ತೆ ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕೆನ್ನುವುದು ನನ್ನ ಒಂದು ಸಲಹೆಯಾಗಿದೆ. ಕೊನೆಯದಾಗಿ, ಇವತ್ತು ಮಾನ್ಯ ಸಭಾಧ್ಯಕ್ಷರೆ, ಇವತ್ತು ಜಲಸಂಪನ್ಮೂಲ ಸಚಿವರು ಇಲ್ಲಿ ಇಲ್ಲ. ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಲೇಬೇಕಾಗುತ್ತದೆ. what is the priority of theis Government? ನಾನು ಮೊದಲ ಸಲ 2004ರಲ್ಲಿ ಸದನಕ್ಕೆ ಬಂದಾಗ ಮಾನ್ಯ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿದ್ದಾಗ ಅವರು ನೀರಾವರಿ 24%, 25%, 28% ಹಣವನ್ನು ಕೊಡುತ್ತಿದ್ದರು. ಇವತ್ತು 13%, 14% ಗೆ ಇಳಿಸಿದ್ದಾರೆ. ಇದಕ್ಕೂ ಮುಂಚೆ 30% ಇತ್ತು. 30% ನೀರಾವರಿಗೆ ಇಂತಕ್ಕಂಥ ಹಣ 13% ಗೆ ಇಳಿಸಿದ್ದಾರೆ. ವಿಶೇಷವಾಗಿ ಇವತ್ತು ನಮಗೆ surplus water ಬಂದಿದೆ. ನಾವು ಕೃಷ್ಣಾ ನದಿಯಿಂದ ಹೆಚ್ಚಿನ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಅದಕ್ಕೆ what is your plan? You should have a concrete plan for that. ಒಳ್ಳೆಯ ರೀತಿಯ ವ್ಯವಸ್ಥೆಯನ್ನು ಮಾಡಬೇಕು. ನಾವು ಹಿಂದೆ ಮಾಡಿರಲಿಲ್ಲ. ನಾವು ಈಗಲಾದರೂ ಮಾಡಬೇಕು. ನಾವು time-bound programme ಮಾಡಬೇಕು. ಐದು ವರ್ಷದಲ್ಲಿ ಒಂದು ಯೋಜನೆಯನ್ನು implement ಮಾಡಿದರೆ 7 ಸಾವಿರ ಕೋಟಿ ಖರ್ಚು ಮಾಡಲು ಸಾಧ್ಯವಾಗಬಹುದು. ಇಲ್ಲವಾದರೆ, ಅದೇ ಕೆಲಸ ಇವತ್ತು ಮಾಡುವುದಕ್ಕೆ 10, 12 ಸಾವಿರ ಕೋಟಿ ಬೇಕಾಗಬಹುದು. ನಮ್ಮ ಭಾಗದಲ್ಲಿ ವಿಶೇಷವಾಗಿ ಬೆಣ್ಣೆತೊರಾ ಲೋಯರ್ ಮುಲ್ಲಾಮಾಡಿ project ಗಳು ಇನ್ನು complete ಆಗಿಲ್ಲ. 20 ವರ್ಷದಿಂದ ನಡೆಯುತ್ತಿದೆ. ಅದನ್ನು complete ಮಾಡುವುದಕ್ಕೆ ಮಾನ್ಯ ನೀರಾವರಿ ಸಚಿವರು ಹೆಚ್ಚಿನ ಹಣವನ್ನು ಕೊಟ್ಟು complete ಮಾಡಬೇಕೆಂದು ನನ್ನ ಸಲಹೆ ಇದೆ. ಕೊನೆಯದಾಗಿ, ನಮ್ಮ ನಗರಾಭಿವೃದ್ಧಿ ಸಚಿವರು ಇಲ್ಲಿ ಇದ್ದಾರೆ. ನನ್ನ ಮತ ಕ್ಷೇತ್ರದಲ್ಲಿ raising main ಮಾಡಿದ್ದಾರೆ, ಆದರೆ ಸೇಡಂಗೆ distribution systems 24/7 ತೆಗೆದುಕೊಂಡಿದ್ದೇವೆಂದು ಹೇಳಿದರು. 24/7 ತೆಗೆದುಕೊಂಡಿದ್ದೇವೆಂದು distribution system ಅನ್ನು cancel ಮಾಡಿದರು. Estimate ಆಗಿದೆ, ಆದರೆ ಇಲ್ಲಿಯವರೆಗೆ ಟೆಂಡರ್ ಆಗಿಲ್ಲ. Immediate ಆಗಿ ಅದನ್ನು

ಮಾಡದೆ ಹೋದರೆ ಬರೀ bulk water supply ಮಾಡಿದ ಹಾಗೆ ಆಗುತ್ತದೆ, ಆದರೆ distribution ಇಲ್ಲದೆ ಹೋದರೆ ಬಹಳ ತೊಂದರೆ ಆಗುತ್ತಿದೆ. ನಮ್ಮ ಸೇಡಂಗ UGD sanction ಆಗಿದೆ, ಟೆಂಡರ್ ready ಆಗಿದೆ. ಆದರೆ ನಿಮ್ಮ ಇಲಾಖೆಯವರು ಟೆಂಡರ್ ಕರೆಯುವುದಕ್ಕೆ ready ಇಲ್ಲ., ಏತಕ್ಕೆಂದರೆ ಇಲ್ಲ ನಾವು ಭೂಮಿಯನ್ನು ಸಂಪೂರ್ಣವಾಗಿ ವಶಕ್ಕೆ ತೆಗೆದುಕೊಂಡ ಮೇಲೆ ಮಾಡಬೇಕೆಂದು ನೀವು ಒತ್ತಾಯ ಮಾಡುತ್ತಿದ್ದೀರಿ. ಆ ರೀತಿ ಮಾಡುವಂಥ ಅವಶ್ಯಕತೆ ಇಲ್ಲವೆಂದು ನಾನು ಅಂದುಕೊಳ್ಳುತ್ತೇನೆ. ನೀವು emergency clause ನಲ್ಲಿ land ಅನ್ನು acquire ಮಾಡಿ ಯಾರು ಬೇಡವೆಂದು ಹೇಳುತ್ತಾರೆ. ನೀವು D.C. ಯವರಿಗೆ direction ಕೊಡಿ emergency clause ನಲ್ಲಿ ಬೇಕಾಗಿರುವಂಥ ಭೂಮಿಯನ್ನು acquire ಮಾಡಿ. ಆಮೇಲೆ STP ಗಳಿಗೆ ಬೇಕಾಗಿರುವಂಥ ಭೂಮಿಯನ್ನು ಒದಗಿಸಿ ನೀವು ಟೆಂಡರ್ ಅನ್ನು ಮಾಡಿ. ನಮ್ಮಲ್ಲಿ UGD snaction ಮಾಡಿ ಒಂದು ವರ್ಷವಾಯಿತು. UGD ಮತ್ತು water supply scheme ಅನ್ನು ಅತೀ ಶೀಘ್ರದಲ್ಲಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ನನ್ನ ಮನವಿ ಇದೆ. ಇವತ್ತು, ನಗರ ಪ್ರದೇಶದಲ್ಲಿ ಜಾಸ್ತಿ ಹಣ ಕೊಟ್ಟಿದ್ದಾರೆ. ಬಿಜೆಪಿ ಅಜೆಂಡಾ ಏನಿದೆ, ಅದು ಗೊತ್ತಿಲ್ಲ. ನಮ್ಮ voters ಎಲ್ಲಾ town ನಲ್ಲಿ concentrate ಆಗಿ ಇರುತ್ತಾರೆಂದು ಜಾಸ್ತಿ ಹಣ ಕೊಟ್ಟಿರುತ್ತಾರೆ. ಪರವಾಗಿಲ್ಲ, ತಾವು ಯಾರಿಗಾದರೂ ಆಗಲಿ ಹಣ ಕೊಟ್ಟಿದ್ದೀರಲ್ಲ ನಮಗೆ ಸಂತೋಷವಿದೆ. ಆದರೆ, ಮಾನ್ಯ ಸಚಿವರು ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ನಮ್ಮ ಗುಲ್ಬರ್ಗ ನಗರಕ್ಕೆ ತಾವು ಇನ್ನೂ ಹೆಚ್ಚಿನ ಹಣ ಕೊಡಬೇಕು. ರೂ. 100 ಕೋಟಿ ಕೊಟ್ಟಿದ್ದೀರಿ ಹಾಗು ಎರಡನೇ ಕಂತಿನಲ್ಲಿ ರೂ. 100 ಕೋಟಿ ಕೊಟ್ಟಿದ್ದರೂ ಸರಿಯಾಗಿ ಹೋಗುತ್ತಿಲ್ಲ. ನೀವು ಪ್ರಯತ್ನ ಮಾಡುತ್ತೀರಿ. we appreciate your efforts. ಮಾನ್ಯ ಸುರೇಶ್ ಕುಮಾರ್ ರವರೆ, ತಾವು ಗುಲ್ಬರ್ಗದಂಥ second line city ಗಳನ್ನು development ಮಾಡಿರುವುದು ಸಾಕು. ಬೆಂಗಳೂರು, ಮೈಸೂರು, ಬೆಳಗಾಂ ಇಷ್ಟೇ ಅಲ್ಲ, ನಮ್ಮ ಗುಲ್ಬರ್ಗಾ, ಬೀದರ್, ಬಿಜಾಪುರ, ಬಾಗಲಕೋಟೆ ಇಂಥ ಜಿಲ್ಲೆಗಳನ್ನು ತಾವು, ಸ್ವಲ್ಪ development ಮಾಡುವುದಕ್ಕೆ ಪ್ರಯತ್ನ ಮಾಡಿ. ಅದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಅವರನ್ನು ಮನವಿ ಮಾಡುತ್ತೇನೆ. ನೀವು ಮಂಡಿಸಿರತಕ್ಕಂಥ ಒಂದು ಲಕ್ಷ ಕೋಟಿ ಬಜೆಟ್ ನನಗೆ ತೃಪ್ತಿ ತಂದಿಲ್ಲ. ಇದರಲ್ಲಿ ಬಹಳಷ್ಟು ನ್ಯೂನತೆಗಳು ಇವೆ. ಒಂದು ಲಕ್ಷ ಕೋಟಿ ಬಜೆಟ್ ಅನ್ನು ತಾವು implement ಮಾಡುವುದಕ್ಕಂತೂ ಆಗುವುದಿಲ್ಲ. ಆದರೆ, ತಾವು 3 ಸಾವಿರ ಕೋಟಿ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ನಾವು ಅದನ್ನು

welcome ಮಾಡಿದ್ದೇವೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳುವಂಥ ಸಂದರ್ಭದಲ್ಲಿ ತಾವು ಹಣವನ್ನು ಯಾವ ರೀತಿ ಕೂಡಿಸುತ್ತೀರಿ ಆದರ ಬಗ್ಗೆ clarification ಕೊಡಬೇಕು. ರೂ. 3,500 ಸಾವಿರ ಕೋಟಿ ಯಲ್ಲಿ ಯಾವ ಯೋಜನೆಗಳಿಗೆ ತಾವು ಕತ್ತರಿ ಹಾಕುತ್ತೀರೆಂದು ನಮಗೆ ಹೇಳಬೇಕು. opposition M.L.A. ಗಳು ಇರತಕ್ಕಂಥ ಕ್ಷೇತ್ರಗಳಲ್ಲಿನ ಯೋಜನೆಗಳನ್ನು ಕಟ್ ಮಾಡಿಕೊಡುತ್ತೀರೋ ? ಅಥವಾ ಹೆಚ್ಚಿನ ಸಾಲ ತೆಗೆದುಕೊಳ್ಳುತ್ತೀರೋ? ಏನು ಮಾಡುತ್ತೀರೆಂದು ನಮಗೆ ಹೇಳಬೇಕು. ತಾನೆ? ನೀವು ಏನೇ ಮಾಡಿದರೂ accept ಮಾಡುವುದಕ್ಕೆ ನಾವು ready ಇದ್ದೇವೆ. For the sake of famers of the state we are ready to sacrifice. ಹೆಚ್ಚಿನ ಹಣವನ್ನು ಸಂಗ್ರಹಣೆ ಮಾಡುವುದಾಗಲಿ, ಸಾಲ ಪಡೆದು ಮಾಡುವುದಾಗಲಿ ಮಾಡಬೇಕೆಂದು ಸಲಹೆ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಗಳು. ಮಾನ್ಯ ಅಭಯ್ ಪಾಟೀಲ್‌ರವರೆ, ಮಾತನಾಡಿ.

6. ಗಮನ ಸೆಳೆಯುವ ಸೂಚನೆಗಳು

ವಿಷಯ: ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ ಬಗ್ಗೆ

ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ) : ಮಾನ್ಯ ಸಭಾಪತಿಯರೆ, ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ ಮಾಡುವ ಕುರಿತು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾತನಾಡಿ.

ಶ್ರೀಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಭಾರತ ಸರ್ಕಾರವು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಡಿ ದೇಶದಲ್ಲಿ 06 Indian Institute of Technology ಗಳನ್ನು ಸ್ಥಾಪಿಸಲಾಗುವುದೆಂಬ ವಿಷಯವನ್ನು ತಿಳಿದು, ಅಂದಿನ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 11-08-2006 ರಂದು ಅಂದಿನ ಮಾನ್ಯ

ಕೇಂದ್ರ ಮಾನವ ಸಂಪನ್ಮೂಲ ಸಚಿವರಿಗೆ ಪತ್ರವನ್ನು ಬರೆದು ಕರ್ನಾಟಕಕ್ಕೆ ಐ.ಐ.ಟಿ ಯನ್ನು ಮಂಜೂರು ಮಾಡಬೇಕೆಂದು ಕೋರಿದ್ದರು.

ಅಧ್ಯಕ್ಷರು : ಉತ್ತರ ಇದ್ದರೆ ಅವರಿಗೆ ಕೊಡಿ. ಅವರು ಉತ್ತರವನ್ನು ನೋಡಿ ಏನಾದರೂ clarification ಇದ್ದರೆ ಕೇಳಿ.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) : ಈ ಕುರಿತು ದಿನಾಂಕ: 21–08–2006 ರಂದು ಕೇಂದ್ರ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗಿತ್ತು. ಇದಕ್ಕೆ ಉತ್ತರವಾಗಿ ದಿನಾಂಕ: 28–08–2006 ರ ಪತ್ರದಲ್ಲಿ ಮಾನ್ಯ ಕೇಂದ್ರ ಮಾನವ ಸಂಪನ್ಮೂಲ ಸಚಿವರು ಈ ಪ್ರಸ್ತಾವನೆಯನ್ನು ಪರಿಶೀಲಿಸುವುದಾಗಿ ತಿಳಿಸಿದ್ದರು. ಇದರ ಬಗ್ಗೆ clarification ಇದ್ದರೆ ಕೇಳಿ.

ಶ್ರೀ ಅಭಯ್ ಪಾಟೀಲ್ : ಮಾನ್ಯ ಸಚಿವರ ಉತ್ತರದಲ್ಲಿ ಸುಮಾರು 126 ಸಹಿಯನ್ನು ಮಾಡಿ ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ ಆಗಬೇಕೆಂದು ಹೇಳಿ ಹಿಂದಿನ ಸಚಿವರಿಗೆ ಪತ್ರವನ್ನು ಕೊಟ್ಟು, ಅದೇ ರೀತಿ ಪ್ರಿನ್ಸಿಪಾಲರಿಗೆ ಹಾಗೂ ಪ್ರಧಾನ ಮಂತ್ರಿಗಳಿಗೆ ಕೊಡುವಂಥ ವ್ಯವಸ್ಥೆ ಮಾಡಿದರು. ಆದಾದನಂತರ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ ಮಾಡಲಿಕ್ಕೆ ರಾಜ್ಯ ಸರ್ಕಾರ ಎಲ್ಲಾ ಸೌಕರ್ಯವನ್ನು ಒದಗಿಸುತ್ತದೆ ಎನ್ನುವ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದರೆ, ಸಚಿವರ ಉತ್ತರದಲ್ಲಿ ಬೆಳಗಾವಿಯಲ್ಲಿ ಐ.ಐ.ಟಿ ಸ್ಥಾಪನೆ ಮಾಡಲಿಕ್ಕೆ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುತ್ತೇವೆಂಬ ಉತ್ತರ ಇಲ್ಲ. ಆದ್ದರಿಂದ ನಿರ್ದಿಷ್ಟವಾದ ಉತ್ತರವನ್ನು ಕೊಟ್ಟು, ಅವರ ನೇತೃತ್ವದಲ್ಲಿ ಒಂದು ನಿಯೋಗವನ್ನು ತೆಗೆದುಕೊಂಡು ಪ್ರಧಾನ ಮಂತ್ರಿಗಳನ್ನು ಮತ್ತು ಕೇಂದ್ರ ಮಾನವ ಸಂಪನ್ಮೂಲ ಸಚಿವರನ್ನು ಯಾವಾಗ ಭೇಟಿ ಮಾಡುತ್ತೀರಿ ಎನ್ನುವುದನ್ನು ತಮ್ಮ ಮುಖಾಂತರ ತಿಳಿಸಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ : ಭಾರತ ಸರ್ಕಾರವು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಡಿ ದೇಶದಲ್ಲಿ 06 ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳನ್ನು (IIT's) ಸ್ಥಾಪಿಸಲಾಗುವುದೆಂಬ ವಿಷಯವನ್ನು ತಿಳಿದು ಅಂದಿನ ಮುಖ್ಯಮಂತ್ರಿಗಳು ದಿನಾಂಕ: 11–8–2006ರಂದು ಅಂದಿನ ಮಾನ್ಯ ಕೇಂದ್ರ ಮಾನವ ಸಂಪನ್ಮೂಲ ಸಚಿವರಿಗೆ

ಪತ್ರ ಬರೆದು ಕರ್ನಾಟಕಕ್ಕೆ ಐ.ಐ.ಟಿ. ಯನ್ನು ಮಂಜೂರು ಮಾಡಬೇಕೆಂದು ಕೋರಿದ್ದರು. ಈ ಕುರಿತು ದಿನಾಂಕ: 21-8-2006 ರಂದು ಕೇಂದ್ರ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗಿತ್ತು. ಇದಕ್ಕೆ ಉತ್ತರವಾಗಿ ದಿನಾಂಕ: 28-8-2006ರ ಪತ್ರದಲ್ಲಿ ಮಾನ್ಯ ಕೇಂದ್ರ ಮಾನವ ಸಂಪನ್ಮೂಲ ಸಚಿವರು ಈ ಪ್ರಸ್ತಾವನೆಯನ್ನು ಪರಿಶೀಲಿಸುವುದಾಗಿ ತಿಳಿಸಿದ್ದರು.

ಕರ್ನಾಟಕಕ್ಕೆ ಕೇಂದ್ರ ಸರ್ಕಾರದಿಂದ ಐ.ಐ.ಟಿ. ಮಂಜೂರು ಮಾಡಬಹುದೆಂದು ಭಾವಿಸಿ ಈ ಕುರಿತು ಪೂರ್ವ ಸಿದ್ಧತೆಯಾಗಿ 2007ರ ಮೇನಲ್ಲಿ ಹಾಸನದಲ್ಲಿ 1057 ಎಕರೆ ಪ್ರದೇಶವನ್ನು ರೂ. 90.95 ಕೋಟಿ ವೆಚ್ಚದಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಸಹ ಜರುಗಿಸಲಾಗಿತ್ತು.

2006-07ನೇ ಸಾಲಿನಲ್ಲಿ ಕೇಂದ್ರ ಸರ್ಕಾರಕ್ಕೆ ಸುಮಾರು 08 ಬಾರಿ ಪತ್ರ ವ್ಯವಹಾರ ಮಾಡಲಾಗಿತ್ತು. ಅಂದಿನ ಮಾನವ ಸಂಪನ್ಮೂಲ ಸಚಿವರಾದ ಶ್ರೀ ಅರ್ಜುನ್ ಸಿಂಗ್ ರವರು ದಿನಾಂಕ: 26-3-2007ರ ಪತ್ರದಲ್ಲಿ ಹಾಸನದಲ್ಲಿ ಐ.ಐ.ಟಿ. ಸ್ಥಾಪಿಸುವ ಪ್ರಸ್ತಾವನೆ ಕೇಂದ್ರ ಸರ್ಕಾರದಲ್ಲಿ ಇಲ್ಲವೆಂದು ತಿಳಿಸಿರುತ್ತಾರೆ.

ಕರ್ನಾಟಕಕ್ಕೆ ಐ.ಐ.ಟಿ. ಸ್ಥಾಪನೆ ಅಗತ್ಯವೆಂದು ಮನಗಂಡು ಅಂದಿನ ಘನತೆವೆತ್ತ ಮಾನ್ಯ ರಾಜ್ಯಪಾಲರು ಸಹ ದಿನಾಂಕ: 25-4-2008 ರಂದು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಚಿವರಾದ ಶ್ರೀ ಅರ್ಜುನ್ ಸಿಂಗ್ ರವರಿಗೆ ಅರೆ ಸರ್ಕಾರಿ ಪತ್ರ ಬರೆದು ಹನ್ನೊಂದನೆ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕಕ್ಕೆ ಐ.ಐ.ಟಿ. ಮಂಜೂರು ಮಾಡಬೇಕೆಂದು ಕೋರಿದ್ದರು. ನಂತರ ಅಂದಿನ ಮುಖ್ಯಮಂತ್ರಿಯವರು ಸಹ ದಿನಾಂಕ: 23-07-2008 ರಂದು ಪುನಃ ಕೇಂದ್ರ ಸಚಿವರಿಗೆ ಪತ್ರ ಬರೆದು ಕರ್ನಾಟಕಕ್ಕೆ ಐ.ಐ.ಟಿ. ಮಂಜೂರು ಮಾಡಬೇಕೆಂದು ಕೋರಿದ್ದರು.

ಸುಮಾರು 100 ಶಾಸಕರು ದಿನಾಂಕ: 29-07-2009ರಲ್ಲಿ ಸಾಮೂಹಿಕವಾಗಿ ಸಹಿ ಮಾಡಿದ ಮನವಿಯನ್ನು ಅಂದಿನ ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿ ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ ಮಾಡಬೇಕೆಂದು ಕೋರಿರುತ್ತಾರೆ.

ಪುನಃ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 05-06-2009ರಂದು ಕೇಂದ್ರ ಮಾನವ ಸಂಪನ್ಮೂಲ ಸಚಿವರಿಗೆ ಪತ್ರ ಬರೆದು ಕರ್ನಾಟಕಕ್ಕೆ ಅಗತ್ಯವೆಂದು

ಕೋರಿ ಬರೆದ ಪತ್ರಕ್ಕೆ ಕೇಂದ್ರ ಸಚಿವರು ಈ ವಿಷಯವನ್ನು ಪರಿಶೀಲಿಸುವುದಾಗಿ ತಿಳಿಸಿರುತ್ತಾರೆ.

ದಿನಾಂಕ: 08-09-2009ರ ಪತ್ರದಲ್ಲಿ ಅಂದಿನ ಕೇಂದ್ರ ಮಾನವ ಸಂಪನ್ಮೂಲ ಸಚಿವರು ಕರ್ನಾಟಕದಲ್ಲಿ ಈಗಾಗಲೇ ಕೇಂದ್ರ ವಿಶ್ವವಿದ್ಯಾಲಯ ಮಂಜೂರಾಗಿರುವುದರಿಂದ ಐ.ಐ.ಟಿ. ಮಂಜೂರು ಮಾಡಲು ಸಾಧ್ಯವಿಲ್ಲವೆಂದು ಪ್ರಧಾನ ಮಂತ್ರಾಲಯವು ಸೂಚಿಸಿರುತ್ತಾರೆಂದು ತಿಳಿಸಿರುತ್ತಾರೆ.

ಕೇಂದ್ರ ಮಾನವ ಸಂಪನ್ಮೂಲ ಸಚಿವರಾದ ಶ್ರೀ ಕಪಿಲ್ ಸಿಬಲ್ ರವರು ದಿನಾಂಕ : 17-02-2010ರಂದು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಐ.ಐ.ಟಿ. ಗಳನ್ನು ಸ್ಥಾಪಿಸಲು ಮೀಸಲಿರಿಸಿದ್ದ ಹಣದಲ್ಲಿ ಈಗಾಗಲೇ ಇತರೆ 08 ರಾಜ್ಯಗಳಲ್ಲಿ ಐ.ಐ.ಟಿ ಗಳನ್ನು ಮಂಜೂರು ಮಾಡಿರುವುದರಿಂದ ಹಾಗೂ ಕರ್ನಾಟಕದಲ್ಲಿ ಈಗಾಗಲೇ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಕೇಂದ್ರ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲ್ಪಟ್ಟಿರುವುದರಿಂದ ಕರ್ನಾಟಕಕ್ಕೆ ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಐ.ಐ.ಟಿ. ಸ್ಥಾಪಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ.

2010ರ ಅಕ್ಟೋಬರ್‌ನಲ್ಲಿ ಮಾನ್ಯ ಕೇಂದ್ರ ಮಾನವ ಸಂಪನ್ಮೂಲ ಸಚಿವರಾದ ಶ್ರೀ ಕಪಿಲ್ ಸಿಬಲ್ ರವರು ಗುಲ್ಬರ್ಗಾಕ್ಕೆ ಭೇಟಿ ನೀಡಿದಾಗ ಕರ್ನಾಟಕಕ್ಕೆ ಐ.ಐ.ಟಿ. ಮಂಜೂರು ಮಾಡುವ ಕುರಿತು ಮಾನ್ಯ ಪ್ರಧಾನಮಂತ್ರಿಗಳ ಹಂತದಲ್ಲಿ ತೀರ್ಮಾನ ಆಗಬೇಕಾಗಿದ್ದು, ಈ ಬೇಡಿಕೆಯನ್ನು ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಪರಿಶೀಲಿಸಲಾಗುವುದೆಂದು ಮಾಧ್ಯಮಕ್ಕೆ ತಿಳಿಸಿರುತ್ತಾರೆ. ಈ ಕುರಿತು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯಲ್ಲಿ ದಿನಾಂಕ: 30-10-2010ರಂದು ಪ್ರಕಟವಾಗಿದೆ.

ಕರ್ನಾಟಕದಲ್ಲಿ ಐ.ಐ.ಟಿ. ಸ್ಥಾಪಿಸುವ ಕುರಿತು ಉಭಯಸದನದಲ್ಲಿ ಮಾನ್ಯ ಶಾಸಕರಾದ ಶ್ರೀ ಅಭಯ್ ಪಾಟೀಲ್ ಪ್ರೊ: ದೊರೆಸ್ವಾಮಿ ರವರು ಸಹ ಪ್ರಸ್ತಾಪ ಮಾಡಿದ್ದು. ಉತ್ತರವಾಗಿ ಈ ವಿಷಯವು ಕೇಂದ್ರ ಸರ್ಕಾರದಲ್ಲಿ ಬಾಕಿ ಇದೆ ಎಂದು ತಿಳಿಸಲಾಗಿದೆ.

ರಾಜ್ಯ ಸರ್ಕಾರ ಪುನಃ ದಿನಾಂಕ: 31-12-2001, 09-03-2012 ಹಾಗೂ ಇತ್ತೀಚೆಗಷ್ಟೇ ದಿನಾಂಕ: 02-04-2012 ರಂದು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ

ಪ್ರಧಾನಮಂತ್ರಿಗಳಿಗೆ ಹಾಗೂ ಮಾನ್ಯ ಕೇಂದ್ರ ಮಾನವ ಸಂಪನ್ಮೂಲ ಸಚಿವರಿಗೆ ಪತ್ರಗಳನ್ನು ಬರೆದು, ಕರ್ನಾಟಕದಲ್ಲಿ ಸುಮಾರು 100ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಕಂಪನಿಗಳು ಅಸ್ಥಿತ್ವದಲ್ಲಿದ್ದು, ಇಂತಹ ಕಂಪನಿಗಳಲ್ಲಿ ತಾಂತ್ರಿಕ ಗುಣಮಟ್ಟದ ಸಂಶೋಧನೆಯಲ್ಲಿ ಪಾಲ್ಗೊಳ್ಳಲು ಐ.ಐ.ಟಿ.ಗಳಲ್ಲಿ ಅಧ್ಯಯನ ಮಾಡಿ ವಿದ್ಯಾರ್ಥಿಗಳು ಹೆಚ್ಚಿನ ತಾಂತ್ರಿಕ ಪರಿಣತಿ ಹೊಂದಲು ಕರ್ನಾಟಕಕ್ಕೆ ಒಂದು ಐ.ಐ.ಟಿ. ಸ್ಥಾಪಿಸಲು ಕೋರಲಾಗಿದೆ. ಆದಾಗ್ಯೂ ಈ ಕುರಿತು ಕೇಂದ್ರ ಸರ್ಕಾರದಿಂದ ಇದುವರೆವಿಗೂ ಸಕಾರಾತ್ಮಕ ಉತ್ತರ ಬಂದಿರುವುದಿಲ್ಲ.

ದಿನಾಂಕ: 09-03-2012ರಂದು ಕೇಂದ್ರ ಮಾನವ ಸಂಪನ್ಮೂಲ ಸಚಿವರು ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದು ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಗುಲ್ಬರ್ಗಾದಲ್ಲಿ ಕೇಂದ್ರ ವಿಶ್ವವಿದ್ಯಾಲಯ ಸ್ಥಾಪಿತವಾಗಿರುವುದನ್ನು ಪುನರುಚ್ಚರಿಸಿ, ಐ.ಐ.ಟಿ. ಗಳನ್ನು ಸ್ಥಾಪಿಸುವ ಕುರಿತು ಹನ್ನೆರಡನೇ ಪಂಚವಾರ್ಷಿಕ ಯೋಜನೆ ಅನುಮೋದನೆಯನ್ನು ಕಾಯಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಡಾಃ ನಂಜುಡಪ್ಪ ಸಮಿತಿ ವರದಿಯಲ್ಲಿ ಶಿಫಾರಸ್ಸು ಮಾಡಿದಂತೆ ರಾಯಚೂರಿನಲ್ಲಿ ಐ.ಐ.ಟಿ. ಸ್ಥಾಪಿಸಬೇಕೆಂದು ಅನೇಕ ಶಾಸಕರು 2012ರ ಫೆಬ್ರವರಿ ತಿಂಗಳಿನಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡಿರುತ್ತಾರೆ. ಒಂದು ವೇಳೆ ರಾಯಚೂರಿನಲ್ಲಿ ಐ.ಐ.ಟಿ. ಸ್ಥಾಪಿತವಾದಲ್ಲಿ ಅದಕ್ಕೆ ಜಮೀನು ಹಾಗೂ ಇತರೆ ಮೂಲಸೌಲಭ್ಯಗಳನ್ನು ಒದಗಿಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಮೇಲೆ ತಿಳಿಸಿದ ಹಿನ್ನಲೆಯಲ್ಲಿ ಕರ್ನಾಟಕಕ್ಕೆ ಐ.ಐ.ಟಿ. ಸ್ಥಾಪಿಸುವ ಪ್ರಸ್ತಾವನೆ ಕಳೆದ 06 ವರ್ಷಗಳಿಂದ ಸತತವಾಗಿ ಕೋರಲಾಗುತ್ತಿದ್ದು ಇದುವರೆವಿಗೂ ಈ ವಿಷಯದಲ್ಲಿ ಕೇಂದ್ರ ಸರ್ಕಾರವು ಪರಿಗಣಿಸುತ್ತಿಲ್ಲವಾದ್ದರಿಂದ ಈ ಕುರಿತು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರ ನಿಯೋಗವು ಮಾನ್ಯ ಪ್ರಧಾನಮಂತ್ರಿಗಳು ಹಾಗೂ ಮಾನ್ಯ ಕೇಂದ್ರ ಮಾನವ ಸಂಪನ್ಮೂಲ ಸಚಿವರುಗಳನ್ನು ಖುದ್ದಾಗಿ ಭೇಟಿ ಮಾಡಿ ಕರ್ನಾಟಕಕ್ಕೆ ಐ.ಐ.ಟಿ. ಸ್ಥಾಪಿಸುವ ಕುರಿತು ಅವರಿಗೆ ಮನವರಿಕೆ ಮಾಡಲಾಗುವುದು.

ಮಾನ್ಯ ಅಧ್ಯಕ್ಷರೆ, ಕಳೆದ 6 ವರ್ಷಗಳಿಂದ ಕೇಂದ್ರದ ಮಾನವ ಸಂಪನ್ಮೂಲ ಸಚಿವರಿಗೆ ಕರ್ನಾಟಕದ ಬೆಳಗಾವಿಗೆ ಐ.ಐ.ಟಿ. ಕೊಡಬೇಕಂದು ಒತ್ತಡವನ್ನು ಹೇರುತ್ತಿದ್ದೇವೆ.

ಈ ಬಗ್ಗೆ ನಾವು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿ, ಮತ್ತೊಂದು ಬಾರಿ ಮಾನವ ಸಂಪನ್ಮೂಲ ಸಚಿವರನ್ನು ಕೇಂದ್ರದ ದೆಹಲಿಯಲ್ಲಿ ಭೇಟಿ ಮಾಡಿ ಒಂದು ಐ.ಐ.ಟಿ. ತರುವಂಥ ಪ್ರಮಾಣಿಕ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಡಿ., ರೇವಣ್ಣ: (ಹೊಳೆನರಸಿಪುರ): ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ ಒಂದು ಸಾವಿರ ಎಕರೆ ಜಮೀನಿನಲ್ಲಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಹೋಗಿತ್ತು. ದಯಮಾಡಿ ಹಾಸನವನ್ನು ನನಪಿನಲ್ಲಿಟ್ಟುಕೊಂಡು 1 ಸಾವಿರ ಎಕರೆ ಜಾಗದಲ್ಲಿ ಐ.ಐ.ಟಿ. ತಂದರೆ ಚಿಕ್ಕಮಗಳೂರಿಗೂ ಅನುಕೂಲವಾಗುತ್ತದೆ.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಮೊದಲು ಐ.ಐ.ಟಿ. ಯನ್ನು ಕರ್ನಾಟಕಕ್ಕೆ ತರುವ ಪ್ರಯತ್ನ ಮಾಡೋಣ, ಆಮೇಲೆ, ಬೆಳಗಾವಿ, ಧಾರವಾಡ, ಹಾಸನ, ರಾಯಚೂರು ಯಾವುದಕ್ಕೆ ಕೊಡಬೇಕೆನ್ನುವ ಬಗ್ಗೆ ನಾನು ಈಗ ಉನ್ನತ ಶಿಕ್ಷಣ ಸಚಿವನಾಗಿರುವುದರಿಂದ ಚಿಕ್ಕಮಗಳೂರಿಗೆ ತರುವ ಪ್ರಯತ್ನ ಮಾಡಬಹುದು. ಈ ಬಗ್ಗೆ ಆಮೇಲೆ ಆಲೋಚನೆ ಮಾಡೋಣ.

2. ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮುಖ್ಯವಾಗಿ ಕಟ್ಟಡ, ಶೌಚಾಲಯ, ಕುಡಿಯುವ ನೀರು, ಒದಗಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ

ಶ್ರೀ ಜೆ.ಡಿ ನಾಯ್ಕ್ (ಭಟ್ಕಳ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮುಖ್ಯವಾಗಿ ಕಟ್ಟಡ ಮತ್ತು ಶೌಚಾಲಯ, ಕುಡಿಯುವ ನೀರು ಏನು ಅನುಷ್ಠಾನ ಮಾಡಬೇಕಾಗಿತ್ತೂ, ಸಾಕಷ್ಟು ವಿಳಂಬವಾಗುತ್ತಿದೆ. ಶೀಘ್ರ ಅನುಷ್ಠಾನ ಮಾಡುವ ಬಗ್ಗೆ ನಾನು ಪ್ರಾಥಮಿಕ ಮತ್ತು ಪ್ರೌಢಶಾಲಾ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಓದಬೇಕೆಂದರೆ ಓದಿ ಹೇಳುತ್ತೇನೆ.

1. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರೌಢ ಶಿಕ್ಷಣದ ಸಾರ್ವತ್ರೀಕರಣ ಗುರಿಯನ್ನು ಈಡೇರಿಸುವ ದೃಷ್ಟಿಯಿಂದ ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಂ.ಎಸ್.ಎ) ಎಂದು ನೋಂದಾಯಿತವಾಗಿರುವ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕಾರ್ಯಕ್ರಮಕ್ಕೆ ತಗಲುವ ಅನುದಾನವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮವಾಗಿ 72.25ರ ಅನುಪಾತದಲ್ಲಿ ಭರಿಸುತ್ತವೆ.

2. ಈ ಕಾರ್ಯಕ್ರಮದಡಿಯಲ್ಲಿ ಕೆಳಕಂಡ 4 ವಿಭಾಗಗಳಲ್ಲಿ ಸಿವಿಲ್ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

(ಅ) ಸರ್ಕಾರಿ ಪ್ರೌಢ ಶಾಲೆಗಳಿಗೆ (ಉನ್ನತೀಕರಿಸಿದ) ಹೊಸ ಶಾಲಾ ಕಟ್ಟಡಗಳನ್ನು ನಿರ್ಮಿಸುವುದು.

(ಬ) ಪ್ರಸ್ತುತ ಸರ್ಕಾರಿ ಪ್ರೌಢ ಶಾಲೆಗಳನ್ನು ಬಲವರ್ಧನೆಗೊಳಿಸುವುದಕ್ಕಾಗಿ ಕಟ್ಟಡಗಳನ್ನು ನಿರ್ಮಿಸುವುದು.

(ಕ) ಆದರ್ಶ ವಿದ್ಯಾಲಯ ಹೆಸರಿನಲ್ಲಿ ಕೇಂದ್ರೀಯ ವಿದ್ಯಾಲಯ ಮಾದರಿ ಆಧಾರ ಮಾದರಿ ಶಾಲಾ ಸಂಕೀರ್ಣವನ್ನು ನಿರ್ಮಿಸುವುದು.

(ಈ) ಸರ್ಕಾರಿ ಪ್ರೌಢ ಶಾಲೆ/ ಕೆ.ಜಿ.ಬಿ.ವಿ. ಕಟ್ಟಡಗಳಿಗೆ ಹೆಣ್ಣು ಮಕ್ಕಳ ವಸತಿ ನಿಲಯ ನಿರ್ಮಿಸುವುದು.

3. ಸರ್ಕಾರಿ ಪ್ರೌಢ ಶಾಲೆಗಳಿಗೆ (ಉನ್ನತೀಕರಿಸಿದ) ಹೊಸ ಶಾಲಾ ಕಟ್ಟಡ ಹಾಗೂ ಪ್ರಸ್ತುತ ಸರ್ಕಾರಿ ಪ್ರೌಢ ಶಾಲೆಗಳನ್ನು ಬಲವರ್ಧನೆಗೊಳಿಸುವುದಕ್ಕಾಗಿ ಕಟ್ಟಡಗಳನ್ನು ನಿರ್ಮಿಸಲು 2009-10 ಹಾಗೂ 2010-11ನೇ ಸಾಲಿನಲ್ಲಿ ಅನುಮೋದಿಸಿದ ಘಟಕ ವೆಚ್ಚ ಹಾಗೂ 2011-12ನೇ ಸಾಲಿನ ಕೆ.ಪಿ.ಡಬ್ಲ್ಯೂ.ಡಿ. ಎಸ್.ಆರ್. ಅನ್ವಯ ಪರಿಷ್ಕೃತ ಘಟಕ ವೆಚ್ಚದ ವಿವರ ಕೆಳಕಂಡತಿದೆ.

Sl. No.	Description	As per sanctioned by MHRD (lakhs)	As per revised KPWD SR 2011-12 (lakhs)	Additional Amount required (lakhs)
1	New School buildings for Upgradation	16574.76	25063.00	8222.08
2	Strengtheing of existing Govt. High School	52649.46	80245.45	27595.99
3	Construction of Adarsha Vidyalaya / Model School	22348.00	33985.24	11637.24
	Total			**47455.31**

4. ಕೆ.ಪಿ.ಡಬ್ಲ್ಯೂ.ಡಿ. ಹೊರಡಿಸಿದ ಪರಿಷ್ಕೃತ ಷೆಡ್ಯೂಲ್ ದರಗಳ ಆಧಾರ ಇರುವ ಹೆಚ್ಚುವರಿ ಘಟಕ ವೆಚ್ಚವನ್ನು ಅನುಮೋದಿಸಲು, ಶಿಕ್ಷಣ ಇಲಾಖೆ ಕೇಂದ್ರ ಸರ್ಕಾರವನ್ನು ಪಿಎಬಿ ಸಭೆಗಳಲ್ಲಿ ಹಾಗೂ ಪತ್ರಗಳ ಮೂಲಕ ಮನವಿ ಮಾಡಲಾಗಿದೆ. ಆದರೆ, ಕೇಂದ್ರ ಸರ್ಕಾರ ಘಟಕ ವೆಚ್ಚವನ್ನು ಪರಿಷ್ಕರಿಸಲು ಒಪ್ಪಿಕೊಂಡಿಲ್ಲ. ಈ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗಿದ್ದು, ಶೀಘ್ರವೇ ಮೂಲಭೂತ ಸೌಕರ್ಯವನ್ನು ಒದಗಿಸುವ ಬಗ್ಗೆ ಕ್ರಮವಹಿಸಲಾಗುವುದು.

ಅಧ್ಯಕ್ಷರು : clarifications ಇದ್ದರೆ ಕೇಳಿ.

ಶ್ರೀ ಜೆ.ಡಿ ನಾಯ್ಕ್ (ಭಟ್ಕಳ): ಭಟ್ಕಳ ತಾಲ್ಲೂಕಿನ ಹೊರಟ್ಟಿ ಎನ್ನುವ ಪ್ರೌಢಶಾಲೆ ಮಾಧ್ಯಮಿಕ ಶಿಕ್ಷಣ ಯೋಜನೆಯಡಿ ಮಂಜೂರಾಗಿದೆ. ಒಟ್ಟು 5 ಪ್ರೌಢಶಾಲೆಗಳಲ್ಲಿ 2 ಉರ್ದು ಪ್ರೌಢಶಾಲೆ, 3 ಕನ್ನಡ ಪ್ರೌಢಶಾಲೆ ಮಂಜೂರಾಗಿದೆ. ಇನ್ನೂ ಕೂಡಾ ಕುಳಿತುಕೊಳ್ಳುವುದಕ್ಕೆ ಕಟ್ಟಡಗಳಿಲ್ಲ, ಬೆಂಚುಗಳಿಲ್ಲ, ಶಿಕ್ಷಕರ ಕೊರತೆ ಇದೆ, ಶೌಚಾಲಯ, ಕುಡಿಯುವ ನೀರಿನ ಕೊರತೆ ಇದೆ. ಹೊರಟ್ಟಿ ಎನ್ನುವ ಊರಿಗೆ ಕೇಂದ್ರ ಸರ್ಕಾರದಿಂದ 58 ಲಕ್ಷ ರೂಪಾಯಿ ಮಂಜೂರಾಗಿದೆ. 2 ವರ್ಷಗಳಾದರೂ ಟೆಂಡರ್ ಆಗಿಲ್ಲ ಅಥವಾ SDMC ಯವರಿಗೂ ಕಟ್ಟುವುದಕ್ಕೆ ಜವಾಬ್ದಾರಿ ಕೊಟ್ಟಿಲ್ಲ. 2 ವರ್ಷಗಳಾದರೂ ಕಟ್ಟಡ ಆಗಿಲ್ಲವೆಂದರೆ ನಮಗೆ ಸಂಶಯ ಬರುತ್ತದೆ, ಅನುದಾನ lapse ಆಗಿದೆಯೋ ಅಥವಾ ಅದರ ಜೀವ ಇದೆಯೋ ಗೊತ್ತಾಗುತ್ತಿಲ್ಲ. ದಯಮಾಡಿ ಈ ಬಗ್ಗೆ ಉತ್ತರ ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಿಂದ ಪ್ರೌಢಶಾಲೆಗಳ ಉನ್ನತೀಕರಣಕ್ಕೆ ಮತ್ತು ಪ್ರೌಢಶಾಲೆಗಳ ಬಲವರ್ಧನೆಗೆ ಅದರ್ಶ ವಿದ್ಯಾಲಯ ಕೇಂದ್ರೀಯ ವಿದ್ಯಾಲಯದ ಮಾದರಿ ಶಾಲೆಗಳನ್ನಾಗಿ ಮಾಡುವುದಕ್ಕೆ ಮತ್ತು KGVV ಕಟ್ಟಡ, ಹೆಣ್ಣುಮಕ್ಕಳ ವಸತಿ ನಿಲಯ ಕಟ್ಟಡ ಕಟ್ಟುವುದಕ್ಕೆ ಇತ್ಯಾದಿಗಳಿಗೆ ಬೇರೆ ಬೇರೆ ರೀತಿಯ ಹಣಕಾಸಿನ ಸೌಲಭ್ಯ ನಮಗೆ ಬಂದಿದೆ. ಆದರೆ 2009–10ರಲ್ಲಿ ಬಂದ ನಂತರದಲ್ಲಿ ನಾವು ಎಸ್.ಆರ್. ರೇಟ್, ಇದು ಇಡೀ ದೇಶದ ಸಮಸ್ಯೆಯಿದೆ. ಎಲ್ಲಾ ರಾಜ್ಯದ ಶಿಕ್ಷಣ ಸಚಿವರ ಸಭೆ ಕರೆದಾಗಲೂ ಇದೊಂದು ಮುಖ್ಯ ವಿಷಯವಾಗಿ ಚರ್ಚೆಯಾಗಿದೆ. ಎಸ್.ಆರ್. ರೇಟ್ ಬದಲಾಗಿರುವುದರಿಂದ, ಬದಲಾಗಿರುವ ಎಸ್.ಆರ್. ರೇಟ್‌ಗೆ ಕೇಂದ್ರ ಸರ್ಕಾರ ನಮಗೆ

ಹಣವನ್ನು ಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ಶೇಕಡ 72.25ರ ಪಾಲ್ಗೊಳ್ಳುವಿಕೆಯಿದೆ 75% ಕೇಂದ್ರ ಸರ್ಕಾರ ಕೊಡುತ್ತದೆ. 25% ರಾಜ್ಯ ಸರ್ಕಾರದ ಪಾಲಿದೆ. ಆದರೆ ಎಸ್.ಆರ್. ರೇಟ್ ಬದಲಾವಣೆಯಾಗಿರುವುದರಿಂದ ಕೇಂದ್ರ ಸರ್ಕಾರ ಬದಲಾಗಿರುವ ಎಸ್.ಆರ್. ರೇಟಿನ ಹಣವನ್ನು ಭರಿಸಬೇಕು ಎಂದು ನಾವು ಕೇಳುತ್ತಿದ್ದೇವೆ. ಆದರೆ ಅದಕ್ಕೆ ಕೇಂದ್ರ ಸರ್ಕಾರದೊಂದಿಗೆ ಇನ್ನೂ ಚರ್ಚೆಯನ್ನು ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಸ್ವಲ್ಪ ವಿಳಂಬವಾಗುತ್ತಿದೆ. ಆದರೆ ಕೇಂದ್ರ ಸರ್ಕಾರ ಈಗ ಕೊಡುತ್ತಿರುವಂಥ ಹಣವನ್ನು ಪೂರ್ಣ ಬಳಕೆ ಮಾಡಿಕೊಳ್ಳುವುದಕ್ಕೆ ರಾಜ್ಯ ಸರ್ಕಾರ ಬದ್ಧವಾಗಿದೆ. ರಾಜ್ಯ ಸರ್ಕಾರದ ಭಾಗವನ್ನು ಈಗಾಗಲೇ ಹಣಕಾಸಿನ ಇಲಾಖೆ ಜೊತೆಯಲ್ಲಿ ನಾವು ಸಮಾಲೋಚನೆ ಮಾಡಿ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಸಭೆಯನ್ನು ಮಾಡಿ ಅದನ್ನು ತೆಗದುಕೊಳ್ಳುವುದಕ್ಕೆ ಒಪ್ಪಿಗೆಯಲ್ಲಿದ್ದೇವೆ. ಎಸ್.ಆರ್. ರೇಟ್ ವ್ಯತ್ಯಾಸವನ್ನು ಅವರು ಕೊಡುತ್ತಾರೋ ಅಥವಾ ನಾವೇ ಭರಿಸಬೇಕೋ ಎನ್ನುವಂಥ ಚರ್ಚೆ ಏನಿದೆ, ಉಳಿದ process ಆಗುತ್ತಿದೆ. ಟೆಂಡರ್ ಮಾಡುವುದಕ್ಕೆ ಬೇಕಾದಂಥ ಉಳಿದ process ಆಗುತ್ತಿದೆ. Simultaneously ನಾವು ಹಣವನ್ನು ಹೊಂದಾಣಿಕೆ ಮಾಡಿಕೊಳ್ಳುವುದನ್ನು ನಾವು ಮಾಡಿಕೊಳ್ಳುತ್ತೇವೆ. ಮುಂದಿನ ದಿನಗಳಲ್ಲಿ ಸಚಿವ ಸಂಪುಟದ ಎದುರಿಗೆ ಈ ವಿಷಯವನ್ನು ತಂದು ಅಗತ್ಯವಾದ ರಾಜ್ಯದ ಪಾಲಿನ ಹಣವನ್ನು ಕೊಡುವುದಕ್ಕೆ ಅಗತ್ಯ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಜೆ.ಡಿ. ನಾಯ್ಕ್: ಕೇಂದ್ರ ಸರ್ಕಾರದಿಂದ ಹಣ ಬಂದು 2 ವರ್ಷವಾಗಿದ್ದು ಹಣ ಜಮಾ ಆಗಿದೆ.

ಅಧ್ಯಕ್ಷರು: ಮಾಡುತ್ತೇವೆಂದು ಹೇಳಿದ್ದಾರೆ.

3. ವಿಷಯ : ಉತ್ತರ ಕರ್ನಾಟಕದ ತುಂಗಭದ್ರಾ ಅಣೆಕಟ್ಟಿನಲ್ಲಿ ಹೂಳು ತುಂಬಿರುವುದರಿಂದ ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ನೀರಾವರಿಗೆ ತೊಂದರೆಯಾಗಿರುವ ಬಗ್ಗೆ

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದ ತುಂಗಭದ್ರಾ ಅಣೆಕಟ್ಟಿನಲ್ಲಿ ಹೂಳು ತುಂಬಿರುವುದರಿಂದ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ನೀರಾವರಿ ಸೌಲಭ್ಯಕ್ಕೆ ತೊಂದರೆಯಾಗಿರುವುದರಿಂದ,

ಶ್ರೀ ಬಸವರಾಜ ಬೊಮ್ಮಾಯಿ: (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ,

ತುಂಗಭದ್ರಾ ಅಣೆಕಟ್ಟು ಬಳ್ಳಾರಿ ಜಿಲೆ ಹೊಸಪೇಟೆ ತಾಲ್ಲೂಕಿನಲ್ಲಿ ನಿರ್ಮಾಣಗೊಂಡಿರುತ್ತದೆ. ಈ ಯೋಜನೆಯಡಿ ರಾಜ್ಯದ ಬಳ್ಳಾರಿ, ಕೊಪ್ಪಳ ಹಾಗೂ ರಾಯಚೂರು, ಜಿಲ್ಲೆಗಳ ಒಟ್ಟು 3,62,785.00 ಹೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತದೆ. ಈ ಯೋಜನೆ ಅಂತರ್ ರಾಜ್ಯ ಹಾಗೂ ವಿವಿದೋದ್ದೇಶದ ಯೋಜನೆಯಾಗಿರುತ್ತದೆ. ಅಣೆಕಟ್ಟು ನಿರ್ಮಾಣ 1953 ರಲ್ಲಿ ಪೂರ್ಣಗೊಂಡಿದ್ದು ಆಗ ಜಲಾಶಯದ ನೀರಿನ ಸಂಗ್ರಹಣ ಸಾಮರ್ಥ್ಯ 132.83 ಟಿ.ಎಂ.ಸಿಯಾಗಿರುತ್ತದೆ. ಆಂದಿನಿಂದ ಜಲಾಶಯದಲ್ಲಿ ವರ್ಷದಿಂದ ವರ್ಷಕ್ಕೆ ಹೂಳು ಸಂಗ್ರಹಣೆಯಾಗಿ ಜಲಾಶಯದ ನೀರಿನ ಶೇಖರಣಾ ಸಾಮರ್ಥ್ಯ ಕುಂಠಿತಗೊಂಡಿದೆ. ಸಂಗ್ರಹಣೆಯಾಗಿರುವ ಹೂಳಿನ ಪ್ರಮಾಣವನ್ನು ತಿಳಿಯಲು ಹೈಡ್ರೋಗ್ರಾಫಿಕ್ ಸರ್ವೆ, ಕೈಗೊಂಡಿದ್ದು ವಿವರಗಳು ಕೆಳಗಿನಂತಿವೆ.

ಕ್ರ ಸಂ.	ಸರ್ವೆ ಮಾಡಿದ ವರ್ಷ	ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯ ಟಿ.ಎಂ.ಸಿ	ಹೂಳಿನ ಸಂಗ್ರಹಣೆ ವಿವರಗಳು (ಟಿ.ಎಂ.ಸಿ.)	ಅವಧಿ (ವರ್ಷಗಳಲ್ಲಿ)	ವಾರ್ಷಿಕ ಸಾಮರ್ಥ್ಯ ನಷ್ಟ (ಟಿ.ಎಂ.ಸಿ.)
1	1953	132.47	–	–	–
2	1993	111.50	20.963	40	0.524
3	2004	104.34	7.168	11	0.625
4	2008	100.85	3.485	04	0.871
		ಒಟ್ಟು	**31.616**	**55**	**0.575**

ಜಲಾಶಯದಲ್ಲಿ ಸುಮಾರು 31 ಟಿ.ಎಂ.ಸಿ ಹೂಳು ಸಂಗ್ರಹಣೆಯಾಗಿದ್ದು, ಇದರಿಂದಾಗಿ ರಾಜ್ಯದ ಯೋಜಿತ ನೀರಾವರಿ ಪ್ರದೇಶಕ್ಕೆ ನೀರೊದಗಿಸಲು ತೊಂದರೆಯಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಹೂಳಿನ ಸಂಗ್ರಹಣೆ ಹೆಚ್ಚಾಗಿರುವುದಕ್ಕೆ ಜಲಾನಯನ ಪ್ರದೇಶದಲ್ಲಿ ನಡೆಯುತ್ತಿರುವ ಗಣಿಗಾರಿಕೆ ಕಾರಣವಿರಬಹುದೆಂದು ಭಾವಿಸಲಾಗಿದೆ. ಜಲಾಶಯಕ್ಕೆ ಬಂದು ಸೇರುತ್ತಿರುವ ಹೂಳನ್ನು ತಡೆಗಟ್ಟಲು ಮೇಲ್ಭಾಗದಲ್ಲಿ ಹಿರೇಹಳ್ಳ, ಹಗರಿಬೊಮ್ಮನಹಳ್ಳಿ ಜಲಾಶಯಗಳು ಹಾಗೂ ಸಿಂಗಟಲೂರು ಬ್ಯಾರೇಜನ್ನು ನಿರ್ಮಿಸಲಾಗಿದೆ.

ಭಾರಿ ಜಲಾಶಯಗಳಲ್ಲಿ ಹೂಳು ನಿರ್ಮೂಲನೆ ಮಾಡಿರುವ ಪ್ರಸಂಗಗಳು ವಿಶ್ವದಲ್ಲೇ ಎಲ್ಲಿಯೂ ಕಂಡುಬರುತ್ತಿಲ್ಲ. ಆದಾಗ್ಯೂ ಹೆಚ್ಚಾಗಿ ಸಂಗ್ರಹಣೆಯಾಗಿರುವ ಹೂಳನ್ನು ತೆಗೆಯಲು ಸರ್ಕಾರದಿಂದ ಪ್ರಯತ್ನಗಳು ಉದ್ದೇಶಿಸಿದೆ. 2010 ರಲ್ಲಿ Expression of interest ಕೋರಿ ಜಾಗತೀಕ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಹಾಗೂ ಆರ್ಥಿಕ

ಕಾರಣಗಳಿಂದ ಇದು ಕೈಗೂಡಿರುವುದಿಲ್ಲ. ಇತೀಚೆಗೆ ತುಂಭದ್ರಾ ಜಲಾಶಯದಲ್ಲಿ ಸಂಗ್ರವಾಗಿರುವ ಹೂಳಿನ ನಿರ್ಮೂಲನೆಯ ನೂತನ ಯೋಜನೆಯನ್ನು ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. ಕಂಪನಿಯೊಂದು ಸ್ವಂತ ವೆಚ್ಚದಲ್ಲಿ ಟ್ರಯಲ್ ಡ್ರೆಡ್ಜಿಂಗ್ ಮಾಡಿ ಹೂಳಿನ ವಿಶ್ಲೇಷಣೆ ಹಾಗೂ ವಾಣಿಜ್ಯ ಮೌಲ್ಯವನ್ನು ನಿರ್ಧರಿಸಿ ಯೋಜನೆಯ ಸಾಧ್ಯ ಸಾಧ್ಯಾತಾ ವರದಿ/ವಿವರವಾದ ಯೋಜನಾ ವರದಿ ಸಲ್ಲಿಸಲು ಮುಂದೆ ಬಂದಿರುತ್ತದೆ. ಸದರಿ ಪ್ರಸ್ತಾವನೆಯನ್ನು ಸಚಿವ ಸಂಪುಟದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ವೆಂಕಟರಾವ್ ನಾಡಗೌಡ: ತುಂಗಭದ್ರಾ ಅಣೆಕಟ್ಟಿನ ನೀರಿನಿಂದ ಸುಮಾರು 3 ಲಕ್ಷ 62 ಸಾವಿರಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯವನ್ನು ಪಡೆಯಲಾಗುತ್ತಿತ್ತು. ಅಂತರ್ ಜಿಲ್ಲೆಗೆ ರಾಜ್ಯಕ್ಕೆ ಸಂಬಂಧಪಟ್ಟಂತೆ, ಈಗಾಗಲೇ ಇದರ ಸಾಮರ್ಥ್ಯ 132.47 ಟಿ.ಎಂ.ಸಿ. ಇತ್ತು. ಈಗ 31 ಟಿ.ಎಂ.ಸಿ. ಅಡ್ಡಿ ಹೂಳು ತುಂಬಿರುವ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಮೊನ್ನೆ ಈ ಸಾರಿಯ ಬಜೆಟ್‌ನಲ್ಲಿ ಹೂಳು ಎತ್ತುವ ಪ್ರಸ್ತಾವನೆಯನ್ನು ಕೂಡಾ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದರು. ಮಾನ್ಯ ನೀರಾವರಿ ಸಚಿವರು ಈಗಾಗಲೇ ನಮ್ಮ ಜಿಲ್ಲೆಯ ಎಲ್ಲಾ ಪ್ರತಿನಿಧಿಗಳು ಹಾಗೂ ರೈತ ಮುಖಂಡರನ್ನು ಕರೆದು ಸಭೆಯನ್ನು ಕೂಡಾ ಮಾಡಿದ್ದಾರೆ. ಅವರು ಈ ಸಾರಿ ಉತ್ತಮ ನಮ್ಮ ಭಾಗಕ್ಕೆ ಒಳ್ಳೆಯ ಕೆಲಸಗಳನ್ನು ಎಡದಂಡೆ ನಾಲೆಗೆ ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ಜಿಲ್ಲೆಯ ಎಲ್ಲಾ ನೀರಾವರಿಯ ರೈತರ ಪರವಾಗಿ ಅಭಿನಂದಿಸುತ್ತೇನೆ. ನಮ್ಮ ದೊಡ್ಡ ಸಮಸ್ಯೆ ಏನೆಂದರೆ ಅಣೆಕಟ್ಟಿನಲ್ಲಿ ಹೂಳು ತುಂಬಿರುವ ಬಗ್ಗೆ ದೊಡ್ಡ ಚರ್ಚೆಯಾಗಿದೆ. ಇದನ್ನು ಹೇಗೆ ತೆಗೆಯಬೇಕು ಎನ್ನುವುದಕ್ಕೆ ಅವರು 2-3 ಸಭೆಗಳನ್ನು ಮಾಡಿದ್ದರು. ನಮಗೇನಾಗಿದೆ ಎಂದರೆ ಹೂಳು ತೆಗೆಯುವ ಕೆಲಸ ಆಗುತ್ತದೋ ಅಥವಾ ಇಲ್ಲವೋ ಎನ್ನುವುದು, ಹೂಳು ತೆಗೆಯುವುದಕ್ಕೆ ಅವಕಾಶ ಇದೆಯೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಇನ್ನು ಸರಿಯಾದ picture ಯಾರಿಗೂ ಗೊತ್ತಾಗುತ್ತಿಲ್ಲ. ಅದಕ್ಕೆ ಅವರು privateನವರಿಗೆ ಅದನ್ನು ಕೊಟ್ಟಿದ್ದೇವೆ ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಹೂಳನ್ನು ತೆಗೆಯದೇ ಇದ್ದರೆ ಕ್ರಮೇಣವಾಗಿ ನಮಗೆ ನೀರಿನ ತೊಂದರೆ ಆಗುತ್ತಿದೆ. ರೈತರು ಕುಡಿಯುವ ನೀರು ಹಾಗೂ ನೀರಾವರಿಗೆ ಈ ಡ್ಯಾಮ್‌ನ್ನೇ ಅವಲಂಬಿಸಿದ್ದಾರೆ. ಆದ್ದರಿಂದ, ಏನಾದರೂ ಮಾಡಿ ಹೂಳನ್ನು ತೆಗೆದರೆ ಮತ್ತೆ ಜೀವವನ್ನು ಕೊಟ್ಟಂತೆ ಆಗುತ್ತದೆ, ಇದಕ್ಕೆ ಏನು ಪ್ರಯತ್ನ

ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು): ಮಾನ್ಯ ಸಭಾಧ್ಯಕ್ಷರೆ, ತುಂಗಭದ್ರಾ ಅಣೆಕಟ್ಟಿನ ಸಂಗ್ರಹ ಸಾಮರ್ಥ್ಯ 132.83 ಟಿ.ಎಂ.ಸಿ ಆದರೆ ಈ ಡ್ಯಾಮ್ ಆದ ಮೇಲೆ ಹೂಳು ನದಿ ಪಾತ್ರಕ್ಕೆ ಬರಬಾರದೆಂದು ಕೆಲವು ಕಾರ್ಯಕ್ರಮಗಳೇನಿತ್ತು, forestation ಮತ್ತು ಅಲ್ಲಲ್ಲಿ ಒಡ್ಡು ಕಟ್ಟುವಂಥದ್ದು, ಅದು ಯಾವುದೂ ಆಗದ ಕಾರಣದಿಂದ ಇವತ್ತು ಬಹಳ ದೊಡ್ಡ ಪ್ರಮಾಣದ ಹೂಳು ಅಲ್ಲಿ ಶೇಖರಣೆಯಾಗಿದೆ. ಇದು ಒಂದು ತಾಂತ್ರಿಕವಾಗಿರುವ ಸವಾಲು ಮತ್ತು ಆರ್ಥಿಕ ಸವಾಲು ಕೂಡಾ ಆಗಿದೆ. ಇಡೀ ವಿಶ್ವದಲ್ಲಿಯೇ ಈ ರೀತಿಯ reservoir ಗಳಲ್ಲಿ ಹೂಳು ತೆಗೆಯುವಂಥದ್ದು ಬಹಳ ಕಷ್ಟಕರ ಎನ್ನುವುದನ್ನು ಈಗಾಗಲೇ ಬೇರೆ ಬೇರೆ ದೇಶಗಳಲ್ಲಿ ನಡೆದಂಥ ಪ್ರಯೋಗದಿಂದ ಗೊತ್ತಾಗಿದೆ. ಆದ್ದರಿಂದ ಇದು ಒಂದು Global challenge, ಅದರಲ್ಲಿ ಏನಿದೆ ಅಂದರೆ ನದಿ ಪಾತ್ರ ಮಧ್ಯದಿಂದ ಅದು ಬಹಳ ಅಗಲವಾಗಿರುವಂಥ ಮತ್ತು ಆಳವಾಗಿರುವಂಥ ಮಧ್ಯದಿಂದ ಹೂಳು ತೆಗೆಯಬೇಕಾಗುತ್ತದೆ. ಮೊದಲು ಯಾವ ರೀತಿಯ ಹೂಳು ಇದೆ ಎನ್ನುವುದನ್ನು ಪರೀಕ್ಷೆ ಮಾಡಬೇಕಾಗುತ್ತದೆ. ಪರೀಕ್ಷೆ ಆದ ಮೇಲೆ ಕೆಳಗಡೆ ಎಲಾ hardening ಆಗಿರುತ್ತದೆ. ಅದನ್ನು ತೆಗೆಯುವಂಥದ್ದು ಬಹಳ ಕಷ್ಟಸಾಧ್ಯವಾಗಿರುವ ವಿಚಾರ, ಅದಕ್ಕಾಗಿ ಬಹಳಷ್ಟು ಕಡೆ ಮಾಡಿದಂಥ ಪ್ರಯೋಗಗಳು ವಿಫಲವಾಗಿವೆ. 2ನೇ ಸವಾಲು ನದಿಯ ಮಧ್ಯದಿಂದ ಹಿಡಿದು, ದಂಡೆಗೆ ದೊಡ್ಡ ಪ್ರಮಾಣದ ಹೂಳನ್ನು ಯಾವ ರೀತಿ transport ಮಾಡಬೇಕು ಎನ್ನುವುದು, ಅಲ್ಲಿಂದ ಹೂಳನ್ನು ತಂದು ಎಲ್ಲಿ dump ಮಾಡಬೇಕು ಎನ್ನುವುದು ಬಹಳ ದೊಡ್ಡ ಸಮಸ್ಯೆಯಾಗಿದೆ. ಟಿ.ಎಂಸಿ. ಹೂಳು ಎಂದರೆ 2.8 crores cubic meter. ಅಂದರೆ ಜನಸಾಮಾನ್ಯರಿಗೆ ಗೊತ್ತಾಗಬೇಕಾದರೆ 20 ton lorry load ಅಂದರೆ 2.5 ಲಕ್ಷ ಸಾರಿ 1 ಟಿ.ಎಂ.ಸಿ ಹೂಳು. ಇದು ಬಹಳ ದೊಡ್ಡ ಸವಾಲಿದೆ. ಇದರ technology ಕೂಡಾ ಇನ್ನು proven ಆಗಿರಲಿಲ್ಲ. ಈಗ ಒಬ್ಬರು ಟೆಪ್ರೋ ಎನ್ನುವ ಕಂಪನಿ dredging machinery ಮಾಡುತ್ತಾರೆ ಮತ್ತು sea dredge ನಲ್ಲಿದ್ದಾರೆ. Dredging ಮಾಡುವುದು ಸಾಮಾನ್ಯವಾಗಿ ಸಮುದ್ರದಲ್ಲಿ. ಆದರೆ ಇವತ್ತು ನಾವು ಹೊಸ cutter ಗಳನ್ನು, ಹೊಸ ತಂತ್ರಜ್ಞಾನವನ್ನು ಮಾಡಿದ್ದೇವೆ. Vacuum pump ನಿಂದ slurry ಮುಖಾಂತರ ವಾಪಸ್ಸು ತರುತ್ತೇವೆ. ಆದುದರಿಂದ ನಮಗೆ ಒಂದು ಅವಕಾಶವನ್ನು ಮಾಡಿಕೋಡಿ. ನಾವೇ ದುಡ್ಡನ್ನು ಹಾಕಿ 0.4 ಟಿ.ಎಂ.ಸಿ. ಯಷ್ಟು ಹೂಳನ್ನು ತೆಗೆಯುವ ಪ್ರಯೋಗಿಕ ಕೆಲಸವನ್ನು ನಾವು

ಮಾಡುತ್ತೇವೆಂದು ಮುಂದೆ ಬಂದಿದ್ದಾರೆ. ಅದನ್ನು ನಮ್ಮ ತಾಂತ್ರಿಕ ವರ್ಗದವರೆಲ್ಲ, ಪರೀಕ್ಷೆ ಮಾಡಿದ್ದಾರೆ. ಬರುವ ಸಂಪುಟದ ಮುಂದೆ ಒಂದು MoU ಗೆ ಸಹಿ ಮಾಡಬೇಕಾಗುತ್ತದೆ. ಸಂಪುಟದ ಮುಂದೆ ತಂದು ಆ ಒಂದು ಪ್ರಯೋಗವನ್ನು ಮಾಡುತ್ತೇವೆ. ಬಹತೇಕವಾಗಿ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ ಅವರು ಕಾರ್ಯಾಚರಣೆಯನ್ನು ಮಾಡುತ್ತಾರೆ. ಸುಮಾರು 5–6 ತಿಂಗಳು ಹೂಳನ್ನು ತೆಗೆಯಲು ಸಮಯ ಬೇಕಾಗುತ್ತದೆ. ಸುಮಾರು 2.5 ಲಕ್ಷ ಲಾರಿ ಲೋಡಷ್ಟು ಆಗುತ್ತದೆ. ಆ ಪ್ರಯೋಗದಲ್ಲಿ analysis ಮಾಡುತ್ತಾರೆ. ಅವರು ಹೇಳುವ ಪ್ರಕಾರ ಅದರಲ್ಲಿ 20% sand contents ಇದ್ದರೂ ಕೂಡಾ ತುಂಗಭದ್ರಾದಲ್ಲಿ ಬಹುತೇಕವಾಗಿ clay, sand ಮತ್ತು ಸ್ವಲ್ಪ ಮಟ್ಟಿಗೆ iron ore ಇರಬಹುದು ಎಂದು ಅಂದಾಜಿಸಲಾಗಿದೆ. ಈಗಾಗಲೇ bore ತೆಗೆದು sample ಗಳನ್ನು anaylysis ಮಾಡಿದ್ದಾರೆ. ಅದರಲ್ಲಿ 20% ಆದರೂ sand ಬಂದರೆ ಅದು economically feasible ಆಗುತ್ತದೆ ಎಂಬ ವಿಚಾರವನ್ನು ಇಟ್ಟಿದ್ದು, ಸಂಪೂರ್ಣ DPR ಮಾಡಿ economic feasibility ಕೊಡುತ್ತಾರೆ. ಮುಂದೆ ಯಾವ ರೀತಿ ಮಾಡಬೇಕೆಂದು ಕೊಡುತ್ತಾರೆ. ಆ ಆಧಾರದ ಮೇಲೆ ನಾವು ತೆಗೆಯಬೇಕಾಗುತ್ತದೆ. ಒಂದು rough estimate ಏಕೆಂದರೆ, dump ಮಾಡುವಂತಹ ಪ್ರದೇಶ ಎಷ್ಟು ದೂರ ಇದೆ, ಅಷ್ಟು cost ಹೆಚ್ಚಿಗೆ ಆಗುತ್ತದೆ. ಅದೇ major cost. Dump ಮಾಡುವ ಪ್ರದೇಶ ಹತ್ತಿರ ಇದ್ದರೆ cost ಕಡಿಮೆ ಆಗುತ್ತದೆ. ದೂರವಿದ್ದರೆ ಬಹಳ Costly ಆಗುತ್ತದೆ. Trasportation is a major item, cost ನಲ್ಲಿ. Location ನೋಡಿದ ಮೇಲೆ, ಅಂದಾಜು ಮಾಡಿರುವುದು ಈಗಿರುವ ಇದರಲ್ಲಿ ಒಂದು ಟಿ.ಎಂ.ಸಿ. ಗೆ 1200 ಕೋಟಿ ರೂ. ಬೇಕಾಗುತ್ತದೆ. ಆದುದರಿಂದ ಇದು ಬಹಳ ದೊಡ್ಡದಾಗುವುದರಿಂದ ಇದನ್ನು ಸವಾಲನ್ನು ಮಾಡಲಿಕ್ಕೆ ಬರೇ ಹೂಳು ತೆಗೆಯುವುದು ಒಂದೇ ಅಲ್ಲ. ಇನ್ನೊಂದು ಸಲಹೆಯನ್ನು ಕೂಡಾ ನಮ್ಮ ತಾಂತ್ರಿಕ ವರ್ಗದವರು 5–6 ವರ್ಷಗಳಿಂದ ಕೊಟ್ಟಿದ್ದಾರೆ. ಅದೇನೆಂದರೆ ಆಂಧ್ರದವರ ಜೊತೆ ಮಾತನಾಡಿಕೊಂಡು ನಾವು ನಮ್ಮ reservoir height ಅನ್ನು ಹೆಚ್ಚು ಮಾಡಬಹುದು ಎಂದು. ತಾಂತ್ರಿಕ ವಲಯದಲ್ಲಿ 2 ರಾಜ್ಯದ ಮಟ್ಟಿಗೆ ಮಾತನಾಡುತ್ತಿದ್ದಾರೆ. ಕೇಂದ್ರದ Dam sfety Committee ಮುಂದೆ ಅದನ್ನು ಇಡಬೇಕೆಂದು, structrually possible ಇದೆಯಾ feasible ಇದೆಯಾ ಎಂದು ನೋಡಬೇಕಾಗುತ್ತದೆ. ಅದರಲ್ಲಿ additional and submersion ಸಮಸ್ಯೆ ಬರುತ್ತದೆ. ಹಿಂದೆ 4 balancing reservoirs ಅನ್ನು ನಾವು ನಮ್ಮ TSC ಯಲ್ಲಿ approve ಮಾಡಿ ಇಟ್ಟಿದ್ದೇವೆ. ಆಂಧ್ರದವರ objection ಇರುವುದರಿಂದ

section -5 ನಲ್ಲಿ ಏನು ಕರ್ನಾಟಕ ಕೃಷ್ಣ water dispute review ಆಗುತ್ತದೆ. ಅದು ಸೆಪ್ಟೆಂಬರ್‌ನಲ್ಲಿ ಮುಗಿಯುತ್ತದೆ. ಆಗ ನಮಗೆ ಅವಕಾಶ ಸಿಗಬಹುದು. ಆ 4 balancing reservoir ನಲ್ಲಿ ಸ್ವಲ್ಪ ನೀರನ್ನು ಬಳಕೆ ಮಾಡಬಹುದು ಎಂದು almost 10 TMC ಯಷ್ಟು ಬಳಕೆ ಮಾಡಬಹುದು ಎಂದು ಅಂದಾಜಿಸಲಾಗಿದೆ. ಈ ಮೂರು option ಅನ್ನು ನೋಡುತ್ತಿದ್ದೇವೆ. ಈ ಪ್ರಯೋಗದ ಫಲಿತಾಂಶ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಈಗ ಶ್ರೀ ಹಾಲಪ್ಪನವರು. ಬೇರೆಯವರಿಗೆ ಇಲ್ಲ. ಗಮನ ಸೆಳೆಯುವುದಕ್ಕೆ ಅಷ್ಟು detail clarification ಕೊಟ್ಟಿದ್ದಾರೆ.

ಶ್ರೀ ವೆಂಕಟರಾವ್ ನಾಡಗೌಡ: ತಾವು ಒಂದು ಸಾರಿ ಸಭೆ ಕರೆದಿದ್ದಿರಿ. ಈಗ ಮತ್ತೊಮ್ಮೆ ಸಭೆ ಕರೆದು ಚರ್ಚೆ ಮಾಡಿದರೆ, ಒಳ್ಳೆಯದು. ಈ dump ಮಾಡಿದ್ದನ್ನು ಒಯ್ಯುವುದು ಹೇಗೆ, ರೈತರು ಬಳಸಿಕೊಳ್ಳುವುದಕ್ಕೆ ಅವಕಾಶ ಇದೆಯೇ ಎನ್ನುವುದನ್ನು ಹೇಳಬೇಕೆಂದು ಮನವಿ ಮಾಡುತ್ತೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ನಾನು ಕೂಡಾ ಅದನ್ನೇ ಹೇಳಿರುವುದು. ಆ feasibility ಯನ್ನೆಲ್ಲಾ study ಮಾಡಬೇಕಾಗುತ್ತದೆ. ಅದು ಸುಲಭವಲ್ಲ. Global challenge ಎಂದೇ ನಾನು ಹೇಳಿರುವುದು. ಅದ್ದರಿಂದ ಈ ಮೂರು option ನಲ್ಲಿ ಯಾವುದು ಸುಲಭವಾಗಿ ಮಾಡಬಹುದು ಅದನ್ನು ಮಾಡುತ್ತೇವೆ.

ಅಧ್ಯಕ್ಷರು: ಈಗ ಶ್ರೀ ಶ್ರೀಕಾಂತ ಕುಲಕರ್ಣಿಯವರು.

4. ವಿಷಯ: ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿ ಎಡಬಲ ದಂಡೆಯ 14 ಹಳ್ಳಿಗಳ ಶಾಲೆಗಳ ಹಳೆಯ ಕಟ್ಟಡ ರಿಪೇರಿ ಹಾಗೂ ಹೊಸ ಕಟ್ಟಡಗಳನ್ನು ಕಟ್ಟುವ ಬಗ್ಗೆ

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ): ಸನ್ಮಾನ್ಯ ಅಧ್ಯಕ್ಷರೆ, ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿ ಎಡಬಲ ದಂಡೆಯ 14 ಹಳ್ಳಿಗಳ ಶಾಲೆಗಳ ಹಳೆಯ ಕಟ್ಟಡ ರಿಪೇರಿ ಹಾಗೂ ಹೊಸ ಕಟ್ಟಡಗಳ ಕಟ್ಟುವಿಕೆಯ ಬಗ್ಗೆ ಮಾನ್ಯ ಶಿಕ್ಷಕರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಪುನರ್ ವಸತಿ ಕೇಂದ್ರಗಳಲ್ಲಿನ ಹೊಸ ಕಟ್ಟಡಗಳಿಗೆ ಶಾಲೆಗಳನ್ನು ಸ್ಥಳಾಂತರಿಸಲು ಗ್ರಾಮದ ಜನ ಸಮುದಾಯವನ್ನು ಪದೆ, ಪದೆ, ವಿನಂತಿಸಿದಾಗ್ಯೂ ಕೂಡಾ ಗ್ರಾಮಸ್ಥರು ಮತ್ತು ಎಸ್.ಡಿ.ಎಂ.ಸಿಯವರು ಅಲ್ಲಿಗೆ ಮಕ್ಕಳನ್ನು ಕಳುಹಿಸಲು ಸಿದ್ಧರಿಲ್ಲವಿರುವುದರಿಂದ ಅದೇ ಗ್ರಾಮದಲ್ಲಿ ಹಳೇ ಶಾಲಾ ಕಟ್ಟಡದಲ್ಲಿ ಶಾಲೆಗಳು ನಡೆಯುತ್ತಿದೆ.

ಸದರಿ ವಿಷಯದಲ್ಲಿ ವಸ್ತುಸ್ಥಿತಿ ಆಧಾರದ ಮೇಲೆ ಸರ್ಕಾರವು ಪುನರ್ ವಸತಿ ಕೇಂದ್ರಗಳಲ್ಲಿರುವ ಹೊಸ ಕಟ್ಟಡಗಳಿಗೆ ಶಾಲೆಗಳನ್ನು ಸ್ಥಳಾಂತರಿಸಲು ಪೋಷಕರುಗಳ ಎಸ್‌ಡಿಎಂಸಿ ಯವರ ಮನವೊಲಿಸಿ ಕ್ರಮವಹಿಸಲಾಗುವುದು.

ಅಧ್ಯಕ್ಷರು: ಅವರು ಏನೋ clarification ಕೇಳುವವರಿದ್ದಾರೆ ಕೇಳಲಿ.

ಶ್ರೀ ಶ್ರೀಕಾಂತ ಕುಲಕರ್ಣಿ: ಸನ್ಮಾನ್ಯ ಅಧ್ಯಕ್ಷರೆ,...

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಒಂದೇ ನಿಮಿಷ ನಾನು ಹೇಳುತ್ತೇನೆ. ಸನ್ಮಾನ್ಯ ಅಧ್ಯಕರೆ ಈ ವಿಷಯವನ್ನು ಅವರು ಬೇಡಿಕೆಗಳ ಮೇಲೆ ಮಾತನಾಡುವಾಗಲೂ ಮಾತನಾಡಿದ್ದಾರೆ. ಪ್ರಶ್ನೆ ರೂಪದಲ್ಲಿ ಇದನ್ನು ತಂದಿದ್ದರು. ಈಗ 73 ರಡಿಯಲ್ಲಿ ಇದನ್ನು ತಂದಿದ್ದಾರೆ. ಹಾಗಾಗಿ ಈ ವಿಷಯದ ಬಗ್ಗೆ ಶ್ರೀಕಾಂತ ಕುಲಕರ್ಣಿಯವರ ಜೊತೆ ನಾನು ಮಾತನಾಡಿದ್ದೇನೆ. ವಿವರವಾದ ಪತ್ರವನ್ನು ಕೊಟ್ಟಿದ್ದೇವೆ. ಇದೊಂದೊ ತಾಂತ್ರಿಕವಾದ ಸಮಸ್ಯೆ. ಈಗ ನಾವು rehabilitation area ದಲ್ಲಿ ಶಾಲೆಗಳನ್ನು ಕಟ್ಟಿದ್ದೇವೆ. ಆ ಶಾಲೆಗಳಿಗೆ ಹೋಗುವುದಿಲ್ಲ. ಏಕೆಂದರೆ Dam height ಹೆಚ್ಚಾದರೆ ಮಾತ್ರ ಮುಳುಗುತ್ತದೆ. ಮುಳುಗಿದರೆ ಮಾತ್ರ ಊರು ಬಿಟ್ಟು ಹೋಗುತ್ತಾರೆ. ಇಲ್ಲದಿದ್ದರೆ ಊರು ಬಿಟ್ಟು ಹೋಗುವುದಿಲ್ಲ. ಹಾಗಾಗಿ ಈ 13 ಶಾಲೆಗಳು ಅದೇ ಸ್ಥಿತಿಯಲ್ಲಿ ಅಲ್ಲಿದೆ. ಮಕ್ಕಳು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಆದರೆ ಇದು ಮುಳುಗಡೆಯಾಗುವ ಪ್ರದೇಶಕ್ಕೆ ಹೋಗಬೇಕಾಗುತ್ತದೆನ್ನುವ ಕಾರಣಕ್ಕಾಗಿ repair ಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಎನ್ನುವುದು ತಾಂತ್ರಿಕವಾಗಿರುವುದು. ನಾನು ಇದನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಲ್ಲಿ ಏನು ಹಣ ಕೊಡುತ್ತೇವೆ, ಅದನ್ನು ಬಳಕೆ

ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳವ ಒಂದು ಯೋಚನೆಯನ್ನೂ ಮಾಡುತ್ತಿದ್ದೇವೆ. ಅಥವಾ ಅಲ್ಲಿ ಯಾವ dam ನಿಂದ ನೀರು ನಿಂತಿದೆಯೋ ಅಲ್ಲಿ ಪುನರ್ ವಸತಿಯನ್ನೆಲ್ಲಾ ಕಲ್ಪಿಸಿ ಮೂಲಭುತ ವ್ಯವಸ್ಥೆಯನ್ನು ಮಾಡಿದ್ದಾರೋ ಅದರಡಿಯಲ್ಲಿಯೇ ಇದಕ್ಕೆ ಬೇಕಾಗಿರುವಂತಹ ರಿಪೇರಿಗೆ ಬೇಕಾದ ಹಣಕಾಸನ್ನು ಕೊಡಿಸುವುದಕ್ಕಾದರೂ ಒಂದು ಯೋಜನೆಯನ್ನು ಮಾಡುತ್ತೇವೆ. ಯಾವುದೇ ಕಾರಣಕ್ಕೆ ಶಾಲೆಯನ್ನು ಸುಭದ್ರವಾಗಿಡುವುದಕ್ಕೆ ಬೇಕಾದ ಒಂದು ಪ್ರಯತ್ನವನ್ನು, ಜವಾಬ್ದಾರಿಯನ್ನು ನಾವು ಶಿಕ್ಷಣ ಇಲಾಖೆಯವರು ತೆಗೆದುಕೊಳ್ಳುತ್ತೇವೆ. ನಿಶ್ಚಿತವಾಗಿ ನಮ್ಮ ಇಲಾಖೆಯ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಈ ಕುರಿತಂತೆ ಈ ಶಾಲೆಗಳನ್ನು ಸುಸ್ಥಿತಿಯಲ್ಲಿಡಲು ಬೇಕಾದ ಕ್ರಮವನ್ನು ಕೈಗೊಳ್ಳಲು ಸರ್ಕಾರದಿಂದ ನಮ್ಮ ಎಲ್ಲಾ ಪ್ರಯತ್ನ ಮಾಡುತ್ತೇವೆ.

ಶ್ರೀ ಶ್ರೀಕಾಂತ ಕುಲಕರ್ಣಿ: ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು: ಹೇಳಿದರಲ್ಲ. ಸ್ಪಷ್ಟವಾಗಿ ಹೇಳಿದ್ದಾರೆ. ನೀವು demand ನಲ್ಲಿ ಹೇಳಿದಿರಿ ಮತ್ತೆ ಮತ್ತೆ ಏನು ಕೇಳುವುದಕ್ಕೆ ಇರುವುದು ?

ಶ್ರೀ ಶ್ರೀಕಾಂತ ಕುಲಕರ್ಣಿ: ಅಲ್ಲ ಅಧ್ಯಕ್ಷರೆ, ಮೂರು ಗ್ರಾಮಗಳ ಪುನರ್ ವಸತಿ ಏನು ಆಗಬೇಕಿತ್ತು, ಅದು ಇನ್ನು final ಆಗಿಲ್ಲ. ಹೀಗಾಗಿ ಯಾರೂ ಆ ಗ್ರಾಮಗಳನ್ನು ಬಿಟ್ಟು ಹೋಗುವ ಸ್ಥಿತಿಯಲ್ಲಿ ಇಲ್ಲ. ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದ್ದರಿಂದ ಕೆಲವು ಕಡೆ 22 ಹೊಸ ಶಾಲಾ ರೂಮುಗಳನ್ನು ಕಟ್ಟಬೇಕಾಗುತ್ತದೆ. ಮತ್ತು ಮಳೆ ಬಂದರೆ ವಿದ್ಯಾರ್ಥಿಗಳು ಮನೆಗೆ ಓಡಿಹೋಗುವಂತಹ ಪರಿಸ್ಥಿತಿ ಇರುವುದರಿಂದ ಶಿಕ್ಷಣಕ್ಕೆ ಇಷ್ಟು ಕೊಟ್ಟಿರುವ ನಮ್ಮ ಸರ್ಕಾರ ಇದರ ಬಗ್ಗೆ ತಾತ್ಸಾರ ಬಾವನೆ ತಳೆಯುವ ಅಗತ್ಯವಿಲ್ಲ. ದಯವಿಟ್ಟು ತಕ್ಷಣ ಕಟ್ಟುವ ವ್ಯವಸ್ಥೆ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಶ್ರೀಕಾಂತ ಕುಲಕರ್ಣಿಯವರು ಶಾಸಕರಾಗಿ, ಆ ಭಾಗದ ಜನರ ಭಾವನೆಯನ್ನು ಇಲ್ಲ ಸಮರ್ಥವಾಗಿ ಉಲ್ಲೇಖಿಸುತ್ತಿದ್ದಾರೆ. ನಾನು ಅದನ್ನು ಗೌರವಿಸುತ್ತೇನೆ. ಅಲ್ಲಿರುವ ಪ್ರಶ್ನೆ ಸರ್ವ ಶಿಕ್ಷಣ ಅಭಿಯಾನದ ಕ್ರಿಯಾ

ಯೋಜನೆ ಮಾಡುವುದಕ್ಕೆ ಶಾಸಕರ ಅಧ್ಯಕ್ಷತೆಯಲ್ಲಿಯೇ ಒಂದು ಸಮಿತಿ ಇದೆ. ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ಶಾಸಕರು ಅವರೇ ಅಧ್ಯಕ್ಷರಾಗಿರುತ್ತಾರೆ. ಹೊಸ ಕೊಠಡಿಗಳು ಬೇಕಾದಲ್ಲಿ ಅವರೂ ಸಹ ಹಾಕಿಕೊಳ್ಳುವುದಕ್ಕೆ ಅವಕಾಶವಿದೆ. ಜಿಲ್ಲಾ ಮಟ್ಟದಲ್ಲಿಯೂ ಸಮಿತಿಗಳಿವೆ. ಆದರೆ ಈ ತಾಂತ್ರಿಕ ಸಮಸ್ಯೆಗಳೇನಿವೆ, rehabilitation area ದಲ್ಲಿ ಕೊಡುವುದು, ಕೊಡಬಾರದು ಎನ್ನುವುದು ಅದನ್ನು ಸರಿಪಡಿಸಲು ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ನಮ್ಮ ಇಲಾಖೆಯ ವತಿಯಿಂದಲೂ ಜವಾಬ್ದಾರಿ ತೆಗೆದುಕೊಂಡು ಹಣದ ಬಳಕೆ ಮೂಲ ಸ್ಥಳದಲ್ಲಿ ಆಗುವುದಕ್ಕೆ ಬೇಕಾದ ತಾಂತ್ರಿಕ ತೊಂದರೆಯನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇವೆ.

5. ವಿಷಯ: 2003 ರಲ್ಲಿ Special recruitment ಎಂದು ಮಾಡಿದ್ದ ಸುಮಾರು 1347 ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿಯಂತರರನ್ನು 2005 ರಲ್ಲಿ ಖಾಯಂ ಮಾಡಲಾಗಿದ್ದು, ಇದೀಗ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಬಗ್ಗೆ

ಶ್ರೀ ಎಂ.ಪಿ. ಕುಮಾರಸ್ವಾಮಿ: Special recruitment ಎಂದು ಹೇಳಿ 2003 ರಲ್ಲಿ ಮಾಡಿದ್ದ ಸುಮಾರು 1347 ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿಯಂತರರನ್ನು 2005 ರಲ್ಲಿ ಖಾಯಂ ಮಾಡಲಾಗಿದ್ದು, ಈ ಸಂಬಂಧ ಇದೀಗ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಬಾಕಿ ಇದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ The Karnataka Civil Services (Unfilled vacancies reserved for persons belonging to the schedule castes and the Schedule Tribes) (Special Recruitment) Rules 2001ರ ನಿಯಮಾವಳಿಯು ದಿನಾಂಕ: 22-11-2001ರಂದು ಜಾರಿಗೆ ಬಂದಿರುತ್ತದೆ. ಲೋಕೋಪಯೋಗಿ ಇಲಾಖೆ,

ಜಲ ಸಂಪನ್ಮೂಲ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗಳಲ್ಲಿ, ಸಹಾಯಕ ಇಂಜಿನಿಯರ್‌ಗಳಲ್ಲಿ ಗುರುತಿಸಲಾಗಿದ್ದ 846 ಮತ್ತು ಕಿರಿಯ ಇಂಜಿನಿಯರ್ ವೃಂದದಲ್ಲಿ ಗುರುತಿಸಲಾಗಿದ್ದ 503 ಬ್ಯಾಕ್ ಲಾಗ್ ಇಂಜಿನಿಯರ್ ಹುದ್ದೆಗಳನ್ನು ಸದರಿ ನಿಯಮಾವಳಿ ಮೇರೆಗೆ ಭರ್ತಿ ಮಾಡದೇ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿತ್ತು.

ಈ ಪೈಕಿ ವರದಿ ಮಾಡಿಕೊಂಡು ಸದರಿ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಗುತ್ತಿಗೆ ಅಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ 803 ಸಹಾಯಕ ಇಂಜಿನಿಯರ್ ಹಾಗೂ 476 ಕಿರಿಯ ಇಂಜಿನಿಯರ್‌ಗಳ ಸೇವೆಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಪಿಡಬ್ಲ್ಯೂಡಿ:120:ಸೇಸಕಿ05 ದಿನಾಂಕ: 4-5-2005 ರಲ್ಲಿ ಪ್ರಕಟಿಸಿರುವಂತೆ The Karnataka Civil Services (Absorption of persons appointed on contract basis against backlog vacanies in the Category of Assistant Engineers and Junior Engineers in the department of public works Engineering Water Resources and Rural Development and Panchayachayat Raj) (special) Rules 2005ರ ಅನ್ವಯ ವಿಲೀನಗೊಳಿಸಲಾಗಿರುತ್ತದೆ.

ಮೇಲೆ ತಿಳಿಸಿದ 2005ರ ವಿಶೇಷ ವಿಲೀನಾತಿ ನಿಯಮಾವಳಿಯನ್ನು ಕೆಲವು ವ್ಯಕ್ತಿಗಳು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ: 6258/03 ಮತ್ತು ಸಂಬಂಧಿಸಿದ ಇತರೆ ಪ್ರಕರಣಗಳನ್ನು ಒಂದುಗೂಡಿಸಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಮಂಡಳಿಯು ದಿನಾಂಕ: 25-5-2009 ರಂದು ನೀಡಿದ ತೀರ್ಪಿನಲ್ಲಿ 2005ರ ವಿಶೇಷ ನಿಯಮಾವಳಿಯ ಅಸಿಂಧುಗೊಳಿಸಿ ಸದರಿ ಬ್ಯಾಕ್‌ಲಾಗ್ ಹುದ್ದೆಗಳನ್ನು The Karnataka Civil Services (Unfilled vacancies reserved for persons belonging to the schedule Castes and the Schedule Tribes) (Special Recruitment) Rules 2001ರನ್ವಯ ಭರ್ತಿ ಮಾಡಲು ನಿರ್ದೇಶನ ನೀಡಿತ್ತು.

ಮಾನ್ಯ ನ್ಯಾಯಮಂಡಲಿಯ ತೀರ್ಪಿನಿಂದ ಬಾಧಿತರಾದ ಇಂಜಿನಿಯರ್‌ಗಳು ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 15314-15378/09ನ್ನು ಸಲ್ಲಿಸಿದ್ದು ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ 12-6-2009 ರಂದು ನೀಡಿದ ಮಧ್ಯಂತರ ತೀರ್ಪಿನಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ದಿನಾಂಕ: 25-5-2009ರ ಆದೇಶಕ್ಕೆ ತಡೆಯಾಜ್ಞೆ ನೀಡಿತ್ತು. ರಾಜ್ಯ ಸರ್ಕಾರವು ಸಹ ಮಾನ್ಯ ನ್ಯಾಯ ಮಂಡಳಿಯ ದಿನಾಂಕ: 25-5-2009ರ ತೀರ್ಪಿನ ವಿರುದ್ಧ ರಿಟ್ ಸಂಖ್ಯೆ 23707/09 (S.K.A.T)ನ್ನು ಸಲ್ಲಿಸಿದ್ದು ಮಾನ್ಯ ಉಚ್ಛ ನ್ಯಾಯಾಲಯವು ಈ ಎಲ್ಲಾ ರಿಟ್ ಅರ್ಜಿಗಳನ್ನು ಒಂದುಗೂಡಿಸಿ ವಿಚಾರಣೆ ನಡೆಸಿ ದಿನಾಂಕ: 13-7-2012 ರಂದು ನೀಡಿದ ತೀರ್ಪಿನಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶವನ್ನು ಎತ್ತಿಹಿಡಿದು, ನೇಮಕ ಪ್ರಕ್ರಿಯೆಯನ್ನು The Karnataka Civil Services (Unfilled vacancies reserved for persons belonging to the schedule castes and the schedule tribes) (Special Recruitment) Rules 2001ರನ್ವಯ ಮಾಡಲು ತೀರ್ಪು ನೀಡಿದೆ.

ತೀರ್ಪಿನ ದೃಢೀಕೃತ ಪ್ರತಿಯನ್ನು ಪಡೆಯಲು ಕ್ರಮ ವಹಿಸಲಾಗಿದೆ. ತೀರ್ಪಿನ ದೃಢೀಕೃತ ಪ್ರತಿಯನ್ನು ಪಡೆದ ಕೂಡಲೇ ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ಸಚಿವ ಸಂಪುಟದ ಮುಂದೆ ಮಂಡಿಸಿ ಮುಂದಿನ ಕ್ರಮ ಜರುಗಿಸಲಾಗುವುದು.

ಇದರ ಬಗ್ಗೆ ಏನಾದರೂ clarification ಇದ್ದರೆ, ಕೇಳಬಹುದೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತಿದ್ದೇನೆ. ಸನ್ಮಾನ್ಯ ಮಹದೇವಪ್ಪನವರೂ ಸಹ ಇದೇ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಸದಸ್ಯರು clarification ಕೇಳಿದರೆ ಉತ್ತರವನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ.ಪಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಇಲ್ಲಿ ನಾಟಕವಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ಈ ಜನಾಂಗದವರು ಅಭಿಯಂತರರಾಗಿ ಬರಲೇಬಾರದೆಂದು ಅವರು ಯಶಸ್ವಿಯಾಗಿ ಬಹಳ ಪ್ರಯತ್ನ ಮಾಡಿದ್ದಾರೆ..ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ತಾವು ಇದ್ದಿರಿ, ಮಾನ್ಯ ಗೋವಿಂದ ಕಾರಜೋಳ ಇದ್ದರು ಮಾನ್ಯ

ವಿ.ಎಸ್. ಆಚಾರ್ಯರವರು ಅದರ ಅಧ್ಯಕ್ಷರಾಗಿದ್ದರು. ನೀವು ಏನು ತೀರ್ಪು ಮಾಡಿದ್ದೀರಿ? ಇದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಬೇಕು ಎಂದು ನೀವು ಮುಖ್ಯಮಂತ್ರಿಗಳಿಗೆ ವಹಿಸಿದಿರಿ. ಮುಖ್ಯಮಂತ್ರಿಗಳು ಕಾನೂನಿನ ಸಲಹೆಯನ್ನು ಕೇಳಿದರು. ಇವರು ಯಾವುದನ್ನೂ ಮಾಡದೆ, ಕೇವಲ ಮುಖ್ಯಮಂತ್ರಿಗಳ ಸಹಿ ಮಾಡಿಸಿಕೊಂಡು ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಿ, ಆ ತೀರ್ಪು ತಿರುಗ-ಮರುಗ ಆಗುವಂತೆ ನೋಡಿಕೊಂಡಿದ್ದಾರೆ. ಪ್ರಾರಂಭದಲ್ಲಿಯೂ ಕೂಡಾ ಇದನ್ನು ಕೆ.ಎ.ಟಿ. ಗಮನಿಸಲಿಲ್ಲ. ಕ್ಯಾಬಿನೆಟ್‌ನಲ್ಲಿಯೂ ಗಮನಿಸಲಿಲ್ಲ. ಇವತ್ತು ನೀವು ಅವರಿಗೆ ಖಾಯಂ ಕೆಲಸವನ್ನು ಕೊಟ್ಟಿದ್ದೀರಿ, ಅವರಿಗೆ ಎರಡು ವರ್ಷಗಳ ನಂತರ probationary declare ಮಾಡಿದ್ದೀರಿ, ಎಲ್ಲಾ ಟ್ರೈನಿಂಗ್‌ಗಳನ್ನು ಕೊಟ್ಟಿದ್ದೀರಿ. ಅವರ ಅಗತ್ಯವಿದೆಯೆಂದು ಸುಮಾರು 8 ವರ್ಷಗಳ ಕಾಲ ದುಡಿಸಿಕೊಂಡಿದ್ದೀರಿ. ಇವತ್ತು part-time lecture ಗಳನ್ನು permanent ಮಾಡಿದ್ದೀರಿ. part-time doctor ಗಳನ್ನು permanent ಮಾಡಿದ್ದೀರಿ. ಇವರಿಗೆ 8-9 ವರ್ಷಗಳ ಕಾಲ ಖಾಯಂ ಕೆಲಸ ಕೊಟ್ಟು, ಇವರನ್ನು ಬೀದಿ ಪಾಲು ಮಾಡುವ ಉದ್ದೇಶವೇನು? ಇಲ್ಲಿ ಅಧಿಕಾರಿಗಳ ಕುತಂತ್ರವಿದೆ. ಯಾರು ಈ ಕೆಲಸವನ್ನು ಮಾಡಿದ್ದಾರೆ. ಅವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು. ಇದನ್ನು ಉದ್ದೇಶಪೂರ್ವಕವಾಗಿ avoid ಮಾಡುವುದಕ್ಕಾಗಿ ಮಾಡಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು. ಒಂದು ದಿವಸವೂ ಕೂಡಾ ಅವರ service ಕಟ್ ಆಗಬಾರದು. ಈ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರಿಗೆ ನಾನು ಮತ್ತು ಸನ್ಮಾನ್ಯ ಕುಮಾರಸ್ವಾಮಿಯವರು ಹಾಗೂ ಇನ್ನಿತರರುಗಮನ ಸೆಳೆಯುವ ಸೂಚನೆಯಲ್ಲಿ ಈ ವಿಷಯವನ್ನು ಕೇಳಿದ್ದೇವೆ. ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿ ಕೊಟ್ಟಿದ್ದಾರೆ. 1984ನೇ ಇಸವಿಯಲ್ಲಿ PWD ಗೆ ಮತ್ತು ನೀರಾವರಿ ಇಲಾಖೆಗೆ recruitment ಆಯಿತು. ಆಗ UKP ನಲ್ಲಿ ತುರ್ತಾಗಿ ಕೆಲಸ ಮಾಡಬೇಕು. ಅದನ್ನು ಬೇಗ, with in stipulated time, ಆ ಕೆಲಸವನ್ನು ಮುಗಿಸಬೇಕೆಂದು ಹೇಳಿ, recruit ಮಾಡುವಾಗ ಯಾವುದೇ ಮೀಸಲಾತಿಯನ್ನು

ಗಣನೆಗೆ ತೆಗೆದುಕೊಳ್ಳಲಿಲ್ಲ. ಕೆಲಸದ ತುರ್ತು ನೆಪವನ್ನು ಮಾಡಿ, ರಾಜ್ಯಾಂಗದ ಆಶಯವನ್ನು. ಸಾಮಾಜಿಕ ನ್ಯಾಯವನ್ನು ಬದಿಗಿಟ್ಟು ಇಂತಹ ಒಂದು recruitment ಕೆಲಸವನ್ನು ಮಾಡಲಾಯಿತು. ಆಮೇಲೆ ನ್ಯಾಯಸಮ್ಮತವಾಗಿ ರಾಜ್ಯಾಂಗಬದ್ಧವಾಗಿ, ಎಸ್.ಸಿ., ಎಸ್.ಟಿ.ಯವರಿಗೆ ಸಿಗಬೇಕಾದಂತಹ ಮೀಸಲಾತಿ ಕೊಡದೆ ಇದ್ದಾಗ, ಇದನ್ನು backlog ಎಂದು treat ಮಾಡಿದ್ದಾರೆ. ಹಿಂದೆ ನಾನು, ಮಾನ್ಯ ಸಿದ್ಧರಾಮಯ್ಯನವರು, ಸನ್ಮಾನ್ಯ ಉದಾಸಿಯವರು ಹಾಗೂ ಮಾನ್ಯ ಜೆ.ಹೆಚ್. ಪಟೇಲ್‌ರವರು, ಮಾನ್ಯ ದೇವೇಗೌಡರ ಕ್ಯಾಬಿನೆಟ್‌ನಲ್ಲಿ ಮತ್ತು ಮಾನ್ಯ ಧರ್ಮಸಿಂಗ್‌ರವರ ಕ್ಯಾಬಿನೆಟ್‌ನಲ್ಲಿ ಇದ್ದಾಗ ಚರ್ಚೆ ಮಾಡಿ, ನ್ಯಾಯಸಮ್ಮತವಾಗಿ ಕೊಡಬೇಕಾದಂತಹ ಹುದ್ದೆಗಳನ್ನು ಅಂದಿನ ಸಂದರ್ಭದಲ್ಲಿ ಕೊಡುವುದಕ್ಕೆ ಆಗದೇ ಇದ್ದುದರಿಂದ, ಇದನ್ನು ನ್ಯಾಯಸಮ್ಮತವಾಗಿ, ರಾಜ್ಯಾಂಗಬದ್ಧವಾಗಿ backlog ಎಂದು ಪರಿಗಣಿಸಿ, ಅವರಿಗೆ ಕೊಡಬೇಕೆಂದು ತೀರ್ಮಾನ ಮಾಡಿ ಈ backlog recruitmentನ್ನು ಮಾಡಲಾಯಿತು. ಈ recruitment 2005ನೇ ಇಸವಿಯಲ್ಲಿ ಆಗಿದೆ. ಸಿ. ಮತ್ತು ಆರ್ ರೂಲ್ಸ್ ಅನ್ನು ಫ್ರೇಂ ಮಾಡಿ, ಅವರಿಗೆ ಕೊಡಬೇಕೆಂದು ಹೇಳಿದ ಮೇಲೆ ಅಂದಿನ ಸರ್ಕಾರ ನೇಮಕಾತಿ ಮಾಡಿ ಈಗಾಗಲೇ 8-9 ವರ್ಷಗಳಾಗಿವೆ ಕೆ.ಎ.ಟಿ. ಈ ಆಜ್ಞೆಯನ್ನು ರದ್ದು ಮಾಡಿದೆ. ಘನತೆವೆತ್ತ ನ್ಯಾಯಾಲಯಕ್ಕೆ ಹೋದಾಗ ಅದು ಕೂಡಾ ಇದನ್ನು ಪ್ರಶ್ನೆ ಮಾಡಿ, 6 ತಿಂಗಳಿಂದ 1 ವರ್ಷದೊಳಗೆ ಇದನ್ನು ಸರಿ ಮಾಡಿ, whichever is earlier, ಇದನ್ನು ಸರಿ ಮಾಡಿ ಎಂದು ಹೇಳಿದೆ. ನಾನು ಇಲ್ಲಿ ಏನು ಹೇಳುವುದಕ್ಕೆ ಬಯಸುತ್ತೇನೆಂದರೆ, ಇದು ಎಸ್.ಸಿ., ಎಸ್.ಟಿ. ಜನರಿಗೆ ನ್ಯಾಯಸಮ್ಮತವಾಗಿ, ರಾಜ್ಯಾಂಗಬದ್ಧವಾದ ಹಕ್ಕು ಸಾಮಾಜಿಕ ನ್ಯಾಯವನ್ನು, ರಾಜ್ಯಾಂಗವನ್ನು ಎತ್ತಿ ಹಿಡಿದು ರಕ್ಷಣೆ ಮಾಡಬೇಕಾದುದು ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಆದ್ಯ ಕರ್ತವ್ಯ. ಅದಕ್ಕೆ ಯಾರೂ ಅಡ್ಡಿ ಬರುವುದಿಲ್ಲ. contract basis ಮೇಲೆ doctors ನೇಮಕ ಮಾಡಿಕೊಂಡಿದ್ದೇವೆ. ಅವರನ್ನು confirm ಮಾಡಲಿಲ್ಲವೇ? ಉಪನ್ಯಾಸಕರನ್ನು confirm ಮಾಡಿದ್ದೇವೆ. ಬೇರೆ ಬೇರೆ ಇಲಾಖೆಗಳಲ್ಲಿ contract basis ಮೇಲೆ ಕೆಲಸ ಮಾಡುವವರನ್ನು confirm ಮಾಡಿದ್ದೇವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಅಶೋಕ ಕುಮಾರ್ ಉತ್ಪಲ್ ಮತ್ತು ಜಮ್ಮು ಕಾಶ್ಮೀರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಇಂತಹುದ್ದೇ ತೀರ್ಮಾನವನ್ನು ಮಾಡಿ, ರಾಜ್ಯ ಸರ್ಕಾರ ಆಯ್ಕೆಯನ್ನು ಮಾಡಿ, ಅವರ ಸೇವೆಯನ್ನು ಬಳಸಿಕೊಂಡಿರುವಾಗ, ಅವರನ್ನು ಖಾಯಂ ಮಾಡತಕ್ಕದ್ದು ರಾಜ್ಯ ಸರ್ಕಾರದ

ಹೊಣೆಗಾರಿಕೆ ಮತ್ತು ಜವಾಬ್ದಾರಿ ಎಂದು ತೀರ್ಪು ಹೇಳಿದೆ. ಅದೇ ರೀತಿಯ ತೀರ್ಮಾನಗಳನ್ನು ಬೇರೆ ಬೇರೆ ಕಡೆ ಕೊಟ್ಟಿದ್ದರೂ ಕೂಡಾ, ಇವತ್ತು ಇಂತಹ ಒಂದು ತೀರ್ಪು ಬಂದಿರತಕ್ಕದ್ದುದುರದೃಷ್ಟಕರ. ನ್ಯಾಯಾಲಯ ತೀರ್ಪನ್ನು ಕೊಟ್ಟಿದೆ. ನ್ಯಾಯಾಲಯ ತೀರ್ಪನ್ನು ಕೊಟ್ಟಿದೆಯೆಂದು ರಾಜ್ಯ ಸರ್ಕಾರ ಕಣ್ಣುಮುಚ್ಚಿ ಕುಳಿತುಕೊಳ್ಳದೆ ರಾಜ್ಯಾಂಗ ಬದ್ಧವಾಗಿ ಯಾವ ಹಕ್ಕನ್ನು ರಕ್ಷಣೆ ಮಾಡಬೇಕೋ ಅದನ್ನು ಮಾಡಬೇಕು. ಸನ್ಮಾನ್ಯ ಲೋಕೋಪಯೋಗಿ ಸಚಿವರು ಮಾಡುತ್ತಾರೆನ್ನುವ ನಂಬಿಕೆ ನನಗಿದೆ. ಅವರು ಮತ್ತು ನಾವೆಲ್ಲಾ ಕುಳಿತು ಚರ್ಚೆ ಮಾಡಿರತಕ್ಕಂತಹ ತೀರ್ಮಾನಗಳು ಇವು. ಇದರಿಂದ ಹಿಂದೆ ಸರಿಯದೆ. ಸರ್ಕಾರದ ವತಿಯಿಂದ ನೀವು ಸಾಮಾಜಿಕ ನ್ಯಾಯವನ್ನು, ರಾಜ್ಯಾಂಗವನ್ನು ರಕ್ಷಣೆ ಮಾಡಿ ಇವರ ಆಯ್ಕೆಯನ್ನು ಸೇವೆಯನ್ನು ಖಾಯಂಗೊಳಿಸುವುದು ನಿಮ್ಮ ಜವಾಬ್ದಾರಿ, ನಿಮ್ಮ ಹೊಣೆಗಾರಿಕೆಯಾಗಿದೆ. ಅದನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ನಾನು ಆಗ್ರಹ ಮಾಡುತ್ತಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಸಿದ್ದರಾಮಯ್ಯನವರೆ, ತಮ್ಮ ಶಿಷ್ಯ ಮಾತನಾಡಿದ ಮೇಲೆ ತಾವೇನು ಮಾತನಾಡುತ್ತೀರಿ?

ಶ್ರೀ ಸಿದ್ದರಾಮಯ್ಯ: ಮಾನ್ಯ ಕತ್ತಿಯವರೆ, ಯಾರು ಯಾರ ಶಿಷ್ಯನೂ ಅಲ್ಲ. ಅವರೇ ನಮ್ಮ ಗುರು. ನೀವೂ ಒಂದು ತರಹ ನಮಗೆ ಗುರುಗಳೇ ಆಗಿದ್ದೀರಿ. ಸನ್ಮಾನ್ಯ ಅಧ್ಯಕ್ಷರೇ, ಹೈಕೋರ್ಟ್‌ನವರು ಯಾವ ರೀತಿ ಈ ತೀರ್ಪನ್ನು ಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸರ್ಕಾರದ ಪರವಾಗಿ ನಮ್ಮ Advocate general or Government advocate ಯಾವ ರೀತಿ ಹೈಕೋರ್ಟ್‌ನಲ್ಲಿ case ನಡೆಸಿದ್ದಾರೋ ಗೊತ್ತಿಲ್ಲ. 2001 ರಲ್ಲಿಯೇ ಈ backlog ಹುದ್ದೆಗಳನ್ನು fill up ಮಾಡಬೇಕೆಂದು ಸರ್ಕಾರದವರೇ ಆದೇಶ ಮಾಡಿದ್ದರು. ಸಂವಿಧಾನಬದ್ಧವಾಗಿ ಅದನ್ನು ಮಾಡಬೇಕಾಗಿರುವುದು ನಮ್ಮ ಜವಾಬ್ದಾರಿಯಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರ ಖಾಲಿ ಇರತಕ್ಕಂತಹ backlog ಹುದ್ದೆಗಳನ್ನು ಪ್ರತ್ಯೇಕವಾದ recruitment ಮೂಲಕ ಭರ್ತಿ ಮಾಡಬೇಕೆಂದು ಮಾಡಲಾಗಿದೆ. ಇದನ್ನು ಮಾಡಬೇಕಾಗಿತ್ತು. ಆಗ UKP ನಲ್ಲಿ ಬೇಗ ಕೆಲಸ ಮಾಡಿಸಬೇಕೆಂದು contract ಮೇಲೆ ತೆಗೆದುಕೊಂಡಿದ್ದರು. ಆ ರೀತಿ contract ಮೇಲೆ ತೆಗೆದುಕೊಂಡವರನ್ನು ನಂತರ ವಿಲೀನ ಮಾಡಿದ್ದಾರೆ. ಸೇವೆಯಲ್ಲಿ ವಿಲೀನ ಮಾಡಿದ ಮೇಲೆ, ಅವರು 8 ವರ್ಷ ಕೆಲಸ ಮಾಡಿದ ಮೇಲೆ, ಈಗ ಅವರನ್ನು

ಖಾಯಂಗೊಳಿಸಿರುವ ಆದೇಶವನ್ನು Administrative Tribunal ನಲ್ಲಿ ರದ್ದು ಮಾಡಿ, ಆಮೇಲೆ high court ನಲ್ಲೂ ಕೂಡ ಅದನ್ನು ರದ್ದು ಮಾಡಿದ್ದಾರೆ. ಈಗ ಅವರನ್ನು ಖಾಯಂಗೊಳಿಸಿರುವ ಆದೇಶವನ್ನು ರದ್ದು ಮಾಡಿದ್ದಾರೆಂದು ಸರ್ಕಾರ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರನ್ನು ಸಂವಿಧಾನಬದ್ಧವಾಗಿ ರಕ್ಷಣೆ ಮಾಡಬೇಕಾಗಿರತಕ್ಕದ್ದು ಸರ್ಕಾರದ ಜವಾಬ್ದಾರಿಯಾಗಿದೆ. ನೀವೇ ಏನಾದರೊಂದು ದಾರಿಯನ್ನು ಹುಡುಕಬೇಕು. ಅವರಿಗೆ ಸುಪ್ರೀಂ ಕೋರ್ಟ್‌ಗೆ ನೀವೇ ಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. High Court order challenge ಮಾಡಿ ಸುಪ್ರೀಂ ಕೋರ್ಟ್ ಮುಂದೆ ಹೋಗಬೇಕಾದರೆ, ಸರ್ಕಾರವೇ ಹೋಗಬೇಕು. ಅಥವಾ ನೀವೇ ಸರ್ಕಾರದ ಮಟ್ಟದಲ್ಲಿ ಅಥವಾ ಕ್ಯಾಬಿನೆಟ್‌ನಲ್ಲಿ ಏನು ಮಾಡುವುದಕ್ಕಾಗುತ್ತದೆ, ಸಂವಿಧಾನದ ಚೌಕಟ್ಟಿನಲ್ಲಿ ಅವರಿಗೆ ರಕ್ಷಣೆ ಕೊಡಲಿಕ್ಕೆ ಏನು ಮಾಡುವುದಕ್ಕಾಗುತ್ತದೆ ಎನ್ನುವ ದಾರಿಯನ್ನು ಹುಡುಕಬೇಕು. ಕೋರ್ಟ್‌ನವರು ಹೇಳಿದ ತಕ್ಷಣ, "ಎತ್ತು ಈಯಿತು ಎಂದರೆ, ಕೊಟ್ಟಿಗೆಯಲ್ಲಿ ಕಟ್ಟು" ಎಂಬಂತೆ ಅದನ್ನು ಜಾರಿಗೆ ತರುವುದಕ್ಕೆ ಬರುವುದಿಲ್ಲ. ಕೋರ್ಟ್‌ನವರು ಹೇಳಿದ್ದಾರೆ. ನಾವೇನೂ ಮಾಡುವುದಕ್ಕೆ ಬರುವುದಿಲ್ಲವೆಂದು ಸುಮ್ಮನೆ ಸರ್ಕಾರ ಕೂಡ ಕೈತೊಳೆದುಕೊಳ್ಳುವುದಕ್ಕೆ ಬರುವುದಿಲ್ಲ. ಇದು ಸರ್ಕಾರದ ಜವಾಬ್ದಾರಿ. ಅವರನ್ನು ರಕ್ಷಣೆ ಮಾಡಬೇಕಾದಂತಹ ಜವಾಬ್ದಾರಿಯಿರುವುದರಿಂದ, constitutional protection ಇರುವುದರಿಂದ, ಅವರಿಗೆ ರಕ್ಷಣೆ ಕೊಡಬೇಕಾದುದು ಸರ್ಕಾರದ ಜವಾಬ್ದಾರಿ. ಈಗ ಅವರಿಗೆ 6 ತಿಂಗಳುವರೆಗೆ ಸ್ಟೇ ಸಿಕ್ಕಿದೆ. ನೀವು ಏನೂ ಮಾಡದೆ ಹೋದರೆ, 6 ತಿಂಗಳು ಆದ ಮೇಲೆ ಅವರು ಮನೆಗೆ ಹೋಗಬೇಕಾಗುತ್ತದೆ. ಅದಕ್ಕೆ in the meanwhile, ಅವರು ಯಾವುದೇ ಕಾರಣಕ್ಕೂ ಅವರು ಸರ್ವೀಸ್‌ನಲ್ಲಿ ಮುಂದುವರೆಯಬೇಕು. ಅದಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ನಿಮ್ಮ Advocate General ಜೊತೆ ಮಾತನಾಡುತ್ತೀರೋ ಅಥವಾ constitutional experts ಜೊತೆಗೆ ಮಾತನಾಡುತ್ತೀರೋ ಅಥವಾ ಏನು ಮಾಡಬೇಕು ಎನ್ನುವ ಬಗ್ಗೆ ನೀವು ತೀರ್ಮಾನ ಮಾಡಬೇಕು. ಅವರಿಗೆ protection ಕೊಡಬೇಕು. ಸುಪ್ರೀಂ ಕೋರ್ಟ್‌ಗೆ ಸ್ಟೇ ಕೊಡಿ ಎಂದು ಹೋಗಬೇಕಾದರೆ, ರಾಜ್ಯ ಸರ್ಕಾರವೇ ಹೋಗಬೇಕು. Engineer's Association ನವರನ್ನು ನೀವೇ ಸುಪ್ರೀಂ ಕೋರ್ಟ್‌ಗೆ ಹೋಗಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಇದನ್ನು ಸರ್ಕಾರವೇ ಮಾಡಬೇಕು. In the meanwhile ಈ ಆರು ತಿಂಗಳುಗಳ ಒಳಗಡೆ ಅವರಿಗೆ ತೊಂದರೆಯಾಗದ ರೀತಿ

ನೋಡಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲಿದೆ. ಅದನ್ನು ಮಾಡಬೇಕೆಂದು ಹೇಳಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಸನ್ಮಾನ್ಯ ಅಧ್ಯಕ್ಷರೆ, ಈ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ 1347 ಅಭಿಯಂತರರನ್ನು ಆಯ್ಕೆ ಮಾಡಿದ್ದನ್ನು, 9 ವರ್ಷಗಳ ನಂತರ ನ್ಯಾಯಾಲಯದಲ್ಲಿ ಆಯ್ಕೆ ಮಾಡಿರುವುದನ್ನು ರದ್ದುಪಡಿಸಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಈವರೆಗೂ ನಮಗೆ certified copy ಸಿಕ್ಕಿರುವುದಿಲ್ಲ. ಅದಕ್ಕಾಗಿ application ಹಾಕಿದ್ದೇವೆ. ಪತ್ರಿಕೆಯಲ್ಲಿ ನಾವು ಓದಿದ ಹಾಗೆ, 1 ವರ್ಷದ ಒಳಗಾಗಿ ನಾವು ತೀರ್ಮಾನವನ್ನು ಕೈಗೊಳ್ಳಬೇಕು. ಅಲ್ಲಿಯವರೆಗೆ ಅವರನ್ನು ತೆಗೆಯಬಾರದು ಎಂದು ಮಾಧ್ಯಮದಲ್ಲಿ ಬಂದಿರುವುದನ್ನು ನೋಡಿದ್ದೇವೆ.

ಒಂದು ವರ್ಷದವರೆಗೆ ಅವಕಾಶವಿದೆ ಎನ್ನುವುದು ಸ್ಪಷ್ಟವಾಗಿ ಪತ್ರಿಕೆಯಲ್ಲಿ ಬಂದಿರುವ ವರದಿ ಮಾತ್ರ ಎಂದು ಹೇಳುವುದಕ್ಕೆ ಬಯಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ 2001 ರಲ್ಲಿ ರೂಲ್ಸ್ ಮಾಡುವ ಸಂದರ್ಭದಲ್ಲಿ ಮಾಡಿದ ಪ್ರಮಾಣದಿಂದ ಈ ಸಮಸ್ಯೆ ಸೃಷ್ಟಿಯಾಗಿದೆ. ತಮಗೆ ಗೊತ್ತಿರುವ ಹಾಗೆ 18–29, 29–40 ಎಂದು ಎರಡು ವಯೋಮಾನ ಮಾಡಿದ್ದನ್ನು ಬದಲಾಯಿಸಿ 2005 ರಲ್ಲಿ 3 ವಯೋಮಾನ ಮಾಡಲಾಯಿತು. 18–25, 25–35 ಮತ್ತು 35–40 ಎಂದು ವಯೋಮಾನ ಮಾಡಿ ಆಯ್ಕೆ ಪ್ರಕ್ರಿಯೆ ಮಾಡಿದ್ದರ ಮೇಲೆ, ನೀವು 2001 ರಲ್ಲಿ ನಿಯಮಾವಳಿಗೆ ವ್ಯತರಿಕ್ತವಾದ ಆಯ್ಕೆ ಪ್ರಕ್ರಿಯೆ ಕೆಲಸ ಮಾಡಿದ್ದರಿಂದ ಈ ಸಮಸ್ಯೆ ಸೃಷ್ಟಿಯಾಗಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡುವುದಕ್ಕೆ ಅವಕಾಶವಾಗಿದೆ ಎನ್ನುವುದನ್ನು ಈಗಿರುವ ಎಲ್ಲಾ ದಾಖಲೆಗಳಿಂದ ತಿಳಿದು ಬಂದಿರುವ ವಿಚಾರವಾಗಿದೆ. ಸರ್ಕಾರ ಹೈಕೋರ್ಟ್‌ಗೆ ಹೋದಾಗ ಸರ್ಕಾರ ಕೂಡ ಡಿಫೆಂಡ್ ಮಾಡಿ ಇಲ್ಲಿ ಭಾಗಿಯಾಗಿದೆ. ನಮ್ಮ Cabinet Sub-Committee ನಲ್ಲೂ ಕೂಡ ನಮ್ಮ ಆಚಾರ್ಯ ಅವರು, ಕಾನೂನು ಸಚಿವರು, ಗೋವಿಂದ ಕಾರಜೋಳವವರು ಮತ್ತು ನಾನು ಪಾಲ್ಗೊಂಡಿರುತ್ತೇವೆ. ಅಲ್ಲಿ ಸರ್ಕಾರ ನ್ಯಾಯಸಮ್ಮತವಾದ ಬೇಡಿಕೆಯ ಬಗ್ಗೆ ಅಲ್ಲಿ ವಾದ ಮಾಡಿದ್ದಿದೆ. ಇವತ್ತು ಆದೇಶ ಬಂದಿರುವ ಸಂದರ್ಭದಲ್ಲಿ ನಾವು ಇದರ ಬಗ್ಗೆ ಯೋಚನೆ ಮಾಡಿ ಸಂಪೂರ್ಣ ಆದೇಶವನ್ನು ಓದಿದ ಮೇಲೆ ತೀರ್ಮಾನಕ್ಕೆ ಬರುವುದು ಸೂಕ್ತವೆಂದು ತಿಳಿದುಕೊಂಡಿದ್ದೇನೆ. ಅಪೀಲ್ ಮಾಡುವ ಪ್ರಮಾದ ಬಂದರೆ ಅಥವಾ ಕ್ಯಾಬಿನೆಟ್‌ನಿಂದಲೇ

ಇದಕ್ಕೆ ಏನಾದರೂ ಪರಿಹಾರ ಕೊಡಲು ಸಾಧ್ಯವಾಗುವುದಾದರೆ, ಇವತ್ತು ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯವನ್ನು ಪಡೆದು ಅಪೀಲ್ ಮಾಡುವಾಗ ಸರ್ಕಾರವನ್ನು ಕೂಡ...

ಶ್ರೀ ಟಿ.ಬಿ. ಜಯಚಂದ್ರ: ಅದಕ್ಕಿಂತ better thing is, Article 14 and 16 violation ಆಗಿದೆ ಎಂದು set aside ಮಾಡಿರಬೇಕಾದರೆ, bring a better legislation. Instead of telling them to go to Court, you come out with a legislation.

ಶ್ರೀ ಸಿ.ಎಂ. ಉದಾಸಿ: ಸುಪ್ರೀಂ ಕೋರ್ಟಿನಲ್ಲಿ ತಿರಸ್ಕಾರ ಆಗಿದ್ದಕ್ಕೆ ನಾವು ಒಂದು ಸಲ ಅವಕಾಶ ಮಾಡಕೊಟ್ಟಿದ್ದು ನಿಮಗೆಲ್ಲಾ ಗೊತ್ತಿರಬಹುದು. ಗ್ರಾಮೀಣ ಕೃಪಾಂಕಗಳಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದ ಉದಾಹರಣೆ ಇತ್ತು. ಅದಕ್ಕೆ ಪರ್ಯಾರವಾಗಿ ಒಂದು ತಿದ್ದುಪಡಿಯನ್ನು ಮಾಡಿ ಸ್ಪೆಷಲ್ ಆಕ್ಟ್ ಮಾಡಿದ್ದು ನಮ್ಮೆಲ್ಲರ ಗಮನದಲ್ಲಿದೆ ಎನ್ನುವ ಮಾತಿದೆ. ಆದರೆ ಇಲ್ಲಿ ನಾವು ನ್ಯಾಯಾಲಯದ ತೀರ್ಪನ್ನು ನೋಡದೆ ಮೊದಲೇ ನಾವು ಹೇಳಿದರೆ ಪ್ರೀಮೆಚ್ಯೂರ್ ಆಗುತ್ತದೆನ್ನುವ ಅನುಮಾನಗಳು ನನಗಿದೆ. ಇದೆಲ್ಲಾ ಇರಬೇಕಾದಾಗ ಈ ಕೋರ್ಟಿನ ಆಜ್ಞೆಯನ್ನು ಪಡೆದುಕೊಂಡು ನಾವು ನಿಜವಾಗಿ ಸ್ಪಷ್ಟವಾಗಿ ಯೋಚನೆ ಮಾಡುತ್ತಿದ್ದೇವೆ. ಆದರೆ ಕಾನೂನಿನ ಸಲಹೆ ಪಡೆದು ಮಾಡಬೇಕಾಗಿರುವ ಕೆಲಸವಾಗಿರುವುದರಿಂದ ನ್ಯಾಯಾಲಯದ ತೀರ್ಪಿನ ಬಗ್ಗೆ ಅಡ್ವೋಕೇಟ್ ಜನರಲ್ ಹತ್ತಿರ ಮಾತನಾಡಿ ಇದಕ್ಕೆ ಸರಿಯಾದ ಪರಿಹಾರವನ್ನು ಕಂಡು ಹಿಡಿಯುವ ಕೆಲಸವನ್ನು ನಾವು ಮಾಡುತ್ತೇವೆ. ಮತ್ತೆ ಅವರಿಗೆ ಯಾವುದೇ ರೀತಿಯ ಆತಂಕಕ್ಕೆ ಕಾರಣವಿಲ್ಲವೆನ್ನುವ ಭರವಸೆಯನ್ನು ನೀಡುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ಎಂ. ಪಿ. ಕುಮಾರ ಸ್ವಾಮಿ: ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಯಾವತ್ತು SC/ST ಬಗ್ಗೆ ಸಾಕಷ್ಟು ಚರ್ಚೆಯಾಗಲಿಲ್ಲ.

ಅಧ್ಯಕ್ಷರು: ಇದು ಚರ್ಚೆಗೆ ಅವಕಾಶವಿಲ್ಲ, ಕೋರ್ಟಿನ ತೀರ್ಪು, ಅದನ್ನು ನೋಡಿ ಹೇಳುತ್ತೇನೆಂದು ಮಂತ್ರಿಗಳು ಹೇಳಿದ್ದಾರೆ, ತಾವು ದಯವಿಟ್ಟು ಕುಳಿತುಕೊಳ್ಳಿ, ಎಲ್ಲರಿಗೂ ಸಿಂಪಥಿ ಇದೆ, ತೀರ್ಪನ್ನು ಓದೋಣ.

ಶ್ರೀ ಎಂ. ಪಿ. ಕುಮಾರ ಸ್ವಾಮಿ: ಈ ಪ್ರಕರಣವನ್ನು ಮಾನವೀಯತೆ ದೃಷ್ಟಿಯಿಂದ ಸರ್ಕಾರ ನೋಡಬೇಕೆಂದು ನಾನು ಎರಡು ಮಾತನಾಡುತ್ತೇನೆ.

ಅಧ್ಯಕ್ಷರು: ಮಾನವೀಯತೆಯಿಂದ ಪರಿಗಣಿಸಲು ತೀರ್ಪನ್ನು ನೋಡದೆ ಹೇಳುವುದು ಹೇಗೆ? ತೀರ್ಪು ಬರಲಿ, ಅದನ್ನು ಅವರು ನೋಡಿ, ಏನು ಮಾಡಬೇಕೆಂದು ಅವರು ಹೇಳಿದ್ದಾರೆ, ಅದರ ಪ್ರತಿ ಸಿಕ್ಕಿಲ್ಲವೆನ್ನುತ್ತಾರೆ.

ಇನ್ನು ಮಾನ್ಯ ಅರವಿಂದ ಲಿಂಬಾವಳಿಯವರು, ಈಗ ವಿಪ್ ಅವರು ಕಾಣುತ್ತಿಲ್ಲ, ಅವರು [ಲಿಂಬಾವಳಿಯವರು] ಬರುತ್ತೇನೆ,, ಬರುತ್ತೇನೆಂದು ಹೇಳಿಕೊಂಡು, ಇವತ್ತು ಹಾಲಪ್ಪನವರದಿದೆ, ಅವರು ಇವತ್ತಿನ ಕಾರ್ಯಕಲಾಪದ ಪಟ್ಟಿಯನ್ನು ನೋಡಬೇಕಾಗಿತ್ತು. ನೋಡದೆ ಈ ರೀತಿ ಗೈರುಹಾಜರಿಯಾಗಿದ್ದುಕೊಂಡು ಬರುತ್ತೇನೆಂದು ಉದ್ದೇಶಪೂರ್ವಕವಾಗಿ ಈ ಸದನಕ್ಕೆ ಅಗೌರವ ತೋರಿದ್ದಾರೆಂದು ನಾನು ಭಾವಿಸಬೇಕಾಗುತ್ತದೆ. ನೀವು ಇದನ್ನು ಶ್ರೀ ಎಸ್. ಸುರೇಶ್ ಕುಮಾರ್] ಗಂಭೀರವಾಗಿ ತೆಗೆದುಕೊಳ್ಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್ (ಸಂಸದೀಯ ವ್ಯವಹಾರಗಳ ಮತ್ತು ಕಾನೂನು ಸಚಿವರು): ಹೊರಟಿದ್ದಾರೆ, ಇನ್ನಷ್ಟು ಪ್ರಶ್ನೆಗಳಿವೆ, ಕೊನೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು: ಎಲ್ಲಿ ಹೊರಟಿದ್ದಾರೆ? ವಿಪ್ ಅವರನ್ನು ಕೇಳಿ this is not fair ಇದು ಸರಿಯಲ್ಲ, ಅವರು ಕಾರ್ಯಕಲಾಪವನ್ನು ಓದಿದ್ದಾರೆ ತಾನೆ? ಏಕೆ ಇಲ್ಲಿ ಇರಬಾರದು? ಇವರು ಎಲ್ಲೋ ಹೋಗಿ ಬರುತ್ತೇನೆಂದರೆ, ನಾವೆಲ್ಲ ಕಾಯಬೇಕೆಂದು ಅರ್ಥವೇ? No. ನಾನು ಮೊನ್ನೆಯೂ ನೋಡಿದ್ದೇನೆ, he remains absent, ಏಕೆ? ಬಿಟ್ಟುಬಿಡಲಿ ಬೇರೆ ಯಾರಾದರೂ ಮಾಡುತ್ತಾರೆ, this is not fair. ಮಾನ್ಯ ವಿರೋಧ ಪಕ್ಷದ ನಾಯಕರು, ನಿಮ್ಮ ಕಳಶೇಶ್ವರ ಸ್ವಾಮಿ ದೇವಸ್ಥಾನದ ಬಗ್ಗೆ ಗಮನ ಸೆಳೆಯುವುದು.

ಶ್ರೀ ಸಿದ್ದರಾಮಯ್ಯ: ಸೋಮವಾರ ತೆಗೆದುಕೊಳ್ಳೋಣ.

6. **ವಿಷಯ: ಮಲೆನಾಡು ಭಾಗದ ಅಡಿಕೆ ಬೆಳೆಗಾರರು ಭಾರಿ ಸಂಕಷ್ಟದಲ್ಲಿದ್ದು, ಗೋರಕ್ ಸಿಂಗ್ ವರದಿಯನ್ನು ಅನುಷ್ಠಾನಕ್ಕೆ ತರಲು ಹಾಗೂ ಈ ಬಗ್ಗೆ ಅಡಿಕೆ ಬೆಳೆಗಾರರು ಹೋರಾಟದ ಹಾದಿ ಹಿಡಿದಿರುವ ಕುರಿತು.**

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ ಮಲೆನಾಡು ಭಾಗದ ಅಡಿಕೆ ಬೆಳೆಗಾರರು ಭಾರಿ ಸಂಕಷ್ಟದಲ್ಲಿದ್ದು ಗೋರಕ್‌ಸಿಂಗ್ ವರದಿಯನ್ನು ಅನುಷ್ಠಾನಕ್ಕೆ ತರಲು ಹಾಗೂ ಈ ಬಗ್ಗೆ ಅಡಿಕೆ ಬೆಳೆಗಾರರು ಹೋರಾಟದ ಹಾದಿ ಹಿಡಿದಿರುವ ಬಗ್ಗೆ ಮಾನ್ಯ ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಎ. ರವೀಂದ್ರನಾಥ್ (ತೋಟಗಾರಿಕೆ ಹಾಗೂ ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ ಅಡಿಕೆಯು ಕರ್ನಾಟಕದ ಒಂದು ಮುಖ್ಯ ವಾಣಿಜ್ಯ ಬೆಳೆಯಾಗಿದ್ದು ಈ ಬೆಳೆಯನ್ನು 2.15 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಸಲಾಗುತ್ತಿದ್ದು, 3,18,996 ಟನ್ ಗಳ ಉತ್ಪಾದನೆಯಿರುತ್ತದೆ. ಅಡಿಕೆಯನ್ನು ಮುಖ್ಯವಾಗಿ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಾದ ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು ಹಾಗೂ ಉಡುಪಿ ಜಿಲ್ಲೆಗಳಲ್ಲಿ ಒಟ್ಟಾರೆ 1.32 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಸಲಾಗುತ್ತಿದೆ.

ಆದರೆ 30–40 ವರ್ಷಗಳಿಂದ ಕರ್ನಾಟಕದಲ್ಲಿ ಚಿಕ್ಕಮಗಳೂರು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ಮೂಡಿಗೆರೆ, ಮಡಿಕೇರಿ ಹಾಗೂ ಸುಳ್ಯ ತಾಲ್ಲೂಕುಗಳಲ್ಲಿ ಅಡಿಕೆ ಬೆಳೆಗೆ ಹಳದಿ ಎಲೆ ರೋಗವು ಹೆಚ್ಚಾಗಿ ಕಂಡುಬಂದಿರುತ್ತದೆ. ಈ ರೋಗ ಪೀಡಿತ ಅಡಿಕೆ ಮರಗಳ ಎಲೆಗಳು ಹಳದಿಯಾಗಿ, ನಂತರ ಕ್ರಮೇಣ ಇಳುವರಿ ನಷ್ಟವಾಗಿ ಪರಿಣಮಿಸುತ್ತವೆ, ಇದರಿಂದ ರೈತರಿಗೆ ಆರ್ಥಿಕವಾಗಿ ನಷ್ಟವಾಗುತ್ತದೆ. ಸದರಿ ಜಿಲ್ಲೆಗಳಲ್ಲಿ ಅಡಿಕೆ ಬೆಳೆಗೆ ಹಳದಿ ಎಲೆ ರೋಗವು ಅಂದಾಜು 7530 ಹೆಕ್ಟೇರ್ ಪ್ರದೇಶಗಳಲ್ಲಿ ಹರಡಿರುವುದರಿಂದ ಶೇ. 75 ರಂತೆ ಸುಮಾರು **ರೂ. 135 ಕೋಟಿಗಳಷ್ಟು** ಇಳುವರಿಯಲ್ಲಿ ಹಾನಿಯು ಕಂಡುಬಂದಿರುತ್ತದೆ ಎಂದು ಅಂದಾಜಿಸಲಾಗಿದೆ.

ಈ ರೋಗಕ್ಕೆ ನಿಖರವಾದ ಕಾರಣಗಳು ಇಲ್ಲಿವರೆಗೂ ಸರಿಯಾಗಿ ತಿಳಿದುಬಂದಿಲ್ಲ. ವಿಜ್ಞಾನಿಗಳು ಅನೇಕ ವರ್ಷಗಳಿಂದ ಈ ರೋಗ ನಿಯಂತ್ರಣಕ್ಕೆ ಪ್ರಯತ್ನಿಸುತ್ತಿದ್ದರೂ ಈವರೆಗೂ ಈ ರೋಗದ ಯಶಸ್ವಿ ನಿಯಂತ್ರಣ ಸಾಧ್ಯವಾಗಿರುವುದಿಲ್ಲ.

ಈ ಸಂಬಂಧ, ಅಡಿಕೆ ಹಳದಿ ರೋಗಕ್ಕೆ ನಿಖರವಾದ ಕಾರಣಗಳೇನು ಮತ್ತು ಇದನ್ನು ಪರಿಣಾಮಕಾರಿಯಾಗಿ ಹೇಗೆ ನಿಯಂತ್ರಿಸಲು ಸಾಧ್ಯ ಎಂಬ ವಿಷಯದ ಮೇಲೆ ಆಳವಾದ ಸಂಶೋಧನೆ ಕೈಗೊಳ್ಳಲು ಶೃಂಗೇರಿಯಲ್ಲಿ ತೋಟಗಾರಿಕೆ ಸಂಶೋಧನಾ ಕೇಂದ್ರ ಸ್ಥಾಪಿಸಲು ಮತ್ತು ಸಂಶೋಧನೆ ಕೈಗೊಳ್ಳಲು ರೂ. 494.38 ಲಕ್ಷಗಳ ಅನುದಾನದ ಯೋಜನೆಯನ್ನು ರೂಪಿಸಿದ್ದು, 2008–09ನೇ ಸಾಲಿನಿಂದ ಇದುವರೆಗೂ ರೂ. 392.50 ಲಕ್ಷಗಳನ್ನು ಒದಗಿಸಲಾಗಿದೆ. ಈ ಸಂಶೋದನೆ ಕೇಂದ್ರದಲ್ಲಿ ಈಗಾಗಲೇ ಪ್ರಾರಂಭಿಕ ಸಂಶೋಧನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ರೋಗ ಪೀಡಿತ ಪ್ರದೇಶಗಳ ಅಧ್ಯಯನಕ್ಕಾಗಿ ಕೇಂದ್ರ ಸರ್ಕಾರ ನೇಮಿಸಿದ ಡಾ॥ ಗೋರಕ್ ಸಿಂಗ್ ಸಮಿತಿಯ ತಾಂತ್ರಿಕ ಶಿಫಾರಸ್ಸಿರನ್ವಯ ನೀಡಿದ ಪುನಶ್ಚೇತನ

ಪ್ಯಾಕೇಜ್ ಅನ್ನು ಅಳವಡಿಸಿ ತೋಟಗಾರಿಕಾ ಇಲಾಖಾವತಿಯಿಮದ **"ಅಡಿಕೆ ಬೆಳೆಯ ಹಳದಿ ಎಲೆ ರೋಗ ಭಾಧಿತ ಬೆಳೆಯ ಪುನಶ್ಚೇತನ"** ಕಾರ್ಯಕ್ರಮವನ್ನು 2011–12ನೇ ಸಾಲಿನಲಿ ಅನುಷ್ಠಾನಗೊಳಿಸಲಾಗಿದೆ. ಸದರಿ ಯೋಜನೆಗಳಡಿ ಪುನಶ್ಚೇತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಒಂದು ಘಟಕಕ್ಕೆ (1 ಹೆಕ್ಟೇರ್) ತಗಲುವ ಒಟ್ಟಾರೆ ವೆಚ್ಚದ ಶೇ. 50 ರಂತೆ ಗರಿಷ್ಠ ರೂ. 15,000/–ಗಳ ಸಹಾಯಧನವನ್ನು ಪ್ರತಿ ಫಲಾನುಭವಿಗೆ ಗರಿಷ್ಠ 2 ಹೆಕ್ಟೇರ್‌ವರೆಗೆ ಸಹಾಯಧನವನ್ನು ನೀಡಲಾಗಿರುತ್ತದೆ. 2011–12ನೇ ಸಾಲಿಗೆ 3233 ಹಕ್ಟೇರ್ ಪ್ರದೇಶದಲ್ಲಿ ಪುನಶ್ಚೇತನ ಕೈಗೊಳ್ಳಲು ಒಟ್ಟು ರೂ. 574.18 ಲಕ್ಷಗಳ ಸಹಾಯಧನವನ್ನು ರೈತರಿಗೆ ಒದಗಿಸಲಾಗಿರುತ್ತದೆ. ಅದೇ ರೀತಿ 2012–13ನೇ ಸಾಲಿನಲ್ಲಿ ರಾಜ್ಯವಲಯ ಯೋಜನೆಯಡಿ ರೂ. 200 ಲಕ್ಷ ಅನುದಾನ ನಿಗದಿಪಡಿಸಲಾಗಿದೆ.

ಮುಂದುವರೆದು, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳ ಅಡಿಕೆ ಬೆಳೆಗಾರರು ಬೆಳೆ ಅಭಿವೃದ್ಧಿಗಾಗಿ ಪಡೆದಿರುವ ಸಾಲದ ವಿವರಗಳನ್ನು ಸಹಕಾರ ಇಲಾಖೆಯ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿರುತ್ತದೆ.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆ ಏನಾಗಿದೆ ಎಂದರೆ, ಶಿವಮೊಗ್ಗ, ಚಿಕ್ಕಮಗಳೂರು, ಮಡಿಕೇರಿ ಎಲ್ಲಾ ಕಡೆ ತೊಂದರೆ ಜಾಸ್ತಿಯಾಗಿದೆ. ನಮ್ಮಲ್ಲಿ ಮತ್ತು ಶೃಂಗೇರಿಯಲ್ಲಿಯೂ ತೀವ್ರ ಅನಾಹುತಕ್ಕೆ ಒಳಗಾಗಿದೆ. ರಾಜ್ಯ ಸರ್ಕಾರವೇನು ಅಡಿಕೆ ಬೆಳೆಗಾರರ ಸಂಕಷ್ಟದ ನೆರವಿಗೆ ಬರಲು ಏನು ತಯಾರಿ ನಡೆಸಿದೆ, ಆ ವರದಿಯನ್ನು ಇಲ್ಲಿ ಏನಾದರೂ ಚರ್ಚೆ ಮಾಡುತ್ತಾರೆಯೇ/ ಕೇಂದ್ರ ಸರ್ಕಾರದವರು ಕೈಗೊಂಡಿರುವ ವರದಿಯಾಯಿತು, ರಾಜ್ಯ ಸರ್ಕಾರದ ನಿಲುವೇನು? ಈಗ ಅವರೆಲ್ಲಾ ಪ್ರತಿಭಟನೆ ಮಾಡುತ್ತಿದ್ದಾರೆ, 30ನೇ ತಾರೀಖು ಒಂದಷ್ಟು ಜನರು ಬರುತ್ತಿದ್ದಾರೆ, ಇನ್ನೊಂದು ಎರಡು ದಿವಸ ಬಿಟ್ಟು ಇನ್ನೊಂದಷ್ಟು ಜನರು ಪ್ರತಿಭಟನೆ ಮಾಡುತ್ತಿದ್ದಾರೆ, 2–3 ವರ್ಷಗಳಿಂದ ನಡೆಯುತ್ತಿದೆ. ರಾಜ್ಯ ಸರ್ಕಾರ ಆ ಸಂಕಷ್ಟದಲ್ಲಿರುವ ಅಡಿಕೆ ಬೆಳೆಗಾರರಿಗೆ ಯಾವ ರೀತಿ ಸಹಾಯಕ್ಕೆ ನಿಲ್ಲುತ್ತದೆನ್ನುವುದರ ಬಗ್ಗೆ ಇಲ್ಲಿಯವರೆಗೆ ಯಾವುದೇ ರೀತಿಯ ನಿರ್ದಿಷ್ಟ ನಿಲುವುಗಳನ್ನು ತಳೆದಿಲ್ಲ. ಕೊಟ್ಟಿರುವ ಉತ್ತರದಲ್ಲಿ ನಮ್ಮ ಸಮಸ್ಯೆಯನ್ನು ಹೇಳಿದ್ದಾರೆಯೇ ಹೊರತು, ಪೂರಕವಾಗಿ ನಮ್ಮ ಸಂಕಷ್ಟಕ್ಕೆ ಏನಾಗಿದೆ ಎನ್ನುವುದನ್ನು ಬೆಳೆ ಹಾನಿಗೆ ಪರಿಹಾರವೇನು, ಕ್ರಮವೇನು ಯಾವುದನ್ನು ತಿಳಿಸಿಲ್ಲ. ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಯಾರು ಈ ಹಳದಿ ರೋಗಕ್ಕೆ ತುತ್ತಾಗಿದ್ದಾರೆ, ರಾಜ್ಯ ಸರ್ಕಾರ

ಏನು ನಿಲುವನ್ನು ತೆಗೆದುಕೊಂಡಿದೆ, ಏನು ಪರಿಹಾರ ಕೊಡುತ್ತದೆ? ಒಂದು ಅಡಿಕೆ ತೋಟ ಬೆಳೆಸುವುದಕ್ಕೆ 15–20 ವರ್ಷ ಬೇಕಾಗುತ್ತದೆ, ಆ ತೋಟ ಸಂಪೂರ್ಣ ನಾಶವಾದರೆ ಒಂದು, ಫಸಲು ನಷ್ಟ, ಮತ್ತೆ 20 ವರ್ಷ ಇನ್ನೊಂದು ಬೆಳೆ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಉತ್ತರದಲ್ಲಿ ಏನೂ ಕೊಟ್ಟಿಲ್ಲ, ಎಷ್ಟು ಎಕರೆ ತೋಟವಿದೆ, ಎಷ್ಟು ಎಕರೆ ಗದ್ದೆ ಇದೆ ಎನ್ನುವುದನ್ನು ಕೊಟ್ಟಿದ್ದಾರೆ, ಸಮಸ್ಯೆಯ ಪರಿಹಾರಕ್ಕೆ ಸರ್ಕಾರದ ನಿಲುವೇನು ಎನ್ನುವುದರ ಬಗ್ಗೆ ಏನೂ ಇಲ್ಲ.

ಶ್ರೀ ಹೆಚ್. ಹಾಲಪ್ಪ: ಈ ಸಮಸ್ಯೆಯನ್ನು ನಮ್ಮ ರತ್ನಾಕರ್ ಅವರು ಎತ್ತಿದ್ದಾರೆ, ಅದಕ್ಕೆ ನಾನು ಅವರನ್ನು ಬೆಂಬಲಿಸುತ್ತೇನೆ. ರಾಜ್ಯ ಸರ್ಕಾರ ಕೂಡ ಇದಕ್ಕೆ ಸರಿಯಾದ ಪ್ರತಿಕ್ರಿಯೆ ಮತ್ತು ಕ್ರಮಗಳನ್ನು ಕೈಗೊಳ್ಳಬೇಕು. ಒಂದು, ಗೋರಕ್‌ಸಿಂಗ್ ವರದಿ ಅಡಿಕೆ ಬೆಳೆಗಾರರ ಸಮಸ್ಯೆಗಳ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದೆ. ಆ ಸಮಿತಿಯನ್ನು ನೇಮಕ ಮಾಡಿದ್ದು ಕೇಂದ್ರ ಸರ್ಕಾರ, ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿರುವುದು. ಕೇಂದ್ರ ಸರ್ಕಾರ ಈ ವರದಿಯನ್ನು ಜಾರಿಗೆ ತರಬೇಕು, ಆ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಒತ್ತಾಯ ತರಬೇಕೆಂದು ನಾನು ಹೆಳುವುದರ ಜೊತೆಗೆ ಪರಿಹಾರವನ್ನು ಕೂಡ ಹೇಳಿದ್ದಾರೆ. 3–4 ತಿಂಗಳುಗಳ ಹಿಂದೆ ನಡೆದ ಅನೇಕ ಸಭೆಗಳಲ್ಲಿ ನಮ್ಮ ಗೃಹಮಂತ್ರಿಗಳು ಕೂಡ ಸಭೆಗೆ ಹೋಗಲಿಲ್ಲ, ದೂರದಲ್ಲಿ ಇದ್ದರು. ಅನೇಕ ಜನ ನಮ್ಮ ಹಿರಿಯ ಮುಖಂಡರಾದ ಮಾಜಿ ಮುಖ್ಯಮಂತ್ರಿ ಈಗಿನ ಕೇಂದ್ರ ಸಚಿವರಾದ ***ಭಾಷಣ, ಪ್ರಾಮಿಸ್ ಮಾಡಿದ್ದನ್ನು ನಾನು ಕೇಳಿದ್ದೇನೆ. ಮಾನ್ಯ ***ಪ್ರಾಮಿಸ್ ಮಾಡಿದ್ದರು, ಮಾನ್ಯ ***ಪ್ರಾಮಿಸ್ ಮಾಡಿದ್ದರು. 1400 ಕೋಟಿ ರೂಪಾಯಿಗಳನ್ನು ನಾವು ಕೊಡಿಸುತ್ತೇವೆ, ಹಳದಿ ಎಲೆ ರೋಗ ಮತ್ತು ಅಡಿಕೆ ಬೆಳೆಗಾರರ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿ ಚಿಕ್ಕಮಗಳೂರು ಚುನಾವಣೆ ಸಂದರ್ಭದಲ್ಲಿ ಹೇಳಿದ್ದರು. 1400 ಕೋಟಿ ರೂ. ಮಂಜೂರಾತಿ ಆಗಿ ಬಿಟ್ಟರೆ ನಮ್ಮ ಅಡಿಕೆ ಬೆಳೆಗಾರರ ಅರ್ಧ ಸಮಸ್ಯೆಗಳು ಬಗೆಹರಿಯುತ್ತವೆ. ಆ ನಿಟ್ಟಿನಲ್ಲಿ . . .

ಶ್ರೀ ಟಿ. ಬಿ. ಜಯಚಂದ್ರ: ಅವರು ಚುನಾವಣೆ ಪ್ರಯುಕ್ತ ಯಾವ ವಿಚಾರವನ್ನೂ ಕೂಡ ಅಡಿಕೆ ಬೆಳೆಗರರ ಬಗ್ಗೆ ಯಾವುದೇ ತರಹದ ಆಶ್ವಾಸನೆಗಳನ್ನು ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು: ಚುನಾವಣೆ ವಿಚಾರ ಇಲ್ಲಿ ಬೇಡ

** ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಡಿ. ಎನ್. ಜೀವರಾಜ್: ಅವರ ಹೇಳಿಕೆ ಸತ್ಯ ಅಲ್ಲವಾ? ಅವರು ಕೊಡಬೇಕೆಂದು ಹೇಳುತ್ತಿಲ್ಲ. ಅವರ ಹೇಳಿಕೆ ಸತ್ಯವಲ್ಲವೇ?

ಶ್ರೀ ಟಿ. ಬಿ. ಜಯಚಂದ್ರ: ಅವರಿಗೆ ಸಹಾನುಭೂತಿ ಇದೆ, ಕಳಕಳಿ ಇದೆ, ಗೋರಕ್ ಸಿಂಗ್ ವರದಿಯನ್ನು ಒಪ್ಪಿಕೊಳ್ಳುವುದಕ್ಕೆ ಪ್ರಯತ್ನ ಪಡೋಣ.

ಶ್ರೀ ಸಿ. ಟಿ. ರವಿ: ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವ ಹೇಳಿಕೆಗಳ ಪೇಪರ್ ಸ್ಟೇಟ್‌ಮೆಂಟ್‌ಗಳನ್ನು ನಾಳೆ ಬೆಳಿಗ್ಗೆ ತಂದು ಕೊಡುತ್ತೇವೆ.

ಶ್ರೀ ಡಿ. ಎನ್. ಜೀವರಾಜ್: ನೀವು ಹೇಳಿರುವ ಹೇಳಿಕೆಗಳು ಹೇಳಿಲ್ಲ ಎಂದು ಹೇಳುವ ಸುದ್ದಿ ಜನರಿಗೆ ತಲುಪಲಿ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಅವರು ಮನವಿ ಮಾಡಿದರೇ ವಿನಃ ಅವರ ಬಾಯಿಯಿಂದ ಆ ಮಾತುಗಳು ಬಂದಿಲ್ಲ.

ಶ್ರೀ ಸಿ. ಟಿ. ರವಿ: ಪೇಪರ್‌ನಲ್ಲಿ ಬಂದಿರುವುದು ಅವರು ಹೇಳಿಲ್ಲವೆಂದರೆ ನಮ್ಮದೇನೂ ತಕರಾರಿಲ್ಲ. ನೀವು ಚುನಾವಣೆ ಗೆದ್ದು ಆಯಿತು. ನೀವು ಆವತ್ತು ಹೇಳಿದ್ದು ಸುಳ್ಳು ಎಂದು ಒಪ್ಪುತ್ತೇನೆ. ಆದರೆ ಪೇಪರ್ ನಲ್ಲಿ ಬಂದಿರುವುದನ್ನು ನಾಳೆ ನಿಮಗೆ ಒದಗಿಸಿ ಕೊಡುತ್ತೇನೆ.

ಶ್ರೀ ಡಿ. ಎನ್. ಜೀವರಾಜ್: ನಾನು ಶೃಂಗೇರಿ ಕ್ಷೇತ್ರದ ಸಭೆಗಳಲ್ಲಿ ಬಜೆಟ್ 16ನೇ ತಾರೀಖಿನಂದು ಇತ್ತು. ಚುನಾವಣೆ 18ನೇ ತಾರೀಖು ಇತ್ತು. ನಾನು 14 ಹಾಗೂ 15ನೇ ತಾರೀಖಿನ ಸಭೆಗಳಲ್ಲಿ ಹೇಳಿದೆ. ಅವರು 16ನೇ ತಾರೀಖು ಬಜೆಟ್ ನಲ್ಲಿ ಘೋಷಣೆ ಮಾಡಿ ಬಿಡಲಿ ಎಂದು ಅದಕ್ಕೆ ಏನು ಹೇಳಿದರು ಗೊತ್ತಾ? ಜೀವರಾಜನಿಗೆ ತಿಳುವಳಿಕೆ ಕಡಿಮೆ ಇದೆ. ನಿಮ್ಮ ಹಿರಿಯ ನಾಯಕರು ಹೇಳಿದ್ದು. ಹಾಗೆಲ್ಲಾ ಕೊಡುವುದಕ್ಕಾಗುವುದಿಲ್ಲ ಅದನ್ನು ಪೂರಕ ಬಜೆಟ್‌ನಲ್ಲಿ ಕೊಡುತ್ತೇವೆಂದು ಹೇಳಿದ್ದರು. ಈಗ ಹೇಳಿಲ್ಲವೆಂದು ಹೇಳುವುದು ನಾನು ಒಪ್ಪುವುದಿಲ್ಲ. ಹೇಳಿದ್ದೀರಿ, ಕೊಡುವುದು ಬಿಡುವುದು ಬೇರೆ ಪ್ರಶ್ನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ***ಅವರಾಗಲಿ ಮಾನ್ಯ ***ಸದನದ ಸದಸ್ಯರಲ್ಲ.

ಅಧ್ಯಕ್ಷರು: ಅವರು ಈ ಸದನದ ಸದಸ್ಯರು ಅಲ್ಲ, ಅವರ ಹೆಸರು ಹೇಳುವ ಅಗತ್ಯವೂ ಇಲ್ಲ.

ಶ್ರೀ ಸಿದ್ದರಾಮಯ್ಯ: ಅವರು ಈ ಮನೆಯ ಸದಸ್ಯರಲ್ಲ

ಶ್ರೀ ಡಿ. ಎನ್. ಜೀವರಾಜ್: ಕೇಂದ್ರ ಹಿರಿಯ ಮಂತ್ರಿಗಳಾಗಿರುವುದರಿಂದ ಅವರ ಬಗ್ಗೆ ಗೌರವದಿಂದ ಹೇಳಿರುವ ಮಾತು. ಅವರ ಮೇಲೆ ಕಾಮೆಂಟ್ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ: You can't make allegations against them and against those who are not Members of this House. You can't make allegations like this. ಮಾನ್ಯ ಅಧ್ಯಕ್ಷರೆ, ನಾನೇನು ಹೇಳುವುದು, ಚುನಾವಣೆ ಸಮಯದಲ್ಲಿ ಮಾತನಾಡಿದರು ಎಂದು ಹೇಳಿದರು. ನಾನು ಕೂಡ ಮಾನ್ಯ ಮುಖ್ಯಮಂತ್ರಿಗಳ ಜೊತೆ All party delegation ಹೋದಾಗ ನಾವೆಲ್ಲರೂ ಹೋಗಿದ್ದೆವು. ನಾನೂ ಹೋಗಿದ್ದೆ. ಆಗ ಮಾನ್ಯ ಎಸ್. ಎಂ. ಕೃಷ್ಣರವರೂ ಬಂದಿದ್ದರೂ, ಮೊಯಿಲಿಯವರೂ ಬಂದಿದ್ದರು, ಕೆ.ಹೆಚ್. ಮುನಿಯಪ್ಪನವರು ಬಂದಿದ್ದರು, ಎಲ್ಲರೂ ಬಂದಿದ್ದರು ಹೋಗಿ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿ ಬಂದೆವು. ಇಲ್ಲದೇ ಇರುವವರ ಹೆಸರುಗಳನ್ನೆಲ್ಲಾ ಹೇಳಿಕೊಂಡು ರಾಜಕೀಯ ಮಾಡುವುದಕ್ಕೆ ಹೋಗಬೇಡಿ. ಪ್ರಚಾರಕ್ಕೆ ನಾವೆಲ್ಲಾ ಹೋಗಿದ್ದೆವು. ಅಲ್ಲಿ ಜನಗಳು ಆ ಪ್ರಶ್ನೆಯನ್ನು ರೈಸ್ ಮಾಡಿರುವುದು ನಿಜ. ಇಲ್ಲಿ ಸಮಸ್ಯೆ ಇದೆ. ಗೋರಕ್‌ಸಿಂಗ್ ರವರ ವರದಿ ಇದೆ, ಕೇಂದ್ರ ಸರ್ಕಾರ ನೇಮಕ ಮಾಡಿದಂತಹ ಸಮಿತಿ ಅದು. ಅವರು ವರದಿ ಕೊಟಿದ್ದಾರೆ. ಆ ವರದಿ ಏನಾಗಿದೆ ಎಂದು ಗೊತ್ತಿಲ್ಲ. ಆ ವರದಿ ಕೇಂದ್ರ ಸರ್ಕಾರದಲ್ಲಿದೆ. ಅದನ್ನು implement ಮಾಡಬೇಕು ಎನ್ನತಕ್ಕಂತಹ ಒತ್ತಾಯವನ್ನು ನಾವೂ ಮಾಡಿದ್ದೇವೆ. ಅಲ್ಲಿ ಹೋದಾಗ ಜನಗಳು ವಿಷಯ ಎತ್ತಿದಾಗ ಇದು ಕೇಂದ್ರ ಸರ್ಕಾರದಲ್ಲಿದೆ ಎಂದು ಹೇಳಿದ್ದು ನಿಜ. ಕೇಂದ್ರ ಸರ್ಕಾರ ಅದನ್ನು ಮಾಡಬೇಕೆಂದು ಹೇಳುವುದರಲ್ಲಿ ನನ್ನದು ಎರಡನೇ ಮಾತಿಲ್ಲ. ನಾವು ಹೋಗಿ ಒತ್ತಾಯ ಮಾಡಿ ಬಂದಿದ್ದೇವೆ. All party delegation ನಲ್ಲಿ ನಾನೂ ಹೋಗಿ ಹೇಳಿದ್ದೇನೆ. ಹಾಗಂತ ನೀವು ಕೈ ಕಟ್ಟಿ ಕುಳಿತುಕೊಳ್ಳುತ್ತೀರಾ? ಕರ್ನಾಟಕದ ರೈತರನ್ನು ರಕ್ಷಣೆ ಮಾಡುವ ಜವಾಬ್ದಾರಿ ನಿಮಗೆ ಇಲ್ಲವಾ?

ಶ್ರೀ ಡಿ. ಎನ್. ಜೀವರಾಜ್: ರೈತರ ರಕ್ಷಣೆ ಜವಾಬ್ದಾರಿ ಇಲ್ಲವೆಂದರೆ 25,000 ರೂಪಾಯಿ ಸಾಲ ಏಕೆ ಮನ್ನಾ ಮಾಡುತ್ತಾರೆ?

ಶ್ರೀ ಸಿದ್ದರಾಮಯ್ಯ: Is this not your responsiblility? ಕೇಂದ್ರ ಸರ್ಕಾರ ಅಡಿಕೆ ಬೆಳೆಗಾರರಿಗೆ ಸಾಕಷ್ಟು ಕೊಟ್ಟಿದೆ. ಬಹಳಷ್ಟು ಸಹಾಯ ಮಾಡಿದೆ. ನಾನು ಈಗಲೂ ಮಾಡಬೇಕೆಂದು ಹೇಳುವವನು. That is a different thing.

ಶ್ರೀ. ಸಿ. ಟಿ. ರವಿ: ಅದು Joint responsibility ಇನ್ನೊಬ್ಬರ ಮೇಲೆ ಆರೋಪ ಮಾಡುವುದಕ್ಕೆ ಅಲ್ಲ ನೀವು ಇರುವುದು.

ಶ್ರೀ ಸಿದ್ದರಾಮಯ್ಯ: ನಾವು ಏನೂ ಮಾಡುವುದಿಲ್ಲ. ಕೇಂದ್ರ ಸರ್ಕಾರ ಅಲ್ಲಿ ವರದಿ ಕೊಟ್ಟಿದೆ. ನೋಡೋಣ ಎಂದರೆ, What is your role? What is your contribution? How are you going to protect them? ಇಲ್ಲಿಯವರೆಗೆ ಅಗಿರತಕ್ಕಂತಃ ನಷ್ಟವನ್ನು ಹೇಗೆ ಬಗೆಹರಿಸುತ್ತೀರಿ? ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೆ ನಾನು ಹೋಗುತ್ತೇನೆ. ಒತ್ತಾಯ ಮಾಡೋಣ. ಅಡಿಕೆ ಬೆಳೆಗಾರರಿಗೆ ಸಹಾಯ ಮಾಡಬೇಕೆಂದು ಇನ್ನೊಂದು ಸಾರಿ ಕೇಂದ್ರಕ್ಕೆ ಡೆಲಿಗೇಷನ್ ಹೋಗೋಣ. ಒತ್ತಾಯ ಮಾಡೋಣ. ನನಗೆ ಗೊತ್ತಿರುವ ಮಟ್ಟಿಗೆ ಒಂದು ಪ್ಯಾಕೇಜ್ ಕೊಬೇಕೆಂದು ಆವತ್ತು ಅವರು express ಮಾಡಿದ್ದರು. ಅದು ಏನಾಗಿದೆ ಎಂದು ಮತ್ತೆ ಇನ್ನೊಂದು ಸಾರಿ ಹೋಗಿ ಕೇಂದ್ರ ಸರ್ಕಾರಕ್ಕೆ ಹೋಗಿ ಕೇಳೋಣ, ಒತ್ತಾಯ ಮಾಡೋಣ. ಹಾಗಂತ ಹೇಳಿ ಅವರು ಹೇಳಿದ್ದರು, ಮಾಡಿಲ್ಲ ಚುನಾವಣೆಯಲ್ಲಿ ಹೇಳಿದ್ದರು, ಭರವಸೆ ಕೊಟ್ಟಿದ್ದರು, ನೀವು manifesto ನಲ್ಲಿ ಕೊಟ್ಟಿರುವಂತಹವುಗಳನ್ನು ಒಂದೂ implement ಮಾಡುವುದಕ್ಕಾಗಿಲ್ಲ. ಇಲ್ಲದೆ ಇರುವವರ ಮೇಲೆ ಹೇಳುತ್ತಾ ಕೂತಿದ್ದೀರಲ್ಲ?

ಶ್ರೀ ಡಿ. ಎನ್. ಜೀವರಾಜ್: ಕೊಡುವುದಿಲ್ಲ ಎಂದಾಯಿತು

ಶ್ರೀ ಸಿದ್ದರಾಮಯ್ಯ: ಕೊಡುವುದಿಲ್ಲ ಎಂದು ನಾವು ಹೇಳಲಿಲ್ಲ

ಶ್ರೀ ಡಿ. ಎನ್. ಜೀವರಾಜ್: ಮತ್ತೆ ಇನ್ನೇನು "ಅಳಿಯ ಅಲ್ಲ ಮಗಳ ಗಂಡ" ಅಂದ ಹಾಗಾಯಿತು.

ಶ್ರೀ ಸಿದ್ದರಾಮಯ್ಯ: ಕೊಡುವುದಿಲ್ಲವೆಂದು ಹೇಳಿದೆನಾ ನಾನು?

ಶ್ರೀ. ಸಿ. ಟಿ. ರವಿ: ಚುನಾವಣೆ ಸಮಯದಲ್ಲಿ ಕೊಡಬೇಕೆಂದು ಹೇಳಿ ಜನರ ಮೂಗಿಗೆ ತುಪ್ಪ ಸವರಿ ಈಗ ಇನ್ನೇನು "ಅಳಿಯ ಅಲ್ಲ ಮಗಳ ಗಂಡ" ಎಂದು ಹೇಳುತ್ತೀರಿ.

ಶ್ರೀ ಸಿದ್ದರಾಮಯ್ಯ: ಚುನಾವಣೆಯಲ್ಲಿ ಸೋತಿರುವುದರಿಂದ ಇವೆಲ್ಲಾ ನಿಮ್ಮ ಅವತಾರಗಳು ಮಾನ್ಯ ಸದಾನಂದಗೌಡರು. ಗೆದ್ದಿದ್ದರು ಮುಖ್ಯಮಂತ್ರಿಗಳಾಗಿ ಬಿಟ್ಟರು ನಂತರ ಸೋತರು "ಬಿದ್ದರೂ ಮೀಸೆ ಮಣ್ಣಾಗಿಲ್ಲ" ಎಂದು ಹೇಳುತ್ತೀರಿ.

ಶ್ರೀ ಡಿ. ಎನ್. ಜೀವರಾಜ್: 1440 ಕೋಟಿಗೆ ಜನ ಓಟು ಕೊಟ್ಟಿದ್ದು

(ಗೊಂದಲ)

ಶ್ರೀ ಸಿ. ಟಿ. ರವಿ: ನಮ್ಮ ಕೈಯಲ್ಲಿ ಆಗುವುದಿಲ್ಲ, ಚುನಾವಣೆ ಇದೆ ಎಂದು ಹೇಳಿದ್ದೆವು. ಅದೆಲ್ಲಾ ಡ್ರಾಮಾ ಎಂದು ಹೇಳಿಬಿಡಿ. ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಹೇಳಿ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ: ಹೀಗೆ ಮಾಡಿ ಕೇಂದ್ರ ಸರ್ಕಾರ ಕೊಡುವುದನ್ನೂ ನೀವು ತಪ್ಪಿಸಿಕೊಳ್ಳುತ್ತೀರಿ. ಅವರು ಕೊಡಬೇಕೆಂದು ಇದ್ದಾರೆ. Government of India is very very sympathetic. ನಾನು ಹೋಗಿದ್ದೆ, ನೀವು ಬಂದಿರಲಿಲ್ಲ. You don't know. ಇವರ್‍ಯಾರೂ ಬಂದಿರಲಿಲ್ಲ. ನಿಮ್ಮ ಮಾನ್ಯ ಸದಾನಂದಗೌಡರು ಹಾಗೂ ಕೃಷಿ ಸಚಿವರು ಬಂದಿದ್ದರು. ಆಗ ಪವಾರ್ ರವರು ಏನು ಹೇಳಿದರು? sympathetic ಆಗಿ ನೋಡುತ್ತೇನೆಂದು ಹೇಳಲಿಲ್ಲವಾ? ಮತ್ತೆ ಅವರ ಹೆಸರುಗಳನ್ನೆಲ್ಲಾ ಏಕೆ ಹೇಳುತ್ತಾರೆ ಇವರು ಸದನದಲ್ಲಿ ಇಲ್ಲದೇ ಇರುವವರ ಹೆಸರುಗಳನ್ನೆಲ್ಲಾ ಪ್ರಸ್ತಾಪ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಸದನದಲ್ಲಿ ಇಲ್ಲದೆ ಇರುವವರ ಹೆಸರುಗಳನ್ನು ತೆಗೆದುಕೊಂಡಿರುವುದು ಕಡತದಿಂದ ತೆಗೆದು ಹಾಕಿ.

ಶ್ರೀ ಉಮೇಶ್ ಕತ್ತಿ: ಮಾನ್ಯ ಅಧ್ಯಕ್ಷರೆ, ಮತ್ತೊಮ್ಮೆ ಹೋಗೋಣ

ಶ್ರೀ ಸಿದ್ದರಾಮಯ್ಯ: ಕೇಂದ್ರ ಸರ್ಕಾರ ಸಹಾಯಧನ ಕೊಡಬೇಕು. ಕೇಂದ್ರ ಸರ್ಕಾರ ಅಡಿಕೆ ಬೆಳೆಗಾರರ ಸಹಾಯಕ್ಕೆ ಬರಬೇಕು. That is a different aspect. ಹಾಗಂತ ಹೇಳಿ ನಮ್ಮದೇನಿಲ್ಲ. ಅವರು ನಾಟಕ ಮಾಡಿದ್ದರು ಎಂದು ಹೇಳಿ ತಪ್ಪಿಸಿಕೊಳ್ಳುವುದಕ್ಕೆ ಅಲ್ಲ ನೀವು ಇರುವುದು.

ಶ್ರೀ ಡಿ. ಎನ್. ಜೀವರಾಜ್: ಅವರು ಪೂರ್ತಿ ಹೇಳಿಲ್ಲ. ಅವರು ಏನು ಹೇಳುವುದಕ್ಕೆ ಹೊರಟಿದ್ದಾರೆಂದು ಪೂರ್ತಿ ಕೇಳಿ.

ಶ್ರೀ ಸಿದ್ದರಾಮಯ್ಯ: ನೀವು ಒಂದು ಕೋಟಿ ಬಜೆಟ್ ಮಂಡಿಸಿದ್ದೀರಿ. ಅವರು ಕೊಡುವವರೆಗೆ ಸ್ವಲ್ಪ ಕೊಡಿ.

ಶ್ರೀ ಉಮೇಶ್ ಕತ್ತಿ: ಆಲೂಗಡ್ಡೆ ಬೆಳೆಗಾರರದೂ ಹೇಳಿದ್ದೇವೆ, ಅಡಿಕೆ ಬೆಳೆಗಾರರದೂ ಹೇಳಿ ಬಂದಿದ್ದೇವೆ.

ಶ್ರೀ ಹೆಚ್. ಡಿ. ರೇವಣ್ಣ: ಚುನಾವಣೆ ಸಂದರ್ಭದಲ್ಲಿ . . .

ಶ್ರೀ ಸಿ. ಟಿ. ರವಿ: ಗೊಬ್ಬರದ ಬೆಲೆ 1100 ರೂಪಾಯಿ ಆಗಿದೆ. ಇದು ರಾಜ್ಯ ಸಕಾರದ್ದು. ಕೇಂದ್ರದ್ದು ಏನೂ ಇಲ್ಲ. ರಾಜ್ಯ ಸರ್ಕಾರವೇ ಮಾಡಿದ್ದು ಎಂದು ಹೇಳಿದರೆ ಯಾರಾದರೂ ಒಪ್ಪುತ್ತಾರಾ?

ಶ್ರೀ ಸಿದ್ದರಾಮಯ್ಯ: 14,000 ಕೋಟಿ ಕೇಳಿ ಸರ್ಕಾರ ಕೊಡುತ್ತದೆ.

ಅಧ್ಯಕ್ಷರು: ಇದನ್ನು ಮುಕ್ತಾಯ ಮಾಡೋಣ, ಮಾನ್ಯ ಹೆಚ್. ಡಿ. ರೇವಣ್ಣರವರು

ಶ್ರೀ ಹೆಚ್. ಹಾಲಪ್ಪ: ಮಾನ್ಯ ಅಧ್ಯಕ್ಷರೆ, ನಾನು ಕೇಂದ್ರದ ಮಂತ್ರಿಗಳ ಬಗ್ಗೆ ಅತ್ಯಂತ ಗೌರವ ಇಟುಕೊಂಡಿದ್ದೇನೆ. ನನಗೆ ಹೇಳುವುದಕ್ಕೆ ಬಿಡಲಿಲ್ಲ ಅವರು. ಹಿರಿಯರಾದ ಜಯಚಂದ್ರರವರು ಎದ್ದು ನಿಂತರು. ನಾವೇನು ಮಾಡುವುದು, ಕಿರಿಯರು ಕುಳಿತುಕೊಳ್ಳಲೇಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ಅಬ್ಬರಿಸಿಯೇ ಬಿಟ್ಟರು. ನಾನೇನು ಹೇಳುತ್ತಿದ್ದೇನೆಂದು ಅವರು ಹೇಳುವುದಕ್ಕೆ ಬಿಡಲಿಲ್ಲ. ಅವರೆಲ್ಲಾ ಸೇರಿ. . .

ಅಧ್ಯಕ್ಷರು: ನೀವು ಅಡಿಕೆ ಬೆಳೆಗಾರರ ಬಗ್ಗೆ ಮಾತ್ರ ಹೇಳಿ. ಪುನಃ ಪುನಃ ಹಿಂದೆ ಹೋಗಬೇಡಿ.

ಶ್ರೀ ಹೆಚ್. ಹಾಲಪ್ಪ: ನಾನು ಅವರ ಮೇಲೆ ಅಪಾದನೆ ಮಾಡುತ್ತಿಲ್ಲ. ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳುತ್ತಿದ್ದೇವೆ. ಒಳ್ಳೆಯ ಕೆಲಸ ಇನ್ನೂ ಮಾಡಲಿ ಎಂದು ಹೇಳುತ್ತಿದ್ದೇವೆ. ರೈತರ ಸಮಸ್ಯೆ ಬಗೆಹರಿಸಿರುವುದರ ಬಗ್ಗೆ ಹೇಳುವುದಕ್ಕೆ ಹೊರಟೆ. ಅಷ್ಟೊತ್ತಿಗೆ ಅಬ್ಬರಿಸಿಯೇ ಬಿಟ್ಟರು. ಹೇಗೆ ಸಾರ್ ನೀವು ಸೀನಿಯರ್ ಲೀಡರ್ ನಮಗೆಲ್ಲಾ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು ಉತ್ತರ ಹೇಳಿ

ಶ್ರೀ ಎಸ್. ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಯಾವ ಜಿಲ್ಲೆಗಳಲ್ಲಿಯೂ ಅನುದಾನದ ಕೊರತೆ ಇಲ್ಲದ ಹಾಗೆ ನಾವು 15,000 ರೂ. ಒಂದು ಎಕರೆಗೆ ಕೊಡಬೇಕು ಅದನ್ನೆಲ್ಲಾ ಕೊಡುತ್ತಿದ್ದೇವೆ. ಅದೇ ತರಹ ಎಲ್ಲಿ ಗಿಡ ಹೋಗಿವೆ ಅಲ್ಲಿ ಪೌಷ್ಟಿಕಾಂಶಗಳನ್ನು ಕೊಡುವುದಾಗಲಿ, ಏಲಕ್ಕಿ, ಮೆಣಸು ಬೇರೆ ಬೇರೆ

ಸಸಿಗಳನ್ನು ಅವುಗಳಿಗೆ ಅವಶ್ಯಕತೆ ಇರುವ ಗೊಬ್ಬರಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಕೇಂದ್ರ ಸರ್ಕಾರ ಹೇಗೆ ಕಾಫಿ ಬೆಳೆಗೆ ಸಾಲ ಮನ್ನಾ ಮಾಡಿತು, ಅದೇ ತರಹ ಅಡಿಕೆ ಬೆಳೆಗಾರರಿಗೂ ಸಾಲ ಮನ್ನಾ ಮಾಡಲಿ ಎಂಬ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ನಮ್ಮ ವಿರೋಧ ಪಕ್ಷದ ನಾಯಕರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಅಡಿಕೆ ಬೆಳೆಗಾರರ ಸಾಲವನ್ನು ಮನ್ನಾ ಮಾಡಿಸಬೇಕೆಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನೀವೇನು ಕೆಲಸ ಮಾಡಿದ್ದೀರಿ ಹೇಳಿ. ಒಂದು ಲಕ್ಷ ಕೋಟಿಗಳಲ್ಲಿ ನೀವೇನು ಮಾಡುತ್ತಿದ್ದೀರಿ.

ಶ್ರೀ ಎಸ್. ಎ. ರವೀಂದ್ರನಾಥ್: ನಾವೇನು ಮಾಡಿದ್ದೇವೆ ಎಂಬುದನ್ನು ಈಗಾಗಲೇ ಹೇಳಿದ್ದೇನಲ್ಲ? ರೈತರಿಗೆ ಯಾವುದೇ ರೀತಿ ತೊಂದರೆಯಾಗದಂತೆ ಕ್ರಮ ತೆಗೆದುಕೊಂಡಿದ್ದೇವೆ. ನಮ್ಮ ಕಡೆಯಿಂದ ಕೊಡಬೇಕಾದ ಸವಲತ್ತನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು: ರೇವಣ್ಣನವರೇ, ನೀವು ಗಮನ ಸೆಳೆಯುವ ಸೂಚನೆ ಬಗ್ಗೆ ಕೊಟ್ಟಿದ್ದೀರಿ. ಪ್ರಸ್ತಾಪ ಮಾಡಿ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಚಿರತೆಯ ಹಾವಳಿ ಬಗ್ಗೆ ಅರಣ್ಯ ಸಚಿವರ ಗಮನವನ್ನು ಸೆಳೆಯಬೇಕಾಗಿತ್ತು. ಈಗ ಅರಣ್ಯ ಸಚಿವರು ಇಲ್ಲ. ಆದ ಕಾರಣ ಉನ್ನತ ಶಿಕ್ಷಣ ಸಚಿವರು ಇರುವುದರಿಂದ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರುಗಳ ಭರ್ತಿ ಮಾಡುವ ಬಗ್ಗೆ ಗಮನ ಸೆಳೆಯುತ್ತೇನೆ.

7. ವಿಷಯ: ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಸ್ನಾತಕೋತ್ತರ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರುಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಸ್ನಾತಕೋತ್ತರ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರುಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸಿ. ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):

ಕಾಲೇಜು ಶಿಕ್ಷಣ ಇಲಾಖೆ,

ಬೋಧಕ ಹುದ್ದೆಗಳ ಬಗ್ಗೆ ವಿವರಗಳು

ಮಾನ್ಯ ಅಧ್ಯಕ್ಷರೆ, ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ 360 ಪ್ರಥಮ ದರ್ಜೆ ಕಾಲೇಜಗುಳು ಇದ್ದು, 5797 ಮಂಜೂರಾದ ಬೋಧಕ ಹುದ್ದೆಗಳಿದ್ದು, ಈ ಹುದ್ದೆಗಳಿಗೆದುರಾಗಿ 4950 ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದು, 847 ಬೋಧಕ ಹುದ್ದೆಗಳು ಖಾಲಿ ಇರುತ್ತವೆ. ಈ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವಂತೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಿದ್ದು, ಆರ್ಥಿಕ ಇಲಾಖೆಯು ಈ ಹುದ್ದೆಗಳಲ್ಲಿ ತೀರ ಅಗತ್ಯ ಹುದ್ದೆಗಳನ್ನು ಗುರುತಿಸಿ ಕಡತವನ್ನು ಮರು ಸಲ್ಲಿಸುವಂತೆ ಸೂಚಿಸಿದ್ದರ ಹಿನ್ನೆಲೆಯಲಿ 276 ತೀರ ಅಗತ್ಯ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿರುತ್ತದೆ.

ಮೂಲ ಸೌಕರ್ಯಗಳ ಬಗ್ಗೆ ಮಾಹಿತಿ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಂದಾಜು ರೂ. 616.80 ಕೋಟಿ ಅಗತ್ಯವಿದ್ದು. ವಿವರಗಳು ಕೆಳಗಿನಂತಿವೆ.

ವಿವರ		*ಮೊತ್ತ (ರೂ. ಕೋಟಿಗಳಲ್ಲಿ)*
39 ನಿವೇಶನ ಹೊಂದಿರುವ ಕಾಲೇಜುಗಳಿಗೆ ಕಟ್ಟಡ ಒದಗಿಸಲು	...	078.45
66 ವಿಜ್ಞಾನ ಕಾಲೇಜುಗಳಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ	...	084.70
44 ವಿಜ್ಞಾನೇತರ ಕಾಲೇಜುಗಳಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ	...	043.30
110 ಪ್ರಗತಿಯಲ್ಲಿರುವ ಕಟ್ಟಡಗಳಿಗೆ ಹೆಚ್ಚುವರಿ ಕೊಠಡಿ	...	187.50
74 ಸ್ನಾತಕೋತ್ತರ ಕೇಂದ್ರಗಳ ನಿರ್ಮಾಣಕ್ಕಾಗಿ	...	164.85
200 ಕಾಲೇಜುಗಳಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ	...	010.00
80 ಕಾಲೇಜುಗಳಲ್ಲಿ ಪ್ರಯೋಗಾಲಯ ನಿರ್ಮಾಣಕ್ಕಾಗಿ	...	048.00
	ಒಟ್ಟು	616.80

2012–13ನೇ ಸಾಲಿನ ಆಯವ್ಯಯದಲ್ಲಿ 166.52 ಕೋಟಿ ಮೊತ್ತವನ್ನು ಒದಗಿಸಿದ್ದು, ಇದರಲ್ಲಿ ಮುಂದುವರಿಕೆ ಕಾಮಗಾರಿಗಳಿಗೆ ಅಂದಾಜು ರೂ. 32 ಕೋಟಿ ಭರಿಸಲಾಗುತ್ತಿದೆ.

						ಮೇಲ್ಛಾವಣಿ ಹಾಕಲಾಗುತ್ತಿದೆ ಹಾಗೆಯೇ ಕಾರ್ಯಾಗಾರ ಕಟ್ಟಡದ ಮೇಲ್ಛಾವಣೆಯ ಕೆಲಸ ನಡೆಯುತ್ತಿದೆ. ವಿದ್ಯಾರ್ಥಿನಿಲಯ ನಿಲಯದ (ಹಾಸ್ಟೆಲ್) ಕಾಮಗಾರಿಯು ಪ್ಲಿಂಟ್ ಲೆವಲ್‌ಗೆ ಬಂದಿದೆ.
5	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಾಮರಾಜನಗರ	1750.00	1820.52	1790.00	ರೈಟ್ಸ್ ಸಂಸ್ಥೆ	ಕಾಮಗಾರಿಯು ಮುಗಿದಿದ್ದು, ಕಟ್ಟಡ ಹಸ್ತಾಂತರ ಪ್ರಕ್ರಿಯೆಯು ಚಾಲನೆಯಲಿರುತ್ತದೆ
6	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ. ಆರ್. ಪೇಟೆ	1750.00	1740.98	1740.00	ಕರ್ನಾಟಕ ಗೃಹ ಮಂಡಳಿ	
7	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕುಶಾಲನಗರ	1750.00	1747.94	1745.00		
8	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು	ಸರ್ಕಾರಿ ಆದೇಶ ಸಂಖ್ಯೆ: ಇಡಿ 249 ಡಿಟಿಇ 2011, ದಿನಾಂಕ 03–11–2011 ರಂತೆ ಈ ನಾಲ್ಕು ಸಂಸ್ಥೆಗಳನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂ ಇಲ್ಲಿಗೆ ವರ್ಗಾಯಿಸಲಾಗಿದೆ. ಈ ನಾಲ್ಕು ಕಾಲೇಜುಗಳ ಕಟ್ಟಡ ಕಾಮಗಾರಿಗಳನ್ನು ಸದರಿ ವಿಶ್ವವಿದ್ಯಾಲಯದಿಂದ ಶೀಘ್ರವಾಗಿ ಪ್ರಾರಂಭಿಸಲಾಗುವುದು.				
9	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ					
10	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ					
11	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಗಂಗಾವತಿ (2012–13ನೇ ಸಾಲಿಗೆ ಮಂಜೂರಾಗಿರುವ)					

ಶ್ರೀ ಸಿ. ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಬೆಳಗ್ಗೆಯೇ ಸಾಕಷ್ಟು ಚರ್ಚೆಯಾಗಿದೆ. ಬೆಳಿಗ್ಗೆಯೇ ಉತ್ತರವನ್ನು ಕೊಟ್ಟಿರುವುದರಿಂದ ಆ ಬಗ್ಗೆ ಏನಾದರೂ ಕ್ಲಾರಿಫಿಕೇಶನ್ ಕೇಳುವುದಿದ್ದರೆ ಕೇಳಲಿ. ಸ್ಪಷ್ಟೀಕರಣವನ್ನು ಕೊಡುತ್ತೇನೆ.

ಅಧ್ಯಕ್ಷರು: ಬೆಳಗ್ಗೆಯೇ ಹೇಳಿದ್ದಾರೆ. ನೀವು ಕ್ಲಾರಿಫಿಕೇಶನ್ ಕೇಳಿ

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಒಟ್ಟು 340 ಪ್ರಥಮ ದರ್ಜೆ ಕಾಲೇಜುಗಳಿವೆ. ಅವುಗಳಿಗೆ 5797 ಹುದ್ದೆಗಳು ಮಂಜೂರಾತಿಯಾಗಿದ್ದು ಈಗಾಗಲೇ 4950 ಹುದ್ದೆಗಳು ಭರ್ತಿಯಾಗಿದೆ. ಇನ್ನೂ ಸುಮಾರು 847 ಹುದ್ದೆಗಳು ಖಾಲಿಯಿದೆ. ಪ್ರಥಮ ದರ್ಜೆ ಕಾಲೇಜುಗಳಲ್ಲಿಯೇ 847 ಹುದ್ದೆಗಳು ಖಾಲಿಯಿದೆಯೆಂದರೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೆಚ್ಚಾಗಿ ಬಡವರ ಮಕ್ಕಳೇ ಓದುವುದು. ಗ್ರಾಮೀಣ ಪ್ರದೇಶದ ಹಳ್ಳಿ ಮಕ್ಕಳಿರಬಹುದು, ವಿದ್ಯಾರ್ಥಿ ವಿದ್ಯಾರ್ಥಿನಿಯವರಿರಬಹುದು. ಇವತ್ತು ಸರ್ಕಾರಿ ಕಾಲೇಜುಗಳ ರಿಸಲ್ಟ್ ಹೆಚ್ಚಾಗಬೇಕೆಂದರೆ ಖಾಸಗಿ ಕಾಲೇಜುಗಳ ಜೊತೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಿದ್ಯಾಭ್ಯಾಸ ಕೊಡುವ ವಿಚಾರದಲ್ಲಿ ಪೈಪೋಟಿ ಮಾಡಬೇಕಾಗುತ್ತದೆ. ಆದುದರಿಂದ ಈ ಕೂಡಲೇ 847 ಉಪನ್ಯಾಸಕರುಗಳ ಹುದ್ದೆಗಳನ್ನು ತುಂಬಬೇಕಾಗುತ್ತದೆ. ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿಯಿರುವ ಈ ಹುದ್ದೆಗಳನ್ನು ಕೂಡಲೇ ತುಂಬಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇನ್ನು ಇದರ ಜೊತೆಗೆ ಮೂಲಭೂತ ಸೌಕರ್ಯಗಳನ್ನು ಕೊಡುವ ವಿಚಾರದಲ್ಲಿ . . .

ಅಧ್ಯಕ್ಷರು: ಬೆಳಗ್ಗೆಯೇ ಪ್ರಶ್ನೋತ್ತರದ ಮೇಲೆ ಉತ್ತರಿಸುವಾಗ ಮಾನ್ಯ ಸಚಿವರು ಎಲ್ಲವನ್ನು ಹೇಳಿದ್ದಾರೆ. ಸವಿವರವಾಗಿ ಚರ್ಚೆಯೂ ಆಗಿದೆ.

ಶ್ರೀ ಹೆಚ್. ಡಿ. ರೇವಣ್ಣ: ನಾನೂ ಹೇಳಬೇಕಲ್ಲವೆ ಸಭಾಧ್ಯಕ್ಷರೆ, ಈಗ ನಮ್ಮ ಊರಿನಲ್ಲಿಯೇ ಒಂದು ಮಹಿಳಾ ಸೈನ್ಸ್ ಕಾಲೇಜ್ ಇದೆ. ಆದರೆ ಟೀಚರ್ಸ್ ಇಲ್ಲ. ಅದಕ್ಕೆಲ್ಲ ಉತ್ತರ ಕೊಬೇಕಲ್ಲ. ನಮ್ಮ ಭಾಗದ ಗ್ರಾಮೀಣ ಪ್ರದೇಶದಲ್ಲಿರುವ ಕಾಲೇಜ್ ನಲ್ಲಿ ಶೇಕಡ 100 ರಷ್ಟು ರಿಸಲ್ಟ್ ಇದೆ. ಆದರೆ ಅಲ್ಲಿ ಉಪನ್ಯಾಸಕರುಗಳಿಲ್ಲ. ಆ ಮೇಲೆ ಮೂಲ ಭೂತ ಸೌಕರ್ಯಕ್ಕೆ ಸುಮಾರು 618 ಕೋಟಿ ಬೇಕೆಂದು ಅವರು ಹೇಳಿ, ನಿವೇಶನ ಹೊಂದಿರುವ ಕಟ್ಟಡಕ್ಕೆ 78 ಕೊಟಿ, ವಿಜ್ಞಾನ ಕಾಲೇಜಿನ ಹೆಚ್ಚುವರಿ ಕಟ್ಟಡಗಳಿಗೆ 84 ಕೋಟಿ, ವಿಜ್ಞಾನ ಕಾಲೇಜಿನ ಹೆಚ್ಚುವರಿ ಕಟ್ಟಡ ನಿರ್ಮಾಣಕ್ಕೆ 43 ಕೋಟಿ, ಪ್ರಗತಿಯಲ್ಲಿರುವ ಕಟ್ಟಡದಲ್ಲಿ ಹೆಚ್ಚುವರಿ ಕಟ್ಟಡಗಳಿಗೆ 187 ಕೋಟಿ ಮತ್ತು ಕೇಂದ್ರದ 164 ಕೋಟಿ, ಕಾಲೇಜು

ಶೌಚಾಲಯ ನಿರ್ಮಾಣಕ್ಕೆ 10 ಕೋಟಿ, ಕಾಲೇಜುಗಳಲ್ಲಿ ಪ್ರಯೋಗಾಲಯಕ್ಕೆ 48 ಕೋಟಿ ರೂ.ಗಳು ಬೇಕೆಂದು ಕೇಳಿದ್ದಾರೆ. ಆದರೆ 2012–2013ರಲ್ಲಿ ಕೇವಲ 167 ಕೋಟಿ ರೂ.ಗಳನ್ನು ಮಾತ್ರ ಕೊಟ್ಟಿದ್ದಾರೆ. 612 ಕೋಟಿ ರೂ.ಗಳು ಬೇಕಾಗಿರುವ ಕಡೆ ಕೇವಲ 167 ಕೋಟಿ ರೂ.ಗಳನ್ನು ಕೊಟ್ಟರೆ ಸಾಕಾಗುತ್ತದೆಯೇ/ ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ 4500 ಉಪನ್ಯಾಸಕರ ಹುದ್ದೆಗಳಿಗೆ ಮಂಜೂರಾತಿಯನ್ನು ಕೊಡಿಸಿದ್ದೇವೆ. ಇದರ ಜೊತೆಗೆ ಪ್ರಥಮ ದರ್ಜೆ ಕಾಲೇಜುಗಳಿಗಾಗಿ ಒಂದು ಸಾವಿರ ಕೋಟಿ ರೂ.ಗಳ ಹಣವನ್ನು ನಬಾರ್ಡ್‌ನಲ್ಲಿ ಮೀಸಲಿಟ್ಟಿದ್ದೇವೆ. ಹೀಗಿದ್ದರೂ ಕೇವಲ 167 ಕೋಟಿ ರೂ. ಗಳನ್ನು ಮಾತ್ರ ಕೊಡುವುದಕ್ಕೆ ಏನು ಕಾರಣ? ಮೂಲಭೂತ ಸೌಕರ್ಯಗಳಿಲ್ಲ. ಪ್ರಯೋಗಶಾಲೆಗಳಿಗಾಗಿ 48 ಕೋಟಿ ರೂ.ಗಳನ್ನು ಬೇಕೆಂದು ಕೇಳಿದ್ದಾರೆ. ಹಾಸನದಲ್ಲಿರುವ ಇಂಜಿನಿಯರಿಂಗ್ ಕಾಲೇಜು ಬಗ್ಗೆ ಹೇಳಬೇಕೆಂದರೆ ಈ ಇಂಜಿನಿಯರಿಂಗ್ ಕಾಲೇಜಿನ ಕಟ್ಟದ ಕೆಲಸ ಮುಗಿದಿದೆಯೆಂದು ಹೇಳುತ್ತಾರೆ. ಕಟ್ಟಡ ಪೂರ್ಣಗೊಂಡು open ಕೂಡ ಆಗಿದೆ. ಆದರೂ ಅದರ ಒಳಗಡೆ ಇರುವ ಗಿಡಗಳನ್ನು ಇದುವರೆಗೂಕೀಳುವುದಕ್ಕೆ ಹೋಗಿಲ್ಲ. ಇದರಿಂದಾಗಿ ಅಲ್ಲಿ ಹಾವುಗಳು ಸೇರಿಕೊಂಡಿರುವುದರಿಂದ ಪ್ರತಿದಿನ ಮಕ್ಕಳು–ವಿದ್ಯಾರ್ಥಿಗಳು ಅಲ್ಲಿ ಓಡಾಡುವುದಕ್ಕೆ ಆಗುತ್ತಿಲ್ಲ. ಮಾನ್ಯ ಸಚಿವರು ದಿನ ಚಿಕ್ಕ ಮಂಗಳೂರಿನಿಂದ ಓಡಾಡುತ್ತಾರೆ. ಅವರು ಬೇಕಾದರೆ ಆ ಕಾಲೇಜಿಗೆ ಭೇಟಿ ಕೊಟ್ಟು ನೋಡಲಿ, ಆ ಇಂಜಿನಿಯರಿಂಗ್ ಕಾಲೇಜಿಗೆ ಬೇಕಾಗಿರುವಂಥ ಮೂಲಭೂತ ಸೌಕರ್ಯಗಳನ್ನು ಇನ್ನೂ ಮಾಡಿಕೊಟ್ಟಿಲ್ಲ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ 615 ಹುದ್ದೆಗಳು ಮಂಜೂರಾತಿಯಾಗಿದ್ದರೂ ಕೂಡ 400 ಹುದ್ದೆಗಳು ಖಾಲಿಯಿದೆ. ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಪ್ರಥಮ ದರ್ಜೆ ಕಾಲೇಜುಗಳಲ್ಲಿ 847 ಹುದ್ದೆಗಳು, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸುಮಾರು 400 ಹುದ್ದೆಗಳು ಖಾಲಿಯಿದೆ. ಇದರ ಜೊತೆಗೆ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿಯೂ ಕೂಡ ಉಪನ್ಯಾಸಕರುಗಳ ಹುದ್ದೆಗಳು ಖಾಲಿಯಿದೆ. ಆದುದರಿಂದ ದಯಮಾಡಿ, ಪ್ರಥಮ ದರ್ಜೆ ಕಾಲೇಜುಗಳಿರಬಹುದು, ಇಂಜಿನಿಯರಿಂಗ್ ಕಾಲೇಜುಗಳಿರಬಹುದು, ಪಾಲಿಟೆಕ್ನಿಕ್ ಕಾಲೇಜುಗಳಿರಬಹುದು, ಇವುಗಳೆಲ್ಲವೂ ಸರ್ಕಾರಿ ಕಾಲೇಜುಗಳಾಗಿರುವುದರಿಂದ ಇವುಗಳಿಗೆ ಬೇಕಾದಂಥ ಮೂಲಭೂತ ಸೌಕರ್ಯಗಳನ್ನು, ಬೇರೆಯಾದವುಗಳೆಲ್ಲವನ್ನೂ ಬದಿಗೊತ್ತಿ, ನೀವು ಬೇಕಾದರೆ ಒಂದು ಹೊತ್ತು ಊಟವನ್ನು ಕೊಡದಿದ್ದರೂ ಪರವಾಗಿಲ್ಲ, ಈ ಕಾಲೇಜುಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಕೋರುತ್ತೇನೆ. ನೀವು ಬೇಕಾದರೆ ಇದರ ಬಗ್ಗೆ ಇನ್ನೂ

ಸವಿವರವಾಗಿ ಚರ್ಚೆ ಮಾಡಬೇಕೆಂದರೆ ಈ ಬಗ್ಗೆ ನಾಳೆ ಮಾನ್ಯ ಮುಖ್ಯಮಂತ್ರಿಗಳು ಇದ್ದಾಗಲೇ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡುವುದು ಸೂಕ್ತವೆನಿಸುತ್ತದೆ. ಏಕೆಂದರೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೂ ಕೂಡ ಸ್ವಲ್ಪ support ಆದಂತಾಗುತ್ತದೆ. ಏಕೆಂದರೆ ಇವತ್ತು ಉನ್ನತ ಶಿಕ್ಷಣಕ್ಕೆ ಕೇವಲ 167 ಕೋಟಿ ರೂ.ಗಳನ್ನು ಕೊಟ್ಟಿರುವುದು ಏನೇನೂ ಸಾಲದು. ಸುಮಾರು 2 ಸಾವಿರ ಹುದ್ದೆಗಳು ಖಾಲಿಯಿದೆ. ಇದರ ಜೊತೆಗೆ ಕೃಷಿ ಸಚಿವರದ್ದೂ ಕೂಡ ಬರುತ್ತದೆ.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆಯಲ್ಲಿ ನೀವು ಇಷ್ಟೆಲ್ಲಾ ಕೇಳಿದರೆ ಹೇಗೆ? ನೀವು ಈಗ ಗಮನ ಸೆಳೆದಿದ್ದೀರಿ. ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡಲಿ, ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ರೇವಣ್ಣನವರ ಕಳಕಳಿಯನ್ನು ಖಂಡಿತಾ ಅರ್ಥ ಮಾಡಿಕೊಳ್ಳುತ್ತೇನೆ. ಇವತ್ತು ಬೆಳಗ್ಗೆ ನೂತನ ರಾಷ್ಟ್ರಪತಿಗಳು ಕೂಡ ಶಿಕ್ಷಣದಿಂದಲೇ ಮಾತ್ರ ಒಳ್ಳೆಯ ಬದಲಾವಣೆ ತರಲು ಸಾಧ್ಯ, ಆಧುನಿಕ ಭಾರತದ ನಿರ್ಮಾಣವಾಗಬೇಕೆಂದರೆ ಶಿಕ್ಷಣದ ಮೂಲವಾಗಬೇಕು ಎಂದಿದ್ದಾರೆ. ಈ ನಿಟ್ಟಿನಲ್ಲಿ ಕೊರತೆ ಇರುವ ಉಪನ್ಯಾಸಕರುಗಳ ಹುದ್ದೆಗಳನ್ನು ತುಂಬತಕ್ಕಂಥದ್ದು ಅನಿವಾರ್ಯವಾಗಿರತಕ್ಕಂಥದ್ದು, ಆ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಒಂದು ಮೀಟಿಂಗ್ ಮಾಡಿ ಚರ್ಚೆಯನ್ನು ನಡೆಸಿ ಅಗತ್ಯವಾಗಿರತಕ್ಕಂಥ ಅನುದಾನವನ್ನು ಬಿಡುಗಡೆ ಮಾಢಬೇಕೆನ್ನುವ ಒತ್ತಡವನ್ನು ಹಾಕುತ್ತೇವೆ. ಇನ್ನು ಮಾನ್ಯ ಸದಸ್ಯರುಗಳು ಹೇಳಿದಂತೆ ಮೂಲಭೂತ ಸೌಕರ್ಯಗಳನ್ನೂ ಕೂಡ ಒದಗಿಸಬೇಕಾಗಿದೆ. ಇದನ್ನು ಮಾಡಲೇಬೇಕಾಗಿದೆ. ಒಂದು ರಸ್ತೆ ನಿರ್ಮಾಣ ಒಂದು ವರ್ಷ ತಡವಾದರೂ ಪರವಾಗಿಲ್ಲ, ಆದರೆ ಕಾಲೇಜು ಕಟ್ಟಡದ ನಿರ್ಮಾಣದ ವಿಚಾರವನ್ನು ತೆಗೆದುಕೊಂಡಾಗ ರಸ್ತೆಗಿಂತ ಹೆಚ್ಚು ಆದ್ಯತೆಯನ್ನು ಮೊದಲು ಕೊಡಬೇಕಾಗುತ್ತದೆ. ಅಂದರೆ ರಸ್ತೆ ಕಾಮಗಾರಿ ಬಿಡಬೇಕಂದಲ್ಲ. ರಸ್ತೆಗಿಂತ ಹೆಚ್ಚು ಆದ್ಯತೆಯನ್ನು ಕಾಲೇಜುಕಟ್ಟಡ ನಿರ್ಮಾಣಕ್ಕೆ ಕೊಡಬೇಕು. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಜೊತೆ ನಾನು ಚರ್ಚೆ ಮಾಡುತ್ತೇನೆ. ಮಾನ್ಯ ಸದಸ್ಯರು ಹೇಳಿರುವ ವಿಚಾರದಲ್ಲಿ ಸ್ಪಂದಿಸತಕ್ಕಂಥ ಕೆಲಸವನ್ನು ನಾನು ಮಾಡುತ್ತೇನೆ.

8. ವಿಷಯ: ರಾಜ್ಯದಲ್ಲಿ ಪಡಿತರ ಆಹಾರ ವಿತರಣೆಯಲ್ಲಿ ಆಗುತ್ತಿರುವ ಅನ್ಯಾಯದ ಬಗ್ಗೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪಡಿತರ ಚೀಟಿಗಳ ವಿತರಣೆಯಲ್ಲಿ ಮತ್ತು ಆಹಾರ ವಿತರಣೆಯಲ್ಲಿ ಆಗುತ್ತಿರುವ ಲೋಪದೋಷಗಳ ಬಗ್ಗೆ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಎನ್. ಜೀವರಾಜ್ (ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಮಾನ್ಯ ಅಧ್ಯಕ್ಷರೆ, ಪಡಿತರ ಆಹಾರ ವಿತರಣೆಯಲ್ಲಿ ಯಾವ ರೀತಿಯಲ್ಲಿ ಅನ್ಯಾಯವಾಗುತ್ತಿದೆ ಎಂದು ವಿವರಿಸದೇ ಇರುವ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ಪ್ರತಿಕ್ರಿಯೆ ನೀಡುವುದು ಕಷ್ಟಸಾಧ್ಯ, ಆದರೂ ಸಮಸ್ಯೆಗಳನ್ನು ಊಹಿಸಿ ಉತ್ತರವನ್ನು ಈ ಕೆಳಗಿನಂತೆ ಒದಗಿಸಲಾಗಿದೆ.

1) ದಿನಾಂಕ 26-3-2006 ರಂದು ಇಲಾಖೆಯು ಖಾಸಗಿ ಸಂಸ್ಥೆಯೊಂದಿಗೆ ಪಡಿತರ ಚೀಟಿಯ ಗಣಕೀರಕರಣದ ಬಗ್ಗೆ ಮಾಡಿಕೊಂಡ ಒಪ್ಪಂದದ ಪರಿಣಾಮ ಆದ ಅವ್ಯವಸ್ಥೆಯನ್ನು ಸರಿಪಡಿಸಲು ಇಲಾಖೆಯು ಸಾಕಷ್ಟು ಪರಿಹಾರ ಕ್ರಮಗಳನ್ನು ಕೈಗೊಂಡಿರುವುದು ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಈಗ ಇಲಾಖೆಯ ಎಲ್ಲಾ ಹಂತದ ಕಛೇರಿಗಳಲ್ಲೂ ಕಂಪ್ಯೂಟರ್ ಗಳನ್ನು ಸ್ಥಾಪಿಸಲಾಗಿದೆ ರಾಜ್ಯದಲ್ಲಿ ನೀಡಲಾದ ಎಲ್ಲಾ ಪಡಿತರ ಚೀಟಿಗಳ ಡಾಟಾಬೇಸ್ ಅನ್ನು ಸಿದ್ಧಪಡಿಸಿ "ಆನ್ ಲೈನ್" ಆಗಿ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಮಾಹಿತಿ ಸಂಸ್ಕರಣೆ ಮತ್ತು ಫಲಾನುಭವಿಗಳ ಬೇಡಿಕೆ ಮೇಲೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುವಂತೆ ಅಗತ್ಯ ಸಾಫ್ಟ್‌ವೇರ್ ಮತ್ತು ಆನ್ ಲೈನ್ ವ್ಯವಸ್ಥೆಗಳನ್ನು ಜಾರಿಗೆ ತರಲಾಗಿದೆ. ಪಡಿತರ ಚೀಟಿ ಸಂಸ್ಕರಣೆಯ ಕಾರ್ಯವನ್ನು ಇಲಾಖೆ ಎಲ್ಲಾ ಸಿಬ್ಬಂದಿ ಮತ್ತು ಅಧಿಕಾರಿಗಳು ಈಗ 'ಆನ್‌ಲೈನ್' ಆಗಿದೆಯೇ ಮಾಡುತ್ತಿದ್ದಾರೆ.

2) ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು ಈವರೆಗೆ ಸುಮಾರು 33.6 ಲಕ್ಷ ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಿ ರದ್ದುಪಡಿಸಲಾಗಿರುತ್ತದೆ. ಪ್ರಕ್ರಿಯೆ ಮುಂದುವರೆದಿರುತ್ತದೆ.

3) 'ಆನ್‌ಲೈನ್' ಆಗಿ ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸುವ ವ್ಯವಸ್ಥೆ ಮತ್ತು ಈ ರೀತಿ ಸಲ್ಲಿಸಲ್ಪಟ್ಟ ಅರ್ಜಿಗಳ ಪರಿಷ್ಕರಣೆ ಜಾರಿಯಲಿದ್ದು, ಈವರೆಗೆ ಸುಮಾರು

32 ಲಕ್ಷ ಅರ್ಜಿಗಳು ಸ್ವೀಕರಿಸಲ್ಪಟ್ಟಿದ್ದು, ಅವುಗಳ ಪೈಕಿ ಸುಮಾರು 15 ಲಕ್ಷ ಅರ್ಜಿಗಳ ಬಗ್ಗೆ ಪರಿಶೀಲನೆ ಹಾಗೂ ನಿರ್ಣಯವಾಗಿರುತ್ತದೆ.

ಈ ವರೆಗೆ ಸುಮಾರು 10.49 ಲಕ್ಷ ಅರ್ಜಿಗಳು ಅನುಮೋದಿಸಲ್ಪಟ್ಟಿದ್ದರೆ, ಸುಮಾರು 4.76 ಲಕ್ಷ ಅರ್ಜಿಗಳು ತಿರಸ್ಕೃತವಾಗಿವೆ. ಅನುಮೋದಿಸಲ್ಪಟ್ಟ ಅರ್ಜಿದಾರರ ಪೈಕಿ ಈವರೆಗೆ ಕೇವಲ ಸುಮಾರು 1.49 ಲಕ್ಷ ಅರ್ಜಿದಾರರು ತಮ್ಮ ಕುಟುಂಬದ ಪೋಟೋ ಮತ್ತು ಬಯೋ ಮೆಟ್ರಿಕ್ ನೀಡಿರುತ್ತಾರೆ. ಅವರ ಪೈಕಿ ಸುಮಾರು 68,000 ಪಡಿತರ ಚೀಟಿಗಳು ನೀಡಲ್ಪಟ್ಟಿರುತ್ತವೆ ಮತ್ತು 31,500 ಪಡಿತರ ಚೀಟಿಗಳು ನೀಡಲು ಸಿದ್ಧವಾಗಿರುತ್ತವೆ ಒಟ್ಟಿನಲ್ಲಿ ಪ್ರಕ್ರಿಯೆ ಬಹಳ ತ್ವರಿತಗತಿಯಲಿದ್ದು, ಅರ್ಜಿದಾರರು ಪೋಟೋ ಮತ್ತು ಬೆರಳಚ್ಚು ಬಯೋಮೆಟ್ರಿಕ್ ನೀಡಲು ಬಹಳ ತಡ ಮಾಡುತ್ತಿರುವುದರಿಂದ ಪಡಿತರ ಚೀಟಿ ಮುದ್ರಿಸುವ ಹಂತದಲ್ಲಿ ಪ್ರಗತಿ ಕಾಣಬರುವುದಿಲ್ಲ.

4) ಈ ಹಿಂದೆ, 2009ನೇ ಸಾಲಿನ ಪ್ರಾರಂಭದಲ್ಲಿ ಖಾಸಗಿ ಸಂಸ್ಥೆಯು ಸುಮಾರು 29 ಲಕ್ಷ ತಾತ್ಕಾಲಿಕ ಪಡಿತರ ಚೀಟಿಗಳನ್ನು ನೀಡಿದ್ದು, ಅವುಗಳ ಬದಲಿಗೆ ಖಾಯಂ ಪಡಿತರ ಚೀಟಿ ನೀಡುವ ಪ್ರಕ್ರಿಯೆ ಕೂಡ ಜಾರಿಯಲ್ಲಿರುತ್ತದೆ. ತಮ್ಮ ಕುಟುಂಬದ ಸದಸ್ಯರ ಪೋಟೋ ಮತ್ತು ಬಯೋ ಮೆಟ್ರಿಕ್ ಗಳನ್ನು ಕಂಪ್ಯೂಟರ್ ವ್ಯವಸ್ಥೆಯಲ್ಲಿ ದಾಖಲಿಸಲು ಅಂತಹ ಫಲಾನುಭವಿಗಳಿಗೆ ಪ್ರಕಟಣೆ ಮೂಲಕ ತಿಳಿಸಲಾಗಿರುತದೆ. ತಾತ್ಕಾಲಿಕ BPl ಪಡಿತರ ಚೀಟಿ ನೀಡಿದ ಸಂದರ್ಭದಲ್ಲಿ ಫಲಾನುಭವಿಗಳ ಕುಟುಂಬದ ವಾರ್ಷಿಕ ಆದಾಯವನ್ನು ಗಣನೆಗೆ ತೆಗೆದುಕೊಳ್ಳದೇ ತಾತ್ಕಾಲಿಕ ಪಡಿತರ ಚೀಟಿಗಳನ್ನು ನೀಡಿದ್ದರ ಪರಿಣಾಮ ಸುಮಾರು 15 ಲಕ್ಷಕ್ಕೂ ಮೀರಿ ಅನರ್ಹ ತಾತ್ಕಾಲಿಕ ಪಡಿತರ ಚೀಟಿಗಳು ಅಸ್ಥಿತ್ವಕ್ಕೆ ಬಂದಿರುತ್ತವೆ. ಅವುಗಳನ್ನು ಮಧ್ಯಮ ಮತ್ತು ಶ್ರೀಮಂತ ವರ್ಗದವರು ಹೊಂದಿರುತ್ತಾರೆ. ನಿಜವಾಗಿ ಪಡಿತರ ಚೀಟಿಗೆ ಅರ್ಹತೆ ಹೊಂದಿರುವ ಬಡ ಕುಟುಂಬಗಳು ವಂಚಿತರಾಗಿರುತ್ತಾರೆ. ಆದ ಕಾರಣ, ತಾತ್ಕಾಲಿಕ ಪಡಿತರ ಚೀಟಿ ಹೊಂದಿದವರು ಈಗ ಪೋಟೋ ಮತ್ತು ಬಯೋ ಮೆಟ್ರಿಕ್‌ನೊಂದಿಗೆ ಆದಾಯ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕೆಂದು ಸೂಚಿಸಲಾಗಿರುತ್ತದೆ. ಆದಾಯ ಪ್ರಮಾಣ ಪತ್ರವನ್ನು ಪಡೆಯುವಲ್ಲಿ ನೆಮ್ಮದಿ ಕೇಂದ್ರಗಳಲ್ಲಿ ಕಷ್ಟದ ಪರಿಸ್ಥಿತಿ ಉದ್ಭವಾಗಿರುತ್ತದೆ ಎನ್ನುವ ಸಂದರ್ಭದಲ್ಲಿ ಅಂತಹ ಪಡಿತರ ಚೀಟಿದಾರರಿಗೆ ಸಾಕಷ್ಟು ಸಮಯಾವಕಾಶ ನೀಡಲಾಗುತ್ತಿದೆ.

ಆಹಾರ ಧಾನ್ಯಗಳ ವಿತರಣೆಗೆ ನಿಗದಿಪಡಿಸಿದ ಪ್ರಮಾಣದ ಬಗ್ಗೆ:

ಪ್ರತಿ BPL ಕಾರ್ಡುದಾರರ ಕುಟುಂಬಕ್ಕೆ 35 ಕಿಲೋ ಆಹಾರಧಾನ್ಯ ನೀಡಬೇಕೆಂಬುದು ಕೇಂದ್ರ ಸರ್ಕಾರದ ನೀತಿಯಾಗಿರುತ್ತದೆ. ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯದಲ್ಲಿ 31.29 ಲಕ್ಷ BPL ಕುಟುಂಬಗಳಿವೆ ಎಂದು ಲೆಕ್ಕ ಹಾಕಿರುತ್ತದೆ ಮತ್ತು ಆ ಪ್ರಕಾರ ಪ್ರತಿ ಕುಟುಂಬಕ್ಕೆ 35 ಕಿಲೋ ಆಹಾರ ಧಾನ್ಯದಂತೆ ಪ್ರತಿ ತಿಂಗಳು ಸುಮಾರು 1,13,608 ಟನ್ ಅಕ್ಕಿ ಮತ್ತು 26,499 ಟನ್ ಗೋಧಿಯನ್ನು ಬಿಡುಗಡೆ ಮಾಡುತ್ತಿದೆ. ಆದರೆ ರಾಜ್ಯದಲ್ಲಿ BPL ಪಡಿತರ ಚೀಟಿಗಳ ಸಂಖ್ಯೆ ಮಿತಿಮೀರಿ ಬೆಳೆದಾಗ, ದಿನಾಂಕ 07-10-2006 ರಂದು ನಡೆದ ಸಚಿವ ಸಂಪುಟ ಸಭೆಯಲಿ, ಯುನಿಟ್ ಪದ್ಧತಿಯನ್ನು ಅಳವಡಿಸುವ ಬಗ್ಗೆ ನಿರ್ಣಯವಾಗಿ, ಕುಟುಂಬದ ಪ್ರತಿ ಸದಸ್ಯರಿಗೆ 4 ಕೆ.ಜಿ. ಅಕ್ಕಿ ಮತ್ತು 1 ಕೆ.ಜಿ. ಗೋಧಿಯನ್ನು ಒಂದು ಕಾರ್ಡಿಗೆ 25 ಕೆ.ಜಿ. ಆಹಾರ ಧಾನ್ಯ ಮೀರದಂತೆ ಆಹಾರಧಾನ್ಯಗಳನ್ನು 2006ರ ಡಿಸೆಂಬರ್ ನಿಂದ ನೀಡಲು ನಿರ್ಣಯ ತೆಗೆದುಕೊಳ್ಳಲಾಯಿತು. ಸದರಿ ಸಂಪುಟ ಸಭೆಯ ನಿರ್ಣಯದಂತೆ ದಿನಾಂಕ 11-1-2007 ರಂದು ಸಂಖ್ಯೆ: ಅನಾಸ 244 ಡಿಆರ್‌ಎ 2006 (ಭಾಗ-1)ರಲ್ಲಿ ಸರ್ಕಾರದ ಆದೇಶವನ್ನು ಹೊರಡಿಸಲಾಯಿತು. ಆ ನಂತರ ರಾಜ್ಯದಲ್ಲಿ ಯೂನಿಟ್ ಪದ್ಧತಿಯನ್ನು ಪಾಲಿಸಲಾಗುತ್ತಿದೆ. ಈ ವಿಷಯವನ್ನು ಕೇಂದ್ರ ಸರ್ಕಾರ ಮತ್ತು ಸರ್ವೋಚ್ಚ ನ್ಯಾಯಾಲಯಗಳ ಗಮನಕ್ಕೆ ತರಲಾಗಿದೆ ಹಾಗೂ BPL ಆಹಾರಧಾನ್ಯದ ನೀಡಿಕೆಯಲ್ಲಿ ವ್ಯತ್ಯಾಸವಿರುವ ಪ್ರಮಾಣದ ಆಹಾರಧಾನ್ಯವನ್ನು ನೀಡುವಂತೆ ಕೇಂದ್ರ ಸರ್ಕಾರವನ್ನು ವಿನಂತಿಸಲಾಗಿದೆ. ಕೇಂದ್ರ ಸರ್ಕಾರವು APL ಕಾರ್ಡುದಾರರಿಗೆ ನೀಡಿದ ಹೆಚ್ಚಿನ ದರದ ಆಹಾರಧಾನ್ಯಗಳನ್ನು ಪ್ರಸ್ತುತ ರಾಜ್ಯ ಸರ್ಕಾರವು ಹೆಚ್ಚುವರಿ BPL ಕಾರ್ಡುದಾರರಿಗೆ BPL ದರದಲ್ಲಿ ನೀಡುತ್ತಿದ್ದು, ಪ್ರತಿ ತಿಂಗಳು ಸುಮಾರು 70 ಕೋಟಿ ಖರ್ಚು ಮಾಡುತ್ತಿದೆ.

ಶ್ರೀ ಡಿ. ಎನ್. ಜೀವರಾಜ್ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಕ್ಲಾರಿಫಿಕೇಷನ್ ಏನಾದರೂ ಇದ್ದರೆ ಕೇಳಬಹುದು.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೂ ಈ ಬಗ್ಗೆ ಸವಿವರವಾಗಿ ಚರ್ಚೆ ಮಾಡಲು ಸ್ವಲ್ಪ ಹೆಚ್ಚು ಕಾಲಾವಕಾಶವನ್ನು ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು: ಹೆಚ್ಚಿಗೆ ಹೇಳುವುದಿದ್ದರೆ ನೀವು ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಹೇಳಬಹುದು. ಈಗ ಕೇವಲ ಗಮನ ಸೆಳೆಯುವ ಸೂಚನೆಗೆ ಸೀಮಿತವಾಗಿ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಬೇಡಿಕೆಗಳ ಮೇಲೆ ಚರ್ಚೆ ಮಾಡಲು ನನಗೆ ಅವಕಾಶವನ್ನು ತಾವು ಕೊಡುತ್ತೇನೆಂದು ಹೇಳಿದರೆ ಆಗಲೇ ಇದರ ಬಗ್ಗೆ ಸವಿವರವಾಗಿ ಹೇಳುತ್ತೇನೆ.

ಅಧ್ಯಕ್ಷರು: ಅವಕಾಶ ಕೊಡುತ್ತೇನೆ.

ಶ್ರೀ ಡಿ. ಎನ್. ಜೀವರಾಜ್ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಒಂದು ಹೇಳಿಕೆಯನ್ನು ಸದನದಲ್ಲಿ ಹೇಳಿಬಿಡಲೆ?

ಅಧ್ಯಕ್ಷರು: ಬೇಡಿಕೆಗಳ ಮೇಲೆ ಚರ್ಚೆಯಾದ ಮೇಲೆ ಮಾಡಿ

ಶ್ರೀ ಡಿ. ಎನ್. ಜೀವರಾಜ್: ಬೇಡಿಕೆಗಳ ಮೇಲೆ ಆಮೇಲೆ ಉತ್ತರವನ್ನು ಕೊಡುತ್ತೇನೆ. ಆದರೆ ನಿನ್ನೆ ಟಿ.ವಿ. 9 ನಲ್ಲಿ ತೂಕ ಮತ್ತು ಅಳತೆಯಲ್ಲಿ ವ್ಯತ್ಯಸವಿದೆಯೆಂದು ಹೇಳಿ ಪ್ರಸಾರ ಮಾಡಿದ್ದಾರೆ. ಅದಕ್ಕಾಗಿ ಈ ಬಗ್ಗೆ ತನಿಖೆ ಮಾಡಬೇಕು, ಒಂದು ವೇಳೆ ತಪ್ಪಿತಸ್ಥರು ಇದರಲ್ಲಿ ಇದ್ದರೆ ಅವರ ಮೇಲೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಒಂದು ಆದೇಶವನ್ನು ಈಗ ಮಾಡಿದ್ದೇವೆ.

ಅಧ್ಯಕ್ಷರು: ಸರಿ. ಡಿಮ್ಯಾಂಡ್ ಮೇಲೆ ಈ ಬಗ್ಗೆ detail ಆಗಿ ಮಾತನಾಡಿ

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಡಿಮ್ಯಾಂಡ್ ಮೇಲೆ ಮಾತನಾಡಲು ನಿಮಗೆ ಅವಕಾಶವನ್ನು ಕೊಡುತ್ತೇನೆ. ಆಗ ನೀವು ಮಾತನಾಡಿ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಈಗ ಮಾನ್ಯ ಸಚಿವರು ಉತ್ತರ ಕೊಟ್ಟಿರುವುದಕ್ಕೆ ಸೀಮಿತವಾಗಿ ಎರಡು ಮಾತುಗಳನ್ನು ಹೇಳುತ್ತೇನೆ. ಈ ಪಡಿತರ ಚೀಟಿ ವಿತರಣೆಯಲ್ಲಿ ಆಗಿರುವ ಅನ್ಯಾಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾದಂಥ ಪರಿಸ್ಥಿತಿಯಿದೆ. ಪ್ರತಿಯೊಬ್ಬ ಶಾಸಕರ ಮನೆ ಮುಂದೆ ಬೆಳಿಗ್ಗೆ ಎದ್ದ ತಕ್ಷಣ first round circle ವಿಚಾರ ಇದೇ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆ ರೀತಿ ಯಾವ ಸಮಸ್ಯೆಯೂ ಈ

ವಿಚಾರದಲ್ಲಿ ಇಲ್ಲವೆಂದರೆ ನನ್ನದೇನೂ ಅಭ್ಯಂತರವಿಲ್ಲ. 2006ರಲ್ಲಿ ಕೊಮ್ಯಾಟ್ ಖಾಸಗಿ ಸಂಸ್ಥೆಗೆ ಪಡಿತರ ಚೀಟಿ ಕೊಡುವುದಕ್ಕೆ ವಹಿಸಿಕೊಟ್ಟರು. ಪಡಿತರ ಚೀಟಿಗಳನ್ನು ವಿತರಣೆ ಮಾಡುವುದಕ್ಕಾಗಿ 50 ರೂ.ಗಳ ಹಣವನ್ನು ತೆಗೆದುಕೊಂಡು ಪ್ಲಾಸ್ಟಿಕ್ ಕಾರ್ಡ್‌ಗಳನ್ನು ವಿತರಣೆ ಮಾಡುವ ಕೆಲಸವನ್ನು ಸರ್ಕಾರದವರು ಕೊಟ್ಟರು. ಈ ರೀತಿ ಕೆಲಸವನ್ನು ಕೊಟ್ಟಾಗ ಅದರಂತೆ ಆ ಸಂಸ್ಥೆ ಕೆಲಸವನ್ನು ಮಾಡಿತು. ನಮ್ಮ ಕ್ಷೇತ್ರದಲ್ಲಿ ಶೇಕಡ 80 ಭಾಗದಷ್ಟು ಫಲಾನುಭವಿಗಳಿಗೆ ಕಾರ್ಡ್‌ಗಳನ್ನು ಕೊಟ್ಟಿದ್ದಾರೆ. ಆಗ ಏನಾಯಿತೆಂದರೆ ಆ ಸಂದರ್ಭದಲ್ಲಿ ನಗರಗಳಿಗೆ ಕೂಲಿಗೋಸ್ಕರ ಬಂದಿದ್ದಂಥ ಬಡಜನರು ಅಲ್ಲಿ ಇರಲಿಲ್ಲ. ಇಂಥ ಸುಮಾರು 2300 ಕಾರ್ಡ್‌ದಾರರು ನನ್ನ ಕ್ಷೇತ್ರದಲ್ಲಿ ಪಡಿತರ ಚೀಟಿಯನ್ನು ಪಡೆದುಕೊಳ್ಳಲು ಆಗದೇ ಹಾಗೆಯೇ ಉಳಿದುಕೊಂಡಿರುತ್ತಾರೆ. ಆಗ ನಾವು ಇವರಿಗೆ ಪಡಿತರ ಚೀಟಿ ಕೊಡಬೇಕೆಂದು ಡಿಮ್ಯಾಂಡ್ ಮಾಡಿದಾಗ ಕೊಮ್ಯಾಟ್ ಸಂಸ್ಥೆಯವರು ಎರಡನೆಯ ಹಂತದಲ್ಲಿ ಕಾರ್ಡ್‌ಗಳನ್ನು ಅವರಿಗೆ ಕೊಡುತ್ತೇವೆ ಮತ್ತು ಅಕ್ಕಿಯನ್ನೂ ಕೂಡ ಕೊಡುತ್ತೇವೆಂದು ಹೇಳಿದರು. ಆದರೆ ಆ ಸಂದರ್ಭದಲ್ಲಿ ಏನಾಯಿತೆಂದರೆ, ಅವರುಗಳಿಗೆ ಕಾರ್ಡ್‌ಗಳನ್ನು ಕೊಡುತ್ತೇವೆಂದು ಹೇಳಿ ಇವತ್ತಿನವರೆಗೂ ಕಾರ್ಡ್‌ಗಳನ್ನು ಕೊಡಲಿಲ್ಲ. ಇವತ್ತಿನವರಿಗೂ ಆ 2300 ಜನರು ಕಾರ್ಡ್‌ಗಳನ್ನು ಪಡೆಯುವುದಕ್ಕಾಗದೇ ಹಾಗೆಯೇ ಉಳಿದಿದ್ದಾರೆ. ಅವರು ನಿಜವಾದ ಫಲಾನುಭವಿಗಳಾಗಿದ್ದಾರೆ. ಅವರು ನಿಜವಾದ ಫಲಾನುಭವಿಗಳು. ಶ್ರೀಮಂತರೆಲ್ಲ ತೆಗೆದುಕೊಂಡು ತಿನ್ನುತ್ತಿದ್ದಾರೆ. ಆದರೆ ನಿಜವಾಗಿ ಹಬ್ಬದಲ್ಲಿ ಮಾತ್ರ ಅನ್ನ ಊಟ ಮಾಡುವಂತಹ ಜನ ಏನಿದ್ದಾರೆ, ಅವರಿಗೆ ಸಿಗಬೇಕು. ಇಂತಹವರೂ ಎಲ್ಲಾ ಕ್ಷೇತ್ರದಲ್ಲಿ ಇದ್ದಾರೆಂದು ತಿಳಿದುಕೊಂಡಿದ್ದೇನೆ, ಅದು ನನಗೆ ಗೊತ್ತಿಲ್ಲ. ಆದರೆ ಪುನಃ 29 ಲಕ್ಷ ಕಾರ್ಡ್‌ನ್ನು ನೆಮ್ಮದಿ ಕೇಂದ್ರಗಳ ಮೂಲಕ ಬಂದವರಿಗೆ ಕೊಟ್ಟರು. ಅವರು ನೆಮ್ಮದಿ ಕೇಂದ್ರದ ಮುಂದೆ ಹೋಗಲಿಲ್ಲ. ಅವರು ಏಕೆ ಹೋಗಲಿಲ್ಲವೆಂದರೆ ಆಗ ತಾನೇ COMAT ನಲ್ಲಿ ಎರಡನೇ ಹಂತದಲ್ಲಿ ಒಂದು ತಿಂಗಳುಗಳ ಕಾಲ ತಾಲ್ಲೂಕು ಕಛೇರಿಯಲ್ಲಿ ಕ್ಯಾಮರಾ ಇಟ್ಟು ಅವರ ಭಾವಚಿತ್ರಗಳನ್ನು ಹಿಡಿದರು. ಅವರಿಗೆ ನಾವು original card ಕೊಡುತ್ತೇವೆಂದು 50,000 ರೂಪಾಯಿಗಳನ್ನು ಕಸಿದುಕೊಂಡರು. ಆದರೆ ಇವತ್ತಿನವರೆಗೂ ಅವರು ನೆಮ್ಮದಿ ಕೇಂದ್ರದ ಮುಂದೆ ಹೋಗಲಿಲ್ಲ. ಈ ಕಡೆ COMAT ನಲ್ಲಿ ಹೋಗಲಿಲ್ಲ.

ಅಧ್ಯಕ್ಷರು: ಸಚಿವರು ಸಂಕ್ಷಿಪ್ತವಾಗಿ ಉತ್ತರ ಹೇಳಿ, ನೀವು ಡಿಮ್ಯಾಂಡ್ ಬಗ್ಗೆ ಮಾತನಾಡುವಾಗ ಮಾತನಾಡಿ. ನೀವು ಡಿಟೈಲ್‌ಗೆ ಹೋದರೆ ಆಗುವುದಿಲ್ಲ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಇದು ಸಮಸ್ಯೆ ಬಗೆಹರಿಯುವುದಿಲ್ಲ.

ಅಧ್ಯಕ್ಷರು: ಸಮಸ್ಯೆ ದೊಡ್ಡದಾಗಿದೆ, ಗೊತ್ತಿದೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಉತ್ತರ ದೊಡ್ಡದಾಗಿದೆ. ಒಬ್ಬರ ಅನ್ನ ಕಿತ್ತುಕೊಂಡು ತಿನ್ನುವುದಿದೆಯಲ್ಲ, ಅದರಂತಹ ಪಾಪದ ಕೆಲಸ ಮತ್ತೊಂದಿಲ್ಲ. 2,300 ಬೀದಿಯಲ್ಲಿ ಭಿಕ್ಷೆ ಎತ್ತುವಂತಹ ಜನರ ವಿಚಾರದಲ್ಲಿ ನಾವು ಮೂರು ವರ್ಷದಿಂದ ಹೋರಾಟ ಮಾಡುತ್ತಿದ್ದೇವೆ, ಇದರ ಬಗ್ಗೆ ಗಮನ ಹರಿಸುವವರು ಯಾರೂ ಇಲ್ಲ. ನೀವು ಸುಮ್ಮನೆ ಹಾರಿಕೆಯ ಉತ್ತರ ಕೊಟ್ಟುಕೊಂಡು ಹೋಗುತ್ತೀರಿ. ನೀವು ನಿಜವಾದ ಫಲಾನುಭವಿಗೆ ಕೊಟ್ಟಿಲ್ಲ. ಯಾರ್‍ಯಾರೋ ಅಕ್ಕಿಯನ್ನು ತೆಗೆದುಕೊಂಡು ಬೀದಿಯಲ್ಲಿ ಮಾರಿಕೊಂಡು ತಿನ್ನುತ್ತಾರೆ. ಅಂಗಡಿಯಲ್ಲಿ ಕದ್ದು ಮಾರುತ್ತಾರೆ. ಅವರಿಗೆಲ್ಲ ಬೇಕಾದಷ್ಟು ಕೊಡುತ್ತಿದ್ದೀರಿ. 2,300 ಜನರಿಗೆ ಅಕ್ಕಿ ವಿತರಣೆ ಮಾಡಿ ಎಂದು ಇಲಾಖೆಯ ಕಾರ್ಯದರ್ಶಿಗಳಾದ ಹರೀಶಗೌಡರಿಗೆ ಹೋಗಿ ಕೇಳಿದ್ದೇನೆ. ಅದರ ಬಗ್ಗೆ ಒಂದು ಸ್ವಲ್ಪ ಕೂಡ ಗಮನ ಹರಿಸುವುದಿಲ್ಲ. ದಿನಾ ಬೆಳಿಗ್ಗೆ ಎದ್ದರೆ ಜನರು ಬಂದು ನಿಂತುಕೊಳ್ಳುತ್ತಾರೆ.

ಅಧ್ಯಕ್ಷರು: ಸಚಿವರು ಉತ್ತರ ಕೊಡಲಿ.

ಶ್ರೀ ಡಿ. ಎನ್. ಜೀವರಾಜ್: ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರಾದ ಮಾನ್ಯ ಶಿವಲಿಂಗೇಗೌಡರು ಹೇಳಿರುವಂತಹ ಕಾರ್ಡು ವಿಚಾರದಲ್ಲಿ ನಾನು ಉತ್ತರ ಕೊಡುತ್ತೇನೆ. ಆಮೇಲೆ ಅವರು ಮಾತನಾಡಲಿ. ರೇಷನ್ ಕಾರ್ಡಿನ ಸಮಸ್ಯೆ ಒಟ್ಟಾರೆಯಾಗಿ ಸದನದಲ್ಲಿ ದಿನೇ ದಿನೇ ಚರ್ಚೆಯಾಗುತ್ತಿದೆ. ಈ ಚರ್ಚೆ ಗೊಂದಲದ ವಾತಾವರಣವನ್ನು ಸನ್ನಿವೇಶವನ್ನು ನಿರ್ಮಾಣ ಮಾಡುತ್ತಿದೆ. ಈ ರಾಜ್ಯದಲ್ಲಿ ಈಗಾಗಲೇ ಒಟ್ಟು 1,71,29,604 ಕಾರ್ಡುಗಳು ಇತ್ತು. ಮಾಹಿತಿ ಇಲ್ಲದೇ ಇರುವ ಕಾರ್ಡು ಎನ್ನುವ ಕಾರಣಕ್ಕಾಗಿ 33,58,104 ಕಾರ್ಡುಗಳನ್ನು ತಿರಸ್ಕಾರ ಮಾಡಿದೆ. ಆ ತಿರಸ್ಕಾರ ಮಾಡಿರುವುದರ ಕಾರ್ಡುದಾರರು ಈಗಲೂ ಬಂದು ಹೆಬ್ಬೆಟ್ಟು ಗುರುತನ್ನು ಹಾಗೂ ಫೋಟೋ ಕೊಟ್ಟು ನಾನು ಇಂತಹವನು ನನ್ನ ಕಾರ್ಡು ತಪ್ಪಿಹೋಗಿದೆ ಎಂದು ಹೇಳಿದರೆ ಅವರಿಗೆ ನಾವು ಮತ್ತೇ ಕಾರ್ಡು ಕೊಡುವುದಕ್ಕೆ ತಯಾರಿದ್ದೇವೆ. ಆದರೆ ಅವರ್‍ಯಾರು ಬರುತ್ತಿಲ್ಲ ಡಬಲ್ ಕಾರ್ಡು ಇರುವವರು bio-metric ಕೊಡುವುದಕ್ಕೆ ಹೆದರುತ್ತಿದ್ದಾರೆ, ಅದಕ್ಕೆ ಬರುತ್ತಿಲ್ಲ. ಕಾರ್ಡು ಬೇಕು ಎಂದು ಬಂದರೆ ಕೊಡುತ್ತೇವೆ. ನಮ್ಮ ಹತ್ತಿರ ಈಗಿರುವ ಅಂಕಿ ಅಂಶದ ಪ್ರಕಾರ ಒಟ್ಟು ಈ ರಾಜ್ಯದ ಕುಟುಂಬದ ಸಂಖ್ಯೆ 1,32,00,000. ನಾನು ಹೇಳಿಬಿಡುತ್ತೇನೆ. ಅಮೇಲೆ ತಾವು ಹೇಳಿ.

ಶ್ರೀ ಸಿದ್ದರಾಮಯ್ಯ: ನಾನು ಮತ್ತೆ ಹೇಳುತ್ತೇನೆ, ನೀವು ಕರಕ್ಟ್ ಮಾಡಿಕೊಳ್ಳಿ, 1,38,00,000 ಕುಟುಂಬಗಳು ಇವೆ ಎಂದು ಹೇಳುತ್ತೀರಿ. ಅದರೆ ಕರ್ನಾಟಕದ ಜನಸಂಖ್ಯೆ 6,13,00,000 ಇದ್ದಾರೆ. ಒಂದು ಕುಟುಂಬ ಎಂದರೆ average ಮೂರು ಜನ ಇರುತ್ತಾರೆ ಎಂದು ತೆಗೆದುಕೊಳ್ಳಿ. ಒಂದು ಕುಟುಂಬ ಎಂದರೆ ಐದು ಜನ ಇರಬೇಕು ಎಂದು ಹೇಳುತ್ತಾರೆ. ಒಂದು ಕುಟುಂಬ ಎಂದರೆ ಒಬ್ಬರು ಆಗಬಹುದು, ಇಬ್ಬರೂ ಆಗಬಹುದು, ಮೂರು ಜನ ಕೂಡ ಆಗಬಹುದು. Average cannot be more than three, as I understood. ನಾನು ಯೋಜನಾ ಮಂತ್ರಿಯಾಗಿದ್ದವನು. 1,38,00,000 ಎನ್ನುವುದು it is not correct ಇದನ್ನು ಇಲಾಖೆಗೆ ಯಾರು ಲೆಕ್ಕ ಹಾಕಿ ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ. ಅದನ್ನು ಇಟ್ಟುಕೊಂಡು ನೀವು ಅಳತೆ ಮಾಡುತ್ತಾ ಕುಳಿತುಕೊಳ್ಳಬೇಡಿ.

ಶ್ರೀ ಡಿ. ಎನ್. ಜೀವರಾಜ್: ಇಲ್ಲ ನಾನು ಅದನ್ನು ಹೇಳುವುದಕ್ಕೆ ಹೊರಟಿಲ್ಲ

ಶ್ರೀ ಸಿದ್ದರಾಮಯ್ಯ: ಒಂದು ಕೋಟಿ 38 ಲಕ್ಷ ಕುಟುಂಬಗಳು ಇವೆ, ಒಂದು ಕೋಟಿ 60 ಲಕ್ಷ ಕುಟುಂಬಗಳು ಇವೆ ಎಂದು ಆ ರೀತಿ ಲೆಕ್ಕ ಹಾಕುವುದಕ್ಕೆ ಹೋಗಬೇಡಿ. ಯಾರು ಮನೆ ಮನೆಗೆ ಹೋಗಿ ಲೆಕ್ಕ ಹಾಕಿರುವುದು? ಗೊತ್ತಿಲ್ಲ, ಏನೂ ಇಲ್ಲ ಸುಮ್ಮನೆ ಹೇಳುತ್ತಿರುವುದು. ಒಂದು ಕೋಟಿ 38 ಲಕ್ಷ ಕುಟುಂಬಳು ಇರುವುದಕ್ಕೆ ಸಾಧ್ಯವಿಲ್ಲ, ಕನಿಷ್ಠ ನನ್ನ ಪ್ರಕಾರ ಎರಡು ಕೋಟಿ ಕುಟುಂಬಗಳು ಇರಲೇಬೇಕು. ಎರಡು ಕೋಟಿ ಕುಟುಂಬಗಳಿಗಿಂತ ಕಡಿಮೆ ಇರುವುದಕ್ಕೆ ಸಾಧ್ಯವೇ ಇಲ್ಲ. ನೀವು ಮಕ್ಕಿಕಾಮಕ್ಕಿ ಈ ರೀತಿ ಪಾಠ ಹೇಳುವುದಕ್ಕೆ ಹೋಗಬಾರದು. Minimum common sense ಇದು, ಒಟ್ಟು ರಾಜ್ಯದಲ್ಲಿ ಜನಸಂಖ್ಯೆ ಆರು ಕೋಟಿ 15 ಲಕ್ಷ ಜನಸಂಖ್ಯೆ ಇದೆ ಅಥವಾ ಈಗ 6.50 ಕೋಟಿ ಇರಬಹುದು. ಒಂದು ಕುಟುಂಬದಲ್ಲಿ ಮೂರು ಜನ ಎಂದು ತೆಗೆದುಕೊಂಡರೆ more than 2 crores ಆಯಿತು. ಇವರು ಯಾವುದೋ ಓಬೀರಾಯನ ಕಾಲದ ಲೆಕ್ಕ ಇಟ್ಟುಕೊಂಡು ಕುಳಿತುಕೊಳ್ಳುತ್ತಾರೆ. ಇದು ಯಾವುದೂ ಕರೆಕ್ಟ್ ಲೆಕ್ಕ ಅಲ್ಲ. I am telling you, Department ನವರು ಹೇಳಿದರು ಎಂದು don't go by that.

ಶ್ರೀ ಡಿ.ಎನ್. ಜೀವರಾಜ್: ಇದು ಕೇಂದ್ರ ಸರ್ಕಾರದ 2011ರ ಸೆನ್ಸಸ್ ಮಾಡಿರುವ ಪ್ರಕಾರ ಹೇಳುತ್ತಿರುವುದು.

ಶ್ರೀ ಸಿದ್ದರಾಮಯ್ಯ:- ನಿಮ್ಮ ಇಲಾಖೆಯವರಿಗೆ ಗೊತ್ತಿಲ್ಲ. Central Statistical organization ಎಂದು ಒಂದು organization ಇದೆ. ಅವರು ಬಡವರ ಸಂಖ್ಯೆ ಎಷ್ಟಿದೆ

ಎಂದು ಲೆಕ್ಕ ಮಾಡಿ ಹೇಳಿದ್ದಾರೆ. ಅದು door to door survey ಮಾಡಿರುವುದಿಲ್ಲ. 36% ಬಡವರಿದ್ದಾರೆಂದು ಅಷ್ಟಕ್ಕೆ ನಿಮಗೆ ಮೂರು ರೂಪಾಯಿ ದರದಲ್ಲಿ ಅಕ್ಕಿ ಕೊಡುತ್ತಿರುವುದು. ಇನ್ನು ಉಳಿದ Extra ಜನರಿಗೆ ಕೊಡಬೇಕೆಂದರೆ ನೀವು ಕೊಡಬೇಕು, ಗೊತ್ತಾಯಿತಲ್ಲ. ನಮ್ಮ ದೇಶದಲ್ಲಿ ಬಡವರ ಸಂಖ್ಯೆ ಅಷ್ಟೇ ಇರುವುದಾ? ಅದು wrong figure. ಅವರು ಮಾಡಿದರು ಎಂದು ನೀವು ಅದನ್ನೇ ಇಟ್ಟುಕೊಂಡು ಕುಳಿತುಕೊಳ್ಳುತ್ತೀರಿ. ಇಲ್ಲಿ ನೀವು ಸರ್ವೆ ಮಾಡಿಸುವುದಿಲ್ಲ. ಮನೆಮನೆಗೆ ಹೋಗಿ ಜಾತಿ ಸರ್ವೆ ಮತ್ತು ಕುಟುಂಬದ ಸರ್ವೆ ಮಾಡಿ ಎಂದು ದುಡ್ಡು ಕೊಟ್ಟಾಯಿತು, ಏನೂ ಮಾಡಲಿಲ್ಲ. ಆ ಅಧಿಕಾರಿಗಳು ಮಕ್ಕಿ ಕಾ ಮಕ್ಕಿ ಹೇಳುತ್ತಾರೆ, ಇವರು ಅದನ್ನೇ ಹೇಳುತ್ತಾರೆ. ನೀವು common sense apply ಮಾಡಿ, ಎರಡು ಕೋಟಿಗಿಂತ ಕಡಿಮೆ ಕುಟುಂಬಗಳು ಇರುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಅಧ್ಯಕ್ಷರೆ, ಒಟ್ಟು 33 ಲಕ್ಷ ಕಾರ್ಡುಗಳು ಹೋದ ಮೇಲೆ 1,37,71,500 ಕಾರ್ಡುಗಳು ಉಳಿದಿವೆ. ಈಗ ನಾವು ಹೊಸದಾಗಿ on-line ನಲ್ಲಿ ಅರ್ಜಿ ಕರೆದಾಗ 31, 09,848 ಅರ್ಜಿಗಳು on-line ನಲ್ಲಿ register ಆಗಿವೆ. ಈಗ 15 ಲಕ್ಷ ಕಾರ್ಡುಗಳು ತನಿಖೆಯಾದಾಗ 4,66,193 double entry ಆಗಿರುವುದು fullfill ಆಗಿರುವುದು ಹೋಗಿವೆ. 10,42,200 ಕಾರ್ಡುಗಳು ಅನುಮೋದನೆಯಾಗಿದ್ದು, ನಾವು ಕಾರ್ಡು-ಕೊಡುತ್ತೇವೆ ಬನ್ನಿ ಎಂದು ಕರೆದರೆ ಅದರಲ್ಲಿ 1,38,000 ಜನರು ಮಾತ್ರ ಬಂದು bio-metric and photo ಕೊಟ್ಟಿದ್ದು, ಉಳಿದವರು ಬಂದಿಲ್ಲ. ಅವರು ಬರದಿರುವುದಕ್ಕೆ ಎರಡು ಮೂರು ಕಾರಣವಿರಬಹುದು. ಒಂದು ಅವರಿಗೆ ಮಾಹಿತಿ ತಲುಪದೆ ಇರಬಹುದು, ಎರಡನೆಯದಾಗಿ ಅವರ ಹೆಬ್ಬೆಟ್ಟು ಎರಡು ಬಾರಿ entry ಆಗಿ ಡಬಲ್ ಆಗುತ್ತದೆನ್ನುವ ಕಾರಣ ಇರಬಹುದು. ಅದಕ್ಕೆ ನಾವು advertisement ಮೂಲಕ ನಿಮ್ಮ ಕಾರ್ಡುಗಳನ್ನು ತೆಗೆದುಕೊಳ್ಳಿ ಎಂದು ಹೇಳುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇನ್ನೊಂದು ವಿಚಾರ ನೆಮ್ಮದಿ ಕೇಂದ್ರಗಳಲ್ಲಿ income certificate ಕೇಳುತ್ತೇವೆನ್ನುವ ಚರ್ಚೆ ನಡೆದಿತ್ತು. 33 ಲಕ್ಷ ಜನರಿಗೆ ನಾವು ಹೊಸದಾಗಿ ಕಾರ್ಡು ಕೊಡಬೇಕಾದರೆ ಅದಕ್ಕೆ ಏನಾದರೂ ಮಾನದಂಡ ಇರಬೇಕಾಗುತ್ತದೆ. ಅದಕ್ಕೆ ನಾವು income certificate ಕೇಳಿದ್ದು, ಈಗ ಏನು ಮಾಡಿದ್ದೇವೆಂದರೆ ನೆಮ್ಮದಿ ಕೇಂದ್ರದಿಂದ ಕೇಳಿದರೆ ಕಷ್ಟ. ತಹಶೀಲ್ದಾರ್ ದೃಢೀಕರಣ ಕೊಟ್ಟರೆ ಸಾಕು ಎಂದು ಹೇಳಿದ್ದೇವೆ. ಇದರ ಜೊತೆಗೆ 29 ಲಕ್ಷ ಕಾರ್ಡುಗಳು ತಾತ್ಕಾಲಿಕ ಕಾರ್ಡುಗಳು ಇವೆ. ಇಲ್ಲಿಯೇ ಗೊಂದಲ ಇರುವುದು. 29 ಲಕ್ಷ ಕಾರ್ಡುದಾರರಿಗೆ ಏನು

ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ. 29 ಲಕ್ಷ ಕಾಡುಗಳಿಗೆ temporary ಆಗಿ ಅಕ್ಕಿ, ಸೀಮೆಎಣ್ಣೆ ನಿಲ್ಲಿಸಿಲ್ಲ ಮತ್ತು ನಿಲ್ಲಿಸುವುದಿಲ್ಲ. ಅವರು ಹೆಬ್ಬೆಟ್ಟು ಮತ್ತು ಫೋಟೋ ಹಾಗೂ ಇನ್‌ಕಂ ಸರ್ಟಿಫಿಕೇಟ್ ಕೊಡುವುದಕ್ಕೆ ಸಮಯ ನಿಗದಿ ಮಾಡಿಲ್ಲ. ಅವರು ಯಾವಾಗ ತಂದುಕೊಟ್ಟರೂ ಆವಾಗ ಅವರಿಗೆ permanent cards issue ಮಾಡುತ್ತಾ ಹೋಗುತ್ತೇವೆನ್ನುವ ಪಾಲಿಸಿ ಹೇಳಿದ್ದೇವೆ. ನಾವು bio-metric ಏಕೆ ಕಡ್ಡಾಯ ಮಾಡುತ್ತಿದ್ದೇವೆಂದರೆ ಹೊಸದಾಗಿ ನಾವು ಒಂದು machine ಹಾಕುತ್ತಿದ್ದೇವೆ. ಆ machine ನಲ್ಲಿ ಅವರ ಹೆಬ್ಬೆಟ್ಟು ಇಟ್ಟರೆ ಮಾತ್ರ ಓಪನ್ ಆಗುತ್ತದೆ, ಅವರ ಕಾರ್ಡು ಓಪನ್ ಆಗುತ್ತದೆ. ಅವರ ಮನೆಯಲ್ಲಿ ಐದು ಜನ ಇದ್ದರೆ ಐದು ಜನರಲ್ಲಿ ಯಾರದ್ದಾದರೂ ಹೆಬ್ಬೆಟ್ಟು ಇಟ್ಟರೆ ಸಾಕು. ಮನೆ ಓನರ್ ಹೆಬ್ಬೆಟ್ಟು ಇಡಬೇಕು ಎನ್ನುವ ಪ್ರಶ್ನೆ ಇಲ್ಲ. ಅಕ್ಕಿ ಎಷ್ಟು ತೂಕ ಹಾಕಿರುತ್ತಾರೆ, ಬಿಲ್ ಎಷ್ಟಾಗುತ್ತದೆ ಎಂದು ಆ machine voiceನಲ್ಲಿ ಕೂಡ ಹೇಳುತ್ತದೆ. ತುಮಕೂರಿನಲ್ಲಿ 100 machine ಗಳನ್ನು install ಮಾಡುವಂತಹ ಪ್ರಯತ್ನ ಮಾಡಿದ್ದೇವೆ. ಇನ್ನು 15 ದಿವಸಗಳಲ್ಲಿ ಆ machine ಕಾರ್ಯಾರಂಭ ಮಾಡುತ್ತವೆ. ನಮಗೆ double entry ಕಾರ್ಡುಗಳನ್ನು ತೆಗೆದು, ಬಡವನಿಗೆ ಕಾರ್ಡು ತಲುಪಿಸಬೇಕು ಎನ್ನುವ ಕಾರಣಕ್ಕಾಗಿ ಈ ವ್ಯವಸ್ಥೆಯನ್ನು streamline ಮಾಡುವಂತಹ ಪ್ರಯತ್ನ ಮಾಡಿದ್ದೇವೆ. ನಾವು ಅಕ್ಕಿ, ಸೀಮೆ ಎಣ್ಣೆ ನಿಲ್ಲಿಸುತ್ತೇವೆಂದು ಎಲ್ಲೂ ಮಾಡಿಲ್ಲ. ಯಾರಿಗೆ ಕಾರ್ಡು ಬೇಕಾಗಿದೆ ಅವರು ಈಗಲೂ ಅರ್ಜಿ ಹಾಕಬಹುದು, ಅದಕ್ಕೆ ಆಗಸ್ಟ್ 5ನೇ ತಾರೀಖಿನ ನಂತರ ಹೊಸ software develop ಆಗಿದೆ. ಒಂದೇ ಸಾರಿ ಹೆಬ್ಬೆಟ್ಟು ಗುರುತು ಮತ್ತು ಫೋಟೋ ಎರಡನ್ನು ಕೊಟ್ಟು ಹೋಗುವುದಕ್ಕೆ ಸಾಧ್ಯವಾಗುವಂತಹ software ಮೂಲಕ ಕೊಡಬೇಕೆಂದು ಮಾಡಿರುವುದರಿಂದ ತಾತ್ಕಾಲಿಕವಾಗಿ ನಿಲ್ಲಿಸಿದೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಕಾರ್ಡುಕೊಡುವುದಕ್ಕಾಗದಿರುವುದು ಪೆಂಡಿಂಗ್ ಇದ್ದರೆ, ಅವರು ಮತ್ತೆ ಅರ್ಜಿ ಹಾಕಿದರೆ ಅಥವಾ ಇಂದೆ ಏನಾದರೂ ಆಗಿರುವುದಿದ್ದರೆ ಅದನ್ನು ಕೊಡಿಸುವುದಕ್ಕೆ ನಾವು ತಯಾರಿದ್ದೇವೆ. ಯಾವುದೇ ಕಾರಣಕ್ಕೂ ಕೂಡ 29 ಲಕ್ಷ ಕುಟುಂಬದವರಿಗೆ ಅಕ್ಕಿ ಸೀಮೆ ಎಣ್ಣೆ ಕೊಡುವುದನ್ನು ನಿಲ್ಲಿಸುವುದಿಲ್ಲ. ಮತ್ತೇ ಮತ್ತೇ ಹೇಳಿದ್ದೇವೆ. ಆದರೆ ಅದು ಏಕೋ ದಿನೇ ದಿನೇ ಗೊಂದಲವಾಗುತ್ತಿದೆ. ಅದನ್ನು ನಿಲ್ಲಿಸಬಾರದು ಎಂದು ತೀರ್ಮಾನ ಮಾಡಿದ್ದೇವೆ.

ಅಧ್ಯಕ್ಷರು:- ಮಾನ್ಯ ಜಯಚಂದ್ರರವರೆ, ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ತಾವು Food minister ರವರಿಗೆ ಹೇಳಿಬಿಡಿ, Village Account, Revenue Inspector,ತಹಶೀಲ್ದಾರರಿಗೆ ಹೇಳಿಬಿಡಿ ಸಾಕು.

ಅಧ್ಯಕ್ಷರು:- ತಾವು ಸಾಕಷ್ಟು ಹೇಳಿದ್ದೀರಿ, ಈಗ ಗಮನ ಸೆಳೆಯುವ ಸೂಚನೆಯ ಮೇಲೆ ಬೇಡ, ಡಿಮ್ಯಾಂಡ್‌ಗಳ ಮೇಲೆ ಮಾತನಾಡುವಾಗ ಹೇಳಿ. ಈಗ ಗಮನ ಸೆಳೆಯುವ ಸೂಚನೆಗೆ ಈ ರೀತಿ ಆದರೆ ಹೇಗೆ? ಮಾನ್ಯ ಟಿ.ಬಿ. ಜಯಚಂದ್ರರವರು ಮಾತನಾಡಲಿ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಅಧ್ಯಕ್ಷರೆ, ಕೆಲವು ಗ್ರಾಮ ಪಂಚಾಯತ್‌ಗಳಲ್ಲಿ ಅವಕಾಶ ಕೊಟ್ಟಿದ್ದೇವೆ, ಅರ್ಜಿಗೆ ಯಾವುದೇ ತೊಂದರೆ ಇಲ್ಲ. ಆಗಸ್ಟ್ 5ನೇ ತಾರೀಖಿನಿಂದ ಹೊಸ software ಕೊಟ್ಟಿದ್ದೇವೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್:- software ಅಂದರೆ ಅರ್ಜಿಯನ್ನು enclose ಮಾಡುವುದಕ್ಕೆ date ಹೇಳಬೇಕಲ್ಲಾ.

ಶ್ರೀ ಡಿ.ಎನ್. ಜೀವರಾಜ್:- ಇದು on-going process ಇದನ್ನು ಮುಂದೆ ನಿಲ್ಲಿಸುವುದಿಲ್ಲ. ಯಾರು ಬರುತ್ತಾರೆ, ಅವರ Continuos process ಮುಂದುವರೆದಿರುತ್ತದೆ. ಇನ್ನೊಂದು ವಿಚಾರವೇನೆಂದರೆ, affidavit ಹಾಕಿ ಕಾರ್ಡ್ ತೆಗೆದುಕೊಂಡಿರುವವರಿಗೆ ಏನು ತೆಗೆದುಕೊಳ್ಳಬಾರದು ಹಾಗೆ ಕೊಡಬೇಕೆಂದು ಹೇಳುತ್ತಾರೆ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಮಂತ್ರಿಯವರೆ ಒಂದು ನಿಮಿಷ, ಆಹಾರ ಸಚಿವರಾದ ಮಾನ್ಯ ಜೀವರಾಜ್.ರವರು ಹೊಸದಾಗಿ ಬಂದಿದ್ದಾರೆ.

ಶ್ರೀ ಆರ್. ಅಶೋಕ್:- ಅವರು ಹಳಬರು.

ಶ್ರೀ ಸಿದ್ಧರಾಮಯ್ಯ:- ಇಲಾಖೆಗೆ ಹೊಸಬರು ಅಲ್ಲವೇ? ನೀವು ಹಳಬರೆಂದರೆ ಎಲ್ಲರನ್ನು ಹಳಬರೆಂದರೆ ಹೇಗೆ? ತಾವು ಬೇರೆಯವರಿಗೂ ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಸಿ.ಟಿ. ರವಿ:- ನಮ್ಮನ್ನು ಆಗಲೇ ಮಂತ್ರಿಗಳನ್ನಾಗಿ ಮಾಡಿಕೊಂಡಿದ್ದರೆ ನಾವು ಹಳಬರಾಗುತ್ತಿದ್ದೆವು.

ಶ್ರೀ ಸಿದ್ಧರಾಮಯ್ಯ:- ನೀವು ಹಾಗೆ ಹೇಳಿ. ನಿಮ್ಮನ್ನು ಅವರ ಜೊತೆಯಲ್ಲೇ ಮಾಡಿಕೊಂಡಿದ್ದರೆ ಹಳಬರಾಗುತ್ತಿರಲಿಲ್ಲವೇ? ಆಗ ನಿಮ್ಮನ್ನು ಮಂತ್ರಿಗಳನ್ನಾಗಿ ಮಾಡಿಕೊಳ್ಳಲಿಲ್ಲ. ಮಾನ್ಯ ಜೀವರಾಜ್ ರವರೆ, ತಾವು ಇದರಲ್ಲಿ ಸ್ವಲ್ಪ application of

mind, ತಾಳ್ಮೆ ಇರಬೇಕು. ತಾವು ಅಧಿಕಾರಿಗಳು ಹೇಳಿದ್ದನ್ನೇ ಕೇಳುವುದಕ್ಕೆ ಹೋಗಬೇಡಿ. ಇದು ಬಡವರ ಪ್ರಶ್ನೆ, ಈಗ 12 ವರ್ಷದೊಳಗೆ ಇರುವ ಮಕ್ಕಳಿಗೆ ಆಹಾರ ಕೊಡುವುದನ್ನು ನಿಲ್ಲಿಸಿ ಬಿಟ್ಟಿದ್ದೀರಿ. ಈ ವಿಷಯಗಳನ್ನು ಡಿಮ್ಯಾಂಡ್‌ಗಳ ಮೇಲೆ ಮಾತನಾಡುವಾಗ ಹೇಳೋಣ. ಎರಡನೆಯದಾಗಿ, 29 ಲಕ್ಷ ನೆಮ್ಮದಿ ಕಾರ್ಡ್‌ಗಳನ್ನು ಏನು ಕೊಟ್ಟಿದ್ದೀರಿ, ಇದರ ಬಗ್ಗೆ ಮೊನ್ನೆ ಮಾನ್ಯ ಪ್ರಧಾನ ಮಂತ್ರಿಯವರು ಎಲ್ಲಾ ಕಡೆಗಳಲ್ಲಿ ಬರಗಾಲವಿರುವುದರಿಂದ ಸುಮಾರು 25% deficit ಆಗಿರುವುದರಿಂದ ತೊಂದರೆ ಇದೆ, food-grains ಏನೂ ತೊಂದರೆ ಇಲ್ಲ, ಎಷ್ಟು ಬೇಕಾದರೂ food-grains ಕೊಡುತ್ತೇವೆಂದು ಹೇಳುತ್ತಾರೆ. ನಿಮಗೆ ಒಂದಷ್ಟು ಹಣ ಖರ್ಚಾಗಬಹುದು. ಇಲ್ಲಿ ಮಾನ್ಯ ಮಹದೇವಪ್ರಸಾದ್‌ರವರು ಇಲ್ಲ, ನಾನು Finance Minister ಆಗಿದ್ದಾಗ, ಆಗಲೇ ನಾವು ಇದೆಲ್ಲವನ್ನು ಮಾಡಬೇಕೆಂದು ಪ್ರಾರಂಭ ಮಾಡಿದ್ದು, ಆಗಲೇ 2004-05ನೇ ಇಸವಿಯಿಂದ ಅಕ್ಕಿಯನ್ನು 3 ರೂ. ಗಳಿಗೆ ಕೊಡಲು ಶುರು ಮಾಡಿದ್ದೆ. ಇದು ಆದ ಮೇಲೆ ಇದರಲ್ಲಿ ಸ್ವಲ್ಪ ಗೊಂದಲ ಇದೆ. ಈ ಗೊಂದಲ ನಿವಾರಣೆ ಆಗಲೇ ಬೇಕು, ಇದು 100% ಆಗದೇ ಇರಬಹುದು, 95% it is well and good. ಅದಕ್ಕೆ ನಾನು ಹೇಳುವುದೇನೆಂದರೆ, 100 ಜನ ineligible ಸೇರಿಕೊಂಡಿದ್ದರೂ ಪರವಾಗಿಲ್ಲ, ಆದರೆ 100 ಜನ eligible ಬಿಟ್ಟು ಹೋಗಬಾರದು. ಇದಕ್ಕೆ ಯಾರು ಅರ್ಹ ಫಲಾನುಭವಿಗಳಿದ್ದಾರೆ. ಇವರು ಬಿಟ್ಟು ಹೋಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಇದು ಬಹಳ ಪುಣ್ಯದ ಕೆಲಸ, ಈ ಕೆಲಸವನ್ನು ಮಾಡುವಂಥದ್ದನ್ನು ಮಾಡಬೇಕು. ಮತ್ತೆ 12 ವರ್ಷದೊಳಗಿನ ಮಕ್ಕಳು majorityಗೆ ಬಂದಿಲ್ಲವೆಂದು ಅವರನ್ನು ಬಿಡಬಾರದು. ಇವರೇ ಹೆಚ್ಚಿಗೆ ಅನ್ನವನ್ನು ಊಟ ಮಾಡುವುದು, ಮುದುಕರು ಹೆಚ್ಚು ಊಟ ಮಾಡುತ್ತಾರೆಯೇ? ಮಾನ್ಯ ಮಂತ್ರಿಯವರೇ, ತಾವು ಮಕ್ಕಳು ಊಟ ಮಾಡುವಷ್ಟು ನಿಮ್ಮ ಕೈಯ್ಯಲ್ಲಿ ಊಟ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಎಸ್.ಕೆ. ಬೆಳ್ಳುಬ್ಬಿ:- ತಾವು ಹೇಳುವಂಥದ್ದು ಸರಿ ಇದೆ, ಮಕ್ಕಳು ಹೆಚ್ಚು ಊಟ ಮಾಡುತ್ತಾರೆ.

ಶ್ರೀ ಸಿದ್ಧರಾಮಯ್ಯ:- ಅವರನ್ನೇ ಬಿಟ್ಟು ಬಿಟ್ಟರೆ ಹೇಗೆ? ಅವರನ್ನೂ ಕೂಡ ಕಾರ್ಡ್‌ಗಳಲ್ಲಿ ಸೇರಿಸಿಕೊಳ್ಳುವ ಕೆಲಸವನ್ನು ಮಾಡಬೇಕು. ಇದನ್ನು ಮಾಡಿ, ತಾವು APL, BPL Card ಗಳನ್ನು ಸೇರಿಸಿಕೊಂಡು ಅಷ್ಟು ಹೇಳುತ್ತಿದ್ದೀರಿ. ಬಿಪಿಎಲ್ ಕಾರ್ಡ್‌ಗಳನ್ನು ಎಷ್ಟು ಬರುತ್ತವೆ? ಈಗ ಎಷ್ಟು ಲಕ್ಷಗಳಿರಬಹುದು?

ಶ್ರೀ ಡಿ.ಎನ್. ಜೀವರಾಜ್:- BPL Card ಗಳು ಎಂಭತ್ತಮೂರೂವರೆ ಲಕ್ಷವಿದ್ದು, AAY Cardಗಳು 11.99ಲಕ್ಷ ಕಾರ್ಡ್‌ಗಳಿವೆ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಾನು ಇರುವಾಗಲೇ ಅವತ್ತೇ ಸುಮಾರು 65-70 ಲಕ್ಷ ಬಿಪಿಎಲ್ ಕಾರ್ಡ್‌ಗಳು ಇತ್ತು. ಈಗ ಇದು 80 ಲಕ್ಷ ಕಾರ್ಡ್‌ಗಳು ಇವೆಯೆಂದರೆ, ನನ್ನ ಪ್ರಕಾರ ಬಿಪಿಎಲ್ ಕಾರ್ಡ್‌ಗಳು ನಮ್ಮ ಸಮಾಜದಲ್ಲಿ 60% below poverty line ಇದ್ದಾರೆ. ಇದು ವರ್ಷ ವರ್ಷ ಜಾಸ್ತಿಯಾಗುತ್ತಿದೆ, ಕಡಿಮೆಯಾಗುತ್ತಿಲ್ಲ.

ಅಧ್ಯಕ್ಷರು:- ಇದು ವರ್ಷ ವರ್ಷ ಬಡತನ ಕಡಿಮೆಯಾಗಬೇಕು.

ಶ್ರೀ ಸಿದ್ಧರಾಮಯ್ಯ:- ಬಡತನ ಕಡಿಮೆಯಾಗಬೇಕು, ಆಗುತ್ತಿಲ್ಲ. ನಾನು ಒಂದೆರಡು ನಿಮಿಷಗಳಲ್ಲಿ ಹೇಳುತ್ತೇನೆ. ನಮ್ಮ ಊರಿನಲ್ಲಿ ನಾನು ಸಣ್ಣ ಹುಡುಗನಿರುವಾಗ 100 ಕ್ಕೆ 90 ಜನರು ಮೂರು ಹೊತ್ತು ಊಟ ಮಾಡುತ್ತಿದ್ದರು. ಇವತ್ತು 100ಕ್ಕೆ 60-170 ಜನ ಎರಡು ಹೊತ್ತು ಊಟ ಸಿಗುವುದಿಲ್ಲ. ಇವತ್ತು ಬಡತನ ಹೆಚ್ಚಾಗಿದೆ. ನಮ್ಮ ಊರಿನಲ್ಲಿ ಇವತ್ತು 30% ಜನರು ಊರನ್ನು ಬಿಟ್ಟಿದ್ದಾರೆ, ಇಲ್ಲರೂ ಬೆಂಗಳೂರಿಗೆ ಬಂದರು. ಈಗ holdings ಕಡಿಮೆಯಾಗುತ್ತಾ ಇರುವುದರಿಂದ Rain fed area ದಲ್ಲಿ ಯಾರು ಕೂಡ ಬದುಕುವುದಕ್ಕೆ ಸಾಧ್ಯವಾಗುತ್ತಿಲ್ಲ. ಬಡತನ ಜಾಸ್ತಿಯಾಗುತ್ತಿದೆ. ಹಾಗಾಗಿ ಬಡವರ ಸಂಖ್ಯೆ ಜಾಸ್ತಿಯಾಗುತ್ತಿದೆಯೇ ಹೊರತು ಇವತ್ತಿನವರೆಗೂ ಕಡಿಮೆಯಾಗುತ್ತಿಲ್ಲ. GDP growth ಜಾಸ್ತಿಯಾಗಿರಬಹುದು, But GDP has not been distributed to all. GDP 8% ಆಗಿದೆ, 7% ಆಗಿದೆ, ಆರೂವರೆ ಪರ್ಸೆಂಟ್ ಆಗಿದೆಯೆಂದು ಹೇಳಿಕೊಳ್ಳುತ್ತಿದ್ದೇವೆ. ಆದರೆ ಆ ಉತ್ಪನ್ನ ಎಲ್ಲರಿಗೂ ತಲುಪುವುದಕ್ಕೆ ಆಗಿಲ್ಲ. ಕೆಲವರ ಹತ್ತಿರ ಇದು ಕೇಂದ್ರೀಕೃತವಾಗುತ್ತಿದೆ, ಹಾಗಾಗಿ ಇವರಿಗೆ ಯಾರಿಗೂ ಸಿಗುತ್ತಿಲ್ಲ. ಬಡವರಿಗೆ 100 ಕೋಟಿ ರೂ. ಗಳು, 200 ಕೋಟಿ ರೂ.ಗಳು ಹಣ ಸ್ವಲ್ಪ ಜಾಸ್ತಿಯಾದರೂ ಪರವಾಗಿಲ್ಲ, ಕಂಜೂಸ್ ಕೆಲಸವನ್ನು ಮಾತ್ರ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಅಧ್ಯಕ್ಷರೆ, ನಾವು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ, ಮತ್ತೆ ತಾವು ನೀಡಿರುವ ಸಲಹೆಗಳನ್ನು ಸ್ವೀಕಾರ ಮಾಡುತ್ತೇವೆ. ನಾವು ಇದನ್ನು ಸೇರಿಸಿಕೊಂಡು ಯೋಚನೆ ಮಾಡುತ್ತೇವೆ.

ಅಧ್ಯಕ್ಷರು:- ಆಯಿತು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಿಂದ 31,29,000 ಕಾರ್ಡ್‌ಗಳಿಗೆ ಸಂಬಂಧಪಟ್ಟ ಹಾಗೆ ನಾನು ಕಳೆದ ಬಾರಿಯೂ ಇದೇ ವಿಷಯವನ್ನು ಪ್ರಸ್ತಾಪ ಮಾಡಿದೆ ಇದಕ್ಕೆ ಉತ್ತರ ಸಿಗಲಿಲ್ಲ. ತಾವು ಕೇಂದ್ರ ಸರ್ಕಾರಕ್ಕೆ ವರದಿ ಮಾಡಿದ್ದೇವೆಂದು ಹೇಳಿದ್ದೀರಿ, ಸುಪ್ರೀಂ ಕೋರ್ಟ್‌ನ ಗಮನಕ್ಕೆ ತಂದಿದ್ದೇವೆಂದು ಹೇಳಿದ್ದೀರಿ. ಈ ಕಾರ್ಡ್‌ಗಳಿಗೆ 4 ಕೆ.ಜಿ. ಯಂತೆ ವಿತರಣೆ ಮಾಡುವುದಕ್ಕೆ ಹೇಳಿದ್ದೇವೆಂದು ಹೇಳುತ್ತೀರಿ. ಇದಕ್ಕೆ ಕೇಂದ್ರ ಸರ್ಕಾರದಿಂದ ಏನಾದರೂ ಅನುಮೋದನೆ ಸಿಕ್ಕಿದೆಯೇ? ತಾವು ಬರೀ ವರದಿ ಮಾಡುವುದು ಮುಖ್ಯವಲ್ಲ. ಸುಪ್ರೀಂ ಕೋರ್ಟ್‌ನಿಂದ ಏನಾದರೂ judgement ಬಂದಿದೆಯೇ? ಅದನ್ನು ಹೇಳಿ. ಇದ್ಕಕೆ ಉತ್ತರ ಬೇಕು. ಇಲ್ಲವೆಂದರೆ ನಾನು ಧರಣಿ ಕುಳಿತುಕೊಳ್ಳುತ್ತೇನೆ. ನನಗೆ ಕಳೆದ ಬಾರಿಯೂ ಹಿಂದಿನ ಆಹಾರ ಸಚಿವರು ಮತ್ತು ಅಧ್ಯಕ್ಷರು ಈ ವಿಷಯವಾಗಿ ಅರ್ಧ ಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡುತ್ತೇವೆಂದು ಹೇಳಿದರು, ಅವಕಾಶವನ್ನು ಕೊಡದೇ ಹೋದಿರಿ, ಬಡವರ ಅನ್ನವನ್ನು ಎಲ್ಲರಿಗೂ ಹಂಚುತ್ತಿದ್ದೀರಿ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಿಂದ 31.29 ಅಂದರೆ ಮೂವತ್ತೊಂಭತ್ತು ಕಾಲೂ ಲಕ್ಷ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್‌ನವರಿಗೆ ಮಾತ್ರ ಅಕ್ಕಿ ಗೋಧಿ ಮತ್ತು ಸೀಮೆಎಣ್ಣೆ ಬರುತ್ತಿದೆ. ಆದರೆ ಇಲ್ಲಿ ಕಾರ್ಡ್‌ಗಳ ಸಂಖ್ಯೆ ಇದೆಲ್ಲಾ ಸೇರಿದರೆ ಬಿಪಿಎಲ್ ಕಾರ್ಡ್‌ಗಳು ಒಂದು ಲಕ್ಷ ಕಾರ್ಡ್‌ಗಳಾಗುತ್ತದೆ. ಇದೆಲ್ಲಾ ಆದರೆ ಒಂದು ಕೋಟಿ ಕಾರ್ಡ್‌ಗಳಷ್ಟಾಗುತ್ತದೆ. ಇದು ಒಂದು ಕೋಟಿ ಕಾರ್ಡ್‌ಗಳಾದರೆ, ನಾವು ಇದನ್ನು ಹಂಚಿಕೆ ಮಾಡಿ ಕೊಡುವಂಥದ್ದು ಅನಿವಾರ್ಯವಾಗಿರುವುದರಿಂದ, ನಾವು ಹಂಚಿಕೆ ಮಾಡಿ ಕೊಡುತ್ತಿದ್ದೇವೆ.

ಅಧ್ಯಕ್ಷರು:- ಉತ್ತರ ಸಾಕು. ಈಗ ಮಾನ್ಯ ರೇವಣ್ಣನವರು ಮಾತನಾಡಲಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಇದಕ್ಕೆ ಕೇಂದ್ರ ಸರ್ಕಾರದ ಅನುಮೋದನೆ ಇದೆಯೇ? ತಾವು ಉತ್ತರದಲ್ಲಿ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆಂದು ಹೇಳಿದ್ದೀರಿ. ಅವರು 4 ಕೆ.ಜಿ. ಯಂತೆ ಹಂಚಿಕೆ ಮಾಡಿ ಎಂದು ತಿಳಿಸಿದ್ದಾರೆಯೇ?

ಅಧ್ಯಕ್ಷರು:- ಮಾನ್ಯ ರೇವಣ್ಣನವರೆ ತಾವು ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಕೇಂದ್ರ ಸರ್ಕಾರದವರು 4 ಕೆ.ಜಿ.ಯಂತೆ ಕೊಡಿ ಎಂದು ಹೇಳಿದ್ದಾರೆಯೇ, ತಾವು ಹೇಳಬೇಕು. ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಕೆ.ಎಂ. ಶಿವಲಿಂಗೇಗೌಡರು ಸದನದ ಬಾವಿಯ ಬಳಿಗೆ ಬಂದು ನಿಂತರು)

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಶಿವಲಿಂಗೇಗೌಡರೆ, ಆಯಿತು ಕೊಡುತ್ತಾರೆ, ತಾವು ತಮ್ಮ ಸ್ಥಳಕ್ಕೆ ಬನ್ನಿ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದ ಬಾವಿ ಬಳಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು:- ತಾವು ತಮ್ಮ ಸ್ಥಳಕ್ಕೆ ಹೋಗಿ, ಅಲ್ಲಿಂದ ಮಾತನಾಡಬೇಡಿ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದ ಬಾವಿಯ ಬಳಿ ನಿಂತು ಮಾತನಾಡುತ್ತಿದ್ದರು)

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಸದಸ್ಯರ ಕ್ಷೇತ್ರ ನೀರಾವರಿ ಪ್ರದೇಶವಲ್ಲ, ಹಾಗಾಗಿ ಅವರು ಅವರ ಗೋಳನ್ನು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಶಿವಲಿಂಗೇಗೌಡರೆ, ತಾವು ನಾಳೆ ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಮಾತನಾಡಿ, ಈಗ ತಮ್ಮ ಸ್ಥಳಕ್ಕೆ ಹೋಗಿ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದ ಬಾವಿಯ ಬಳಿ ನಿಂತು ಮಾತನಾಡುತ್ತಿದ್ದರು)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಇದಕ್ಕೆ ಪರಿಹಾರವನ್ನು ಕೊಡಬೇಕು, ಬಿಪಿಎಲ್ ಕಾರ್ಡ್‌ನವರಿಗೆ ಈ ರೀತಿ ಮಾಡುವುದೇ?

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಅಧ್ಯಕ್ಷರೆ, ಇದು 2006ನೇ ಇಸವಿಯಲ್ಲಿ ನಮ್ಮ ಸಮ್ಮಿಶ್ರ ಸರ್ಕಾರವಿದ್ದಾಗ ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದರು, ಮಾನ್ಯ ಗೋವಿಂದ ಕಾರಜೋಳರವರು....

(ಮಾನ್ಯ ಸದಸ್ಯರು ಸದನದ ಬಾವಿಯ ಬಳಿ ನಿಂತು ಮಾತನಾಡುತ್ತಿದ್ದರು)

ಶ್ರೀ ಡಿ.ಎನ್ ಜೀವರಾಜ್:- ನಾನು ಆ ರೀತಿ ಹೇಳುತ್ತಿಲ್ಲ. ತಾವು ದಯವಿಟ್ಟು ಅರ್ಥಮಾಡಿಕೊಳ್ಳಿ.

ಅಧ್ಯಕ್ಷರು:– ತಾವು ಸದನದ ಬಾವಿ ಬಳಿ ನಿಂತು ಮಾತನಾಡಬೇಡಿ.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ಅವರು ಇದು ಯಾವುತ್ತು ಆಗಿದ್ದು ಎಂದು ಕೇಳಿದರು. ಇದು 2006ನೇ ಇಸವಿಯಲ್ಲಿ ಸಮ್ಮಿಶ್ರ ಸರ್ಕಾರವಿದ್ದಾಗ ಜಾರಿಗೆ ಬಂದಿದೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗಲೇ, ಮಾನ್ಯ ಯಡಿಯೂರಪ್ಪನವರು, ನೀವೆಲ್ಲಾ ಮಂತ್ರಿಗಳಾಗಿದ್ದೀರಿ, ಆಗಲೇ ತೀರ್ಮಾನವಾಗಿರುವಂಥದ್ದು, ಮಾನ್ಯ ಯಡಿಯೂರಪ್ಪನವರು Deputy Chief Minister ಆಗಿದ್ದರು.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ಅವರು ಮಾಡಿದರು ಎಂದು ನಾನು ಹೇಳಲಿಲ್ಲ. ಗೋವಿಂದ ಕಾರಜೋಳರು ಆಗ ಪಡಿತರ ವಿತರಣೆ ವ್ಯವಸ್ಥೆಯ ಮಂತ್ರಿಯಾಗಿದ್ದರು. ಸಮ್ಮಿಶ್ರ ಸರ್ಕಾರದಲ್ಲಿ ಅದು ತೀರ್ಮಾನವಾಗಿತ್ತು ಎಂದು ಹೇಳುತ್ತಿದ್ದೇನೆ.

(ಸದನದ ಬಾವಿಯ ಬಳಿಯಿಂದ ಸದಸ್ಯರಾದ ಶ್ರೀ ಕೆ.ಎಂ. ಶಿವಲಿಂಗೇಗೌಡರು ಮಾತನಾಡುತ್ತಿದ್ದರು)

ಅಧ್ಯಕ್ಷರು:– ಶಿವಲಿಂಗೇಗೌಡರೇ, ನೀವು ಅಲ್ಲಿಂದ ಮಾತನಾಡುವ ಹಾಗಿಲ್ಲ. ನೀವು ಈ ರೀತಿ ಮಾತನಾಡಬಾರದು. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ನೀವು ನಾಳೆ ಮಾತನಾಡಿ.

(ಗೊಂದಲ)

ಅಧ್ಯಕ್ಷರು:– ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ:– ಶಿವಲಿಂಗೇಗೌಡರು ಹೇಳಿದ ಹಾಗೆ ಕೇಂದ್ರ ಸರ್ಕಾರದ ಪ್ರಕಾರವೇ ಕೊಡಬೇಕಲ್ಲವೇ? ಅವರ ಪ್ರಕಾರ ರಾಜ್ಯದಲ್ಲಿ ಬಡವರು ಇರುವುದು 31 ಲಕ್ಷ ಜನ ಮಾತ್ರ, ಅಷ್ಟು ಜನರಿಗೆ ಕೊಟ್ಟು ಉಳಿದವರಿಗೆ ಕೊಡುತ್ತಿರುವುದನ್ನು ಕಟ್ ಮಾಡಿಬಿಡೋಣವೇ?

ಈ ಸದನದ ತೀಮಾನ ಮಾಡಲಿ. ಕೇಂದ್ರ ಸರ್ಕಾರದ ಪ್ರಕಾರ 31 ಲಕ್ಷ ಜನರಿಗೆ ಮಾತ್ರ ಕೊಟ್ಟು ಇನ್ನ್ಯಾರಿಗೂ ಕೊಡಬಾರದು ಎಂದು ಈ ಸದನ ತೀರ್ಮಾನ ಮಾಡಲಿ. ಅದನ್ನೇ ಮಾಡೋಣ.

(ಗೊಂದಲ)

ಶ್ರೀ ಸಿ.ಟಿ. ರವಿ:– ಬೇರೆಯವರಿಗೆ ಕೊಡುವುದನ್ನು ಕಟ್ ಮಾಡಲಿ ಎಂದು ಸದನ ಹೇಳಲಿ, ಅದನ್ನೇ ಮಾಡಿಸೋಣ.

(ಸದನಡ ಬಾವಿಯ ಬಳಿಯಿಂದ ಸದಸ್ಯರಾದ ಶ್ರೀ ಕೆ.ಎಂ. ಶಿವಲಿಂಗೇಗೌಡರು ಮಾತನಾಡುತ್ತಿದ್ದರು)

ಅಧ್ಯಕ್ಷರು:– ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಸದಸ್ಯರಾದ ಶ್ರೀ ಕೆ.ಎಂ. ಶಿವಲಿಂಗೇಗೌಡರು ಸದನದ ಬಾವಿಗೆ ಬಂದರು)

ಶ್ರೀ ಸಿ.ಟಿ. ರವಿ:– ಅವರ ಲೀಡರ್ ಹೇಳಲಿ. ಅರಸೀಕೆರೆ ತಾಲ್ಲೂಕಿನಲ್ಲಿ ಎಷ್ಟು ಬಡವರಿದ್ದಾರೆ ಎಂದು ಕೇಂದ್ರ ಸರ್ಕಾರ ಹೇಳಿದೆ, ಅಷ್ಟು ಬಿಟ್ಟು ಉಳಿದವರಿಗೆ ಕೊಡುವುದನ್ನು ಕಟ್ ಮಾಡೋಣ. ಅರಸೀಕೆರೆ ತಾಲ್ಲೂಕಿನಿಂದಲೇ ಪ್ರಾಯೋಗಿಕವಾಗಿ ಶುರು ಮಾಡೋಣ.

ಅಧ್ಯಕ್ಷರು:– ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬಾರದು.

(ಅಧ್ಯಕ್ಷರ ಆದೇಶದ ಮೇರೆಗೆ ನಡಾವಳಿಗಳನ್ನು ದಾಖಲು ಮಾಡಿಲ್ಲ)

ಅಧ್ಯಕ್ಷರು:– ಶಿವಲಿಂಗೇಗೌಡರೇ, ನೀವು ಅಲ್ಲಿಂದ ಮಾತನಾಡುವುದು ಸರಿಯಿಲ್ಲ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ದಯಮಾಡಿ ಶಿವಲಿಂಗೇಗೌಡರು ಧರಣಿಯನ್ನು ವಿತ್‌ಡ್ರಾ ಮಾಡಿಕೊಂಡು ತಮ್ಮ ಸ್ಥಾನಕ್ಕೆ ಹೋಗಬೇಕೆಂದು ನಾನು ಮನವಿ ಮಾಡುತ್ತೇನೆ. ಇದು ಕೇಂದ್ರ ಸರ್ಕಾರ ಕೊಡುತ್ತಿರುವಂಥಾದ್ದು. ಅದರ ಜೊತೆಗೆ ರಾಜ್ಯ ಸರ್ಕಾರ ಮ್ಯಾಚಿಂಗ್ ಏನು ಕೊಡಬೇಕೆಂದು ಯೋಚನೆ ಮಡಿದರೆ 40% ದಾಟುವುದಿಲ್ಲ. ಶಿವಲಿಂಗೇಗೌಡರು

ಹೇಳಿದರು ಎಂದೇನಾದರೂ ಪೈಲಟ್ ಪ್ರಾಜೆಕ್ಟ್ ಆಗಿ ಅರಸೀಕೆರೆಯಿಂದ ಶುರು ಮಾಡಿದರೆ, ಶಿವಲಿಂಗೇಗೌಡರು ಹೇಳಿದ್ದಕ್ಕೇ ಅರಸೀಕೆರೆಯಲ್ಲಿ ಶುರು ಮಾಡಿದ್ದೇವೆ ಎಂದು ಹೇಳಬೇಕಾಗುತ್ತದೆ.

(ಸದನದ ಬಾವಿಯಿಂದ ಸದಸ್ಯರಾದ ಶ್ರೀ ಕೆ.ಎಂ. ಶಿವಲಿಂಗೇಗೌಡರು ಮಾತನಾಡುತ್ತಿದ್ದರು)

ಅಧ್ಯಕ್ಷರು:– ನೀವು ಅಲ್ಲಿಂದ ಮಾತನಾಡಬೇಡಿ. ನೀವು ಅಲ್ಲಿಂದ ಏಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ಹಂಚಿ ಕೊಡುವಂಥ ವ್ಯವಸ್ಥೆಯಾಗಿದೆ. ತಾವು ಅದನ್ನು ದಯಮಾಡಿ ಒಪ್ಪಿಕೊಳ್ಳಿ. ದಯಮಾಡಿ ತಾವು ಸೀಟಿಗೆ ಬನ್ನಿ. ಅಧ್ಯಕ್ಷರೆ, ನಾನು ಅವರಿಗೆ ಮನವಿ ಮಾಡಿದ್ದೇನೆ, ಅವರು ಅವರ ಸೀಟಿಗೆ ಬರಲಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ಆಮೇಲೆ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡುತ್ತಾರೆ, ನೀವು ಸಿಟಿಗೆ ಬನ್ನಿ. ನಾಳೆ ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವಾಗ ಈ ವಿಷಯದ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ಅವರು ಹೇಳಿದ ಸಲಹೆಗಳನ್ನು ನಾವು ಸ್ವೀಕಾರ ಮಾಡುತ್ತೇವೆ. ಶಿವಲಿಂಗೇಗೌಡರನ್ನು ನಾವು ಅತ್ಯಂತ ಗೌರವದಿಂದ ನೋಡುತ್ತೇವೆ. ಅವರು ದಯಮಾಡಿ ತಮ್ಮ ಸೀಟಿಗೆ ಹೋಗಲಿ.

(ಗೊಂದಲ)

ಅಧ್ಯಕ್ಷರು:– ಏನಿದು, ಸಭೆಯೋ ಏನಿದು? ಶಿವಲಿಂಗೇಗೌಡರೇ, ಯಾಕೋ ಬಹಳ ಅತಿಯಾಯಿತು.

(ಗೊಂದಲ)

(ಈ ಹಂತದಲ್ಲಿ ಸದಸ್ಯರಾದ ಶ್ರೀ ಕೆ.ಎಂ. ಶಿವಲಿಂಗೇಗೌಡರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

9.ವಿಷಯ: ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕೃಷಿ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳ ಕೃಷಿ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಿ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಕೃಷಿ ಸಚಿವರ ಗಮನಗಳನ್ನು ಸೆಳೆಯುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಮತ್ತು ಆಹಾರ ಸಂಸ್ಕರಣೆ ಸಚಿವರು):- ಮಾನ್ಯ ಅಧ್ಯಕ್ಷರೆ,

ರಾಜ್ಯದಲ್ಲಿ ಮೊದಲಿಗೆ ಬೆಂಗಳೂರು ಆನಂತರ ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡವು. ಪ್ರಸ್ತುತ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ 17 ಮತ್ತು ಧಾರವಾಡದ ವ್ಯಾಪ್ತಿಗೆ '7 ಜಿಲ್ಲೆಗಳು ಒಳಗೊಂಡಿವೆ. ಮೊದಲಿಗೆ ಅವಿಭಜಿತ ಧಾರವಾಡದ ವ್ಯಾಪ್ತಿಯಲ್ಲಿದ್ದ 5 ಜಿಲ್ಲೆಗಳನ್ನು ಪ್ರತ್ಯೇಕಗೊಳಿಸಿ ನೂತನ ರಾಯಚೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಿದ್ದು ಸದರಿ ರಾಯಚೂರು ಕೃಷಿ ವಿಶ್ವವಿದ್ಯಾಲಯುವು ದಿನಾಂಕ: 01-04-2009ರಿಂದ ಸ್ವಂತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಮಲೆನಾಡು ಪ್ರದೇಶದಲ್ಲಿನ ವಿಶಿಷ್ಟ ಬೆಳೆಗಳ ಅಧ್ಯಯನ ಮತ್ತು ಸಂಶೋಧನೆಗಾಗಿ ಶಿವಮೊಗ್ಗದಲ್ಲಿ ಪ್ರತ್ಯೇಕ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು ಕಾಯ್ದೆಗಳಿಗೆ ತಿದ್ದುಪಡಿ ಆಗಿಲ್ಲವಾದ್ದರಿಂದ ಈ ಶಿವಮೊಗ್ಗ ವಿಶ್ವವಿದ್ಯಾಲಯವು ಕಾನೂನುಬದ್ಧವಾಗಿ ಇನ್ನೂ ಅಸ್ತಿತ್ವಕ್ಕೆ ಬಂದಿರುವುದಿಲ್ಲ. ಬೆಂಗಳೂರಿನ ವ್ಯಾಪ್ತಿಗೆ ಒಳಪಟ್ಟಿರುವ 17 ಜಿಲ್ಲೆಗಳ ಪೈಕಿ 7 ಜಿಲ್ಲೆಗಳನ್ನು ಶಿವಮೊಗ್ಗದ ವ್ಯಾಪ್ತಿಗೆ ಒಳಪಡಿಸಿದ್ದು ಅದರಲ್ಲಿ ಹಾಸನವೂ ಸೇರಿರುತ್ತದೆ. ಆದುದರಿಂದ ಪ್ರಸ್ತುತ ಶಿವಮೊಗ್ಗ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಿರುವ ಹಾಸನ ಜಿಲ್ಲೆಯು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವುದರಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವೇ ಹಾಸನ ಜಿಲ್ಲೆಯ ಕಾಲೇಜುಗಳ ಬಗ್ಗೆ ಕ್ರಮ ವಹಿಸಬೇಕಾಗಿರುತ್ತದೆ.

2. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ 17 ಜಿಲ್ಲೆಗಳ ಪೈಕಿ ಬೆಂಗಳೂರು, ಮಂಡ್ಯ, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೃಷಿ ಕಾಲೇಜುಗಳಿರುತ್ತವೆ.

ಕೊಡಗು ಜಿಲ್ಲೆಯ ಪೊನ್ನಂಪೇಟೆಯಲ್ಲಿ ಅರಣ್ಯ ಮಹಾವಿದ್ಯಾಲಯವಿದ್ದು ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ರೇಷ್ಮೆ ಕಾಲೇಜು ಇರುತ್ತದೆ. ಸದರಿ 6 ಕಾಲೇಜುಗಳಲ್ಲಿನ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕ ವೃಂದಗಳಲ್ಲಿನ ಒಟ್ಟು 551 ಮಂಜೂರಾದ ಹುದ್ದೆಗಳ ಪೈಕಿ 356 ಹುದ್ದೆಗಳು ಭರ್ತಿಯಾಗಿದ್ದು 195 ಬೋಧಕರ/ ಉಪನ್ಯಾಸಕರ ಹುದ್ದೆಗಳು ಖಾಲಿಯಿವೆ. ಅಂತೆಯೇ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟ ಕಾಲೇಜು-ಸಂಸ್ಥೆಗಳಲ್ಲಿ ಬೋಧಕೇತರ ಸೇವಾ ಸಿಬ್ಬಂದಿಯ ಒಟ್ಟು 1905 ಮಂಜೂರಾದ ಹುದ್ದೆಗಳ ಪೈಕಿ 1047 ಹುದೆಗಳು ಭರ್ತಿಯಾಗಿದ್ದು 858 ಹುದ್ದೆಗಳು ಖಾಲಿಯಿವೆ. ಒಟ್ಟಾರೆ ಶೇ. 45ರಷ್ಟು ಹುದ್ದೆಗಳು ಖಾಲಿ ಇರುವುದಾಗಿ ಕಂಡುಬರುತ್ತದೆ. ಸದರಿ ಹುದ್ದೆಗಳ ಪೈಕಿ ಶೇ. 50 ರಷ್ಟು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಕೋರಿತ್ತು. ಪ್ರಸ್ತಾವನೆಯನ್ನು ಪರಿಶೀಲಿಸಿ ಅರ್ಥಿಕ ಇಲಾಖೆಯ ಸೂಚನೆ-ಸಹಮತಿಯಂತೆ, ಸಹಾಯಕ ಪ್ರಾಧ್ಯಾಪಕರ 45 ಮತ್ತು ಗ್ರೂಪ್-ಸಿ ವೃಂದದ (ಯಾವುದಾದರೂ) 30 (ಸೇವಾ ಸಿಬ್ಬಂದಿ) ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ದಿನಾಂಕ: 16/07/2012ರಂದು ಆದೇಶದಲ್ಲಿ ಅನುಮತಿಯನ್ನು ನೀಡಲಾಗಿದೆ.

3. ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ 2012-13ನೇ ಸಾಲಿಗೆ ಯೋಜನೆ ಅಡಿಯಲ್ಲಿ ಕೃಷಿ ಸಂಶೋಧನೆಗಾಗಿ 1450, ಕೃಷಿ ಶಿಕ್ಷಣಕ್ಕಾಗಿ 1650 ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಾಗಿ 1900 ಗಳಂತೆ ಒಟ್ಟು ರೂ.5000 ಲಕ್ಷಗಳನ್ನು ಆಯವ್ಯಯದಲ್ಲಿ ಮೀಸಲಿಡಲಾಗಿದೆ. ಅಂತೆಯೇ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ವೇತನ ಮತ್ತು ಇತರ ವೆಚ್ಚಗಳಿಗಾಗಿ ಯೋಜನೇತರ ಬಾಬಿನಲ್ಲಿ ರೂ.7500 ಪಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಯೋಜನೆ ಮತ್ತು ಯೋಜನೇತರ ಬಾಬುಗಳಲ್ಲಿ ಹಂಚಿಕೆ ಮಾಡಿರುವ ಅನುದಾನವನ್ನು 4 ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದ್ದು ಈ ಅನುದಾನದಲ್ಲಿ ಕೃಷಿ ವಿಶ್ವವಿದ್ಯಾಲಯವು ಅದಕ್ಕೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಳ್ಳಲು ಕ್ರಮ ಕೈಗೊಳ್ಳುತ್ತದೆ.

4. ಹಾಸನದ ಕೃಷಿ ಕಾಲೇಜಿಗೆ ಸಂಬಂಧಿಸಿದಂತೆ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದು ಪರಿಷ್ಕೃತ ಅಂದಾಜು ಮೊತ್ತ ರೂ. 3674 ಲಕ್ಷಗಳಿಗೆ ಅನುಮೋದನೆ ನೀಡುವಂತೆ ಕೃಷಿ ವಿಶ್ವವಿದ್ಯಾಲಯವು ಮಾಡಿದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

5. ಶಿವಮೊಗ್ಗಕ್ಕೆ ಸಂಬಂಧಿಸಿದಂತೆ 2012-13ನೇ ಸಾಲಿಗೆ ಯೋಜನೆ ಬಾಬ್ತು ರೂ. 2290 ಲಕ್ಷಗಳನ್ನು ಆಯವ್ಯಯದಲ್ಲಿ ಆಸ್ತಿಗಳ ಸೃಜನೆಯ ಸಲುವಾಗಿ ಹಂಚಿಕೆ ಮಾಡಲಾಗಿದೆ. ಈ ಬಾಬ್ತು ಪ್ರಾರಂಭಿಕ ಉದ್ದೇಶಗಳಿಗಾಗಿ ರೂ. 200 ಲಕ್ಷಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಅಂತೆಯೇ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಸಲುವಾಗಿ ರೂ. 1860 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು ಸಕ್ಷಮ ಪ್ರಾಧಿಕಾರದ ಅನುಮೋದನೆಯ ಮೇರೆಗೆ ಅಗತ್ಯವಾದ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

6. ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಬೋಧಕರ/ಉಪನ್ಯಾಸಕರ ಒಟ್ಟು 166 ಹುದ್ದೆಗಳು ಖಾಲಿಯಿದ್ದು ಇವುಗಳನ್ನು ಭರ್ತಿ ಮಾಡಲು ಸರ್ಕಾರದ ಅನುಮತಿಯನ್ನು ಕೋರಿ ಧಾರವಾಢ ಕೃಷಿ ವಿಶ್ವವಿದ್ಯಾಲಯ ಸಲ್ಲಿಸಿರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

7. ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ 2012-13ನೇ ಸಾಲಿಗೆ ಯೋಜನೆ ಅಡಿಯಲ್ಲಿ ಕೃಷಿ ಸಂಶೋಧನೆಗಾಗಿ 1750, ಕೃಷಿ ಶಿಕ್ಷಣಕ್ಕಾಗಿ 1350 ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಾಗಿ 1900 ಗಳಂತೆ ಒಟ್ಟು ರೂ.5000 ಲಕ್ಷಗಳನ್ನು ಆಯವ್ಯದಲ್ಲಿ ಮೀಸಲಿಡಲಾಗಿದೆ. ಅಂತೆಯೇ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ವೇತನ ಮತ್ತು ಇತರ ವೆಚ್ಚಗಳಿಗಾಗಿ ಯೋಜನೇತರ ಬಾಬಿನಲ್ಲಿ ರೂ. 5300 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಯೋಜನೆ ಮತ್ತು ಯೋಜನೇತರ ಬಾಬುಗಳಲ್ಲಿ ಹಂಚಿಕೆ ಮಾಡಿರುವ ಅನುದಾನವನ್ನು 4 ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದ್ದು ಈ ಅನುದಾನದಲ್ಲಿ ಕೃಷಿ ವಿಶ್ವವಿದ್ಯಾಲಯವು ಅದಕ್ಕೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಳ್ಳಲು ಕ್ರಮ ಕೈಗೊಳ್ಳುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಿಮ್ಮ ಜಿಲ್ಲೆಯಲ್ಲಿರುವ ಕೃಷಿ ಕಾಲೇಜಿಗೆ ಲೆಕ್ಚರರ್‌ಗಳಿಲ್ಲ. ಉತ್ತರದಲ್ಲಿ ಹೇಳಿರುವಂತೆ ಮಂಜುರಾಗಿರುವ ಹುದ್ದೆಗಳು 1,905. ಅದರಲ್ಲಿ 1,047 ಹುದೆಗಳು ಮಾತ್ರ ಭರ್ತಿಯಾಗಿದ್ದು ಇನ್ನು 858 ಹುದ್ದೆಗಳು ಖಾಲಿಯಿವೆ. ರೈತರ ಮಕ್ಕಳು ವಿದ್ಯಾಭ್ಯಾಸ ಮಾಡುವಂಥ ಕಾಲೇಜುಗಳಲ್ಲಿ ಲೆಕ್ಚರ್‌ಗಳಿಲ್ಲ. ಇವುಗಳನ್ನು ಯಾವಾಗ ತುಂಬುತ್ತೀರಿ ಎಂದು ದಯಮಾಡಿ ಕೃಷಿ ಸಚಿವರು ಹೇಳಬೇಕು. ಏಕೆಂದರೆ, ಅವರೂ ಸಹ ಕೃಷಿ ಕುಟುಂಬದಲ್ಲಿ ಹುಟ್ಟಿ ಬಂದಿರುವವರು. ಅದರ ಜೊತೆಗೆ ಮತ್ತೊಂದು ವಿಷಯವನ್ನು ಸಚಿವರ ಗಮನಕ್ಕೆ ತರುವುದೇನೆಂದರೆ, ಹಾಸನ ಕೃಷಿ ಕಾಲೇಜಿಗೆ ಮೂರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ಆರು ವರ್ಷಗಳಾಗಿದೆ. ಆರು

ವರ್ಷಗಳಿಂದ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕಾಗಿಲ್ಲ. ಹಾಸನದ ಕೃಷಿ ಕಾಲೇಜಿಗೆ ಲೆಕ್ಚರರ್‌ಗಳನ್ನು ನೇಮಕ ಮಾಡಬೇಕು ಮತ್ತು ಆ ಕಾಲೇಜಿಗೆ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ:– ರೇವಣ್ಣನವರು ಕೇಳಿದ ಪ್ರಶ್ನೆಗೆ ನಾನು ಈಗಾಗಲೇ ಸವಿಸ್ತಾರವಾದ ಮಾಹಿತಿಯನ್ನು ಕೊಟ್ಟಿದ್ದೇನೆ. ಖಾಲಿಯಿರುವ ಹುದ್ದೆಗಳನ್ನು ತುಂಬಬೇಕೆಂದು ವಿಶ್ವವಿದ್ಯಾಲಯದವರು ಈಗಾಗಲೇ ಮನವಿ ಮಾಡಿದ್ದಾರೆ. ಕೆಲವು ಹುದ್ದೆಗಳನ್ನು ತುಂಬಲು ಈಗಾಗಲೇ ಪರ್ಮಿಷನ್‌ಅನ್ನು ಕೊಟ್ಟಿದ್ದೇವೆ. ಹಂತಹಂತವಾಗಿ, ಆದಷ್ಟು ಬೇಗನೆ ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ:– ದಯಮಾಡಿ ಆದಷ್ಟು ಬೇಗನೆ ಎಲ್ಲಾ ಹುದ್ದೆಗಳನ್ನು ತುಂಬಬೇಕು. ಏಕೆಂದರೆ, ಬಡವರ ಮಕ್ಕಳು ಓದುತ್ತಿರುವ ಕಾಲೇಜುಗಳಿವು. ಸಾಹುಕಾರರ ಮಕ್ಕಳ್ಯಾರೂ ಇಲ್ಲಿ ಬಂದು ಓದುವುದಿಲ್ಲ.

ಶ್ರೀ ಉಮೇಶ್ ವಿ. ಕತ್ತಿ:– ವಿಶೇಷವಾಗಿ ಹಾಸನ ಜಿಲ್ಲೆಗೆ ಆದಷ್ಟು ಬೇಗನೆ ಮಾಡುತ್ತೇವೆ.

10. ವಿಷಯ:– ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ವೇತನ ಸಂರಕ್ಷಣೆ ಮಾಡದಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ವೇತನ ಸಂರಕ್ಷಣೆ ಮಾಡದೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವ್ಯತಿರಿಕ್ತವಾಗಿ ತಾರತಮ್ಯ ಮಾಡಿರುವ ಬಗ್ಗೆ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ,

ಕರ್ನಾಟಕ ಸರ್ಕಾರದ ಅನುದಾನಿತ ಸಂಸ್ಥೆಯಿಂದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಸಹಾಯಕ ಪ್ರಾಧ್ಯಾಪಕರಾಗಿ ಹಾಗೂ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ ಕೆಲವು ಬೋಧಕವರ್ಗದವರು 2010ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ವೃಂದಕ್ಕೆ ಆಯ್ಕೆಗೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

ಸದರಿ ಉಪನ್ಯಾಸಕರು ತಮ್ಮ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಬೇಕೆಂದು ಕೋರಿ ಸಲ್ಲಿಸಿದ ಮನವಿಗಳನ್ನು ಪರಿಶೀಲಿಸಿ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 01 ಎಸ್‌ಆರ್‌ಎ 2011 ದಿನಾಂಕ:05-03-2011ರಂತೆ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಲ್ಲಿಸಿದ ಪಿಂಚಣಿಯುಕ್ತ ಸೇವೆಯನ್ನು ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಅವಕಾಶವಿಲ್ಲವೆಂದು ಈಗಾಗಲೇ ತಿಳಿಸಲಾಗಿದೆ.

ದಿನಾಂಕ: 01-04-2006ರ ನಂತರ ಸರ್ಕಾರಿ ಸೇವೆಗೆ ಸೇರಿದವರು ಹೊಸ ಅಂಶದಾಯಕ ಕೊಡುಗೆ ವಿಶ್ರಾಂತಿ ವೇತನ ಯೋಜನೆಯ ವ್ಯಾಪ್ತಿಗೆ ಒಳಪಡಲಿದ್ದು (contributory Pension Scheme) ಕರ್ನಾಟಕ ನಾಗರೀಕ ಸೇವಾ ನಿಯಮಗಳಡಿ ಪಿಂಚಣಿ ಸೌಲಭ್ಯಕ್ಕೆ ಅರ್ಹರಿಲ್ಲದ ಕಾರಣ, ಈ ಹಿಂದೆ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆಯನ್ನು ಪ್ರಸ್ತುತ ನಿಯಮಾವಳಿಯಂತೆ ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸಲು ಸಾಧ್ಯವಿಲ್ಲ.

ಅನುದಾನಿತ ಶಿಕ್ಷಣ ಸಂಸ್ಥೆಗಳಿಂದ ಸೇವೆ ಸಲ್ಲಿಸಿ ಸರ್ಕಾರಿ ಸೇವೆಗೆ ಆಯ್ಕೆಯಾಗಿರುವವರಿಗೆ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು ಸರ್ವೋಚ್ಛ ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗಿದೆ ಎಂದು ತಿಳಿಸಿರುವ ಅಂಶಗಳ ಬಗ್ಗೆ ಹಾಗೂ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರುವ ಬಗ್ಗೆ ಮತ್ತು ಆಗಿರುವ ಅನ್ಯಾಯವನ್ನು ಸರಿಪಡಿಸುವ ಕುರಿತು ಈ ಬಗ್ಗೆ ನ್ಯಾಯಾಲಯದ ತೀರ್ಪುಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್.ಎಸ್. ಪ್ರಕಾಶ್:- ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭವಾದ ಮೇಲೆ ಲೋಕಸೇವಾ ಆಯೋಗದಿಂದ ಅಲ್ಲಿಗೆ ಪ್ರಿನ್ಸಿಪಾಲ್ ಮತ್ತು ಲೆಕ್ಚರರ್‌ಗಳನ್ನು ತುಂಬಿದ್ದಾರೆ. ಸುಮಾರು 20-22 ವರ್ಷ ಅನುಭವವಾಗಿರ ತಕ್ಕಂಥವರು, ಬೇರೆ ಬೇರೆ ಅನುದಾನಿತ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದಂಥವರು ಇಲ್ಲಿಗೆ ಪ್ರಿನ್ಸಿಪಾಲ್ ಆಗಿ, ಲೆಕ್ಚರರ್ ಆಗಿ ನೇಮಕವಾಗಿದ್ದಾರೆ. ಹಿಂದೆ ಇದ್ದ ಕಾಲೇಜುಗಳಲ್ಲಿ ಅವರಿಗೆ ಒಂದು ಲಕ್ಷ ರೂಪಾಯಿ ಸಂಬಳ ಬರುತ್ತಿತ್ತು. ಆದರೆ ಇಲ್ಲಿ ಈಗ 75 ಸಾವಿರ ರೂಪಾಯಿ ಸಂಬಳ ಬರುತ್ತಿದೆ. ಅವರು ನಿವೃತ್ತರಾದ ನಂತರ ಸರ್ಕಾರದಿಂದ ಬರುವಂಥ ಪೆನ್‌ಷನ್ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಹಿಂದೆ ಅವರು ಅನುದಾನಿತ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದುದನ್ನೂ ಪರಿಗಣಿಸಿ, ಅವರು ನಿವೃತ್ತರಾದ ನಂತರ ಅವರಿಗೆ ಬರುವಂಥ ಎಲ್ಲಾ ಸೌಲಭ್ಯಗಳನ್ನೂ ಕೊಡಲಿ ಎಂದು ಕೇಳುತ್ತಿದ್ದೇವೆ.

ಶ್ರೀ ಸಿ.ಟಿ. ರವಿ: ದಿನಾಂಕ: 01-04-2006ರ ನಂತರ ಸರ್ಕಾರಿ ಸೇವೆಗೆ ಸೇರಿದವರು ಹೊಸ ಅಂಶದಾಯಿಕ ಕೊಡುಗೆ ವಿಶ್ರಾಂತಿ ಯೋಜನೆ (Contributory Pension Scheme) ವ್ಯಾಪ್ತಿಗೆ ಒಳಪಡಲಿದ್ದು, ಕರ್ನಾಟಕ ನಾಗರಿಕ ಸೇವಾ ನಿಯಮಗಳಡಿ ಪಿಂಚಣಿ ಸೌಲಭ್ಯಕ್ಕೆ ಅರ್ಹರಿಲ್ಲದ ಕಾರಣ ಈ ಹಿಂದೆ, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆಯನ್ನು ಈಗಿರುವ ನಿಯಮಾವಳಿಗಳಂತೆ ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸಲು ಅವಕಾಶವಿಲ್ಲ. ಆದರೆ ಇದು ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗಿದೆ ಎಂದು ತಾವು ಹೇಳಿದ್ದೀರಿ. ನಿಯಮಾವಳಿಗೆ ಸೂಕ್ತ ತಿದ್ದುಪಡಿ ತರುವುದು ಮತ್ತು ಅನ್ಯಾಯವನ್ನು ಸರಿಪಡಿಸುವ ಬಗ್ಗೆ, ನ್ಯಾಯಾಲಯದ ತೀರ್ಪನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು:- ಜಡ್ಜ್‌ಮೆಂಟ್ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದ್ದಾರೆ, ನೀವು ಮತ್ತೆ ಮತ್ತೆ ಕೇಳಬೇಡಿ.

11. ವಿಷಯ: ಹಿಂದುಳಿದ ವರ್ಗಗಳ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿ ಸೌಲಭ್ಯವನ್ನು ಮುಂದುವರೆಸುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ):- ಮಾನ್ಯ ಅಧ್ಯಕ್ಷರೆ, ಹಿಂದುಳಿದ ವರ್ಗಗಳ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಆದಾಯ ಮಿತಿಯಿಂದ ಸೌಲಭ್ಯವನ್ನು ಮುಂದುವರೆಸುವ ಬಗ್ಗೆ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ(ಸಮಾಜ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೆ,

ಶುಲ್ಕ ಮರುಪಾವತಿಗಾಗಿ ಹಿಂದುಳಿದ ವರ್ಗಗಳ ಪ್ರವರ್ಗ-1ಕ್ಕೆ ಸೇರಿದ ಕುಟುಂಬದ ವಾರ್ಷಿಕ ವರಮಾನವನ್ನು ಈ ಹಿಂದೆ ನಿಗಧಿಪಡಿಸಿರಲಿಲ್ಲ. ಆದರೆ ಪ್ರವರ್ಗ-1ರಲ್ಲಿ ಹೆಚ್ಚಿನ ವರಮಾನ ಹೊಂದಿದವರು ಈ ಸವಲತ್ತುಗಳನ್ನು ತೆಗೆದುಕೊಳ್ಳುತ್ತಿದ್ದು, ಅದೇ ವರ್ಗದ ಕಡು ಬಡವರಿಗೆ ಈ ಸವಲತ್ತು ದೊರಕುತ್ತಿಲ್ಲ. ಸರ್ಕಾರದ ಉದ್ದೇಶ ಯಾವುದೇ ವರ್ಗದಲ್ಲಿ ಅತೀ ಕಡಿಮೆ ಆದಾಯವಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಸವಲತ್ತುಗಳನ್ನು ಆದ್ಯತೆ ಮೇಲೆ ನೀಡಬೇಕಾಗಿದೆ. ಆದ್ದರಿಂದ ಇತ್ತೀಚಿನ ಸರ್ಕಾರಿ ಆದೇಶದಲ್ಲಿ ಆದಾಯ ಮಿತಿಯನ್ನು ಪ್ರವರ್ಗ-1ಕ್ಕೆ ಸಹ ರೂ.1 ಲಕ್ಷಕ್ಕೆ ವಾರ್ಷಿಕ ಆದಾಯ ಮೀರದಂತೆ ನಿಗಧಿಪಡಿಸಲಾಗಿದೆ. ಉಳಿದ ಹಿಂದುಳಿದ ವರ್ಗಗಳಾದ ಪ್ರವರ್ಗ-2ಎ, 3ಎ ಮತ್ತು 3ಬಿ

ಗಳಿಗೆ ರೂ.44,500/-ಗಳನ್ನು ವಾರ್ಷಿಕ ವರಮಾನವನ್ನು ನಿಗದಿಪಡಿಸಲಾಗಿದೆ. (ಈ ಹಿಂದೆ ಆದಾಯ ಮಿತಿ ರೂ.11.000/-ಇತ್ತು)

ಈ ಹಿಂದೆ ಶ್ರೀಮತಿ ರಫಿಯಾ ಶಾಹೀಮ್ ಮತ್ತು ಇತರರು ವಿರುದ್ಧ ಕರ್ನಾಟಕ ಸರ್ಕಾರ ಪ್ರಕರಣದಲ್ಲಿ ಸಹ ಈ ಕೆಳಗಿನಂತೆ ಮಾನ್ಯ ಉಚ್ಛ ನ್ಯಾಯಾಲಯವು ವೀಕ್ಷಣೆ ಮಾಡಿದೆ.

As reported in AIR 1994 Karnataka 295-In Writ Appeals Nos.3330 and 3458/1993, D/3-3-1994- Hon'ble High Court of Karnataka has observed as follows:

"The Court found that not prescribing an income limit in the case of Backward Tribes, while prescribing an income limit of Rs. 10,000/- per annum in the case of Backward Communities and Backward Castes was anomalous and made the following suggestion for consideration of the Government:-

"Before concluding, we suggest that the Government may consider whether an income limit should not be put for claiming the benifit of reservation for Backward Tribes also. In cases of Backward Communities and Backward Classes, the Government Order provide that no applicant whose parents' or guardian's annual income exceeds Rupees 10,000/- can claim the benefit of reservation for those categories. Similar income ceiling in case of Backward Tribes also, will prevent the benefit of reservation being taken away by comparatively affluent sections of Backward Tribes and will help the really lower strata of that category which needs most the reservation, to get the benefit of reservation."

(ಪ್ರತಿ ಮಂಡಿಸಿದೆ)

ಆದ್ದರಿಂದ ಪ್ರವರ್ಗ-1ರಲ್ಲಿ ಸಹ ಸಾಮಾಜಿಕ ನ್ಯಾಯ ಒದಗಿಸುವ ದೃಷ್ಟಿಯಿಂದ

ಮತ್ತು ಅವರಲ್ಲಿ ಕಡು ಬಡವರಿಗೆ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಆದಾಯ ಮಿತಿಯನ್ನು ನಿಗಧಿಪಡಿಸಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಉತ್ತರವನ್ನು ಒದಗಿಸಿದ್ದಾರೆ. ಶೈಕ್ಷಣಿಕ ಪ್ರಗತಿಯಿಂದ ಮಾತ್ರ ಸಾಮಾಜಿಕ ಅಸಮತೋಲನವನ್ನು, ಶೋಷಣೆಯನ್ನು ನಿರ್ಮೂಲನೆ ಮಾಡಲು ಸಾಧ್ಯ ಎನ್ನುವುದು ಸತ್ಯ ಎನ್ನುವುದನ್ನು ಮನಗಂಡೇ, 1982ಕ್ಕೂ ಹಿಂದೆ ಪ್ರವರ್ಗ-1ಕ್ಕೆ ಸೇರಿರುವ ವಿದ್ಯಾರ್ಥಿಗಳಿಗೆ ಯಾವುದೇ ತರಹದ ಶುಲ್ಕ ಮರುಪಾವತಿ ಮಾಡುವುದಕ್ಕೆ ಆದಾಯ ಮಿತಿಯನ್ನು ಹೇರಿರಲಿಲ್ಲ. 1976ರ ಹಾವನೂರ್ ರವರ ವರದಿಯಲ್ಲಿ ಅವುಗಳು Backward Tribe ಎಂದು ವರ್ಗೀಕರಣವಾಗಿತ್ತು. ಪ್ರವರ್ಗ-1 ಎಂದರೆ ಅದರಲ್ಲಿ ಯಾವ ಜಾತಿಗಳು ಬರುತ್ತವೆ ಎಂದರೆ, ಗೊಲ್ಲ, ಹೆಳವ, ಬೆಸ್ತ ಜಾತಿಗಳು ಮಾತ್ರ ಸೇರಿದ್ದವು. ದಿನಾಂಕ 16-12-1982ರ ಸರ್ಕಾರಿ ಆದೇಶದಲ್ಲಿ ಎಸ್.ಸಿ., ಎಸ್.ಟಿ ಮತ್ತು ಬಿ.ಟಿ.ಗಳಿಗೆ ಸೇರಿದವರಿಗೆ ಆದಾಯ ಮಿತಿ ಇರಲಿಲ್ಲ. They were treated on par with S.C. and S.T. 1986ರಲ್ಲಿ ವೆಂಕಟಸ್ವಾಮಿಯವರ ವರದಿ ಪ್ರಕಾರ ಇವರನ್ನು ಗ್ರೂಪ್-ಎ ಎಂದು ವರ್ಗೀಕರಣ ಮಾಡಿ ಅದರಲ್ಲಿ ಗೊಲ್ಲ, ಹೆಳವ, ಬೆಸ್ತ, ದರವೇಸಿ ಜಾತಿಗಳನ್ನು ಸೇರಿಸಿದರು. ಆಗಲೂ ಕೂಡ ಆದಾಯ ಮಿತಿ ಇರಲಿಲ್ಲ. 1994ರಲ್ಲಿ ಚಿನ್ನಪ್ಪರೆಡ್ಡಿ ಆಯೋಗದ ಪ್ರಕಾರ ಇವರನ್ನು ಪ್ರವರ್ಗ-1 ಎಂದು ವರ್ಗೀಕರಿಸಿ ಅದರಲ್ಲಿ ಗೊಲ್ಲ, ಹೆಳವ, ಬೆಸ್ತ, ದರವೇಸಿ, ಲಾಡ, ಕ್ಷತ್ರಿಯ ಜಾತಿಗಳನ್ನು ಸೇರಿಸಿದ್ದರು. ಆಗಲೂ ಕೂಡ ಆದಾಯ ಮಿತಿ ಇರಲಿಲ್ಲ. ಈ ವರ್ಷದಲ್ಲಿ ಅಂದರೆ ದಿ: 23.06.2012ರಲ್ಲಿ ಒಂದು ಲಕ್ಷ ರೂಪಾಯಿಗಳ ಆದಾಯದ ಮಿತಿಯನ್ನು ಹೇರಿದ್ದಾರೆ. ಪ್ರವರ್ಗ-1ರಲ್ಲಿ ಸಹ ಸಾಮಾಜಿಕ ನ್ಯಾಯ ಒದಗಿಸುವ ದೃಷ್ಟಿಯಿಂದ ಮತ್ತು ಅವರಲ್ಲಿ ಕಡುಬಡವರಿಗೆ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಆದಾಯ ಮಿತಿಯನ್ನು ನಿಗದಿಪಡಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ನಾನು ಹೇಳಿದಂಥ ಜಾತಿಗಳು ಗೊಲ್ಲ ಎಂದರೆ Back ward Tribe on par with SC/ST. ಅವರು ಮತ್ತು ಬೆಸ್ತ ಜಾತಿಗಳು ನಿಜವಾಗಿಯೂ ಅವರ ಕೋಟಾ ಏನಿದೆ, ಆ ಕೋಟಾವನ್ನು exhaust ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆ ಮಿತಿಯನ್ನು ಹಾಕುವುದರಿಂದ ಯಾವುದೇ ತರಹದಲ್ಲಿ ಸರ್ಕಾರಕ್ಕೆ ಹೊರೆಯಾಗುವುದಿಲ್ಲ. ದಯಮಾಡಿ, ಆ ಮಿತಿಯನ್ನು ತೆಗೆದು, SC/STಗೆ ಏನು ನಿಗದಿ ಮಾಡುತ್ತೀರಿ, ಅದೇ ರೀತಿ ಮಾಡಬೇಕೆಂಬುದು ನನ್ನ ಮನವಿ. ಗೊಲ್ಲ

ಜಾತಿಯವರನ್ನು Backward Tribe ನಲ್ಲಿರುವವರನ್ನು Schedule Tribe character ಗೆ ಸೇರಿಸಬೇಕೆನ್ನುವ ಬಗ್ಗೆ ತಾವೇ ಈ ಸದನದಲ್ಲಿ ವಚನ ಕೊಟ್ಟಿದ್ದಿರಿ. ಅದಕ್ಕೆ ವರದಿಯನ್ನು ಕೂಡ ತರಿಸುತ್ತಿದ್ದೀರಿ. ಇಂಥ ಸಂದರ್ಭದಲ್ಲಿ ಅವರ ವಿದ್ಯಾಭ್ಯಾಸಕ್ಕೋಸ್ಕರ, ಶೈಕ್ಷಣಿಕ ವಿಚಾರಕ್ಕೋಸ್ಕರ ಈ ರೀತಿಯಾದ ಮಿತಿಯನ್ನು income limit ಅನ್ನು ಹಾಕುವುದು ಸರಿಯಲ್ಲ. ದಯಮಾಡಿ, ಅವರಿಗೆ ವಿನಾಯಿತಿಯನ್ನು ಕೊಡಬೇಕೆಂಬ ಒತ್ತಾಯ ಮಾಡುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):-

ನಾನು ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತೇನೆ ಮತ್ತು ಗೌರವಿಸುತ್ತೇನೆ. ಆದರೆ ಈ ರಾಜ್ಯದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಶುಲ್ಕ ಮರುಪಾವತಿ ಮಾಡಬೇಕೆಂದು ಅನೇಕ ವರ್ಷಗಳ ಹಿಂದೆ ರಾಜ್ಯ ಸರ್ಕಾರ ಪ್ರಯತ್ನ ಮಾಡಿದೆ. ಆದಾಯ ಮಿತಿಯನ್ನು ಕೇವಲ ಪ್ರವರ್ಗ–1ಕ್ಕೆ ಮಾತ್ರ ಮಾಡಲಿಲ್ಲ. ಪರಿಶಿಷ್ಟ ಜಾತಿಗೆ ಅದೇ ಮಿತಿಯನ್ನು ಅಂದರೆ 2 ಲಕ್ಷ ರೂಪಾಯಿಗಳನ್ನು ಮಾಡಿದ್ದೇವೆ. ಜೊತೆಗೆ, ಪ್ರವರ್ಗ 2ಎ ಮತ್ತು 3ಎಗೆ, 3ಬಿಗೂ ಸಹ 4,500 ರೂಪಾಯಿಗಳನ್ನು ಹೆಚ್ಚು ಮಾಡಿದ್ದೇವೆ. ಈ ಆದಾಯ ಮಿತಿಯನ್ನು ಏಕೆ ಹೆಚ್ಚು ಮಾಡಬೇಕಾಗಿ ಬಂತು ಎಂದರೆ, ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಜಯಚಂದ್ರರವರು ಗಮನಿಸಬೇಕು. ಶುಲ್ಕ ಮರುಪಾವತಿ ಮಾಡುತ್ತೇವೆ, ಯಾವ ವಿದ್ಯಾರ್ಥಿಗಳೂ ಕಾಲೇಜ್‌ಗೆ ಫೀಸ್ ಕಟ್ಟಬೇಡಿ ಎಂದು ರಾಜ್ಯ ಸರ್ಕಾರವೇ ಘೋಷಣೆ ಮಾಡಿಬಿಟ್ಟಿತು. ಅನೇಕ ವಿದ್ಯಾರ್ಥಿಗಳು ಶಾಲೆಗೆ ಹೋದರು. admission ಆದರು. ಹಣ ಕೊಡದೆ ಬಹುತೇಕರನ್ನು admission ಮಾಡಿಕೊಳ್ಳಲಿಲ್ಲ. ಸರ್ಕಾರದ ಆದೇಶದ ಪ್ರಕಾರ ಕೆಲವರು admission ಮಾಡಿಸಿಕೊಂಡರು. 2,3,4 ವರ್ಷಗಳಾಯಿತು. final degree ಆಯಿತು. ನೀವು ಫೀಸ್ ಕಟ್ಟಲಿಲ್ಲ ಹಾಗಾಗಿ ನಿನ್ನ marks card ಕೊಡುವುದಿಲ್ಲ. ನಿನಗೆ TC ಕೊಡುವುದಿಲ್ಲ. ನಿನಗೆ attendance ಕೊಡುವುದಿಲ್ಲ, ಹೀಗೆ ರಾಜ್ಯದಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಕಿರುಕುಳವಾಯಿತು. ಯಾವಾಗಲೂ ಸರ್ಕಾರ ಸ್ಪಂದನೆ ಮಾಡಲಿಲ್ಲ. Ultimate ಆಗಿ ಏಕೆ ಈ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂಬುದನ್ನು ಗಮನಿಸಿದಾಗ, ಕಳೆದ 10 ವರ್ಷಗಳಿಂದ 140 ಕೋಟಿ ರೂಪಾಯಿಗಳಷ್ಟು balance ಇತ್ತು. ಇದು ಒಂದು ವರ್ಷದ್ದಲ್ಲ. ಯಾವುದೇ ಆದಾಯ ಮಿತಿ ಇಲ್ಲದೆ ಎಲ್ಲರೂ application ಹಾಕುತ್ತಿದ್ದರು. ಇದರಿಂದ ಸರ್ಕಾರಕ್ಕೆ ಸಾಲ ಆಯಿತು. ಸರ್ಕಾರದ ಸಾಲ ಆಂಜನೇಯನ ಬಾಲ ಬೆಳೆದ ಹಾಗೆ ಬೆಳೆದಿದೆ. ಇದಕ್ಕೆ ಯಾರೂ ಗಮನ ಕೊಡಲಿಲ್ಲ. ಇದನ್ನು ಗಮನಿಸಿದಂಥ ಸರ್ಕಾರ ಈ ಮಕ್ಕಳಿಗೆ ಮುಕ್ತಿಯನ್ನು ಕೊಡಬೇಕೆಂದು ರಾಜ್ಯ ಸರ್ಕಾರ ಬಹಳ ಚರ್ಚೆ

ಮಾಡಿತು. ಇದರಿಂದ ವಿದ್ಯಾರ್ಥಿಗಳಿಗೆ ಮುಕ್ತಿ ಸಿಗಬೇಕಾದರೆ 140 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲೇಬೇಕು. ಯಾರು 10 ವರ್ಷಗಳಿಂದ ಶುಲ್ಕ ಮರುಪಾವತಿ ಪಡೆದಿರಲಿಲ್ಲ ಅವರಿಗೋಸ್ಕರ ನಾವು 141 ಕೋಟಿ ರೂಪಾಯಿಗಳನ್ನು cabinet ನಲ್ಲಿ approve ಮಾಡಿ ಬಿಡುಗಡೆ ಮಾಡಿದ್ದೇವೆ. ಆದರೆ, ಮತ್ತೆ ಈ ಸಮಸ್ಯೆ ಉದ್ಭವವಾಗಬಾರದೆಂದರೆ, ಎಲ್ಲೋ ಒಂದು ಕಡೆ ಮಿತಿ ಇರಬೇಕಲ್ಲವೆ? ಅದನ್ನು ಪರಿಗಣಿಸಿ, ಪರಿಶಿಷ್ಟ ಜಾತಿಗೂ income limit ಮಾಡಿದ್ದೇವೆ. High Court ಸಹ ಒಂದು ಕಡೆ judgement pass ಮಾಡಿದೆ. ಮೊದಲು ಆದಾಯ ಮಿತಿ ಇದ್ದದ್ದು 11,000 ರೂಪಾಯಿ. ಅದು ಇವತ್ತು 40,000ದಿಂದ 1 ಲಕ್ಷ ರೂಪಾಯಿಗಳಿಗೇರಿದೆ. ತಾವು ಯಾದವ ಸಮಾಜದ ಬಗ್ಗೆ ಅಲೆಮಾರಿಗಳ ಬಗ್ಗೆ ಬಹಳಷ್ಟು ಕಳಕಳಿಯನ್ನಿಟ್ಟುಕೊಂಡಿದ್ದೀರಿ. ರಾಜ್ಯ ಸರ್ಕಾರವೂ ಸಹ ಆ ಸಮಾಜದ ಬಗ್ಗೆ ಕಳಕಳಿ ಇಟ್ಟುಕೊಂಡಿದೆ. ನಾನು ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಓಡಾಟ ಮಾಡಿದ್ದೇನೆ. ಅವರ ಪರಿಸ್ಥಿತಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಆದ್ದರಿಂದಲೇ ನಮ್ಮ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಆ ಒಂದು ಸಮಾಜದ ಬೆಳವಣಿಗೆಗೆ, ಅಭಿವೃದ್ಧಿಗೆ 50 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಆದರೆ, ಪ್ರತಿ ಸಾರಿ ಈ ಒಂದು ವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗೆ ಉಪಯೋಗವಾಗದೆ ಬಹಳಷ್ಟು institutions ಗೆ ಉಪಯೋಗವಾಗುತ್ತಿತ್ತು. ಇದಕ್ಕೆ ಕಡಿವಾಣ ಹಾಕಬೇಕು. CET level ನಲ್ಲಿಯೇ ಮಕ್ಕಳಿಗೆ ಸರ್ಕಾರ ಹಣವನ್ನು ಕೊಡುವ ನಿಟ್ಟಿನಲ್ಲಿ ಕ್ರಮವನ್ನು ಜರುಗಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ನಿಟ್ಟಿನಲ್ಲಿ ದೊಡ್ಡ ಸಮಸ್ಯೆ ಪರಿಹಾರವಾಗುತ್ತದೆನ್ನುವ ವಿಶ್ವಾಸ ನನಗಿದೆ.

ಶ್ರೀ ಟಿ.ಬಿ. ಜಯಚಂದ್ರ :- ತಾವು ಹೇಳುತ್ತಿರುವಂಥದ್ದು ಈ ಗ್ರೂಪ್ applyಗೆ ಆಗುವುದಿಲ್ಲ. High Court judgement ಏನಿದೆ, 'it will prevent the benefit of reservation being taken away by comparatively affluent sections of Backward Trribes' Affluent section ಎನ್ನುವ ಪ್ರಶ್ನೆ ಬರುತ್ತಲೇ ಇಲ್ಲ. ಅವರಿನ್ನೂ ಕಾಡಿನಲ್ಲಿಯೇ ವಾಸವಿದ್ದಾರೆ. ಅವರಿನ್ನೂ ಊರಿನೊಳಗೇ ಬರಲಿಲ್ಲ. ಶೈಕ್ಷಣಿಕವಾಗಿ ಅವರು ಮುಂದೆ ಬರಲಿಲ್ಲ. ಹೋಗಲಿ, ಅವರಿಗೋಂದು ಕೆಲಸ ಮಾಡಿ ಒಪ್ಪುತ್ತೇನೆ. Backward Tribes ಎಂದರೆ ಗೊಲ್ಲ, ದರವೇಸಿ ಜನರೇನಿದ್ದಾರೆ ಅವರಲ್ಲಿ ಎಷ್ಟು ಜನ benefits ತೆಗೆದುಕೊಂಡಿದ್ದಾರೆ ಎನ್ನುವ ಅಂಕಿ ಅಂಶಗಳನ್ನು ಇವತ್ತಿಲ್ಲದಿದ್ದರೆ ನಾಳೆ ಕೊಡಿ. ಅಂಕಿ ಅಂಶ ತೆಗೆದುಕೊಳ್ಳಿ. Affluent section ಎನ್ನತಕ್ಕಂಥದ್ದು ಆ ಜಾತಿಯಲ್ಲಿ ಇಲ್ಲವೇ ಇಲ್ಲ ಎನ್ನುವುದು ನನ್ನ ವಾದ. ಹಾಗಾಗಿ, ಅವರಿಗೆ ಮಿತಿ ಬೇಡ ಎಂದು ಹೇಳುತ್ತಿದ್ದೇನೆ.

ಶ್ರೀ ಎ. ನಾರಾಯಣಸ್ವಾಮಿ:- ನಾನು ತಮ್ಮ ಮಾತನ್ನು ಒಪ್ಪುತ್ತೇನೆ. ಅಲೆಮಾರಿಗಳಲ್ಲಿ ಅಲೆಮಾರಿಗಳಿದ್ದಾರೆ. ಅಲೆಮಾರಿಗಳಲ್ಲಿ ಅಸ್ಪೃಶ್ಯರಿದ್ದಾರೆ. ಈ ಬಗ್ಗೆ ವಿಶೇಷವಾದ ಯೋಜನೆ ರೂಪಿಸುವ ನಿಟ್ಟಿನಲ್ಲಿ ಸರ್ಕಾರ ಯೋಚನೆ ಮಾಡುತ್ತಿದೆ. ಈ ಹೊರೆ ತಪ್ಪಿಸುವುದಕ್ಕೋಸ್ಕರ ಸರ್ಕಾರ ಕ್ರಮವನ್ನು ಜರುಗಿಸಿದೆ.

ಶ್ರೀ ಸಿದ್ದರಾಮಯ್ಯ:- ಜಯಚಂದ್ರರವರು ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದಾರೆ. Schedule Tribe, Schedule Caste ನವರಿಗೆ ಸಿಗುವ ರೀತಿಯಲ್ಲಿ ಪ್ರವರ್ಗ-1 ಇವರಿಗೂ ಕೂಡ ಯಾರಿಗೂ ಆದಾಯ ಮಿತಿ ಇರಬಾರದು. ಇವರೆಲ್ಲರಿಗೂ scholarship ಕೊಡಬೇಕೆನ್ನುವುದು ಇದೆ. ಒಂದು ಕಡೆ ಕೇಂದ್ರ ಸರ್ಕಾರ Right to Education Act, ಮಾಡಿ 25% ಅವರನ್ನು admit ಮಾಡಿಕೊಳ್ಳಬೇಕೆಂದು ಅವರಿಗೆ ಕೊಡಬೇಕಾದ ಸೀಟ್ ಅನ್ನು ನಾವೇ ಕೊಡುತ್ತೇವೆಂದು ಹೇಳಿದೆ. ಇನ್ನೊಂದು ಕಡೆ ನೀವು ಪ್ರವರ್ಗಕ್ಕೆ ಹೇಗೆ 1 ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿ, ಅಷ್ಟರೊಳಗೆ ಇರುವವರಿಗೆ ಮಾತ್ರ ಕೊಡುತ್ತೇವೆ, ಇಲ್ಲದಿರುವವರಿಗೆ ಕೊಡುವುದಿಲ್ಲವೆಂದು ಹೇಳುವುದಿದೆಯಲ್ಲ, ಇದರಿಂದ free and compulsory education ತತ್ವಕ್ಕೇ ಹೊಡೆತ ಬೀಳುತ್ತದೆ. ಆದ್ದರಿಂದ ಇದನ್ನು ನೀವು insist ಮಾಡುವುದಕ್ಕೆ ಹೋಗಬೇಡಿ, prestige ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಇದನ್ನು ತೆಗೆದು ಹಾಕಿ. ಏಕೆಂದರೆ, ಅಲ್ಲಿ ಗೊಲ್ಲರು, ಬೆಸ್ತರು, ದರವೇಸಿಗಳು ಈ ತರಹದವರಿದ್ದಾರೆ. 1998ರಲ್ಲಿ ನಮ್ಮ ರಾಜ್ಯ ಸರ್ಕಾರ ಬೆಸ್ತರನ್ನೂ ST ಗೆ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. That is pending before the Government of India. When such being the case, on par with SC/ST ಪ್ರಕಾರವೇ, ಇವರಿಗೂ ಕೂಡ ಇರಬೇಕು. ಆದ್ದರಿಂದ ಈ income ceiling ತರುವ ಕೆಲಸವನ್ನು ದಯವಿಟ್ಟು ಮಾಡಕೂಡದು. ನನ್ನ ಪ್ರಕಾರ Backward Classes ಗೂ ಕೂಡ ಮಾಡಬಾರದು. ಸದ್ಯಕ್ಕೆ ಅದು ಇರಲಿ. ಇವರು ಕೇಳಿದ್ದಾರೆ. ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವಾಗ ಅದರ ಬಗ್ಗೆ ಚರ್ಚೆ ಮಾಡೋಣ. ಇದನ್ನು ಮಾತ್ರ straight away ಒಪ್ಪಿಕೊಳ್ಳಬೇಕು. ಆ ಮಿತಿಯನ್ನು ತೆಗೆದು ಹಾಕುತ್ತೇವೆಂದು ಹೇಳಬೇಕು. if you are really committed to poor people, social justice ಎನ್ನುವುದಾದರೆ you make a statement. ಅದನ್ನು ತೆಗೆದು ಹಾಕುತ್ತೇನೆಂದು ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ:- ತೆಗೆದು ಹಾಕುತ್ತೇವೆಂದು ಅವರ ಹತ್ತಿರ ಹೇಳಿಸಿ.

ಶ್ರೀ ಎ. ನಾರಾಯಣಸ್ವಾಮಿ:– ನಾನು ಈಗಾಗಲೇ ಹೇಳಿದ್ದೇನೆ. ಪ್ರವರ್ಗದಲ್ಲಿ ಅಲೆಮಾರಿಗಳು ಹೆಚ್ಚಿಗೆ ಯಾರಿದ್ದಾರೆ, ಅದರಲ್ಲಿ ಅಸ್ಪೃಶ್ಯರು ಯಾರಿದ್ದಾರೆ ಅದರ ಬಗ್ಗೆ ಸರ್ಕಾರ ಒಂದು ಸ್ಪಷ್ಟ ನಿರ್ಧಾರ ತೆಗೆದುಕೊಂಡು ಸಹಕಾರ ಮಾಡುವ ನಿಟ್ಟಿನಲ್ಲಿ ತೀರ್ಮಾನವನ್ನು ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, "ಅಡ್ಡಗೋಡೆ ಮೇಲೆ ದೀಪವಿಟ್ಟ" ಹಾಗೆ ಹೇಳಿದ್ದಾರೆ ಸರಿಯಾಗಿ ಹೇಳಿ.

ಅಧ್ಯಕ್ಷರು:– ಹೀಗೆ ಹೇಳಬೇಕೆಂದು ಒತ್ತಾಯ ಮಾಡಿದರೆ ಹೇಗೆ?

ಶ್ರೀ ಎ. ನಾರಾಯಣಸ್ವಾಮಿ:– ಘೋಷಣೆ ಮಾಡಿ 10 ವರ್ಷಗಳಿಂದ ಒಂದು ರೂಪಾಯಿ ಸಹ ಪೇಮೆಂಟ್ ಮಾಡದೆ ಮಕ್ಕಳಿಗೆ ಅನ್ಯಾಯವಾಗಿತ್ತು. ಅದನ್ನು ನಾವು ಸರಿಪಡಿಸಿದ್ದೇವೆ.

ಅಧ್ಯಕ್ಷರು:– ಇದೇ ತರಹವೇ ಉತ್ತರ ಕೊಡಬೇಕೆಂದು ಮಂತ್ರಿಯವರನ್ನು ಕೇಳಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ:– ಕೊಡಿ ಎಂದಲ್ಲ, ಬಡವರ ಪರವಾಗಿ ಹೇಳುತ್ತಿದ್ದೇವೆ. ಸರ್ಕಾರದವರು ತಪ್ಪು ಮಾಡಬೇಡಿ ಎಂದು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ:– ಘೋಷಣೆಗಳು ಸಮಾಜವನ್ನು ಪರಿವರ್ತನೆ ಮಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ:– ಬಡವರಿಗೆ ಅನ್ಯಾಯ ಮಾಡಬೇಡಿ ಎಂದು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ: ವಾಸ್ತವವಾಗಿ ಶೈಕ್ಷಣಿಕವಾಗಿ ಸರ್ಕಾರ ಉಪಯುಕ್ತವಾಗಿ ಏನು ಕೆಲಸ ಮಾಡಬೇಕು, ಮಾತು ಕೊಟ್ಟ ಹಾಗೆ ಕೆಲಸ ಏನು ಮಾಡಬೇಕೋ ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ: ಹಾಗಾದರೆ ಒಂದು ಕೆಲಸ ಮಾಡಿ. ಅವರ ಜನಸಂಖ್ಯೆಗನುಗಣವಾಗಿ ಶಿಕ್ಷಣವಾಗಿದೆಯೇ ಎಂಬ ಅಂಕಿ ಅಂಶ ಕೊಡಿ.

ಶ್ರೀ ಎ. ನಾರಾಯಣಸ್ವಾಮಿ: ನಾನು ತಮಗೆ ನೇರವಾಗಿ ಸದನದಲ್ಲಿ ಹೇಳಿದ್ದೇನೆ. ಕಾಡುಗೊಲ್ಲರ ಸಮಸ್ಯೆ ಬೇರೆ ಇದೆ, ಊರು ಗೊಲ್ಲರ ಸಮಸ್ಯೆ ಬೇರೆ ಇದೆ. ಇಡೀ ರಾಜ್ಯದಲ್ಲಿ ನಾನು ಓಡಾಡಿದ್ದೇನೆ ಖಂಡಿತವಾಗಿಯೂ ಆ ಸಮಸ್ಯೆಗೆ ಪರಿಹಾರವನ್ನು ಹುಡುಕುತ್ತೇವೆ.

ಶ್ರೀ. ಟಿ.ಬಿ. ಜಯಚಂದ್ರ: Tribal character ಏನಾದರೂ ಕರ್ನಾಟಕದಲ್ಲಿ ಇದೆ ಎಂದರೆ ಅದು ಗೊಲ್ಲ ಜಾತಿಯವರಿಗೆ ಮಾತ್ರ, ಅವರನ್ನು S.T. ಎಂದು treat ಮಾಡಬೇಕಾಗಿತ್ತು. "Backward Tribe ಆಗಿದ್ದವರಿಗೆ ಆ ಬೆನೆಫಿಟ್ ಕೊಡುವುದಿಲ್ಲವೆಂದರೆ ಹೇಗೆ? ಅದಕ್ಕೆ ನೀವು Income limit ಹಾಕಿದರೆ ಹೇಗೆ? ಹೀಗಾದರೆ ಇನ್ನು 100 ವರ್ಷಗಳಾದರೂ ಕೂಡ ಅವರು ಅದೇ ಮಟ್ಟದಲ್ಲಿರುತ್ತಾರೆ. ದಯಮಾಡಿ, ಇದನ್ನು ತೆಗೆದು ಹಾಕಿ.

12. ವಿಷಯ : ಎಸ್.ಎಂ. ಕೃಷ್ಣಾ ನಗರ, ಬಿದ್ನಾಳ್ ನೇಕಾರ ನಗರ ಭಾಗದಲ್ಲಿ ಪೊಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ

ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ-ದಾರವಾಡ ಪೂರ್ವ): ಮಾನ್ಯ ಅಧ್ಯಕ್ಷರೆ, ಎಸ್.ಎಂ. ಕೃಷ್ಣಾ ನಗರ, ಬಿದ್ನಾಳ್ ನೇಕಾರ ನಗರ ಭಾಗದಲ್ಲಿ ಪೊಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿ ಹಾಗು ಗೃಹ ಮತ್ತು ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಅಶೋಕ್ (ಉಪಮುಖ್ಯಮಂತ್ರಿ ಹಾಗೂ ಗೃಹ ಮತ್ತು ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದ ಕಸಬಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಎಸ್.ಎಂ. ಕೃಷ್ಣನಗರದಲ್ಲಿ ಪೊಲೀಸ್ ಠಾಣೆ ಸೃಜಿಸುವ ಸಂಬಂಧ ಪರಿಶೀಲಿಸಲಾಗಿದೆ. ಹುಬ್ಬಳ್ಳಿ ನಗರದ ಕಸಬಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಎಸ್.ಎಂ. ಕೃಷ್ಣನಗರದಲ್ಲಿ ಪೊಲೀಸ್ ಠಾಣೆ ಸೃಜನೆ ಬಗ್ಗೆ ಅಪರಾಧಗಳ ಸಂಖ್ಯೆ ಸೂಕ್ಷ್ಮತೆ ಇತ್ಯಾದಿಗಳನ್ನು ಗಮನಿಸಿದಾಗ ಸಮರ್ಥನೆ ಇಲ್ಲದ ಕಾರಣ ಸದರಿ ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ.

ರಾಜ್ಯದಲ್ಲಿ ಬಹಳಷ್ಟು ಕಡೆ ಪೊಲೀಸ್ ಠಾಣೆ ಸ್ಥಾಪನೆ ಮಾಡಲು ಕೋರಿಕೆಗಳು ಇರುತ್ತವೆ. ರಾಜ್ಯದ ಸಂಪನ್ಮೂಲ ಕೊರತೆಯಿಂದ ಒಂದೇ ಹಂತದಲ್ಲಿ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಹಂತ ಹಂತವಾಗಿ ಸ್ಥಾಪನೆ ಮಾಡಲಾಗುತ್ತದೆ.

ಶ್ರೀ ಆರ್. ಅಶೋಕ್: ಪೊಲೀಸ್ ಠಾಣೆ ಮಂಜೂರಾತಿಗಾಗಿ ಈಗಾಗಲೇ ಮನವಿಯನ್ನು ಕೊಟ್ಟಿದ್ದಾರೆ. ಈಗಾಗಲೇ ಎಸ್.ಎಂ. ಕೃಷ್ಣಾ ನಗರದಲ್ಲಿ ಪೊಲೀಸ್ ಠಾಣೆ ಬೇಕೆಂದು ತಾವು ಕೇಳಿದ್ದೀರಿ. ಆದರೆ, ಈಗಾಗಲೇ ಎಸ್.ಎಂ. ಕೃಷ್ಣಾ ನಗರದಲ್ಲಿ crime rate ಅಷ್ಟಿಲ್ಲ. 2006ರಲ್ಲಿ ಸುಮಾರು 13 crime rate ಇದೆ. 2007ರಲ್ಲಿ crime

rate 19 ಇದೆ. 2008ರಲ್ಲಿ crime rate 17 ಇದೆ. ಅಲ್ಲಿ ಪೊಲೀಸ್ ಠಾಣೆ ಮಂಜೂರು ಆಗಬೇಕೆಂದರೆ, ಆ ಪೊಲೀಸ್ station ನಲ್ಲಿ ಸುಮಾರು 300 ಪ್ರಕರಣಗಳು ದಾಖಲಾಗಿರಬೇಕು. ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಎಸ್.ಎಂ. ಕೃಷ್ಣಾ ನಗರ ಪೊಲೀಸ್ ಠಾಣೆಯಲ್ಲಿ ಆ ತರಹ ಯಾವುದೂ ಇಲ್ಲ. ಅಲ್ಲಿ ಸುಮಾರು 13 ಪ್ರಕರಣ ಮಾತ್ರ ಇವೆ. 300 ಅಪರಾಧಗಳಾದಾಗ ಮಾತ್ರ ಅಲ್ಲೊಂದು ಠಾಣೆ ಕೊಡುವುದಕ್ಕೆ ಅವಕಾಶವಿದೆ. ಅಲ್ಲಿ 1500 ಮನೆಗಳು ಮಾತ್ರ ಇವೆ. ಆ ಕಾರಣದಿಂದ ಅಲ್ಲಿ ಠಾಣೆ ಮಂಜೂರು ಮಾಡುವುದಕ್ಕೆ ಕಷ್ಟವಾಗುತ್ತದೆ. ಅಲ್ಲಿ police out-post ಮಾಡುವ ಬಗ್ಗೆ ಯೋಚನೆ ಮಾಡಿ, police ou-post ಮಾಡಿಕೊಡುವುದಕ್ಕೆ. ಅಲ್ಲಿಗೆ ಇನ್ನೂ ಹೆಚ್ಚು ಸಿಬ್ಬಂದಿ ಹಾಕುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವೀರಭದ್ರಪ್ಪ ಹಾಲಹರವಿ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಸಚಿವರು ಉತ್ತರ ಹೇಳಿದ್ದಾರೆ. ಮತ್ತೆ ಮತ್ತೆ clarification ಬೇಡ. ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ವೀರಭದ್ರಪ್ಪ ಹಾಲಹರವಿ: ಅಲ್ಲಿನ ವಾಸ್ತವಿಕ ಸ್ಥಿತಿಗತಿ ಬಗ್ಗೆ ಮಾತನಾಡಲಿಕ್ಕೆ ನನಗೆ ಅವಕಾಶ ಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಇದರಲ್ಲಿ ಮಾತನಾಡಲಿಕ್ಕೆ ಇಲ್ಲ. ನೀವು ಡಿಮ್ಯಾಂಡ್ ಮೇಲೆ ಮಾತನಾಡುವಾಗ ಈ ವಿಚಾರವನ್ನು ಮಾತನಾಡಿ. clarification ಕೇಳುವುದಕ್ಕೇನಾದರೂ ಇದ್ದರೆ ಕೇಳಿ. ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ವೀರಭದ್ರಪ್ಪ ಹಾಲಹರವಿ: ಮಾನ್ಯ ಅಧ್ಯಕ್ಷರೆ, 4 ವರ್ಷಗಳಲ್ಲಿ ಇದೇ ಮೊದಲು ಬಾರಿಗೆ ಮಾತನಾಡಲಿಕ್ಕೆ ನನಗ ಅವಕಾಶ ಸಿಕ್ಕಿದೆ. ದಯಮಾಡಿ, ಎರಡು ನಿಮಿಷ ಅವಕಾಶ ಕೊಡಿ. ಅಲ್ಲಿನ ವಾಸ್ತವ ಸ್ಥಿತಿಗತಿಗೆ ತಕ್ಕಹಾಗೆ ಮಾನ್ಯ ಸಚಿವರು ಕೊಟ್ಟ ಉತ್ತರ ಸಮಂಜಸವಾಗಿಲ್ಲ. ಹುಬ್ಬಳ್ಳಿಯ ನನ್ನ ಮತಕ್ಷೇತ್ರದಲ್ಲಿ ಒಟ್ಟು 9 ಲಕ್ಷ 72 ಸಾವಿರ ಜನಸಂಖ್ಯೆ ಇದೆ. ಅಲ್ಲಿ ಆರು police stations ಇದೆ. ಭೌಗೋಳಿಕವಾಗಿ ವ್ಯಾಪಕವಾಗಿ ಬೆಳೆದಿರುವುದರಿಂದ ಈಗ ಕಸಬಾ ಪೇಟೆಯಲ್ಲಿ ಬರತಕ್ಕಂಥ ಎಸ್.ಎಂ. ಕೃಷ್ಣಾ ನಗರ ಮತೀಯವಾಗಿ ಅತೀ ಸೂಕ್ಷ್ಮವಾಗಿರುವ ಪ್ರದೇಶವಾಗಿದೆ. ಆದ್ದರಿಂದ, ನಾನು ಆ ಕ್ಷೇತ್ರದಲ್ಲಿ ಓಡಾಡುವಾಗ ಸಾಕಷ್ಟು ಮತೀಯ ಗಲಭೆಗಳಾಗುವ ಸಂದರ್ಭಗಳಿರುವುದರಿಂದ ನಾನು 2008ರಲ್ಲಿ ದಿವಂಗತ ಮಾನ್ಯ

ಡಾ: ವಿ.ಎಸ್. ಆಚಾರ್ಯರವರು ಗೃಹ ಮಂತ್ರಿಯಾಗಿದ್ದಾಗ ಈ ಬೇಡಿಕೆ ಇಟ್ಟಿದೆ. ಅವರು ಅಶೋಕನಗರ ಠಾಣೆಯನ್ನು ಮಂಜೂರು ಮಾಡಿಕೊಟ್ಟರು. ಅದು ನನ್ನ ಕ್ಷೇತ್ರದಲ್ಲಿ ಬರುವುದಿಲ್ಲ. ಈಗ ಹಳೇಯ ಹುಬ್ಬಳ್ಳಿ ಪೊಲೀಸ್ ಠಾಣೆ ಇದೆ. 2 ಲಕ್ಷದ 50 ಸಾವಿರ ಜನಸಂಖ್ಯೆ ಆ ಠಾಣೆಯ ವ್ಯಾಪ್ತಿಯಲ್ಲಿದೆ. ಅದನ್ನು ಒಡೆದು ಎಸ್.ಎಂ. ಕೃಷ್ಣಾ ನಗರದಲ್ಲೊಂದು ಪೊಲೀಸ್ ಠಾಣೆ ತೆರೆಯಬೇಕೆನ್ನುವುದು ನಮ್ಮ ಬೇಡಿಕೆ ಇದೆ. ಅದು ನಗರ ಪ್ರದೇಶವಾಗಿರುವುದರಿಂದ ಅಕ್ಕಪಕ್ಕದ ತಾಲ್ಲೂಕು, ಜಿಲ್ಲೆಯಿಂದ ಪ್ರತಿದಿನ ಲಕ್ಷಾಂತರ ಜನರು ಬಂದು ಹೋಗುತ್ತಾರೆ. ಅಪರಾಧಿಕ ಪ್ರಕರಣಗಳು ಮತ್ತು ಮಹಿಳೆಯರ chain ಕೀಳುವ ಪ್ರಕರಣಗಳು ಅಲ್ಲಿ ವ್ಯಾಪಕವಾಗಿ ನಡೆಯುತ್ತಿವೆ. ಆದ್ದರಿಂದ ಅದನ್ನೆಲ್ಲಾ ನಿಯಂತ್ರಣ ಮಾಡಲಿಕ್ಕೆ ಎಸ್.ಎಂ. ಕೃಷ್ಣ ನಗರದಲ್ಲಿ ಒಂದು ಠಾಣೆ ಸ್ಥಾಪಿಸಬೇಕು. ಹಳೆಯ ಹುಬ್ಬಳ್ಳಿ ಠಾಣೆ 2 ಲಕ್ಷದ 50 ಸಾವಿರ ಜನಸಂಖ್ಯೆಯನ್ನು ಹೊಂದಿ ಅದು 10 ಕಿ.ಮೀ. ವ್ಯಾಪ್ತಿಯ ಭೌಗೋಳಿಕ ಪ್ರದೇಶವನ್ನು ಹೊಂದಿದೆ. ಆ ಠಾಣೆಯನ್ನು ಒಡೆದು ಎಸ್.ಎಂ. ಕೃಷ್ಣಾ ನಗರದಲ್ಲಿ ಒಂದು ಠಾಣೆಯನ್ನು ಸ್ಥಾಪಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಗೃಹ ಸಚಿವರಲ್ಲಿ ನನ್ನ ಬೇಡಿಕೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ಕೊಟ್ಟುಬಿಡಿ.

ಶ್ರೀ ಆರ್. ಅಶೋಕ್: ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಮತ್ತೊಮ್ಮೆ ತಾವು ಕೇಳಿರುವುದರಿಂದ ಅಂಕಿ ಅಂಶಗಳನ್ನು ತೆಗೆದುಕೊಂಡು ಅಲ್ಲಿ ಎಷ್ಟು ಅಪರಾಧವಾಗುತ್ತಿದೆ, ಎಷ್ಟು ಜನಸಂಖ್ಯೆ ಇದೆ. ಅಲ್ಲಿ ಪೊಲೀಸ್ ಠಾಣೆಯ ಅವಶ್ಯಕತೆ ಇದೆಯೇ? ಎನ್ನುವ ಬಗ್ಗೆ ಮತ್ತೊಂದು ಸಾರಿ ಪರಿಶೀಲನೆ ಮಾಡುತ್ತೇನೆ ತಾವು ಮನವಿ ಕೊಟ್ಟಿದ್ದೀರಿ. ನಮ್ಮ ಪೊಲೀಸ್ ಇಲಾಖೆಯ ಕೆಲವು ನೀತಿ ನಿಯಮಗಳಿವೆ. ಠಾಣೆ ತೆರೆಯಬೇಕಾದರೆ ಇಷ್ಟು ಅಪರಾಧಗಳಾಗಿರಬೇಕು. ಇಷ್ಟು, ಚದರ ಕಿಲೋ ಮೀಟರ್ ಇರಬೇಕಾಗುತ್ತದೆ. ಮತ್ತು population ಇಂತಿಷ್ಟು ಇರಬೇಕೆಂದಿದೆ.

ಅಧ್ಯಕ್ಷರು: ಅಪರಾಧವಾಗಬೇಕೆನ್ನುವುದನ್ನು ಬಿಟ್ಟುಬಿಡಿ. ಅಪರಾಧ ಮಾಡಬೇಕೆನ್ನುವ ನಿಯಮ ಸರಿ ಇಲ್ಲ.

ಶ್ರೀ ಆರ್. ಅಶೋಕ್: ಅದರ ಆಧಾರದ ಮೇಲೆಯೇ ಪೊಲೀಸ್ station ಮಂಜೂರು ಮಾಡಿ ಎಂದು ಕೇಳುವುದು. ಎಲ್ಲಿ ಅಪರಾಧಗಳು ಜಾಸ್ತಿಯಾಗುತ್ತವೆಯೋ

ಅಲ್ಲಿ police station ಮಂಜೂರು ಮಾಡಬೇಕು.

ಅಧ್ಯಕ್ಷರು: priventive ಮಾತ್ರ ತೆಗೆದುಕೊಳ್ಳಿ.

ಶ್ರೀ ಆರ್. ಅಶೋಕ್: ಅಪರಾಧ ಕಡಿಮೆಯಾದ ತಕ್ಷಣ police stations ಕಡಿಮೆಯಾಗುತ್ತವೆ. ಆದ್ದರಿಂದ ತಾವು ಹೇಳಿದ ವಿಷಯವನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ವೀರಭದ್ರಪ್ಪ ಹಾಲಹರವಿ: Thank you.

13. ವಿಷಯ : ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಹುದ್ದೆಗಳು ಖಾಲಿ ಇರುವ ಬಗ್ಗೆ

ಶ್ರೀ ಹೆಚ್. ಹಾಲಪ್ಪ (ಸೊರಬ): ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಹುದ್ದೆಗಳು ಖಾಲಿ ಇರುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿ ಒಂದು ಸಾರ್ವಜನಿಕ ಆಸ್ಪತ್ರೆ ಹಾಗೂ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆ/ಕೇಂದ್ರಗಳಲ್ಲಿ ಮಂಜೂರಾದ, ಭರ್ತಿ ಮಾಡಿದ ಹಾಗೂ ಖಾಲಿ ಹುದ್ದೆಗಳ ವಿವರಗಳು ಕೆಳಕಂಡಂತಿವೆ:

ಕ್ರಮ ಸಂಖ್ಯೆ	ಆಸ್ಪತ್ರೆ/ಕೇಂದ್ರ	ಮಂಜೂರಾದ ಹುದ್ದೆಗಳ ಸಂಖ್ಯೆ		ಭರ್ತಿ ಮಾಡಿ ಹುದ್ದೆಗಳ ಸಂಖ್ಯೆ		ಖಾಲಿ ಹುದ್ದೆಗಳ ಸಂಖ್ಯೆ	
		ವೈದ್ಯರು	ಸಿಬ್ಬಂದಿ	ವೈದ್ಯರು	ಸಿಬ್ಬಂದಿ	ವೈದ್ಯರು	ಸಿಬ್ಬಂದಿ
1.	ತಾಲ್ಲೂಕು ಆಸ್ಪತ್ರೆ, ಸೊರಬ	06	45	05	16	01	29
2.	17 ಪ್ರಾಥಮಿಕ ಆರೋಗ್ಯ ಮಿತ ಕೇಂದ್ರಗಳು	17	172	11	86	06	86

ಸೊರಬ ತಾಲ್ಲೂಕು ಆಸ್ಪತ್ರೆಯು ಪ್ರಸ್ತುತ 50 ಹಾಸಿಗೆಗಳ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಆಸ್ಪತ್ರೆಯನ್ನು 100 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲಾಗಿದ್ದು, ಅದಕ್ಕನುಗುಣವಾಗಿ ಕಟ್ಟಡ ನಿರ್ಮಾಣ ಮಾಡಬೇಕಿದೆ. ಪ್ರಸ್ತುತ ಈ ಆಸ್ಪತ್ರೆಗಳಲ್ಲಿ 5 ತಜ್ಞ ವೈದ್ಯರು ಅಂದರೆ, ಇಬ್ಬರು ಸ್ತ್ರೀರೋಗ ತಜ್ಞರು,

ತಲಾ ಒಬ್ಬರಂತೆ ಅರೆವಳಿಕೆ, ಕೀಲು, ಮೂಳೆ ತಜ್ಞತೆ ಹಾಗೂ ಕಿವಿ, ಮೂಗು, ಗಂಟಲು ತಜ್ಞತೆಯಲ್ಲಿ ಕಾರ್ಯನಿರ್ವಹಿತ್ತಿದ್ದಾರೆ. ಹಾಗೂ ಒಂದು ದಂತ ವೈದ್ಯಾಧಿಕಾರಿ ಹುದ್ದೆ ಖಾಲಿ ಇದೆ.

ಸೊರಬ ತಾಲ್ಲೂಕಿನ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ 6 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಈ ಎಲ್ಲಾ 6 ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ದಿನಾಂಕ: 27-6-2012 ರಂದು ಅನುಮತಿ ನೀಡಲಾಗಿದೆ.

ವಿವಿಧ ವೃಂದಗಳ ಇತರೆ ಖಾಲಿ ಹುದ್ದೆಗಳ ಪೈಕಿ, ಗ್ರೂಪ್-ಡಿ ವೃಂದಕ್ಕೆ ಸೇರಿದ ಹುದ್ದೆಗಳು ಕ್ರಮವಾಗಿ ಸೊರಬ ತಾಲ್ಲೂಕು ಆಸ್ಪತ್ರೆಯಲ್ಲಿ 10 ಹಾಗೂ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24 ಆಗಿದೆ. ಹೊರ ಗುತ್ತಿಗೆ ಸೇವೆ ಪಡೆಯುವ ಮೂಲಕ ತಾಲ್ಲೂಕು ಆಸ್ಪತ್ರೆಯಲ್ಲಿ ಸ್ವಚ್ಚತಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ವಿವಿಧ ಆಸ್ಪತ್ರೆಗಳು/ಕೇಂದ್ರಗಳಲ್ಲಿ ಖಾಲಿ ಇರುವ ಇತರೆ ಸಿಬ್ಬಂದಿಯ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1. ಪ್ರಸ್ತುತ 735 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹಾಗೂ 314 ಕಿರಿಯ ಅರೋಗ್ಯ ಪುರುಷ ಸಹಾಯಕರ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿ ಮೂಲಕ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದ್ದು, ಆಯ್ಕೆ ಪ್ರಕ್ರಿಯೆಯು ಜಾರಿಯಲ್ಲಿದೆ.

2. ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಸ್ತುತ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮಕ್ಕೈಗೊಳ್ಳಲಾಗಿ, ಆಯ್ಕೆಯಾದ 224 ಅಭ್ಯರ್ಥಿಗಳ ಪೈಕಿ ಇತ್ತಿಚೆಗೆ 210 ಆಭರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ.

3. ಇಲಾಖೆಯಲ್ಲಿ ಒಟ್ಟು 13,965 ಗ್ರೂಪ್-ಡಿ ನೌಕರರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 4067 ಹುದ್ದೆಗಳು ಖಾಲಿಯಿವೆ. ಸದರಿ ಖಾಲಿ ಹುದ್ದೆಗಳ ಪೈಕಿ 2323 ಹುದ್ದೆಗಳನ್ನು ನೇರ ನೇವಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆಯು ಜಾರಿಯಲ್ಲಿದೆ.

ಶ್ರೀ ಹೆಚ್. ಹಾಲಪ್ಪ: ಉತ್ತರವನ್ನು ಕೊಟ್ಟಿದ್ದಾರೆ. ನಾನು ಡಾಕ್ಟರುಗಳ ಕೊರತೆ ಬಗ್ಗೆ ಕೇಳಿದ್ದೆ ಸ್ವಲ್ಪ ತಪ್ಪು ಮಾಹಿತಿ ಇದೆ. ಏಕೆ ಇದು ಈ ಹಂತದಲ್ಲಿ ಆಯಿತೋ ಗೊತ್ತಾಗಲಿಲ್ಲ. ಒಳ್ಳೆಯ ಅಧಿಕಾರಿಗಳು, ಒಳ್ಳೆಯ ಮಂತ್ರಿಗಳು ಬಂದಿದ್ದೀರಿ. 35+1 DHO ಒಟ್ಟು 36 ವೈದ್ಯರ ಕೊರತೆ ಇದೆ. ನನ್ನ ತಾಲ್ಲೂಕಿನಲ್ಲಿ 16 ಡಾಕ್ಟರುಗಳು ಮಾತ್ರ ಇದ್ದಾರೆ. 22 ಹುದ್ದೆ ಖಾಲಿ ಇವೆ ಎಂಬುದು ನನಗಿರುವ ಮಾಹಿತಿಯಾಗಿದೆ. ತಾವು ಬೇರೆ ಮಾಹಿತಿ ಕೊಟ್ಟಿದ್ದೀರಿ. ಅದರ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಡೆಂಗ್ಯು ಜ್ವರ ನಮ್ಮ ತಾಲ್ಲೂಕಿನಲ್ಲಿ ಕಾಣಿಸಿಕೊಂಡಿರುವ ಬಗ್ಗೆ ಹೇಳುತ್ತೇನೆ. ಡಾಕ್ಟರುಗಳ ಕೊರತೆ ಇರುವುದು ಒಂದು ವಿಷಯ. ಡೆಂಗ್ಯು ಜ್ವರ ಪತ್ತೆ ಹಚ್ಚುವಂಥ ಪರೀಕ್ಷಾ ಕೇಂದ್ರಗಳನ್ನು ತುರ್ತಾಗಿ ಸ್ಥಾಪಿಸಬೇಕು. ಮಾಮೂಲಿ ಪರೀಕ್ಷಾ ಕೇಂದ್ರಗಳಲ್ಲಿ ಡೆಂಗ್ಯು ಜ್ವರ ಗೊತ್ತಾಗುವುದಿಲ್ಲ. ಜಿಲ್ಲಾ ಕೇಂದ್ರಕ್ಕೆ ಕಳುಹಿಸಬೇಕು. ಅಥವಾ ಮಣಿಪಾಲಕ್ಕೆ ಕಳುಹಿಸಬೇಕು. ಬೆಂಗಳೂರಿಗೆ ಹೋಗಬೇಕೆಂದು ಕೇಳಿದ್ದೇನೆ. ಆದ್ದರಿಂದ ತುರ್ತಾಗಿ ಒಂದು ಟೀಂ ಅನ್ನು ಕಳುಹಿಸಲಿಕ್ಕೆ ಅಥವಾ ಒಂದು ಲ್ಯಾಬ್ ಅನ್ನು ತುರ್ತಾಗಿ ಮಾಡಲಿಕ್ಕೆ ಸಾಧ್ಯವಿದೆಯೇ? ಸಾಧ್ಯವಿದ್ದರೆ ಅದನ್ನು ಮಾಡಬೇಕು. ನಮ್ಮಲ್ಲಿನ ಒಂದು ಊರಿನಲ್ಲಿ ಡೆಂಗ್ಯು ಜ್ವರ 50ಕ್ಕಿಂತ ಹೆಚ್ಚು ಜನರಿಗೆ ಬಂದಿದೆ. 3 ಜನ ಮಕ್ಕಳು ತೀರಿ ಹೋಗಿದ್ದಾರೆ. ಅವರು ಸ್ಕೂಲಿಗೆ ಹೋಗಿ ಬದುಕಿ ಬಾಳಬೇಕಾದ ಮಕ್ಕಳು. ಕೂಡಲೇ ಆ ಡೆಂಗ್ಯು ಜ್ವರವನ್ನು ಕಂಡುಹಿಡಿಯುವಂಥ ರಕ್ತ ಪರೀಕ್ಷಾ ಕೇಂದ್ರವನ್ನು ಪ್ರಾರಂಭಿಸಬೇಕೆಂದು ನಾನು ಮನವಿ ಮಾಡುತ್ತೇನೆ. ತಾವು ಕೂಡ ಆದೇಶ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ :– ಮಾನ್ಯ ಅಧ್ಯಕ್ಷರೆ, ವೈದ್ಯರ ಕೊರತೆ ಇರುವ ಬಗ್ಗೆ ನಿನ್ನೆ, ಇವತ್ತು ಬೆಳಿಗ್ಗೆಯಿಂದ ಸಾಕಷ್ಟು ಚರ್ಚೆಯಾಗಿದೆ. ಕೊರತೆ ನೀಗಿಸುವ ದೃಷ್ಟಿಯಿಂದ specialist ಅನ್ನು ತುಂಬುವುದಕ್ಕೆ ಕಾನೂನು ಬರುತ್ತಿದೆ, ಅದು ಆದ ತಕ್ಷಣವೇ ಡಾಕ್ಟರ್ ಹುದ್ದೆ ತುಂಬುವ ಪ್ರಯತ್ನ ಮಾಡುತ್ತೇನೆ. ಅದೇ ರೀತಿ MBBS ವೈದ್ಯಾಧಿಕಾರಿಗಳ ದೃಷ್ಟಿಯಿಂದ ಅವರನ್ನು contract basis ಮೇಲೆ ತುಂಬಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅನುಮತಿ ಕೊಟ್ಟಿದ್ದೇವೆ. ಅಕಸ್ಮಾತ್ ಅದರಲ್ಲೇನಾದರೂ ದೊರೆತರೆ ನಿಶ್ಚಿತವಾಗಿ ಮಾನ್ಯ ಸದಸ್ಯರ ಸೊರಬ ತಾಲ್ಲೂಕು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೇವೆ. ಅದನ್ನು ಹೊರತುಪಡಿಸಿ, 735 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರನ್ನು ಮತ್ತು 314 ಕಿರಿಯ ಪುರುಷ ಆರೋಗ್ಯ ಸಹಾಯಕರನ್ನು ಸರ್ಕಾರ

ನೇಮಕ ಮಾಡಿಕೊಳ್ಳುತ್ತಿದೆ. ಇದೆಲ್ಲಾ ಆದಾಗ ಅವರನ್ನು ಕಳುಹಿಸಿಕೊಡುವ ಕೆಲಸ ಮಾಡಲಾಗುತ್ತದೆ. ಮುಖ್ಯವಾಗಿ ಮಾನ್ಯ ಸದಸ್ಯರಾದಂಥ ಹಾಲಪ್ಪನವರು ಡೆಂಗ್ಯು ಜ್ವರದ ಬಗ್ಗೆ ಪ್ರಸ್ತಾಪಿಸಿದರು. ಅದರ ಬಗ್ಗೆ ಅವರ ತಾಲ್ಲೂಕಿನಲ್ಲಿ ವಿಶೇಷವಾದಂಥ ಪ್ರಕರಣಗಳು ಕಂಡು ಬರುತ್ತಿದೆ ಎಂದು ಹೇಳಿದರು. ನಿನ್ನೆಯೂ ಕೂಡ ಮಾಹಿತಿ ಕೇಳಿದ್ದರು. ಅವರ ತಾಲ್ಲೂಕಿನಲ್ಲಿ ಒಂದು ಡೆಂಗ್ಯು ಜ್ವರದ ಪ್ರಕರಣದಿಂದ ಸಾವಾಗಿದೆ. ಅಲ್ಲಿ ಒಂದು ವಿಶೇಷ Laboratory set up ಮಾಡುವ ಬಗ್ಗೆ ಅವರು ಕೇಳಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಸರ್ವೆ ಮಾಡಿದ್ದೇವೆ. ಅಂಥ ಪ್ರಕರಣ ಕಂಡು ಬಂದ ತಕ್ಷಣವೇ laboratory ಯನ್ನು ಅಲ್ಲಿ temporary ಯಾಗಿ set up ಮಾಡುವ ದೃಷ್ಟಿಯಿಂದ ಕ್ರಮ ಕೈಗೊಳ್ಳಲಾಗುತ್ತದೆ.

14. ವಿಷಯ : ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮಾತೃ ಇಲಾಖೆಗೆ ವಾಪಸ್ ಕರೆಸಿಕೊಳ್ಳದಿರುವ ಬಗ್ಗೆ.

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ) :- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮಾತೃ ಇಲಾಖೆಗೆ ವಾಪಸ ಕರೆಸಿಕೊಳ್ಳದಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :- ಮಾನ್ಯ ಅಧ್ಯಕ್ಷರೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಹ ಶಿಕ್ಷಕರುಗಳನ್ನು ಬೋಧಕೇತರ ಕಾರ್ಯಗಳಿಗೆ/ ಕಛೇರಿಗಳಿಗೆ ನಿಯೋಜಿಸುವುದರಿಂದ ಶಾಲಾ ಕಾಲೇಜುಗಳಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಉಂಟಾಗುವ ತೊಂದರೆಯನ್ನು ಗಮನಿಸಿ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳ ಹಿನ್ನಲೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ : ಇಡಿ 300 ಡಿಜಿಡಿ 2011 ದಿನಾಂಕ : 08-11-2011ರಲ್ಲಿ ಪದವಿ ಪೂರ್ವ ಕಾಲೇಜುಗಳ/ಪ್ರಾಥಮಿಕ/ಪ್ರೌಢ ಶಾಲೆಗಳ ಬೋಧಕರನ್ನು ಬೋಧಕೇತರ ಕಾರ್ಯಗಳಿಗೆ/ ಕಛೇರಿಗಳಿಗೆ ನಿಯೋಜನೆ ಮಾಡುವುದನ್ನು ನಿಷೇಧಿಸಲಾಗಿದೆ. ಆದಾಗ್ಯೂ ಕೆಲವು ಬೋಧಕ

ವೃಂದದ ಅಧಿಕಾರಿಗಳು ಬೇರೆ ಬೇರೆ ಇಲಾಖೆಗಳ ಬೋಧಕೇತರ ಹುದ್ದೆಗಳಲ್ಲಿ ನಿಯೋಜನೆಯಲ್ಲಿ ಮುಂದುವರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಇಂತಹ ಅಧಿಕಾರಿ/ಸಿಬ್ಬಂದಿಗಳ ಸೇವೆಯನ್ನು ಶೀಘ್ರದಲ್ಲೇ ಮಾತೃ 'ಇಲಾಖೆಗೆ ಹಿಂಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ.

ಶ್ರೀ ಹೆಚ್.ಎಸ್. ಪ್ರಕಾಶ್ :- ಸನ್ಮಾನ್ಯ ಸಚಿವರನ್ನು ಕೇಳಿದ್ದೇವೆ, ಅವರು ಅತಿ ಶೀಘ್ರ ಎಂದು ಭಾರೀ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಸುಮಾರು ಎರಡೂವರೆ ಮೂರು ವರ್ಷಗಳಿಂದ ಇದೇ ವಿಷಯವನ್ನು ಕೇಳುತ್ತಿದ್ದೇವೆ. ಪರಿಶಿಷ್ಟ ಪಂಗಡಗಳು, ಅಲ್ಪಸಂಖ್ಯಾತರಿರುವಂಥ ಜಾಗದಲ್ಲಿ ಜೂನಿಯರ್ ಕಾಲೇಜು ಇದೆ. ಸರ್ಕಾರ ನಿಗದಿ ಮಾಡಿರುವ ಶುಲ್ಕ 141 ರೂಪಾಯಿಗಳು, ಅಲ್ಲಿಯ principal ರವರು 300–400 ರೂಪಾಯಿಗಳಷ್ಟು ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆ. ಜಾಸ್ತಿ ತೆಗೆದುಕೊಳ್ಳುವುದಕ್ಕೆ ಕಾರಣ ಏನು ಎನ್ನುವ ಬಗ್ಗೆ writing ನಲ್ಲೂ ಕೊಟ್ಟಿದ್ದಾರೆ. shortage ಇದೆ ಎಂದು ನಾವು contract ಮೇಲೆ lecturers ಅನ್ನು appoint ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಇಲಾಖೆಯಲ್ಲಿ ಬಹಳಷ್ಟು ಜನ lecturers ಬೇರೆ ಬೇರೆ ಇಲಾಖೆಗಳಿಗೆ deputation ಮೇಲೆ ಹೋಗಿದ್ದಾರೆ. ಆದರೆ, ಈ ಕುರಿತಂತೆ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ ಎರಡೂ ಕೂಡ ಎಲ್ಲೂ ಕೂಡ lecturers ಅನ್ನು deputation ಮೇಲೆ ಕಳುಹಿಸಬಾರದೆಂದು ಹೇಳಿದೆ. ಆದರೂ ಕೂಡ ಶೀಘ್ರ ಎನ್ನುವ ಪದ ಬಳಸಿ ಅತಿ ಶೀಘ್ರ ಮಾಡುತ್ತೇವೆಂದು ಹೇಳುತ್ತಾರೆ. ತಾವು ಅತಿ ಶೀಘ್ರ ಮಾಡುವುದು ಬೇಡ. ಈ ಕೂಡಲೇ deputation ಮೇಲೆ ಬೇರೆ ಇಲಾಖೆಗಳಿಗೆ ನಿಯೋಜನೆಗೊಂಡಿರುವ lecturers ಅನ್ನು ವಾಪಸ್ಸು ಕರೆಸಬೇಕು, ಅಲ್ಲಿ ಮಕ್ಕಳಿಗೆ ಅನ್ಯಾಯವಾಗದ ಹಾಗೆ class ಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಶಿಕ್ಷಕರ ಮತ್ತು ಉಪನ್ಯಾಸಕರ ಖಾಲಿ ಹುದ್ದೆಗಳ ವಿಷಯದಲ್ಲಿ ನಾನು ಸ್ಪಷ್ಟಪಡಿಸಿದ್ದೇನೆ. 1760 ಕ್ಕಿಂತ ಹೆಚ್ಚು ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಈಗಾಗಲೇ ನಡೆದಿದೆ. ಅವರಿಗೆ ಸದ್ಯದಲ್ಲಿಯೇ ನೇಮಕಾತಿ ಆದೇಶ ಕೊಟ್ಟು, ಅವರು ಬೇಗ ಸೇವೆ ಸಲ್ಲಿಸುವ ಕೆಲಸ ಮಾಡುತ್ತಿದ್ದೇವೆ. ಅದುವರೆಗೂ ಅವರ ಕಾಲೇಜಿಗೆ ಅತಿಥಿ ಉಪನ್ಯಾಸಕರ ಸೇವೆಯ ಅವಕಾಶವನ್ನು ಮಾಡಿಕೊಡುತ್ತೇವೆ. ಉಪನ್ಯಾಸಕರನ್ನು ನಿಯೋಜನೆ ಮೇಲೆ ಬೇರೆ ಇಲಾಖೆಗೆ ಕಳುಹಿಸಿರುವ ಸಂಖ್ಯೆ ಬಹಳ ಕಡಿಮೆ ಇದೆ. ಅದರಲ್ಲೂ ವಿಶೇಷವಾಗಿ ವಯಸ್ಕರ ಶಿಕ್ಷಣ ಇಲಾಖೆ ಇಂಥ ಕಡೆಯಲ್ಲಿದ್ದಾರೆ. ಹಾಗಾಗಿ,

ಅಲ್ಲಿನ Junior College ನಲ್ಲಿ ಉಪನ್ಯಾಸಕರ ಕೊರತೆ ಇದೆ ಎನ್ನುವುದನ್ನು ಗಮನಕ್ಕೆ ತರುತ್ತಿದ್ದಾರೆ. ಅತಿ ಶೀಘ್ರದಲ್ಲಿ ಅಲ್ಲಿಗೆ ತಕ್ಷಣ ಪರ್ಯಾಯ ವ್ಯವಸ್ಥೆಯನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಎಸ್. ಪ್ರಕಾಶ್ :-ನಿಯೋಜನೆ ಮೇರೆಗೆ ಹೋದವರನ್ನು ವಾಪಸ್ ಕರೆಸಿಕೊಳ್ಳಿ, ತೊಂದರೆ ಏನಾಗಿದೆ ? ಒಂದು ಸಾರಿ ಅವರು lecturer ಕೆಲಸ ಬಿಟ್ಟರೆ ಯಾವುದೇ ಕಾರಣಕ್ಕೂ ಪುನಃ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ :- ಪ್ರಾಥಮಿಕ ಶಾಲೆಯ ಶಿಕ್ಷಕರು ಕೂಡ ಈ ರೀತಿ ನಿಯೋಜನೆ ಮೇರೆಗೆ ಬೇರೆ ಕಡೆಗೆ ಹೋಗಿದ್ದಾರೆ. ಅವರೆಲ್ಲರನ್ನೂ ವಾಪಸ್ ಮಾತ್ರ ಇಲಾಖೆಗೆ ಕರೆಸಿಕೊಳ್ಳಿ. ಒಂದೊಂದು ತಾಲ್ಲೂಕಿನಲ್ಲಿ 5-6 ಜನ ಶಿಕ್ಷಕರು ಬೇರೆ ಕಡೆ ಕೆಲಸ ಮಾಡುವವರಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಹಾಗೆ ಇರುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ :- ಬೇಕಾದರೆ ನಾನು ನಾಳೆ ನಿಮಗೆ ಮಾಹಿತಿ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನೀವು ಮಾಹಿತಿ ಕೊಟ್ಟರೆ ಗಮನಹರಿಸುತ್ತೇನೆ. ನೀವು ಹೇಳಿದ ಹಾಗೆ ಒಂದು ತಾಲ್ಲೂಕಿನಲ್ಲಿ 4, 5 ಶಿಕ್ಷಕರ ನಿಯೋಜನೆ ಇಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ :- ನನ್ನ ತಾಲ್ಲೂಕಿನಲ್ಲಿದ್ದಾರೆ. ನಾನು CEO ಗೆ ಪತ್ರ ಬರೆದರೂ ಅದಕ್ಕೆ ಉತ್ತರವಿಲ್ಲ. ನಾನು ನಾಳೆ ಬೆಳಗ್ಗೆ by name ಮಾನ್ಯ ಸಚಿವರಿಗೆ ಮಾಹಿತಿ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- High Court and Supreme Court ನಮಗೆ ಸ್ಪಷ್ಟವಾಗಿ ನಿರ್ದೇಶನಗಳನ್ನು ಕೊಟ್ಟಿದೆ. Teaching faculty ಯಾವುದಿದೆ, ಅವರನ್ನು ಬೇರೆ ಕೆಲಸಗಳಿಗೆ ನಿಯೋಜನೆ ಮಾಡಬಾರದೆನ್ನುವುದರ ಬಗ್ಗೆ ನಮಗೂ ಸ್ಪಷ್ಟತೆ ಇದೆ. ಈ Teaching faculties ಯಾವುದಿದೆ ಅವರನ್ನು ಬೇರೆ ಕೆಲಸಗಳಿಗೆ ನಿಯೋಜನೆ ಮಾಡಬಾರದು ಎನ್ನುವುದರ ಬಗ್ಗೆ ಸ್ಪಷ್ಟತೆ ನಮಗೂ ಇದೆ. ಎಲ್ಲಿ ಯಾರು ಕೆಲಸ ಮಾಡುವಂಥದ್ದರ ಬಗ್ಗೆ ಅದರಲ್ಲೂ ಪಿಯೂಸಿಯ ಬಗ್ಗೆ ಕೇಳಿದ್ದಾರೆ. ನನ್ನ ಹತ್ತಿರ ಎಲ್ಲಾ

ಅಂಕಿ ಸಂಖ್ಯೆಗಳಿವೆ. ಒಟ್ಟಾರೆ ಹೋಲಿಕೆ ಮಾಡಿ ನೋಡಿದಾಗ ಬಹಳ ಕಡಿಮೆಯಿದೆ. ಅವರು ಎಲ್ಲಿ ಇದ್ದಾರೆಂದು ನಾನು ನೋಡುತ್ತಿದ್ದೆ, ಅವರು ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಇದ್ದಾರೆ ಅದು ನಮ್ಮ ಇಲಾಖೆಯ ಭಾಗ ಅಲ್ಲಿಯೇ 4-8 ಜನ ಇದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಎರಡು ಜನರು ಇದ್ದಾರೆ.

ಶ್ರೀ ಹೆಚ್.ಎಸ್. ಪ್ರಕಾಶ್ :- ಎರಡು ಜನ ಅಲ್ಲ ಸಾರ್, ತಾವು ಒಂದು ಕೆಲಸ ಮಾಡಿ ಅವರನ್ನು ಅಲ್ಲಿ absorb ಮಾಡುವಂಥದ್ದು ನಡೆಯುತ್ತಿದೆ. ದಯಮಾಡಿ ತಾವು ಸ್ವಲ್ಪ ಕೇಳಿ, ರಾಜಕೀಯದಲ್ಲಿ ಇಚ್ಛಾಶಕ್ತಿ ಬಳಸುತ್ತಾರೆ. ಸಮಾಜದಲ್ಲಿ ಲೆಕ್ಚರರ್‌ರವರಿಗೆ ಅಪಾರವಾದ ಗೌರವವಿದೆ. ಆ ಕೆಲಸ ಬಿಟ್ಟು ಸಮಾಜ ಕಲ್ಯಾಣ ಇಲಾಖೆಗೆ ಹೋಗುತ್ತಾರೆಂದರೆ ಅವರು ಏನು ಕಾರಣಕ್ಕೆ ಹೋಗುತ್ತಾರೆ ? ಏಕೆ ಹೋಗಬೇಕು ? ಸಾಮಾನ್ಯವಾಗಿ ನನಗೆ ನಮ್ಮ ಗುರುಗಳಿಗೆ ನಮಗೆ ಪಾಠ ಹೇಳಿಕೊಟ್ಟ ಲೆಕ್ಚರರ್‌ರವರಿಗೆ ಭಾರಿ ಅಪಾರವಾದ ಗೌರವವನ್ನು ನಾವು ಇವತ್ತಿಗೂ ಕೊಡುತ್ತಿದ್ದೇವೆ ಮತ್ತು ಹಿಂದೆಯೂ ಕೂಡ ಕೊಟ್ಟಿದ್ದೇವೆ. ಅಂಥ ಕೆಲಸ ಬಿಟ್ಟು ಅವರು ಹೋಗುತ್ತಾರೆಂದರೆ ಅವರ ಉದ್ದೇಶ ಏನು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಈಗ ಕೋರ್ಟ್ ಆದೇಶಗಳಿವೆ, ಇವರನ್ನು ಹಿಂದಕ್ಕೆ ತರಿಸಿಕೊಳ್ಳುವುದಕ್ಕೆ ಬೇಕಾಗಿರುವಂಥ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು :- ಈಗ ಸದನವನ್ನು ನಾಳೆ ಬೆಳಗ್ಗೆ 10-00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 26-07-2012 ರಂದು ಗುರುವಾರ ಬೆಳಗ್ಗೆ 10-00 ಗಂಟೆಗೆ ಸಭೆ ಸೇರುವಂತೆ ನಿಶ್ಚಯಿಸಿತು)

ಪಶುಸಂಗೋಪನೆ ಇಲಾಖೆ ಪುನರಚನೆ

274 (171) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್). :- ಮಾನ್ಯ ಪಶುಸಂಗೋಪನೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ಜಾನುವಾರುಗಳ ಸರಾಸರಿ ಸಂಖ್ಯೆ ಎಷ್ಟು ;

ಆ) ಜಾನುವಾರುಗಳನ್ನೇ ಅವಲಂಬಿಸಿರುವ ಕುಟುಂಬಗಳೆಷ್ಟು ;

ಇ) ಪಶುಸಂಗೋಪನಾ ಇಲಾಖೆಯನ್ನು ಯಾವಾಗ ಕೃಷಿ ಇಲಾಖೆಯಿಂದ ಪ್ರತ್ಯೇಕಿಸಲಾಯಿತು ;

ಈ) ಈ ಪಶುಸಂಗೋಪನೆ ಇಲಾಖೆ ಪುನಾರಚನೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಉ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು) :-

ಅ) 3,28,83,251.

ಆ) 61,68,875.

ಇ) 1945ನೇ ಸಾಲಿನಲ್ಲಿ.

ಈ) ಹೌದು.

ಉ) 2011-12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಇಲಾಖೆಯ ಪುನರ್ ರಚನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿಸಿದ್ದು, ಈ ಪ್ರಸ್ತಾವನೆ ಪರಿಶೀಲನೆಗಾಗಿ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ 10 ಸದಸ್ಯರನ್ನೊಳಗೊಂಡ ಉನ್ನತಾಧಿಕಾರಿಗಳ ಸಮಿತಿಯನ್ನು ದಿನಾಂಕ : 28-05-2011 ರಂದು ರಚಿಸಲಾಗಿದೆ. ಹಾಗೂ ಇಲಾಖೆಯಿಂದ ಸಲ್ಲಿಸಿದ ಪ್ರಸ್ತಾವನೆಯನ್ನು ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ ಸೆಪ್ಟೆಂಬರ್ 2011 ರಂದು ಶಿಫಾರಸ್ಸಿನೊಂದಿಗೆ ಸಭೆಯ ನಡವಳಿಯನ್ನು ಸರ್ಕಾರಕ್ಕೆ ಮಂಡಿಸಿದೆ. ಪ್ರಸ್ತುತ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಅಂಗನವಾಡಿಗಳಿಗೆ ಸ್ವಂತ ಕಟ್ಟಡ

300 (727) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) :- ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಗೌರಿಬಿದನೂರು ತಾಲ್ಲೂಕಿನ ಸುಮಾರು 150 ಅಂಗನವಾಡಿಗಳಿಗೆ ಸ್ವಂತ

ಕಟ್ಟಡ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮವೇನು ? (ಮಾಹಿತಿ ನೀಡುವುದು)

ಶ್ರೀ ಕಳಕಪ್ಪ ಜಿ. ಬಂಡಿ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :-

ಅ) ಹೌದು.

ಆ) ಗೌರಿಬಿದನೂರು ತಾಲ್ಲೂಕಿನಲ್ಲಿ 349 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 190 ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. 23 ಕಟ್ಟಡಗಳಿಗೆ ಕಾಮಗಾರಿ ಮಂಜೂರಾಗಿದ್ದು, ನಿರ್ಮಾಣ ಹಂತದಲ್ಲಿರುತ್ತದೆ.

2011–12ನೇ ಸಾಲಿನಲ್ಲಿ ಆರ್.ಐ.ಡಿ.ಎಫ್. ಯೋಜನೆಯಡಿ ಒಂದು ಕಟ್ಟಡ ವಿಶೇಷ ಅಭಿವೃದ್ಧಿ ಯೋಜನೆಯಡಿ 5 ಕಟ್ಟಡಗಳನ್ನು ಮಂಜೂರು ಮಾಡಲಾಗಿರುತ್ತದೆ. ಉಳಿದ 130 ಅಂಗನವಾಡಿಗಳಿಗೆ ಸ್ವಂತ ಕಟ್ಟಡ ನಿರ್ಮಿಸಬೇಕಾಗಿದ್ದು, ಅನುದಾನ ಹಾಗೂ ನಿವೇಶನದ ಲಭ್ಯತೆ ಮೇರೆಗೆ ಹಂತಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುವುದು.

ಸಂಗೀತ ವಿಶ್ವವಿದ್ಯಾಲಯ ಸ್ಥಾಪನೆ

252 (414) ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು). :- ಮಾನ್ಯ ಉನ್ನತ ಶಿಕ್ಷಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಕರ್ನಾಟಕ ಸಂಗೀತ ವಿಶ್ವವಿದ್ಯಾನಿಲಯ ಪ್ರಾರಂಭಿಸಲು ಕಳೆದ ಸಾಲಿನಲ್ಲಿ ನಿರ್ಣಯ ಕೈಗೊಂಡಿರುವ ವಿಚಾರ ಸರ್ಕಾರದ ಮುಂದಿದೆಯೇ ; ಬಂದಿದ್ದಲ್ಲಿ ವಿಶ್ವವಿದ್ಯಾಲಯವನ್ನು ಎಲ್ಲಿ ಪ್ರಾರಂಭಿಸಲಾಗುವುದು ;

ಆ) ಸ್ಥಾಪನೆಯ ಪ್ರಕ್ರಿಯೆಯು ಯಾವ ಹಂತದಲ್ಲಿದೆ ? (ವಿವರ ನೀಡುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) :-

ಅ) ಬಂದಿದೆ. ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ 2009ರನ್ವಯ

ಸ್ಥಾಪಿಸಲಾಗಿದ್ದು, ಜಿಲ್ಲಾಡಳಿತವು ಒದಗಿಸಿರುವ ಮೈಸೂರು ನಗರದ ಲಕ್ಷ್ಮೀಪುರಂನ ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿದೆ. ಸದರೀ ವಿಶ್ವವಿದ್ಯಾಲಯವನ್ನು ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಬಿಳಿಕೆರೆ ಹೋಬಳಿಯ ಧರ್ಮಾಪುರ ಗ್ರಾಮದಲ್ಲಿ ಪ್ರಾರಂಭಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಆ) ಈಗಾಗಲೇ ಸ್ಥಾಪನೆಯಾಗಿದ್ದು 2009ನೇ ಇಸವಿಯಿಂದ ಕಾರ್ಯನಿರ್ವಹಿಸುತ್ತಿದೆ.

ರಾಯಭಾಗ ತಾಲ್ಲೂಕಿನ ಪಶು ಚಿಕಿತ್ಸಾಲಯ ಮೇಲ್ದರ್ಜೆಗೇರಿಸುವುದು

188 (870) ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ). :- ಮಾನ್ಯ ಪಶುಸಂಗೋಪನೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಯಭಾಗ ತಾಲ್ಲೂಕಿನಲ್ಲಿ ಹಾಲಿ ಇರುವ ಜಾನುವಾರುಗಳು, ಕುರಿ ಮೇಕೆಗಳು, ಕೋಳಿ ಮತ್ತು ಇತರೆ ಪ್ರಾಣಿಗಳ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು)

ಆ) ಸದರಿ ತಾಲ್ಲೂಕಿನಲ್ಲಿ ಇರುವ ಪಶು ಚಿಕಿತ್ಸಾಲಯಗಳ ಹಾಗೂ ಕೃತಕ ಗರ್ಭಧಾರಣೆ ಕೇಂದ್ರಗಳ ಸಂಖ್ಯೆ ಎಷ್ಟು ? ಅವುಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ವಿವರ ನೀಡುವುದು)

ಇ) ತಾಲ್ಲೂಕಿನ ನಿಡಗುಂದಿ, ನಂದಿಕುರಳಿ, ಬಿಂಡಿ, ಸವಸುದ್ದಿ, ಹಿಡಿಕಲ ಹಾಗೂ ಚಿಕ್ಕೋಡಿ ತಾಲ್ಲೂಕಿನ ನಾಗರಮುನ್ನೋಳ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಈ) ರಾಯಭಾಗ ತಾಲ್ಲೂಕಿನಲ್ಲಿ ಪಶುವೈದ್ಯಕೀಯ ಪಾಲಿಕ್ಲಿನಿಕ್ ಸ್ಥಾಪಿಸಿ ಅವಶ್ಯವಾದ ಸಿಬ್ಬಂದಿ ನೇಮಿಸಲು ಪ್ರಸ್ತಾವನೆ ಬಂದಿದೆಯೇ ? (ವಿವರ ಒದಗಿಸುವುದು)

ಉ) ಮೇಶಳಿ, ಚಿಂಚಳಿ, ಕಂಕಣವಾಡಿ, ಅಳಗವಾಡಿ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು)

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು) :-

ಅ) 2007ರ ಜಾನುವಾರು ಗಣತಿಯಂತೆ ರಾಯಭಾಗ ತಾಲ್ಲೂಕಿನಲ್ಲಿರುವ ಜಾನುವಾರುಗಳು ಮತ್ತು ಇತರೆ ಪ್ರಾಣಿಗಳ ಸಂಖ್ಯಾ ವಿವರ ಈ ಕೆಳಕಂಡಂತಿವೆ :

ಜಾನುವಾರುಗಳ ವಿವರ	ರಾಯಭಾಗ ತಾಲ್ಲೂಕು
ದನ	70,660
ಎಮ್ಮೆ	1,09,661
ಕುರಿ	1,21,345
ಮೇಕೆ	85,962
ಕುದುರೆ	58
ಚಿಕ್ಕಕುದುರೆ	699
ಹೇಸರಗತ್ತೆ	0
ಕತ್ತೆಗಳು	33
ಒಂಟೆಗಳು	0
ಹಂದಿಗಳು	556
ನಾಯಿಗಳು	21,798
ಮೊಲಗಳು	171
ಒಟ್ಟು	4,10,943
ಕುಕ್ಕುಟಗಳು	1,67,452

(ಆ) ರಾಯಭಾಗ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯಕೀಯ ಸಂಸ್ಥೆಗಳ ವಿವರಗಳು ಈ ಕೆಳಕಂಡಂತಿವೆ :

ಕ್ರ.ಸಂ.	ಪಶುವೈದ್ಯ ಸಂಸ್ಥೆಗಳು	ಸಂಖ್ಯೆ
1	ಪಶು ಆಸ್ಪತ್ರೆಗಳು	2
2	ಪಶು ಚಿಕಿತ್ಸಾಲಯಗಳು	9
3	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	1
4	ಕೃತಕ ಗರ್ಭಧಾರಣಾ ಕೇಂದ್ರಗಳು	3
5	ಸಂಚಾರಿ ಪಶು ಚಿಕಿತ್ಸಾಲಯ	1

ರಾಜ್ಯದಲ್ಲಿ ಹಾಲಿ 637 ಪಶುವೈದ್ಯಾಧಿಕಾರಿ ಹುದ್ದೆಗಳು ಖಾಲಿ ಇದ್ದು, ಪಶುವೈದ್ಯ ಪದವೀಧರರ ಕೊರತೆಯಿಂದ ರಾಜ್ಯದಲ್ಲಿ ಪಶುವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸುವ ಅಥವಾ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಸರ್ಕಾರವು ಪ್ರಸ್ತುತ ಪರಿಗಣಿಸುತ್ತಿರುವುದಿಲ್ಲ.

ಇ) ಚಿಕ್ಕೋಡಿ ತಾಲ್ಲೂಕಿನ ನಾಗರಮುನ್ನೋಳ ಗ್ರಾಮದಲ್ಲಿ ಹಾಲಿ ಪಶು ಚಿಕಿತ್ಸಾಲಯ ಕಾರ್ಯನಿರ್ವಹಿಸುತ್ತಿದೆ. ಉಳಿದ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯಗಳನ್ನು

ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. ಕಾರಣವೇನೆಂದರೆ, ರಾಜ್ಯದಲ್ಲಿ ಹಾಲಿ 637 ಪಶುವೈದ್ಯಾಧಿಕಾರಿ ಹುದ್ದೆಗಳು ಖಾಲಿ ಇದ್ದು, ಪಶು ವೈದ್ಯ ಪದವೀಧರರ ಕೊರತೆಯಿಂದ ಹೊಸದಾಗಿ ಪಶುವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಸರ್ಕಾರವು ಪ್ರಸ್ತುತ ಪರಿಗಣಿಸುತ್ತಿರುವುದಿಲ್ಲ.

ಈ) ರಾಜ್ಯದ ಪ್ರತಿ ಜಿಲ್ಲೆಗೆ ಒಂದರಂತೆ ಪಶುವೈದ್ಯಕೀಯ ಪಾಲಿಕ್ಲಿನಿಕ್ ಸ್ಥಾಪಿಸಲು ಉದ್ದೇಶಿಸಿದ್ದು, ಅದರಂತೆ ಬೆಳಗಾವಿ ನಗರದಲ್ಲಿ ಒಂದು ಪಾಲಿಕ್ಲಿನಿಕ್ ಕಾರ್ಯನಿರ್ವಹಿಸುತ್ತಿದ್ದು, ಹೀಗಾಗಿ ರಾಯಭಾಗ ತಾಲ್ಲೂಕಿನಲ್ಲಿ ಪಾಲಿಕ್ಲಿನಿಕ್ ಸ್ಥಾಪನೆಯ ಪ್ರಸ್ತಾವನೆ ಮುಂದಿರುವುದಿಲ್ಲ. ಆದಕಾರಣ ಸಿಬ್ಬಂದಿ ನೇಮಕ ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ.

ಉ) ರಾಜ್ಯದಲ್ಲಿ ಹಾಲಿ 637 ಪಶುವೈದ್ಯಾಧಿಕಾರಿ ಹುದ್ದೆಗಳು ಖಾಲಿ ಇದ್ದು, ಪಶುವೈದ್ಯ ಪದವೀಧರರ ಕೊರತೆಯಿಂದ ರಾಜ್ಯದಲ್ಲಿ ಹೊಸದಾಗಿ ಪಶುವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಸರ್ಕಾರವು ಪ್ರಸ್ತುತ ಪರಿಗಣಿಸುತ್ತಿರುವುದಿಲ್ಲ.

ಪ್ರಥಮ ದರ್ಜೆ ಕಾಲೇಜು ಮಂಜೂರಾತಿ

311 (551) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿಜಯಪುರ, ವಿಶ್ವನಾಥಪುರ, ಕುಂದಾಣಕ್ಕೆ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; (ವಿವರ ನೀಡುವುದು)

ಅ) ಪ್ರಥಮ ದರ್ಜೆ ಕಾಲೇಜುಗಳ ಮಂಜೂರಾತಿಗಾಗಿ ಬಿಡುಗಡೆಯಾದ ಅನುದಾನ ಎಷ್ಟು ;. ಯಾವಾಗ ಪ್ರಾರಂಭಿಸಲಾಗುವುದು ? (ವಿವರ ನೀಡುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):–

ಅ) ಇದೆ.

ಆ) ವಿದ್ಯಾರ್ಥಿಗಳ ಸಂಖ್ಯೆ, ಜಮೀನಿನ ಲಭ್ಯತೆ ಹಾಗೂ ಅನುದಾನದ ಲಭ್ಯತೆಯನುಸಾರ ಪ್ರಥಮ ದರ್ಜೆ ಕಾಲೇಜುಗಳ ಮಂಜೂರಾತಿಗಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು. ಹೊಸದಾಗಿ ಪ್ರಾರಂಭಿಸಲಾದ ಸರ್ಕಾರಿ ಪ್ರಥಮ

ದರ್ಜೆ ಕಾಲೇಜುಗಳಿಗೆ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿದ್ದು ನಂತರ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ.

ಆರಾಧನಾ ಯೋಜನೆ

283 (710) ಶ್ರೀ ರುದ್ರೇಶ್‌ಗೌಡ ವೈ.ಎನ್. (ಬೇಲೂರು) :– ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಆರಾಧನಾ ಯೋಜನೆಯಡಿಯಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಕಳೆದ ಮೂರು ವರ್ಷಗಳಿಂದ ಬಿಡುಗಡೆ ಮಾಡಿದ ಅನುದಾನ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

ಆ) ಅನುದಾನವು ಪ್ರತಿ ವರ್ಷ ಕಡಿಮೆಯಾಗುತ್ತಿರುವುದರಿಂದ ರಾಜ್ಯದಲ್ಲಿ ಶಿಥಿಲವಾಗಿರುವ ದೇವಸ್ಥಾನಗಳ ಅಭಿವೃದ್ಧಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು):–

ಅ)

ಕ್ರ.ಸಂ.	ವರ್ಷ	(ರೂ. ಲಕ್ಷಗಳಲ್ಲಿ)
1	2009–10	200.00
2	2010–11	160.00
3	2011–12	837.20

ಆ ಸಂಬಂಧದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ. ಉದ್ಭವಿಸುವುದಿಲ್ಲ.

ಅನುಬಂಧ

ಮೊತ್ತ ₹.ಗಳಲ್ಲಿ

ಕ್ರ ಸಂ	ಜಿಲ್ಲೆ	ವಿಧಾನಸಭಾ ಕ್ಷೇತ್ರಗಳ ಸಂಖ್ಯೆ	2009-10	2010-11	2011-12
1	ಬಾಗಲಕೋಟೆ	7	624988.00	499994.00	2616250.00
2	ಬೆಂಗಳೂರು ಗ್ರಾಮಾಂತರ	4	357136.00	285711.00	1495000.00
3	ಬೆಂಗಳೂರು ನಗರ	28	2499952.00	2000148.00	10465096.00
4	ಬೆಳಗಾವಿ	18	1607112.00	1285701.00	6727482.00
5	ಬಳ್ಳಾರಿ	9	803556.00	642850.00	3363741.00
6	ಬೀದರ್	6	535704.00	428567.00	2242500.00
7	ಬಿಜಾಪುರ	8	714272.00	571422.00	2989992.00
8	ಚಾಮರಾಜನಗರ	4	357136.00	285711.00	1495000.00
9	ಚಿಕ್ಕಬಳ್ಳಾಪುರ	5	446804.00	357139.00	1868745.00
10	ಚಿಕ್ಕಮಗಳೂರು	5	446420.00	357139.00	1868745.00
11	ಚಿತ್ರದುರ್ಗ	6	535704.00	428567.00	2242510.00
12	ದಕ್ಷಿಣಕನ್ನಡ	8	714272.00	571422.00	2989992.00
13	ದಾವಣಗೆರೆ	8	714272.00	571422.00	2989992.00
14	ಧಾರವಾಡ	7	624988.00	499994.00	2616250.00
15	ಗದಗ	4	357136.00	285711.00	1495000.00
16	ಗುಲ್ಬರ್ಗಾ	9	1160692.00	642850.00	3363741.00
17	ಹಾಸನ	7	624988.00	499994.00	2616250.00
18	ಹಾವೇರಿ	6	535704.00	428567.00	2242510.00
19	ಕೊಡಗು	2	178568.00	142855.00	747498.00
20	ಕೋಲಾರ	6	535704.00	428567.00	2242494.00
21	ಕೊಪ್ಪಳ	5	446420.00	357139.00	1868745.00
22	ಮಂಡ್ಯ	7	624988.00	499994.00	2616250.00
23	ಮೈಸೂರು	11	982124.00	785706.00	4111239.00
24	ರಾಯಚೂರು	7	624988.00	499994.00	2616250.00
25	ರಾಮನಗರ	4	357136.00	285719.00	1495000.00
26	ಶಿವಮೊಗ್ಗ	7	624988.00	499994.00	2616250.00
27	ತುಮಕೂರು	11	982124.00	785706.00	4111239.00
28	ಉಡುಪಿ	5	446420.00	357139.00	1868745.00
29	ಉತ್ತರಕನ್ನಡ	6	535704.00	428567.00	2242494.00
30	ಯಾದಗಿರಿ	4	–	285711.00	1495000.00
ಒಟ್ಟು		224	20000000.00	16000000.00	83720000.00

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಯೋಗಾಲಯ ಮತ್ತು ಶೌಚಾಲಯಗಳ ಕೊರತೆ

255 (552) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) :- ಮಾನ್ಯ ಉನ್ನತ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಸಿಂಧನೂರು ತಾಲ್ಲೂಕಿನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಯೋಗಾಲಯ ಮತ್ತು ಶೌಚಾಲಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಅ) ಈ ಕಾಲೇಜುಗಳಲ್ಲಿ ಪ್ರಯೋಗಾಲಯ ಮತ್ತು ಶೌಚಾಲಯಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ; ಇದಕ್ಕಾಗಿ ಎಷ್ಟು ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಲಾಗುವುದು ? (ಮಾಹಿತಿ ನೀಡುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):-

ಅ) ಬಂದಿದೆ.

ಆ) ಬಂದಿದೆ.

ಇ) ಅನುದಾನದ ಲಭ್ಯತೆಯನ್ನಾಧರಿಸಿ ಮೂಲ ಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಅನುದಾನದ ಲಭ್ಯತೆಯ ನಂತರ ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಿದ್ದು, ಕಾಮಗಾರಿಯ ಅನುಮೋದಿತಾ ಅಂದಾಜು ವೆಚ್ಚಕ್ಕನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ

242 (564) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಹಾಸನ ತಾಲ್ಲೂಕು, ಕಟ್ಟಾಯ ಗ್ರಾಮ ಹೋಬಳಿ ಕೇಂದ್ರವಾಗಿದ್ದು ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಗ್ರಾಮಕ್ಕೆ ಆರೋಗ್ಯ ಕೇಂದ್ರ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಇ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಅರವಿಂದ ಲಿಂಬಾವಾಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ), ಆ) ಮತ್ತು ಇ) ಹಾಸನ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ 2,29,711 ಆಗಿದ್ದು, ಮಾರ್ಗಸೂಚಿಗಳ ಪ್ರಕಾರ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿದೆ. ಆದರೆ, ಈಗಾಗಲೇ ಸದರಿ ತಾಲ್ಲೂಕಿನಲ್ಲಿ 19 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಆದುದರಿಂದ, ಹಾಸನ ತಾಲ್ಲೂಕು ಕಟ್ಟಾಯ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಮುಂದುವರೆದು, ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ ದಿನಾಂಕ : 11-01-2011 ರಿಂದ ಮೂರು ವರ್ಷಗಳ ಅವಧಿಗೆ ಸರ್ಕಾರವು ತಡೆ ಹಿಡಿದಿದೆ.

ಮಲೈ ಮಹದೇಶ್ವರ ಬೆಟ್ಟಕ್ಕೆ ಕುಡಿಯುವ ನೀರು

248 (417) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. :- ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಕಾವೇರಿ ನದಿಯಿಂದ ಮಲೈ ಮಹದೇಶ್ವರ ಬೆಟ್ಟಕ್ಕೆ ಕುಡಿಯುವ ನೀರು ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದರೆ, ಈಗ ಯಾವ ಹಂತದಲ್ಲಿದೆ ;

ಇ) ಪೂರ್ಣಗೊಳಿಸಲು ಎಷ್ಟು ದಿವಸ ಬೇಕಾಗುತ್ತದೆ ;

ಈ) ಈವರೆವಿಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ ; ಯಾವ ಯಾವ ಕಾಮಗಾರಿ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು):–

ಅ) ಹೌದು.

ಆ) ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ಬಾಕಿ ಉಳಿದಿರುವ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಇದುವರೆಗೆ ಒಟ್ಟು ರೂ. 17,52,80,000–00 ವೆಚ್ಚ ಉಂಟಾಗಿದ್ದು, ಆ ಸಂಬಂಧ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ–1

ಕಾವೇರಿ ನದಿಯಿಂದ ಮಲೈ ಮಹದೇಶ್ವರ ಬೆಟ್ಟಕ್ಕೆ ಕುಡಿಯುವ ನೀರು ಒದಗಿಸುವ ಯೋಜನೆಯಲ್ಲಿ ಈವರೆವಿಗೆ ಕಾಮಗಾರಿಯಲ್ಲಿ ಆಗಿರುವ ಪ್ರಗತಿಯ ವಿವರ

1. **ಮೂಲಸ್ಥಾವರ :–**

ಅ) 400 ಮೀ.ವ್ಯಾಸದ ಸಂಪರ್ಕ ಕೊಳವೆ ಮಾರ್ಗ ; ಕಾಮಗಾರಿ ಪೂರ್ಣಗೊಂಡಿದೆ.

ಆ) ಜಾಕ್‌ವೆಲ್ :– ಕಾಮಗಾರಿ ಮುಗಿದಿದ್ದು, ಪೇಂಟಿಂಗ್ ಕೆಲಸ ಬಾಕಿ ಇರುತ್ತದೆ.

ಇ) ಅಪ್ರೋಚ್‌ನ ಬಂಡ್ ಕಾಮಗಾರಿ ಮುಗಿದಿದ್ದು ರಿವೆಟ್‌ಮೆಂಟ್ ಕಾಮಗಾರಿ ಪ್ರಗತಿಯಲ್ಲಿದೆ.

ಈ) ಇನ್ಸ್‌ಪೆಕ್ಷನ್ ಛೇಂಬರ್ :– ಕಾಮಗಾರಿ ಸಂಪೂರ್ಣ ಪೂರ್ಣಗೊಂಡಿದೆ.

2. **219 ಮಿ.ಮೀ. ವ್ಯಾಸದ ಮೆದು ಉಕ್ಕಿನ ಏರು ಕೊಳವೆ ಮಾರ್ಗ :–**

ಅ) ಜಾಕ್‌ವೆಲ್‌ನಿಂದ ಮೊದಲನೆ ಪಂಪಿನ ಮನೆವರೆಗೆ :– ಕೊಳವೆ ಮಾರ್ಗದ ಅಳವಡಿಕೆ ಕಾಮಗಾರಿ ಮುಗಿದಿರುತ್ತದೆ.

ಆ) ಮೊದಲನೆ ಪಂಪಿನ ಮನೆಯಿಂದ 2ನೇ ಪಂಪಿನ ಮನೆವರೆಗೆ :– ಕೊಳವೆ ಮಾರ್ಗದ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದ್ದು, ಜೋಡಣೆ ಕಾಮಗಾರಿ ಬಾಕಿ ಇರುತ್ತದೆ.

ಇ) ಎರಡನೇ ಪಂಪಿನ ಮನೆಯಿಂದ :- ಜಲ ಸಂಗ್ರಹಗಾರದವರೆಗೆ :- ಕೊಳವೆ ಮಾರ್ಗದ ಅಳವಡಿಕೆ ಮುಗಿದಿದ್ದು ಜೋಡಣಾ ಕಾಮಗಾರಿ ಪ್ರಗತಿಯಲ್ಲಿದೆ.

3. **ಮೊದಲನೇ ಪಂಪಿನ ಮನೆ :-**

ಒಂದು ಲಕ್ಷ ಲೀಟರ್ ಸಾಮರ್ಥ್ಯದ ಜಲ ಸಂಗ್ರಹಗಾರದ ಕಾಮಗಾರಿ ಮುಗಿದಿದ್ದು, ಪಂಪಿನ ಮನೆಯ ಕಾಮಗಾರಿ ಪೂರ್ಣಗೊಂಡಿರುತ್ತದೆ.

4. **ಎರಡನೇ ಪಂಪಿನ ಮನೆ :-**

ಒಂದು ಲಕ್ಷ ಲೀಟರ್ ಸಾಮರ್ಥ್ಯದ ಜಲಸಂಗ್ರಹಾಗಾರದ ಕಾಮಗಾರಿ ಮುಗಿದಿದ್ದು, ಪಂಪಿನ ಮನೆಗೆ ಮೇಲ್ಚಾವಣಿ ಫಿನಿಷಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

5. **90 ಲಕ್ಷ ಲೀಟರ್ ಸಾಮರ್ಥ್ಯದ ನೆಲಮಟ್ಟದ ಜಲ ಸಂಗ್ರಹಗಾರ :-**

ಕಾಮಗಾರಿ ಪೂರ್ಣಗೊಂಡಿರುತ್ತದೆ.

6. **ಜಲ ಶುದ್ಧಿಕರಣ ಘಟಕ :-**

ಯಾಂತ್ರಿಕ ಹಾಗೂ ವಿದ್ಯುದೀಕರಣ ಕಾಮಗಾರಿಗಳು ಪ್ರಗತಿಯಲ್ಲಿದೆ.

7. **ವಿದ್ಯುತ್ತೀಕರಣಾ ಕಾಮಗಾರಿ :-**

ಯೋಜನೆ ಅಡಿಯ ಸ್ಥಾವರಗಳಿಗೆ ವಿದ್ಯುತ್ ಸರಬರಾಜು ನೀಡಲು ಚಾ.ವಿ.ಸ.ನಿ.ನಿ. ಯಿಂದ ಅನುಮೋದನೆ ಪಡೆಯಲಾಗಿದ್ದು, ಕಾಮಗಾರಿಯನ್ನು ಮೆ॥ ಪದ್ಮಶ್ರೀ ಎಲೆಕ್ಟ್ರಿಕಲ್ಸ್ ಗುತ್ತಿಗೆದಾರರು, ಸಾಗರ ಇವರ ಪರವಾಗಿ ಟೆಂಡರ್ ಅನುಮೋದನೆ ದೊರೆತಿದ್ದು ಸದರಿಯವರು ಕರಾರು ಪತ್ರ ಮಾಡಿಕೊಂಡಿದ್ದು ಕಾಮಗಾರಿ ಪ್ರಾರಂಭಿಸಬೇಕಿದೆ.

8. **ಯಂತ್ರೋಪಕರಣ ಕಾಮಗಾರಿ :-**

ಜಾಕ್‌ವೆಲ್ ಮೊದಲನೇ ಪಂಪಿನ ಮನೆ, ಎರಡನೇ ಪಂಪಿನ ಮನೆ ಹಾಗೂ ಜಲಶುದ್ದೀಕರಣ ಘಟಕದ ಶುದ್ಧ ನೀರಿನ ಪಂಪಿನ ಮನೆಗಳಿಗೆ ಅಳವಡಿಸಬೇಕಾಗಿರುವ ಯಂತ್ರೋಪಕರಣಗಳ ಕಾಮಗಾರಿ ಕೈಗೊಳ್ಳಲು ದಿನಾಂಕ : 05-03-2012 ರಂದು ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿದ್ದು, ಗುತ್ತಿಗೆದಾರರಿಗೆ ದಿನಾಂಕ : 05-03-2012ರಂದು ನಿವೇಶನ ಹಸ್ತಾಂತರಿಸಲಾಗಿದ್ದು, ಉಪಕರಣಗಳಿಗೆ ಅಬ್ಕಾರಿ ಶುಲ್ಕ ವಿನಾಯಿತಿಯನ್ನು ಚಾಮರಾಜನಗರ ಜಿಲ್ಲಾಧಿಕಾರಿಯವರಿಂದ ಪಡೆದು

ಗುತ್ತಿಗೆದಾರರಿಗೆ ನೀಡಲಾಗಿದ್ದು ಗುತ್ತಿಗೆದಾರರು ಪಂಪಿಂಗ್ ಮಿಷಿನರಿಗಳನ್ನು ಪಡೆಯಲು ಸರಬರಾಜು ಆದೇಶ ನೀಡಿರುತ್ತಾರೆ.

ಮುಳಗಡೆ ಗ್ರಾಮದ ಶಾಲೆಗಳ ದುಃಸ್ಥಿತಿ

239 (179) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ). :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಕೃಷ್ಣಾ ನದಿಯ 519.6 ಮೀ ಹಿನ್ನೀರಿನಿಂದ ಮುಳುಗಡೆಯಾದ ಜಮಖಂಡಿ ತಾಲ್ಲೂಕಿನ ಗ್ರಾಮಗಳಲ್ಲಿಯ ಪ್ರಾಥಮಿಕ ಶಾಲೆಗಳ ದುಃಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಅನೇಕ ಶಾಲೆಗಳು ಸಂಪೂರ್ಣ ಕುಸಿದುಹೋಗಿದ್ದು ಜೀವಹಾನಿಯಾಗಬಹುದಾದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ಗ್ರಾಮಗಳ ಶಾಲೆಯ ರಿಪೇರಿ ಹಾಗೂ ಅಗತ್ಯವಾದ ಹೊಸ ಕೊಠಡಿಗಳನ್ನು ಯಾವಾಗ ನಿರ್ಮಿಸಲಾಗುವುದು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಬಂದಿದೆ. ಕೃಷ್ಣಾ ನದಿ ಯೋಜನೆಯ ಹಿನ್ನೀರಿನಿಂದ ಜಮಖಂಡಿ ತಾಲ್ಲೂಕಿನ 15 ಗ್ರಾಮಗಳು ಮುಳಗಡೆ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸದರಿ ಗ್ರಾಮಗಳಲ್ಲಿ ಶಾಶ್ವತ ಕಾಮಗಾರಿಗಳನ್ನು ಕೈಗೊಳ್ಳದಂತೆ ಮಾನ್ಯ ಘನ ಸರ್ಕಾರದ ನಿರ್ದೇಶನವಿರುದರಿಂದ ಶಾಶ್ವತ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಆ) ಬಂದಿದೆ. ಆದರೆ ಪುನರ್ ವಸತಿ ಕೇಂದ್ರಗಳಲ್ಲಿನ ಹೊಸ ಕಟ್ಟಡಗಳಿಗೆ ಶಾಲೆಗಳನ್ನು ಸ್ಥಳಾಂತರಿಸಲು ಗ್ರಾಮದ ಜನ ಸಮುದಾಯವನ್ನು ಪದೆ ಪದೆ ವಿನಂತಿಸಿದಾಗ್ಯೂ ಕೂಡಾ ಗ್ರಾಮಸ್ಥರು ಮತ್ತು ಎಸ್.ಡಿ.ಎಂ.ಸಿ.ಯವರು ಅಲ್ಲಿಗೆ ಮಕ್ಕಳನ್ನು ಕಳುಹಿಸಲು ಸಿದ್ಧರಿಲ್ಲದಿರುವುದರಿಂದ ಸದ್ಯಕ್ಕೆ ಅದೇ ಗ್ರಾಮದಲ್ಲಿ ಹಳೆ ಶಾಲಾ ಕಟ್ಟಡದಲ್ಲಿ ಶಾಲೆಗಳು ನಡೆಯುತ್ತಿವೆ.

ಇ) ಮುಳಗಡೆ ಗ್ರಾಮಗಳ ಪುನರ್ ವಸತಿ ಕೇಂದ್ರಗಳಲ್ಲಿ ಹೊಸ ಕಟ್ಟಡವಿದ್ದು, ಸದರಿ ಶಾಲಾ ಕಟ್ಟಡಗಳಿಗೆ ಮಕ್ಕಳನ್ನು ಸ್ಥಳಾಂತರಿಸಲು ಹಾಗೂ ಸಂಬಂಧಿಸಿದವರ

ಮನವೊಲಿಸಲು ಸತತ ಪ್ರಯತ್ನ ಮಾಡಲಾಗುತ್ತಿದೆ. ಗ್ರಾಮಸ್ಥರ ಸಹಕಾರ ಸಿಗದಿರುವ ಕಾರಣ ವಸ್ತುಸ್ಥಿತಿ ಆಧಾರದ ಮೇಲೆ ಕ್ರಮವಹಿಸಲಾಗುತ್ತಿದೆ.

ಮಜಲಟ್ಟಿ ಗ್ರಾಮದಲ್ಲಿ ಸರ್ಕಾರಿ ಪದವಿ ಮಹಾವಿದ್ಯಾಲಯ

189 (871) ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಚಿಕ್ಕೋಡಿ ತಾಲ್ಲೂಕಿನ ರಾಯಭಾಗ ವಿಧಾನಸಭಾ ಕ್ಷೇತ್ರದ ಮಜಲಟ್ಟಿ ಗ್ರಾಮದಲ್ಲಿ ಸರ್ಕಾರಿ ಪದವಿ ಮಹಾವಿದ್ಯಾಲಯ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಬಂದಿದ್ದಲ್ಲಿ ಪ್ರಸ್ತಾವನೆಯ ಬಗ್ಗೆ ಸರ್ಕಾರ ತೆಗೆದಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) :

ಅ) ಇದೆ.

ಆ) ಈಗಾಗಲೇ ನೂತನವಾಗಿ ಪ್ರಾರಂಭಿಸಲಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೂಲಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು ನಂತರ ನಿವೇಶನದ ಲಭ್ಯತೆ, ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಅನುದಾನದ ಲಭ್ಯತೆಯನುಸಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಸರಕಾರಿ ಶಾಲೆಗಳಿಗೆ ಸ್ವಂತ ಕಟ್ಟಡ

261 (901) ಶ್ರೀ ನರೇಂದ್ರ ಬಾಬು ನೆ.ಲ (ಮಹಾಲಕ್ಷ್ಮೀ ಲೇಔಟ್):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮಹಾಲಕ್ಷ್ಮೀ ಬಡಾವಾಣೆ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮಹಾತ್ಮಾ ಗಾಂಧಿ ನಗರದಲ್ಲಿರುವ ಸರ್ಕಾರಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಿಸಲು ನಿವೇಶನದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕ್ಷೇತ್ರದಲ್ಲಿರುವ ಎಷ್ಟು ಸರ್ಕಾರಿ ಶಾಲೆಗಳಿಗೆ ಸ್ವಂತ ಕಟ್ಟಡ ಇದೆ (ವಿವರ ಒದಗಿಸುವುದು);

ಇ) ಸರ್ಕಾರಿ ರೈಟ್-ಟು-ಎಜುಕ್ಷೇನ್ ಕಾಯಿದೆಯನ್ನು ತಂದಿದ್ದರೂ

ಸಹ ಹಲವು ಶಾಲೆಗಳು ಪ್ರವೇಶ ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಶಾಲೆಗಳ ಮೇಲೆ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು;

ಈ) ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯ ಕೊರತೆ ಇರುವುದು ಕಂಡು ಬಂದಿದ್ದರೂ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣ ಏನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಈ ಕ್ಷೇತ್ರದಲ್ಲಿರುವ 9 ಶಾಲೆಗಳಿಗೆ ಸ್ವಂತ ಕಟ್ಟಡ ಇದೆ.

1) ಸ.ಹಿ.ಪ್ರಾ..ಶಾ. ಕುರುಬರಹಳ್ಳಿ

2) ಸ.ಮಾ.ಪ್ರಾ..ಶಾ. ಕಮಲಾನಗರ

3) ಸ.ಹಿ.ಪ್ರಾ..ಶಾ. ಕೃಷ್ಣಾನಂದ ನಗರ

4) ಸ.ಹಿ.ಪ್ರಾ..ಶಾ. ಮುಳಗಲ್ ವ್ಯಾಲಿ

5) ಸ.ಹಿ.ಪ್ರಾ..ಶಾ. ಕೇತಮಾರನಹಳ್ಳಿ

6) ಸ.ಹಿ.ಪ್ರಾ..ಶಾ. ಬೋವಿಪಾಳ್ಯ

7) ಸ.ಹಿ.ಪ್ರಾ..ಶಾ. ವೃಷಭಾವತಿ ನಗರ

8) ಸ,ಪ್ರೌ.ಶಾ. ಕೃಷ್ಣಾನಂದ ನಗರ

9) ಸ.ಪ್ರೌ.ಶಾ. ಕೇತಮಾರನಹಳ್ಳಿ

ಇ) ಬಂದಿದೆ.

ವರದಿ ತರಿಸಿದ್ದು, ಅದರ ಆಧಾರ ಕ್ರಮವಹಿಸಲಾಗುವುದು.

ಈ) ನಿವೇಶನದ ಕೊರತೆಯಿಂದಾಗಿ ಮಹಾಲಕ್ಷ್ಮಿಪುರಂ ವಿಧಾನಸಭಾ ಕ್ಷೇತ್ರವ್ಯಾಪ್ತಿಯ 5 ಸರ್ಕಾರಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಸಾಧ್ಯವಾಗಿರುವುದಿಲ್ಲ. ನಿವೇಶನಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ಮಹಾನಗರ ಪಾಲಿಕೆಗೆ ಮತ್ತು ಜನಪ್ರತಿನಿಧಿಗಳಿಗೆ ಮನವಿ ಮಾಡಲಾಗಿದೆ.

ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿನ ಅನುದಾನದ ಮಿತಿಯೊಳಗೆ ಹಂತಹಂತವಾಗಿ ಪ್ರತಿ ವರ್ಷವೂ ಮೂಲಭೂತ ಸೌಲಭ್ಯ ಒದಗಿಸಲಾಗುತ್ತಿದ್ದು. ನಿವೇಶನ ದೊರೆತ ನಂತರ ಈ ಬಗ್ಗೆ ಕ್ರಮವಹಿಸಲಾಗುವುದು.

ಸಕಲೇಶಪುರ ಮತ್ತು ಆಲೂರು ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ

246 (568) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕಿನ ಹೆತ್ತೂರು ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಕಾಲೇಜಿಗೆ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಹಾಸನ ಜಿಲ್ಲೆ, ಆಲೂರು ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಈಗಿರುವ ಕಟ್ಟಡ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಸಾಕಾಗದಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಹೆಚ್ಚುವರಿ ಕಟ್ಟಡಗಳನ್ನು ಯಾವಾಗ ನಿರ್ಮಿಸಲಾಗುವುದು? (ಪೂರ್ಣ ಮಾಹಿತಿ ನೀಡುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ನಿವೇಶನದ ಲಭ್ಯತೆ ಹಾಗೂ ಅನುದಾನದ ಲಭ್ಯತೆಯನುಸಾರ ಕಟ್ಟಡವನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದು.

ಇ) ಬಂದಿದೆ.

ಈ) ಅನುದಾನದ ಲಭ್ಯತೆಯನುಸಾರ ಹೆಚ್ಚುವರಿ ಕೊಠಡಿಯನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದು.

ಶಿಕ್ಷಕರ ಕೊರತೆ

301 (368) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಶಿಕ್ಷಕರ ಕೊರತೆ ನೀಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

ಇ) ಮಂಡ್ಯ ಉತ್ತರ ವಲಯದಲ್ಲಿ ಮಂಜೂರಾದ ಶಿಕ್ಷಕರ ಹುದ್ದೆಗಳಿಗೆ ಎದುರಾಗಿ ಹುದ್ದೆಗಳು ಖಾಲಿ ಇರುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಹೌದು

ಆ) ಪ್ರೌಢ ಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ ಭರ್ತಿಗೆ ಅನುಮತಿಸಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿದ್ದು, ಸಹಮತಿ ದೊರೆತ ತಕ್ಷಣ ಕ್ರಮವಹಿಸಲಾಗುವುದು. ಶಾಲೆಗಳಲ್ಲಿ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಅತಿಥಿ ಶಿಕ್ಷಕರನ್ನು ನೇಮಿಸಿ ಕೊಳ್ಳಲು ಆರ್ಥಿಕ ಇಲಾಖೆಯ ಅನುಮತಿ ಕೋರಿದ್ದು ದೊರೆತ ತಕ್ಷಣ ಕ್ರಮವಹಿಸಲಾಗುವುದು.

ಇ) ಮೇಲಿನಂತೆ

ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ

204 (420) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) :- ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಬೀದರ್ ಜಿಲ್ಲೆಯಲ್ಲಿ ಭಾಗ್ಯಲಕ್ಷ್ಮಿ ಬಾಂಡ್ ಯೋಜನೆಯಡಿಯಲ್ಲಿ ನೀಡಬೇಕಾಗಿರುವ ಬಾಂಡ್‌ಗಳ ಸಂಖ್ಯೆ ಎಷ್ಟು ; (ವಿಧಾನಸಭಾ ಕ್ಷೇತ್ರಾವಾರು ವಿವರ ನೀಡುವುದು)

ಆ) ಬಾಕಿ ಇರುವ ಬಾಂಡ್‌ಗಳನ್ನು ಯಾವಾಗ ವಿತರಿಸಲಾಗುವುದು;

ಇ) ಈ ಬಾಂಡ್‌ಗಳ ವಿತರಣೆಯ ವಿಳಂಬಕ್ಕೆ ಕಾರಣಗಳೇನು;

ಈ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಇರುವ ಬಾಂಡ್‌ಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಶ್ರೀ ಕಳಶಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) 2266 ಬಾಂಡ್‌ಗಳನ್ನು ನೀಡಬೇಕಾಗಿರುತ್ತದೆ.

ವಿಧಾನಸಭಾ ಕ್ಷೇತ್ರಾವಾರು ವಿವರ ಈ ಕೆಳಕಂಡಂತಿದೆ.

ವಿಧಾನ ಸಭಾ ಕ್ಷೇತ್ರ	ನೀಡಬೇಕಾಗಿರುವ ಬಾಂಡ್‌ಗಳ ಸಂಖ್ಯೆ
ಬೀದರ್ ಉತ್ತರ	300
ಬೀದರ್ ದಕ್ಷಿಣ	179
ಹುಮ್ನಾಬಾದ್	525
ಬಸವಕಲ್ಯಾಣ	583
ಭಾಲ್ಕಿ	644
ಸಂತಪುರ	35
ಒಟ್ಟು	**2266**

ಆ) ಅನುದಾನದ ಲಭ್ಯತೆಗನುಗುಣವಾಗಿ ಬಾಂಡ್‌ಗಳನ್ನು ಮುದ್ರಿಸಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಮೇಲಿನಂತೆ.

ಈ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಇರುವ ಬಾಂಡ್‌ಗಳ ಸಂಖ್ಯೆ: 179

ಕುಂದಗೋಳ ಮತಕ್ಷೇತ್ರದಲ್ಲಿ ಹೊಸದಾಗಿ ಪ್ರೌಢಶಾಲೆ ಪ್ರಾರಂಭ

206 (720) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಂದಗೋಳ ಮತಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಕೋರಿಕೆ ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಮಂಜೂರಾತಿಯನ್ನು ನೀಡದೆ ಇರಲು ಕಾರಣಗಳೇನು;

ಇ) ಬರುವ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಸಾಧ್ಯವಿಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಬಂದಿರುತ್ತದೆ.

ಕುಂದಗೋಳ ಮತಕ್ಷೇತ್ರದ ಕುಂದಗೋಳ ಹಾಗೂ ಕುಂದಗೋಳ ತಾಲ್ಲೂಕಿನ ತರ್ಲಘಟ್ಟ, ಸಂಶಿ ಮತ್ತು ಹರ್ಲಾಪುರ ಗ್ರಾಮಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಮನವಿಗಳು ಬಂದಿರುತ್ತದೆ.

ಧಾರವಾಡ ಜಿಲ್ಲೆಯಲ್ಲಿ ಒಟ್ಟು 10 ಕಾಲೇಜುಗಳು ಇದ್ದು, 05 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಮತ್ತು 05 ಅನುದಾನ ಹಾಗೂ ಅನದಾನಿತ ಕಾಲೇಜುಗಳು ಕುಂದಗೋಳ ಮತಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದೆ.. 2011-2012 ನೇ ಸಾಲಿನ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಕಾಲೇಜಿನ ಹೆಸರು ಮತ್ತು ವಿಳಾಸ	ಪ್ರಥಮ ಪಿಯುಸಿ			ದ್ವಿತೀಯ ಪಿಯುಸಿ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಸರ್ಕಾರಿ ಪದವಿ ಪೂರ್ವ ಕಾಲೇಜು, ಗುಡಗೇರಿ ಕುಂದಗೋಳ ತಾ:	65	44	109	63	28	91
ಸರ್ಕಾರಿ ಪದವಿ ಪೂರ್ವ ಕಾಲೇಜು, ಕಮ್ಮಡೊಳ್ಳಿ ಕುಂದಗೋಳ ತಾ:	63	28	91	42	33	75
ಸರ್ಕಾರಿ ಪದವಿ ಪೂರ್ವ ಕಾಲೇಜು, ಹಿರೇಗುಂಗಳ, ಕುಂದಗೋಳ ತಾ:	38	17	55	39	12	51
ಸರ್ಕಾರಿ ಪದವಿ ಪೂರ್ವ ಕಾಲೇಜು, ಕುಂದಗೋಳ ತಾ:	113	63	176	69	63	112
ಸರ್ಕಾರಿ ಪದವಿ ಪೂರ್ವ ಕಾಲೇಜು, ಯರಗುಪ್ಪಿ, ಕುಂದಗೋಳ ತಾ:	20	11	31	14	08	22
ಜೆ.ಎಸ್.ಎಸ್.ಪದವಿ ಪೂರ್ವ ಕಾಲೇಜು, ಯಲಿವಾಳ,	22	13	35	35	18	53

ಕುಂದಗೋಳ ತಾ:						
ಜಿ.ಕೆ.ಹಿರೇಗೌಡರ ಪದವಿ ಪೂರ್ವ ಯಲಿವಾಳ, ಕುಂದಗೋಳ ತಾ: (ಅನುದಾನಿತ)	102	49	151	127	56	183
ಶ್ರೀ ಹರಭಟ್ಟ ಸಂಯುಕ್ತ ಪದವಿ ಪೂರ್ವ ಕಾಲೇಜು, ಕುಂದಗೋಳ ತಾ: (ಅನುದಾನಿತ)	92	54	146	109	88	197
ಎಸ್.ಯು.ಎಜೆ. ಪದವಿ ಪೂರ್ವ ಕಾಲೇಜು, ಕುಬೀಹಾಳ್, ಕುಂದಗೋಳ ತಾ: (ಅನುದಾನಿತ)	54	34	88	72	41	113
ಕೆ.ಎಲಸಇ ಪದವಿ ಪೂರ್ವ ಕಾಲೇಜು ಸಂಶಿ ಕುಂದಗೋಳ ತಾ: (ಅನುದಾನ ರಹಿತ)	101	51	152	99	51	160

ಸರ್ಕಾರಿ ಪದವಿ ಪೂರ್ವ ಕಾಲೇಜು ತರಲಘಟ್ಟ ಕುಂದಗೋಳ ತಾ: ಸರ್ಕಾರಿ ಆದೇಶ ಸಂ: ಇಡಿ 73 ಎಸ್.ಹೆಚ್.ಹೆಚ್. 2006 (2) ಬೆಂಗಳೂರು, ದಿನಾಂಕ 29-06-2006 ಇದರನ್ವಂತು ಕಾಲೇಜು ಮಂಜೂರಾಗಿದ್ದು, ಕಾಲೇಜು ಪ್ರಾರಂಭವಾಗಿರುವುದಿಲ್ಲ.

ಆ) ಹಾಲಿ ಪ್ರಾರಂಭಿಸಲಾಗಿರುವ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವವರೆಗೆ ಯಾವುದೇ ಹೊಸ ಕಾಲೇಜುಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಬಾರದೆಂದು ಸರ್ಕಾರವು ಆದೇಶ:ಇಡಿ 451 ಯೋಯೋಕ 2009, ದಿನಾಂಕ: 20-02-2010ರಲ್ಲಿ ಆದೇಶಿಸಿದೆ.

ಇ) ಸ್ಥಳೀಯ ಅಗತ್ಯತೆಗಳ ಆಧಾರದಲ್ಲಿ ಪರಿಶೀಲಿಸಲಾಗುವುದು.

ಈ) ಹಾಲಿ ಇರುವ ಸರ್ಕಾರಿ ಕಾಲೇಜುಗಳನ್ನು ಸುಸಜ್ಜಿತಗೊಳಿಸಲು ಆದ್ಯತೆ ನೀಡಲಾಗುತ್ತಿದೆ.

ಪೌಷ್ಠಿಕಾಂಶ ಕೊರತೆ ಇರುವ ಮಕ್ಕಳ ಆರೋಗ್ಯ ರಕ್ಷಣೆಗಾಗಿ ಸರ್ಕಾರದ ಕ್ರಮಗಳು

230 (876) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) :- ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಾದ್ಯಂತ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸಿ ಪೌಷ್ಟಿಕ ಆಹಾರವನ್ನು ಒದಗಿಸಿಕೊಡುವ ಕುರಿತು ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಯಾವುವು; (ವಿವರ ನೀಡುವುದು)

ಆ) ಅಪೌಷ್ಟಿಕತೆಯಿಂದ ಅನಾರೋಗ್ಯ ಸ್ಥಿತಿಯಲ್ಲಿರುವ ಮಕ್ಕಳ ಆರೋಗ್ಯ ತಪಾಸಣೆ, ಪೌಷ್ಟಿಕ ಆಹಾರ ವಿತರಣೆಯ ನಿಟ್ಟಿನಲ್ಲಿ ಸರ್ಕಾರದ ಪರಿಣಾಮಕಾರಿ ಕ್ರಿಯಾ ಯೋಜನೆಗಳೇನು; (ಮಾಹಿತಿ ಒದಗಿಸುವುದು)

ಇ) ಕಳೆದ ಮೂರು ವರ್ಷಗಳಲ್ಲಿ ಅಪೌಷ್ಟಿಕ ಪೀಡಿತ ಮಕ್ಕಳ ಸಂರಕ್ಷಣೆಗಾಗಿ ಮಾಡಿದ ಖರ್ಚು – ವೆಚ್ಚಗಳ ಮೊತ್ತ ಎಷ್ಟು? (ವಿವರ ನೀಡುವುದು)

ಶ್ರೀ ಕಳಕಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) 1. ಅತೀ ಕಡಿಮೆ ತೂಕದ ಮಕ್ಕಳಿಗೆ ಪ್ರತಿ ದಿನ ತಲಾ ರೂ. 6.90ರ ಮೌಲ್ಯದ ಪೂರಕ ಪೌಷ್ಟಿಕ ಆಹಾರವನ್ನು ಅಂಗನವಾಡಿ ಕೇಂದ್ರದಲ್ಲಿ ನೀಡಲಾಗುತ್ತಿದೆ.

2, ಅತೀ ಕಡಿಮೆ ತೂಕದ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿ ಪ್ರತಿ ಮಗುವಿಗೆ ಪ್ರತಿ ವರ್ಷಕ್ಕೆ ರೂ. 750/– ಗಳನ್ನು ಮಗುವಿಗೆ ಚಿಕಿತ್ಸೆ ಹಾಗೂ ಥೆರಪೆಟಿಕ್ ಆಹಾರಕ್ಕಾಗಿ ನೀಡಲಾಗುತ್ತಿದೆ. ವೈದ್ಯರು ನೀಡುವ ಚಿಕಿತ್ಸಾ ಚೀಟಿಯಂತೆ ಔಷಧಿಗಳನ್ನು ಖರೀದಿಸಲು ಮಕ್ಕಳ ಪಾಲಕರಿಗೆ ಈ ಮೊತ್ತವನ್ನು ನೀಡಲಾಗುತ್ತಿದೆ.

3. ಈಗ ನೀಡುತ್ತಿರುವ ಆಹಾರದ ಜೊತೆಗೆ ಏಪ್ರಿಲ್ 2012 ರಿಂದ ಉಚಿತವಾಗಿ ವಾರದಲ್ಲಿ 4 ದಿನ ಬೇಯಿಸಿದ ಮೊಟ್ಟೆ ಮತ್ತು ಪ್ರತಿದಿನ 200 ಎಂ.ಎಲ್. ಹಾಲನ್ನು ವಾರದಲ್ಲಿ 2 ದಿನ ನೀಡಲಾಗುತ್ತಿದೆ. ಮೊಟ್ಟೆಯನ್ನು ಉಪಯೋಗಿಸದ ಮಕ್ಕಳಿಗೆ ವಾರದಲ್ಲಿ 6 ದಿನವೂ 200 ಎಂ.ಎಲ್. ಹಾಲನ್ನು ನೀಡಲಾಗುತ್ತಿದೆ.

ಆ) 1. ಪ್ರತಿ ತ್ರೈಮಾಸಿಕಕ್ಕೊಮ್ಮೆ ಅಂಗನವಾಡಿ ಕೇಂದ್ರಗಳಲ್ಲಿ ನಿರಂತರವಾಗಿ ಮಕ್ಕಳ ಆರೋಗ್ಯ ತಪಾಸಣೆಯನ್ನು ನಡೆಸಲಾಗುತ್ತದೆ. ಅಪೌಷ್ಟಿಕ ಮಕ್ಕಳಿಗೆ ತಜ್ಞ ವೈದ್ಯರಿಂದ 2 ಬಾರಿ ವಿಶೇಷ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಗಾಗಿದೆ.

ಅಂಗನವಾಡಿ ಕೇಂದ್ರಗಳಲ್ಲಿ ಪ್ರತಿ ತಿಂಗಳು ಮಕ್ಕಳ ತೂಕವನ್ನು ಮಾಡಲಾಗುವುದು. 2 ಬಾರಿ ಎಲ್ಲಾ ಮಕ್ಕಳ ತೂಕವನ್ನು ವಿಶೇಷವಾಗಿ ಮಾಡಲಾಗಿರುತ್ತದೆ.

2. ಬಾಲಸಂಜೀವಿನಿ ಯೋಜನೆಯಡಿ ರಾಜ್ಯದ 8 ಆಸ್ಪತ್ರೆಗಳ ಮೂಲಕ ಗುರುತಿಸಿರುವ 18 ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. 3ನೇ ಹಂತದ ಚಿಕಿತ್ಸೆಗೆ

ಅವಶ್ಯವಿರುವ ಮಕ್ಕಳಿಗೆ ಗರಿಷ್ಠ ರೂ. 35000/- ಹಾಗೂ ನವಜಾತ ಶಿಶುವಿನ ಆರೈಕೆ ಮತ್ತು ಚಿಕಿತ್ಸೆಗೆ ರೂ. 50000/- ಗಳನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ.

3. ಮಕ್ಕಳ ತಾಯಂದಿರಿಗೆ ನಿಯಮಿತವಾಗಿ ಆರೋಗ್ಯ ಮತ್ತು ಪೌಷ್ಟಿಕತೆಯ ಬಗ್ಗೆ ತಿಳುವಳಿಕೆ ಹಾಗೂ ಪ್ರಾತ್ಯಕ್ಷತೆ ನೀಡುವುದು. ಅವರಲ್ಲಿ ಮಕ್ಕಳ ಪೋಷಣೆ, ಸ್ವಚ್ಛತೆ ಹಾಗೂ ಮನೆಯಲ್ಲೇ ಪೌಷ್ಟಿಕ ಆಹಾರವನ್ನು ನೀಡುವುದರ ಬಗ್ಗೆ ತಿಳುವಳಿಕೆ ಮಟ್ಟವನ್ನು ಹೆಚ್ಚಿಸಲು ಆರೋಗ್ಯ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪರಸ್ಪರ ಸಹಕಾರದೊಂದಿಗೆ ಕಾರ್ಯನಿರ್ವಹಿಸಲು ಕ್ರಮ ವಹಿಸಲಾಗಿದೆ.

4. ಅಂಗನವಾಡಿ ಕಾರ್ಯಕರ್ತೆಯರು ತಿಂಗಳಲ್ಲಿ 2 ದಿನ ನಡೆಯುವ ತಾಯಂದಿರ ಸಭೆಗಳಲ್ಲಿ ಹಾಗೂ ತಿಂಗಳಿಗೊಮ್ಮೆ ನಡೆಯುವ ಪೌಷ್ಟಿಕ ಆಹಾರ ಶಿಬಿರಗಳಲ್ಲಿ ಆರೋಗ್ಯ ಮತ್ತು ಪೌಷ್ಟಿಕ ಆಹಾರದ ಬಗ್ಗೆ ಮಹಿಳೆಯರಿಗೆ ಅರಿವು ನೀಡುತ್ತಿದ್ದಾರೆ. ಇದಕ್ಕಾಗಿ 48 ವಿಷಯಗಳನ್ನೊಳಗೊಂಡ ಆರೋಗ್ಯ ಮತ್ತು ಪೌಷ್ಟಿಕ ಆಹಾರ ಕೈಪಿಡಿ ಹಾಗೂ Flip Chart ಗಳನ್ನು ತಯಾರಿಸಿ ಅಂಗನವಾಡಿ ಕಾರ್ಯಕರ್ತೆಯರಿಗೆ ಒದಗಿಸಲಾಗಿದೆ.

5. ದಿನಾಂಕ: 12-04-2012 ರಂದು ರಾಜ್ಯದ ಉಚ್ಚ ನ್ಯಾಯಾಲಯವು ಗೌರವಾನ್ವಿತ ನ್ಯಾಯಧೀಶರಾದ ಶ್ರೀ ಎನ್.ಕೆ. ಪಾಟೀಲ್, ಇವರ ಅಧ್ಯಕ್ಷತೆಯಲ್ಲಿ ಅಪೌಷ್ಟಿಕತೆ ನಿವಾರಣೆಗೆ ಸಮಿತಿಯನ್ನು ರಚಿಸಿರುತ್ತದೆ. ಸದರಿ ಸಮಿತಿಯು ರಾಜ್ಯದ್ಯಾಂತ ಪ್ರವಾಸ ಮಾಡಿ ಮಾಹಿತಿಗಳನ್ನು ಸಂಗ್ರಹಿಸಿ ಮಧ್ಯಂತರ ವರದಿ ಸಲ್ಲಿಸಿದ್ದು ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.

ಇ) ಕಳೆದ ಮೂರು ವರ್ಷಗಳಿಂದ ಅಪೌಷ್ಟಿಕ ಮಕ್ಕಳ ಸುಧಾರಣೆಗಾಗಿ ನಿಗದಿ ಪಡಿಸಿದ ಮೊತ್ತ ಮತ್ತು ವೆಚ್ಚದ ವಿವರ

(ರೂ. ಲಕ್ಷಗಳಲ್ಲಿ)

ವರ್ಷ	ಯೋಜನೆ	ನಿಗದಿಪಡಿಸಿದ ಅನುದಾನ	ಸಾಧಿಸಿದ ಪ್ರಗತಿ	
			ಭೌತಿಕ	ಆರ್ಥಿಕ
2009-10	ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ	65.00	8085	60.64
	ಪೂರಕ ಪೌಷ್ಟಿಕ ಆಹಾರ	145.53	8085	145.53

2010–11	ಬಾಲಸಂಜೀವಿನಿ	8750.00	912	8750.00
	ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ	50.00	6666	50.00
	ಪೂರಕ ಪೌಷ್ಠಿಕ ಆಹಾರ	119.99	6666	119.99
2011–12	ಬಾಲಸಂಜೀವಿನಿ	1155.00	6127	631.67
	ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ	445.00	59333	445.00
	ಪೂರಕ ಪೌಷ್ಠಿಕ ಆಹಾರ	1067.99	59333	1067.99

ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ

237 (895) ಶ್ರೀ ಖಾದರ್ ಯು.ಟಿ. (ಮಂಗಳೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಆಸ್ಪತ್ರೆಗಳಲ್ಲಿ ಔಷಧಿಗಳು ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು);

ಅ) ಆರೋಗ್ಯ ಇಲಾಖೆಯಡಿಯಲ್ಲಿ ಬರುವ ಆರೋಗ್ಯ ಸಂಸ್ಥೆಗಳಿಗೆ ನಿಗದಿಗೊಳಿಸಿದ ಅನುದಾನಕ್ಕೆ ತಕ್ಕಂತೆ ಬೇಡಿಕೆ ಪಟ್ಟಿಯನ್ನು ಅವರಿಂದ ಪಡೆದು, ಆಯಾ ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆ. ಕೊರತೆ ಬೀಳುವ ಔಷಧಿಗಳನ್ನು ಆಯಾ ಆರೋಗ್ಯ ಸಂಸ್ಥೆಗಳ ಬಳಕೆ ನಿಧಿ (User Charges) ಹಾಗೂ ಮುಕ್ತನಿಧಿ (Untied fund) ಯಿಂದಲೂ ಖರೀದಿಸಲು ಅವಕಾಶವಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ವಿವಿಧ ಹಂತದ ಆಸ್ಪತ್ರೆಗಳಿಗೆ 2011–12ನೇ ಸಾಲಿನಲ್ಲಿ ಒಟ್ಟು ರೂ. 2,27,70,394/– ಗಳಷ್ಟು ಅನುದಾನ ಒದಗಿಸಲಾಗಿದ್ದು, ಅದರಲ್ಲಿ ಒಟ್ಟು ರೂ. 2,27,95,647/– ಗಳಷ್ಟು ಮೌಲ್ಯದ ಔಷಧಿಗಳನ್ನು ಪೂರೈಸಲಾಗಿದೆ.

ಪ್ರಸಕ್ತ 2012–13ನೇ ಸಾಲಿನಲ್ಲಿ ಒಟ್ಟು ರೂ. 2,28,44,995/– ಗಳಷ್ಟು ಅನುದಾನ ಒದಗಿಸಲಾಗಿದ್ದು, ಅದರಲ್ಲಿ ಒಟ್ಟು ರೂ. 48,99,022/– ಗಳಷ್ಟು ಮೌಲ್ಯದ ಔಷಧಿಗಳನ್ನು ದಿನಾಂಕ: 20–07–2012 ರವರೆಗೆ ಪೂರೈಸಲಾಗಿದೆ.

ಪ್ರಸಕ್ತ ಜಿಲ್ಲಾ ಔಷಧಿ ಉಗ್ರಾಣ, ಮಂಗಳೂರಿನಲ್ಲಿ ಒಟ್ಟು ರೂ. 1.32 ಕೋಟಿಗಳಷ್ಟು ಮೌಲ್ಯದ ಔಷಧಿಗಳು ದಾಸ್ತಾನು ಲಭ್ಯವಿದ್ದು, ಆಯಾ ಆಸ್ಪತ್ರೆಗಳ ಬೇಡಿಕೆಗೆ ಅನುಗುಣವಾಗಿ

ಔಷಧಿಗಳನ್ನು ಪೂರೈಸಲಾಗುತ್ತದೆ.

ಆ) ನಿಗದಿತ ಅನುದಾನಕ್ಕೆ ಪೂರ್ಣವಾಗಿ ಔಷಧಿಗಳನ್ನು ಪಡೆದ ನಂತರವೂ ಹೆಚ್ಚಿನ ಔಷಧಿಗಳ ಅಗತ್ಯವಿದ್ದಲ್ಲಿ, ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ, ಆಯಾ ಆರೋಗ್ಯ ಸಂಸ್ಥೆಗಳಿಗೆ ಹೆಚ್ಚುವರಿಯಾಗಿ ಔಷಧಿಗಳನ್ನು ಅಗತ್ಯಕ್ಕೆ ತಕ್ಕಂತೆ ಪೂರೈಸಲಾಗುತ್ತಿದೆ ಹಾಗೂ ಆಯಾ ಆರೋಗ್ಯ ಸಂಸ್ಥೆಗಳ ಬಳಕೆ ನಿಧಿ (User Charges) ಹಾಗೂ ಮುಕ್ತನಿಧಿ (Untied fund) ಯಿಂದಲೂ ಖರೀದಿಸಲು ಅವಕಾಶವಿರುತ್ತದೆ.

ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನ

229 (875) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಶಿಕ್ಷಣ ಹಕ್ಕು ಕಾಯಿದೆ ಜಾರಿಯಿಂದ ಉಂಟಾಗಿರುವ ಸಮಸ್ಯೆಗಳು ಯಾವುವು: ಮತ್ತು ಅದಕ್ಕೆ ಸರ್ಕಾರ ಅನುಸರಿಸಿದ ಪರಿಹಾರ ಕ್ರಮಗಳೇನು? (ಗುರಿ ಸಾಧನೆಯ ಜಿಲ್ಲಾವಾರು ವಿವರ ನೀಡುವುದು)

ಆ) ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ಎಷ್ಟು ಮಕ್ಕಳು ಕಾಯಿದೆಯ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ? (ವಿವರ ನೀಡುವುದು)

ಇ) ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಆರ್‌ಟಿಇ ಕಾಯಿದೆಯ ಅನುಷ್ಠಾನದ ವಿವರಗಳೇನು; ಎಷ್ಟು ಮಕ್ಕಳು ಸೌಲಭ್ಯದ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ? (ವಿವರ ನೀಡುವುದು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಯಾವುದು ಇರುವುದಿಲ್ಲ. ಸಾಧನೆಯ ವಿವರ ಲಗತ್ತಿಸಿದೆ.

ಆ) ಒಟ್ಟು ವಿದ್ಯಾರ್ಥಿಗಳ ಸಂಖ್ಯೆ: 47501

ಇ) ಬೆಂಗಳೂರು ಮಹಾನಗರ ಪ್ರದೇಶದಲ್ಲಿಯೂ ಸಹ ಆರ್‌ಟಿಇ ಕಾಯಿದೆಯನ್ನು ಅನುಷ್ಠಾನ ಗೊಳಿಸಲಾಗಿದೆ.

ಜಿಲ್ಲೆ	ಶಾಲೆಗಳು	ಒಟ್ಟು ವಿದ್ಯಾರ್ಥಿಗಳು
ಬೆಂಗಳೂರು ಉತ್ತರ	439	1999
ಬೆಂಗಳೂರು ದಕ್ಷಿಣ	742	2877
ಒಟ್ಟು	**1181**	**4876**

Government of Karnataka
Department of Public Instruction
School Registration Under RTE Act - 2012

District Wise Form 5 Submission Report

District	No. of Beo's in District	No. of Beo's Added details in Form-5	Total No.of School Details Entered in Form-5 By Beo (District Wise)	Total SC Seats Admited	Total ST Seats Admitted	Total OBC Seats Admitted	Total Seats Admitted
Belgaum	7	7	263	378	188	1345	1910
Bagalkot	6	6	326	558	131	1186	1869
Bijapur	7	7	440	1278	120	2809	4225
Gulbarga	8	8	275	516	68	1072	1654
Bidar	5	5	575	600	189	1412	2204
Raichur	5	5	314	550	207	986	1743
Koppal	4	4	257	431	203	1169	1798
Gadag	6	6	117	276	118	1087	1461

Dharwad	7	7	251	245	103	1035	1386
Uttar Kannada	5	5	58	52	11	487	550
Haveri	7	7	177	275	170	960	1403
Bellary	8	8	375	819	355	1635	2807
Chitradurga	6	6	142	314	183	617	1114
Davangere	7	7	260	400	206	747	1353
Shimoga	7	7	106	133	27	272	432
Udupi	5	5	76	57	22	731	811
Chickmagalur	8	8	143	215	55	524	795
Tumkur	6	6	225	327	131	866	1323
Kolar	6	6	258	616	121	1226	1966
Bangalore South	5	5	742	1114	111	1438	2877
Bangalore Rural	4	4	150	338	72	649	1059
Mandya	8	7	213	348	47	1138	1533
Hassan	8	8	268	256	36	811	1098

Dakshina Kannada	7	7	117	65	49	625	739
Kodagu	3	3	85	35	5	169	209
Mysore	9	9	246	339	119	640	1099
Chamrajnagar	5	5	103	187	75	298	561
Bangalore North	4	4	439	713	53	1234	1999
Chikballapur	6	6	235	551	187	948	1695
Chikkodi	8	8	243	521	70	965	1548
Madhugari	4	4	98	137	52	335	524
Ramanagar	4	4	148	299	40	697	1046
Yadgir	3	3	109	81	47	131	259
Sirsi	6	6	45	106	25	320	451
Total	**204**	**203**	**7879**	**13130**	**3596**	**30564**	**47501**

ಅಂಗನವಾಡಿ ಕಟ್ಟಡಗಳು

28	ತುಮಕೂರು	0	1	0	0	0	0	0	0	0	0	3	0	0	1	0	0	1	0	0	0	0	4	0	0	0	0	0	0	1	0	1	0	0	3	[illegible]	0	0	[illegible]	[illegible]	[illegible]	[illegible]	0	[illegible]	[illegible]	[illegible]	[illegible]	0	[illegible]
29	ಉಡುಪಿ	3	5	0	0	0	0	0	0	0	3	5	0	0	8	1	0	[illegible]	0	0	3	0	[illegible]	0	0	0	0	0	0	2	0	0	0	0	0	0	0	3	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
30	ಉತ್ತರ ಕನ್ನಡ	0	3	0	0	0	0	1	0	0	4	4	0	0	1	2	0	1	0	0	0	0	5	0	0	0	0	0	0	3	0	1	3	0	1	0	0	[illegible]	1	0	0	0	0	[illegible]	0	0	0	0	36
	ಒಟ್ಟು	39	11	8	6	2	6	[illegible]	2	1	56	70	2	[illegible]	60	21	6	[illegible]	8	0	3	2	87	4	2	2	28	5	4	[illegible]	9	[illegible]	3	[illegible]	[illegible]	[illegible]	[illegible]	0	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]

Sd

ಕಾಲೇಜು ಶಿಕ್ಷಣ ನಿರ್ದೇಶಕರು

ವಾರ್ಡುಗಳಲ್ಲಿ ಬೆಡ್ಡುಗಳ ಕೊರತೆ

296(724) **ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು)**:- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

(ಅ) ಗೌರಿಬಿದನೂರು ಪಟ್ಟಣದ ಆಸ್ಪತ್ರೆಗೆ ಪ್ರತಿದಿನ ಹೊರ ರೋಗಿಗಳ ಸಂಖ್ಯೆ ಹೆಚ್ಚಾಗಿದ್ದು (500 ಕ್ಕೂ ಹೆಚ್ಚು) ವಾರ್ಡುಗಳು ಮತ್ತು ಬೆಡ್ಡುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸದರಿ ಆಸ್ಪತ್ರೆಯಲ್ಲಿ 250 (100 ರಿಂದ 250) ಬೆಡ್ಡುಗಳನ್ನು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸಕ್ತ ವರ್ಷದಲ್ಲಿ ಸರ್ಕಾರ ಚಿಂತಿಸಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕ್ರಮಕೈಗೊಳ್ಳುವುದೇ?

(ಇ) ಗೌರಿಬಿದನೂರು ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಿಶಿನ್ ಪದೇ ಪದೇ ಕೆಟ್ಟು ಹೋಗುತ್ತಿದ್ದು ರೋಗಿಗಳಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೊಸ ಸ್ಕ್ಯಾನಿಂಗ್ ಮಿಷನ್ ನೀಡಲು ಸರ್ಕಾರ ಕ್ರಮಕೈಗೊಳ್ಳುವುದೇ? (ವಿವರ ಒದಗಿಸುವುದು)

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

(ಅ) 400 ರಿಂದ 500 ಜನ ಹೊರ ರೋಗಿಗಳಾಗಿ ಬರುತ್ತಿದ್ದು, 40 ರಿಂದ 60 ಜನ ರೋಗಿಗಳು ಒಳ ರೋಗಿಗಳಾಗಿ ದಾಖಲಾಗುತ್ತಿರುವುದು ಗಮನಕ್ಕೆ ಬಂದಿದೆ.

(ಆ) ರಾಜ್ಯದಲ್ಲಿ ಹೊಸ ಆಸ್ಪತ್ರೆಗಳ ಪ್ರಾರಂಭಿಸುವಿಕೆ ಮತ್ತು ಮೇಲ್ದರ್ಜೆಗೇರಿಸುವಿಕೆಗೆ ಬದಲಾಗಿ ಅಸ್ತಿತ್ವದಲ್ಲಿರುವ ಆಸ್ಪತ್ರೆಗಳಿಗೆ ಮೂಲ ಸೌಕರ್ಯಗಳಾದ ಕಟ್ಟಡ, ಉಪಕರಣಗಳು, ವೈದ್ಯರು ಮತ್ತು ಸಿಬ್ಬಂದಿ ಒದಗಿಸಿ ಅವುಗಳ ಬಲವರ್ಧನೆಗೆ ಹೆಚ್ಚು ಗಮನಹರಿಸಬೇಕಾಗಿದೆ. ಆದುದರಿಂದ, ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿರುವುದು ಹಾಗೂ ಪ್ರಾಥಮಿಕ ಅರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಯ ಮೇಲ್ದರ್ಜೆ ಗೇರಿಸುವಿಕೆಯನ್ನು ದಿನಾಂಕ: 11-1-2011 ರಿಂದ ಮೂರು ವರ್ಷಗಳ ಅವಧಿಗೆ ಒಂದು ನೀತಿ ನಿರ್ಣಯವಾಗಿ ಸರ್ಕಾರವು ತಡೆಹಿಡಿದಿದೆ.

(ಇ) ಸ್ಕ್ಯಾನಿಂಗ್ ಯಂತ್ರವನ್ನು ಈಗ ದುರಸ್ತಿಗೊಳಿಸಲಾಗಿದ್ದು, ಅದು ಪ್ರಸ್ತುತ

ಕಾರ್ಯನಿರ್ವಹಿಸುತ್ತಿದೆ. ಹಣಕಾಸು ಲಭ್ಯತೆ ಆಧಾರದ ಮೇಲೆ ಹೊಸ ಸ್ಕ್ಯಾನಿಂಗ್ ಮೆಷಿನ್ ಒದಗಿಸುವ ಕುರಿತು ಕ್ರಮ ವಹಿಸಬೇಕಾಗುತ್ತದೆ.

ಮಹಿಳಾ ವೈದ್ಯರ ನೇಮಕಾತಿ

192(379) ಶ್ರೀ ಅಮರೇಶ್ (ಮುಳಬಾಗಿಲು):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

(ಅ) ಮುಳಬಾಗಿಲು ತಾಲ್ಲೂಕಿನ ಹೋಬಳಿಗಳಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಮಹಿಳಾ ವೈದ್ಯರ ನೇಮಕಾತಿಯನ್ನು ಯಾವ ಅವಧಿಯೊಳಗಾಗಿ ಪೂರ್ಣಗೊಳಿಸಲಾಗುವುದು;

(ಇ) ಹೋಬಳಿಗಳ ಆಸ್ಪತ್ರೆಯಲ್ಲಿ ರಾತ್ರಿಯ ಸಮಯದಲ್ಲಿಯೂ ವೈದ್ಯರುಗಳು ಇರುವ ಹಾಗೆ ಸರ್ಕಾರ ಕ್ರಮ ಕೈಗೊಂಡಿದೆಯೇ? (ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

(ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ "ಮಹಿಳಾ ವೈದ್ಯಾಧಿಕಾರಿ" ಎಂಬ ವೃಂದ ಅಸ್ತಿತ್ವದಲ್ಲಿರುವುದಿಲ್ಲ.

(ಆ) ಮುಳಬಾಗಿಲು ತಾಲ್ಲೂಕಿನಲ್ಲಿ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು. ಈ ಆರೋಗ್ಯ ಕೇಂದ್ರಗಳಲ್ಲಿನ ಎಲ್ಲಾ 17 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಭರ್ತಿಯಾಗಿವೆ. ಕಾರ್ಯನಿರತ ವೈದ್ಯರ ಪೈಕಿ ಇಬ್ಬರು ಮಹಿಳಾ ವೈದ್ಯರು ಸೇರಿದ್ದಾರೆ.

(ಇ) ಮೇಲ್ಕಂಡ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ, 10 ಪ್ರಾಥಮಿಕ ಆರೋಗ್ಯ ಕೇಂದ್ರಗಳು 27 x 7 ಕಾರ್ಯನಿರ್ವಹಿಸುವ ಕೇಂದ್ರಗಳಾಗಿದ್ದು, ಅವುಗಳಲ್ಲಿ ದಿನದ 24 ಗಂಟೆ ಹೆರಿಗೆ ಸೌಲಭ್ಯ ಲಭ್ಯವಿದೆ. ಈ ಪೈಕಿ ಹೋಬಳಿ ಮಟ್ಟದಲ್ಲಿ 04 ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಅಂದರೆ ತಾಯಿಲೂರು ಟೈರ್‌ಕೂರ್, ಅವನಿ ಮತ್ತು ನಂಗಳಿ) 24 x 7ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ಸದರಿ ಕೇಂದ್ರಗಳಲ್ಲಿ 03 ಶುಶ್ರೂಷಕರು ಪಾಳಿಯ ಮೇಲೆ ದಿನದ 24 ಗಂಟೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವೈದ್ಯಾಧಿಕಾರಿಗಳು ರಾತ್ರಿಯ ವೇಳೆ ಕಾಲ್‌ಡ್ಯೂಟಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪಶು ಚಿಕಿತ್ಸಾ ಕೇಂದ್ರ ಕಟ್ಟಡಗಳ ನಿರ್ಮಾಣ

252(415) ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು ವಿಧಾನಸಭಾ ಕ್ಷೇತ್ರ):- ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

(ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನಲ್ಲಿ ಇರುವ ಪಶು ಚಿಕಿತ್ಸಾ ಕೇಂದ್ರ/ಆಸ್ಪತ್ರೆಗಳು ಸುಸ್ಥಿತಿ ಹಾಗೂ ಸ್ವಂತ ಕಟ್ಟಡದಲ್ಲಿ ನಡೆಯುತ್ತಿರುವುದೇ;

(ಆ) ತಾಲ್ಲೂಕಿಗೆ 2009-10ನೇ ಸಾಲಿನಿಂದ ಪಶು ಚಿಕಿತ್ಸಾ ಆಸ್ಪತ್ರೆಗಳ ನಿರ್ಮಾಣಕ್ಕೆ ಬಿಡುಗಡೆಗೊಂಡ ಅನುದಾನವೆಷ್ಟು (ವಿವರ ನೀಡುವುದು);

(ಇ) ನಿರ್ಮಾಣಗೊಂಡ ಆಸ್ಪತೆಗಳು ಸಾರ್ವಜನಿಕವಾಗಿ ಉಪಯೋಗ ವಾಗುತ್ತಿರುವುದೇ; ಇಲ್ಲದಿದ್ದಲ್ಲಿ ಕಾರಣವೇನು?

(ಈ) ಹೊಸ ಚಿಕಿತ್ಸೆಗಳ ನಿವರ್ಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ಸಲ್ಲಿಸಿದ್ದಲ್ಲಿ ವಿವರ ನೀಡುವುದು.

(ಉ) ಈ ಬಗ್ಗೆ ಸರ್ಕಾರದ ವತಿಯಿಂದ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) :-

(ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನಲ್ಲಿ 23 ಪಶುವೈದ್ಯಕೀಯ ಸಂಸ್ಥೆಗಳಿದ್ದು, ಇವುಗಳಲ್ಲಿ 22 ಸಂಸ್ಥೆಗಳು ಸ್ವಂತ ಕಟ್ಟಡಗಳನ್ನು ಹೊಂದಿರುತ್ತವೆ.

ಸಿಂಗಮಾರನಹಳ್ಳಿ ಪಶುವೈದ್ಯಕೀಯ ಸಂಸ್ಥೆಯ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಉಮ್ಮತ್ತೂರು ಮತ್ತು ಮಳಲವಾಡಿ ಗ್ರಾಮಗಳ ಪಶುವೈದ್ಯಕೀಯ ಸಂಸ್ಥೆಗಳ ಕಟ್ಟಡ ದುರಸ್ತಿ ಕೈಗೊಳ್ಳಲು 2012-13ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿದೆ.

(ಅ) ಹುಣಸೂರು ತಾಲ್ಲೂಕಿಗೆ 2009-10ನೇ ಸಾಲಿನಿಂದ ಪಶು ಚಿಕಿತ್ಸಾಲಯ/ಆಸ್ಪತ್ರೆಗಳ ನಿರ್ಮಾಣಕ್ಕೆ/ದುರಸ್ತಿಗಾಗಿ ಬಿಡುಗಡೆಯಾದ ಅನುದಾನ.

(ರೂ. ಲಕ್ಷಗಳಲ್ಲಿ)

2009-10	2010-11	2011-2012
15,60	2.60	2.80

(ಇ) ನಿರ್ಮಾಣಗೊಂಡ ಆಸ್ಪತ್ರೆಗಳು ಸಾರ್ವಜನಿಕರಿಗೆ ಉಪಯುಕ್ತ ವಾಗಿರುತ್ತವೆ.

(ಈ) ಸರ್ಕಾರವು ಹೊಸದಾಗಿ ನಿರ್ಮಾಣ ಮಾಡುವ ಕಟ್ಟಡಗಳಿಗೆ ಕೇಂದ್ರ ಪುರಸ್ಕೃತ ವಿ.ಎಸ್.ವಿ.ಹೆಚ್.ಡಿ. ಯೋಜನೆ ಹಾಗೂ ರಾಜ್ಯ ಸರ್ಕಾರದ ಆರ್.ಐ.ಡಿ.ಎಫ್. ಯೋಜನೆಯಡಿ ಲಭ್ಯವಿರುವ ಅನುದಾನಕ್ಕನುಗುಣವಾಗಿ ಆದ್ಯತೆಯ ಮೇರೆಗೆ ಕಟ್ಟಡಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ.

(ಉ) ಕೇಂದ್ರ ಸರ್ಕಾರದ ವಿ.ಎಸ್.ವಿಹೆಚ್.ಡಿ. ಯೋಜನೆ ಹಾಗೂ ರಾಜ್ಯ ಸರ್ಕಾರದ ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆಗಾಗಿ ಕ್ರಮವಹಿಸಿದೆ.

ಸರ್ಕಾರಿ ಆಸ್ಪತ್ರೆಗಳಿಗೆ ವೈದ್ಯರ ನೇಮಕಾತಿ

306 (898) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ):– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಎಷ್ಟು ಮಂದಿ ವೈದ್ಯರನ್ನು ವಿವಿಧ ಸರ್ಕಾರಿ ಆಸ್ಪತ್ರೆಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ; (ವಿವರ ನೀಡುವುದು)

(ಆ) ಎಷ್ಟು ಮಂದಿ ವೈದ್ಯರು ವಿವಿಧ ಕಾರಣ ನೀಡಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು :–

(ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಳೆದ 2 ವರ್ಷಗಳಲ್ಲಿ ಒಟ್ಟು 140 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಅಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಆ ಪೈಕಿ, 51 ವೈದ್ಯರು ರಾಜೀನಾಮೆ ನೀಡಿದ್ದಾರೆ, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಳೆದ 2 ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ವಿವರ.

ಕ್ರ ಸಂ	ಜಿಲ್ಲೆ ಹೆಸರು	ನೇಮಕಾತಿ ಮಾಡಲಾದವರ ಸಂಖ್ಯೆ	ಕರ್ತವ್ಯಕ್ಕೆ ಹಾಜರಾದವರ ಸಂಖ್ಯೆ	ರಾಜೀನಾಮೆ ನೀಡಿದವರು/ವರದಿ ಮಾಡಿಕೊಳ್ಳದವರ ಸಂಖ್ಯೆ
1	2	3	4	5
1.	ಜಿಲ್ಲಾ ಆಕುಕ ಅಧಿಕಾರಿ, ಬೆಂಗಳೂರು (ನ) ಜಿಲ್ಲೆ	0	0	0
2.	ಜಿಲ್ಲಾ ಆಕುಕ ಅಧಿಕಾರಿ ಬೆಂಗಳೂರು (ಗ್ರಾ) ಜಿಲ್ಲೆ	0	0	0
3.	ಜಿಲ್ಲಾ ಆಕುಕ ಅಧಿಕಾರಿ ಕೋಲಾರ	2	2	0
4.	ಜಿಲ್ಲಾ ಆಕುಕ ಅಧಿಕಾರಿ ರಾಮನಗರ	0	0	0
5.	ಜಿಲ್ಲಾ ಅಕುಕ ಅಧಿಕಾರಿ, ಚಿಕ್ಕಬಳ್ಳಾಪುರ	0	0	0
6.	ಜಿಲ್ಲಾ ಆಕುಕ ಅಧಿಕಾರಿ, ತುಮಕೂರು	15	11	4
7.	ಜಿಲ್ಲಾ ಆಕುಕ ಅಧಿಕಾರಿ, ಚಿತ್ರದುರ್ಗ	10	7	3
8.	ಜಿಲ್ಲಾ ಆಕುಕ ಅಧಿಕಾರಿ, ದಾವಣಗೆರೆ	9	7	2
9.	ಜಿಲ್ಲಾ ಆಕುಕ ಅಧಿಕಾರಿ, ಶಿವಮೊಗ್ಗ	14	1	13
10.	ಜಿಲ್ಲಾ ಆಕುಕ ಅಧಿಕಾರಿ, ಮೈಸೂರು	6	2	4
11.	ಜಿಲ್ಲಾ ಆಕುಕ ಅಧಿಕಾರಿ, ಮಂಡ್ಯ	6	4	2
12.	ಜಿಲ್ಲಾ ಆಕುಕ ಅದಿಕಾರಿ, ಚಾಮರಾಜನಗರ	0	0	0
13,	ಜಿಲ್ಲಾ ಆಕುಕ ಆಧಿಕಾರಿ, ಕೊಡಗು	2	2	0
14.	ಜಿಲ್ಲಾ ಆಕುಕ, ಅಧಿಕಾರಿ ಹಾಸನ	15	10	5
15.	ಜಿಲ್ಲಾ ಆಕುಕ, ಆಧಿಕಾರಿ ಚಿಕ್ಕಮಗಳೂರು	9	7	2

16. ಜಿಲ್ಲಾ ಆಕುಕ, ಅಧಿಕಾರಿ, ಮಂಗಳೂರು ದ.ಕ ಜಿಲ್ಲೆ	2	1	1
17. ಜಿಲ್ಲಾ ಆಕುಕ ಅಧಿಕಾರಿ ಉಡುಪಿ	5	4	1
18. ಜಿಲ್ಲಾ ಆಕುಕ ಅಧಿಕಾರಿ, ಬೆಳಗಾವಿ	15	11	4
19. ಜಿಲ್ಲಾ ಆಕುಕ ಆಧಿಕಾರಿ, ಧಾರವಾಡ	0	0	0
20. ಜಿಲ್ಲಾ ಆಕುಕ ಅಧಿಕಾರಿ, ಕಾರವಾರ	1	0	1
21. ಜಿಲ್ಲಾ ಆಕುಕ ಅಧಿಕಾರಿ, ಗದಗ	1	1	0
22. ಜಿಲ್ಲಾ ಆಕುಕ ಅಧಿಕಾರಿ, ಹಾವೇರಿ	9	7	2
23. ಜಿಲ್ಲಾ ಆಕುಕ ಅಧಿಕಾರಿ, ಬಾಗಲಕೋಟೆ	2	1	1
24. ಜಿಲ್ಲಾ ಆಕುಕ ಅಧಿಕಾರಿ, ಬಿಜಾಪುರ	4	4	0
25. ಜಿಲ್ಲಾ ಆಕುಕ ಅಧಿಕಾರಿ, ಗುಲ್ಬರ್ಗಾ	2	0	2
26. ಜಿಲ್ಲಾ ಆಕುಕ ಅಧಿಕಾರಿ, ಯಾದಗಿರಿ	1	1	0
27. ಜಿಲ್ಲಾ ಆಕುಕ ಅಧಿಕಾರಿ, ಬೀದರ್	0	0	0
28. ಜಿಲ್ಲಾ ಆಕುಕ ಅಧಿಕಾರಿ, ರಾಯಚೂರು	3	1	2
29. ಜಿಲ್ಲಾ ಆಕುಕ ಅಧಿಕಾರಿ, ಕೊಪ್ಪಳ	5	3	2
30. ಜಿಲ್ಲಾ ಆಕುಕ ಅಧಿಕಾರಿ, ಬಳ್ಳಾರಿ	2	2	0
ಒಟ್ಟು	**140**	**89**	**51**

ಅಮೃತ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಸಹಾಯ ಧನ

272(375) ಶ್ರೀ ರಹೀಂ ಖಾನ್ (ಬೀದರ್) :– ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

(ಅ) ಅಮೃತ ಯೋಜನೆಯಡಿಯಲ್ಲಿ ವಿಧವೆಯರು ಮತ್ತು ದೇವದಾಸಿ ಮಹಿಳೆಯರು ಗೌರವಯುತ ಜೀವನ ನಡೆಸಲು ಅನುಕೂಲವಾಗುವಂತೆ ಹಾಲು ಕರೆಯುವ ಹಸು ಹಾಗೂ ಎಮ್ಮೆಯನ್ನು ಖರೀದಿಸಲು ಸಹಾಯ ಧನವನ್ನು ನೀಡುವ ಯೋಜನೆ ಸರ್ಕಾರದ ಮುಂದಿದೆಯೇ?

(ಆ) ಹಾಗಿದ್ದರೆ, ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆ ಹಾಗೂ ಬೀದರ್ ವಿಧಾನ ಸಭಾ ಮತಕ್ಷೇತ್ರಕ್ಕೆ ಎಷ್ಟು; ಫಲಾನುಭವಿಗಳಿಗೆ ಎಷ್ಟೆಷ್ಟು ಸಹಾಯ ಧನ ನೀಡಲಾಗಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಈ ಯೋಜನೆಯಡಿಯಲ್ಲಿ ಸಹಾಯ ಧನವನ್ನು ನೀಡದಿದ್ದಲ್ಲಿ ಯಾವಾಗ ಮತ್ತು ಎಷ್ಟು ಫಲಾನುಭವಿಗಳಿಗೆ ಸಹಾಯ ಧನವನ್ನು ಒದಗಿಸಲಾಗುವುದು (ಮಾಹಿತಿ ಒದಗಿಸುವುದು)

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು):-

(ಅ) ಹೌದು]

(ಆ) ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಬಿಡುಗಡೆಯಾದ ಸಹಾಯ ಧನ ಮತ್ತು ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತಿದೆ.

ವರ್ಷ	ಫಲಾನುಭವಿಗಳ ಸಂಖ್ಯೆ	ರೂ. ಲಕ್ಷಗಳಲ್ಲಿ
2007-08	859	89.91
2008-09	296	22.08
2009-10	217	22.86
2010-11	70	12.90

ಈ ಯೋಜನೆಯಡಿ ಬೀದರ್ ವಿಧಾನಸಭಾ ಮತಕ್ಷೇತ್ರಕ್ಕೆ ಬಿಡುಗಡೆಯಾದ ಸಹಾಯ ಧನ ಮತ್ತು ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತಿದೆ.

ವರ್ಷ	ಫಲಾನುಭವಿಗಳ ಸಂಖ್ಯೆ	ರೂ. ಲಕ್ಷಗಳಲ್ಲಿ
2007-08	11	1.18
2008-09	14	1.55
2009-10	11	1.18
2010-11	07	0.72

(ಇ) 20011-12ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ 44 ಫಲಾನುಭವಿಗಳಿಗೆ ವಿತರಿಸಲು ಒಕ್ಕೂಟಕ್ಕೆ ರೂ. 8.49 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಫಲಾನುಭವಿಗಳ ಆಯ್ಕೆ ಪ್ರಗತಿಯಲ್ಲಿದ್ದು ರಾಸುಗಳ ಖರೀದಿಗೆ 2 ರಿಂದ3 ತಿಂಗಳ ಅವದಿ ನೀಡಲಾಗಿದೆ. 2012-13ನೇ ಸಾಲಿನಲ್ಲಿ 60 ಫಲಾನುಭವಿಗಳಿಗೆ ವಿತರಿಸಲು ರೂ. 10.68 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿದೆ.

ಆರಾಧನಾ ಯೋಜನೆ

233 (884) **ಶ್ರೀಮತಿ ಕಲ್ಪನಾ ಸಿದ್ದರಾಜು**:–ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು, ಜಲಸಾರಿಗೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮುಜರಾಯಿ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಮದ್ದೂರು ತಾಲ್ಲೂಕಿನಲ್ಲಿರುವ ದೇವಸ್ಥಾನಗಳ ಅಭಿವೃದ್ಧಿಗೆ ಮತ್ತು ಹೊಸದಾಗಿ ದೇವಸ್ಥಾನಗಳ ನಿರ್ಮಾಣಕ್ಕೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; (ವಿವರ ನೀಡುವುದು)

(ಆ) ಬಿಡುಗಡೆ ಮಾಡಲಾದ ಅನುದಾನದಲ್ಲಿ ಎಷ್ಟೆಷ್ಟು ಅನುದಾನವನ್ನು ವಿನಿಯೋಗಿಸಲಾಗಿದೆ? (ದೇವಸ್ಥಾನವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು)

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು, ಜಲಸಾರಿಗೆ ಸಚಿವರು):–

(ಅ) ಕಳೆದ ಮೂರು ವರ್ಷಗಳಲ್ಲಿ ರೂ. 186.35 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಆ ಸಂಬಂಧದ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

(ಆ) ಆ ಸಂಬಂಧದ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಅನುಬಂಧ – 1

2009-10

ಕ್ರ. ಸಂ	ದೇವಾಲಯದ ಹೆಸರು	ಬಿಡುಗಡೆಯಾದ ಮೊತ್ತ ₹.ಲಕ್ಷಗಳಲ್ಲಿ
1.	ಶ್ರೀ ಶಿವಕ್ಷೇತ್ರ ಮಠ ಶ್ರೀ ರೇಣುಕಾಶ್ರಮ ಹೊನ್ನಲಗೆರೆ	5.00
2.	ಶ್ರೀ ಮಾರಮ್ಮ ದೇವಸ್ಥಾನ, ಬುಜವಳ್ಳ ಮದ್ದೂರು ತಾಲ್ಲೂಕು	0.90
3.	ಶ್ರೀ ಹೆಬ್ಬಾರಗುಡಿ (ಎಸ್.ಸಿ) ಮಣಸಗೆರೆ	0.90
4.	ಶ್ರೀ ರಾಮಮಂದಿರ ದೇವಸ್ಥಾನ, ಆಲೂರುದೊಡ್ಡಿ	0.90
5.	ಶ್ರೀ ಕಾಳಮ್ಮ ದೇವಸ್ಥಾನ, ಆರುವನಹಳ್ಳಿ	0.90
6.	ಶ್ರೀ ಕದಲಿವೆಂಕಟೇಶ್ವರ ದೇವಸ್ಥಾನ, ಕದಲೀಮರ	0.90
7.	ಶ್ರೀ ಬಂಕದಕಟ್ಟಯಮ್ಮ ದೇವಸ್ಥಾನ (ಎಸ್.ಸಿ), ನಿಡಘಟ್ಟ	0.90
8.	ಶ್ರೀ ಸಿದ್ದಪ್ಪಾಜಿ ದೇವಸ್ಥಾನ, ಸೋಮನಹಳ್ಳಿ	0.90
9.	ಶ್ರೀ ಮಾರಮ್ಮ ದೇವಸ್ಥಾನ, ಗುಡಿಗೆರೆಕಾಲೋನಿ	0.90
10.	ಶ್ರೀ ಬಸವೇಶ್ವರ ದೇವಸ್ಥಾನ, ಛತ್ರದ ಹೊಸಹಳ್ಳಿ	0.90
11.	ಶ್ರೀ ರಾಮಮಂದಿರ ದೇವಸ್ಥಾನ, ಮೆಳಳ್ಳ ಕಾಲೋನಿ	0.90
12.	ಶ್ರೀನಿವಾಸ ದೇವಸ್ಥಾನ, ವಳಗೆರೆಹಳ್ಳಿ	0.90
13.	ಶ್ರೀ ಅಯ್ಯಪ್ಪ ದೇವಸ್ಥಾನ, ಛತ್ರಲಿಂಗನದೊಡ್ಡಿ	0.90
14.	ಶ್ರೀ ಲಕ್ಷ್ಮೀದೇವರ ದೇವಸ್ಥಾನ, ಅಣ್ಣೂರು	0.50
15.	ಶ್ರೀ ನವಗ್ರಹ ದೇವಸ್ಥಾನ, ನಗರಕೆರೆ	0.50
16.	ಶ್ರೀ ಬಸವೇಶ್ವರ ದೇವಸ್ಥಾನ, ಲಿಂಗನಂದ್ರ	0.50
17.	ಶ್ರೀ ಮಂಥಿಲಿಂಗೇಶ್ವರ ದೇವಸ್ಥಾನ, ತಗ್ಗಹಳ್ಳಿ	0.50
18.	ಶ್ರೀ ಮಾರಮ್ಮ ದೇವಸ್ಥಾನ, ಜೋಗಿಕೊಪ್ಪಲು	0.50
19.	ಶ್ರೀ ಹನುಮಂತರಾಯಸ್ವಾಮಿ ದೇವಸ್ಥಾನ, ಕರಡಕೆರೆ	0.40
20.	ಶ್ರೀ ಬೇವಿನಮ್ಮ ದೇವಸ್ಥಾನ, ಎಸ್.ಐ.ಹೊನ್ನಲಗೆರೆ	0.40
21.	ಶ್ರೀ ಬೀರೇಶ್ವರ ದೇವಸ್ಥಾನ, ಅರಕನಹಳ್ಳಿ	0.40
22.	ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ, ವಳಗೆರೆಹಳ್ಳಿ	5.00
23.	ಶ್ರೀ ಭೈರವೇಶ್ವರ ದೇವಸ್ಥಾನ, ಕೋಣಸಾಲೆ	10.00
	ಒಟ್ಟು	34.50
	2010-11	
1.	ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ, ವಳಗೆರೆಹಳ್ಳಿ	2.00
2.	ಶ್ರೀ ಚೌಡೇಶ್ವರಿ ದೇವಸ್ಥಾನ, ಕೆ.ಹೊನ್ನಲಗೆರೆ	1.00
3.	ಶ್ರೀ ಪಟ್ಟಲದಮ್ಮ ದೇವಸ್ಥಾನ, ಡಿ.ಹೊಸಹಳ್ಳಿ	2.00
4.	ಶ್ರೀ ಕಾಳಿಕಾಂಬ ದೇವಸ್ಥಾನ, ಲಕ್ಷ್ಮೀಗೌಡನದೊಡ್ಡಿ	0.50
5.	ಶ್ರೀ-ಮಂಚಮ್ಮ ದೇವಸ್ಥಾನ, ಮಣಸಗೆರೆ	0.50
6.	ಶ್ರೀ ಬಸವೇಶ್ವರ ದೇವಸ್ಥಾನ, ಯಡಗನಹಳ್ಳಿ	1.00
7.	ಶ್ರೀ ಲಕ್ಷ್ಮೀದೇವಿ ದೇವಸ್ಥಾನ, ತಿಟ್ಟಮಾರನಹಳ್ಳಿ	0.50
8.	ಶ್ರೀ ರಾಮ ಮಂದಿರ ದೇವಸ್ಥಾನ, ಆಲೂರುದೊಡ್ಡಿ	0.50
9.	ಶ್ರೀ ದಂಡಿನಮ್ಮ ದೇವಸ್ಥಾನ (ಎಸ್.ಸಿ) ನಿಢಘಟ್ಟ-	0.50
10.	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಮೆಳಹಳ್ಳಿ	1.00
11.	ಶ್ರೀ ಕಾಳಮ್ಮ ದೇವಸ್ಥಾನ, ಡಿ.ಎ.ಕೆರೆ	2.00

12.	ಶ್ರೀ ಬಂಕದ ಕಟ್ಟಮ್ಮಾ ದೇವಸ್ಥಾನ, ಕಡಲುವಾಗಿಲು	1.00
13.	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಡಿ.ಎ.ಕೆರೆ	1.00
14.	ಶ್ರೀ ಶನಿ ದೇವರ ದೇವಸ್ಥಾನ, ಡಿ.ಎ.ಕೆರೆ	1.00
15.	ಶ್ರೀ ರಾಮಮಂದಿರ ದೇವಸ್ಥಾನ, ಡಿ.ಎ.ಕೆರೆ	1.00
16.	ಶ್ರೀ ಚೌಡೇಶ್ವರಿ ದೇವಸ್ಥಾನ, ಮರಳಿಗ	2.00
17.	ಶ್ರೀ ಏಳೂರಮ್ಮ ದೇವಸ್ಥಾನ ಮತ್ತು ಗುಡಿಸಲ್ಲಮ್ಮ ದೇವಸ್ಥಾನ, ಡಿ.ಎ.ಕೆರೆ	2.00
18.	ಶ್ರೀ ಕೋದಂಡರಾಮ ದೇವಸ್ಥಾನ, ಬೆಸಗರಹಳ್ಳಿ	1.00
19.	ಶ್ರೀ ನಾಗಲಿಂಗೇಶ್ವರ ದೇವಸ್ಥಾನ, ಹಳೇಹಳ್ಳಿ ಗ್ರಾಮ	1.00
20.	ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಡಿದೊಡ್ಡಿ ಗ್ರಾಮ	1.00
21.	ಶ್ರೀ ವೀರಭದ್ರಸ್ವಾಮಿ ದೇವಸ್ಥಾನ, ಕಾಡುಕೊತ್ತನಹಳ್ಳಿ	1.00
22.	ಶ್ರೀ ಮಾರಮ್ಮ ದೇವಸ್ಥಾನ, ಮಾರಂಗೆರೆ	1.00
23.	ಶ್ರೀ ಪಟ್ಟಲದಮ್ಮ ದೇವಸ್ಥಾನ, ಕಾಳ್ಗೆ	1.00
24.	ಶ್ರೀ ಮಾರಮ್ಮ ದೇವಸ್ಥಾನ, ಚಿಕ್ಕದೊಡ್ಡಿ	1.00
25.	ಶ್ರೀ ದಂಡಿನೇಶ್ವರ ದೇವಸ್ಥಾನ, ಚಿಕ್ಕೋನಹಳ್ಳಿ	1.00
26.	ಶ್ರೀ ಲಕ್ಷ್ಮೀದೇವಿ ದೇವಸ್ಥಾನ, ಕೊಪ್ಪ	1.00
27.	ಶ್ರೀ ಚನ್ನಕೇಶ್ವರಸ್ವಾಮಿ ದೇವಸ್ಥಾನ, ಕೊಣಸಾಲೆ	2.00
28.	ಶ್ರೀ ಮುನೇಶ್ವರ ಮತ್ತು ಮಾಸ್ತಮ್ಮ ದೇವಸ್ಥಾನ, ಯರಗನಹಳ್ಳಿ	2.00
	ಒಟ್ಟು	32.50
	2011-12	
1.	ಶ್ರೀ ಮಚ್ಚಮ್ಮ ದೇವಸ್ಥಾನ, ಸೇವಾ ಸಮಿತಿ ಮಣಸಗೆರೆ ಮದ್ದೂರು ತಾಲ್ಲೂಕು	5.00
2.	ಶ್ರೀ ಮಾರಮ್ಮ ದೇವಿ ದೇವಾಲಯ, ಕೆ.ಜಿ.ಕೊಪ್ಪಲು ಮದ್ದೂರು ತಾಲ್ಲೂಕು	1.00
3.	ಶ್ರೀ ಪಟ್ಟಲದಮ್ಮ ದೇವಾಲಯ, ಕಾಳ್ಗೆ, ಮದ್ದೂರು ತಾಲ್ಲೂಕು	1.00
4.	ಶ್ರೀ ಮಸಣಂಕಮ್ಮ ದೇವಾಲಯ, ಕೆ.ಜಿ.ಕೊಪ್ಪಲು, ಮದ್ದೂರು ತಾಲ್ಲೂಕು	0.50
5.	ಶ್ರೀ ಹನುಮಂತರಾಯಸ್ವಾಮಿ ದೇವಾಲಯ, ಕರಡಕೆರೆ, ಮದ್ದೂರು ತಾಲ್ಲೂಕು	0.50
6.	ಶ್ರೀ ಕಾಮಕ್ಷಮ್ಮ ದೇವಾಲಯ, ಮೂಡಗೆರೆ, ಮದ್ದೂರು ತಾಲ್ಲೂಕು	1.60
7.	ಶ್ರೀ ಗೋಪಾಲಕೃಷ್ಣ ಸೇವಾ ಸಮಿತಿ, ಉರುಗನ ಹಳ್ಳಿ, ಮದ್ದೂರು ತಾಲ್ಲೂಕು	8.00
8.	ಶ್ರೀ ಆಂಜನೇಯಸ್ವಾಮಿ ದೇವಾಲಯ, ಮದ್ದೂರು ಟೌನ್	3.20
9.	ಶ್ರೀ ಚಾಮುಂಡೇಶ್ವರಿ ದೇವಾಲಯ, ಕೆ.ಶೆಟ್ಟಿಹಳ್ಳಿ, ಮದ್ದೂರು ತಾಲ್ಲೂಕು	1.00
10.	ಶ್ರೀ ಸಾಕದೇವಮ್ಮ ದೇವಸ್ಥಾನ, ಕಾಡುಕೊತ್ತನಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು	1.60
11.	ಶ್ರೀ ಕಾಳಿಕಾಂಬ ದೇವಾಲಯ, ಲಕ್ಷ್ಮೀಗೌಡನ ದೊಡ್ಡಿ, ಮದ್ದೂರು ತಾಲ್ಲೂಕು	1.00
12.	ಶ್ರೀ ಮಂಚಮ್ಮ ದೇವಾಲಯ, ಮಣಸಗೆರೆ, ಮದ್ದೂರು ತಾಲ್ಲೂಕು	1.00
13.	ಶ್ರೀ ಬಸವೇಶ್ವರ ದೇವಾಲಯ, ಯಡಗನಹಳ್ಳಿ, ಮದ್ದೂರು ತಾಲ್ಲೂಕು	1.00
14.	ಶ್ರೀ ಆಂಜನೇಯ ದೇವಾಲಯ, ಚೆನ್ನನದೊಡ್ಡಿ, ಮದ್ದೂರು ತಾಲ್ಲೂಕು	1.00

15.	ಶ್ರೀ ಕಾಳಮ್ಮ ದೇವಾಲಯ, ಡಿ.ಎ.ಕೆರೆ, ಮದ್ದೂರು ತಾಲ್ಲೂಕು	1.60
16.	ಶ್ರೀ ಬಂಕದಕಟ್ಟೆ ದೇವಾಲಯ, ಕಡಿವಾಗಿಲು, ಮದ್ದೂರು ತಾಲ್ಲೂಕು	1.00
17.	ಶ್ರೀ ಆಂಜನೇಯ ದೇವಾಲಯ, ದೊಡ್ಡರಸಿನಕೆರೆ, ಮದ್ದೂರು ತಾಲ್ಲೂಕು	1.00
18.	ಶ್ರೀ ಶನಿದೇವರ ದೇವಾಲಯ, ದೊಡ್ಡರಸಿನಕೆರೆ, ಮದ್ದೂರು ತಾ;	1.00
19.	ಶ್ರೀರಾಮ ಮಂದಿರ ದೇವಾಲಯ, ದೊಡ್ಡರಸಿನಕೆರೆ, ಮದ್ದೂರು ತಾ:	1.00
20.	ಶ್ರೀ ಈಶ್ವರ ದೇವಾಲಯ, ಗುಡಿಗೆರೆ, ಮದ್ದೂರು ತಾಲ್ಲೂಕು	1.00
21.	ಶ್ರೀ ಮಾರಮ್ಮ ದೇವಾಲಯ, ಗುಡಿಗೆರೆ ಕಾಲೋನಿ, ಮದ್ದೂರು ತಾ;	1.00
22.	ಶ್ರೀ ಬಸವೇಶ್ವರ ದೇವಾಲಯ, ಛತ್ರದ ಹೊಸಹಳ್ಳಿ, ಮದ್ದೂರು ತಾ;	1.00
23.	ಶ್ರೀ ಲಕ್ಷ್ಮೀದೇವಿ ದೇವಾಲಯ, ತಿಟ್ಟಮಾರನಹಳ್ಳಿ, ಮದ್ದೂರು ತಾ:	1.00
24.	ಶ್ರೀ ರಾಮ ಮಂದಿರ, ಆವೂರು ದೊಡ್ಡಿ, ಮದ್ದೂರು ತಾಲ್ಲೂಕು	1.00
25.	ಶ್ರೀ ದಂಡಮ್ಮನ (ಎಸ್.ಸಿ) ನಿಡಘಟ್ಟ ಮದ್ದೂರು ತಾಲ್ಲೂಕು	1.00
26.	ಶ್ರೀ ಕಂರಾಯ ದೇವಾಲಯ, ಬೆಕ್ಕಳಲೆ, ಮದ್ದೂರು ತಾಲ್ಲೂಕು	2.00
27.	ಶ್ರೀ ಬಸವೇಶ್ವರ ದೇವಾಲಯ, ಯಡಗನಹಳ್ಳಿ, ಮದ್ದೂರು ತಾಲ್ಲೂಕು	1.00
28.	ಶ್ರೀ ಸಾಕದೇವಮ್ಮ ದೇವಾಲಯ, ಯಾಲಾದ ಹಳ್ಳಿ, ಮದ್ದೂರು ತಾ	0.50
29.	ಶ್ರೀ ರಾಮಮಂದಿರ ನಿರ್ಮಾಣ, ಕೆಸ್ತೂರು, ಮದ್ದೂರು ತಾಲ್ಲೂಕು	0.50
30.	ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಪರಿಶಿಷ್ಠ ಜಾತಿ ಕಾಲೋನಿ, ಮೇಳ್ಳಹಳ್ಳಿ ಹಳ್ಳಿ, ಮದ್ದೂರು ತಾಲ್ಲೂಕು	0.50
31.	ಶ್ರೀ ಕ್ಯಾತಮ್ಮ ದೇವಾಲಯ, ಅಜ್ಜಹಳ್ಳಿ, ಮದ್ದೂರು ತಾಲ್ಲೂಕು	0.50
32.	ಶ್ರೀ ಬಿಸಿಲಮ್ಮ ದೇವಸ್ಥಾನ, ಕಾಡಕೊತ್ತನಹಳ್ಳಿ, ಮದ್ದೂರು ತಾಲ್ಲೂಕು	0.50
33.	ಶ್ರೀ ಬೀರೇಶ್ವರ ದೇವಸ್ಥಾನ, ಹರಕನಹಳ್ಳಿ, ಮದ್ದೂರು ತಾಲ್ಲೂಕು	0.50
34.	ಶ್ರೀ ಈಶ್ವರ ದೇವಸ್ಥಾನ, ಅಣ್ಣೂರು ಗ್ರಾಮ, ಮದ್ದೂರು ತಾಲ್ಲೂಕು	0.50
35.	ಶ್ರೀ ಮಾರಮ್ಮ ದೇವಸ್ಥಾನ, ಗುಡಿಗೆರೆ ಗ್ರಾಮ, ಮದ್ದೂರು ತಾಲ್ಲೂಕು	0.50
36.	ಶ್ರೀ ಮುನೇಶ್ವರ ದೇವಸ್ಥಾನ, ಗೊಲ್ಲರದೊಡ್ಡಿ ಗ್ರಾಮ, ಮದ್ದೂರು ತಾ;	0.50
37.	ಶ್ರೀ ಮಂಚಮ್ಮ ದೇವಸ್ಥಾನ, ಪರಿಶಿಷ್ಟ ಜಾತಿ ಕಾಲೋನಿ ದೊಡ್ಡರಸಿನಕೆರೆ ಗ್ರಾಮ, ಮದ್ದೂರು ತಾಲ್ಲೂಕು	0.50
38.	ಶ್ರೀ ಕೋಡಿ ಮಾಸ್ತಮ್ಮ ದೇವಸ್ಥಾನ, ಕಡಿಲುವಾಗಿಲು ಗ್ರಾಮ, ಮದ್ದೂರು ತಾಲ್ಲೂಕು	0.50
39.	ಶ್ರೀ ಮಂಚಮ್ಮ ದೇವಸ್ಥಾನ, ಮಣಸಗೆರೆ ಗ್ರಾಮ, ಮದ್ದೂರು ತಾ	0.50
40.	ಶ್ರೀ ರಾಕಸಮ್ಮ ದೇವಸ್ಥಾನ, ಎಂ.ಕೋಡಿಹಳ್ಳಿ, ಮದ್ದೂರು ತಾಲ್ಲೂಕು	0.50
41.	ಶ್ರೀ ರಾಮ ಮಂದಿರ, ಚೋಡಾಪುರ, ಮದ್ದೂರು ತಾಲ್ಲೂಕು	0.50
42.	ಶ್ರೀ ಮಾರಮ್ಮ ದೇವಸ್ಥಾನ, ಕುದುರೆ ಗುಂಡಿ, ಮದ್ದೂರು ತಾಲ್ಲೂಕು	0.50
43.	ಶ್ರೀ ಮಾರಮ್ಮ ದೇವಸ್ಥಾನ, ಬಿದರಹೊಸಳ್ಳಿ, ಮದ್ದೂರು ತಾಲ್ಲೂಕು	0.50
44.	ಶ್ರೀ ಮಂಚಮ್ಮ ದೇವಸ್ಥಾನ, ಹುಳುಗನಹಳ್ಳಿ, ಮದ್ದೂರು ತಾಲ್ಲೂಕು	0.50
45.	ಶ್ರೀ ದಂಡಿ ಮಾರಮ್ಮ ದೇವಸ್ಥಾನ, ಮಟ್ಟನಹಳ್ಳಿ, ಮದ್ದೂರು ತಾಲ್ಲೂಕು	0.50
46.	ಶ್ರೀ ಕಾಳಮ್ಮ ದೇವಸ್ಥಾನ, ಲಕ್ಷ್ಮೀಗೌಡ್ನದೊಡ್ಡಿ, ಮದ್ದೂರು ತಾಲ್ಲೂಕು	0.50
47.	ಶ್ರೀ ಕಾಳಿಕಾಂಬ ದೇವಸ್ಥಾನ, ದೊಡ್ಡರಸಿನಕೆರೆ, ಮದ್ದೂರು ತಾ;	1.00
48.	ಶ್ರೀ ಸಣ್ಣಕಿರಾಯಸ್ವಾಮಿ ದೇವಸ್ಥಾನ, ದೇವರಹಳ್ಳಿ, ಮದ್ದೂರು ತಾ;	1.50
49.	ಶ್ರೀ ಚೌಡೇಶ್ವರಿ ದೇವಸ್ಥಾನ, ಅರುವನಹಳ್ಳಿ, ಮದ್ದೂರು ತಾಲ್ಲೂಕು	1.50
50.	ಶ್ರೀ ಮಂಚಮ್ಮ ದೇವಸ್ಥಾನ, ಸಿ.ಎ.ಕೆರೆ, ಮದ್ದೂರು ತಾಲ್ಲೂಕು	1.00
51.	ಶ್ರೀ ಮಾದೇಶ್ವರ ದೇವಸ್ಥಾನ, ಕಾಡಕೊತನಹಳ್ಳಿ, ಮದ್ದೂರು ತಾ;	1.50
52.	ಶ್ರೀ ಬೈರವೇಶ್ವರ ದೇವಸ್ಥಾನ, ಕೊಣಸಾಲೆ, ಮದ್ದೂರು ತಾಲ್ಲೂಕು	1.00
53.	ಶ್ರೀ ಪಟ್ಟಲದಮ್ಮ ದೇವಸ್ಥಾನ, ಕೌಡ್ಲೆ ಗ್ರಾಮ, ಮದ್ದೂರು ತಾಲ್ಲೂಕು	1.00

54.	ಶ್ರೀ ಚೌಡೇಶ್ವರಿ ದೇವಸ್ಥಾನ, ಕೊತ್ತನಹಳ್ಳಿ, ಮದ್ದೂರು ತಾಲ್ಲೂಕು	1.50
55.	ಶ್ರೀ ಹಳದಬೀರೇಶ್ವರ ದೇವಸ್ಥಾನ, ಹರಕನಹಳ್ಳಿ, ಮದ್ದೂರು ತಾ:	2.00
56.	ಶ್ರೀ ಶನೇಶ್ವರ ದೇವಸ್ಥಾನ, ಮಾರಲನರ, ಮದ್ದೂರು ತಾಲ್ಲೂಕು	1.00
57.	ಶ್ರೀ ದಂಡಿ ಮಾರಮ್ಮ ದೇವಸ್ಥಾನ, ಮುಟ್ಟನಹಳ್ಳಿ, ಮದ್ದೂರು ತಾ:	1.50
58.	ಶ್ರೀ ಬಸವೇಶ್ವರ ದೇವಾಲಯ, ಸಿ.ಎ.ಕೆರೆ, ಮದ್ದೂರು ತಾಲ್ಲೂಕು	5.00
59.	ಶ್ರೀ ಆಂಜನೇಯ ದೇವಾಲಯ, ಮೂಡ್ಯ ಗ್ರಾಮ, ಮದ್ದೂರು ತಾ:	1.50
60.	ಶ್ರೀ ಕದಂಬ ಜಂಗಮ ಮಠ, ವೈದ್ಯನಾಥಪುರ, ಮದ್ದೂರು ತಾ:	20.00
61.	ಶ್ರೀ ಮಹಾಲಿಂಗಸ್ವಾಮಿ ಶಿವ ಕ್ಷೇತ್ರ ಮಠ, ಚಾಂದೂಪುರ ಮದ್ದೂರು ತಾ:	20.00
62.	ಶ್ರೀ ರಾಮದೇವಾಲಯ, ಹೆಮ್ಮನಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು	1.85
63.	ಶ್ರೀ ತಿರುಮಲ ದೇವಸ್ಥಾನ, ತೊರೆಶೆಟ್ಟಹಳ್ಳಿ, ಮದ್ದೂರು ತಾಲ್ಲೂಕು	5.00
	ಒಟ್ಟು	119.35

<u>ಅನುಬಂಧ-2</u>

ಕ್ರ. ಸಂ	ದೇವಸ್ಥಾನದ ಹೆಸರು	ಬಿಡುಗಡೆ ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ)
1	ಶ್ರೀ ಶನಿದೇವರ ದೇವಸ್ಥಾನ, ಯಡವನ ಹಳ್ಳಿ	2.00
2	ಶ್ರೀ ಮಾರಮ್ಮ ದೇವಸ್ಥಾನ, ಉಡಿಗೆರೆ ಕಾಲೋನಿ	1.50
3	ಶ್ರೀ ಬಸವೇಶ್ವರ ದೇವಸ್ಥಾನ, ಛತ್ರದಹೊಸಳ್ಳಿ	1.50
4	ಶ್ರೀ ಶ್ರೀನಿವಾಸ ದೇವಸ್ಥಾನ, ವಳಗೆರೆಹಳ್ಳಿ	1.50
5	ಶ್ರೀ ಕ್ಯಾತಮ್ಮ ದೇವಸ್ಥಾನ, ದೊಡ್ಡರಸಿಕೆರೆ	1.50
6	ಶ್ರೀ ಚಾಡೇಶ್ವರಿ ದೇವಸ್ಥಾನ, ಕಾಡುಕೊತ್ತನಹಳ್ಳಿ	1.00
7	ಶ್ರೀ ಮಾರಮ್ಮ ದೇವಸ್ಥಾನ, ಕರಿಗೌಡನ ಕೊಪ್ಪಲು	2.00
8	ಶ್ರೀ ಬಂಕದ ಕಟ್ಟೆಮ್ಮ ದೇವಸ್ಥಾನ, ತರಮ್ಮನಕಟ್ಟೆ	1.00
9	ಶ್ರೀ ಬವೇಶ್ವರ ದೇವಸ್ಥಾನ, ಸೋಮನಹಳ್ಳಿ	1.50
10	ಶ್ರೀ ಚನ್ನಕೇಶವ ದೇವಸ್ಥಾನ, ಕೌಡ್ಲೆ	2.00
11	ಶ್ರೀ ತೋಪಿನ ತಿಮ್ಮಪ್ಪ ದೇವಸ್ಥಾನ, ಅಬಲವಾಡಿ	1.50
12	ಶ್ರೀ ಕದಲಿ ವೆಂಕಟೇಶ್ವರ ದೇವಸ್ಥಾನ, ಕದಲಿಪುರ	0.90
13	ಶ್ರೀ ವೆಂಕಟರಮಣ ದೇವಸ್ಥಾನ, ವಳಗೆರೆಹಳ್ಳಿ	0.50
14	ಶ್ರೀ ಶಿವ ಕ್ಷೇತ್ರ ಶ್ರೀ ರೇಣುಕಾಶ್ರಮ ಚಂದುಪುರ	5.00
15	ಶ್ರೀ ಶನಿಮಹಾತ್ಮ ದೇವಸ್ಥಾನ, ಉಪ್ಪಾರ್ ದೊಟ್ಟಿ	0.50
16	ಶ್ರೀ ಸಿದ್ದಪ್ಪಾಜಿ ಮಠ ಸೋಮನಹಳ್ಳಿ	0 90
17	ಶ್ರೀ ಬೈರವೇಶ್ವರ ದೇವಸ್ಥಾನ, ಕೋಣಸಾಲೆ	10.00
18	ಶ್ರೀ ಮಂಚಮ್ಮ ದೇವಸ್ಥಾನ, ಮೇಣಸಗೆರೆ	0.50
19	ಶ್ರೀ ವೆಂಕಟರಮಣ ದೇವಸ್ಥಾನ, ವಳಗೆರೆಹಳ್ಳಿ	2.00
20	ಹೆಬ್ಬಾರ್ ಗುಡಿ ಹೊಕಗೆರೆ	0.90
21	ಶ್ರೀ ವಿಘ್ನೇಶ್ವರ ದೇವಸ್ಥಾನ, ಹೋಸಗಾವಿ	1.00
22	ಶ್ರೀ ಬಸವೇಶ್ವರ ದೇವಸ್ಥಾನ, ಯಡಗನಹಳ್ಳಿ	1.00
23	ಶ್ರೀ ಮಂಚಮ್ಮ ದೇವಸ್ಥಾನ, ಮಣಸಗೆರೆ	0.50
24	ಶ್ರೀ ಲಕ್ಷ್ಮೀ ದೇವಸ್ಥಾನ, ಕೊಪ್ಪ	1.00
25	ಶ್ರೀ ನಾಗಲಿಂಗೇಶ್ವರ ದೇವಸ್ಥಾನ, ಹಳೇಹಳ್ಳಿ	1.00
26	ಶ್ರೀ ಪಟ್ಟಲದಮ್ಮ ದೇವಸ್ಥಾನ, ಕೌಡ್ಲೆ ಗ್ರಾಮ	1.00
27	ಶ್ರೀ ಚನ್ನಕೇಶವ ದೇವಸ್ಥಾನ, ಕೋಣಸಾಲೆ	2.00
	ಒಟ್ಟು	45.70

ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ವಿಫಲ ಬಾವಿ ಫಲಾನುಭವಿಗಳಿಗೆ ಶೀಘ್ರ ಅನುದಾನ ನೀಡುವುದು

222 (170) **ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)**:– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ಪಿ.ಎಲ್.ಡಿ. ಬ್ಯಾಂಕಿನಲ್ಲಿರುವ ವಿಫಲ ಬಾವಿ ಅರ್ಜಿಗಳನ್ನು ಜಿಲ್ಲಾಧಿಕಾರಿ ಅನುಮೋದನೆ ನೀಡಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿರುವ ಅರ್ಜಿಗಳೆಷ್ಟು (ವಿವರ ನೀಡುವುದು);

(ಆ) ಈ ಫಲಾನುಭವಿಗಳಿಗೆ ಇದುವರೆವಿಗೂ ಎಷ್ಟು ಮೊತ್ತದ ಅನುದಾನ ಬಿಡುಗಡೆಯಾಗಿದೆ. ಬಿಡುಗಡೆಯಾಗದೆ ವಿಳಂಬವಾಗಿರುವುದರಿಂದ ರೈತರು ಹೆಚ್ಚುವರಿ ಸಾಲ ಪಡೆದುಕೊಳ್ಳಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದರೆ ಈ ಫಲಾನುಭವಿಗಳಿಗೆ ತಕ್ಷಣ ಅನುದಾನ ಬಿಡುಗಡೆ ಮಾಡಲು ಸರ್ಕಾರ ಎಷ್ಟು ಸಮಯದೊಳಗೆ ಕ್ರಮ ತೆಗೆದುಕೊಳ್ಳುವುದು?

ಶ್ರೀ ಬಿ. ಜೆ. ಪುಟ್ಟಸ್ವಾಮಿ (ಮಾನ್ಯ ಸಹಕಾರ ಸಚಿವರು):–

(ಅ) ಬೀದರ್ ಜಿಲ್ಲೆಯ 05 ಪಿಎಲ್‌ಡಿ ಬ್ಯಾಂಕುಗಳ 2341 ವಿಫಲಬಾವಿ ಅರ್ಜಿಗಳನ್ನು ಬೀದರ್ ಜಿಲ್ಲಾಧಿಕಾರಿಯವರು ಅನುಮೋದನೆ ನೀಡಿ ಪ್ರಸ್ತಾವನೆಯನ್ನು ಸಹಕಾರ ಸಂಘಗಳ ನಿಬಂಧಕರಿಗೆ ಕಳುಹಿಸಿರುತ್ತಾರೆ. ಪಿಕಾರ್ಡ್ ಬ್ಯಾಂಕುವಾರು ವಿವರ ಕೆಳಗಿನಂತಿದೆ.

ಕ್ರ ಸಂ.	ಬೀದರ್ ಜಿಲ್ಲೆ	ಸಂಖ್ಯೆ	ಅಸಲು	ಬಡ್ಡಿ	ಒಟ್ಟು ಮೊತ್ತ
1.	ಔರಾದ್	760	124.23	95.36	219.59
2.	ಬೀದರ್	135	16.38	29.71	46.09
3.	ಬಾಲ್ಕಿ	259	45.52	29.97	75.49
4.	ಬಸವಕಲ್ಯಾಣ	375	61.27	78.85	140.12
5.	ಹುಮ್ನಾಬಾದ್	812	118.87	149.18	268.05
	ಒಟ್ಟು	2341	366.27	383.07	749.34

(ಆ) ಸಹಕಾರ ಸಂಘಗಳ ನಿಬಂಧಕರಿಂದ ಪ್ರಸ್ತಾವನೆಯು ಸರ್ಕಾರಕ್ಕೆ ತಲುಪಿದ್ದು ಅನುದಾನ ಬಿಡುಗಡೆ ಸಂಬಂಧ ಸರ್ಕಾರಿ ಆದೇಶ ಹೊರಡಿಸಲಾಗಿದೆ.

(ಇ) ಈ ಫಲಾನುಭವಿಗಳಿಗೆ ಶೀಘ್ರವಾಗಿ ಪರಿಹಾರ ಬಿಡುಗಡೆ ಮಾಡಲಾಗುವುದು.

ವೈದ್ಯನಾಥನ್ ವರದಿ ಶಿಫಾರಸ್ಸು

296 (723) **ಶ್ರೀ ಎನ್. ಹೆಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು)**:–ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ವೈದ್ಯನಾಥನ್ ವರದಿ ಶಿಫಾರಸ್ಸಿನನ್ವಯ ಯಾವ ಯಾವ ಸಹಕಾರಿ ಸಂಘಗಳಿಗೆ ಎಷ್ಟೆಷ್ಟು ಹಣ ಸರ್ಕಾರದಿಂದ ಬಂದಿದೆ (ಸಂಘವಾರು ವಿವರ ಒದಗಿಸುವುದು) ಮಂಜೂರಾಗಿರುವ ಅನುದಾನದ ಹಣ ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆಯೇ; (ಮಾಹಿತಿ ನೀಡುವುದು) ಎಷ್ಟು ಸಹಕಾರ ಸಂಘಗಳು ಮರುಜೀವ ಪಡೆದುಕೊಂಡಿವೆ; ಎಷ್ಟು ಸಹಕಾರ ಸಂಘಗಳು ಸಮರ್ಪಣಗೊಂಡಿವೆ; (ವಿವರ ಒದಗಿಸುವುದು)

(ಆ) ಚಿಕ್ಕಬಳ್ಳಾಪುರ ಜಿಲ್ಲೆಯು ಹೊಸದಾಗಿ ರಚನೆಯಾಗಿದ್ದು ಈ ಹಿಂದೆ ಕೋಲಾರ ಜಿಲ್ಲಾ ಸಹಕಾರ ಬ್ಯಾಂಕ್‌ಗಳನ್ನು ವಿಭಜಿಸಿ ಹೊಸ ಜಿಲ್ಲೆಗೆ ಇನ್ನೊಂದು ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮವೇನು; ಹೊಸ ಜಿಲ್ಲೆಗೆ ಯಾವಾಗ ಸಹಕಾರಿ ಬ್ಯಾಂಕ್‌ನ ಕೇಂದ್ರವನ್ನು ಸ್ಥಳಾಂತರಿಸಲಾಗುವುದು.

ಶ್ರೀ ಬಿ. ಜೆ. ಪುಟ್ಟಸ್ವಾಮಿ (ಮಾನ್ಯ ಸಹಕಾರ ಸಚಿವರು):–

(ಅ) ಪ್ರೊಫೆಸರ್ ಎ. ವೈದ್ಯನಾಥನ್ ಸಮಿತಿ ಶಿಫಾರಸ್ಸಿನನ್ವಯ ಗೌರಿಬಿದನೂರು ತಾಲ್ಲೂಕಿನ 24 ಅರ್ಹ ಸಹಕಾರ ಸಂಘಗಳಿಗೆ ಒಟ್ಟು ರೂ. 545.89 ಲಕ್ಷಗಳು ಸರ್ಕಾರದಿಂದ ಬಿಡುಗಡೆಯಾಗಿದ್ದು, ಸಂಘವಾರು ಬಿಡುಗಡೆಯಾಗಿರುವ ಮೊತ್ತ ಮತ್ತು ಸದರಿ ಮೊತ್ತವನ್ನು ಸಮರ್ಪಕವಾಗಿ ಬಳಸಿಕೊಂಡಿರುವ ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಸಹಕಾರ ಸಂಘಗಳ ಹೆಸರು	ಸರ್ಕಾರ ದಿಂದ ಬಿಡುಗಡೆ ಯಾದ ಮೊತ್ತ	ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತ, ಬಿಡುಗಡೆಯಾಗಿರುವ ವಿವರ		
			ಸಂಘದಿಂದ ಬ್ಯಾಂಕಿಗೆ ಬಾಕಿಯಿದ್ದ ಸಾಲದ ಅಸಲು ಮತ್ತು ಬಡ್ಡಿ ಹೊಂದಾಣಿಕೆ	ಸಂಘದ ಹೆಸರಿನಲ್ಲಿ ಅವಧಿ ಠೇವಣಿ ಯಲ್ಲಿ ತೊಡಗಿಸಿ ರುವ ಮೊತ್ತ	ವ್ಯಾಪಾರಾಭಿ ವೃದ್ಧಿಗೆ ಸಂಘಕ್ಕೆ ಬಿಡುಗಡೆ ಮಾಡಿರುವ ಮೊತ್ತ
1	ಕಸಬಾ ವಿಎಸ್‌ಎಸ್ ಎನ್	20.64	0.00	10.64	10.00
2	ನಾಮಗೊಂಡ್ಲು	50.41	0.00	40.41	10.00
3	ಕಡಬೂರು	47.72	40.23	2.49	5.00
4	ಶ್ಯಾಂಪುರ	47.85	30.90	9.95	7.00
5	ನಗರಗೆರೆ	53.53	0.00	43.53	10.00
6	ಹಿರೇಬಿದನೂರು	11.69	2.11	7.58	2.00
7	ಕಲ್ಲೂಡಿ	5.91	5.31	0.60	0.00
8	ನೊಣಗಾನಹಳ್ಳಿ	26.38	14.57	10.81	1.00
9	ರಾಮಾಪುರ	20.60	6.90	10.70	3.00
10	ವಾಟದಹೊಸಹಳ್ಳಿ	7.12	6.59	0.00	0.53
11	ಇಡಗೂರು	16.22	16.22	0.00	0.00
12	ಮೇಳ್ಯ	10.06	7.91	1.15	1.00
13	ಚಿಸಲಹಳ್ಳಿ	11.65	0.00	9.65	2.00
14	ಮಂಚೇನಹಳ್ಳಿ	25.47	0.00	20.47	5.00
15	ಹಂಪಸಂದ್ರ	15.62	14.14	0.00	1.48
16	ಬಾದಿಮರಳೂರು	15.77	12.93	0.00	2.84
17	ಕಾಟಮಾಚನಹಳ್ಳಿ	14.04	10.33	2.21	1.50
18	ಕುರೂಡಿ	37.79	30.17	5.62	2.00
19	ಚಂದನದೂರು	10.98	5.74	4.24	1.00
20	ಹೊಸೂರು	11.79	8.02	2.77	1.00
21	ಅಲೀಪುರ	36.74	0.00	31.74	5.00
22	ತೊಂಡೇಬಾವಿ	15.78	1.38	12.39	2.00
23	ಬೇವಿನಹಳ್ಳಿ	13.31	13.31	0.00	0.00
24	ಜರಬಂಡಹಳ್ಳಿ	18.82	13.38	3.44	2.00
	ಒಟ್ಟು	545.89	240.14	230.39	75.35

ಗೌರಿಬಿದನೂರು ತಾಲ್ಲೂಕಿನಲ್ಲಿ ಒಟ್ಟು 09 ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘಗಳು ಅನರ್ಹ ಸಹಕಾರ ಸಂಘಗಳಾಗಿದ್ದು, ಈ 09 ಸಹಕಾರ ಸಂಘಗಳ ಪೈಕಿ ಒಂದು ಸಹಕಾರ ಸಂಘವನ್ನು (ಅಲಕಾಪುರ ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘ) ಸಮಾಪನೆಗೊಳಿಸದೆ ಉಳಿಸಿಕೊಂಡು ಮರುಜೀವ ನೀಡಲಾಗಿರುತ್ತದೆ. ಉಳಿದ 08 ಅನರ್ಹ ಸಹಕಾರ ಸಂಘಗಳ ಪೈಕಿ (1) ಚೋಳಶೆಟ್ಟಿಹಳ್ಳಿ, (2) ಜೀಲಾಕುಂಟೆ ಮತ್ತು (3) ಹಳೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘಗಳನ್ನು ತಹಲ್‌ವರೆವಿಗೂ ಸಮಾಲೋಚನೆಗೊಳಿಸಲಾಗಿದೆ.

ಚಿಕ್ಕಕುರುಗೋಡು ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘ ನಿ., ಈ ಸಂಘದ ವಿಶೇಷ ಆಡಿಟ್‌ಗೆ ಈ ಹಿಂದೆ ಬಾಕಿ ಇದ್ದುದರಿಂದ ಪ್ರೊಫೆಸರ್ ಎ. ವೈದ್ಯನಾಥನ್ ಪ್ಯಾಕೇಜಿನಡಿ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ. ಪ್ರಸ್ತುತ ವಿಶೇಷ ಆಡಿಟ್ ಬಾಕಿಯಿರುತ್ತದೆ.

(ಆ) ಚಿಕ್ಕಬಳ್ಳಾಪುರ ಜಿಲ್ಲೆಯು ಹೊಸದಾಗಿ ರಚನೆಯಾಗಿದ್ದು ಕೋಲಾರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ವಿಭಜಿಸಿ ಚಿಕ್ಕಬಳ್ಳಾಪುರ ಜಿಲ್ಲಾ ಇನ್ನೊಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ನಬಾರ್ಡ್, ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳನ್ವಯ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕಾಗಿದ್ದು ಹಾಲಿ ಇರುವ ಬ್ಯಾಂಕು ಆರ್ಥಿಕವಾಗಿ ಸದೃಢವಾಗಿಲ್ಲದ ಕಾರಣ ಹೊಸ ಬ್ಯಾಂಕನ್ನು ಸ್ಥಾಪಿಸಲು ಅವಕಾಶವಿರುವುದಿಲ್ಲ.

ಔಷಧಿಗಳ ಕೊರತೆ

299 (726) **ಶ್ರೀ ಶಿವಶಂಕರ ರೆಡ್ಡಿ ಎನ್.ಎಚ್. (ಗೌರಿಬಿದನೂರು)**:–ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರತಿ ತಾಲ್ಲೂಕಿನಲ್ಲಿ ಎಲ್ಲಾ ಪಶುವೈದ್ಯಕೀಯ ಆಸ್ಪತ್ರೆಗಳಿಗೆ ಈಗ ಸರ್ಕಾರ ಒದಗಿಸುತ್ತಿರುವ ಔಷಧಿಗಳು ಕೇವಲ ಮೂರು ತಿಂಗಳಿಗೆ ಮಾತ್ರ ಲಭ್ಯವಿದ್ದು, ಉಳಿದ ತಿಂಗಳುಗಳಲ್ಲಿ ವೈದ್ಯರು ಚೀಟಿ ಬರೆದುಕೊಟ್ಟು ಖಾಸಗಿಯಾಗಿ ಖರೀದಿಸುವ ಹೊಣೆ ಮತ್ತು ಅನಿವಾರ್ಯ ಪರಿಸ್ಥಿತಿ ರೈತರಿಗೆ ಬಂದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

(ಇ) ಆಯವ್ಯಯದಲ್ಲಿ ಅನುದಾನವನ್ನು ಹೆಚ್ಚಿಸಿ ಪೂರ್ಣ ವರ್ಷದಲ್ಲಿ ಔಷಧಿ ಸಿಗುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ರೇವೂ ನಾಯಕ ಬೆಳಮಗಿ (ಮಾನ್ಯ ಪಶುಸಂಗೋಪನಾ ಸಚಿವರು):-

(ಅ) ಇಲಾಖೆಗೆ ರಾಜ್ಯ ವಲಯದಡಿ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮದಡಿಯಲ್ಲಿ ಸುಮಾರು ರೂ. 12.00 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದ್ದು, ಇದಕ್ಕನುಗುಣವಾಗಿ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಂದ ಅವಶ್ಯಕ ಔಷಧಿಗಳ ಬೇಡಿಕೆಯನ್ನು ಪಡೆದು, ದರಗುತ್ತಿಗೆ ಹೊಂದಿರುವ ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡಲಾಗುತ್ತಿದೆ. ಔಷಧಿಗಳ ಕೊರತೆಯು ಬಗ್ಗೆ ವರದಿಯಾಗಿರುವುದಿಲ್ಲ.

(ಆ) ಅನ್ವಯಿಸುವುದಿಲ್ಲ

(ಇ) ಅನ್ವಯಿಸುವುದಿಲ್ಲ

ಅಂಬಾದೇವಿ ದೇವಸ್ಥಾನದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ

256 (554) **ಶ್ರೀ ನಾಡಗೌಡ ವೆಂಕಟರಾವ್:-** ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಮತ್ತು ಜಲಸಾರಿಗೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸಿಂಧನೂರು ತಾಲ್ಲೂಕಿನಲ್ಲಿ ಶ್ರೀ ಅಂಬಾದೇವಿ ದೇವಸ್ಥಾನವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ದೇವಸ್ಥಾನದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಸರ್ಕಾರ ಈ ದೇವಾಲಯದ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳುವುದೇ;

(ಈ) ಹಾಗಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು ಹಾಗೂ ಇದರ ಅಭಿವೃದ್ಧಿಗಾಗಿ ಯಾವಾಗ ಮತ್ತು ಎಷ್ಟು ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಲಾಗುವುದು (ಮಾಹಿತಿ ನೀಡುವುದು)?

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು):-

(ಅ) ಹೌದು

(ಆ) ಸದರಿ ದೇವಾಲಯದಲ್ಲಿ ಭಕ್ತಾದಿಗಳಿಗೆ ಕುಡಿಯುವ ನೀರು, ಶೌಚಾಲಯ ಹಾಗೂ ವಸತಿ ಸೌಲಭ್ಯ ಕಲ್ಪಿಸಲಾಗಿದೆ.

(ಇ) ಈ ಕುರಿತಂತೆ ಮಹಾನಕ್ಷೆ ತಯರಿಸುವ ವಿಷಯವನ್ನು ಪರಿಸೀಲಿಸಲಾಗುತ್ತಿದೆ.

(ಈ) ಅಂತಹ ಮಹಾನಕ್ಷೆ ಅನುಮೋದನೆಯಾದ ನಂತರ, ಸಂಬಂಧಪಟ್ಟ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ದೇವಾಲಯದ ನಿಧಿ ಹಾಗು ಅನುದಾನದ ಲಭ್ಯತೆ ಆಧರಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ದೇವಸ್ಥಾನ ಅಭಿವೃದ್ಧಿ ಪಡಿಸುವುದು

289 (718) ಶ್ರೀ ಬಿ. ಕೆ. ಸಂಗಮೇಶ್ವರ:- ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಮತ್ತು ಜಲಸಾರಿಗೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಭದ್ರಾವತಿ ತಾಲ್ಲೂಕಿನ ಹಳೇನಗರದಲ್ಲಿರುವ ಪುರಾಣ ಪ್ರಸಿದ್ಧ ಹಾಗೂ ಪ್ರಾಚೀನ ದೇವಸ್ಥಾನಗಳಾದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ ಹಾಗೂ ಹೊನ್ನೇಗುಡ್ಡೆ ದೇವಸ್ಥಾನಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಎರಡೂ ದೇವಸ್ಥಾನಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವಾಗ ಅಭಿವೃದ್ಧಿಪಡಿಲಾಗುವುದು?

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು):-

(ಅ) ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಇರುತ್ತದೆ. ಆದರೆ ಹೊನ್ನೇಗುಡ್ಡ ದೇವಾಲಯದ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಇರುವುದಿಲ್ಲ.

(ಆ) ಭದ್ರಾವತಿ ತಾಲ್ಲೂಕು ಹಳೇನಗರದಲ್ಲಿನ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯವನ್ನು ಶ್ರೀಮತಿ ಸತ್ಯಮ್ಮ ಮತ್ತು ಶ್ರೀಕೃಷ್ಣ ದೀಕ್ಷಿತ್ ಚಾರಿಟೇಬಲ್ ಟ್ರಸ್ಟಿ ಇವರು ಜೀರ್ಣೋದ್ಧಾರಗೊಳಿಸಲು ಮುಂದೆ ಬಂದಿದ್ದು, ರಾಜ್ಯ ಪ್ರಾಚ್ಯವಸ್ತು ಇಲಾಖೆ ಅನುಮತಿ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಅರಕೇಶ್ವರ ನಗರದಲ್ಲಿ ಪಶು ಚಿಕಿತ್ಸಾಲಯ

305 (378) **ಶ್ರೀ ಶ್ರೀನಿವಾಸ್ ಎಂ. (ಮಂಡ್ಯ):-** ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ನಗರದ ಅರಕೇಶ್ವರ ನಗರದಲ್ಲಿ ಪಶು ಚಿಕಿತ್ಸಾಲಯವು ಶಾಲಾ ಕೊಠಡಿಯೊಂದರಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸದರಿ ಪಶು ಚಿಕಿತ್ಸಾ ಕೇಂದ್ರಕ್ಕೆ ಸ್ವಂತ ಕಟ್ಟಡವನ್ನು ಮಂಜೂರು ಮಾಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; [ವಿವರ ನೀಡುವುದು]

(ಇ) ಸ್ವಂತ ಕಟ್ಟಡವನ್ನು ಯಾವಾಗ ಮಂಜೂರು ಮಾಡಲಾಗುವುದು ಹಾಗೂ ಅದಕ್ಕೆ ಮೂಲಭೂತ ಸೌಕರ್ಯವನ್ನು ಯಾವಾಗ ಒದಗಿಸಲಾಗುವುದು? [ವಿವರ ನೀಡುವುದು]

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನಾ ಸಚಿವರು):-

(ಅ) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಗುತ್ತಲು (ಅರಕೇಶ್ವರ ನಗರ) ಸಂಸ್ಥೆಯು ಶಾಲಾ ಆವರಣದ ವ್ಯಾಪ್ತಿಯಲ್ಲಿದ್ದರೂ, ವಿನಾಯಕ ಸಂಘದವರು ನೀಡಿರುವ ಗ್ರಂಥಾಲಯ ಕಟ್ಟಡದ ಒಂದು ಭಾಗದಲ್ಲಿ ಈ ಸಂಸ್ಥೆಗೆ ಸ್ವಂತ ಕಟ್ಟಡ ನಿರ್ಮಾಣವಾಗುವವರೆಗಿನ ಒಪ್ಪಂದದ ಮೇರೆಗೆ ಕಾರ್ಯ ನಿರ್ವಹಿಸುತ್ತಿದೆ.

(ಆ) ಸದರಿ ಸಂಸ್ಥೆಗೆ ಕಟ್ಟಡ ನಿರ್ಮಾಣದ ಉದ್ದೇಶಕ್ಕಾಗಿ ನಿವೇಶನ ಕೋರಿ ಮಂಡ್ಯ ನಗರ ಸಭೆಗೆ ಪತ್ರವನ್ನು ಬರೆಯಲಾಗಿದ್ದು, ನಿವೇಶನವನ್ನು ಪಡೆಯಲು ಪ್ರಯತ್ನ ಮಾಡಲಾಗುತ್ತಿದೆ.

(ಇ) ನಿವೇಶನ ದೊರಕಿದ ನಂತರ ಸ್ವಂತ ಕಟ್ಟಡ ಹಾಗೂ ಮೂಲಭೂತ ಸೌಕರ್ಯವನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಭದ್ರಾವತಿಯಲ್ಲಿ ಇಂಜಿನಿಯರಿಂಗ್ ಕಾಲೇಜು ಮತ್ತು ಬಿ.ಇಡಿ., ಕಾಲೇಜು ತೆರೆಯುವುದು

290 (719) **ಶ್ರೀ ಸಂಗಮೇಶ್ ಬಿ.ಕೆ.:-** ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಭದ್ರಾವತಿಯಲ್ಲಿ ನೂತನವಾಗಿ ಇಂಜಿನೀಯರಿಂಗ್ ಕಾಲೇಜು ಮತ್ತು ಸರ್ಕಾರಿ ಬಿ.ಇಡಿ. ಕಾಲೇಜು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು; ಇವುಗಳನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಸಿ. ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):-

(ಅ) ಭದ್ರಾವತಿಯಲ್ಲಿ ನೂತನವಾಗಿ ಇಂಜಿನೀಯರಿಂಗ್ ಕಾಲೇಜನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದೆ.

ಭದ್ರಾವತಿಯಲ್ಲಿ ನೂತನವಾಗಿ ಸರ್ಕಾರಿ ಬಿ.ಇಡಿ. ಕಾಲೇಜನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

(ಆ) ಅಗತ್ಯತೆ ಮತ್ತು ಅನುದಾನದ ಲಭ್ಯತೆ ಆಧರಿಸಿ ಇದನ್ನು ಸ್ಥಾಪಿಸುವ ಬಗ್ಗೆ ಕ್ರಮ ವಹಿಸಲಾಗುವುದು.

ಅನುದಾನ ಮಂಜೂರಾತಿ

249 (411) **ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು)**;- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೈಸೂರು ಹುಣಸೂರು ತಾಲ್ಲೂಕಿಗೆ ಉನ್ನತ ಶಿಕ್ಷಣ ಇಲಾಖೆಯಿಂದ 2009-10ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೂ ಮಂಜೂರಾಗಿರುವ ಅನುದಾನವೆಷ್ಟು; (ವಿವರ ನೀಡುವುದು)

(ಆ) ಯಾವ ಯಾವ ಉದ್ದೇಶಗಳಿಗೆ ನೀಡಲಾಗಿದೆ; (ವಿವರ ನೀಡುವುದು)

(ಇ) ಹುಣಸೂರು ತಾಲ್ಲೂಕಿನ ಹನಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದೆ ಮರದ ನೆರಳು ಹಾಗೂ ಬಾಡಿಗೆ ಕಟ್ಟಡದಲ್ಲಿ ತರಗತಿಯನ್ನು ನಡೆಸುತ್ತಿದ್ದು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)

ಶ್ರೀ ಸಿ. ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):-

(ಅ) 2009-10ನೇ ಸಾಲಿನಿಂದ 2011-13ನೇ ಸಾಲಿನವರೆಗೆ ಕಾಲೇಜು ಶಿಕ್ಷಣ ಇಲಾಖೆ ಅಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಆಯಾ ವರ್ಷಗಳಲ್ಲಿ ವೇತನ/ವೇತನೇತರ ಬಾಬ್ತುಗಳಿಗೆ ಒಟ್ಟಾರೆ ವಿವಿಧ ಲೆಕ್ಕಶೀರ್ಷಿಕೆಯಡಿಗಳಲ್ಲಿ ಅನುದಾನವನ್ನು ಆಯವ್ಯಯ ಅಂದಾಜುಗಳಲ್ಲಿ ಒಸಗಿಸಲಾಗಿದ್ದು, ಮೈಸೂರು/ಹುಣಸೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ ಪ್ರತ್ಯೇಕವಾಗಿ ಅನುದಾನವನ್ನು ಒದಗಿಸಲಾಗಿರುವುದಿಲ್ಲ.

ಒದಗಿಸಲಾದ ಅನುದಾನದ ವಿವರ:

2009–10	–	ರೂ. 20247.85
2010–11	–	ರೂ. 54735.87
2011–12	–	ರೂ. 58548.89
2012–13	–	ರೂ. 68898.11

(ಆ) ಅನುದಾನವನ್ನು ಆಯಾ ವರ್ಷಗಳಲ್ಲಿ ಕಛೇರಿ ವೆಚ್ಚ, ದೂರವಾಣಿವೆಚ್ಚ ಇತರೆ ವೆಚ್ಚಗಳಿಗಾಗಿ, ಪೀಠೋಪಕರಣ, ಪುಸ್ತಕಗಳು, ಪ್ರಯೋಗಾಲಯ ಉಪಕರಣ ಹಾಗೂ ಇನ್ನಿತರೆ ಮೂಲ ಸೌಕರ್ಯಗಳಿಗಾಗಿ ಅನುದಾನವನ್ನು ನೀಡಲಾಗಿದೆ. (ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ).

(ಇ) ಬಂದಿದೆ, ಸದರಿ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ರೂ. 11,34.00ಲಕ್ಷಗಳ ವೆಚ್ಚದಲ್ಲಿ 2 ಎಕರೆ .33 ಗುಂಟೆ ಜಮೀನನ್ನು ಖರೀದಿಸಿದ್ದು, ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಒದಗಿಸಲು ಆರ್ಥಿಕ ಇಲಾಖೆಯನ್ನು ಸಂಪರ್ಕಿಸಿದ್ದು ಅನುದಾನದ ಲಭ್ಯತೆ ನಂತರ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.

ಅನುಬಂಧ-1

ಕಛೇರಿ ವೆಚ್ಚ/ದೂರವಾಣಿ ವೆಚ್ಚ/ಇತರೆ ವೆಚ್ಚಗಳಿಗಾಗಿ . ಪೀಠೋಪಕರಣ,ಪುಸ್ತಕಗಳು, ಪ್ರಯೋಗಾಲಯ ಉಪಕರಣ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳಿಗಾಗಿ ಅನುದಾನವನ್ನು ಬಿಡುಗಡೆ ಮಾಡಲಾದ ಬಗ್ಗೆ ವಿವರಣಾ ಪಟ್ಟಿ

ಕ್ರ.ಸಂ	ಕಾಲೇಜಿನ ಹೆಸರು	ಬಿಡುಗಡೆ ಮಾಡಲಾದ ಮೊತ್ತ			
		ಒಟ್ಟು			
		2009-10	2010-11	2011-12	2012-13
1	ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು	1546000	7610488	1271100	44400
2	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು	1225500	6187881	633500	48300
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ	728100	825551	1016000	44300
4	ಸರ್ಕಾರಿ ಮಹಿಳಾ ಕಾಲೇಜು, ವಿಜಯನಗರ ಮೈಸೂರು	537000	4628515	3345000	0
5	ಶ್ರೀ ಡಿ.ದೇವರಾಜು ಅರಸು ಸ.ಪ್ರ.ದ.ಕಾ. ಹುಣಸೂರು	761600	1996566	1438700	50800
6	ಸ.ಪ್ರ.ದ.ಕಾ ಮಹಿಳಾ ಹುಣಸೂರು	380000	338948	475000	0
7	ಸಪ್ರದಕಾ ಬಿಳಿಕೆರೆ	380000	586628	575000	0
8	ಸಪ್ರದಕಾ ಹನಗೋಡು	380000	211628	525880	0
ಒಟ್ಟು		5938200	22578306	9282160	187800

ಕಾಲೇಜು ಶಿಕ್ಷಣ ನಿರ್ದೇಶಕರು

ಆಸ್ಪತ್ರೆ ಮೇಲ್ದರ್ಜೆಗೇರಿಸುವುದು

259 (881) **ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದೊಡ್ಡಬಳ್ಳಾಪುರ ನಗರದಲ್ಲಿರುವ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಆಸ್ಪತ್ರೆಗೆ ವೈದ್ಯರು, ಸಿಬ್ಬಂದಿ, ಸಲಕರಣೆಗಳು, ಇತ್ಯಾದಿಗಳನ್ನು ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)

(ಆ) ಸಾಂಕ್ರಾಮಿಕ ರೋಗ, ಡೆಂಗ್ಯೂ ರೋಗ, ಹೆಚ್.ಐ.ವಿ. ರೋಗಗಳು ಪತ್ತೆ ಹಚ್ಚಿರುವ ಪ್ರಕರಣಗಳು ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಬೆಳಕಿಗೆ ಬಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ; ಈ ರೋಗಗಳು ಬಾರದ ಹಾಗೆ ಸರ್ಕಾರ ಯಾವ ಮುಂಜಾಗ್ರತಾ ಕ್ರಮ ಕೈಗೊಂಡಿದೆ;

(ಇ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಕಾಯಿಲೆಗಳು ಹೆಚ್ಚುತ್ತಿದ್ದು ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಿಬ್ಬಂದಿ ಮತ್ತು ಔಷಧಿಗಳು ಲಭ್ಯತೆಯಾಗಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? (ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

(ಅ) ದೊಡ್ಡಬಳ್ಳಾಪುರ ತಾಲ್ಲೂಕು ಆಸ್ಪತ್ರೆಯನ್ನು 100 ಹಾಸಿಗೆಗಳ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸಲಾಗಿದ್ದು, ಮೇಲ್ದರ್ಜೆಗೇರಿಸಿರುವುದಕ್ಕೆ ಅನುಗುಣವಾಗಿ ಕಟ್ಟಡ ನಿರ್ಮಿಸಬೇಕಾಗಿದೆ. ಪ್ರಸ್ತುತ ಈ ಆಸ್ಪತ್ರೆಯು 50 ಹಾಸಿಗೆಗಳ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಸ್ತಿತ್ವದಲ್ಲಿರುವ ಹಾಸಿಗೆಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಮೂಲ ಸೌಕರ್ಯವನ್ನು ಒದಗಿಸಲಾಗಿದೆ.

(ಆ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಜನವರಿ 2012 ರಿಂದ ಮೇ 2012ರ ವರೆಗೆ ಬೆಳಕಿಗೆ ಬಂದಿರುವ ಸಾಂಕ್ರಾಮಿಕ ರೋಗದ ಪ್ರಕರಣಗಳ ಸಂಖ್ಯೆ ಕೆಳಕಂಡಂತಿವೆ:

ಕರಳು ಬೇನೆ	..	15
ಕಾಲರಾ	..	–
ಅರಿಶಿನ ಕಾಮಾಲೆ	...	3
ವಿಷಮಶೀತ ಜ್ವರ	...	24
ಇಲಿಜ್ವರ	...	–
ಮಂಗನಕಾಯಿಲೆ	...	–
ಹೆಚ್1 ಎನ್1	...	–

ಸದರಿ ತಾಲ್ಲೂಕಿನಲ್ಲಿ 2012ನೇ ಸಾಲಿನಲ್ಲಿ ಇದುವರೆವಿಗೆ ದೃಢಪಟ್ಟ ಡೆಂಗಿ ಜ್ವರ ಪ್ರಕರಣಗಳ ವರದಿಯಾಗಿರುವುದಿಲ್ಲ. ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಒಟ್ಟು 32 ಹೆಚ್.ಐ.ವಿ. ಪ್ರಕರಣಗಳು ವರದಿಯಾಗಿದೆ.

ಈ ರೋಗಗಳ ತಡೆಗಟ್ಟುವಿಕೆ ಕುರಿತಂತೆ ಸರ್ಕಾರ ತೆಗೆದುಕೊಂಡ ಕ್ರಮದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

(ಇ) ದೊಡ್ಡಬಳ್ಳಾಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಂದು ಮುಖ್ಯ ವೈದ್ಯಾಧಿಕಾರಿ, 3 ತಜ್ಞ ವೈದ್ಯರು ಹಾಗೂ ಒಂದು ದಂತ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಎಲ್ಲಾ ಹುದ್ದೆಗಳು ಭರ್ತಿಯಾಗಿವೆ ಮುಂದುವರೆದು ಈ ಆಸ್ಪತ್ರೆಯಲ್ಲಿ ವಿವಿಧ ವೃಂದಗಳ 70 ಸಿಬ್ಬಂದಿ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 20 ಹುದ್ದೆಗಳು ಭರ್ತಿಯಾಗಿವೆ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 16 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಇವುಗಳಿಗೆ ಒಟ್ಟು 17 ಸಾಮಾನ್ಯ ಕರ್ತವ್ಯ ವೈದ್ಯಾದಿಕಾರಿಗಳ ಹುದ್ದೆಗಳನ್ನು ಮಂಜೂರು ಮಾಡಲಾಗಿದ್ದು, ಆ ಪೈಕಿ 15 ಹುದ್ದೆಗಳು ಭರ್ತಿಯಾಗಿವೆ ಹಾಗೂ 2 ಹುದ್ದೆಗಳು ಖಾಲಿ ಇವೆ. ಮುಂದುವರೆದು, ಸದರಿ ಕೇಂದ್ರಗಳಲ್ಲಿ ವಿವಿಧ ವೃಂದಗಳ ಒಟ್ಟು 173 ಸಿಬ್ಬಂದಿ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 125 ಹುದ್ದೆಗಳು ಭರ್ತಿಯಾಗಿವೆ ಮತ್ತು 48 ಹುದ್ದೆಗಳು ಖಾಲಿ ಇವೆ.

ಸಾಂಕ್ರಾಮಿಕ ರೋಗಗಳು ಸೇರಿದಂತೆ ಇತರೆ ಎಲ್ಲಾ ರೋಗಗಳ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ/ಕೇಂದ್ರಗಳಲ್ಲಿ ಅವಶ್ಯವಿರುವ ಔಷಧಿಗಳ ದಾಸ್ತಾನು ಲಭ್ಯವಿದೆ.

ಅನುಬಂಧ-1

ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕುರಿತಂತೆ ಸರ್ಕಾರವು ತೆಗೆದುಕೊಂಡ ಕ್ರಮದ ವಿವರಗಳು

1) ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಕಾಲಕಾಲಕ್ಕೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

2) ಭಾರಿ ಮಳೆ/ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ಹಾಗೂ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸುತ್ತೋಲೆಯನ್ನು ಕಳುಹಿಸಲಾಗಿದೆ.

3) ಎಲ್ಲಾ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆ ಸನ್ನದ್ಧವಾಗಿದ್ದು, ಸಾಂಕ್ರಾಮಿಕ ರೋಗಗಳು ಕಂಡು ಬಂದಲ್ಲಿ ಕೂಡಲೇ ನಿಯಂತ್ರಣಾ ಕಾರ್ಯಕ್ಕೆ ನೆರವಾಗಲಿವೆ. ಅಲ್ಲದೆ ರೋಗ ಪೀಡಿತ ಪ್ರದೇಶಗಳಲ್ಲಿ ಸಂಚಾರಿ ಚಿಕಿತ್ಸಾ ತಂಡಗಳೂ ಸಹ ಕಾರ್ಯನಿರ್ವಹಿಸುತ್ತಿವೆ.

4) ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳ ಇತರೆ ಇಲಾಖಾಧಿಕಾರಿಗಳ ಸಮನ್ವಯ ಸಮಿತಿಯನ್ನು ಕ್ರಮವಾಗಿ ಜಿಲ್ಲಾಧಿಕಾರಿಗಳ ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ರಚಿಸಿ, ಸಭೆಗಳನ್ನು ಕರೆದು, ಪರಿಸ್ಥಿತಿಯ ಪರಿವೀಕ್ಷಣೆ, ಅಧ್ಯಯನ ಹಾಗೂ ಕಾರ್ಯತಂತ್ರ ರೂಪುರೇಶೆಗಳನ್ನು ಯೋಜಿಸಿ, ಅನುಷ್ಠಾನಗೊಳಿಸಲಾಗಿದೆ.

5) ಎಲ್ಲಾ ಕುಡಿಯುವ ನೀರಿನ ಮೂಲಗಳ ನೀರನ್ನು ಪರೀಕ್ಷಿಸಿ ಯೋಗ್ಯವಲ್ಲದ ಮೂಲಗಳನ್ನು ಸೂಪರ್ ಕ್ಲೋರಿನೇಷನ್ ಮಾಡಲಾಗುತ್ತಿದೆ.

6) ಕುಡಿಯುವ ನೀರನ್ನು ಮನೆಗಳಲ್ಲಿಯೇ ಶುದ್ಧೀಕರಿಸಲು ಹಾಲೋಜನ್ ಮಾತ್ರೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇಡುವುದಲ್ಲದೆ ಸಕಾಲದಲ್ಲಿ ಪೀಡಿತ ಪ್ರದೇಶಗಳಲ್ಲಿ ವಿತರಿಸಿ, ಸಮುದಾಯಕ್ಕೆ ಬಳಸುವ ಬಗ್ಗೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

7) ಸಾಂಕ್ರಾಮಿಕ ರೋಗಗಳಿಗೆ ಚಿಕಿತ್ಸೆ ನೀಡಲು ಅವಶ್ಯವಿರುವ ಔಷಧಿಗಳ ದಾಸ್ತಾನು ಲಭ್ಯವಿದೆ.

8) ರೋಗ ನಿಯಂತ್ರಣ ಕಾರ್ಯವನ್ನು ಮತ್ತು ಜನರಿಗೆ ಆರೋಗ್ಯ ಶಿಕ್ಷಣವನ್ನು ನಿರಂತರವಾಗಿ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಡೆಂಗಿ ಜ್ವರ ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮದ ವಿವರಗಳು ಕೆಳಕಂಡಂತಿವೆ;

1) ಜನವರಿ 2012ರಲ್ಲಿ ಮಾಹೆವಾರು ಕೈಗೊಳ್ಳಬೇಕಾದ ಚಟುವಟಿಕೆಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಎಲ್ಲಾ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳಿಗೆ ಕಳುಹಿಸಿ ಜಿಲ್ಲಾ ಮಟ್ಟದಿಂದ ಗ್ರಾಮ ಮಟ್ಟದವರೆಗೆ ಎಲ್ಲಾ ಹಂತಗಳಲ್ಲಿಯೂ ಈ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2) ದಿನಾಂಕ 4-2-2012 ಹಾಗೂ 19-6-2012 ರಂದು ಅಂತರ ಇಲಾಖಾ ಸಮನ್ವಯ ಸಮಿತಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಶಿಕ್ಷಣ, ನಗರಾಭಿವೃದ್ಧಿ, ವಾರ್ತಾ ಇಲಾಖೆಗಳು) ಮತ್ತು ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರುಗಳನ್ನೊಳಗೊಂಡ ಸಭೆಯನ್ನು ಮತ್ತು ಇದರೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳೊಡನೆ ವಿಡಿಯೋ ಕಾನ್ಫರೆನ್ಸ್ ನಡೆಸಿ ರೋಗವಾಹಕ ರೋಗಗಳ ನಿಯಂತ್ರಣಕ್ಕಾಗಿ ಕೈಗೊಳ್ಳಬೇಕಾದ ಚಟುವಟಿಕೆಗಳ ಬಗ್ಗೆ ಸೂಕ್ತ ಸಲಹೆಗಳನ್ನು ನೀಡಲಾಗಿದೆ.

3) ದಿನಾಂಕ 27-2-2012, 9-5-2012 ಮತ್ತು 10-5-2012 ರಂದು ಎಲ್ಲಾ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ತ್ರೈಮಾಸಿಕ ಪರಿಶೀಲನಾ ಸಭೆಗಳನ್ನು ನಡೆಸಲಾಗಿದ್ದು, ಅದರಂತೆ ಮುಂಗಾರು ಮತ್ತು ಮುಂಗಾರಿನ ನಂತರದ ಅವಧಿಗಳಲ್ಲಿ ಈ ರೋಗಗಳ ನಿಯಂತ್ರಣಕ್ಕಾಗಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಮತ್ತು ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಜಿಲ್ಲಾ ಆಡಳಿತವು ಸನ್ನದ್ಧವಾಗಿರಲು ಸೂಚಿಸಲಾಗಿದೆ.

4) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಆಯುಷ್ ಸೇವೆಗಳು ಇವರು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಜಿಲ್ಲೆಗಳಲ್ಲಿ ಡೆಂಗಿ ರೋಗದ ಸ್ಥಿತಿಗತಿ ಮತ್ತು ಅವುಗಳ ನಿಯಂತ್ರಣಕ್ಕಾಗಿ ಕೈಗೊಂಡ ಕ್ರಮಗಳನ್ನು ಆಗಾಗ್ಗೆ ಪರಿಶೀಲಿಸಲು ಸೂಚಿಸಿರುತ್ತಾರೆ.

5) 2012–13ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಮತ್ತು ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಡೆಂಗಿಜ್ವರ ನಿಯಂತ್ರಣಕ್ಕಾಗಿ ಎಲ್ಲಾ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳಿಗೆ ರೂ. 95.52 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

6) ರಾಜ್ಯ ಮಟ್ಟದ ಕಾರ್ಯಕ್ರಮಾಧಿಕಾರಿಗಳು ಮತ್ತು ಎಂಟಿಮಾಲಜಿಸ್ಟ್ ತಂಡವು ಡೆಂಗಿ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ನಿಯಂತ್ರಣ ಕ್ರಮಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆಯನ್ನು ಮಾಡುತ್ತಿದೆ ಹಾಗೂ ಈ ಮೂಲಕ ಜಿಲ್ಲೆಯ ರೋಗದ ಪರಿಸ್ಥಿತಿಯ ಬಗ್ಗೆ ನಿಗಾ ಇಡಲಾಗುತ್ತಿದೆ.

374. **ಶ್ರೀ ಶ್ರೀನಿವಾಸ್ ಎಂ. (ಮಂಡ್ಯ)**:– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ನಗರದ ಅರ್ಕೇಶ್ವರ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರವು ಶಾಲಾ ಕೊಠಡಿಯೊಂದರಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸ್ವಂತ ಕಟ್ಟಡವನ್ನು ಒದಗಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ;

(ಇ) ಆಸ್ಪತ್ರೆಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಯಾವ ಕ್ರಮವನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

(ಅ) ಮಂಡ್ಯ ನಗರದ ಅರ್ಕೇಶ್ವರ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರವು ನಿವೇಶನ ಲಭ್ಯತೆಯಿಲ್ಲದಿರುವುದರಿಂದ ಪ್ರಸ್ತುತ ಶಾಲಾ ಕೊಠಡಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಿದೆ.

(ಆ) ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ನಿವೇಶನ ಲಭ್ಯವಾದ ನಂತರ ಸ್ವಂತ ಕಟ್ಟಡ ಒದಗಿಸಲು ಕ್ರಮ ವಹಿಸಬೇಕಾಗಿದೆ.

(ಇ) ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೊರರೋಗಿಗಳ, ಲಸಿಕಾ ಮತ್ತು ಪ್ರಯೋಗಶಾಲಾ ಸೇವೆಗಳ ಸೌಲಭ್ಯ ಲಭ್ಯವಿದೆ.

ಪ್ರಾಧಿಕಾರ ರಚನೆ

247 (416) **ಶ್ರೀ ಮಹದೇವ ಪ್ರಸಾದ ಹೆಚ್. ಎಸ್. (ಗುಂಡ್ಲುಪೇಟೆ)**:– ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಲೈಮಹದೇಶ್ವರ ಬೆಟ್ಟದ ಆಡಳಿತ ವ್ಯವಸ್ಥೆ ಸುಗಮವಾಗಿ ನಡೆಯಲು ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಪ್ರಾಧಿಕಾರ ರಚನೆ ಮಾಡಲು ಸರ್ಕಾರ ಈವರೆವಿಗೆ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಕೋಟಾ ಶ್ರೀನಿವಾಸ (ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು):–

(ಅ) ಹೌದು,

(ಆ) ಸರ್ಕಾರದ ಪರಿಶೀಲನೆಯಲ್ಲಿದೆ

ಬಾಲಕಿಯರ ಪದವಿ ಪೂರ್ವ ಕಾಲೇಜು ಮಂಜೂರಾತಿ

260 (882) **ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ)**:– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದೊಡ್ಡಬಳ್ಳಾಪುರ ನಗರದಲ್ಲಿ ಬಾಲಕಿಯರ ಪದವಿ ಪೂರ್ವ ಕಾಲೇಜು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಯಾವಾಗ ಮಂಜೂರು ಮಾಡಲಾಗುವುದು; ಮಂಜೂರು ಮಾಡಲು ಈವರೆವಿಗೂ ತೆಗೆದುಕೊಂಡಿರುವ ಕ್ರಮಗಳೇನು;

(ಆ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚುತ್ತಿದ್ದು ಪ್ರೌಢಶಾಲೆಗಳಿಗೆ ಬೇಡಿಕೆ ಹೆಚ್ಚಿರುವುದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಗ್ರಾಮೀಣ ಪ್ರದೇಶದ ಯಾವ ಸ್ಥಳದಲ್ಲಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ; ಯಾವ ಸಾಲಿನಿಂದ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗುವುದು (ಮಾಹಿತಿ ನೀಡುವುದು);

ಇ) ದೊಡ್ಡಬಳ್ಳಾಪುರ ತಾಲ್ಲೂಕಿನ ಹೊಸಹಳ್ಳಿ, ರಾಜಘಟ್ಟ, ಹುಲಿಕುಂಟೆ, ದೊಡ್ಡಬಳ್ಳಾಪುರ ನಗರಗಳಿಗೆ ಪದವಿ ಪೂರ್ವ ಕಾಲೇಜುಗಳು ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ; ಯಾವಾಗ ಮಂಜೂರಾತಿ ನೀಡಲಾಗುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ಬಾಲಕಿಯರ ಪದವಿ ಪೂರ್ವ ಕಾಲೇಜು ಮಂಜೂರಾತಿಗಾಗಿ ಪ್ರಸ್ತಾವನೆ ಬಂದಿದೆ. ಅನುದಾನ ಲಭ್ಯತೆಯನ್ನು ಆಧರಿಸಿ, ಸ್ಥಳೀಯ ಅಗತ್ಯತೆಗಳನ್ನು ಪರಿಗಣಿಸಿ, ಮಂಜೂರು ಮಾಡಲು ಕ್ರಮಕೈಗೊಳ್ಳಲಾಗುವುದು.

(ಆ) ಹೌದು, 2012–13ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಎಸ್.ಎಸ್.ಘಾಟಿ, ಶಿರವಾರ ಮತ್ತು ಉರ್ದು ಪ್ರೌಢಶಾಲೆ ದೊಡ್ಡಬಳ್ಳಾಪುರ ಟೌನ್ ಈ ಸ್ಥಳಗಳಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಬಂದಿರುತ್ತವೆ. ಎಂ.ಹೆಚ್.ಆರ್.ಡಿ. ಯಿಂದ ಅನುಮೊದನೆಯಾದಲ್ಲಿ 2013–14ನೇ ಸಾಲಿನಲ್ಲಿ ಈ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗುವುದು.

(ಇ) ಹೌದು, ಪ್ರಸ್ತಾವನೆ ಬಂದಲ್ಲಿ, ಅನುದಾನ ಲಭ್ಯತೆಯನ್ನು ಆಧರಿಸಿ, ಸ್ಥಳೀಯ ಅಗತ್ಯತೆಗಳನ್ನು ಪರಿಗಣಿಸಿ, ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶಾಲಾ ಕಾಲೇಜುಗಳ ಬಳಿ ತಂಬಾಕು ನಿಯಂತ್ರಿಸುವುದು

277 (175) **ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇ–ಔಟ್):–** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅದರಲ್ಲೂ ಹೆಚ್ಚಾಗಿ ಬೆಂಗಳೂರು ನಗರದಲ್ಲಿನ ಶಾಲಾ ಕಾಲೇಜುಗಳ ಬಳಿ ತಂಬಾಕು ಹಾಗೂ ಮಾದಕ ದ್ರವ್ಯಗಳ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಇದರಿಂದ ಶಾಲಾ ವಿದ್ಯಾರ್ಥಿಗಳು ಈ ಮಾದಕ ದ್ರವ್ಯಗಳ ದಾಸರಾಗುತ್ತಿರುವುದು ನಿಜವೇ;

(ಇ) ಹಾಗಿದ್ದಲ್ಲಿ, ಶಾಲಾ ಕಾಲೇಜುಗಳ ಬಳಿ ತಂಬಾಕು ಮಾರಾಟವನ್ನು ನಿಯಂತ್ರಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

(ಅ) ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಗಮನಕ್ಕೆ ಬಂದಿದೆ. ಆದರೆ ಮಾದಕ ದ್ರವ್ಯಗಳ ಮಾರಾಟದ ಬಗ್ಗೆ ದೂರುಗಳು ಇರುವುದಿಲ್ಲ.

(ಆ) ವಿದ್ಯಾರ್ಥಿಗಳು ಮಾದಕ ದ್ರವ್ಯಗಳಿಗೆ ಒಳಗಾಗದಂತೆ ಜಾಗೃತಿ ಮತ್ತು ಅರಿವು ಮೂಡಿಸಲು ಕ್ರಮಕೈಗೊಳ್ಳಲಾಗಿದೆ.

(ಇ) ಹೌದು, ರಾಜ್ಯ ಉಚ್ಚ ನ್ಯಾಯಾಲಯದ ದಿನಾಂಕ 14-11-2009ರ ತೀರ್ಪಿನಂತೆ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಕಾರ್ಯವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಸಂಬಂಧ" ಶಾಲಾ/ಕಾಲೇಜುಗಳ ಆವರಣದಿಂದ 100 ಗಜಗಳ ಅಂತರದಲ್ಲಿ ತಂಬಾಕುಯುಕ್ತ ವಸ್ತುಗಳ ಮಾರಾಟ ನಿಷೇಧಿಸಿದೆ ಎಂದು ರಾಜ್ಯದ ಎಲ್ಲಾ ಶಾಲಾ/ಕಾಲೇಜುಗಳ ಆವರಣದಲ್ಲಿ ಪ್ರದರ್ಶನ ಫಲಕಗಳನ್ನು (Display Board) ಪ್ರದರ್ಶಿಸುವಂತೆ ಸುತ್ತೋಲೆ ಹೊರಡಿಸಲಾಗಿದೆ. ಈ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮತ್ತು ಅರಿವು ಮೂಡಿಸಲು ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲು ದಿನಾಂಕ 15-11-2010 ಮತ್ತು 15-02-2011 ರಲ್ಲಿ ಸುತ್ತೋಲೆ ಹೊರಡಿಸಿ ಅಗತ್ಯ ಕ್ರಮ ವಹಿಸಲು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಲಾಗಿರುತ್ತದೆ.

ಬೆಂಗಳೂರು ನಗರದಲ್ಲಿ ಪ್ರತಿ ಕಾಲೇಜಿನಲ್ಲಿ ಪ್ರಾಂಶುಪಾಲರ ಮಾರ್ಗ ದರ್ಶನದಲ್ಲಿ ಹಿರಿಯ ಉಪನ್ಯಾಸಕರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತಂಬಾಕು ಮಾರಾಟ ನಿಷೇದ ಕ್ರಮ ಕೈಗೊಂಡಿದೆ.

ರಾಜ್ಯದ ಇತರ ನಗರಗಳಲ್ಲಿ ತಂಬಾಕು ಮಾರಾಟ ನಿಷೇಧಿಸಲು ನಗರ ಸಭೆಗಳು ಕ್ರಮ ಕೈಗೊಂಡಿದೆ. ಪ್ರತಿ ಕಾಲೇಜು ತಂಬಾಕು ಮಾರಾಟ ನಿಷೇಧ ಫಲಕವನ್ನು ಹಾಕಿವೆ.

ಪಶು ವೈದ್ಯಕೀಯ ಆಸ್ಪತ್ರೆ ಪ್ರಾರಂಭ

269 (546) **ಶ್ರೀ ಪ್ರತಾಪ ಗೌಡ ಪಾಟೀಲ್** (ಮಸ್ಕಿ):- ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಹೊಸದಾಗಿ ಪಶುವೈದ್ಯಕೀಯ ಆಸ್ಪತ್ರೆಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದಿದೆಯೇ;

(ಆ) ಇದ್ದಲ್ಲಿ, ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು? (ಮಾಹಿತಿ ನೀಡುವುದು)

ಶ್ರೀ ರೇವು ನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನ ಸಚಿವರು):–

(ಅ) ರಾಜ್ಯದಲ್ಲಿ ಹೊಸದಾಗಿ ಪಶುವೈದ್ಯಕೀಯ ಆಸ್ಪತ್ರೆಗಳನ್ನು ಪ್ರಾರಂಭಿಸುವ ವಿಚಾರ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

2007ರ ಜಾನುವಾರು ಗಣತಿಯ ಪ್ರಕಾರ ರಾಜ್ಯದಲ್ಲಿ 1,70,28,417 ಜಾನುವಾರು ಘಟಕಗಳಿದ್ದು ಅದಕ್ಕನುಗುಣವಾಗಿ ಪ್ರತಿ 5,000 ಜಾನುವಾರು ಘಟಕಗಳಿಗೆ ಒಂದರಂತೆ ಕೃಷಿ ಆಯೋಗದ ಶಿಫಾರಸ್ಸಿನನ್ವಯ 3,395 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆ ಇರುತ್ತದೆ. ರಾಜ್ಯದಲ್ಲಿ ಪ್ರಸ್ತುತ ಒಟ್ಟು 4,110 ವಿವಿಧ ಹಂತದ ಪಶುವೈದ್ಯಕೀಯ ಸಂಸ್ಥೆಗಳಿದ್ದು ಅವಶ್ಯಕತೆಗಿಂತ 715 ಸಂಸ್ಥೆಗಳು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿವೆ.

ರಾಜ್ಯದಲ್ಲಿ ಹಾಲಿ 637 ಪಶುವೈದ್ಯಾಧಿಕಾರಿ ಹುದ್ದೆಗಳು ಖಾಲಿ ಇದ್ದು, ಪಶುವೈದ್ಯಕೀಯ ಸಂಸ್ಥೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಸದ್ಯಕ್ಕೆ ಪರಿಗಣಿಸಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ

ಉಪನ್ಯಾಸಕರು ಮತ್ತು ಸಿಬ್ಬಂದಿ ಕೊರತೆ

198 (556) **ಶ್ರೀ ಬಾಲಕೃಷ್ಣ ಹೆಚ್. ಸಿ. (ಮಾಗಡಿ)**:– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾಗಡಿ ಪಟ್ಟಣದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರು ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಾದರೆ, ಈ ಕಾಲೇಜಿನಲ್ಲಿ ಯಾವ್ಯಾವ ಸಂಯೋಜನೆಗಳಿರುತ್ತವೆ; ಎಷ್ಟು ಸಿಬ್ಬಂದಿಯ ಮಂಜೂರಾತಿಯಾಗಿರುತ್ತೆ; ಎಷ್ಟು ಸಿಬ್ಬಂದಿಯನ್ನು ಈ ಕಾಲೇಜಿಗೆ ನಿಯೋಜಿಸಲಾಗಿರುತ್ತದೆ (ವಿವರ ನೀಡುವುದು);

(ಇ) ಖಾಲಿ ಇರುವ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಈ) ಖಾಲಿ ಇರುವ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಯಾವ ಕಾಲಮಿತಿಯಲ್ಲಿ ನಿಯೋಜನೆ ಮಾಡಲಾಗುವುದು? (ಮಾಹಿತಿ ನೀಡುವುದು)

ಶ್ರೀ ಸಿ. ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):–

(ಅ) ಬಂದಿದೆ

(ಆ) ಬಿ.ಎ:– ಹೆಚ್.ಇ.ಪಿ; ಹೆಚ್.ಇ.ಎಸ್. ಮತ್ತು ಹೆಚ್.ಇ.ಕೆ. ಬಿ.ಎಸ್ಸಿ:– ಪಿ.ಎಂ.ಸಿ.ಎಸ್.

ಮಂಜೂರಾಗಿರುವ ಒಟ್ಟು ಬೋಧಕ ಸಿಬ್ಬಂದಿ	...	14
ಮಂಜೂರಾಗಿರುವ ಒಟ್ಟು ಬೋಧಕೇತರ ಸಿಬ್ಬಂದಿ	...	14
ನಿಯೋಜಿಸಲಾಗಿರುವ ಉಪನ್ಯಾಸಕರು	...	03
(ಇ) ಖಾಲಿ ಇರುವ ಖಾಯಂ ಉಪನ್ಯಾಸಕರ ಸಂಖ್ಯೆ	..	03
ಖಾಲಿ ಇರುವ ಬೋಧಕೇತರರ ಸಂಖ್ಯೆ	...	04

(ಈ) ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಸಂಖ್ಯೆ: ಆಇ 01 ಬಿಇಎಂ 2012 ದಿನಾಂಕ 14–06–2012 ಹಾಗೂ ಸಂಖ್ಯೆ: ಆಇ 01 ಬಿಇಎಂ 2008 ದಿನಾಂಕ 21–10–2009ರ ಸುತ್ತೋಲೆಗಳಲ್ಲಿ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಹೊಸ ಬೋಧಕೇತರ ಹುದ್ದೆಗಳನ್ನು ಸೃಜಿಸುವ/ಭರ್ತಿ ಮಾಡುವುದನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿದೆ. ಮಿತವ್ಯಯ ಆದೇಶ ಹಿಂಪಡೆದ ನಂತರ ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುವುದು.

ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳು

236 (894) **ಶ್ರೀ ಖಾದರ್ ಯು.ಟಿ. (ಮಂಗಳೂರು):–** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾಂಕ್ರಾಮಿಕ ರೋಗಗಳು ಯಾವುವು; ಈ ರೋಗಗಳಿಂದ ಇದುವರೆವಿಗೂ ಎಷ್ಟು ಜನ ಪ್ರಾಣ ಕಳೆದುಕೊಂಡಿದ್ದಾರೆ; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ; (ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಂಕ್ರಾಮಿಕ ರೋಗಗಳ ಪತ್ತೆಯಾಗಿವೆಯೇ? (ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

(ಅ) ಕರುಳುಬೇನೆ, ಕಾಲರಾ, ಅರಶಿನ ಕಾಮಾಲೆ, ವಿಷಮಶೀತಜ್ವರ, ಇಲಿ ಜ್ವರ, ಮಂಗನಕಾಯಿಲೆ, ಹೆಚ್1ಎನ್1 ಇವು ಸಾಂಕ್ರಾಮಿ ರೋಗಗಳಾಗಿವೆ.

ರಾಜ್ಯದಲ್ಲಿ ಜನವರಿ 2012ರಿಂದ ಮೇ-2012ರವರೆಗೆ ಸದರಿ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದವರ ಸಂಖ್ಯೆ ಈ ಕೆಳಕಂಡಂತಿವೆ;

ರೋಗಿಗಳು		ಮೃತರಾದವರು
ಕರುಳುಬೇನೆ	...	13
ಕಾಲರಾ	...	ಇಲ್ಲ
ಅರಶಿನ ಕಾಮಾಲೆ	...	03
ವಿಷಮಶೀತಜ್ವರ	...	ಇಲ್ಲ
ಇಲಿಜ್ವರ	...	01
ಮಂಗನಕಾಯಿಲೆ	...	01
ಹೆಚ್1ಎನ್1	...	20

(ಆ) ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕುರಿತಂತೆ ಸರ್ಕಾರವು ತೆಗೆದುಕೊಂಡ ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ.

(ಇ) ಜನವರಿ-2012 ರಿಂದ ಮೇ-2012ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪತ್ತೆಯಾದ ಸಾಂಕ್ರಾಮಿಕ ರೋಗಗಳ ವಿವರಗಳು ಕೆಳಕಂಡಂತಿವೆ;

ರೋಗಿಗಳು	ಒಟ್ಟು ಪ್ರಕರಣ	ಮೃತರಾದವರು
ಕರುಳುಬೇನೆ	21	ಇಲ್ಲ
ಕಾಲರಾ	00	ಇಲ್ಲ
ಅರಶಿನ ಕಾಮಾಲೆ	14	ಇಲ್ಲ
ವಿಷಮಶೀತಜ್ವರ	96	ಇಲ್ಲ
ಇಲಿಜ್ವರ	24	ಇಲ್ಲ
ಮಂಗನಕಾಯಿಲೆ	00	ಇಲ್ಲ
ಹೆಚ್1ಎನ್1	06	01

ಅನುಬಂಧ

ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕುರಿತಂತೆ ಸರ್ಕಾರವು ತೆಗೆದುಕೊಂಡ ಕ್ರಮದ ವಿವರಗಳು

1) ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಕಾಲಕಾಲಕ್ಕೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

2) ಭಾರಿ ಮಳೆ/ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ಹಾಗೂ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸುತ್ತೋಲೆಯನ್ನು ಕಳುಹಿಸಲಾಗಿದೆ.

3) ಎಲ್ಲಾ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆ ಸನ್ನದ್ಧವಾಗಿದ್ದು, ಸಾಂಕ್ರಾಮಿಕ ರೋಗಗಳು ಕಂಡು ಬಂದಲ್ಲಿ ಕೂಡಲೇ ನಿಯಂತ್ರಣಾ ಕಾರ್ಯಕ್ಕೆ ನೆರವಾಗಲಿವೆ. ಅಲ್ಲದೆ ರೋಗ ಪೀಡಿತ ಪ್ರದೇಶಗಳಲ್ಲಿ ಸಂಚಾರಿ ಚಿಕಿತ್ಸಾ ತಂಡಗಳೂ ಸಹ ಕಾರ್ಯನಿರ್ವಹಿಸುತ್ತಿವೆ.

4) ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳ ಇತರೆ ಇಲಾಖಾಧಿಕಾರಿಗಳ ಸಮನ್ವಯ ಸಮಿತಿಯನ್ನು ಕ್ರಮವಾಗಿ ಜಿಲ್ಲಾಧಿಕಾರಿಗಳ ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ರಚಿಸಿ, ಸಭೆಗಳನ್ನು ಕರೆದು, ಪರಿಸ್ಥಿತಿಯ ಪರಿವೀಕ್ಷಣೆ, ಅಧ್ಯಯನ ಹಾಗೂ ಕಾರ್ಯತಂತ್ರ ರೂಪುರೇಶೆಗಳನ್ನು ಯೋಜಿಸಿ, ಅನುಷ್ಠಾನಗೊಳಿಸಲಾಗಿದೆ.

5) ಎಲ್ಲಾ ಕುಡಿಯುವ ನೀರಿನ ಮೂಲಗಳ ನೀರನ್ನು ಪರೀಕ್ಷಿಸಿ ಯೋಗ್ಯವಲ್ಲದ ಮೂಲಗಳನ್ನು ಸೂಪರ್ ಕ್ಲೋರಿನೇಷನ್ ಮಾಡಲಾಗುತ್ತಿದೆ.

6) ಕುಡಿಯುವ ನೀರನ್ನು ಮನೆಗಳಲ್ಲಿಯೇ ಶುದ್ಧೀಕರಿಸಲು ಹಾಲೋಜನ್ ಮಾತ್ರೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇಡುವುದಲ್ಲದೆ ಸಕಾಲದಲ್ಲಿ ಪೀಡಿತ ಪ್ರದೇಶಗಳಲ್ಲಿ ವಿತರಿಸಿ, ಸಮುದಾಯಕ್ಕೆ ಬಳಸುವ ಬಗ್ಗೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

7) ಸಾಂಕ್ರಾಮಿಕ ರೋಗಗಳಿಗೆ ಚಿಕಿತ್ಸೆ ನೀಡಲು ಅವಶ್ಯವಿರುವ ಔಷಧಿಗಳ ದಾಸ್ತಾನು ಲಭ್ಯವಿದೆ.

8) ರೋಗ ನಿಯಂತ್ರಣ ಕಾರ್ಯವನ್ನು ಮತ್ತು ಜನರಿಗೆ ಆರೋಗ್ಯ ಶಿಕ್ಷಣವನ್ನು ನಿರಂತರವಾಗಿ ಮಾಡಲಾಗುತ್ತಿದೆ.

(874) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ವಾಜಪೇಯಿ ಆರೋಗ್ಯಶ್ರೀ ಯೋಜನೆಯ ಅನುಷ್ಠಾನ ಆದಾಗಿನಿಂದ ಈವರೆವಿಗೂ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಫಲಾನುಭವಿಗಳ ವಿವರ ನೀಡುವುದು)

ಆ) ರಾಜ್ಯದಲ್ಲಿನ ಮಹಾನಗರ ಪ್ರದೇಶಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ ; (ವಿವರ ನೀಡುವುದು)

ಇ) ಬೃಹತ್ ಬೆಂಗಳೂರು ಮಹಾನಗರ ಸಭೆಯ ವ್ಯಾಪ್ತಿಯಲ್ಲಿ ಎಷ್ಟು ಜನರಿಗೆ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ ? (ವಾರ್ಡ್‌ವಾರು ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ವಾಜಪೇಯಿ ಆರೋಗ್ಯಶ್ರೀ ಯೋಜನೆಯು ಜಾರಿಗೆ ಬಂದಾಗಿನಿಂದ ಇದುವರೆಗೆ ಗುಲ್ಬರ್ಗಾ ವಿಭಾಗದಲ್ಲಿ ಒಟ್ಟು 12, 576 ಹಾಗೂ ಬೆಳಗಾಂ ವಿಭಾಗದಲ್ಲಿ 9,918 ಫಲಾನುಭವಿಗಳು ಸೌಲಭ್ಯ ಪಡೆದಿದ್ದಾರೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 2010–11 ರಿಂದ ಇದುವರೆಗೆ ಗುಲ್ಬರ್ಗಾ ವಿಭಾಗದ ಗುಲ್ಬರ್ಗಾ ಮಹಾನಗರ ಪ್ರದೇಶಗಳಲ್ಲಿ ಒಟ್ಟು 585 ಹಾಗೂ ಬಳ್ಳಾರಿ ಮಹಾನಗರ ಪ್ರದೇಶಗಳಲ್ಲಿ ಒಟ್ಟು 509 ಫಲಾನುಭವಿಗಳು ಈ ಯೋಜನೆಯ ಸೌಲಭ್ಯವನ್ನು ಪಡೆದಿದ್ದಾರೆ.

ಮುಂದುವರೆದು, ಬೆಳಗಾಂ ವಿಭಾಗದ ಬೆಳಗಾಂ ಮಹಾನಗರ ಪ್ರದೇಶಗಳಲ್ಲಿ ಒಟ್ಟು 181 ಹಾಗೂ ಹುಬ್ಬಳ್ಳಿ–ಧಾರವಾಡ ಮಹಾನಗರ ಪ್ರದೇಶಗಳಲ್ಲಿ ಒಟ್ಟು 575 ಫಲಾನುಭವಿಗಳು ಸೌಲಭ್ಯ ಪಡೆದಿದ್ದಾರೆ.

ಬೆಂಗಳೂರು ಮತ್ತು ಮೈಸೂರು ವಿಭಾಗಗಳಿಗೆ ಈ ಯೋಜನೆಯನ್ನು ಸರ್ಕಾರಿ ಆದೇಶ ದಿನಾಂಕ : 21–06–2012 ರಂದು ವಿಸ್ತರಿಸಲಾಗಿದ್ದು, ಸದರಿ ವಿಭಾಗಗಳಲ್ಲಿ ಅದು ಅನುಷ್ಠಾನಗೊಳ್ಳಬೇಕಿದೆ.

ಇ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ವಾಜಪೇಯಿ ಆರೋಗ್ಯಶ್ರೀ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ದಿನಾಂಕ : 21–06–2012ರಲ್ಲಿ ಬೆಂಗಳೂರು ಮಹಾನಗರಪಾಲಿಕೆ ಸೇರಿದಂತೆ ಬೆಂಗಳೂರು ವಿಭಾಗಕ್ಕೆ ವಿಸ್ತರಿಸಿದ್ದು, ಇದು ಅನುಷ್ಠಾನಗೊಳ್ಳಬೇಕಿದೆ.

ಅನುಬಂಧ

ಗುಲ್ಬರ್ಗಾ ವಿಭಾಗ

ಕ್ರ.ಸಂ	ಜಿಲ್ಲೆಯ ಹೆಸರು	ಒಟ್ಟು ಫಲಾನುಭವಿಗಳು
1	ಬಳ್ಳಾರಿ	2781
2	ಬೀದರ್	1828
3	ಗುಲ್ಬರ್ಗಾ	2865
4	ಯಾದಗಿರಿ	1335
5	ಕೊಪ್ಪಳ	1818
6	ರಾಯಚೂರು	1949
	ಒಟ್ಟು	12576

ಬೆಳಗಾಂ ವಿಭಾಗ

ಕ್ರ.ಸಂ	ಜಿಲ್ಲೆಯ ಹೆಸರು	ಒಟ್ಟು ಫಲಾನುಭವಿಗಳು
1	ಬೆಳಗಾಂ.	2650
2	ಬಿಜಾಪುರ	1341
3	ಬಾಗಲಕೋಟೆ	1242
4	ಧಾರವಾಡ	1144
5	ಗದಗ	1038
6	ಹಾವೇರಿ	1316
7	ಉತ್ತರ ಕನ್ನಡ (ಕಾರವಾರ)	1187
	ಒಟ್ಟು	9918

ಬಾಣಾವರ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

295 (573) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಅರಸೀಕೆರೆ ತಾಲ್ಲೂಕು ಬಾಣಾವರ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಯೋಜನೆ ರೂಪಿಸಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು) ?

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು ಬಾಣಾವರ ಸರ್ಕಾರಿ ಆಸ್ಪತ್ರೆಯು ಪ್ರಸ್ತುತ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ.

ಅರಸೀಕೆರೆ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ : 2,57,840 ಆಗಿದೆ. ಮಾರ್ಗಸೂಚಿಗಳ ಪ್ರಕಾರ ಅರಸೀಕೆರೆ ತಾಲ್ಲೂಕಿನಲ್ಲಿ 2 ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿದ್ದು, 2 ಸಮುದಾಯ ಆರೋಗ್ಯ ಕೇಂದ್ರಗಳು ಅಂದರೆ (1) ಗಂಡಸಿ (2) ಜೆ.ಸಿ.ಪುರ ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ, ಒಂದು ತಾಲ್ಲೂಕು ಆಸ್ಪತ್ರೆಯು ಸಹ ಕಾರ್ಯನಿರ್ವಹಿಸುತ್ತಿದೆ. ಆದುದರಿಂದ, ಬಾಣಾವರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಲು ಅವಕಾಶವಿರುವುದಿಲ್ಲ.

ಮುಂದುವರೆದು, ರಾಜ್ಯದಲ್ಲಿ ಹೊಸ ಆಸ್ಪತ್ರೆಗಳ ಪ್ರಾರಂಭಿಸುವಿಕೆ ಮತ್ತು ಮೇಲ್ದರ್ಜೆಗೇರಿಸುವಿಕೆಗೆ ಬದಲಾಗಿ ಅಸ್ತಿತ್ವದಲ್ಲಿರುವ ಆಸ್ಪತ್ರೆಗಳಿಗೆ ಮೂಲ ಸೌಕರ್ಯಗಳಾದ ಕಟ್ಟಡ, ಉಪಕರಣಗಳು, ವೈದ್ಯರು ಮತ್ತು ಸಿಬ್ಬಂದಿ ಒದಗಿಸಿ ಅವುಗಳ ಬಲವರ್ಧನೆಗೆ ಹೆಚ್ಚು ಗಮನಹರಿಸಬೇಕಾಗಿದೆ. ಆದುದರಿಂದ, ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಯ ಮೇಲ್ದರ್ಜೆಗೇರಿಸುವಿಕೆಯನ್ನು ದಿನಾಂಕ : 11–01–2011 ರಿಂದ ಮೂರು ವರ್ಷಗಳ ಅವಧಿಗೆ ಒಂದು ನೀತಿ ನಿರ್ಣಯವಾಗಿ ಸರ್ಕಾರವು ತಡೆಹಿಡಿದಿದೆ.

ಸರ್ಕಾರಿ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆ ಭರ್ತಿ

276 (174) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ಈ ಕಾಲೇಜುಗಳಲ್ಲಿ ವಿವಿಧ ವಿಷಯಗಳ ಖಾಲಿ ಇರತಕ್ಕ ಉಪನ್ಯಾಸಕರ ಹುದ್ದೆಗಳೆಷ್ಟು ;

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):–

ಅ) ಒಟ್ಟು 360.

ಆ) ಒಟ್ಟು 847.

ಇ) ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬುವ ಬಗ್ಗೆ ಈಗಾಗಲೇ ಕ್ರಮ ಜರುಗಿಸಲಾಗುತ್ತಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು

265 (728) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) 2012–13ನೇ ಸಾಲಿನಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ ; ಹಾಗಿದ್ದಲ್ಲಿ, ವಿಜಾಪುರ ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು; (ಮಾಹಿತಿ ನೀಡುವುದು) .

ಅ) ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲು ಸರ್ಕಾರ ಉದ್ದೇಶಿಸಿದೆಯೇ ; ಹಾಗಿದ್ದಲ್ಲಿ ವಿಜಾಪುರ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು ; (ಮಾಹಿತಿ ನೀಡುವುದು)

ಇ) ವಿಜಾಪುರ ಜಿಲ್ಲೆಯಲ್ಲಿ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹುದ್ದೆಗಳು ಖಾಲಿ ಇರುತ್ತವೆ ; ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಮತ್ತು ಆ) ರಾಜ್ಯದಲ್ಲಿ ಹೊಸ ಆಸ್ಪತ್ರೆಗಳ ಪ್ರಾರಂಭಿಸುವಿಕೆ ಮತ್ತು ಮೇಲ್ದರ್ಜೆಗೇರಿಸುವಿಕೆಗೆ ಬದಲಾಗಿ ಅಸ್ತಿತ್ವದಲ್ಲಿರುವ ಆಸ್ಪತ್ರೆಗಳಿಗೆ ಮೂಲ ಸೌಕರ್ಯಗಳಾದ ಕಟ್ಟಡ, ಉಪಕರಣಗಳು, ವೈದ್ಯರು ಮತ್ತು ಸಿಬ್ಬಂದಿ ಒದಗಿಸಿ ಅವುಗಳ ಬಲವರ್ಧನೆಗೆ ಹೆಚ್ಚು ಗಮನಹರಿಸಬೇಕಾಗಿದೆ. ಆದುದರಿಂದ, ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಯ ಮೇಲ್ದರ್ಜೆಗೇರಿಸುವಿಕೆಯನ್ನು ದಿನಾಂಕ : 11–01–2011 ರಿಂದ ಮೂರು ವರ್ಷಗಳ ಅವಧಿಗೆ ಒಂದು ನೀತಿ ನಿರ್ಣಯವಾಗಿ ಸರ್ಕಾರವು ತಡೆಹಿಡಿದಿದೆ.

ಇ) ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಅಡವಿಸೋಮನಾಳ ಮತ್ತು ಸಿಂದಗಿ ತಾಲ್ಲೂಕಿನ ನಾಗಾವಿ ಬಿ.ಕೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಅಡವಿಸೋಮನಾಳ ಪ್ರಾಥಮಿಕ

ಆರೋಗ್ಯ ಕೇಂದ್ರದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಸರ್ಕಾರವು ದಿನಾಂಕ : 27–06–1012 ರಂದು ಜಿಲ್ಲಾಧಿಕಾರಿಗೆ ಅನುಮತಿ ನೀಡಿದೆ.

ಪ್ರಥಮ ದರ್ಜೆ ಕಾಲೇಜುಗಳ ಉಪನ್ಯಾಸಕರು ಮತ್ತು ಸಿಬ್ಬಂದಿಗಳ ನಿಯೋಜನೆ

201 (712) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಾಗಡಿ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರು ಮತ್ತು ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಾದರೆ, ಯಾವ್ಯಾವ ಕಾಲೇಜಿನಲ್ಲಿ ಯಾವ್ಯಾವ ಸಂಯೋಜನೆಗಳಿರುತ್ತವೆ ; ಎಷ್ಟು ಸಿಬ್ಬಂದಿಯ ಮಂಜೂರಾತಿಯಾಗಿರುತ್ತದೆ ; ಎಷ್ಟು ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ ;

ಇ) ಖಾಲಿ ಇರುವ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿಗಳು ಎಷ್ಟು ; (ಕಾಲೇಜುವಾರು ವಿವರ ನೀಡುವುದು)

ಈ) ಖಾಲಿ ಇರುವ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಯಾವ ಕಾಲಮಿತಿಯಲ್ಲಿ ನಿಯೋಜನೆ ಮಾಡಲಾಗುವುದು ?

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ)

ಕಾಲೇಜುಗಳು	ಕೋರ್ಸುಗಳು
1) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ	ಬಿ.ಎ.:– ಹೆಚ್.ಇ.ಪಿ; ಹೆಚ್ಇಎಸ್; ಹೆಚ್ಇಕೆ ಬಿ.ಎಸ್ಸಿ:–ಪಿ.ಎಂ.ಸಿ.ಎಸ್. ಬಿ.ಕಾಂ. ಬಿ.ಬಿ.ಎಂ.
2) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೂರು	ಬಿ.ಎ.:– ಹೆಚ್.ಇ.ಪಿ; ಹೆಚ್ಕೆಪಿ; ಹೆಚ್ಇಸಿಎಸ್; ಹೆಚ್ಇಇ; ಬಿ.ಕಾಂ. ಬಿ.ಬಿ.ಎಂ.
3) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಡದಿ	ಬಿ.ಎ.:– ಹೆಚ್ಇಪಿ; ಹೆಚ್ಇಕೆ; ಹೆಚ್ಇಎಸ್ ಬಿ.ಕಾಂ.

ಕಾಲೇಜು	ಮಂಜೂರಾದ ಬೋಧಕ ಹುದ್ದೆಗಳು	ಮಂಜೂರಾದ ಬೋಧಕೇತರ ಹುದ್ದೆಗಳು	ನಿಯೋಜನೆ ಗೊಳಿಸಿದ ಬೋಧಕ/ ಬೋಧಕೇತರ ವಿವರ
ಸಪ್ರದಕಾ, ಮಾಗಡಿ	14	12	ಬೋಧಕ-3 ಬೋಧಕೇತರ-0
ಸಪ್ರದಕಾ, ಕುದೂರು	09	11	ಬೋಧಕ-0 ಬೋಧಕೇತರ-0
ಸಪ್ರದಕಾ, ಬಿಡದಿ	09	10	ಬೋಧಕ-1 ಬೋಧಕೇತರ-0

ಇ)

ಕಾಲೇಜು	ಖಾಲಿ ಹುದ್ದೆಗಳು	
	ಬೋಧಕ	ಬೋಧಕೇತರ
ಸಪ್ರದಕಾ, ಮಾಗಡಿ	03	ಮ್ಯಾನೇಜರ್ 01 ಪರಿಚಾರಕರು 03
ಸಪ್ರದಕಾ, ಕುದೂರು	01	ದ್ವಿ.ದ.ಸ. 01 ಪರಿಚಾರಕರು 01
ಸಪ್ರದಕಾ, ಬಿಡದಿ	-	ಅಟೆಂಡರ್ 01 ಪರಿಚಾರಕರು 03

ಈ) ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಸಂಖ್ಯೆ : ಆಇ 01 ಬಿಇಎಂ 2012 ದಿನಾಂಕ : 14-06-2012 ಹಾಗೂ ಸಂಖ್ಯೆ:ಆಇ 01 ಬಿಇಎಂ 2008 ದಿನಾಂಕ : 21-10-2009ರ ಸುತ್ತೋಲೆಗಳಲ್ಲಿ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಹೊಸ ಬೋಧಕೇತರ ಹುದ್ದೆಗಳನ್ನು ಸೃಜಿಸುವ/ಭರ್ತಿ ಮಾಡುವುದನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿದೆ. ಮಿತವ್ಯಯ ಆದೇಶ ಹಿಂಪಡೆದ ನಂತರ ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುವುದು.

ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು

270 (547) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮಸ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ

ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ಕಾಮಗಾರಿಯನ್ನು ಯಾವಾಗ ಮಾಡಲಾಗುವುದು? (ಮಾಹಿತಿ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಮಾರ್ಗಸೂಚಿಗಳ ಪ್ರಕಾರ, 1,20,000 ಜನಸಂಖ್ಯೆ ಒಂದರಂತೆ ಸಮುದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಅವಕಾಶವಿದ್ದು, ಲಿಂಗಸುಗೂರು ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ 2,47,326 ಆಗಿದ್ದು, 2 ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿದೆ. ಆದರೆ, ಸದರಿ ತಾಲ್ಲೂಕಿನಲ್ಲಿ ಈಗಾಗಲೇ 3 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆದುದರಿಂದ ಮಸ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಅವಕಾಶ ಇರುವುದಿಲ್ಲ.

ಮುಂದುವರೆದು, ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ ದಿನಾಂಕ : 11–01–2011 ರಿಂದ ಮೂರು ವರ್ಷಗಳ ಅವಧಿಗೆ ಸರ್ಕಾರವು ತಡೆ ಹಿಡಿದಿದೆ.

ಉಪನ್ಯಾಸಕರ ಕೊರತೆ

232(883) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮದ್ದೂರು ಟೌನ್‌ನಲ್ಲಿರುವ ಮಹಿಳಾ ದರ್ಜೆ ಕಾಲೇಜಿನ ಉಪನ್ಯಾಸಕರನ್ನು ಬೇರೆ ಕಡೆ ನಿಯೋಜನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸದರಿ ಕಾಲೇಜಿನಲ್ಲೇ ಉಪನ್ಯಾಸಕರ ಕೊರತೆಯಿದ್ದರೂ ಸಹ ಬೇರೆಕಡೆ ನಿಯೋಜನೆ ಮಾಡಲು ಕಾರಣವೇನು ; ಈ ನಿಯೋಜನೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ವಿದ್ಯಾರ್ಥಿಗಳ ತೊಂದರೆಯನ್ನು ತಪ್ಪಿಸಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು (ಮಾಹಿತಿ ನೀಡುವುದು) ?

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ಶ್ರೀಮತಿ ಎಸ್.ಶಶಿಕಲಾ ಮತ್ತು ಶ್ರೀಮತಿ ಹೆಚ್.ಎಂ. ಪ್ರಭಾ, ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು ಹೆಚ್ಚುವರಿಯಾಗಿದ್ದು, ಅವರುಗಳನ್ನು ಕಾರ್ಯಭಾರವಿರುವ ಇತರೆ ಕಾಲೇಜುಗಳಿಗೆ ನಿಯೋಜನೆ ಮಾಡಲಾಗಿದೆ. ಶ್ರೀ ಎಸ್.ಬಿ. ಪ್ರಸಾದ್, ಅರ್ಥಶಾಸ್ತ್ರ ಉಪನ್ಯಾಸಕರು ಹಾಗೂ ಶ್ರೀ ಹೆಚ್.ಆರ್. ಶೇಖರ್, ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಇವರುಗಳನ್ನು ದೂರಿನ ಮೇಲೆ ಬೇರೆ ಕಾಲೇಜುಗಳಿಗೆ ನಿಯೋಜನೆ ಮಾಡಲಾಗಿದೆ. ಸದರಿ ನಿಯೋಜನೆಯಿಂದ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ.

ಇ) ವಿದ್ಯಾರ್ಥಿಗಳಿಗೆ ಆಗುವ ತೊಂದರೆಯನ್ನು ತಪ್ಪಿಸಲು ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರುಗಳನ್ನು ನೇಮಿಸಿಕೊಳ್ಳಲಾಗುವುದು.

ಜಮಖಂಡಿ ಆಸ್ಪತ್ರೆಗೆ ವೈದ್ಯರುಗಳ ನೇಮಕ

238 (178) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಜಮಖಂಡಿ ನಗರದಲ್ಲಿರುವ 100 ಹಾಸಿಗೆಯುಳ್ಳ ಸರ್ಕಾರಿ ಆಸ್ಪತ್ರೆಯಲ್ಲಿರುವ ವೈದ್ಯರ ಹುದ್ದೆಗಳೆಷ್ಟು ;

ಆ) ಖಾಲಿ ಇರುವ ಹುದ್ದೆಗಳೆಷ್ಟು ;

ಇ) ಮುಖ್ಯ ವೈದ್ಯಾಧಿಕಾರಿಗಳ ಹುದ್ದೆ ಎಷ್ಟು ವರ್ಷದಿಂದ ತೆರವಿದೆ ;

ಈ) ಈ ಕೊರತೆಗಳನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳಾವುವು?

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಮತ್ತು ಆ) ಜಮಖಂಡಿ ತಾಲ್ಲೂಕು ಆಸ್ಪತ್ರೆಯಲ್ಲಿ 8 ತಜ್ಞವೈದ್ಯರು, 1 ಮುಖ್ಯ ವೈದ್ಯಾಧಿಕಾರಿ, 1 ಹಿರಿಯ ವೈದ್ಯಾಧಿಕಾರಿ ಹಾಗೂ 1 ದಂತ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿವೆ. ಆ ಪೈಕಿ 5 ಹುದ್ದೆಗಳು ಭರ್ತಿಯಾಗಿದ್ದು, 6 ಹುದ್ದೆಗಳು ಖಾಲಿ ಇವೆ.

ಇ) ಒಂದು ಮುಖ್ಯ ವೈದ್ಯಾಧಿಕಾರಿ ಹುದ್ದೆಯು 2007 ರಿಂದ ಖಾಲಿ ಇರುತ್ತದೆ.

ಈ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು :

1. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ.)ದ ಅಡಿಯಲ್ಲಿ ಸ್ತ್ರೀರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ರೂ. 70,000 ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ರೂ. 50,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.

2. ಕೆ.ಹೆಚ್.ಎಸ್.ಡಿ.ಆರ್.ಪಿ. ಯೋಜನೆಯಡಿಯಲ್ಲಿ ಇತರೆ ತಜ್ಞತೆಗಳಿಗೆ (ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತುಪಡಿಸಿ) ಸಂಬಂಧಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕ್ರಮವಾಗಿ ಮಾಸಿಕ ರೂ. 65,000 ಹಾಗೂ ರೂ. 50,000 ದಂತೆ ಗೌರವಧನ ನೀಡಲಾಗುತ್ತಿದೆ. ಮುಂದುವರೆದು, ರೀಟೈನರ್‌ಷಿಪ್ ಆಧಾರದಲ್ಲಿ ನೇಮಕ ಮಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ಗೌರವಧನವನ್ನು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ರೂ. 5000 ದಿಂದ ರೂ. 10,000 ಕ್ಕೆ ಹೆಚ್ಚಿಸಿ ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ರೂ. 8,000 ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಸದರಿ ತಜ್ಞರು ಹೊರ ರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ. 1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

3. ಮೇಲೆ ತಿಳಿಸಿದಂತೆ ಎನ್.ಆರ್.ಹೆಚ್. ಎಂ./ಕೆ.ಹೆಚ್.ಎಸ್.ಡಿ.ಆರ್.ಪಿ. ಅಡಿಯಲ್ಲಿ ಅವಕಾಶಗಳನ್ನು ಕಲ್ಪಿಸಿದ್ದಾಗ್ಯೂ, ಎನ್.ಆರ್.ಹೆಚ್.ಎಂ. ಅಡಿಯಲ್ಲಿ ಕೇವಲ 125 ಹಾಗು

ಕೆ.ಹೆಚ್.ಎಸ್.ಡಿ.ಆರ್.ಪಿ. ಅಡಿಯಲ್ಲಿ ಕೇವಲ 49 ವಿವಿಧ ತಜ್ಞತೆ ಹೊಂದಿರುವ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಒಟ್ಟಾರೆ, ಸರ್ಕಾರಿ ಆಸ್ಪತ್ರೆ/ಕೇಂದ್ರಗಳಲ್ಲಿ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸಲು ಮುಂದೆ ಬರುತ್ತಿರುವವರ ಸಂಖ್ಯೆ ಉತ್ತೇಜನಕಾರಿಯಾಗಿಲ್ಲ.

4. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.

5. ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 600 ತಜ್ಞ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಇತ್ತೀಚೆಗೆ ಕ್ರಮ ಕೈಗೊಳ್ಳಲಾಗಿ ಒಟ್ಟು 252 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಯ್ಕೆಯಾದ ಎಲ್ಲಾ 252 ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ, ಕೇವಲ 137 ಅಭ್ಯರ್ಥಿಗಳು ಸ್ಥಳ ಆಯ್ಕೆ ಮಾಡಿಕೊಂಡರು. ಆ ಪೈಕಿ ಕೇವಲ 75 ಅಭ್ಯರ್ಥಿಗಳು ಮಾತ್ರ ಕಾರ್ಯವರದಿ ಮಾಡಿಕೊಂಡಿದ್ದಾರೆ.

6. ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಒಟ್ಟು 2586 ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 2390 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. (ಇತ್ತೀಚೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯರು ಸೇರಿದಂತೆ) ಹಾಗು 196 ಹುದ್ದೆಗಳು ಖಾಲಿಯಿವೆ. ದಿನಾಂಕ : 27-06-2012 ರಂದು ಒಟ್ಟು 155 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಜಿಲ್ಲಾಧಿಕಾರಿಗಳಿಗೆ ಸರ್ಕಾರವು ಅನುಮತಿ ನೀಡಿದೆ.

ಮಂಡ್ಯ ನಗರದ ಪೊಲೀಸ್ ಕಾಲೋನಿಯಲ್ಲಿರುವ ಪದವಿ ಪೂರ್ವ ಕಾಲೇಜು

303 (372) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮಂಡ್ಯ ನಗರದ ಪೊಲೀಸ್ ಕಾಲೋನಿಯಲ್ಲಿರುವ ಪದವಿ ಪೂರ್ವ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದೇ ಪ್ರೌಢ ಶಾಲಾ ಕಟ್ಟಡದಲ್ಲಿ ತರಗತಿಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ಪದವಿ ಪೂರ್ವ ಕಾಲೇಜಿಗೆ ಪ್ರಯೋಗ ಶಾಲೆ ಮತ್ತು ಪೀಠೋಪಕರಣಗಳ ಕೊರತೆಯಿದ್ದು, ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಪದವಿ ಪೂರ್ವ ಕಾಲೇಜಿಗೆ ಸ್ವಂತ ಕಟ್ಟಡ, ಪ್ರಯೋಗ ಶಾಲೆ, ಅಗತ್ಯವಿರುವ ಪೀಠೋಪಕರಣಗಳ ಪೂರೈಕೆ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಈ) ಯಾವಾಗ ಈ ಸೌಲಭ್ಯಗಳನ್ನು ಕಲ್ಪಿಸಲಾಗುವುದು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ಬಂದಿದೆ.

ಇ) ಸದರಿ ಕಾಲೇಜು ಸಂಯುಕ್ತ ಪದವಿ ಪೂರ್ವ ಕಾಲೇಜಾಗಿರುವುದರಿಂದ ಪ್ರೌಢಶಾಲಾ ಕಟ್ಟಡದಲ್ಲಿ ಪ್ರೌಢಶಾಲೆ ಹಾಗೂ ಕಾಲೇಜು ವಿಭಾಗದ ತರಗತಿಗಳನ್ನು ಪಾಳಿ ಪದ್ಧತಿಯಲ್ಲಿ ನಡೆಸಲಾಗುತ್ತಿದೆ.

ಸದರಿ ಕಾಲೇಜಿಗೆ ವಿಜ್ಞಾನ ಸಂಯೋಜನೆಯನ್ನು 2008–09 ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ವಿದ್ಯಾರ್ಥಿಗಳ ದಾಖಲಾತಿ ವಿವರ ಈ ಕೆಳಗಿನಂತಿದೆ.

ತರಗತಿ	2009–10	2010–11	2011–12	2012–13
ಪ್ರಥಮ ಪಿಯುಸಿ	20	31	24	25
ದ್ವಿತೀಯ ಪಿಯುಸಿ	13	09	25	24
ಒಟ್ಟು	**33**	**40**	**49**	**49**

ಹಿಂದಿನ ವರ್ಷಗಳಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಪ್ರೌಢಶಾಲಾ ಕಟ್ಟಡದ ಕೊಠಡಿಯಲ್ಲಿ ಪ್ರಯೋಗಶಾಲೆಯನ್ನು ಸಜ್ಜುಗೊಳಿಸಲಾಗಿತ್ತು. ಅದೇರೀತಿ ಈ ವರ್ಷವೂ ಸಹ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಪ್ರೌಢಶಾಲಾ ಕಟ್ಟಡದ 02 ಕೊಠಡಿಗಳಲ್ಲಿ ಪ್ರಯೋಗಶಾಲೆಯನ್ನು ಸಜ್ಜುಗೊಳಿಸಲಾಗಿದೆ ಮತ್ತು ಪ್ರಯೋಗಶಾಲಾ ಉಪಕರಣಗಳನ್ನು ಖರೀದಿಸುವ ಉದ್ದೇಶಕ್ಕೆ ಕಳೆದ 02 ವರ್ಷಗಳಲ್ಲಿ ರೂ. 1,80,000–00 ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಸದರಿ ಕಾಲೇಜಿಗೆ ಸ್ವಂತ ಕಟ್ಟಡ, ಪ್ರಯೋಗಾಲಯ ಕೊಠಡಿ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತು ಅನುದಾನ ಲಭ್ಯತೆ ಆಧಾರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಈ) ಸದರಿ ಉದ್ದೇಶಕ್ಕೆ ಅನುದಾನದ ಲಭ್ಯತೆಯ ಆಧಾರದ ಮೇಲೆ ಮೇಲ್ಕಂಡ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ

200 (559) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಾದರೆ, ಯಾವ್ಯಾವ ಶಾಲೆಗಳಲ್ಲಿ ಎಷ್ಟೆಷ್ಟು ಶಿಕ್ಷಕರ ಕೊರತೆ ಇರುತ್ತದೆ; (ವಿವರ ನೀಡುವುದು)

ಇ) ಯಾವ ಕಾಲಮಿತಿಯಲ್ಲಿ ಕೊರತೆ ಇರುವ ಶಿಕ್ಷಕರನ್ನು ನೇಮಕ ಮಾಡಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಹೌದು.

ಆ)

ಕ್ರ ಸಂ	ಹುದ್ದೆ ಖಾಲಿ ಇರುವ ಶಾಲೆಯ ಹೆಸರು	ವಿಷಯ
1	ಸಪ್ರೌಶಾ ಅರಸನಕುಂಟೆ	ಮುಖ್ಯ ಶಿಕ್ಷಕರು–1 ಚಿತ್ರಕಲೆ–1 ಕಲಾ–1
2	ಸಪ್ರೌಶಾ ಸಂಕೀಘಟ್ಟ	ಪಿ.ಸಿ.ಎಂ–1 ಹೊಲಿಗೆ–1
3	ಸಪ್ರೌಶಾ ಮಣ್ಣಿಗನಹಳ್ಳಿ	ಹೊಲಿಗೆ–1
4	ಸಪ್ರೌಶಾ ಗಂಗೋನಹಳ್ಳಿ	ಮುಖ್ಯ ಶಿಕ್ಷಕರು–1 ಹಿಂದಿ–1 ಸಂಗೀತ–1
5	ಸಪ್ರೌಶಾ ಮಾದಿಗೊಂಡನಹಳ್ಳಿ	ಮುಖ್ಯ ಶಿಕ್ಷಕರು–1
6	ಸಪ್ರೌಶಾ ಸುಗ್ಗನಹಳ್ಳಿ	ಚಿತ್ರಕಲೆ–1
7	ಸಪ್ರೌಶಾ ಶ್ರೀಪತಿಹಳ್ಳಿ	ಸಿ.ಬಿ.ಜೆಡ್–1 ಹೊಲಿಗೆ–1
8	ಸಪ್ರೌಶಾ ಕಾಗಿಮಡು	ದೈಶಿಶಿ–1, ಚಿತ್ರಕಲೆ–1
9	ಸಪ್ರೌಶಾ ದಳಗವಾಡಿ	ವೃತ್ತಿ ಶಿಕ್ಷಣ ಶಿಕ್ಷಕರು–1
10	ಸಪ್ರೌಶಾ ಮಾದಬಾಳ್	ಮುಖ್ಯ ಶಿಕ್ಷಕರು–1 ದೈಶಿಶ–1
11	ಸಪಪೂಕಾ ಮಾಗಡಿ ಟೌನ್	ಮುಖ್ಯ ಶಿಕ್ಷಕರು–1 ಪಿ.ಸಿ.ಎಂ–2
12	ಸಪ್ರೌಶಾ ಕಲ್ಯಾಗೇಟ್ (ಬಾಲಕಿ)	ಪಿ.ಸಿ.ಎಂ–1 ಸಂಗೀತ–1 ದೈಶಿಶ–1
13	ಸಪ್ರೌಶಾ ಮಂಚನಬೆಲೆ	ಚಿತ್ರಕಲೆ–1
14	ಸಪಪೂಕಾ ಕುದೂರು	ದೈಶಿಶ–1
15	ಸಪಪೂಕಾ ತಿಪ್ಪಸಂದ್ರ	ಸಿ.ಬಿ.ಜೆಡ್–1
16	ಸಪ್ರೌಶಾ ಶ್ರೀಗಿರಿಪುರ	ಚಿತ್ರಕಲೆ–1
17	ಸಪ್ರೌಶಾ ಲಕ್ಕೇನಹಳ್ಳಿ	ಪಿ.ಸಿ.ಎಂ–1 ತೋಟಗಾರಿಕೆ–1
18	ಸಪ್ರೌಶಾ ಉರ್ದು ಮಾಗಡಿ	ತೋಟಗಾರಿಕೆ–1

ಇ) ಪ್ರಸ್ತುತ ಪ್ರೌಢ ಶಾಲಾ ಸಹ ಶಿಕ್ಷಕರ ನೇಮಕಾತಿ ಸಂಬಂಧ (ವೃತ್ತಿ ಶಿಕ್ಷಕರನ್ನು ಬಿಟ್ಟು) ಅಧಿಸೂಚನೆ ಹೊರಡಿಸಿದ್ದು ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಉದ್ಯೋಗಿನಿ, ಆಸರೆ, ಆಧಾರ್ ಯೋಜನೆಗಳ ಗುರಿ

243 (365) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) :– ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಪಶುವೈದ್ಯಕೀಯ ಪರಿಷತ್‌ನಿಂದ ಇದುವರೆಗೂ ಐ.ವಿ.ಸಿ. ಅಧಿನಿಯಮದಡಿ ಮಾನ್ಯತೆ ಪಡೆದ ಪದವೀಧರರ ನೋಂದಣಿ ಬಗ್ಗೆ ವಿವರ ನೀಡುವುದು ;

ಆ) ಕೆ.ವಿ.ಸಿ. ನಿಯಮದಂತೆ ಪಶುವೈದ್ಯಕೀಯ ಪರಿಷತ್‌ನಲ್ಲಿ ಸೃಷ್ಟಿಯಾಗಿರುವ ಹುದ್ದೆಗಳೆಷ್ಟು ; ಇವುಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ ಯಾವುದು ; (ಭರ್ತಿ ಮತ್ತು ಖಾಲಿ ಹುದ್ದೆಗಳ ವಿವರ ನೀಡುವುದು) ;

ಇ) ಪರಿಷತ್‌ನ ರಿಜಿಸ್ಟ್ರಾರ್ ಹುದ್ದೆಗೆ ಇರುವ ವಿದ್ಯಾರ್ಹತೆ ಏನು ; ನಿಯಮದ ವಿರುದ್ಧವಾಗಿ ರಿಜಿಸ್ಟ್ರಾರ್ ಹುದ್ದೆಗೆ ಮಾಡಿದ ನೇಮಕವನ್ನು ರದ್ದುಪಡಿಸಲಾಗುವುದೇ; (ವಿವರ ನೀಡುವುದು) ;

ಈ) ಎಂ.ಎಸ್.ವಿ.ಇ. ರೆಗ್ಯೂಲೇಷನ್ 2008ರಂತೆ ರಾಜ್ಯದಲ್ಲಿರುವ ಯಾವ ಯಾವ ಕಾಲೇಜುಗಳು ಮಾನ್ಯತೆಯನ್ನು ಪಡೆದಿವೆ ; (ಗೆಜೆಟ್ ಪ್ರತಿಯನ್ನು ಒದಗಿಸುವುದು) ;

ಉ) ಎಂ.ಎಸ್.ವಿ.ಇ. ರೆಗ್ಯೂಲೇಷನ್ 2008 ರಂತೆ ವಿಶ್ವವಿದ್ಯಾಲಯದಲ್ಲಿ ಇರಬೇಕಾದ ಮತ್ತು ಪ್ರಸ್ತುತ ಇರುವ ಸಿಬ್ಬಂದಿಗಳ/ಕಟ್ಟಡದ ವಿಸ್ತೀರ್ಣ (ನಕ್ಷೆ)/ಉಪಕರಣಗಳ ವಿವರ ನೀಡುವುದು ;

ಊ) ಐ.ವಿ.ಸಿ.ಯ ಮಾನ್ಯತೆ ಇಲ್ಲದ ಕಾಲೇಜಿಗೆ ವಿದ್ಯಾರ್ಥಿಗಳನ್ನು ದಾಖಲಿಸಿ ಅವರುಗಳ ಸಾವಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು;

ಋ) ಕಾಲೇಜುಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯಗಳನ್ನು ಮಾಲಿನ್ಯ ನಿಯಂತ್ರಣ ಕಾಯ್ದೆಯಂತೆ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು):-

ಅ) ಐ.ವಿ.ಸಿ. ನಿಯಮದಡಿ ಒಟ್ಟು 4634 ಪಶುವೈದ್ಯರು ಕರ್ನಾಟಕ ಪಶುವೈದ್ಯಕೀಯ ಪರಿಷತ್‌ನಲ್ಲಿ ನೋಂದಣಿ ಮಾಡಿಸಿರುತ್ತಾರೆ.

ಆ) ಕೆ.ವಿ.ಸಿ. ನಿಯಮದಂತೆ ಒಟ್ಟು 12 ಪಶುವೈದ್ಯಕೀಯ ಪರಿಷತ್‌ನಲ್ಲಿ ಸೃಷ್ಟಿಯಾಗಿರುವ/ಭರ್ತಿಯಾಗಿರುವ ಹುದ್ದೆಗಳ ವಿವರ.

ಹುದ್ದೆಗಳು	ಭರ್ತಿ	ಖಾಲಿ	ವಿವರ
ನಿಬಂಧಕರು [ಅಪರ ನಿರ್ದೇಶಕರು]	1	–	ಸರ್ಕಾರದಿಂದ ನಿಯೋಜಿತ.
ಉಪ ನಿಬಂಧಕರು [ಜಂಟಿ ನಿರ್ದೇಶಕರು]	1	–	ಸರ್ಕಾರದಿಂದ ನಿಯೋಜಿತ.
ತಾಂತ್ರಿಕ ಸಿಬ್ಬಂದಿ [ಪಶು ವೈದ್ಯರು]	–	1	ಕಾರ್ಯಒತ್ತಡದ ಪ್ರಮಾಣ ಕಡಿಮೆ ಇರುವುದರಿಂದ ಸದ್ಯಕ್ಕೆ ಅವಶ್ಯಕತೆ ಇರುವುದಿಲ್ಲ.
ಕಛೇರಿ ಮ್ಯಾನೇಜರ್	–	1	ಕಛೇರಿ ಸಿಬ್ಬಂದಿ ಹಾಗೂ ವಾಹನ ಚಾಲಕರ ಖಾಲಿ ಇದ್ದ ಹುದ್ದೆಗಳನ್ನು ಕಛೇರಿ ಕೆಲಸದ ಒತ್ತಡಕ್ಕೆ ಅನುಗುಣವಾಗಿ ಹೊರಗುತ್ತಿಗೆ ಆಧಾರದ ಮೇಲೆ ಒಟ್ಟು 5 ಜನರು ಕಾರ್ಯನಿರ್ವಹಿಸುತ್ತಿದ್ದಾರೆ. [ಅಕೌಂಟೆಂಟ್, ಸಹಾಯಕರು. ಕಂಪ್ಯೂಟರ್ ಆಪರೇಟರ್ ಹಾಗೂ ವಾಹನ ಚಾಲಕರು]
ಸಹಾಯಕ ಮ್ಯಾನೇಜರ್	–	2	
ಶೀಘ್ರಲಿಪಿಗಾರರು ಹಾಗೂ ಟೈಪಿಸ್ಟ್	–	1	
ಕಂಪ್ಯೂಟರ್ ಆಪರೇಟರ್	–	1	
ವಾಹನ ಚಾಲಕರು	–	2	
ಗ್ರೂಪ್-ಡಿ	–	2	

ಇ) ರಿಜಿಸ್ಟ್ರಾರ್ (ನಿಬಂಧಕರು) ಹುದ್ದೆಗೆ, ಕಾಯ್ದೆ-1998ರ ನಿಯಮ 27ರ ಅಡಿಯಲ್ಲಿ 3 ಷರತ್ತು ಹಾಗೂ ಕನಿಷ್ಠ ವಿದ್ಯಾರ್ಹತೆ ನಿಗದಿಪಡಿಸಲಾಗಿದೆ. ಷರತ್ತುಗಳು ಯಾವುದೆಂದರೆ: (1) ಬಿ.ವಿ.ಎಸ್ಸಿ.ಎ.ಹೆಚ್. ಪದವೀಧರರಾಗಿರಬೇಕು. (2) ಅಪರ ನಿರ್ದೇಶಕರ ಹುದ್ದೆ

ಹೊಂದಿರಬೇಕು. (3) ಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನಲ್ಲಿ ನೋಂದಣಿಯಾಗಿರಬೇಕು. (4) ಕನಿಷ್ಠ 20 ವರ್ಷಗಳ ಸೇವೆ ಸಲ್ಲಿಸಿರಬೇಕು ಹಾಗೂ ಎಂ.ವಿ.ಎಸ್ಸಿ ಪದವೀಧರರಾಗಿರಬೇಕು. ಅದರಂತೆ ಸರ್ಕಾರವು ಪಶುಪಾಲನಾ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಪರ ನಿರ್ದೇಶಕರನ್ನು ನಿಬಂಧಕರನ್ನಾಗಿ ನಿಯೋಜಿಸಲಾಗಿದೆ. ಸದರಿ ಅಧಿಕಾರಿಯು ಎಂ.ವಿ.ಎಸ್ಸಿ. ಪದವಿ ಹೊಂದಿರುವುದಿಲ್ಲ. ಇನ್ನು ಮುಂದೆ ನಿಬಂಧಕರ ಹುದ್ದೆಗೆ ನಿಯೋಜಿಸುವಾಗ ಎಂ.ವಿ.ಎಸ್ಸಿ ಪದವೀದರರನ್ನೇ ಪರಿಗಣಿಸಲಾಗುವುದು.

ಈ) ಎಂ.ಎಸ್.ವಿ.ಇ. ರೆಗ್ಯುಲೇಷನ್-2008ರಂತೆ ಕರ್ನಾಟಕ ಪಶುವೈದ್ಯಕಿಯ, ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯ, ಬೀದರ್‌ನ ಬೆಂಗಳೂರು ಹಾಗೂ ಬೀದರ್ ಪಶುವೈದ್ಯ ಕಾಲೇಜುಗಳು ಮಾನ್ಯತೆ ಪಡೆದಿದೆ. ಹಾಸನ ಹಾಗೂ ಶಿವಮೊಗ್ಗ ಪಶುವೈದ್ಯ ಕಾಲೇಜುಗಳ ಮಾನ್ಯತೆಗಾಗಿ ಕ್ರಮ ವಹಿಸಲಾಗಿದೆ.

ಉ)

ವಿವರ	ಎಂ. ಎಸ್. ವಿ. ಇ. ರೆಗ್ಯೂಲೇಷನ್ 2008ರಂತೆ ಇರಬೇಕಾದ ವಿವರ	ಎಂ. ಎಸ್. ವಿ. ಇ. ರೆಗ್ಯೂಲೇಷನ್ 2008ರಂತೆ ಪ್ರಸ್ತುತ ಪಶುವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಇರುವ ವಿವರ			
		ಬೆಂಗಳೂರು	ಬೀದರ	ಶಿವಮೊಗ್ಗ	ಹಾಸನ
ಶಿಕ್ಷಕರ ಸಂಖ್ಯೆ	91	87	88	59	56
ಜಮೀನು ವಿಸ್ತೀರ್ಣ	125 ಎಕರೆ	124 ಎಕರೆ	157 ಎಕರೆ	158 ಎಕರೆ	76 ಎಕರೆ
ಕಟ್ಟಡ ವಿಸ್ತೀರ್ಣ	37,175 ಚ.ಮೀ	12,872.30 ಚ.ಮೀ	23,483 ಚ.ಮೀ.	18,171 ಚ.ಮೀ.	34,841.07 ಚ.ಮೀ.
ಉಪಕರಣಗಳು	ಎಲ್ಲಾ ಮಹಾವಿದ್ಯಾಲಯಗಳು ನಿಯಮಾವಳಿಗಳಂತೆ ವಿವಿಧ ಉಪಕರಣಗಳನ್ನು ಹೊಂದಿರುತ್ತವೆ.				

ಊ) ಶಿವಮೊಗ್ಗ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸಂಭವಿಸಿದ ವಿದ್ಯಾರ್ಥಿಯ ಸಾವಿನ ಬಗ್ಗೆ ಡೀನ್ (ಪವೈ). ಶಿವಮೊಗ್ಗ ರವರಿಂದ ವಿವರವಾದ ಮಾಹಿತಿಯನ್ನು ಪಡೆಯಲಾಗಿದ್ದು ಈ ನಿಟ್ಟಿನಲ್ಲಿ ಸತ್ಯ ಶೋಧನಾ ಸಮಿತಿಯೊಂದನ್ನು

ರಚಿಸಲಾಗಿದೆ (ಆದೇಶ ಸಂ : ಕುಸ : ಸಶೋಸ : ಪವೈಮಶಿ : 12-13 : ದಿ : 18-07-2012) ಸಮಿತಿಯು ತನ್ನ ವರದಿಯನ್ನು ಶೀಘ್ರವಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ಋ) ಕಾಲೇಜುಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ನಿಗದಿ ಪಡಿಸಿದ ನಿಯಮಗಳ ಅನ್ವಯ ಬೆಂಗಳೂರು ಮತ್ತು ಬೀದರ್ ಪಶುವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ತಕ್ಷಣ ವಿಲೇವಾರಿ ಮಾಡಲಾಗುತ್ತಿದೆ. ಶಿವಮೊಗ್ಗ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಆವರಣದಲ್ಲಿ ಆಳವಾದ ಗುಂಡಿಗಳನ್ನು ತೋಡುವ ಮೂಲಕ ಪರಿಸರ ಮಾಲಿನ್ಯ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಹಾಸನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಚಿಕಿತ್ಸಾ ಸಂಕೀರ್ಣ ಸದ್ಯದಲ್ಲಿ ನಿರ್ಮಾಣ ಹಂತದಲ್ಲಿದ್ದು ಕಾರ್ಯರಂಭ ಮಾಡಿಲ್ಲ. ಆದುದರಿಂದ ಬಯೋಮೆಡಿಕಲ್ ತ್ಯಾಜ್ಯಗಳ ಉತ್ಪಾದನೆ ಇರುವುದಿಲ್ಲ. ಇನ್ನು ಉಳಿದಿರುವ ತ್ಯಾಜ್ಯಗಳನ್ನು ಇನ್ಸ್‌ನರೇಟರ್ ಮೂಲಕ ವಿಲೇವಾರಿ ಮಾಡಲಾಗುತ್ತಿದೆ.

The First Schedule

Recognised Veterinary Qualifications granted by Universities or Veterinary Institutions in India.

Sl. No.	University or Veterinary Institutions	Degree
1	Agra University	B.V.Sc. & A.H.
2	Andhra Pradesh Agricultural University	B.V.Sc., B.V.Sc. & A.H.
3	Assam Agricultural University	B.V.Sc. & A.H.
4	Bidhan Chandra Krishi Vishwa Vidyalaya	B.V.Sc. & A.H.
5	University of Bihar	B.V.Sc. & A.H.
6	University of Bombay	B.Sc.(Vet.), B.V.Sc. & A.H., [illegible]
7	University of Calcutta	B.V.Sc., B.V.Sc. & A.H.
8	University of Calicut	B.V.Sc.
9	Chandra Shekhar Azad University of Agriculture & Technology	B.V.Sc. & A.H.
10	Gauhati University	B.V.Sc. & A.H.
11	Govind Ballabh Pant University of Agriculture & Technology	B.V.Sc. & A.H.
12	Gujarat Agricultural University	B.V.Sc. & A.H.
13	Haryana Agricultural University	B.V.Sc. & A.H., B.V.A.Sc.
14	University of Jabalpur	B.V.Sc., B.V.Sc. & A.H.
15	Jawaharlal Nehru Krishi Vishwa Vidyalaya	B.V.Sc. & A.H.
16	Kerala Agricultural University	B.V.Sc. & A.H., B.V.Sc.
17	University of Kerala	B.V.Sc.
18	Konkan Krishi Vidyapeeth	B.V.Sc. & A.H.
19	University of Madras	B.V.Sc
20	Magadh University	B.V.Sc. & A.H.
21	Maharashtra Agricultural University	B.V.Sc. & A.H.
22	Mahatma Phule Krishi Vidyapeeth	B.V.Sc., B.V.Sc. & A.H.
23	Marathwada Krishi Vidyapeeth	B.V.Sc. & A.H.
24	University of Mysore	B.V.Sc
25	Nagpur University	B.V.Sc., B.V.Sc. & A.H., B.Sc. (Vety.)
26	Orissa University of Agriculture & Technology	B.V.Sc. & A.H.
27	Osmania University	B.V.Sc., B.V.Sc. & A.H.
28	Punjab University, Lahore [illegible]	B.V.Sc.
29	East Punjab University, Solan (19[illegible])	B.V.Sc.
30	Punjab University, Chandigarh (1954-62)	B.V.Sc., B.V.Sc. & A.H.
31	Punjab Agricultural University	B.V.Sc. & A.H.
32	Punjabrao Krishi Vidyapeeth	B.V.Sc. & A.H.
33	Rajasthan Agricultural University	B.V.Sc. & A.H.
34	University of Rajasthan	B.V.Sc. & A.H.
35	Rajendra Agricultural University	B.V.Sc. & A.H.
36	Ranchi University	B.V.Sc. & A.H.
37	Sardar Patel University	B.V.Sc. & A.H.
38	University of Saugar	B.V.Sc.
39	Sri Venkateswara University	B.V.Sc.
40	Tamilnadu Veterinary & Animal Sciences University	B.V.Sc.
[illegible]	[illegible] Agricultural University	B.V.Sc.
41	University of Udaipur	B.V.Sc. & A.H.
42	University of Agricultural Sciences, Hebbal	B.V.Sc.
43	Uttar Pradesh Agricultural University, Pantnagar	B.V.Sc. & A.H.
44	Utkal University	B.V.Sc. & A.H.
45	Vikram University	B.V.Sc. & A.H.
46	Mohan Lal Sukhadia University	B.V.Sc. & A.H.
47	Sher-E-Kashmir University of Agricultural Science and Technology, Srinagar, Jammu & Kashmir	B.V.Sc. & A.H.
48	Himachal Pradesh Krishi Vishwavidyalaya, College of Veterinary & Animal Sciences, Palampur (HP)	B.V.Sc. & A.H.
49	Birsa Agricultural University, Kanke, Ranchi (Bihar)	B.V.Sc. & A.H.
50	Chaudhary Charan Singh Haryana Agricultural University, Hisar, (Haryana)	B.V.Sc. & A.H.
51	West Bengal University of Animal & Fishery Sciences, Calcutta	B.V.Sc. & A.H.
52	Indira Gandhi Krishi Vishwavidyalaya Raipur	B.V.Sc. & A.H.
53	University of Agricultural Sciences, Dharwad	B.V.Sc

[illegible]	Patna University, Patna	B.V.Sc. & A.H.
55	Dr. Panjabrao Deshmukh Krishi Vidyapeeth, Akola	B.V.Sc. & A.H.
56	Acharya N. G. Ranga Agricultural University, Hyderabad	B.V.Sc. & A.H.
57	Marathawada Agricultural University, Parbhani	B.V.Sc. & A.H.
58	Pondicherry university, Pondicherry	B.V.Sc. & A.H.
59	University of Agricultural Sciences, Dharwad	B.V.Sc. & A.H.
60	University of Agricultural Sciences, Bangalore	B.V.Sc. & A.H.
61	Chaudhary Sarwan Kumar [illegible] College of Veterinary Science, Palampur, H.P.	[illegible]
62	Sher-e-Kahsmir university of Agricultural Sciences & Technology, Jammu	B.V.Sc. & A.H.
63	Sher-e-Kahsmir university of Agricultural Sciences & Technology of Kashmir, Srinagar	B.V.Sc. & A.H.
64	Maharashtra Animal and Fishery Sciences University, Nagpur	B.V.Sc. & A.H.
65	Dr. Balasahab Sawant, Konkan Krishi Vidyapeeth, Dapoli	B.V.Sc. & A.H.
66	Central Agricultural University, Manipur	B.V.Sc. & A.H.
67	Narendra Deva University of Agriculture and Technology, Faizabad	B.V.Sc. & A.H.
68	Karnataka Veterinary, Animal and Fisheries Sciences University, Bidar	B.V.Sc. & A.H.
69	Anand Agricultural University, Anand	B.V.Sc. & A.H.
70	Sardar Krushinagar Dantiwada Agricultural University, Sardarkrushinagar	B.V.Sc & A.H.
71	Uttar Pradesh Pandit Deen Dayal Upadhyay Pashu Chikitsa Vigyan Vishwavidyalay Evam Go Anusandhan, Mathura	B.V.Sc. & A.H.
72	Sri Venkateswara Veterinary University Tirupati	B.V.Sc. & A.H.
73	Guru Angad Dev Veterinary and Animal Sciences University, Ludhiana	B.V.Sc & A.H.

Sl. No.	University or Veterinary Institutions	Diplomas
1	Assam Veterinary College	G.V.Sc., G.V.Sc. & A. H.
2	Bengal Veterinary College	G.B.V.C., G.V.C
3	Bihar Veterinary College	G.B.V.C.
4	Bombay Veterinary college	G.B.V.C
5	Madras Veterinary College	G.M.V.C
6	Punjab Veterinary College	L.V.P.

The second Schedule

Recognised Veterinary Qualifications granted by Institutions outside India.

Sl. No.	Country and Institution	Degree
	[illegible]	
1	Royal college of Veterinary Surgeons	[illegible]
2	University of Bristol	B.V.Sc.
3	University of Cambridge	B.V.Sc.
4	University of Edinburgh	B.V.Sc.
5	University of Glasgow	B.V.Sc.
6	University of Liverpool	B.V.Sc.
7	University of London	B Vety.Med.
	REPUBLIC OF IRELAND	
8	University of Dublin	B.V.M.
9	National University of Ireland	B.V.M
	SLOVAK REPUBLIC	
10	University of Veterinary Medicine, Kosice, Slovak Republic	M.V.Dr.
	UNION OF SOVIET.SOCIALIST REPUBLIC	
11	Moscow State Academy of Veterinary Medicine and Biotechnology, Moscow.	M.S.V.
12	N.M. Borissenko Zoo Veterinary Institute, Kharkov, Ukraine	M.S.V.M.

ಭಾಗ್ಯಲಕ್ಷ್ಮೀ ಯೋಜನೆ

225 (889) ಶ್ರೀ ಗೋಪಾಲ ಭಂಡಾರಿ ಎಚ್. (ಕಾರ್ಕಳ) :- ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ 4 ವರ್ಷಗಳಿಂದ ಎಷ್ಟು ಜನರಿಗೆ ಭಾಗ್ಯಲಕ್ಷ್ಮೀ ಯೋಜನೆಯ ಸೌಲಭ್ಯ ಕಲ್ಪಿಸಲಾಗಿದೆ ;

ಆ) ಭಾಗ್ಯಲಕ್ಷ್ಮೀ ಯೋಜನೆಯ ಸೌಲಭ್ಯ ಪಡೆಯಲು ಇರುವ ಅರ್ಹತೆಗಳೇನು?

ಇ) ಭಾಗ್ಯಲಕ್ಷ್ಮೀ ಯೋಜನೆಯ ಸೌಲಭ್ಯ ಪಡೆಯಲು ಪಡಿತರ ಚೀಟಿ ಕಡ್ಡಾಯಗೊಳಿಸಲಾಗಿದೆಯೇ ;

ಈ) ಕಡ್ಡಾಯ ಅಲ್ಲದಿದ್ದಲ್ಲಿ ಬೇರೆ ಯಾವ ದಾಖಲೆ ಅಗತ್ಯವಿದೆ ? (ವಿವರ ಒದಗಿಸುವುದು)

ಶ್ರೀ ಕಳಕಪ್ಪ ಜಿ. ಬಂಡಿ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):-

ಅ) ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ 4 ವರ್ಷಗಳಿಂದ 9543 ಫಲಾನುಭವಿಗಳಿಗೆ ಭಾಗ್ಯಲಕ್ಷ್ಮೀ ಯೋಜನೆಯಡಿ ಸೌಲಭ್ಯ ಒದಗಿಸಲಾಗಿದೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

1. ಉಡುಪಿ	3787
2. ಕುಂದಾಪುರ	3828
3. ಕಾರ್ಕಳ	1928
ಒಟ್ಟು	9543

ಆ) ಭಾಗ್ಯಲಕ್ಷ್ಮೀ ಯೋಜನೆಯ ಸೌಲಭ್ಯ ಪಡೆಯಲು ನಿಗದಿಪಡಿಸಿರುವ ಅರ್ಹತೆಗಳು ಈ ಕೆಳಗಿನಂತಿವೆ.

ಹೆಣ್ಣು ಮಗು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿರಬೇಕು.

1. ಕುಟುಂಬದ ಸದಸ್ಯರ ಹೆಸರು ಅಥವಾ ಕುಟುಂಬದ ಮುಖ್ಯಸ್ಥರ ಭಾವಚಿತ್ರ ಇರುವ ಬಿಪಿಎಲ್ ಕಾರ್ಡ್‌ನ್ನು ಕಡ್ಡಾಯವಾಗಿ ಹೊಂದಿರಬೇಕು.

2. ಮಗುವಿನ ಜನನ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರಬೇಕು.
3. ಆರೋಗ್ಯ ಇಲಾಖೆಯ ಕಾರ್ಯಕ್ರಮದಂತೆ ರೋಗ ನಿರೋಧಕ ಚುಚ್ಚುಮದ್ದನ್ನು ಹಾಕಿಸಿರಬೇಕು.
4. ಕುಟುಂಬದ ಎರಡು ಹೆಣ್ಣು ಮಕ್ಕಳು ಮಾತ್ರ ಈ ಸೌಲಭ್ಯವನ್ನು ಪಡೆಯಲು ಸೀಮಿತ ಗೊಳಿಸಲಾಗಿದೆ.
5. ಈ ಕುಟುಂಬವು ಮಗುವಿನ ತಾಯಿ ಅಥವಾ ತಂದೆ ಯಾರಾದರೊಬ್ಬರು ಶಾಶ್ವತ ಕುಟುಂಬ ಯೋಜನೆಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ಒಟ್ಟು ಮೂರು ಮಕ್ಕಳನ್ನು ಮೀರಿರಕೂಡದು.

ಈ) ಹೌದು, ದಿನಾಂಕ : 01-04-2011 ರಿಂದ ಜನಿಸಿದ ಮಕ್ಕಳಿಗೆ ಬಿಪಿಎಲ್ ಪಡಿತರ ಚೀಟಿ ಕಡ್ಡಾಯಗೊಳಿಸಲಾಗಿದೆ.

ಪಶುಸಂಗೋಪನಾ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ

234 (892) ಶ್ರೀ ಖಾದರ್ ಯು.ಟಿ. (ಮಂಗಳೂರು) :- ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪಶು ಚಿಕಿತ್ಸಾಲಯ ಮತ್ತು ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು, ಕ್ಷೇತ್ರವಾರು ವಿವರ ಒದಗಿಸುವುದು)

ಆ) ದಕ್ಷಿಣ ಕನ್ನಡ ಜಿಲ್ಲೆಯ ಪಶು ಸಂಗೋಪನಾ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 13 ಪಶುವೈದ್ಯಕೀಯ ಆಸ್ಪತ್ರೆಗಳು ಮತ್ತು 35 ಪಶುವೈದ್ಯಕೀಯ ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿವೆ. ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ :

ಕ್ರ. ಸಂ.	ಕ್ಷೇತ್ರ	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ
1	ಮಂಗಳೂರು ಉತ್ತರ	1	6
2	ಮಂಗಳೂರು ದಕ್ಷಿಣ	1	1
3	ಮಂಗಳೂರು	–	2
4	ಮುಲ್ಕಿ– ಮೂಡಬಿದ್ರೆ	2	3
5	ಬಂಟ್ವಾಳ	3	8
6	ಬೆಳ್ತಂಗಡಿ	2	6
7	ಪುತ್ತೂರು	2	5
8	ಸುಳ್ಯ	2	4
	ಒಟ್ಟು	13	35

ಬಂದಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಕೆಳಕಂಡಂತಿವೆ:

ಕ್ರ. ಸಂ.	ಹುದ್ದೆಗಳು	ಸಂಖ್ಯೆ
1	ಸಹಾಯಕ ನಿರ್ದೇಶಕರು	1
2	ಪಶುವೈದ್ಯಾಧಿಕಾರಿ	24
3	ಜಾನುವಾರು ಅಧಿಕಾರಿ	1
4	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	23
5	ಪಶುವೈದ್ಯಕೀಯ ಪರೀಕ್ಷಕರು	26
6	ಪಶುವೈದ್ಯಕೀಯ ಸಹಾಯಕರು	50
7	ಲಿಪಿಕ ನೌಕರರು	3
8	ವಾಹನ ಚಾಲಕರು	3
9	ಡಿ–ದರ್ಜೆ ನೌಕರರು	112
	ಒಟ್ಟು	243

ಇ) **1. ಸಹಾಯಕ ನಿರ್ದೇಶಕರು :–** ಖಾಲಿ ಇರುವ ಈ ಹುದ್ದೆಯನ್ನು ಪಶುವೈದ್ಯಾಧಿಕಾರಿ ಹುದ್ದೆಯಿಂದ ಮುಂಬಡ್ತಿ ನೀಡುವ ಸಮಯದಲ್ಲಿ ಆದ್ಯತೆಯ ಮೇಲೆ ಭರ್ತಿ ಮಾಡಲಾಗುವುದು.

2. ಪಶುವೈದ್ಯಾಧಿಕಾರಿಗಳು :– ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ವಿಶೇಷ ನಿಯಮಗಳಡಿಯಲ್ಲಿ ತುಂಬುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ವಿಶೇಷ ನೇಮಕಾತಿ

ನಿಯಮಗಳು ರಚನೆಯಾದ ನಂತರ ಪಶುವೈದ್ಯಾಧಿಕಾರಿಗಳ ಈ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿ ಮಾಡಲಾಗುವುದು.

3. **ಜಾನುವಾರು ಅಧಿಕಾರಿ** :– ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಜಾನುವಾರು ಅಧಿಕಾರಿಗಳ ಹುದ್ದೆಗಳಿಗೆ ಮುಂಬಡ್ತಿ ನೀಡುವ ಸಮಯದಲ್ಲಿ ಈ ಹುದ್ದೆಯನ್ನು ಆದ್ಯತೆಯ ಮೇಲೆ ಭರ್ತಿ ಮಾಡಲಾಗುವುದು.

4. **ಹಿರಿಯ ಪಶುವೈದ್ಯ ಪರೀಕ್ಷಕರು** :– ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯಕೀಯ ಪರೀಕ್ಷಕರುಗಳ ಹುದ್ದೆಗೆ ಮುಂಬಡ್ತಿ ನೀಡುವ ಸಮಯದಲ್ಲಿ ಆದ್ಯತೆಯ ಮೇಲೆ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

5. **ಪಶುವೈದ್ಯ ಪರೀಕ್ಷಕರು** :– ಪಶುವೈದ್ಯಕೀಯ ಸಹಾಯಕರ ಹುದ್ದೆಯಿಂದ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಸಮಯದಲ್ಲಿ ಈ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿ ಮಾಡಲಾಗುವುದು.

6. ಪಶುವೈದ್ಯ ಸಹಾಯಕರು :– ಡಿ–ದರ್ಜೆ ಹುದ್ದೆಯಿಂದ ಪಶುವೈದ್ಯಕೀಯ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡುವಾಗ ಹಾಗೂ ಪಶುವೈದ್ಯಕೀಯ ಸಹಾಯಕರನ್ನು ನೇರ ನೇಮಕಾತಿ ಮಾಡುವಾಗ ಈ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿ ಮಾಡಲಾಗುವುದು.

7. **ಅಧೀಕ್ಷಕರು** :– ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಸಮಯದಲ್ಲಿ ಆದ್ಯತೆಯ ಮೇಲೆ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

8. **ದ್ವಿತೀಯ ದರ್ಜೆ ಸಹಾಯಕರು** :– ಅನುಕಂಪದ ಆಧಾರದ ಮೇಲೆ ಭರ್ತಿ ಮಾಡಲಾಗುವುದು.

9. **ಡಿ–ದರ್ಜೆ ನೌಕರರು** :– ನೇರ ನೇಮಕಾತಿ ಹಾಗೂ ಅನುಕಂಪಾರ್ಥ ಆಧಾರದ ಮೇಲೆ ಭರ್ತಿ ಮಾಡುವಾಗ ಆದ್ಯತೆ ಮೇರೆಗೆ ತುಂಬಲು ಕ್ರಮವಹಿಸಲಾಗುವುದು ಹಾಗೂ ಅವಶ್ಯವಿರುವ ಕಡೆ ಹೊರಗುತ್ತಿಗೆ ಆಧಾರದ ಮೇಲೆ ಡಿ–ದರ್ಜೆ ನೌಕರರ ಕೆಲಸ ನಿರ್ವಹಿಸಲಾಗುವುದು.

ಆಸ್ಪತ್ರೆಗಳಿಗೆ ಮೂಲಭೂತ ಸೌಲಭ್ಯಗಳು

285 (657) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಹಾಗೂ ಗುಡಿಬಂಡೆ ತಾಲ್ಲೂಕುಗಳಲ್ಲಿ 100 ಹಾಸಿಗೆಯುಳ್ಳ ಆಸ್ಪತ್ರೆಯು ಮಂಜೂರಾಗಿದ್ದು, ಈ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಬೇಕಾದಂತಹ ಮೂಲಭೂತ ಸಲಕರಣೆಗಳು, ಹಾಸಿಗೆಗಳು, ವೈದ್ಯರು, ಸಿಬ್ಬಂದಿಗಳು ಹಾಗೂ ಕಟ್ಟಡ ವ್ಯವಸ್ಥೆ ಇಲ್ಲದೇ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಮತ್ತು ಆ) ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಅದಕ್ಕೆ ಅನುಗುಣವಾಗಿ, ಕಟ್ಟಡಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಂಡಿದ್ದು, ಬಾಗೇಪಲ್ಲಿ ಆಸ್ಪತ್ರೆಯ ಕಟ್ಟಡ ಕಾಮಗಾರಿ ಇತ್ತೀಚೆಗೆ ಪೂರ್ಣಗೊಂಡಿದೆ ಹಾಗೂ ಗುಡಿಬಂಡೆ ಆಸ್ಪತ್ರೆಯ ಕಟ್ಟಡ ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ. ಈ ಎರಡೂ ಆಸ್ಪತ್ರೆಗಳು ತಲಾ 50 ಹಾಸಿಗೆಗಳ ಸಾಮರ್ಥ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ.

ಬಾಗೇಪಲ್ಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ 6 ತಜ್ಞ ವೈದ್ಯರ ಹಾಗೂ 1 ದಂತ ವೈದ್ಯಧಿಕಾರಿಯ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 3 ತಜ್ಞ ವೈದ್ಯರ ಹಾಗೂ ದಂತ ವೈದ್ಯರ ಹುದ್ದೆಗಳು ಭರ್ತಿಯಾಗಿವೆ ಮತ್ತು 3 ಹುದ್ದೆಗಳು ಖಾಲಿ ಇವೆ. ಮುಂದುವರೆದು, ಈ ಆಸ್ಪತ್ರೆಗೆ 24 ಇತರೆ ವೃಂದದ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 20 ಹುದ್ದೆಗಳು ಭರ್ತಿಯಾಗಿವೆ ಹಾಗೂ 4 ಗ್ರೂಪ್-ಡಿ ಹುದ್ದೆಗಳು ಮಾತ್ರ ಖಾಲಿ ಇವೆ.

ಸದರಿ ಆಸ್ಪತ್ರೆಯು ಪ್ರಸ್ತುತ 50 ಹಾಸಿಗೆಗಳ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅದಕ್ಕನುಗುಣವಾಗಿ ಮೂಲ ಸೌಕರ್ಯ ಒದಗಿಸಲಾಗಿದೆ.

ಗುಡಿಬಂಡೆ ಸಾರ್ವಜನಿಕ ಆಸ್ಪತ್ರೆಯಲ್ಲಿ 5 ತಜ್ಞ ವೈದ್ಯರ ಹುದ್ದೆಗಳು ಹಾಗೂ 1 ದಂತ ವೈದ್ಯರ ಹುದ್ದೆ ಮಂಜೂರಾಗಿವೆ. ಈ ಪೈಕಿ, 4 ತಜ್ಞ ವೈದ್ಯರ ಹುದ್ದೆಗಳು ಭರ್ತಿಯಾಗಿವೆ ಮತ್ತು 1 ತಜ್ಞ ವೈದ್ಯ ಹಾಗೂ 1 ದಂತ ವೈದ್ಯ ಹುದ್ದೆಗಳು ಖಾಲಿ ಇವೆ. ಮುಂದುವರೆದು, ಈ ಆಸ್ಪತ್ರೆಗೆ 27 ಇತರೆ ವೃಂದದ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 14 ಹುದ್ದೆಗಳು ಭರ್ತಿಯಾಗಿವೆ ಹಾಗೂ 13 ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳ ಪೈಕಿ 8 ಗ್ರೂಪ್-ಡಿ ಹುದ್ದೆಗಳಾಗಿರುತ್ತವೆ.

ಸದರಿ ಆಸ್ಪತ್ರೆಯ 100 ಹಾಸಿಗೆಗಳ ಸಾಮರ್ಥ್ಯದ ಕಟ್ಟಡ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. ಈ ಆಸ್ಪತ್ರೆಯು ಪ್ರಸ್ತುತ 50 ಹಾಸಿಗೆಗಳ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅದಕ್ಕನುಗುಣವಾಗಿ ಮೂಲ ಸೌಕರ್ಯ ಒದಗಿಸಲಾಗಿದೆ.

ಮಂಜೂರಾದ ಅನುದಾನ

250 (412) ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು) :- ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ ಪಶು ಸಂಗೋಪನಾ ಇಲಾಖೆಯಿಂದ 2009-10ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೂ ಮಂಜೂರಾದ ಅನುದಾನವೆಷ್ಟು ; (ಯೋಜನಾವಾರು ವಿವರ ನೀಡುವುದು)

ಆ) ಮಂಜೂರಾದ ಅನುದಾನದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು):-

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ ಪಶುಸಂಗೋಪನಾ ಇಲಾಖೆಯಲ್ಲಿ 2009-10ನೇ ಸಾಲಿನಿಂದ ಇದುವರೆವಿಗೂ ಮಂಜೂರಾದ ಅನುದಾನದ ವಿವರಗಳು

ಈ ಕೆಳಕಂಡಂತಿವೆ.

ರೂ. ಲಕ್ಷಗಳಲ್ಲಿ

ಕ್ರಸಂ.	ಯೋಜನೆ ವಿವರ	2009–10	2010–11	2011–12
1	ಜಿಲ್ಲಾ/ತಾಲ್ಲೂಕ್ ಪಂಚಾಯತ್ ಕಾರ್ಯಕ್ರಮ	10.20	13.60	16.92
2	ರಾಜ್ಯ ವಲಯ	3.90	21.31	0.00

ಯೋಜನೆಯ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಮಂಜೂರಾದ ಅನುದಾನದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಔಷಧಿ ಮತ್ತು ರಾಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು :- ಸದರಿ ಕಾರ್ಯಕ್ರಮದಲ್ಲಿ ದ್ರವಸಾರಜನಕ, ಶೀತ್‌ಗಳು, ಕೃತಕ ಗರ್ಭಧಾರಣಾ ಔಷಧಿಗಳು ಹಾಗೂ ಜಾನುವಾರು ಚಿಕಿತ್ಸೆಗೆ ಬೇಕಾದ ಔಷಧಿ ಮತ್ತು ರಾಸಾಯನಿಕಗಳನ್ನು ಖರೀದಿಸುವುದು.

2. ಕಟ್ಟಡಗಳು :- ಪಶುವೈದ್ಯ ಸಂಸ್ಥೆಗಳ ಮುಂದುವರೆದ ಕಾಮಗಾರಿ ಹಾಗೂ ಅವಶ್ಯಕವಾಗಿ ದುರಸ್ತಿಯಾಗಬೇಕಾದ ಪಶುವೈದ್ಯ ಸಂಸ್ಥೆಗಳ ಕಾಮಗಾರಿಗಾಗಿ ಅನುದಾನ ಒದಗಿಸುವುದು.

3. ಜಾನುವಾರು ಆರೋಗ್ಯ ಶಿಬಿರ :- ಈ ಕಾರ್ಯಕ್ರಮದಲ್ಲಿ ಗೊಡ್ಡು/ಬಂಜೆ ಜಾನುವಾರುಗಳ ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವುದು.

4. ಜೀವವೈದ್ಯ ತ್ಯಾಜ್ಯವಸ್ತುಗಳ ವಿಲೇವಾರಿ :- ಈ ಯೋಜನೆಯಲ್ಲಿ ಜೀವವೈದ್ಯ ತ್ಯಾಜ್ಯವಸ್ತುಗಳ ವಿಲೇವಾರಿಗೆ ಡೀಪ್ ಬರಿಯಲ್ ಪಿಟ್ ಮತ್ತು ಶಾರ್ಪ್‌ಪಿಟ್‌ಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅನುದಾನ ಒದಗಿಸುವುದು.

5. ವಿಶೇಷ ಘಟಕ ಯೋಜನೆ :- ಈ ಯೋಜನೆಯಲ್ಲಿ ರೈತರಿಗೆ ಒಂದು/ಎರಡು ಮಿಶ್ರತಳಿ ಹಸುಗಳನ್ನು ನೀಡಲಾಗಿದೆ. ಇಲಾಖೆಯಿಂದ ಶೇ. 60 ಸಹಾಯ ಧನ ಒದಗಿಸಲಾಗಿದೆ.

6. ಗಿರಿಜನ ಉಪಯೋಜನೆ :– ಈ ಯೋಜನೆಯಲ್ಲಿ ರೈತರಿಗೆ ಒಂದು/ಎರಡು ಮಿಶ್ರತಳಿ ಹಸುಗಳನ್ನು ನೀಡಲಾಗಿದೆ. ಇಲಾಖೆಯಿಂದ ಶೇ. 75 ಸಹಾಯ ಧನ ಒದಗಿಸಲಾಗಿದೆ.

7. ವಿಶೇಷ ಅಭಿವೃದ್ಧಿ ಯೋಜನೆ :– ಸದರಿ ಯೋಜನೆಯಡಿ ಜಾನುವಾರುಗಳ ಮೇವು ಪೂರೈಸಲು ನೀರಾವರಿ ಪ್ರದೇಶದಲ್ಲಿ ಬಹುವಾರ್ಷಿಕ ಮೇವಿನ ಬೆಳೆಯನ್ನು ಬೆಳೆಯಲು ಅನುದಾನ ಒದಗಿಸುವುದು.

8. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :– ಈ ಯೋಜನೆಯಲ್ಲಿ ಕಟ್ಟಡಗಳ ನಿರ್ಮಾಣ/ವಾಣಿಜ್ಯ ಮೊಟ್ಟೆ ಕೋಳಿ ಸಾಕಾಣಿಕೆಗೆ (ರೂ. 100 ಲಕ್ಷ ಸಬ್ಸಿಡಿ–1000 ಕೋಳಿ ಘಟಕ) ಅನುದಾನ ನೀಡುವುದು.

ಅನುಬಂಧ–1

ಕ್ರ.ಸಂ	ಯೋಜನೆಯ ಹೆಸರು	ಮಂಜೂರಾದ ಅನುದಾನ ರೂ. ಲಕ್ಷಗಳಲ್ಲಿ		
		2009-10	2010-11	2011-12
	ಜಿಲ್ಲಾ ಪಂಚಾಯತ್ ಕಾರ್ಯಕ್ರಮ/ ತಾಲ್ಲೂಕ ಪಂಚಾಯತ್ ಕಾರ್ಯಕ್ರಮ			
1	ಜಾನುವಾರು ಆರೋಗ್ಯ ಶಿಬಿರ	0.91	0.92	0.91
2	ಔಷಧಿ ಮತ್ತು ರಾಸಾಯನಿಕಗಳ ಖರೀದಿ	2.64	2.94	3.57
3	ಕಟ್ಟಡಗಳು	1.56	2.60	2.80
4	ವಿಶೇಷ ಘಟಕ ಯೋಜನೆ	3.00	2.74	3.02
5	ಗಿರಿಜನ ಉಪಯೋಜನೆ	2.09	2.93	2.29
6	ವಿಶೇಷ ಅಭಿವೃದ್ಧಿ ಯೋಜನೆ	0.00	1.47	2.55
7	ಜೀವವೈದ್ಯ ತ್ಯಾಜ್ಯವಸ್ತುಗಳ ವಿಲೇವಾರಿ	0.00	0.00	1.78
	ಒಟ್ಟು ಮೊತ	10.20	13.60	16.92
	ರಾಜ್ಯ ವಲಯ ಕಾರ್ಯಕ್ರಮಗಳು			
1	ವಿಶೇಷ ಘಟಕ ಯೋಜನೆ	0.60	6.72	0.00
2	ಗಿರಿಜನ ಉಪಯೋಜನೆ	1.20	13.13	0.00
3	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	2.10	1.46	0.00
	ಒಟ್ಟು ಮೊತ	3.90	21.31	0.00

ಇಲಾಖಾ ಪುನರ್ ರಚನೆ

211 (888) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) :- ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಇಲಾಖೆಯನ್ನು ಸಮಗ್ರವಾಗಿ ಪುನರಚಿಸುವ ಉದ್ದೇಶ ಸರ್ಕಾರದ ಮುಂದಿದ್ದು, ಪ್ರಥಮವಾಗಿ ಇಲಾಖೆಗೆ ಭಾರತೀಯ ಆಡಳಿತ ಅಧಿಕಾರಿ ವರ್ಗಕ್ಕೆ ಸೇರಿದ ಆಯುಕ್ತರನ್ನು ನೇಮಕ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಆ) ಆಯುಕ್ತರ ನೇಮಕವಾಗಿ 6 ವರ್ಷ ಕಳೆದರೂ ಕೂಡ ಇಲ್ಲಿಯವರೆಗೆ ಸಮಗ್ರವಾದ ಪುನರ್ ರಚನೆ ಮಾಡದಿರಲು ಕಾರಣವೇನು ;

ಇ) 2011-12ನೇ ಸಾಲಿನ ಆಯವ್ಯಯದಲ್ಲಿ, ಪಶು ಸಂಗೋಪನಾ ಇಲಾಖೆಯ ಸಮಗ್ರ ಪುನರ್ ರಚನೆಗಾಗಿ ಮೀಸಲಿಡಲಾದ ಹಣವೆಷ್ಟು ;

ಈ) ಇದನ್ನು ಇಲ್ಲಿಯವರೆಗೆ ಬಳಸಿಕೊಳ್ಳದಿರಲು ಕಾರಣವೇನು ;

ಉ) ಪಶು ಸಂಗೋಪನೆ ಇಲಾಖೆಯ ಪೂರ್ಣ ಪ್ರಮಾಣದ ಪುನರ್ ರಚನೆಯನ್ನು ಯಾವಾಗ ಕೈಗೊಳ್ಳುವುದು ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):-

ಅ) ಭಾರತೀಯ ಆಡಳಿತ ಸೇವೆಯ ಅಧಿಕಾರಿಯು ಆಯುಕ್ತರಾಗಿ ಈಗಾಗಲೇ ನೇಮಕಗೊಂಡಿರುತ್ತಾರೆ.

ಆ) ಇಲಾಖಾ ಪುನರ್ ರಚನೆಗೆ ಸರ್ಕಾರವು ಉನ್ನತಾಧಿಕಾರಿಗಳ ಸಮಿತಿಯನ್ನು ದಿನಾಂಕ : 28-05-2011 ರಂದು ರಚಿಸಿದ್ದು, ಸಮಗ್ರ ಪರಿಷ್ಕೃತ ವರದಿಯನ್ನು ದಿನಾಂಕ: 21-09-2011 ರಂದು ಸಲ್ಲಿಸಲಾಗಿದೆ. ಉನ್ನತಾಧಿಕಾರಿಗಳ ಸಮಿತಿಯು

ಸೆಪ್ಟೆಂಬರ್-2011 ರಲ್ಲಿ ಶಿಫಾರಸ್ಸು ಮಾಡಿದ್ದು, ಪರಿಶೀಲನೆಯಲ್ಲಿದೆ.

ಇ) ಅನುದಾನವನ್ನು ನಿಗಧಿಪಡಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಪರಿಶೀಲನೆಯಲ್ಲಿದೆ.

ಪಶುಸಂಗೋಪನಾ ಕೇಂದ್ರ

286 (715) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) :- ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಭದ್ರಾವತಿ ತಾಲ್ಲೂಕಿನಲ್ಲಿ ಹೊಸದಾಗಿ ಪಶು ಸಂಗೋಪನಾ ಕೇಂದ್ರವನ್ನು ನಿರ್ಮಿಸುವ ಮತ್ತು ಪಶು ಸಂಗೋಪನಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

ಆ) ಭದ್ರಾವತಿ ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಾರರು ವಾಸಿಸುತಿದ್ದು, ಇವರುಗಳು ಮೂಲ ಸೌಲಭ್ಯದಿಂದ ವಂಚಿತರಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತುರ್ತಾಗಿ ಇವರುಗಳಿಗೆ ಮನೆ ಮತ್ತು ಇತರೆ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):-

ಅ) ಭದ್ರಾವತಿ ತಾಲ್ಲೂಕಿನಲ್ಲಿ ಹೊಸದಾಗಿ ಯಾವುದೇ ಪಶುವೈದ್ಯಕೀಯ ಚಿಕಿತ್ಸಾಲಯ/ ಆಸ್ಪತ್ರೆ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

2007ನೇ ಜಾನುವಾರು ಗಣತಿಯಂತೆ ಭದ್ರಾವತಿ ತಾಲ್ಲೂಕಿನಲ್ಲಿ ಒಟ್ಟು 96, 113 ಜಾನುವಾರು ಘಟಕಗಳಿವೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ

ಪ್ರತಿ 5,000 ಜಾನುವಾರು ಘಟಕಗಳಿಗೆ ಒಂದರಂತೆ ಪಶುವೈದ್ಯ ಪದವೀಧರರಿರುವ ಪಶುವೈದ್ಯ ಸಂಸ್ಥೆ ಇರಬೇಕಾಗುತ್ತದೆ. ಅದರಂತೆ ಭದ್ರಾವತಿ ತಾಲ್ಲೂಕಿನಲ್ಲಿ ಜಾನುವಾರು ಘಟಕಗಳಿಗನುಗುಣವಾಗಿ ಒಟ್ಟು 19 ಪಶುವೈದ್ಯ ಸಂಸ್ಥೆಗಳು ಇರಬೇಕಾಗುತ್ತದೆ. ಆದರೆ, ಪ್ರಸ್ತುತ 21 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಅವಶ್ಯಕತೆಗಿಂತಲೂ 2 ಸಂಸ್ಥೆಗಳು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಅಲ್ಲದೆ, ರಾಜ್ಯದಲ್ಲಿ ಒಟ್ಟು 637 ಪಶುವೈದ್ಯ ಅಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಪಶುವೈದ್ಯ ಸಂಸ್ಥೆಗಳನ್ನು ಸ್ಥಾಪಿಸುವ ಹಾಗೂ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಿರುವುದಿಲ್ಲ.

ಆ) ಭದ್ರಾವತಿ ತಾಲ್ಲೂಕಿನಲ್ಲಿ ಆರ್ಥಿಕವಾಗಿ ಹಿಂದುಳಿದ 1460 ಮೀನುಗಾರರ ಕುಟುಂಬಗಳಿರುವುದಾಗಿ ಅಂದಾಜಿಸಲಾಗಿದ್ದು, ಅವುಗಳಲ್ಲಿ 598 ನಿರ್ವಸಿತ ಮೀನುಗಾರರೆಂದು ಗುರುತಿಸಲಾಗಿರುತ್ತದೆ.

ಸದರಿ ಮೀನುಗಾರರಿಗೆ ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನ ಹಾಗೂ ಯೋಜನೆಗಳ ಪ್ರಕಾರ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕಳೆದ 5 ವರ್ಷಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಮಾನ್ಯ ವಿಧಾನ ಸಭೆ ಸದಸ್ಯರು, ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 715ಕ್ಕೆ

ಅನುಬಂಧ

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಮೀನುಗಾರರ ಕುಟುಂಬಗಳಿಗೆ ಕಳೆದ 5 ವರ್ಷಗಳಲ್ಲಿಮೀನುಗಾರಿಕೆ ಇಲಾಖೆಯಿಂದ ನೀಡಿರುವ ಸೌಲಭ್ಯಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ ಸಂ	ಯೋಜನೆ	ವರ್ಷವಾರು ವರದಿ									
		2007-08		2008-09		2009-10		2010-11		2011-12	
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1	ಮತ್ಸ್ಯಾಶ್ರಯ ಯೋಜನೆ	8.00	20	12.00	30	1.60	4	4.00	10	-	10
2	ದಾವಿ-ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ	0.04	74	0.05	84	0.05	90	0.05	91	0.05	98
3	ಹುಲ್ಲುಗೆಂಡೆ ಮೀನುಮರಿ ಸರಬರಾಜಿಗೆ ಸಹಾಯ	0.23	8	0.25	8	0.27	9	0.23	9	0.25	9
4	ಸಿಹಿನೀರು ಸಿಗಡಿ ಕೃಷಿಗೆ ಸಹಾಯ	-	-	-	-	0.20	1	0.20	1	0.20	1
5	ಮೀನುಗಾರಿಕೆ ಸಾಮಗ್ರಿ ಖರೀದಿಸಲು ಸಹಾಯ	0.04	4	0.10	10	0.10	10	0.08	8	0.10	10
6	ಮೀನುಮಾರಾಟ ಸಲಕರಣೆ ಖರೀದಿಸಲು ಸಹಾಯ	0.18	14	0.34	27	0.50	25	0.40	20	0.50	25
7	ಮತ್ಸ್ಯವಾಹಿನಿ ಮೊಪೆಡ್ ಖರೀದಿಗೆ ನೆರವು	-	-	0.21	3	0.21	3	0.25	3	0.26	4
8	ತಾ.ಪಂ. ವಿಶೇಷ ಘಟಕ ಯೋಜನೆ	0.54	18	1.38	46	2.10	70	1.58	48	0.80	16
9	ತಾ.ಪಂ. ಗಿರಿಜನ ಉಪಯೋಜನೆ	-	-	0.12	4	0.06	2	0.05	1	0.30	6
10	ಮೀನುಮರಿ ಖರೀದಿಗೆ ಸಹಾಯ	-	-	-	-	0.15	7	0.83	19	-	-
11	ರಾಜ್ಯ ವಲಯ ವಿಶೇಷ ಘಟಕ ಯೋಜನೆ	-	-	-	-	0.20	4	0.55	11	0.65	13
12	ರಾಜ್ಯ ವಲಯ ಗಿರಿಜನ ಉಪಯೋಜನೆ	-	-	-	-	0.10	2	0.25	5	0.35	7
13	ಮತ್ಸ್ಯಮಹಿಳಾ ಸ್ವಾವಲಂಬನಾ ಯೋಜನೆ	-	-	-	-	0.80	1	-	-	-	-
14	ಸುವರ್ಣ ಭೂಮಿ ಯೋಜನೆ	-	-	-	-	-	-	-	-	1.83	33
15	ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ ಸಹಾಯ	-	-	-	-	-	-	-	-	4.50	90
16	ರಾಜ್ಯ ವಲಯ ವಿಶೇಷ ಘಟಕ ಯೋಜನೆ ಮೀನು ಕೃಷಿಕೊಳ ನಿರ್ಮಾಣಕ್ಕೆ ಸಹಾಯ	-	-	-	-	-	-	4.16	5	-	-

ಗ್ರಾಮಾಂತರ ಪ್ರದೇಶದಲ್ಲಿ ಪ್ರೌಢಶಾಲೆಗಳ ಅವಶ್ಯಕತೆ

288 (717) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಭದ್ರಾವತಿ ನಗರದಲ್ಲಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಪ್ರೌಢ ಶಾಲೆಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಇಲ್ಲ.

ಆ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ 9ನೇ ತರಗತಿಗೆ ಅನುಮೋದನೆ ಪಡೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಈ ಕೆಳಗಿನ ನಿಯಮಗಳನ್ನು ಅನುಸರಿಸಬೇಕಾಗುತ್ತದೆ.

ಈ ನಿಯಮಗಳಡಿಯಲ್ಲಿ ಬರುವ ಶಾಲೆಯನ್ನು ಉಪನಿರ್ದೇಶಕರು ವಾರ್ಷಿಕ ಯೋಜನೆಯಲ್ಲಿ ಸೇರಿಸಿದಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.

- 5 ಕಿ.ಮೀ. ವ್ಯಾಪ್ತಿಯೊಳಗೆ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢಶಾಲೆಗಳು ಇರಬಾರದು.
- 8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮಾತ್ರ 9ನೇ ತರಗತಿಯೊಂದಿಗೆ ಉನ್ನತೀಕರಿಸಲು ಅವಕಾಶವಿರುತ್ತದೆ.
- 9ನೇ ತರಗತಿಗೆ 70 ಮಕ್ಕಳು ದಾಖಲಾಗುವಂತಿರಬೇಕು.
- ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕುಗಳ ಶಾಲೆಗಳಲ್ಲಿ/ಮೈನಾರಿಟಿ ಶಾಲೆಗಳಲ್ಲಿ ಕನಿಷ್ಠ 50 ಮಕ್ಕಳು ದಾಖಲಾಗುವಂತಿರಬೇಕು.
- ಕಟ್ಟಡ ನಿರ್ಮಾಣಕ್ಕೆ ಅವಶ್ಯ ನಿವೇಶನ ಇರಬೇಕು.

ಶಿವಮೊಗ್ಗ ಜಿಲ್ಲೆಯಿಂದ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಆಲೂರು ಪಟ್ಟಣದ ಸರ್ಕಾರಿ ಪ್ರೌಢಶಾಲೆ ಹಾಗೂ ಕಿರಿಯ ಕಾಲೇಜು ಕಟ್ಟಡಗಳು

244 (566) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಹಾಸನ ಜಿಲ್ಲೆ, ಆಲೂರು ಪಟ್ಟಣದ ಸರ್ಕಾರಿ ಪ್ರೌಢಶಾಲೆ ಮತ್ತು ಕಿರಿಯ ಕಾಲೇಜು ಕಟ್ಟಡ ತುಂಬಾ ಹಳೆಯದಾಗಿದ್ದು ಹಾಗು ಚಿಕ್ಕದಾಗಿದ್ದು, ಮಕ್ಕಳ ಸಂಖ್ಯೆ ಒಂದು ಸಾವಿರಕ್ಕೂ ಮೀರಿದ್ದು, ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಜಾಗ ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಅಗತ್ಯವಾದ ಕಟ್ಟಡಗಳನ್ನು ಯಾವಾಗ ನಿರ್ಮಿಸಲಾಗುವುದು? (ಪೂರ್ಣ ಮಾಹಿತಿ ನೀಡುವುದು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಸರ್ಕಾರಿ ಪದವಿ ಪೂರ್ವ ಕಾಲೇಜು, ಆಲೂರು ಇಲ್ಲಿ ಪ್ರೌಢಶಾಲಾ ವಿಭಾಗದಲ್ಲಿ – 316 ಮಕ್ಕಳು ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ – 650 ಮಕ್ಕಳು ವ್ಯಾಸಂಗ ಮಾಡುತ್ತಿದ್ದು ಇಲ್ಲಿ ಪಾಳಿ ಪದ್ಧತಿಯಲ್ಲಿ ಶಾಲೆ ನಡೆಯುತ್ತಿದೆ.

ಆ) ಆರ್.ಸಿ.ಸಿ.ಯ–8 ಕೊಠಡಿಗಳು, ಹೆಂಚು ಹೊದಿಕೆಯ–9 ಕೊಠಡಿಗಳು ಸೇರಿ ಒಟ್ಟು 17 ಕೊಠಡಿಗಳು ಇರುತ್ತದೆ ಇದರಲ್ಲಿ 5 ಕೊಠಡಿಗಳು ಶಿಥಿಲವಾಗಿವೆ.

ಆರ್.ಎಂ.ಎಸ್.ಎ. ಅಡಿ ಹಾಗೂ ರಾಜ್ಯ ವಲಯ ಮುಂದುವರಿದ ಯೋಜನೆಯಡಿ/ಯೋಜನೇತರಡಿ ಅನುದಾನ ಲಭ್ಯತೆಯ ಆಧಾರದ ಮೇಲೆ ಹೆಚ್ಚುವರಿ ಕೊಠಡಿಗಳನ್ನು ನೀಡಲಾಗುವುದು.

ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು

280 (879) ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ಆಸ್ಪತ್ರೆಗಳನ್ನು ಪ್ರತಿ ವರ್ಷ ಮೇಲ್ದರ್ಜೆಗೇರಿಸಲು ಸರ್ಕಾರದಲ್ಲಿರುವ ಮಾನದಂಡವೇನು ;

ಆ) ಕಳೆದ ಮೂರು ವರ್ಷಗಳಲ್ಲಿ ಮೇಲ್ದರ್ಜೆಗೇರಿಸಲಾದ ಆಸ್ಪತ್ರೆಗಳ ಸಂಖ್ಯೆ ಎಷ್ಟು ; (ವರ್ಷವಾರು, ವಿಧಾನಸಭಾವಾರು ಮಾಹಿತಿ ನೀಡುವುದು)

ಇ) ಸ್ವಂತ ಕಟ್ಟಡಗಳಿಲ್ಲದೆ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಆಸ್ಪತ್ರೆಗಳೆಷ್ಟು; (ವಿಧಾನಸಭಾವಾರು ಮಾಹಿತಿ ನೀಡುವುದು) ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಆಸ್ಪತ್ರೆಗಳಿಗೆ ಪ್ರತಿ ವರ್ಷ ಸಂದಾಯ ಮಾಡುತ್ತಿರುವ ಬಾಡಿಗೆ ಹಣವೆಷ್ಟು ? (ಮಾಹಿತಿ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಆಸ್ಪತ್ರೆಗಳನ್ನು ಪ್ರತಿ ವರ್ಷ ಮೇಲ್ದರ್ಜೆಗೇರಿಸಲು ಸರ್ಕಾರದಲ್ಲಿ ಯಾವುದೇ ಮಾನದಂಡ ರೂಪಿಸಲಾಗಿಲ್ಲ.

ಆ) ಸರ್ಕಾರದ ಆದೇಶ ಸಂಖ್ಯೆ : ಆಕುಕ 660 ಸಿಜಿಎಂ 2009 ದಿನಾಂಕ : 06-04-2010ರಲ್ಲಿ ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕಿನ ಬೂಕನಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 734 ಸಿಜಿಎಂ 2009 ದಿನಾಂಕ : 20-10-2010ರಲ್ಲಿ ಬಳ್ಳಾರಿ ಜಿಲ್ಲೆಯ ಮೋಕ, ರೂಪನಗುಡಿ ಮತ್ತು ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 350 ಸಿಜಿಎಂ 2010 ದಿನಾಂಕ : 11-01-2011ರಲ್ಲಿ ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಗಳ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ ತಕ್ಷಣದಿಂದ ಜಾರಿಗೆ ಬರುವಂತೆ 3 ವರ್ಷಗಳ ಅವಧಿಗೆ ಸರ್ಕಾರವು ತಡೆಹಿಡಿದಿದೆ.

ಇ) ರಾಜ್ಯ ಸರ್ಕಾರದ ವತಿಯಿಂದ ಪ್ರಾರಂಭಿಸಲಾಗಿರುವ ವಿವಿಧ ಆಸ್ಪತ್ರೆಗಳು ಸ್ವಂತ ಕಟ್ಟಡಗಳು ಮತ್ತು ಸ್ಥಳೀಯರು ಒದಗಿಸಿರುವ ಉಚಿತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅವುಗಳಿಗೆ ಬಾಡಿಗೆ ಸಂದಾಯ ಮಾಡುತ್ತಿಲ್ಲ.

ಕಾ.ಸೂ. 03281, ದಿ: 09-01-2014, 350 ಪುಸ್ತಕಗಳು ಸ.ಕೇ.ಮು. ಘಟಕ-2, ಬೆಂ-59.